THE BOOK WAS DRENCHED

UNIVERSAL LIBRARY
OU_202094
UNIVERSAL LIBRARY

**OSMANIA UNIVERSITY LIBRARY**

Call No. K 349.5947 V34N V.III Accession No. K4479

Author [illegible]

Title [illegible] . 1947

This book should be returned on or before the date last marked below.

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ನಂ. ೩೯

ಶ್ರೀ ವೇದವ್ಯಾಸರಿಂದ ರಚಿತವಾದ

# ನಾರದೀಯ ಮಹಾಪುರಾಣ

(ಕನ್ನಡ ಅರ್ಥಾನುವಾದ ವಿವರಣೆಗಳ ಸಹಿತ)

## ಭಾಗ—೩

(೪೨—೫೩ ಅಧ್ಯಾಯಗಳು)

ಮಹಾವಿದ್ವಾನ್, ವಿದ್ವನ್ಮಣಿ,

**ದೊಡ್ಡಬಳ್ಳಾಪುರಂ ವಾಸುದೇವಾಚಾರ್ಯ,**

ಅನುವಾದಕ.

ಮೈಸೂರು

ಶ್ರೀ ಚಾಮುಂಡೇಶ್ವರೀ ಎಲೆಕ್ಟ್ರಿಕ್ ಪ್ರೆಸ್

೧೯೪೭

# ಅರಿಕೆ.

ಪುರಾಣಗಳಲ್ಲಿ ಸರ್ಗ, ಪ್ರತಿಸರ್ಗ, ಮನ್ವಂತರ, ವಂಶಾನುಚರಿತೆ ಮುಂತಾದುವುಗಳ ವಿವರಣೆಯು ವಿಶೇಷವಾಗಿ ಕಂಡುಬರುತ್ತದೆ. ಅದೇ ಪುರಾಣದ ಲಕ್ಷಣವೆಂದು ಶ್ರೀಮದ್ಭಾಗವತ ಹನ್ನೆರಡನೆಯ ಸ್ಕಂಧದ ಆರನೆಯ ಅಧ್ಯಾಯದಲ್ಲಿ ಹೇಳಿದೆ.

ಸರ್ಗಶ್ಚೈವ ವಿಸರ್ಗಶ್ಚ ವೃತ್ತಿರಕ್ಷಾಂತರಾಣಿ ಚ |
ವಂಶೋ ವಂಶಾನುಚರಿತಂ ಸಂಸ್ಥಾ ಹೇತುರಪಾಶ್ರಯಃ ||೪೮||
ದಶಭಿರ್ಲಕ್ಷಣೈರ್ಯುಕ್ತಂ ಪುರಾಣಂ ತದ್ವಿದೋ ವಿದುಃ |
ಕ್ವಚಿತ್ ಪಂಚವಿಧಂ ಬ್ರಹ್ಮನ್ ಮಹದಲ್ಪವ್ಯವಸ್ಥಯಾ ||೪೯||

ಆದರೆ ಶ್ರೀನಾರದೀಯ ಪುರಾಣದಲ್ಲಿ ಸಾಮಾನ್ಯವಾದ ಈ ವಿಷಯಗಳು ಮಾತ್ರವೇ ಅಲ್ಲದೆ ಆರು ವೇದಾಂಗಗಳು ಮೊದಲಾದ ಸಕಲ ಶಾಸ್ತ್ರಗಳ ವಿಷಯವೂ ಸಂಗ್ರಹಿಸಲ್ಪಟ್ಟಿರುವುದರಿಂದ ಎಲ್ಲಾ ಶಾಸ್ತ್ರಗಳಿಗೂ ಇದು ಮೂಲಭೂತವಾಗಿದೆ. ಪ್ರಥಮಪಾದದಲ್ಲಿ ಸಾಮಾನ್ಯವಾದ ಪೌರಾಣಿಕ ವಿಷಯಗಳು ನಿರೂಪಿತವಾಗಿವೆ.

ನಲವತ್ತೆರಡನೆಯ ಅಧ್ಯಾಯದಿಂದ ಅರವತ್ತೆರಡನೆಯ ಅಧ್ಯಾಯಪೂರ್ತಿಯಾಗಿ ಇಪ್ಪತ್ತೊಂದು ಅಧ್ಯಾಯಗಳಿಗೆ ಎರಡನೆಯ ಪಾದವೆಂದು ಸಂಕೇತ ಮಾಡಿದೆ. ಅದು ನಾರದ ಸನಂದನಮುನಿಗಳ ಪ್ರಶ್ನೋತ್ತರರೂಪವಾಗಿದೆ. ಈ ಸಂಪುಟದಲ್ಲಿ ಎರಡನೆಯಪಾದದ ಹನ್ನೆರಡು ಅಧ್ಯಾಯಗಳು (೪೨-೫೩) ಅಡಕವಾಗಿವೆ. ಅದರಲ್ಲಿ ಶಿಕ್ಷಾ, ಕಲ್ಪ, ವ್ಯಾಕರಣ ಮತ್ತು ನಿರುಕ್ತ ಎಂಬ ನಾಲ್ಕು ವೇದಾಂಗಗಳನ್ನು ಐವತ್ತನೆಯ ಅಧ್ಯಾಯದಿಂದ ಕ್ರಮವಾಗಿ ವಿಶದಪಡಿಸಿದೆ.

ಹೀಗೆ ಸಕಲ ಶಾಸ್ತ್ರಸಾರಭೂತವಾದ ತತ್ವಾರ್ಥಗಳನ್ನು ತಿಳಿಯಲು ಕನ್ನಡನಾಡಿನ ಜನತೆಗೆ ಅವಕಾಶವನ್ನು ಕಲ್ಪಿಸಿ ಮಹೋಪಕಾರಮಾಡುತ್ತಿರುವ ಪ್ರಭುವರ್ಯರಾದ **ಶ್ರೀ. ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ.,** ರವರ ಸನ್ನಿಧಾನದಲ್ಲಿ ಕೃತಜ್ಞತೆಯನ್ನು ಅರ್ಪಿಸಿ ಭಗವಂತನು ಮಹಾಸ್ವಾಮಿಯವರಿಗೆ ಆಯುರಾರೋಗ್ಯ ಸತ್ಸಂತಾನಾದಿ ಸಂಪತ್ತುಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ವ್ಯಯ ಸಂ|| ಮಾಘ ಪೂರ್ಣಿಮಾ,
ಮೈಸೂರು, ೫-೨-೧೯೪೭.

ಅನುವಾದಕ-
ಮಹಾವಿದ್ವಾನ್, ವಿದ್ವನ್ಮಣಿ,
**ದೊಡ್ಡಬಳ್ಳಾಪುರಂ ವಾಸುದೇವಾಚಾರ್ಯ.**

# ವಿಷಯಾನುಕ್ರಮಣಿಕೆ

ಪುಟಸಂಖ್ಯೆ

**ನಲವತ್ತೆರಡನೆಯ ಅಧ್ಯಾಯ**

ನಾರದಮುನಿಯು ಸೃಷ್ಟಿಪ್ರಕಾರವನ್ನು ಹೇಳಬೇಕೆಂದು ಸನಂದನಮುನಿಯನ್ನು ಕೇಳಿದುದು. ಅದಕ್ಕೆ ಉತ್ತರವಾಗಿ ಸನಂದನಮುನಿಯು ಭರಧ್ವಾಜಭೃಗುಸಂವಾದವನ್ನು ಹೇಳಿದುದು 1–25

**ನಲವತ್ತಮೂರನೆಯ ಅಧ್ಯಾಯ—**

ಪಂಚಭೂತಸ್ಥಿತಿ. ದೇಹದಲ್ಲಿ ಜೀವರ ಆವಶ್ಯಕತೆ. ಸತ್ತ ಮೇಲೆ ಜೀವನ ಸ್ಥಿತಿ. ವರ್ಣಸೃಷ್ಟಿಪ್ರಕಾರ. ಭಿನ್ನ ಭಿನ್ನ ವರ್ಣಾಶ್ರಮ ಧರ್ಮಗಳು. 26–58

**ನಲವತ್ತನಾಲ್ಕನೆಯ ಅಧ್ಯಾಯ—**

ಪರಲೋಕವಿರುವಸ್ಥಾನ. ಈ ಲೋಕ ಪರಲೋಕಗಳ ವ್ಯತ್ಯಾಸ. ಪರಲೋಕಪ್ರಾಪ್ತಿಗೆ ಸಾಧನ. ಅಧ್ಯಾತ್ಮ ವಿವರಣೆ. ಸಾಂಗಧ್ಯಾನಯೋಗನಿರೂಪಣೆ. 59–82

**ನಲವತ್ತೈದನೆಯ ಅಧ್ಯಾಯ—**

ಜನಕಕಾಪಿಲೇಯುಸಂವಾದ. ನಾಸ್ತಿಕವಾದ, ಅದರಖಂಡನೆ. ಮೋಕ್ಷಸಾಧನ, ತತ್ವಜ್ಞಾನಸ್ವರೂಪವರ್ಣನೆ. 83–103

**ನಲವತ್ತಾರನೆಯ ಅಧ್ಯಾಯ—**

ತಾಪತ್ರಯಪರಿಹಾರೋಪಾಯ. ಭಗವಚ್ಛಬ್ದದ ಅವಯವಾರ್ಥ. ಖಾಂಡಿಕ್ಯ ಕೇಶಿಧ್ವಜರ ಯೋಗವಿಷಯ ಸಂವಾದ. 104–127

**ನಲವತ್ತೇಳನೆಯ ಅಧ್ಯಾಯ—**

ಯೋಗಸ್ವರೂಪ. ಮನಸ್ಸೇ ಬಂಧಮೋಕ್ಷಗಳಿಗೆ ಕಾರಣ. ನಿಷ್ಕಾಮಕರ್ಮ. ತ್ರಿವಿಧ ಭಾವನೆಗಳು. ವಿಷ್ಣುವಿನಮೂರ್ತಾಮೂರ್ತಸ್ವರೂಪ ಮತ್ತು ಅದರ ಧ್ಯಾನ ಪ್ರಕಾರ, ಫಲ ಮುಂತಾದುವು. 128–145

ಪುಟಸಂಖ್ಯೆ

**ನಲವತ್ತೆಂಟನೆಯ ಅಧ್ಯಾಯ**—

ಭರತರಾಜನ ಜನ್ಮಗಳು ಇತಿಹಾಸ. ಜಡಭರತನು ಸೌವೀರ ರಾಜನ ಪಲ್ಲಕ್ಕಿಯನ್ನು ಹೊತ್ತುದು. ಆ ಸಮಯದಲ್ಲಿ ಆ ಮಹಾರಾಜನಿಗೆ ತತ್ತ್ವೋಪದೇಶ ಮಾಡಿದುದು. 146-166

**ನಲವತ್ತೊಂಭತ್ತನೆಯ ಅಧ್ಯಾಯ**—

ಜಡಭರತನು ಹೇಳಿದ ನಿದಾಘಋಭುಮುನಿಗಳ ತತ್ತ್ವ ವಿಷಯ ಸಂವಾದ. 167-188

**ಐವತ್ತನೆಯ ಅಧ್ಯಾಯ**—

ಪ್ರಥಮವೇದಾಂಗವಾದ ಶಿಕ್ಷೆಯ ನಿರೂಪಣೆ. ಸಾಮಗಾನಕ್ಕೆ ಅಂಗವಾದ ಸ್ವರಗಳು, ಸಂಗೀತಸ್ವರಗಳು, ಅವುಗಳಿಗಿರುವ ವ್ಯತ್ಯಾಸ. ಅಧ್ಯಯನ ನಿಯಮ, ವಿದ್ಯಾರ್ಥಿಯ ಲಕ್ಷಣ. 189-249

**ಐವತ್ತೊಂದನೆಯ ಅಧ್ಯಾಯ**—

ವೇದಾಂಗವಾದ ಕಲ್ಪ, ಅದರ ವಿಭಾಗ, ಲಕ್ಷಣ ಇತ್ಯಾದಿಗಳು ಗೃಹ್ಯಕಲ್ಪದ ವಿಶೇಷ ವಿವರಣೆ. ಗೃಹ್ಯಪ್ರಯೋಗ ವಿಧಾನ. ವಿನಾಯಕಪೂಜಾಕ್ರಮ. ನವಗ್ರಹಪೂಜೆ. ಶ್ರಾದ್ಧವಿಧಾನ. 250-282

**ಐವತ್ತೆರಡನೆಯ ಅಧ್ಯಾಯ**—

ವೇದಾಂಗವ್ಯಾಕರಣ. ಪದಸ್ವರೂಪ. ಏಳು ವಿಭಕ್ತಿ ಪ್ರತ್ಯಯಗಳು, ಅವುಗಳ ಅರ್ಥ. ವಿಶೇಷಪ್ರಯೋಗ. ಲಕಾರ, ಅದರ ಅರ್ಥ. ಸಿದ್ಧರೂಪೋದಾಹರಣೆ. ದಶ ಲಕಾರಗಳಲ್ಲಿ ಧಾತುರೂಪಗಳು. ಆತ್ಮನೇಪದಪರಸ್ಮೈ ಪದ ಧಾತುಗಳು. ದ್ವಿಕರ್ಮಕಪ್ರಯೋಗ ಇತ್ಯಾದಿ. 283-305

**ಐವತ್ತಮೂರನೆಯ ಅಧ್ಯಾಯ**—

ವೇದಾಂಗನಿರುಕ್ತ. ವೈದಿಕಲೌಕಿಕ ಶಬ್ದಗಳ ವೈಲಕ್ಷಣ್ಯ. ಧಾತುಗಳ ವಿವೇಚನೆ. ಸ್ವರನಿರ್ಣಯ. ಗಣವಿಭಾಗ. ಆತ್ಮನೇಪದ, ಪರಸ್ಮೈಪದ, ಉಭಯ ಪದಗಳ ನಿರೂಪಣೆ. ಉದಾತ್ತಾನುದಾತ್ತಾದಿವ್ಯವಸ್ಥೆ ಇತ್ಯಾದಿ. 306-326

|| ಶ್ರೀಃ ||

# ನಾರದೀಯಮಹಾಪುರಾಣಂ

## ದ್ವಿತೀಯಃ ಪಾದಃ

## ದ್ವಿಚತ್ವಾರಿಂಶೋಽಧ್ಯಾಯಃ

---

**ನಾರದ ಉವಾಚ**

**ಕುತಃ ಸೃಷ್ಟಮಿದಂ ಬ್ರಹ್ಮನ್ ಜಗತ್ಸ್ಥಾವರಜಂಗಮಮ್ ।**
**ಪ್ರಲಯೇ ಚ ಕಮಭ್ಯೇತಿ ತನ್ಮೇ ಬ್ರೂಹಿ ಸನಂದನ ॥ ೧ ॥**

**ಸಸಾಗರಃ ಸಗಗನಃ ಸಶೈಲಃ ಸಬಲಾಹಕಃ ।**
**ಸಭೂಮಿಃ ಸಾಗ್ನಿ ಪವನೋ ಲೋಕೋಽಯಂ ಕೇನ ನಿರ್ಮಿತಃ ॥ ೨ ॥**

**ಕಥಂ ಸೃಷ್ಟಾನಿ ಭೂತಾನಿ ಕಥಂ ವರ್ಣವಿಭಕ್ತಯಃ ।**
**ಶೌಚಾಶೌಚಂ ಕಥಂ ತೇಷಾಂ ಧರ್ಮಾಧರ್ಮವಿಧಿಃ ಕಥಮ್ ॥ ೩ ॥**

---

### ನಲವತ್ತೆರಡನೆಯ ಅಧ್ಯಾಯ.

೧. ನಾರದನು ನುಡಿದನು—ಬ್ರಹ್ಮಜ್ಞಾನಿಯಾದ ಸನಂದನನೇ! ಚರಾಚರಾತ್ಮಕವಾದ ಈ ಪ್ರಪಂಚವು ಯಾರಿಂದ ಸೃಷ್ಟಿಸಲ್ಪಟ್ಟಿತು? ಪ್ರಲಯ ಕಾಲದಲ್ಲಿ ಅದು ಯಾರನ್ನು ಹೊಂದುವುದು? ಅದನ್ನು ನನಗೆ ಹೇಳು.

೨. ಸಮುದ್ರ, ಆಕಾಶ, ಪರ್ವತ, ಮೇಘ, ಭೂಮಿ, ಅಗ್ನಿ, ವಾಯು ಇವುಗಳಿಂದ ಸಹಿತವಾದ ಈ ಲೋಕವು ಯಾರಿಂದ ನಿರ್ಮಿತವಾಗಿದೆ?

೩. ಪ್ರಾಣಿಗಳು ಹೇಗೆ ಸೃಷ್ಟಿಸಲ್ಪಟ್ಟುವು? ವರ್ಣಗಳು ಹೇಗೆ ವಿಭಾಗಿಸಲ್ಪಟ್ಟವೆ? ಅವುಗಳ ಶುದ್ಧಿ, ಅಶುದ್ಧಿಗಳು ಮತ್ತು ಧರ್ಮ ಅಧರ್ಮಗಳ ವಿಧಾನವೂ ಸಹ ಹೇಗೆ?

**ಕೀದೃಶೋ ಜೀವತಾಂ ಜೀವಃ ಕ್ವ ತೇ ಗಚ್ಛಂತಿ ಯೇ ಮೃತಾಃ ।**
**ಅಸ್ಮಾಲ್ಲೋಕಾದಮುಂ ಲೋಕಂ ಸರ್ವಂ ಶಂಸತು ಮೇ ಭವಾನ್ ॥ ೪ ॥**

**ಸನಂದನ ಉವಾಚ**

**ಶೃಣು ನಾರದ ವಕ್ಷ್ಯಾಮಿ ಚೇತಿಹಾಸಂ ಪುರಾತನಂ ।**
**ಭೃಗುಣಾಭಿಹಿತಂ ಶಾಸ್ತ್ರಂ ಭರದ್ವಾಜಾಯ ಪೃಚ್ಛತೇ ॥ ೫ ॥**

**ಕೈಲಾಸಶಿಖರೇ ದೃಷ್ಟ್ವಾ ದೀಪ್ಯಮಾನಂ ಮಹೌಜಸಂ ।**
**ಭೃಗುಂ ಮಹರ್ಷಿಮಾಸೀನಂ ಭರದ್ವಾಜೋಽನ್ವಪೃಚ್ಛತ ॥ ೬ ॥**

**ಭರದ್ವಾಜ ಉವಾಚ**

**ಕಥಂ ಜೀವೋ ವಿಚರತಿ ನಾನಾ ಯೋನಿಷು ಸಂತತಂ ।**
**ಕಥಂ ಮುಕ್ತಿಶ್ಚ ಸಂಸಾರಾಜ್ಜಾಯತೇ ತಸ್ಯ ಮಾನದ ॥ ೭ ॥**

---

೪. ಬದುಕಿರುವವರ ಶರೀರದಲ್ಲಿರುವ ಜೀವನು ಎಂತಹವನು? ಸತ್ತ ಮೇಲೆ ಜೀವರು ಎಲ್ಲಿಗೆ ಹೋಗುವರು? ಈ ಲೋಕದಿಂದ ಇಂತಹ ಲೋಕಕ್ಕೆ ಹೋಗುತ್ತಾರೆ ಮುಂತಾಗಿ ಎಲ್ಲವನ್ನೂ ನೀನು ನನಗೆ ಹೇಳು.

೫. ಸನಂದನನು ಹೇಳಿದನು.–ನಾರದ! ಇದೇ ವಿಷಯವನ್ನು ಕೇಳಿದ ಭರದ್ವಾಜಮುನಿಗೆ ಭೃಗುಮುನಿಯು ಹೇಳಿದ ಪುರಾತನೇತಿಹಾಸಗರ್ಭಿತವಾದ ಶಾಸ್ತ್ರವನ್ನು ಹೇಳುವೆನು ; ಕೇಳು.

೬. ಪ್ರಕಾಶಮಾನನು, ಮಹಾಶಕ್ತನೂ ಆದ, ಕೈಲಾಸಪರ್ವತದ ಶಿಖರದಲ್ಲಿ ಕುಳಿತಿದ್ದ, ಭೃಗುಮಹರ್ಷಿಯನ್ನು ನೋಡಿ, ಭರದ್ವಾಜನು ಪ್ರಶ್ನಿಸಿದನು.

೭. ಭರದ್ವಾಜನು ಹೇಳಿದನು.—ಜೀವನು ನಾನಾಜನ್ಮಗಳನ್ನು ಹೊಂದುವ ಬಗೆ ಹೇಗೆ? ಯಾವಾಗಲೂ ಜನ್ಮಹೊಂದುತ್ತಿರುವ ಜೀವನಿಗೆ ಸಂಸಾರದಿಂದ ಹೇಗೆ ಮುಕ್ತಿಯಾಗುವುದು?

**ಯಶ್ಚ ನಾರಾಯಣಃ ಸ್ರಷ್ಟಾ ಸ್ವಯಂಭೂರ್ಭಗವಾನ್ಕಥಂ ।**
**ಸೇವ್ಯಸೇವಕಭಾವೇನ ವರ್ತೇತೇ ಇತಿ ತೌ ಸದಾ ॥ ೮ ॥**

**ಪ್ರವಿಶಂತಿ ಲಯೇ ಸರ್ವೇ ಯಮೀಶಂ ಸಚರಾಚರಾಃ ।**
**ಲೋಕಾನಾಂ ರಮಣಃ ಸೋಽಯಂ ನಿರ್ಗುಣಶ್ಚ ನಿರಂಜನಃ ॥ ೯ ॥**

**ಅನಿರ್ದೇಶ್ಯೋಽಪ್ರತರ್ಕ್ಯಶ್ಚ ಕಥಂ ಜ್ಞಾಯೇತ ಕೈರ್ಮುನೇ ।**
**ಕಥಮೇನಂ ಪರಾತ್ಮಾನಂ ಕಾಲಶಕ್ತಿದುರನ್ವಯಂ ॥ ೧೦ ॥**

**ಅತರ್ಕ್ಯಚರಿತಂ ವೇದಾಃ ಸ್ತುವಂತಿ ಕಥಮಾದರಾತ್ ।**
**ಜೀವೋ ಜೀವತ್ವಮುಲ್ಲಂಘ್ಯ ಕಥಂ ಬ್ರಹ್ಮ ಸಮನ್ವಿಯಾತ್ ॥ ೧೧ ॥**

**ಏತದಿಚ್ಛಾಮ್ಯಹಂ ಶ್ರೋತುಂ ತನ್ಮೇ ಬ್ರೂಹಿ ಕೃಪಾನಿಧೇ ।**
**ಏವಂ ಸ ಭಗವಾನ್ಪೃಷ್ಟೋ ಭರದ್ವಾಜೇನ ಸಂಶಯಂ ॥ ೧೨ ॥**

---

೮. ಷಡ್ಗುಣೈಶ್ವರ್ಯಸಂಪನ್ನನಾದ ನಾರಾಯಣನು ತಾನೇ ಬ್ರಹ್ಮನಾಗಿ ಸೃಷ್ಟಿಕರ್ತನಾದನು. ಆದುದರಿಂದ ಅವರಿಬ್ಬರೂ ಸರ್ವದಾ ಸೇವ್ಯ ಸೇವಕ ಭಾವದಿಂದ ಇರುವುದು ಹೇಗೆ?

೯-೧೦. ಪ್ರಲಯಕಾಲದಲ್ಲಿ ಚರಾಚರ ಜಗತ್ತೆಲ್ಲವೂ ಯಾವ ಈಶ್ವರನನ್ನು ಪ್ರವೇಶಿಸುವುದೋ ಅಂತಹ, ಲೋಕಗಳಿಗೆ ಸುಖಕಾರಕನು, ಪ್ರಾಕೃತಗುಣಶೂನ್ಯನು, ನಿರ್ದೋಷನು, ಸಮಗ್ರವಾಗಿ ಇಂತಹವನೆಂದು ನಿರ್ದೇಶಿಸಲು ಮತ್ತು ತರ್ಕಿಸಲೂ ಸಹ ಅನರ್ಹನೂ ಆಗಿರುವ ಈ ಭಗವಂತನು ಯಾರಿಂದ ಹೇಗೆ ತಿಳಿಯಲ್ಪಡುವನು?

೧೦-೧೧ ಕಾಲಶಕ್ತಿಗೆ ಸಿಲುಕದ, ಊಹಿಸಲೂ ಅಸಾಧ್ಯವಾದ ಚರಿತ್ರೆಯುಳ್ಳ ಈ ಪರಮಾತ್ಮನನ್ನು ವೇದಗಳು ಹೇಗೆ ಆದರದಿಂದ ಸ್ತುತಿಸುವುವು? ಜೀವನು ಸಂಸಾರವನ್ನು ದಾಟಿ ಬ್ರಹ್ಮನನ್ನು ಹೊಂದುವ ಬಗೆ ಹೇಗೆ?

೧೨-೧೩. ಇದನ್ನು ತಿಳಿಯಲಿಚ್ಛಿಸುವೆನು. ದಯಾಸಾಗರನೇ! ಅದನ್ನು

ಮಹರ್ಷಿರ್ಬ್ರಹ್ಮಸಂಕಾಶಃ ಸರ್ವಂ ತಸ್ಮೈ ತತೋಽಬ್ರವೀತ್ ।

ಭೃಗುರುವಾಚ

ಮಾನಸೋ ನಾಮ ಯಃ ಪೂರ್ವೋ ವಿಶ್ರುತೋ ವೈ ಮಹರ್ಷಿಭಿಃ ॥ ೧೩ ॥

ಅನಾದಿನಿಧನೋ ದೇವಸ್ತಥಾ ತೇಭ್ಯೋಽಜರಾಮರಃ ।
ಅವ್ಯಕ್ತ ಇತಿ ವಿಖ್ಯಾತಃ ಶಾಶ್ವತೋಽಥಾಕ್ಷಯೋಽವ್ಯಯಃ ॥ ೧೪ ॥

ಯತಃ ಸೃಷ್ಟಾನಿ ಭೂತಾನಿ ಸ್ಥೀಯಂತೇ ಚ ಮ್ರಿಯಂತಿ ಚ ।
ಸೋಽಸೃಜತ್ಪ್ರಥಮಂ ದೇವೋ ಮಹಾಂತಂ ನಾಮ ನಾಮತಃ ॥ ೧೫ ॥

ಆಕಾಶಮಿತಿ ವಿಖ್ಯಾತಂ ಸರ್ವಭೂತಧರಃ ಪ್ರಭುಃ ।
ಆಕಾಶಾದಭವದ್ವಾರಿ ಸಲಿಲಾದಗ್ನಿಮಾರುತೌ ॥ ೧೬ ॥

---

ಹೇಳು ಎಂಬುದಾಗಿ ಭರದ್ವಾಜನು ಪ್ರಶ್ನಿಸಲು ಬ್ರಹ್ಮಜ್ಞಾನಿಯಾದ ಭೃಗು ಮಹರ್ಷಿಯು ಅವನಿಗೆ ಎಲ್ಲವನ್ನೂ ಹೇಳಿದನು.

೧೩-೧೪. ಮಾನಸನಾಮಕನಾದ ಯಾವ ದೇವನು ಸೃಷ್ಟಿಗೆ ಪೂರ್ವದಲ್ಲಿದ್ದನೆಂದು ಮಹರ್ಷಿಗಳು ಕೇಳಿದ್ದರೋ, ಅವನು ಆದ್ಯಂತಶೂನ್ಯನು. ಮುಪ್ಪು ಸಾವುಗಳಿಲ್ಲದವನು, ಯಾವಾಗಲೂ ಒಂದೇ ರೀತಿಯಾಗಿರುವವನು, ಹ್ರಾಸವಿಲ್ಲದವನು, ದೇಹನಾಶವೂ ಇಲ್ಲದವನೂ ಆಗಿ ಅವ್ಯಕ್ತನೆಂದು ಪ್ರಖ್ಯಾತನಾಗಿರುವನು.

೧೫-೧೬. ಪ್ರಾಣಿಗಳು ಸೃಷ್ಟಿ, ಸ್ಥಿತಿ, ಲಯಗಳನ್ನು ಯಾರಿಂದ ಹೊಂದುತ್ತವೆಯೋ, ಅಂತಹ ಪ್ರಾಣಿಗಳಿಗೆಲ್ಲಾ ಪೋಷಕನಾದ ಸ್ವಾಮಿಯು ಆದಿಯಲ್ಲಿ ಆಕಾಶವೆಂದು ಪ್ರಸಿದ್ಧವಾದ 'ಮಹಾನ್' ಎಂಬ ಶಬ್ದದಿಂದ ವಾಚ್ಯವಾದ ತತ್ತ್ವವನ್ನು ಸೃಷ್ಟಿಮಾಡಿದನು. ಆಕಾಶದಿಂದ ಜಲವು, ಅದರಿಂದ ತೇಜೋವಾಯುಗಳೂ ಸೃಷ್ಟಿಸಲ್ಪಟ್ಟವು.

**ಅಗ್ನಿಮಾರುತಸಂಯೋಗಾತ್ತತಃ ಸಮಭವನ್ಮಹೀ ।**
**ತತಸ್ತೇಜೋಮಯಂ ದಿವ್ಯಂ ಪದ್ಮಂ ಸೃಷ್ಟಂ ಸ್ವಯಂಭುವಾ ॥ ೧೭ ॥**

**ತಸ್ಮಾತ್ಪದ್ಮಾತ್ಸಮಭವದ್ಬ್ರಹ್ಮಾ ವೇದಮಯೋ ವಿಧಿಃ ।**
**ಅಹಂಕಾರ ಇತಿ ಖ್ಯಾತಃ ಸರ್ವಭೂತಾತ್ಮಭೂತಕೃತ್ ॥ ೧೮ ॥**

**ಬ್ರಹ್ಮಾ ವೈ ಸ ಮಹಾತೇಜಾ ಯ ಏತೇ ಪಂಚಧಾತವಃ ।**
**ಶೈಲಾಸ್ತಸ್ಯಾಸ್ಥಿಸಂಘಾಸ್ತು ಮೇದೋ ಮಾಂಸಂ ಚ ಮೇದಿನೀ ॥ ೧೯ ॥**

**ಸಮುದ್ರಾಸ್ತಸ್ಯ ರುಧಿರಮಾಕಾಶಮುದರಂ ತಥಾ ।**
**ಪವನಶ್ಚೈವ ನಿಶ್ವಾಸಸ್ತೇಜೋ ನಿರ್ನಿಮ್ನಗಾಃ ಶಿರಾಃ ॥ ೨೦ ॥**

**ಅಗ್ನೀಷೋಮೌ ಚ ಚಂದ್ರಾರ್ಕೌ ನಯನೇ ತಸ್ಯ ವಿಶ್ರುತೇ ।**
**ನಭಶ್ಚೋರ್ಧ್ವಶಿರಸ್ತಸ್ಯ ಕ್ಷಿತಿಃ ಪಾದೌ ಭುಜೌ ದಿಶಃ ॥ ೨೧ ॥**

---

೧೭. ಅವುಗಳ ಸಂಯೋಗದಿಂದ ಪೃಥಿವಿಯು ಉತ್ಪನ್ನವಾಯಿತು. ತರುವಾಯ ಪರಬ್ರಹ್ಮನಿಂದ ತೇಜೋಮಯವಾದ ದಿವ್ಯಪದ್ಮವು ಸೃಷ್ಟಿಸಲ್ಪಟ್ಟಿತು.

೧೮. ಆ ಪದ್ಮದಿಂದ ವೇದಮಯನಾದ ಚತುರ್ಮುಖಬ್ರಹ್ಮನು ಹುಟ್ಟಿದನು. ಅವನು ಭೂತಾತ್ಮ, ಭೂತ ಇವುಗಳಿಗೆಲ್ಲಾ ಕರ್ತನಾಗಿ ಅಹಂಕಾರ ಎಂಬುದಾಗಿ ಪ್ರಖ್ಯಾತನಾದನು.

೧೯-೨೦. ಮಹಾತೇಜಸ್ವಿಯಾದ ಆ ಬ್ರಹ್ಮನ ಪಂಚಧಾತುಗಳಲ್ಲಿ ಮೂಳೆಯ ಸಮೂಹಗಳೇ ಪರ್ವತಗಳು, ಕೊಬ್ಬು ಮತ್ತು ಮಾಂಸಗಳು ಪೃಥಿವಿಯು, ರಕ್ತವೇ ಸಮುದ್ರವು, ಹೊಟ್ಟೆಯು ಆಕಾಶವು, ನಿಶ್ವಾಸವೇ ವಾಯುವು, ಮುಖವೇ ತೇಜಸ್ಸು, ನಾಡಿಗಳೇ ನದಿಗಳೂ ಆದುವು.

೨೧. ಅಗ್ನೀಷೋಮರು ಮತ್ತು ಚಂದ್ರಸೂರ್ಯರು ಅವನ ನೇತ್ರಗಳು, ಆಕಾಶವು ಊರ್ಧ್ವಶಿರಸ್ಸು, ಭೂಮಂಡಲವು ಪಾದಗಳು, ದಿಕ್ಕುಗಳೇ ಭುಜಗಳು.

**ದುರ್ವಿಜ್ಞೇಯೋ ಹ್ಯಚಿಂತ್ಯಾತ್ಮಾ ಸಿದ್ಧೈರಪಿ ನ ಸಂಶಯಃ ।**
**ಸ ಏಷ ಭಗವಾನ್ವಿಷ್ಣುರನಂತ ಇತಿ ವಿಶ್ರುತಃ ॥ ೨೨ ॥**

**ಸರ್ವಭೂತಾತ್ಮಭೂತಸ್ಥೋ ದುರ್ವಿಜ್ಞೇಯೋಽಕೃತಾತ್ಮಭಿಃ ।**
**ಅಹಂಕಾರಸ್ಯ ಯಃ ಸ್ರಷ್ಟಾ ಸರ್ವಭೂತಭವಾಯ ವೈ ।**
**ತತಃ ಸಮಭವದ್ವಿಶ್ವಂ ಪೃಷ್ಟೋಽಹಂ ಯದಿಹ ತ್ವಯಾ ॥ ೨೩ ॥**

**ಭರದ್ವಾಜ ಉವಾಚ**

**ಗಗನಸ್ಯ ದಿಶಾಂ ಚೈವ ಭೂತಲಸ್ಯಾನಿಲಸ್ಯ ಚ ।**
**ಕಾನ್ಯತ್ರ ಪರಿಮಾಣಾನಿ ಸಂಶಯಂ ಛಿಂಧಿ ತತ್ತ್ವತಃ ॥ ೨೪ ॥**

**ಭೃಗುರುವಾಚ**

**ಅನಂತಮೇತದಾಕಾಶಂ ಸಿದ್ಧದೈವತಸೇವಿತಂ ।**
**ರಮ್ಯಂ ನಾನಾಶ್ರಯಾಕೀರ್ಣಂ ಯಸ್ಯಾಂತೋ ನಾಧಿಗಮ್ಯತೇ ॥ ೨೫ ॥**

---

೨೨. ಈ ರೀತಿ ಅಚಿಂತ್ಯಸ್ವರೂಪನಾದ ಆತ್ಮನು ಸಿದ್ಧರಿಂದಲೂ ಸಹ ತಿಳಿಯಲಶಕ್ಯನು, ಸಂದೇಹವಿಲ್ಲ. ಅಂತಹ ಈ ವಿಷ್ಣುಭಗವಂತನು ಅನಂತ ನಾಮಕನಾಗಿ ಪ್ರಸಿದ್ಧನಾಗಿರುವನು.

೨೩. ಸಕಲಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿರುವ, ಉಪಾಸನಾದಿ ಸಾಧನಾನುಷ್ಠಾನಮಾಡದಿರುವವನಿಂದ ತಿಳಿಯಲು ಅಶಕ್ಯನಾದ, ಸಕಲಭೂತ ಗಳ ಸೃಷ್ಟಿಗಾಗಿ ಅಹಂಕಾರವನ್ನು ಸೃಷ್ಟಿಸಿದ ಅನಂತನೇ ಈಗ ನೀನು ಪ್ರಶ್ನಿಸಿದ ಸೃಷ್ಟಿಕರ್ತನು. ಅವನಿಂದಲೇ ಪ್ರಪಂಚವು ಹುಟ್ಟಿತು.

೨೪. ಭರದ್ವಾಜನು ಮಾತನಾಡಿದನು.—ಆಕಾಶ, ದಿಕ್ಕು, ಪೃಥಿವೀ, ವಾಯು ಇವುಗಳ ಪರಿಮಿತಿಯೆಷ್ಟು? ಈ ವಿಷಯದಲ್ಲಿ ತತ್ತ್ವವನ್ನು ತಿಳಿಸಿ ಸಂಶಯವನ್ನು ಪರಿಹರಿಸು ಎಂದು ಭೃಗುವನ್ನು ಕೇಳಿದನು.

೨೫. ಭೃಗುವು ಹೇಳಿದನು.—ಸಿದ್ಧರು, ದೇವತೆಗಳು ಇವರಿಂದ ಸೇವಿ ಸಲ್ಪಟ್ಟ, ಮನೋಹರವಾಗಿರುವ, ನಾನಾವಿಧವಾದ ಪದಾರ್ಥಗಳಿಂದ ತುಂಬಿರುವ ಕೊನೆಗಾಣದ ಈ ಆಕಾಶವು ಅಪರಿಚ್ಛಿನ್ನಪರಿಮಾಣವುಳ್ಳುದು ಎಂದರೆ ಇಷ್ಟೇ ಎಂದು ನಿರ್ಣಯಿಸಲಶಕ್ಯವಾದುದು.

ಊರ್ಧ್ವಗಂ ಗತೇರಥಸ್ತಾತ್ತು ಚಂದ್ರಾದಿತ್ಯೌ ನ ಪಶ್ಯತಃ ।
ತತ್ರ ದೇವಾಃ ಸ್ವಯಂ ದೀಪ್ತಾ ಭಾಸ್ಕರಾಭಾಗ್ನಿವರ್ಚಸಃ ॥ ೨೬ ॥

ತೇ ಚಾಪ್ಯಂತಂ ನ ಪಶ್ಯಂತಿ ನಭಸಃ ಪ್ರಥಿತೌಜಸಃ ।
ದುರ್ಗಮತ್ವಾದನಂತತ್ವಾದಿತಿ ಮೇ ಶೃಣು ಮಾನದ ॥ ೨೭

ಉಪರಿಷ್ಟೋಪರಿಷ್ಟಾತ್ತು ಪ್ರಜ್ವಲದ್ಭಿಃ ಸ್ವಯಂಪ್ರಭೈಃ ।
ನಿರುದ್ಧಮೇತದಾಕಾಶಂ ಹ್ಯಪ್ರಮೇಯಂ ಸುರೈರಪಿ ॥ ೨೮ ॥

ಪೃಥಿವ್ಯಂತೇ ಸಮುದ್ರಾಸ್ತು ಸಮುದ್ರಾಂತೇ ತಮಃ ಸ್ಮೃತಂ ।
ತಮಸೋಽಂತೇ ಜಲಂ ಪ್ರಾಹುರ್ಜಲಸ್ಯಾಂತೇಽಗ್ನಿರೇವ ಚ ॥ ೨೯ ॥

ರಸಾತಲಾಂತೇ ಸಲಿಲಂ ಜಲಾಂತೇ ಪನ್ನಗಾಧಿಪಾಃ ।
ತದಂತೇ ಪುನರಾಕಾಶಮಾಕಾಶಾಂತೇ ಪುನರ್ಜಲಂ ॥ ೩೦ ॥

---

೨೬. ಚಂದ್ರಸೂರ್ಯರು ಮೇಲಕ್ಕೆ ಹೋಗುತ್ತಿರುವುದರಿಂದ ಅವರು ಕೆಳ ಭಾಗವನ್ನು ನೋಡುವುದಿಲ್ಲ. ಅಲ್ಲಿ ದೇವತೆಗಳು ಸೂರ್ಯನಂತೆ ತೇಜಸ್ಸನ್ನು, ಅಗ್ನಿಯಂತೆ ಕಾಂತಿಯನ್ನೂ ಹೊಂದಿದವರಾಗಿ ಸ್ವತಃ ಪ್ರಕಾಶಮಾನರಾಗಿರುವರು.

೨೭. ಪ್ರಸಿದ್ಧಶಕ್ತಿಯುಳ್ಳ ಅವರೂ ಸಹ ಆಕಾಶವು ದುರ್ಜ್ಞೇಯವು, ಅನಂತವೂ ಆಗಿರುವುದರಿಂದ ಅದರ ಅಂತವನ್ನು ತಿಳಿಯಲಾರರು ಎಂದು ತಿಳಿ.

೨೮. ಈ ಆಕಾಶವು ಮೇಲುಮೇಲಿನ ಭಾಗದಲ್ಲಿ ಸ್ವಯಂ ಪ್ರಕಾಶರಾದ ದೇವತೆಗಳ ಕಾಂತಿಯಿಂದ ವ್ಯಾಪಿಸಲ್ಪಟ್ಟಿದ್ದಾಗ್ಯೂ ಅದನ್ನು ಅವರು ಸಂಪೂರ್ಣವಾಗಿ ತಿಳಿಯಲಾರರು.

೨೯-೩೧. ಪೃಥಿವಿಯ ಕೊನೆಯಲ್ಲಿ ಸಮುದ್ರಗಳು, ಅವುಗಳ ಅಂತ್ಯದಲ್ಲಿ ತಮಸ್ಸು, ಅದರ ಅಂತ್ಯದಲ್ಲಿ ನೀರು, ಅದರ ಆಚೆಗೆ ಅಗ್ನಿಯು, ರಸಾತಲ ಲೋಕದ ಅಂತ್ಯದಲ್ಲಿ ಉದಕವು, ಅದರ ಅಂತ್ಯದಲ್ಲಿ ಆದಿಶೇಷಾದಿಗಳು, ಅವರ ಅಂತ್ಯದಲ್ಲಿ ಪುನಃ ಆಕಾಶ, ಅದರ ಕೊನೆಯಲ್ಲಿ ಜಲವು. ಈ ರೀತಿಯಾದ

ಏವಮಂತಂ ಭಗವತಃ ಪ್ರಮಾಣಂ ಸಲಿಲಸ್ಯ ಚ ।
ಅಗ್ನಿಮಾರುತತೋಯೇಭ್ಯೋ ದುರ್ಜ್ಞೇಯಂ ದೇವತೈರಪಿ ॥ ೩೧ ॥

ಅಗ್ನಿಮಾರುತತೋಯಾನಾಂ ವರ್ಣಾಃ ಕ್ಷಿತಿತಲಸ್ಯ ಚ ।
ಆಕಾಶಸದೃಶಾಹ್ಯೇತೇ ಭಿದ್ಯಂತೇ ತತ್ವದರ್ಶನಾತ್ ॥ ೩೨ ॥

ಪಠಂತಿ ಚೈವ ಮುನಯಃ ಶಾಸ್ತ್ರೇಷು ವಿವಿಧೇಷು ಚ ।
ತ್ರೈಲೋಕ್ಯೇ ಸಾಗರೇ ಚೈವ ಪ್ರಮಾಣಂ ವಿಹಿತಂ ಯಥಾ ॥ ೩೩ ॥

ಅದೃಶ್ಯೋ ಯಸ್ತ್ವಗಮ್ಯೋ ಯಃ ಕಃ ಪ್ರಮಾಣಮುದೀರಯೇತ್ ।
ಸಿದ್ಧಾನಾಂ ದೇವತಾನಾಂ ಚ ಪರಿಮಿತಾ ಪದಾಗತಿಃ ॥ ೩೪ ॥

ತದಗಮ್ಯಮನಂತಸ್ಯ ನಾಮಾನಂತೇತಿ ವಿಶ್ರುತಂ ।
ನಾಮಧೇಯಾನುರೂಪಸ್ಯ ಮಾನಸಸ್ಯ ಮಹಾತ್ಮನಃ ॥ ೩೫ ॥

---

ಜಲದ ಪರಿಮಾಣವನ್ನು, ಇವುಗಳಲ್ಲಿ ವ್ಯಾಪಿಸಿರುವ ಭಗವಂತನ ಅಂತವನ್ನೂ ಅಗ್ನಿ ವಾಯು ಜಲಗಳದೆಶೆಯಿಂದ ವಿವಿಕ್ತವಾಗಿ ದೇವತೆಗಳೂ ಸಹ ತಿಳಿಯಲಾರರು.

೩೨. ತೇಜಸ್ಸು, ವಾಯು ಮತ್ತು ಜಲಗಳ ವರ್ಣಗಳು ಪೃಥಿವಿಗೆ ಬರುತ್ತವೆ. ಇವು ಆಕಾಶಸಮಾನವು. ಇವುಗಳ ಭೇದವು ತತ್ವದರ್ಶನದಿಂದ ವ್ಯಕ್ತವಾಗುತ್ತದೆ.

೩೩. ಮುನಿಗಳು ಲೋಕತ್ರಯ ಮತ್ತು ಸಮುದ್ರ ಇವುಗಳ ಪರಿಮಾಣ ವಿಧಾನವನ್ನು ನಾನಾವಿಧವಾದ ಶಾಸ್ತ್ರಗಳಲ್ಲಿ ಹೇಳಿರುತ್ತಾರೆ.

೩೪. ಅದೃಶ್ಯ ಮತ್ತು ಅಗಮ್ಯನಾದ ಬ್ರಹ್ಮನ ವಿಷಯದಲ್ಲಿ ಯಾರು ತಾನೇ ಪರಿಮಿತಿಯನ್ನು ಹೇಳಿಯಾರು? ಸಿದ್ಧರ ಮತ್ತು ದೇವತೆಗಳ ಸ್ವರೂಪವು ಪರಿಮಿತವಾದುದು.

೩೫. ಹೆಸರಿಗೆ ಅನುಗುಣವಾದ ಮಾಹಾತ್ಮ್ಯೆಯುಳ್ಳ ಮಾನಸರೂಪಿಯಾದ ವಿಷ್ಣುವಿನ 'ಅನಂತ' ಎಂಬ ಪ್ರಸಿದ್ಧ ನಾಮಧೇಯವು ಅಗಮ್ಯವು.

ಯದಾ ತು ದಿವ್ಯಂ ಯದ್ರೂಪಂ ಹ್ರಸತೇ ವರ್ಧತೇ ಪುನಃ ।
ಕೋಽನ್ಯಸ್ತದ್ವೇದಿತುಂ ಶಕ್ತೋ ಯೋಽಪಿ ಸ್ಯಾತ್ತದ್ವಿಧೋಽಪರಃ ॥ ೩೬ ॥

ತತಃ ಪುಷ್ಕರತಃ ಸೃಷ್ಟಃ ಸರ್ವಜ್ಞೋ ಮೂರ್ತಿಮಾನ್ಪ್ರಭುಃ ।
ಬ್ರಹ್ಮಾ ಧರ್ಮಮಯಃ ಪೂರ್ವಃ ಪ್ರಜಾಪತಿರನುತ್ತಮಃ ॥ ೩೭ ॥

ಭರದ್ವಾಜ ಉವಾಚ

ಪುಷ್ಕರೋ ಯದಿ ಸಂಭೂತೋ ಜ್ಯೇಷ್ಠಂ ಭವತಿ ಪುಷ್ಕರಂ ।
ಬ್ರಹ್ಮಾಣಂ ಪೂರ್ವಜಂ ಚಾಹ ಭವಾನ್ ಸಂದೇಹ ಏವ ಮೇ ॥ ೩೮ ॥

ಭೃಗುರುವಾಚ

ಮಾನಸಸ್ಯೇಹ ಯಾ ಮೂರ್ತಿರ್ಬ್ರಹ್ಮತ್ವಂ ಸಮುಪಾಗತಾ ।
ತಸ್ಯಾಸನವಿಧಾನಾರ್ಥಂ ಪೃಥಿವೀ ಪದ್ಮಮುಚ್ಯತೇ ॥ ೩೯ ॥

---

೩೬. ದಿವ್ಯವಾದ ಭಗವಂತನ ರೂಪವು ಹ್ರಸ್ವವಾಗಿದ್ದಾಗಲೇ ವೃದ್ಧಿಯನ್ನೂ ಹೊಂದುತ್ತದೆ. ಅಂತಹವನು ಇನ್ನೊಬ್ಬನಿಲ್ಲ ಹೀಗಿರುವುದರಿಂದ ಆ ಭಗವಂತನ ಸ್ವರೂಪವನ್ನು ಸಮಗ್ರವಾಗಿ ತಿಳಿಯಲು ಇನ್ನೊಬ್ಬನು ಹೇಗೆ ಸಮರ್ಥನಾದಾನು ?

೩೭. ಆ ಪದ್ಮದದೆಸೆಯಿಂದ ಸರ್ವಜ್ಞನು, ಶರೀರವಂತನು, ಸಮರ್ಥನು, ಧರ್ಮಿಷ್ಠನು, ಶ್ರೇಷ್ಠನು, ಜ್ಯೇಷ್ಠನೂ ಆದ ಪ್ರಜಾಪತಿಯೆಂಬ ಬ್ರಹ್ಮನು ಸೃಷ್ಟಿಸಲ್ಪಟ್ಟನು.

೩೮. ಭರದ್ವಾಜನು ಹೇಳಿದನು.—ಬ್ರಹ್ಮನಿಗಿಂತ ಪೂರ್ವದಲ್ಲಿ ಪದ್ಮವು ಹುಟ್ಟಿತೆಂದು ನೀನು ಹೇಳಿರುವೆ. ಹಾಗೆ ಪದ್ಮವು ಮೊದಲು ಹುಟ್ಟಿದರೆ ಅದೇ ಜ್ಯೇಷ್ಠವೆನಿಸುವುದು. ಆದುದರಿಂದ ಬ್ರಹ್ಮನು ಜ್ಯೇಷ್ಠನೆಂಬಲ್ಲಿ ನನಗೆ ಸಂದೇಹವು ಬಂದಿದೆ ಎಂದು ಕೇಳಿದನು.

೩೯. ಭೃಗುಮುನಿಯು ಹೇಳಿದನು.—ಮಾನಸನ ಪ್ರತಿಮೆಯೇ ಬ್ರಹ್ಮನು. ಅವನಿಗೆ ಆಸನವನ್ನು ವಿಧಿಸಲು ಲೋಕಾತ್ಮಕ ಪದ್ಮವು ಉಕ್ತವಾಗಿದೆ.

**ಕರ್ಣಿಕಾ ತಸ್ಯ ಪದ್ಮಸ್ಯ ಮೇರುರ್ಗಗನಮುಚ್ಛ್ರಿತಃ ।**
**ತಸ್ಯ ಮಧ್ಯೇ ಸ್ಥಿತಾನ್ಲೋಕಾನ್ಸೃಜತ್ಯೇಷ ಜಗದ್ವಿಧಿಃ ॥ ೪೦ ॥**

**ಭರದ್ವಾಜ ಉವಾಚ**

**ಪ್ರಜಾವಿಸರ್ಗಂ ವಿವಿಧಂ ಕಥಂ ಸ ಸೃಜತಿ ಪ್ರಭುಃ ।**
**ಮೇರುಮಧ್ಯೇ ಸ್ಥಿತೋ ಬ್ರಹ್ಮಾ ತದ್ಬಹಿರ್ದ್ವಿಜಸತ್ತಮ ॥ ೪೧ ॥**

**ಭೃಗುರುವಾಚ**

**ಪ್ರಜಾವಿಸರ್ಗಂ ವಿವಿಧಂ ಮಾನಸೋ ಮನಸಾಽಸೃಜತ್ ।**
**ಸಂರಕ್ಷಣಾರ್ಥಂ ಭೂತಾನಾಂ ಸೃಷ್ಟಂ ಪ್ರಥಮತೋ ಜಲಂ ॥ ೪೨ ॥**

**ಯತ್ಪ್ರಾಣಾಃ ಸರ್ವಭೂತಾನಾಂ ಸೃಷ್ಟಂ ಪ್ರಥಮತೋ ಜಲಂ ।**
**ಯತ್ಪ್ರಾಣಾಃ ಸರ್ವಭೂತಾನಾಂ ವರ್ಧಂತೇ ಯೇನ ಚ ಪ್ರಜಾಃ ॥ ೪೩ ॥**

---

೪೦. ಅತ್ಯಂತ ಎತ್ತರವಾದ ಮೇರುಪರ್ವತವು ಆ ಪದ್ಮಕ್ಕೆ ಅಂತರ್ಗತ ಕೋಶದೋಪಾದಿಯಲ್ಲಿದೆ. ಅದರ ಮಧ್ಯಭಾಗದಲ್ಲಿ ಜಗದ್ವಿಧಾತೃವಾದ ಬ್ರಹ್ಮನು ಲೋಕಗಳನ್ನು ಸೃಷ್ಟಿಸುತ್ತಾನೆ.

೪೧. ಭರದ್ವಾಜನು ಹೇಳಿದನು.—ದ್ವಿಜಶ್ರೇಷ್ಠ ! ಮೇರುಪರ್ವತದ ಮಧ್ಯಭಾಗದಲ್ಲಿರುವ ಬ್ರಹ್ಮನು ಅದರ ಹೊರಭಾಗದಲ್ಲಿ ನಾನಾವಿಧವಾದ ಪ್ರಜೆಗಳ ಸೃಷ್ಟಿಯನ್ನು ಹೇಗೆ ಮಾಡುವನು ?

೪೨. ಭೃಗುವು ಹೇಳಿದನು.—ಆ ಮಾನಸನು ನಾನಾವಿಧವಾದ ಪ್ರಜೆಗಳ ಸೃಷ್ಟಿಯನ್ನು ಮನಸ್ಸಿನಿಂದ ಮಾಡಿದನು. ಹಾಗೆ ಸೃಷ್ಟವಾದ ಪ್ರಾಣಿಗಳ ಸಂರಕ್ಷಣೆಗಾಗಿ ಆದಿಯಲ್ಲಿ ಜಲವನ್ನು ಸೃಷ್ಟಿಸಿದನು.

೪೩. ಆದಿಯಲ್ಲಿ ಸೃಷ್ಟವಾದ ಯಾವ ಜಲವು ಸಕಲ ಪ್ರಾಣಿಗಳಿಗೂ ಪ್ರಾಣವಾಗಿದೆಯೋ, ಪ್ರಾಣಿಗಳಿಗೆಲ್ಲಾ ಪ್ರಾಣವಾಗಿರುವ ಯಾವ ಜಲದಿಂದ ಜನರೆಲ್ಲರೂ ಜೀವಿಸುವರೋ, ಯಾವುದನ್ನು ಬಿಟ್ಟರೆ ಎಲ್ಲರೂ ನಾಶವಾಗುವರೋ ಅಂತಹ ಜಲದಿಂದ ಈ ಸಕಲ ಜಗತ್ತೂ ಆವರಿಸಲ್ಪಟ್ಟಿತು.

ಪರಿತ್ಯಕ್ತಾಶ್ಚ ನಶ್ಯಂತಿ ತೇನೇದಂ ಸರ್ವಮಾವೃತಂ ।
ಪೃಥಿವೀ ಪರ್ವತಾ ಮೇಘಾಃ ಮೂರ್ತಿಮಂತಶ್ಚ ಯೇ ಪರೇ ॥ ೪೪ ॥

ಸರ್ವಂ ತದ್ವಾರುಣಂ ಜ್ಞೇಯಮಾಪಸ್ತತ್ ಸ್ತಂಭಿರೇ ಪುನಃ ।

ಭರದ್ವಾಜ ಉವಾಚ

ಕಥಂ ಸಲಿಲಮುತ್ಪನ್ನಂ ಕಥಂ ಚೈವಾಗ್ನಿಮಾರುತೌ ॥ ೪೫ ॥

ಕಥಂ ವಾ ಮೇದಿನೀ ಸೃಷ್ಟೇತ್ಯತ್ರ ಮೇ ಸಂಶಯೋ ಮಹಾನ್ ।

ಭೃಗುರುವಾಚ

ಬ್ರಹ್ಮಕಲ್ಪೇ ಪುರಾ ಬ್ರಹ್ಮನ್ ಬ್ರಹ್ಮರ್ಷೀಣಾಂ ಸಮಾಗಮೇ ॥ ೪೬ ॥

ಲೋಕಸಂಭವಸಂದೇಹಃ ಸಮುತ್ಪನ್ನೋ ಮಹಾತ್ಮನಾಂ ।
ತೇಽತಿಷ್ಠನ್ಧ್ಯಾನಮಾಲಂಬ್ಯ ಮೌನಮಾಸ್ಥಾಯ ನಿಶ್ಚಲಾಃ ॥ ೪೭ ॥

ತ್ಯಕ್ತಾಹಾರಾ ಸ್ಪರ್ಧಮಾನಾ ದಿವ್ಯಂ ವರ್ಷಶತಂ ದ್ವಿಜಾಃ ।
ತೇಷಾಂ ಬ್ರಹ್ಮಮಯೀ ವಾಣೀ ಸರ್ವೇಷಾಂ ಶ್ರೋತ್ರಮಾಗಮತ್ ॥೪೮॥

---

೪೪-೪೫. ಪೃಥಿವಿ, ಪರ್ವತಗಳು, ಮೋಡಗಳು, ಆಕಾರವುಳ್ಳ ಇನ್ನೂ ಇತರ ವಸ್ತುಗಳು ಇವೆಲ್ಲವೂ ಜಲಸಂಬಂಧಿಯಾದುದರಿಂದ ವರುಣದೇವನ ಅಧೀನವೆಂದು ತಿಳಿಯಬೇಕು. ನೀರು ಅವುಗಳನ್ನು ಪುನಃ ತಡೆಗಟ್ಟುವುದು.

೪೫-೪೬. ಭರದ್ವಾಜನು ಹೇಳಿದನು :— ನೀರು, ತೇಜಸ್ಸು. ವಾಯು, ಭೂಮಿ, ಇವುಗಳು ಹೇಗೆ ಉತ್ಪನ್ನವಾಯಿತೆಂಬ ವಿಷಯದಲ್ಲಿ ನನಗೆ ದೊಡ್ಡ ಸಂಶಯವುಂಟಾಗಿದೆ.

೪೬-೪೯. ಭೃಗುವು ಹೇಳಿದನು :— ಬ್ರಾಹ್ಮಣನೇ ! ಪೂರ್ವಬ್ರಹ್ಮಕಲ್ಪದಲ್ಲಿ ಬ್ರಹ್ಮರ್ಷಿಗಳು ಸೇರಿದಾಗ ಮಹಾತ್ಮರಾದ ಅವರಿಗೆ ಜಗದುತ್ಪತ್ತಿವಿಷಯದಲ್ಲಿ ಸಂದೇಹವುಂಟಾಯಿತು. ಆ ದ್ವಿಜರು ಮೌನದಿಂದ ನಿಶ್ಚಲಮನಸ್ಕರಾಗಿ ಆಹಾರವನ್ನು ತೊರೆದು, ಸ್ಪರ್ಧಾಳುಗಳಾಗಿ ದೇವಮಾನದ ಒಂದು ನೂರು ವರ್ಷಗಳ ಕಾಲ

ದಿವ್ಯಾ ಸರಸ್ವತೀ ತತ್ರ ಸಂಬಭೂವ ನಭಸ್ಥಲಾತ್ ।
ಪುರಸ್ತಮಿತಮಾಕಾಶಮನಂತಮಚಲೋಪಮಂ ॥ ೪೯ ॥

ನಷ್ಟಚಂದ್ರಾರ್ಕಪವನಂ ಪ್ರಸುಪ್ತಮಿವ ಸಂಬಭೌ ।
ತತಃ ಸಲಿಲಮುತ್ಪನ್ನಂ ತಮಸೀವ ತಮಃ ಪರಂ ॥ ೫೦ ॥

ತಸ್ಮಾಚ್ಚ ಸಲಿಲೋತ್ಪೀಡಾದುದತಿಷ್ಠತ ಮಾರುತಃ ।
ಯಥಾ ನಭಸಮುಚ್ಛಿದ್ರಂ ನಿಃಶಬ್ದಮಿವ ಲಕ್ಷ್ಯತೇ ॥ ೫೧ ॥

ತಚ್ಚಾಂಭಸಾ ಪೂರ್ಯಮಾಣಂ ಸಶಬ್ದಂ ಕುರುತೇಽನಲಃ ।
ತಥಾ ಸಲಿಲಸಂರುದ್ಧೇ ನಭಸೋಂತೇ ನಿರಂತರೇ ॥ ೫೨ ॥

ಭಿತ್ವಾರ್ಣವತಲಂ ವಾಯುಃ ಸಮುತ್ಪತತಿ ಘೋಷವಾನ್ ।
ಏಷ ವೈ ಚರತೇ ವಾಯುರರ್ಣವೋತ್ಪೀಡಸಂಭವಃ ॥ ೫೩ ॥

---

ಧ್ಯಾನನಿಷ್ಠರಾದರು. ಆಗ ಅವರೆಲ್ಲರಿಗೂ ಬ್ರಹ್ಮವಿಷಯಕವಾದ ಒಂದು ವಾಣಿಯು ಕಿವಿಗೆ ಬಿದ್ದಿತು. ಆ ದಿವ್ಯವಾಣಿಯು ಆಕಾಶದಿಂದ ಉದ್ಭವಿಸಿತು.

೪೯-೫೦. ಅಂಧಕಾರಮಯವು, ಅಪರಿಮಿತವು, ಪರ್ವತಕ್ಕೆ ಸಮಾನವು, ಚಂದ್ರ ಸೂರ್ಯ ವಾಯುರಹಿತವೂ ಆದ ಆಕಾಶವು ಪೂರ್ವದಲ್ಲಿ ಮಲಗಿದ್ದಂತಿದ್ದಿತು. ತಮಸ್ಸಿನಲ್ಲಿ ಇನ್ನೊಂದು ತಮಸ್ಸು ಸೇರುವಂತೆ ಅದರಿಂದ ಜಲವು ಹುಟ್ಟಿ ಆಕಾಶವನ್ನು ಆವರಿಸಿತು.

೫೧-೫೫. ಆ ನೀರಿನ ಸಂಘರ್ಷಣೆಯಿಂದ ಗಾಳಿಯು ಎದ್ದಿತು. ಗಾಳಿಯು ರಂಧ್ರವಿಲ್ಲದ ನಿಶ್ಶಬ್ದವಸ್ತುವಿನಂತೆ ತೋರುತ್ತಿರುವ ಆಕಾಶವನ್ನು ನೀರಿನಿಂದ ತುಂಬಿಸಿ ಶಬ್ದವುಳ್ಳದನ್ನಾಗಿ ಮಾಡುವಂತೆ ನೀರು ತುಂಬಿರುವ ಅವಕಾಶರಹಿತವಾದ ಆಕಾಶದ ಅಂತಃಪ್ರದೇಶದಲ್ಲಿ ಸಮುದ್ರದ ಅಡಿಯನ್ನು ಭೇದಿಸಿ ವಾಯುವು ಶಬ್ದಮಾಡುತ್ತಾ ಮೇಲಕ್ಕೇಳುತ್ತದೆ. ಸಮುದ್ರಸಂಘಟ್ಟನೆಯಿಂದುಂಟಾದ ವಾಯುವು ಇವುಗಳಲ್ಲಿ ಸಂಚರಿಸುತ್ತದೆ. ಅದು ಅವಕಾಶವಿರುವ ಪ್ರದೇಶಕ್ಕೆ ಬಂದು ಶಾಂತವಾಗದೇ ಬೀಸುತ್ತಿರುತ್ತದೆ. ಆ ವಾಯು

ಆಕಾಶಸ್ಥಾನಮಾಸಾದ್ಯ ಪ್ರಶಾಂತಿಂ ನಾಧಿಗಚ್ಛತಿ ।
ತಸ್ಮಿನ್ವಾಯ್ವಂಬುಸಂಘರ್ಷೇ ದೀಪ್ತತೇಜಾ ಮಹಾಬಲಃ ॥ ೫೪ ॥

ಪ್ರಾದುರಾಸೀದೂರ್ಧ್ವಶಿಖಃ ಕೃತ್ವಾ ನಿಸ್ತಿಮಿರಂ ತಮಃ ।
ಅಗ್ನಿಃ ಪವನಸಂಯುಕ್ತಃ ಖಂ ಸಮಾಕ್ಷಿಪತೇ ಜಲಂ ॥ ೫೫ ॥

ತದಗ್ನಿವಾಯುಸಂಪರ್ಕಾದ್ಘನತ್ವಮುಪಪದ್ಯತೇ ।
ತಸ್ಯಾಕಾಶಂ ನಿಪತಿತಃ ಸ್ನೇಹಾತ್ತಿಷ್ಠತಿ ಯೋಽಪರಃ ॥ ೫೬ ॥

ಸ ಸಂಘಾತತ್ವಮಾಪನ್ನೋ ಭೂಮಿತ್ವಮನುಗಚ್ಛತಿ ।
ರಸಾನಾಂ ಸರ್ವಗಂಧಾನಾಂ ಸ್ನೆಹಾನಾಂ ಪ್ರಾಣಿನಾಂ ತಥಾ ॥ ೫೭ ॥

ಭೂಮಿರ್ಯೋನಿರಿಯಂ ಜ್ಞೇಯಾ ಯಸ್ಯಾಃ ಸರ್ವಂ ಪ್ರಸೂಯತೇ ।

ಭರದ್ವಾಜ ಉವಾಚ

ಯ ಏತೇ ಧಾತವಃ ಪಂಚ ರಕ್ಷ್ಯಾ ಯಾನಸೃಜತ್ಪ್ರಭುಃ ॥ ೫೮ ॥

---

ಜಲಸಂಘಾತದಿಂದ ಪ್ರಕಾಶಮಾನವಾದ ತೇಜಸ್ಸುಳ್ಳ ಮಹಾಬಲಿಷ್ಠವಾದ ಅಗ್ನಿಯು ಕತ್ತಲೆಯನ್ನು ಪರಿಹರಿಸಿ ಉದ್ಭವಿಸುತ್ತದೆ. ಅಗ್ನಿಯು ಗಾಳಿಯೊಡನೆ ಸೇರಿ ನೀರನ್ನು ಆಕಾಶಕ್ಕೆ ಹಾರಿಸುತ್ತದೆ.

೫೬-೫೭. ಅದು ಅಗ್ನಿವಾಯುಗಳ ಸಂಪರ್ಕದಿಂದ ಘನೀಭಾವವನ್ನು ಹೊಂದುತ್ತದೆ. ಆಕಾಶದಲ್ಲಿ ಬಿದ್ದ ಜಲದ ಸಂಬಂಧದಿಂದ ನಿಲ್ಲುವ ಭಾಗವು ಒಟ್ಟುಗೂಡಿ ಪೃಥಿವೀಭಾವವನ್ನು ಹೊಂದುತ್ತದೆ ಎಂದರೆ ಆಕಾಶಾದಿ ಜಲಾಂತಗಳ ಸಂಘಾತವೇ ಪೃಥಿವಿಯೆಂದು ಭಾವ.

೫೭-೫೮. ರಸ, ಸಕಲ ಗಂಧಗಳು ಸ್ನೇಹ, ಪ್ರಾಣಿ ಇವುಗಳೆಲ್ಲಾ ಭೂಮಿಯಿಂದಲೇ ಹುಟ್ಟುತ್ತವೆಯಾದಕಾರಣ ಇವುಗಳೆಲ್ಲಕ್ಕೂ ಭೂಮಿಯೇ ಕಾರಣವೆಂದು ತಿಳಿಯಬೇಕು.

೫೮-೬೦. ಭರದ್ವಾಜನು ಹೇಳಿದನು.–ಲೋಕಗಳನ್ನೆಲ್ಲಾ ಆವರಿಸಿರುವ, ಭಗವಂತನಿಂದ ಸೃಷ್ಟಿಸಲ್ಪಟ್ಟಿರುವ, ಮಹಾಭೂತನಾಮಕಗಳಾದ ಈ ಐದು

ಆವೃತಾ ಯೈರಿಮೇ ಲೋಕಾ ಮಹಾಭೂತಾಭಿಸಂಜ್ಞಿತೈಃ ।
ಯದಾಽಸೃಜತ್ಸಹಸ್ರಾಣಿ ಭೂತಾನಾಂ ಸ ಮಹಾಮತಿಃ ॥ ೫೯ ॥

ಪಶ್ಚಾತ್ತೇಷ್ವೇವ ಭೂತತ್ವಂ ಕಥಂ ಸಮುಪಪದ್ಯತೇ ।

ಭೃಗುರುವಾಚ

ಅಮಿತಾನಿ ಮಹಾಷ್ಟಾನಿ ಯಾಂತಿ ಭೂತಾನಿ ಸಂಭವಂ ॥ ೬೦ ॥

ಅತಸ್ತೇಷಾಂ ಮಹಾಭೂತಶಬ್ದೋಽಯಮುಪಪದ್ಯತೇ ।
ಚೇಷ್ಟಾವಾಯುಃ ಖಮಾಕಾಶಮೂಷ್ಮಾಗ್ನಿಃ ಸಲಿಲಂ ದ್ರವಃ ॥ ೬೧ ॥

ಪೃಥಿವೀ ಚಾತ್ರ ಸಂಘಾತಃ ಶರೀರಂ ಪಾಂಚಭೌತಿಕಂ ।
ಇತ್ಯೇತೈಃ ಪಂಚಭಿರ್ಯುಕ್ತೈರ್ಯುಕ್ತಂ ಸ್ಥಾವರಜಂಗಮಂ ॥ ೬೨ ॥

ಶ್ರೋತ್ರೇ ಘ್ರಾಣೋ ರಸಃ ಸ್ಪರ್ಶೋ ದೃಷ್ಟಿಶ್ಚೇಂದ್ರಿಯಸಂಜ್ಞಿತಾಃ ।

ಭರದ್ವಾಜ ಉವಾಚ

ಪಂಚಭಿರ್ಯದಿ ಭೂತೈಸ್ತು ಯುಕ್ತಾಃ ಸ್ಥಾವರಜಂಗಮಾಃ ॥ ೬೩ ॥

---

ಧಾತುಗಳು ರಕ್ಷಿಸಲ್ಪಡತಕ್ಕುವು. ಮಹಾಜ್ಞಾನಿಯಾದ ಆ ಭಗವಂತನು ಸಾವಿರಾರು ಭೂತಗಳನ್ನು ಸೃಷ್ಟಿಸಿದ ಮೇಲೆ ಅವುಗಳಲ್ಲಿ ಭೂತತ್ವವು (ಮಹಾಭೂತಶಬ್ದವಾಚ್ಯತ್ವವು) ಹೇಗೆ ಸಂಭವಿಸುತ್ತದೆ?

೬೦-೬೧. ಭೃಗುವು ಹೇಳಿದನು.—ಅಪರಿಮಿತಗಳು, ಮಹತ್ತೂ ಆದ ಎಂಟು ಭೂತಗಳು ಮಿಳಿತವಾಗುತ್ತವೆ. ಆದುದರಿಂದ ಅವಕ್ಕೆ 'ಮಹಾಭೂತ' ಎಂಬೀ ಶಬ್ದವು ಬೋಧಕವಾಗುತ್ತದೆ.

೬೧-೬೨. ಚೇಷ್ಟೆಯಿಂದ ಸಹಿತವಾದ ವಾಯು, ಇಂದ್ರಿಯಯುಕ್ತವಾದ ಆಕಾಶ, ಆವಿನಿಮಿತ್ತವಾದ ಅಗ್ನಿ, ದ್ರವವಾದ ನೀರು, ಮತ್ತು ಪೃಥಿವಿಯೂ ಇಲ್ಲಿ ಒಟ್ಟುಗೂಡಿದೆ. ಆದುದರಿಂದ ಈ ಶರೀರವು ಪಾಂಚಭೌತಿಕವೆನಿಸುವುದು.

೬೨-೬೩. ಈ ರೀತಿ ಚರಾಚರಾತ್ಮಕ ಪ್ರಪಂಚವು ಪಂಚಭೂತಗಳಿಂದ ಯುಕ್ತವಾದ ಶರೀರದಿಂದ ಕೂಡಿರುವುದು. ಕಿವಿಗಳು, ಮೂಗು, ನಾಲಿಗೆ, ತ್ವಕ್ಕು, ನೇತ್ರ ಈ ಐದೂ ಇಂದ್ರಿಯಗಳೆನಿಸುವುವು.

ಸ್ಥಾವರಾಣಾಂ ನ ದೃಶ್ಯಂತೇ ಶರೀರೇ ಪಂಚಧಾತವಃ ।
ಅನೂಷ್ಮಣಾಮಚೇಷ್ಟಾನಾಂ ವನಾನಾಂ ಚೈವ ತತ್ತ್ವತಃ ॥ ೬೪ ॥

ವೃಕ್ಷಾಣಾಂ ನೋಪಲಭ್ಯಂತೇ ಶರೀರೇ ಪಂಚಧಾತವಃ ।
ನ ಶೃಣ್ವಂತಿ ನ ಪಶ್ಯಂತಿ ನ ಗಂಧರಸವೇದಿನಃ ॥ ೬೫ ॥

ನ ಚ ಸ್ಪರ್ಶಂ ನ ಜಾನಂತಿ ತೇ ಕಥಂ ಪಂಚಧಾತವಃ ।
ಅದ್ರವತ್ವಾದನಗ್ನಿತ್ವಾದಭೂಮಿತ್ವಾದವಾಯುತಃ ॥ ೬೬ ॥

ಆಕಾಶಸ್ಯಾಪ್ರಮೇಯತ್ವಾದ್ವೃಕ್ಷಾಣಾಂ ನಾಸ್ತಿ ಭೌತಿಕಂ ।

ಭೃಗುರುವಾಚ

ಘನಾನಾಮಪಿ ವೃಕ್ಷಾಣಾಮಾಕಾಶೋಽಸ್ತಿ ನ ಸಂಶಯಃ ॥ ೬೭ ॥

ತೇಷಾಂ ಪುಷ್ಪಫಲವ್ಯಕ್ತಿರ್ನಿತ್ಯಂ ಸಮುಪಪದ್ಯತೇ ।
ಊಷ್ಮತೋ ಮ್ಲಾಯತೇ ಪರ್ಣಂ ತ್ವಕ್ಫಲಂ ಪುಷ್ಪಮೇವ ಚ ॥ ೬೮ ॥

---

೬೩-೬೪. ಭರದ್ವಾಜನು ಹೇಳಿದನು.—ಸ್ಥಿರಚರಪ್ರಾಣಿಗಳು ಪಂಚಭೂತಗಳಿಂದ ಕೂಡಿರುವುದೇ ಆದರೆ ಸ್ಥಾವರವಾದ ವೃಕ್ಷಾದಿಗಳ ಶರೀರದಲ್ಲಿ ಪಂಚಧಾತುಗಳು ಏಕೆ ಗೋಚರವಾಗುವುದಿಲ್ಲ?

೬೪-೬೬. ಆವಿ ಮತ್ತು ಚೇಷ್ಟೆಗಳಿಲ್ಲದ ವನವೃಕ್ಷಗಳ ಶರೀರದಲ್ಲಿ ಪಂಚಧಾತುಗಳು ಉಪಲಬ್ಧವಾಗುವುದಿಲ್ಲ. ಆ ವೃಕ್ಷಾದಿಗಳು ಕೇಳುವುದಿಲ್ಲ, ನೋಡುವುದಿಲ್ಲ. ವಾಸನೆ ಮತ್ತು ರುಚಿ (ರಸ) ಇವುಗಳನ್ನು ಗ್ರಹಿಸುವುದಿಲ್ಲ. ಸ್ಪರ್ಶವನ್ನೂ ತಿಳಿಯುವುದಿಲ್ಲ. ಆದಕಾರಣ ಅಲ್ಲಿ ಪಂಚಧಾತುಗಳು ಇವೆಯೆಂಬುದು ಹೇಗೆ ಸಂಭವಿಸುತ್ತದೆ?

೬೬-೬೭. ಜಲ, ಅಗ್ನಿ, ಭೂಮಿ ಮತ್ತು ವಾಯು ಇವುಗಳಲ್ಲದುದರಿಂದಲೂ, ಆಕಾಶವು ಅಪ್ರಮೇಯವಾದುದರಿಂದಲೂ ವೃಕ್ಷಗಳಿಗೆ ಭೌತಿಕ ಸಂಬಂಧವಿಲ್ಲ.

೬೭-೬೮. ಭೃಗುವು ಹೇಳಿದನು —ಘನೀಭೂತವಾಗಿದ್ದಾಗ್ಯೂ ವೃಕ್ಷಗಳಲ್ಲಿ ಆಕಾಶವಿದೆ, ಸಂದೇಹವಿಲ್ಲ. ಎಲೆ, ತೊಗಟೆ, ಹಣ್ಣು ಮತ್ತು ಹೂವು ಇವುಗಳು ಶಾಖದಿಂದ ಬಾಡುತ್ತವೆ.

ಮ್ಲಾಯತೇ ಶೀರ್ಯತೇ ಚಾಪಿ ಸ್ಪರ್ಶಸ್ತಸ್ಮಾಚ್ಚ ವಿದ್ಯತೇ ।
ವಾಯ್ವಗ್ನ್ಯಶನಿನಿರ್ಘೋಷೈಃ ಫಲಂ ಪುಷ್ಪಂ ವಿಶೀರ್ಯತೇ ॥ ೧೯ ॥

ಶ್ರೋತ್ರೇಣ ಗೃಹ್ಯತೇ ಶಬ್ದಸ್ತಸ್ಮಾಚ್ಛೃಣ್ವಂತಿ ಪಾದಪಾಃ ।
ವಲ್ಲೀವೇಷ್ಟಯತೇ ವೃಕ್ಷಾನ್ಸರ್ವತಶ್ಚೈವ ಗಚ್ಛತಿ ॥ ೨೦ ॥

ನ ಹ್ಯದೃಷ್ಟಶ್ಚ ಮಾರ್ಗೋಽಸ್ತಿ ತಸ್ಮಾತ್ಪಶ್ಯಂತಿ ಪಾದಪಾಃ ।
ಪುಣ್ಯಾಪುಣ್ಯೈಸ್ತಥಾ ಗಂಧೈರ್ಧೂಪೈಶ್ಚ ವಿವಿಧೈರಪಿ । ೨೧ ॥

ಅರೋಗಾಃ ಪುಷ್ಪಿತಾಃ ಸಂತಿ ತಸ್ಮಾಜ್ಜಿಘ್ರಂತಿ ಪಾದಪಾಃ ।
ಸುಖದುಃಖಯೋರ್ಗ್ರಹಣಾಚ್ಛಿನ್ನಸ್ಯ ಚ ವಿರೋಹಣಾತ್ ॥ ೨೨ ॥

ಜೀವಂ ಪಶ್ಯಾಮಿ ವೃಕ್ಷಾಣಾಮಚೈತನ್ಯಂ ನ ವಿದ್ಯತೇ ।
ತೇನ ತಜ್ಜಲಮಾದತ್ತೇ ಜರಯತ್ಯಗ್ನಿಮಾರುತೌ ॥ ೨೩ ॥

---

೧೯. ಎಲೆ ಮುಂತಾದುವು ಬಾಡುತ್ತವೆ ಮತ್ತು ಚೂರಾಗುತ್ತವೆಯಾದುದರಿಂದ ವೃಕ್ಷದಲ್ಲಿ ಸ್ಪರ್ಶವಿದೆ. ವಾಯು, ಅಗ್ನಿ, ಸಿಡಿಲು ಇವುಗಳ ಹೊಡೆತದಿಂದ ಹಣ್ಣು, ಹೂವುಗಳು ಬೀಳುವುವು.

೨೦. ಕಿವಿಯಿಂದ ಶಬ್ದವು ಗ್ರಹಿಸಲ್ಪಡುತ್ತದೆ. ವೃಕ್ಷಗಳು ಶಬ್ದವನ್ನು ಗ್ರಹಿಸುತ್ತವೆಯಾದುದರಿಂದ ಅವಕ್ಕೆ ಶ್ರೋತ್ರವಿದೆ. ಬಳ್ಳಿಯು ಗಿಡವನ್ನು ಸುತ್ತಿಕೊಂಡು ಸುತ್ತಮುತ್ತಲೂ ಹೋಗುತ್ತದೆ.

೨೧. ನೋಡದೆ ಹೋಗಲು ಸಾಧ್ಯವಾಗುವುದಿಲ್ಲವಾದುದರಿಂದ ವೃಕ್ಷಗಳು ನೋಡುತ್ತವೆ. ಸುಗಂಧ ದುರ್ಗಂಧಗಳಿಂದಲೂ, ನಾನಾವಿಧ ಧೂಪಗಳಿಂದಲೂ ವೃಕ್ಷಗಳು ರೋಗವಿಲ್ಲದೆಯೂ, ಪುಷ್ಪಯುಕ್ತವೂ ಆಗುತ್ತವೆಯಾದ ಕಾರಣ ಅವು ವಾಸನೆಯನ್ನು ಗ್ರಹಿಸುವ ಘ್ರಾಣೇಂದ್ರಿಯವನ್ನು ಹೊಂದಿವೆ.

೨೨-೨೩. ಸುಖದುಃಖಗಳನ್ನು ಗ್ರಹಿಸುವುದರಿಂದಲೂ, ಕತ್ತರಿಸಿದ ಗಿಡವು ಪುನಃ ಬೆಳೆಯುವುದರಿಂದಲೂ ವೃಕ್ಷಗಳಿಗೆ ಜೀವವುಂಟೆಂದು ತಿಳಿಯುವೆನು. ಅದು ಜಡವಲ್ಲ. ಜೀವವಿರುವುದರಿಂದ ವೃಕ್ಷವು ನೀರನ್ನು ಕುಡಿಯುತ್ತದೆ. ಅಗ್ನಿ ವಾಯುಗಳಿಂದ ಅದು ಜೀರ್ಣವಾಗುತ್ತದೆ.

ಆಹಾರಪರಿಣಾಮಾಚ್ಚ ಸ್ನೇಹೋ ವೃದ್ಧಿಶ್ಚ ಜಾಯತೇ ।
ಜಂಗಮಾನಾಂ ಚ ಸರ್ವೇಷಾಂ ಶರೀರೇ ಪಂಚಧಾತವಃ ॥ ೭೪ ॥

ಪ್ರತ್ಯೇಕಶಃ ಪ್ರಭಿದ್ಯಂತೇ ಯೈಃ ಶರೀರಂ ವಿಚೇಷ್ಟತೇ ।
ತ್ವಕ್ಚ ಮಾಂಸಂ ತಥಾಸ್ಥೀನಿ ಮಜ್ಜಾ ಸ್ನಾಯುಶ್ಚ ಪಂಚಮಃ ॥ ೭೫ ॥

ಇತ್ಯೇತದಿಹ ಸಂಘಾತಂ ಶರೀರೇ ಪೃಥಿವೀಮಯೇ ।
ತೇಜೋಽಹ್ಯಗ್ನಿಸ್ತಥಾ ಕ್ರೋಧಶ್ಚಕ್ಷೂರೂಷ್ಮಾ ತಥೈವ ಚ ॥ ೭೬ ॥

ಅಗ್ನಿರ್ಜನಯತೇ ಯಚ್ಚ ಪಂಚಾಗ್ನೇಯಾಃ ಶರೀರಿಣಃ ।
ಶ್ರೋತ್ರಂ ಘ್ರಾಣಂ ತಥಾಸ್ಯಂ ಚ ಹೃದಯಂ ಕೋಷ್ಠಮೇವ ಚ ॥ ೭೭ ॥

ಆಕಾಶಾತ್ಪ್ರಾಣಿನಾಮೇತೇ ಶರೀರೇ ಪಂಚಧಾತವಃ ।
ಶ್ಲೇಷ್ಮ ಪಿತ್ತಮಥ ಸ್ವೇದೋ ವಸಾ ಶೋಣಿತಮೇವ ಚ ॥ ೭೮ ॥

---

೭೪-೭೫. ಆಹಾರವು ಜೀರ್ಣಿಸುವುದರಿಂದ ಸ್ನೇಹವು, ಬೆಳವಣಿಗೆಯೂ ಉಂಟಾಗುತ್ತದೆ. ಚೇಷ್ಟೆಯಿಂದ ಸಹಿತವಾದ ಶರೀರವುಳ್ಳ, ಸಕಲ ಚರಪ್ರಾಣಿಗಳ ಶರೀರದಲ್ಲಿಯೂ ಐದು ಧಾತುಗಳೂ ಪ್ರತ್ಯೇಕವಾಗಿ ಎಂದರೆ ಒಂದೊಂದೂ ಐದು ವಿಧವಾಗಿ ವಿಭಾಗಿಸಲ್ಪಡುತ್ತದೆ.

೭೫-೭೬. ಚರ್ಮ, ಮಾಂಸ, ಮೂಳೆ, ಕೊಬ್ಬು ಮತ್ತು ಐದನೆಯದಾದ ನರ ಇವುಗಳೇ ಈ ಪಾರ್ಥಿವ ಶರೀರದಲ್ಲಿನ ಸಂಘಾತವು.

೭೬-೭೭. ಅಗ್ನಿಸಂಬಂಧಿಗಳಾದ ತೇಜಸ್ಸು, ಅಗ್ನಿ, ಕ್ರೋಧ, ಚಕ್ಷುಸ್ಸು ಆವಿ ಈ ಐದು ಶರೀರದಲ್ಲಿನ ತೇಜಸ್ಸಂಘಾತವು.

೭೭-೭೮. ಶ್ರೋತ್ರ, ಘ್ರಾಣ, ಬಾಯಿ, ಹೃದಯ, ಕೋಷ್ಠ, ಈ ಐದು ಪ್ರಾಣಿ ಶರೀರದಲ್ಲಿರುವ ಆಕಾಶದಿಂದ ಸಂಭವಿಸುವ ಪಂಚ ಧಾತುಗಳು.

**ಇತ್ಯಾಪಃ ಪಂಚಧಾ ದೇಹೇ ಭವಂತಿ ಪ್ರಾಣಿನಾಂ ಸದಾ ।**
**ಪ್ರಾಣಾತ್ಪ್ರೀಣಯತೇ ಪ್ರಾಣೀ ವ್ಯಾನಾದ್ವ್ಯಾಯಚ್ಛತೇ ತಥಾ ॥ ೭೯ ॥**

**ಗಚ್ಛತ್ಯಪಾನೋಽಧಶ್ಚೈವ ಸಮಾನೋ ಹೃದ್ಯವಸ್ಥಿತಃ ।**
**ಉದಾನಾದುಚ್ಛ್ವಸಿತೀತಿ ಪಂಚ ಭೇದಾಚ್ಚ ಭಾಷತೇ ॥ ೮೦ ॥**

**ಇತ್ಯೇತೇ ವಾಯವಃ ಪಂಚ ಚೇಷ್ಟಯಂತೀಹ ದೇಹಿನಂ ।**
**ಭೂಮೇರ್ಗಂಧಗುಣಾನ್ವೇತ್ತಿ ರಸಂಚಾದ್ಭ್ಯಃ ಶರೀರವಾನ್ ॥ ೮೧ ॥**

**ತಸ್ಯ ಗಂಧಸ್ಯ ವಕ್ಷ್ಯಾಮಿ ವಿಸ್ತರಾಭಿಹಿತಾನ್ಗುಣಾನ್ ।**
**ಇಷ್ಟಶ್ಚಾನಿಷ್ಟಗಂಧಶ್ಚ ಮಧುರಃ ಕಟುರೇವ ಚ ॥ ೮೨ ॥**

**ನಿರ್ಹಾರೀ ಸಂಹತಃ ಸ್ನಿಗ್ಧೋ ರೂಕ್ಷೋ ವಿಶದ ಏವ ಚ ।**
**ಏವಂ ನವವಿಧೋ ಜ್ಞೇಯಃ ಪಾರ್ಥಿವೋ ಗಂಧವಿಸ್ತರಃ ॥ ೮೩ ॥**

---

೭೮-೭೯. ಶ್ಲೇಷ್ಮ, ಪಿತ್ತ, ಬೆವರು, ಕೀವು ಮತ್ತು ರಕ್ತ ಇವುಗಳು ಪ್ರಾಣಿಗಳ ಶರೀರದಲ್ಲಿ ನೀರಿನಿಂದ ಆಗುವ ಐದು ಪರಿಣಾಮುಗಳು.

೭೯-೮೦. ಪ್ರಾಣಿಯು ಪ್ರಾಣವಾಯುವಿನಿಂದ ಸಂತುಷ್ಟನಾಗುವನು. ವ್ಯಾನವಾಯುವಿನಿಂದ ವ್ಯಾಯಾಮವನ್ನು ಹೊಂದುವನು. ಅಪಾನವಾಯುವು ಅಧೋದ್ವಾರದಲ್ಲಿ ಹೋಗುವುದು. ಹೃದಯದಲ್ಲಿರುವುದು ಸಮಾನವು. ಉದಾನದಿಂದ ಶ್ವಾಸವನ್ನು ಸ್ವೀಕರಿಸುವನು. ಹೀಗೆ ಕಾರ್ಯಭೇದದಿಂದ ವಾಯುವು ಐದು ವಿಧವಾಗಿ ವ್ಯವಹರಿಸಲ್ಪಡುತ್ತದೆ.

೮೧. ಈ ಐದು ವಾಯುಗಳು ಜೀವನನ್ನು ಸುತ್ತಿಕೊಂಡಿರುತ್ತವೆ. ಶರೀರಿಯು ಭೂಮಿಯಿಂದ ಗಂಧವನ್ನೂ ಜಲದಿಂದ ರಸವನ್ನೂ ಗ್ರಹಿಸುತ್ತಾನೆ.

೮೨-೮೩. ವಿಸ್ತಾರವಾಗಿ ಉಕ್ತವಾಗಿರುವ ಆ ಗಂಧದ ವಿಶೇಷ ವಿಭಾಗಗಳನ್ನು ಹೇಳುವೆನು. ಪೃಥಿವಿಯ ಗುಣವಾದ ಗಂಧವು ಇಷ್ಟ, ಅನಿಷ್ಟ, ಮಧುರ, ಕಟು, ನಿರ್ಹಾರೀ, ಸಂಹತ, ಸ್ನಿಗ್ಧ, ರೂಕ್ಷ ಮತ್ತು ವಿಶದ ಎಂಬುದಾಗಿ ಒಂಭತ್ತು ವಿಧವೆಂದು ತಿಳಿಯಬೇಕು.

ಜ್ಯೋತಿಃ ಪಶ್ಯತಿ ಚಕ್ಷುರ್ಭ್ಯಾಂ ಸ್ಪರ್ಶಂ ವೇತ್ತಿ ಚ ವಾಯುನಾ ।
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸಶ್ಚಾಪಿ ಗುಣಾಃ ಸ್ಮೃತಾಃ ॥ ೮೪ ॥

ರಸಜ್ಞಾನಂ ತು ವಕ್ಷ್ಯಾಮಿ ತನ್ಮೇ ನಿಗದತಃ ಶೃಣು ।
ರಸೋ ಬಹುವಿಧಃ ಪ್ರೋಕ್ತ ಋಷಿಭಿಃ ಪ್ರಥಿತಾತ್ಮಭಿಃ ॥ ೮೫ ॥

ಮಧುರೋ ಲವಣಸ್ತಿಕ್ತಃ ಕಷಾಯೋಽಮ್ಲ ಕಟುಸ್ತಥಾ ।
ಏಷ ಷಡ್ವಿಧವಿಸ್ತಾರೋ ರಸೋ ವಾರಿಮಯಃ ಸ್ಮೃತಃ ॥ ೮೬ ॥

ಶಬ್ದಃ ಸ್ಪರ್ಶಶ್ಚ ರೂಪಂ ಚ ತ್ರಿಗುಣಂ ಜ್ಯೋತಿರುಚ್ಯತೇ ।
ಜ್ಯೋತಿಃ ಪಶ್ಯತಿ ರೂಪಾಣಿ ರೂಪಂ ಚ ಬಹುಧಾ ಸ್ಮೃತಂ ॥ ೮೭ ॥

ಹ್ರಸ್ವೋ ದೀರ್ಘಸ್ತಥಾ ಸ್ಥೂಲಶ್ಚತುರಸ್ರೋಽಣುವೃತ್ತವಾನ್ ।
ಶುಕ್ಲಃ ಕೃಷ್ಣಸ್ತಥಾ ರಕ್ತೋ ನೀಲಃ ಪೀತೋಽರುಣಸ್ತಥಾ ॥ ೮೮ ॥

---

೮೪. ತೈಜಸೇಂದ್ರಿಯವಾದ ಕಣ್ಣುಗಳಿಂದ ಪ್ರಕಾಶವನ್ನು ಗ್ರಹಿಸುತ್ತಾನೆ. ವಾಯವೀಯೇಂದ್ರಿಯವಾದ ತ್ವಕ್ಕಿನಿಂದ ಸ್ಪರ್ಶವನ್ನು ತಿಳಿಯುವನು. ಶಬ್ದ, ಸ್ಪರ್ಶ, ರೂಪ ಮತ್ತು ರಸ ಇವುಗಳೂ ಗುಣಗಳು.

೮೫. ರಸಜ್ಞಾನಪ್ರಕಾರವನ್ನು ಹೇಳುತ್ತೇನೆ. ಅದನ್ನು ಕೇಳು. ಪ್ರಸಿದ್ಧರಾದ ಋಷಿಗಳಿಂದ ರಸವು ಬಹುವಿಧವೆಂದು ಹೇಳಲ್ಪಟ್ಟಿದೆ.

೮೬. ಜಲಗುಣವಾದ ರಸವು ಮಧುರ, ಲವಣ, ತಿಕ್ತ, ಕಷಾಯ, ಆಮ್ಲ, ಕಟು (ಸಿಹಿ, ಉಪ್ಪು, ಕಹಿ, ವಗರು, ಹುಳಿ, ಕಾರ) ಎಂಬುದಾಗಿ ಆರು ವಿಧವು.

೮೭. ತೇಜಸ್ಸು ಶಬ್ದ, ಸ್ಪರ್ಶ ಮತ್ತು ರೂಪಗಳೆಂಬ ಮೂರು ಗುಣಗಳುಳ್ಳದು. ತೇಜಸ್ಸು (ಕಣ್ಣು) ರೂಪಗಳನ್ನು ಗ್ರಹಿಸುತ್ತದೆ. ರೂಪವೂ ಬಹುವಿಧವೆಂದು ಉಕ್ತವಾಗಿದೆ.

೮೮-೯೦. ತೇಜೋಗುಣವಾದ ರೂಪವು ಹ್ರಸ್ವ, ದೀರ್ಘ, ಸ್ಥೂಲ, ಚತುರಸ್ರ (ಚದರ) ಅಣು, ವೃತ್ತ (ಗುಂಡಗಿರುವುದು) ಶುಕ್ಲ (ಬಿಳಿ) ಕೃಷ್ಣ (ಕಪ್ಪು) ರಕ್ತ (ಕೆಂಪು) ನೀಲ, ಪೀತ (ಹಳದಿ), ಅರುಣ, ಕಠಿಣ, ಚಿಕ್ಕಣ, ಶ್ಲಕ್ಷ್ಣ

ಕಠಿನಶ್ಚಿಕ್ಕಣಃ ಶ್ಲಕ್ಷ್ಣಃ ಪಿಚ್ಛಲೋ ಮೃದು ದಾರುಣಃ ।
ಏವಂ ಷೋಡಶವಿಸ್ತಾರೋ ಜ್ಯೋತೀರೂಪಗುಣಃ ಸ್ಮೃತಃ ॥ ೮೯ ॥
ತತ್ರೈಕಗುಣಮಾಕಾಶಂ ಶಬ್ದ ಇತ್ಯೇವ ತತ್ಸ್ಮೃತಂ ॥ ೯೦ ॥
ತಸ್ಯ ಶಬ್ದಸ್ಯ ವಕ್ಷ್ಯಾಮಿ ವಿಸ್ತರಂ ವಿವಿಧಾತ್ಮಕಂ ।
ಷಡ್ಜೋ ಋಷಭಗಾಂಧಾರೌ ಮಧ್ಯಮೋ ಧೈವತಸ್ತಥಾ ॥ ೯೧ ॥
ಪಂಚಮಶ್ಚಾಪಿ ವಿಜ್ಞೇಯಸ್ತಥಾ ಚಾಪಿ ನಿಷಾದವಾನ್ ।
ಏಷ ಸಪ್ತವಿಧಃ ಪ್ರೋಕ್ತೋ ಗುಣಆಕಾಶಸಂಭವಃ ॥ ೯೨ ॥
ಐಶ್ವರ್ಯೇಣ ತು ಸರ್ವತ್ರ ಸ್ಥಿತೋಽಪಿ ಪಟಹಾದಿಷು ।
ಮೃದಂಗಭೇರೀಶಂಖಾನಾಂ ಸ್ತನಯಿತ್ನೋ ರಥಸ್ಯ ಚ ॥ ೯೩ ॥
ಏವಂ ಬಹುವಿಧಾಕಾರಃ ಶಬ್ದಆಕಾಶಸಂಭವಃ ।
ವಾಯವ್ಯಸ್ತು ಗುಣಃ ಸ್ಪರ್ಶಃ ಸ್ಪರ್ಶಶ್ಚ ಬಹುಧಾ ಸ್ಮೃತಃ ॥ ೯೪ ॥

---

ಪಿಚ್ಛಲ, ಮೃದು, ದಾರುಣ ಎಂಬುದಾಗಿ ಹದಿನಾರು ವಿಧವೆಂದು ವಿಭಾಗಿಸಲ್ಪಟ್ಟಿದೆ. ಅವುಗಳಲ್ಲಿ ಆಕಾಶವು ಒಂದೇ ಗುಣವುಳ್ಳದು. ಆ ಗುಣವು ಶಬ್ದವೆಂದು ಉಕ್ತವಾಗಿದೆ.

೯೧-೯೨. ಆ ಶಬ್ದದ ನಾನಾವಿಧವಾದ ವಿಭಾಗವನ್ನು ಹೇಳುವೆನು. ಆಕಾಶದಿಂದುತ್ಪನ್ನವಾದ ಶಬ್ದವು ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ಮತ್ತು ನಿಷಾದ ಎಂಬುದಾಗಿ ಏಳು ವಿಧವೆಂದು ಹೇಳಲ್ಪಟ್ಟಿದೆ.

೯೩-೯೪. ಸಾಮರ್ಥ್ಯವಿಶೇಷದಿಂದ ಪಟಹ ಮುಂತಾದ ಸಕಲ ವಾದ್ಯಗಳಲ್ಲಿದ್ದಾಗ್ಯೂ ಆಕಾಶದಲ್ಲಿ ಹುಟ್ಟಿದ ಶಬ್ದವು ತಬಲ, ನಗಾರಿ, ಶಂಖ, ಮೋಘೆ, ರಥ ಇವುಗಳಿಂದ ಸಂಭವಿಸಿ ಬಹು ರೂಪವನ್ನು ಹೊಂದುತ್ತದೆ. ಸ್ಪರ್ಶವು ವಾಯುವಿನಲ್ಲಿರುವ ಗುಣವು. ಅದೂ ಬಹುವಿಧವಾಗಿದೆ.

ಉಷ್ಣಃ ಶೀತಃ ಸುಖಂ ದುಃಖಂ ಸ್ನಿಗ್ಧೋ ವಿಶದ ಏವ ಚ ।
ತಥಾ ಖರೋ ಮೃದುಃ ಶ್ಲಕ್ಷ್ಣೋ ಲಘುರ್ಗುರುತರೋಽಪಿ ಚ ॥ ೯೫ ॥

ಏವಮೇಕಾದಶವಿಧೋ ವಾಯವ್ಯೋ ಗುಣ ಉಚ್ಯತೇ ।
ಶಬ್ದಸ್ಪರ್ಶೌ ತು ವಿಜ್ಞೇಯೌ ದ್ವಿಗುಣೌ ವಾಯುರಿತ್ಯುತ ॥ ೯೬ ॥

ಆಕಾಶಜಂ ಶಬ್ದಮಾಹುರೇಭಿರ್ವಾಯುಗುಣೈಃ ಸಹ ।
ಅವ್ಯಾಹತೈಶ್ಚೇತಯತೇ ನವೇತಿ ವಿಷಮಾ ಗತಿಃ ॥ ೯೭ ॥

ಆಪ್ಯಾಯಂತೇ ಚ ತೇ ನಿತ್ಯಂ ಧಾತವಸ್ತೈಸ್ತು ಧಾತುಭಿಃ ।
ಆಪೋಗ್ನಿರ್ಮಾರುತಶ್ಚೈವ ನಿತ್ಯಂ ಜಾಗ್ರತಿ ದೇಹಿಷು ॥ ೯೮ ॥

ಮೂಲಮೇತೇ ಶರೀರಸ್ಯ ವ್ಯಾಪ್ಯ ಪ್ರಾಣಾನಿಹ ಸ್ಥಿತಾಃ ।
ಪಾರ್ಥಿವಂ ಧಾತುಮಾಸಾದ್ಯ ಯಥಾ ಚೇಷ್ಟಯತೇ ಬಲೀ ॥ ೯೯ ॥

---

೯೫-೯೬. ವಾಯುಗುಣವಾದ ಸ್ಪರ್ಶವು ಉಷ್ಣ, ಶೀತ, ಸುಖ, ದುಃಖ, ಸ್ನಿಗ್ಧ, ವಿಶದ, ಖರ, ಮೃದು, ಶ್ಲಕ್ಷ್ಣ, ಲಘು ಮತ್ತು ಗುರುತರ ಎಂಬುದಾಗಿ ಹನ್ನೊಂದು ವಿಧವು. ಶಬ್ದ ಮತ್ತು ಸ್ಪರ್ಶಗಳೆರಡೂ ವಾಯುಗುಣಗಳೆಂದು ತಿಳಿಯಬೇಕು.

೯೭. ಶಬ್ದವು ಆಕಾಶದಿಂದ ಉತ್ಪನ್ನವೆಂದು ಹೇಳುವರು. ತಡೆಯಿಲ್ಲದ ಈ ವಾಯುಗುಣಗಳಿಂದ ಶಬ್ದವು ಒಂದು ಕಾಲದಲ್ಲಿ ತಿಳಿಯುತ್ತದೆ. ಇನ್ನೊಂದು ಕಾಲದಲ್ಲಿ ತಿಳಿಯುವುದಿಲ್ಲವಾದಕಾರಣ ಅದರ ಗತಿಯು ವಿಷಮವು.

೯೮. ಧಾತುಗಳು ಆ ಧಾತುಗಳಿಂದಲೇ ಯಾವಾಗಲೂ ತೃಪ್ತಿಹೊಂದುತ್ತವೆ. ಜಲ, ಅಗ್ನಿ, ವಾಯು ಇವುಗಳು ಯಾವಾಗಲೂ ಪ್ರಾಣಿಗಳ ಶರೀರಗಳಲ್ಲಿ ಜಾಗರೂಕವಾಗಿರುತ್ತವೆ.

೯೯. ಈ ಶರೀರಕ್ಕೆ ಧಾತುಗಳು ಮೂಲಕಾರಣ. ಅವು ಪ್ರಾಣಗಳಲ್ಲಿ ವ್ಯಾಪಿಸಿರುತ್ತವೆ. ಪಾರ್ಥಿವಧಾತುವಿನಿಂದ ಬಲವನ್ನು ಪಡೆದು ಚೇಷ್ಟೆ ಮಾಡುವುದು.

ಶ್ರಿತೋ ಮೂರ್ಧಾನಮಗ್ನಿಸ್ತು ಶರೀರಂ ಪರಿಪಾಲಯೇತ್ ।
ಪ್ರಾಣೋ ಮೂರ್ಧನಿ ವಾಗ್ನೌ ಚ ವರ್ತಮಾನೋ ವಿಚೇಷ್ಟತೇ ॥ ೧೦೦ ॥

ಸ ಜಂತುಃ ಸರ್ವಭೂತಾತ್ಮಾ ಪುರುಷಃ ಸ ಸನಾತನಃ ।
ಮನೋ ಬುದ್ಧಿರಹಂಕಾರೋ ಭೂತಾನಿ ವಿಷಯಶ್ಚ ಸಃ ॥ ೧೦೧ ॥

ಏವಂ ತ್ವಿಹ ಸ ಸರ್ವತ್ರ ಪ್ರಾಣೈಸ್ತು ಪರಿಪಾಲ್ಯತೇ ।
ಪೃಷ್ಠತಸ್ತು ಸಮಾನೇನ ಸ್ವಾಂ ಸ್ವಾಂ ಗತಿಮುಪಾಶ್ರಿತಃ ॥ ೧೦೨ ॥

ವಸ್ತಿಮೂಲಂ ಗುದಂ ಚೈವ ಪಾವಕಂ ಸಮುಪಾಶ್ರಿತಃ ।
ವಹನ್ಮೂತ್ರಂ ಪುರೀಷಂ ವಾಪ್ಯಪಾನಃ ಪರಿವರ್ತತೇ ॥ ೧೦೩ ॥

ಪ್ರಯತ್ನೇ ಕರ್ಮಣಿ ಯುಮೋ ಯ ಏಕಸ್ತ್ರಿಷು ವರ್ತತೇ ।
ಉದಾನ ಇತಿ ತಂ ಪ್ರಾಹುರಧ್ಯಾತ್ಮಜ್ಞಾನಕೋವಿದಾಃ ॥ ೧೦೪ ॥

---

೧೦೦. ತೇಜಸ್ಸು ಶಿರಸ್ಸನ್ನಾಶ್ರಯಿಸಿ ಶರೀರವನ್ನು ರಕ್ಷಿಸುವುದು. ಪ್ರಾಣವಾಯುವು ಶಿರಸ್ಸು ಅಥವಾ ಅಗ್ನಿಯಲ್ಲಿದ್ದು ತನ್ನ ವ್ಯಾಪಾರವನ್ನು ಮಾಡುತ್ತದೆ.

೧೦೧. ಅವನೇ ಚೇತನನು. ಅವನೇ ಸಮಸ್ತ ಪ್ರಾಣಿಗಳಿಗೂ ಜೀವನ. ಪುರುಷನು ಅನಾಧಿಯು. ಮನಸ್ಸು, ಬುದ್ಧಿ, ಅಹಂಕಾರ, ಭೂತ ಮತ್ತು ವಿಷಯ ಇವೆಲ್ಲವೂ ಅವನೇ ಎಂದರೆ ಅವನ ಅಧೀನವೆಂದು ಭಾವ.

೧೦೨. ಈ ರೀತಿ ಅವನು ಎಲ್ಲಾ ಶರೀರಗಳಲ್ಲಿಯೂ ಪ್ರಾಣಗಳನ್ನು ಕೊಟ್ಟು ಕಾಪಾಡುವನು. ಪೃಷ್ಠಭಾಗದಲ್ಲಿ ಸಮಾನವಾಯುವಿನಿಂದ ತನ್ನ ವ್ಯಾಪಾರವನ್ನು ನಡೆಯಿಸುವನು.

೧೦೩. ಅಪಾನವಾಯುವು ನಾಭಿಯ ಕೆಳಭಾಗ, ಗುದಪ್ರದೇಶ ಮತ್ತು ತೇಜಸ್ಸುಗಳನ್ನಾಶ್ರಯಿಸಿ ಮೂತ್ರ ಪುರೀಷಗಳ ವಿಸರ್ಜನೆಯನ್ನು ಮಾಡಿಸುತ್ತದೆ.

೧೦೪. ಅಧ್ಯಾತ್ಮಜ್ಞಾನಕುಶಲರು ಪ್ರಯತ್ನ, ಕರ್ಮ, ನಿಯಮ ಗಳೆಂಬ ಮೂರರಲ್ಲಿಯೂ ಇರುವ ಒಂದೇ ವಾಯುವನ್ನು ಉದಾನವೆಂದು ಹೇಳುವರು.

ಸಂಧಿಷ್ವಪಿ ಚ ಸರ್ವೇಷು ಸನ್ನಿವಿಷ್ಟಸ್ತಥಾಽನಿಲಃ ।
ಶರೀರೇಷು ಮನುಷ್ಯಾಣಾಂ ವ್ಯಾನ ಇತ್ಯುಪದಿಶ್ಯತೇ ॥ ೧೦೫ ॥

ಬಹುಷ್ವಗ್ನಿಸ್ತು ವಿತತಃ ಸಮಾನೇನ ಸಮೀರಿತಃ ।
ರಸಾನ್ಬಹೂಂಶ್ಚ ದೋಷಾಂಶ್ಚ ವರ್ತಯನ್ನಿತಿ ಚೇಷ್ಟತೇ ॥ ೧೦೬ ॥

ಅಪಾನಪ್ರಾಣಯೋರ್ಮಧ್ಯೇ ಪ್ರಾಣಾಪಾನಸಮಾಹಿತಃ ।
ಸಮನ್ವಿತಸ್ತ್ವಧಿಷ್ಠಾನಂ ಸಮ್ಯಕ್ಪಚತಿ ಪಾವಕಃ ॥ ೧೦೭ ॥

ಆಸ್ಯಂ ಹಿ ಪಾಯುಪರ್ಯಂತಮಂತೇ ಸ್ಯಾದ್ಗುದಸಂಜ್ಞಿತೇ ।
ರೇತಸ್ತಸ್ಮಾತ್ಪ್ರಜಾಯಂತೇ ಸರ್ವಸ್ರೋತಾಂಸಿ ದೇಹಿನಾಂ ॥ ೧೦೮ ॥

ಪ್ರಾಣಾನಾಂ ಸನ್ನಿಪಾತಾಚ್ಚ ಸನ್ನಿಪಾತಃ ಪ್ರಜಾಯತೇ ।
ಊಷ್ಮಾ ಚಾಗ್ನಿರಿತಿ ಜ್ಞೇಯೋ ಯೋಽನ್ನಂ ಪಚತಿ ದೇಹಿನಾಂ ॥ ೧೦೯ ॥

---

೧೦೫. ಮನುಷ್ಯರ ದೇಹಗಳಲ್ಲಿ ಸಕಲಸಂಧಿಪ್ರದೇಶಗಳಲ್ಲಿಯೂ ಇರುವ ವಾಯುವನ್ನು ವ್ಯಾನವೆಂದು ಕರೆಯುತ್ತಾರೆ.

೧೦೬. ಅಗ್ನಿಯು ಬಹುಸ್ಥಳಗಳಲ್ಲಿ ವ್ಯಾಪಿಸಿ, ಸಮಾನವಾಯುವಿನಿಂದ ಪ್ರೇರಿತವಾಗಿ ಬಹುರಸಗಳು ಮತ್ತು ದೋಷಗಳನ್ನು ನಿಯಮಿಸುತ್ತಾ ಅತ್ಯಂತವಾಗಿ ಕೆಲಸಮಾಡುತ್ತದೆ.

೧೦೭. ಅಗ್ನಿಯು ಅಪಾನ ಪ್ರಾಣವಾಯುಗಳ ಮಧ್ಯದಲ್ಲಿ ಅವುಗಳಿಂದ ಪ್ರೇರಿತವಾಗಿ, ಉದರದಲ್ಲಿ ನಿಂತು ತಿಂದ ಆಹಾರವನ್ನು ಚೆನ್ನಾಗಿ ಜೀರ್ಣ ಮಾಡಿಸುತ್ತದೆ.

೧೦೮. ಪಾಯುಪರ್ಯಂತವಾಗಿ ಮುಖವು. ಗುದವೆಂಬ ಕೊನೆಯ ಭಾಗದಲ್ಲಿ ರೇತಸ್ಸುಂಟಾಗುತ್ತದೆ. ಅದರಿಂದ ಆತ್ಮರ ಸಕಲೇಂದ್ರಿಯ ವ್ಯಾಪಾರಗಳೂ ಸಿದ್ಧಿಸುವುವು.

೧೦೯. ಪ್ರಾಣವಾಯುಗಳು ಒಟ್ಟಿಗೆ ಸಂಧಿಸುವುದರಿಂದ ಸನ್ನಿಪಾತವುಂಟಾಗುತ್ತದೆ. ಪ್ರಾಣಗಳ ದೇಹದಲ್ಲಿ ಅನ್ನವನ್ನು ಜೀರ್ಣಮಾಡಿಸುವ ಊಷ್ಮಾ ಎಂಬ ತೇಜಸ್ಸೇ ಅಗ್ನಿಯೆಂದು ತಿಳಿಯಬೇಕು.

**ಅಗ್ನಿವೇಗವಹಃ ಪ್ರಾಣೋ ಗುದಾಂತೇ ಪ್ರತಿಹನ್ಯತೇ ।**
**ಸ ಊರ್ಧ್ವಮಾಗಮ್ಯ ಪುನಃ ಸಮುತ್ಕ್ಷಿಪತಿ ಪಾವಕಂ ॥ ೧೧೦ ॥**

**ಪಕ್ವಾಶಯಸ್ತ್ವಧೋ ನಾಭ್ಯಾ ಊರ್ಧ್ವಮಾಮಾಶಯಃ ಸ್ಮೃತಃ ।**
**ನಾಭಿಮೂಲೇ ಶರೀರಸ್ಯ ಸರ್ವೇ ಪ್ರಾಣಾಶ್ಚ ಸಂಸ್ಥಿತಾಃ ॥ ೧೧೧ ॥**

**ಪ್ರಸ್ಥಿತಾ ಹೃದಯಾತ್ಸರ್ವೇ ತಿರ್ಯಗೂರ್ಧ್ವಮಧಸ್ತಥಾ ।**
**ವಹಂತ್ಯನ್ನರಸಾನ್ನಾಡ್ಯೋ ದಶಪ್ರಾಣಪ್ರಚೋದಿತಾಃ ॥ ೧೧೨ ॥**

**ಯೋಗಿನಾಮೇಷ ಮಾರ್ಗೋऽಪಿ ಯೇನ ಗಚ್ಛಂತಿ ತತ್ಪದಂ ।**
**ಜಿತಕ್ಲಮಾಃ ಸಮಾ ಧೀರಾ ಮೂರ್ಧನ್ಯಾತ್ಮಾನಮಾದಧನ್ ॥ ೧೧೩ ॥**

---

೧೧೦. ಅಗ್ನಿವೇಗವನ್ನು ವಹಿಸಿದ ಪ್ರಾಣವು ಗುದದ ಕೊನೆಯ ಭಾಗದಲ್ಲಿ ತಡೆಯಲ್ಪಡುತ್ತದೆ. ಆ ಪ್ರಾಣವು ಮೇಲಕ್ಕೆ ಬಂದು ಪುನಃ ಅಗ್ನಿಯನ್ನು ಎಬ್ಬಿಸುತ್ತದೆ.

೧೧೧- ಶರೀರದ ನಾಭಿಯ ಕೆಳಭಾಗದಲ್ಲಿ ಜೀರ್ಣಿಸಿದ ಪದಾರ್ಥಗಳ ಕೋಶವು, ಮೇಲ್ಭಾಗದಲ್ಲಿ ಜೀರ್ಣವಾಗದಿರುವ ವಸ್ತುಗಳ ಕೋಶವೂ ಇದೆ. ಶರೀರದ ನಾಭಿಮೂಲದಲ್ಲಿ ಪ್ರಾಣಗಳೆಲ್ಲಾ ಇರುತ್ತವೆ.

೧೧೨. ಹೃದಯಪ್ರದೇಶದಿಂದ ಮೇಲೆ ಕೆಳಗೆ ಉಭಯಪಾರ್ಶ್ವಗಳಲ್ಲಿಯೂ ಹೊರಟಿರುವ ನಾಡಿಗಳೆಲ್ಲವೂ ಹತ್ತು ಪ್ರಾಣಗಳಿಂದ ಪ್ರೇರಿಸಲ್ಪಟ್ಟು ಅನ್ನರಸಗಳನ್ನು ಎಲ್ಲಾ ಭಾಗಗಳಿಗೂ ಒಯ್ಯುವುವು.

೧೧೩. ಶ್ರಮವನ್ನು ಸಹಿಸುವ, ಸುಖದುಃಖಾದಿ ದ್ವಂದ್ವಸಹಿಷ್ಣುಗಳಾದ ಧೀರರಾದ ಯೋಗಿಗಳು ಪ್ರಾಣವನ್ನು ಶಿರಸ್ಸಿಗೆ ತಂದು ಪರಮಪದಕ್ಕೆ ಹೋಗುವ ಮಾರ್ಗವೂ ಇದೇ ಆಗಿದೆ.

**ಏವಂ ಸರ್ವೇಷು ವಿಹಿತಪ್ರಾಣಾಪಾನೇಷು ದೇಹಿನಾಂ ।**
**ತಸ್ಮಾತ್ಸಮಿಧ್ಯತೇ ನಿತ್ಯಮಗ್ನಿಃ ಸ್ಥಾಲ್ಯಾಮಿವಾಹಿತಃ ॥ ೧೧೪ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ದ್ವಿತೀಯಪಾದೇ ಭೃಗುಭರದ್ವಾಜಸಂವಾದೇ ಜಗದುತ್ಪತ್ತಿವರ್ಣನಂ ನಾಮ ದ್ವಿಚತ್ವಾರಿಂಶೋಽಧ್ಯಾಯಃ**

---

೧೧೪. ಈರೀತಿಯಾಗಿ ವಿಹಿತವಾದ ಪ್ರಾಣಾಪಾನಗಳುಳ್ಳ ಆತ್ಮರ ದೇಹಗಳೆಲ್ಲೆಲ್ಲಾ ಅಗ್ನಿಯು, ಕುಂಡದಲ್ಲಿ ಆಧಾನಮಾಡಲ್ಪಟ್ಟ ಅಗ್ನಿಯು ಪ್ರಜ್ವಲಿಸುವಂತೆ ಯಾವಾಗಲೂ ಪ್ರಜ್ವಲಿಸುತ್ತದೆ.

ಇಂತು ಶ್ರೀನಾರದೀಯಪುರಾಣದೊಳು ಪೂರ್ವಭಾಗ ದ್ವಿತೀಯಪಾದದಲ್ಲಿ ಭೃಗು ಭರದ್ವಾಜರ ಸಂವಾದದಲ್ಲಿ ಜಗದುತ್ಪತ್ತಿವರ್ಣನೆಯೆಂಬ ನಲವತ್ತೆರಡನೆಯ ಅಧ್ಯಾಯವು ಮುಗಿದುದು.

## ಕಥಾಸಾರಾಂಶ

ಹಿಂದಿನ ನಲವತ್ತೊಂದು ಅಧ್ಯಾಯಗಳು ನಾರದ ಸನಕರ ಸಂವಾದವು. ಅದಕ್ಕೆ ಪ್ರಥಮಪಾದವೆಂದು ಸಂಕೇತಮಾಡಿದೆ. ಈ ಅಧ್ಯಾಯದಿಂದ ಅರವತ್ತೆರಡನೆಯ ಅಧ್ಯಾಯ ಪೂರ್ತಿಯಾಗಿ ಎಂದರೆ ಇಪ್ಪತ್ತೊಂದು ಅಧ್ಯಾಯಗಳು ನಾರದಸನಂದನರ ಸಂವಾದರೂಪವಾಗಿದೆ. ಈ ಭಾಗಕ್ಕೆ ದ್ವಿತೀಯ ಪಾದವೆಂದು ಹೆಸರು. ಈ ಅಧ್ಯಾಯದಲ್ಲಿ ನಾರದನು ಸೃಷ್ಟಿಪ್ರಕಾರವನ್ನು ಹೇಳಬೇಕೆಂದು ಸನಂದನನನ್ನು ಕೇಳಿದನು. ಅವನು ಅದಕ್ಕೆ ಉತ್ತರವಾಗಿ ಇದೇ ವಿಷಯದಲ್ಲಿ ಭರದ್ವಾಜ ಭೃಗುಮುನಿಗಳಿಗೆ ನಡೆದ ಸಂವಾದರೂಪವಾದ ಇತಿಹಾಸವನ್ನು ಹೇಳಿರುವನು. ಅವ್ಯಕ್ತತತ್ವ ಮೊದಲು ಪಂಚಭೂತ ಪರ್ಯಂತವಾಗಿ ಸೃಷ್ಟಿಪ್ರಕಾರವು ವಿಸ್ತಾರವಾಗಿ ನಿರೂಪಿತವಾಗಿದೆ. ದೇಹವಲ್ಲಿ ಪಂಚಭೂತಗಳ ಸಮಾವೇಶ, ಅವುಗಳ ವ್ಯಾಪಾರ, ಇತ್ಯಾದಿಗಳು ಸಪರಿಕರವಾಗಿ ನಿರೂಪಿಸಲ್ಪಟ್ಟಿವೆ. ಪೃಥಿವ್ಯಾದಿ ಭೂತ ಅದರ ಗುಣ ಇವುಗಳೆಲ್ಲವೂ ಸಂಗ್ರಹಿಸಲ್ಪಟ್ಟಿವೆ.

# ತ್ರಿಚತ್ವಾರಿಂಶೋಽಧ್ಯಾಯಃ

---

## ಭರದ್ವಾಜ ಉವಾಚ

ಯದಿ ಪ್ರಾಣಪತಿರ್ವಾಯುರ್ವಾಯುರೇವ ವಿಚೇಷ್ಟತೇ ।
ಶ್ವಸಿತ್ಯಾಭಾಷತೇ ಚೈವ ತತೋ ಜೀವೋ ನಿರರ್ಥಕಃ ॥ ೧ ॥

ಯ ಊಷ್ಮಭಾವ ಆಗ್ನೇಯೋ ವಹ್ನಿನೈವೋಪಲಭ್ಯತೇ ।
ಅಗ್ನಿರ್ಜರಯತೇ ಚೈತತ್ತದಾ ಜೀವೋ ನಿರರ್ಥಕಃ ॥ ೨ ॥

ಜಂತೋಃ ಪ್ರಮ್ರಿಯಮಾಣಸ್ಯ ಜೀವೋ ನೈವೋಪಲಭ್ಯತೇ ।
ವಾಯುರೇವ ಜಹಾತ್ಯೇನಮೂಷ್ಮಭಾವಶ್ಚ ನಶ್ಯತಿ ॥ ೩ ॥

---

## ನಲವತ್ತಮೂರನೆಯ ಅಧ್ಯಾಯ

೧. ಭರದ್ವಾಜನು ಹೇಳಿದನು:—ವಾಯುವು ಪ್ರಾಣನಾಯಕನು. ವಾಯುವೇ ಚೇಷ್ಟೆಮಾಡುವವನು, ಶ್ವಾಸಬಿಡುವುವನು, ಮಾತನಾಡುವವನು ಎಂದು ಉಕ್ತವಾಯಿತು. ಹಾಗಾದರೆ ಶರೀರದಲ್ಲಿ ಜೀವನು ನಿಷ್ಫಲವಲ್ಲವೇ ?

೨. ಅಗ್ನಿಸಂಬಂಧಿಯಾದ ಊಷ್ಮಭಾವವು ಅಗ್ನಿಯಿಂದಲೇ ಉಪಲಬ್ಧವಾಗುತ್ತದೆ. ಅಗ್ನಿಯೇ ತಿಂದ ಆಹಾರವನ್ನು ಜೀರ್ಣಮಾಡುತ್ತದೆ. ಹೀಗಿರುವುದರಿಂದ ಜೀವನು ನಿಷ್ಫಲ.

೩. ಪ್ರಾಣಿಯು ಸಾಯುತ್ತಿರುವಾಗ ಜೀವನು ಕಾಣುವುದಿಲ್ಲ. ಇವನನ್ನು ಪ್ರಾಣವಾಯುವೇ ಬಿಟ್ಟುಹೋಗುತ್ತದೆ. ಊಷ್ಮಭಾವವು (ಬಿಸಿ) ನಷ್ಟವಾಗುತ್ತದೆ.

ಯದಿ ವಾಯುಮಯೋ ಜೀವಃ ಸಂಶ್ಲೇಷೋ ಯದಿ ವಾಯುನಾ ।
ವಾಯುಮಂಡಲವತ್ಪಶ್ಯೇದ್ಗಚ್ಛೇತ್ಸಹ ಮರುದ್ಗಣೈಃ ॥ ೪ ॥

ಸಂಶ್ಲೇಷೋ ಯದಿ ವಾತೇನ ಯದಿ ತಸ್ಮಾತ್ಪ್ರಣಶ್ಯತಿ ।
ಮಹಾರ್ಣವವಿಮುಕ್ತತ್ವಾದನ್ಯತ್ಸಲಿಲಭಾಜನಂ ॥ ೫ ॥

ಕೂಪೇ ವಾ ಸಲಿಲಂ ದದ್ಯಾತ್ಪ್ರದೀಪಂ ವಾ ಹುತಾಶನೇ ।
ಕ್ಷಿಪ್ರಂ ಪ್ರವಿಶ್ಯ ನಶ್ಯೇತ ಯಥಾ ನಶ್ಯತ್ಯಸೌ ತಥಾ ॥ ೬ ॥

ಪಂಚಧಾರಣಕೇ ತಸ್ಮಿನ್ ಶರೀರೇ ಜೀವಿತಂ ಕೃತಂ ।
ಯೇಷಾಮನ್ಯತಮಾಭಾವಾಚ್ಚತುರ್ಣಾಂ ನಾಸ್ತಿ ಸಂಶಯಃ ॥ ೭ ॥

ನಶ್ಯಂತ್ಯಾಪೋ ಹ್ಯನಾಹಾರಾದ್ವಾಯುರುಚ್ಛ್ವಾಸನಿಗ್ರಹಾತ್ ।
ನಶ್ಯತೇ ಕೋಷ್ಠಭೇದಾರ್ಥಮಗ್ನಿರ್ನಶ್ಯತ್ಯಭೋಜನಾತ್ ॥ ೮ ॥

---

೪. ಜೀವನು ಪ್ರಾಣಮಯ ಮತ್ತು ವಾಯುಸಂಬದ್ಧವೆಂದು ಹೇಳಿದರೆ ಅವನು ವಾಯುಮಂಡಲದಂತೆ ದೃಶ್ಯನಾಗಬೇಕು. ವಾಯುಸಮೂಹಗಳೊಂದಿಗೆ ಹೋಗಬೇಕು.

೫. ವಾಯುವಿನಿಂದಲೇ ಪ್ರಾಣಸಂಬಂಧವು (ಜನನ) ಮತ್ತು ನಾಶ (ಮರಣ) ಉಂಟಾಗುವುದಾದರೆ ಜಲವು ಮಹಾಸಮುದ್ರವನ್ನು ಬಿಟ್ಟು ಬೇರೆ ಪಾತ್ರೆಯನ್ನಾಶ್ರಯಿಸದಂತಾಯಿತು.

೬. ಬಾವಿಯಲ್ಲಿ ಹಾಕಿದ ನೀರು, ಬೆಂಕಿಯಲ್ಲಿಟ್ಟ ದೀಪ ಇವು ಬೇಗ ನಷ್ಟವಾಗುವಂತೆ ಇವನೂ ಸಹ ನಾಶವಾಗುವನು.

೭. ಈ ಶರೀರವು ಪೃಥಿವೀ, ಜಲ, ತೇಜಸ್ಸು, ವಾಯು ಮತ್ತು ಆಕಾಶ ಎಂಬ ಪಂಚಭೂತಗಳಿಂದ ಕೂಡಿರುವಾಗ ಅದು ಜೀವಿತ (ಬದುಕಿರುವುದು) ವೆನಿಸುವುದು. ಅವುಗಳಲ್ಲಿ ಯಾವುದೊಂದು ಹೋದರೂ ಜೀವಿತವಿಲ್ಲ ಎಂದರೆ ಮೃತನಾಗುವನು ಎಂದು ತಾತ್ಪರ್ಯ. ಸಂದೇಹವಿಲ್ಲ.

೮. ಆಹಾರವಿಲ್ಲದಿರುವುದರಿಂದ ಜಲಭಾಗವೂ, ಉಸಿರುಬಿಡದಿರುವುದರಿಂದ ವಾಯುವೂ ಭೋಜನಮಾಡದಿರುವುದರಿಂದ ಜಾಠರಾಗ್ನಿಯೂ ಸಹ ನಾಶವಾಗುತ್ತದೆ.

**ವ್ಯಾಧಿವ್ರಣಪರಿಕ್ಲೇಶೈರ್ನೋದಿನೀ ಚೈವ ಶೀರ್ಯತೇ ।**
**ಪೀಡಿತೇऽನ್ಯತರೇ ಹ್ಯೇಷಾಂ ಸಂಘಾತೋ ಯಾತಿ ಪಂಚತಾಂ ॥ ೯ ॥**

**ತಸ್ಮಿನ್ಪಂಚತ್ವಮಾಪನ್ನೇ ಜೀವಃ ಕಿಮನುಧಾವತಿ ।**
**ಕಿಂ ಖೇದಯತಿ ವಾ ಜೀವಃ ಕಿಂ ಶೃಣೋತಿ ಬ್ರವೀತಿ ಚ ॥ ೧೦ ॥**

**ಏಷಾ ಗೌಃ ಪರಲೋಕಸ್ಥಂ ತಾರಯಿಷ್ಯತಿ ಮಾಮಿತಿ ।**
**ಯೋ ದತ್ವಾ ಮ್ರಿಯತೇ ಜಂತುಃ ಸಾ ಗೌಃ ಕಂ ತಾರಯಿಷ್ಯತಿ ॥ ೧೧ ॥**

**ಗೌಶ್ಚ ಪ್ರತಿಗೃಹೀತಾ ಚ ದಾತಾ ಚೈವ ಸಮಂ ಯದಾ ।**
**ಇಹೈವ ವಿಲಯಂ ಯಾಂತಿ ಕುತಸ್ತೇಷಾಂ ಸಮಾಗಮಃ ॥ ೧೨ ॥**

**ವಿಹಗೈರುಪಭುಕ್ತಸ್ಯ ಶೈಲಾಗ್ರಾತ್ಪತಿತಸ್ಯ ಚ ।**
**ಅಗ್ನಿನಾ ಚೋಪಭುಕ್ತಸ್ಯ ಕುತಃ ಸಂಜೀವನಂ ಪುನಃ ॥ ೧೩ ॥**

---

೯. ರೋಗ ಮತ್ತು ಹುಣ್ಣುಗಳ ದುಃಖದಿಂದ ಪಾರ್ಥಿವಭಾಗವು ನಷ್ಟವಾಗುತ್ತದೆ. ಇವುಗಳಲ್ಲಿ ಯಾವುದೊಂದು ಹೋದಾಗ್ಯೂ ಭೂತಸಂಘಾತರೂಪವಾದ ಶರೀರವು ಮರಣಹೊಂದುತ್ತದೆ.

೧೦. ಆ ಶರೀರವು ಮೃತವಾದಮೇಲೆ ಜೀವನು ಎಲ್ಲಿಗೆ ಹೋಗುವನು? ಯಾವುದನ್ನು ಕುರಿತು ದುಃಖಿಸುವನು? ಏನನ್ನು ಕೇಳುವನು ಮತ್ತು ಹೇಳುವನು?

೧೧. "ಈ ಗೋವು ಪರಲೋಕಕ್ಕೆ ಹೋದ ನನ್ನನ್ನು ಉದ್ಧರಿಸುವುದು" ಎಂಬ ಭಾವನೆಯಿಂದ ಯಾವನು ಗೋದಾನಮಾಡಿ ಸಾಯುವನೋ ಆ ಗೋವು ಯಾರನ್ನು ಉದ್ಧರಿಸುವುದು?

೧೨. ಗೋವು, ಅದನ್ನು ದಾನತೆಗೆದುಕೊಂಡವನು, ಕೊಟ್ಟವನೂ ಸಹ ಸಮಾನವಾಗಿ ಈ ಲೋಕದಲ್ಲಯೇ ನಾಶವಾಗುತ್ತಾರೆ. ಹೀಗಿರುವಾಗ ಆ ಮೂವರಿಗೂ ಸಮಾವೇಶವು ಎಲ್ಲಿ ಹೇಗಾದೀತು?

೧೩. ಪಕ್ಷಿಗಳು ತಿಂದ, ಬೆಟ್ಟಗಳ ಶಿಖರಗಳಿಂದ ಬಿದ್ದ, ಬೆಂಕಿಯಿಂದ ಸುಡಲ್ಪಟ್ಟ ಶರೀರಕ್ಕೆ ಪುನಃ ಬಾಳು ಹೇಗೆ ಸಂಭವಿಸೀತು?

ಛಿನ್ನಸ್ಯ ಯದಿ ವೃಕ್ಷಸ್ಯ ನ ಮೂಲಂ ಪ್ರತಿರೋಹತಿ ।
ಜೀವನ್ಯತ್ರ ಪ್ರವರ್ತೇತ ಮೃತಃ ಕ್ವ ಪುನರೇಷ್ಯತಿ ॥ ೧೪ ॥

ಜೀವಮಾತ್ರಂ ಪುರಾ ಸೃಷ್ಟಂ ಯದೇತತ್ಪರಿವರ್ತತೇ ।
ಮೃತಾಮೃತಾಃ ಪ್ರಣಶ್ಯಂತಿ ಬೀಜಾದ್ಬೀಜಂ ಪ್ರಣಶ್ಯತಿ ॥ ೧೫ ॥

ಇತಿ ಮೇ ಸಂಶಯೋ ಬ್ರಹ್ಮನ್ ಹೃದಯೇ ಪರಿಧಾವತಿ ।
ತಂ ನಿವರ್ತಯ ಸರ್ವಜ್ಞ ಯತಸ್ತ್ವಾಮಾಶ್ರಿತೋ ಹ್ಯಹಂ ॥ ೧೬ ॥

ಸನಂದನ ಉವಾಚ

ಏವಂ ಪೃಷ್ಟಸ್ತದಾನೇನ ಸ ಭೃಗುರ್ಬ್ರಹ್ಮಣಃ ಸುತಃ ।
ಪುನರಾಹ ಮುನಿಶ್ರೇಷ್ಠ ತತ್ಸಂದೇಹನಿವೃತ್ತಯೇ ॥ ೧೭ ॥

---

೧೪. ಕತ್ತರಿಸಲ್ಪಟ್ಟ ಗಿಡದ ಬುಡವು ಪುನಃ ಬೆಳೆಯುವುದಿಲ್ಲ. ಆದುದರಿಂದ ಜೀವನು ಆಗ ಎಲ್ಲಿ ಪ್ರವರ್ತಿಸುವನು? ಸತ್ತವನು ಪುನಃ ಎಲ್ಲಿಂದ ಬರುವನು?

೧೫. ಪೂರ್ವದಲ್ಲಿ ಸೃಷ್ಟರಾಗಿ ಸುತ್ತುತ್ತಿರುವ ಜೀವರೆಲ್ಲರೂ ಬೀಜದಿಂದ ಬೀಜವು ನಷ್ಟವಾಗುವಂತೆ ಮರಣವಾದಾಗ ನಾಶವಾಗುವರು.

೧೬. ಬ್ರಹ್ಮಜ್ಞಾನಿಯೇ! ಈ ಪ್ರಕಾರವಾದ ಸಂಶಯವು ನನ್ನ ಹೃದಯದಲ್ಲಿ ನೆಲಸಿದೆ. ಸರ್ವಜ್ಞನಾದ ನಿನ್ನನ್ನು ನಾನು ಆಶ್ರಯಿಸಿರುವೆನು. ಆದುದರಿಂದ ನೀನೇ ಅದನ್ನು ಪರಿಹರಿಸಬೇಕು ಎಂದು ಭೃಗುವನ್ನು ಪ್ರಾರ್ಥಿಸಿದನು.

೧೭. ಸನಂದನನು ಹೇಳಿದನು :—ಮುನಿವರ್ಯನಾದ ನಾರದನೇ! ಈ ರೀತಿ ಭರದ್ವಾಜನು ಹೇಳಿದುದನ್ನು ಕೇಳಿ ಬ್ರಹ್ಮಪುತ್ರನಾದ ಆ ಭೃಗುವು ಅವನ ಸಂದೇಹವನ್ನು ಪರಿಹರಿಸುವುದಕ್ಕಾಗಿ ಪುನಃ ಹೇಳಿದನು.

## ಭೃಗುರುವಾಚ

ನ ಪ್ರಾಣಾಃ ಸಂತಿ ಜೀವಸ್ಯ ದತ್ತಸ್ಯ ಚ ಮೃತಸ್ಯ ಚ ।
ಯಾತಿ ದೇಹಾಂತರಂ ಪ್ರಾಣೀ ಶರೀರಂ ತು ವಿಶೀರ್ಯತೇ ॥ ೧೮ ॥

ನ ಶರೀರಾಶ್ರಿತೋ ಜೀವಸ್ತಸ್ಮಿನ್ನಷ್ಟೇ ಪ್ರಣಶ್ಯತಿ ।
ಸಮಿಧಾಮಗ್ನಿದಗ್ಧಾನಾಂ ಯಥಾಗ್ನಿರ್ದೃಶ್ಯತೇ ತಥಾ ॥ ೧೯ ॥

## ಭರದ್ವಾಜ ಉವಾಚ

ಅಗ್ನೇರ್ಯಥಾ ತಸ್ಯ ನಾಶಾತ್ತದ್ವಿನಾಶೋ ನ ವಿದ್ಯತೇ ।
ಇಂಧನಸ್ಯೋಪಯೋಗಾಂತೇ ಸ ಚಾಗ್ನಿರ್ನೋಪಲಭ್ಯತೇ ॥ ೨೦ ॥

ನಶ್ಯತೀತ್ಯೇವ ಜಾನಾಮಿ ಶಾಂತಮಗ್ನಿಮನಿಂಧನಂ ।
ಗತಿರ್ಯಸ್ಯ ಪ್ರಮಾಣಂ ವಾ ಸಂಸ್ಥಾನಂ ವಾ ನ ವಿದ್ಯತೇ ॥ ೨೧ ॥

---

೧೮. ಭೃಗುವು ಹೇಳಿದನು :—ದಾನಮಾಡಲ್ಪಟ್ಟ ಗೋವು ಮತ್ತು ಜೀವ ಇವರಿಗೆ ಮರಣವಾದ ಮೇಲೆ ಪ್ರಾಣಗಳು ಇರುವುದಿಲ್ಲ. ಜೀವನು ಬೇರೆ ಶರೀರಕ್ಕೆ ಹೋಗುವನು. ಶರೀರವಾದರೋ ನಾಶವಾಗುವುದು.

೧೯. ಸಮಿತ್ತುಗಳನ್ನು ಬೆಂಕಿಯಿಂದ ಸುಟ್ಟಮೇಲೆ ಕಾಷ್ಠವು ನಷ್ಟವಾದರೂ ಅಗ್ನಿಯು ಕಾಣಿಸುವಂತೆ ಶರೀರವು ನಾಶವಾದರೂ ಅದರಲ್ಲಿರುವ ಜೀವನು ನಾಶಹೊಂದುವುದಿಲ್ಲ.

೨೦. ಭರದ್ವಾಜನು ಹೇಳಿದನು :—ಕಟ್ಟಿಗೆ ಮುಂತಾದುವು ಸುಟ್ಟು ಬೂದಿಯಾದಮೇಲೆ ಅಲ್ಲಿ ಅಗ್ನಿಯು ಉಪಲಬ್ಧವಾಗುವುದಿಲ್ಲ. ಆದಾಗ್ಯೂ ಆ ಬೆಂಕಿಯ ನಾಶದಿಂದ ಅಗ್ನಿಗೆ ನಾಶವಿಲ್ಲ.

೨೧. ಆದರೆ ಯಾವ ವಸ್ತುವಿಗೆ ಜ್ಞಾನ, ಜ್ಞಾನಸಾಧನ, ಆಶ್ರಯ ಇವುಗಳಿರುವುದಿಲ್ಲವೋ ಅಂತಹ ಕಾಷ್ಠಾದಿರಹಿತವಾಗಿ ಶಾಂತವಾದ ಅಗ್ನಿಯನ್ನು ನಷ್ಟವಾಯಿತೆಂದೇ ತಿಳಿಯುವೆನು.

**ಭೃಗುರುವಾಚ**

ಸಮಿಧಾಮುಪಯೋಗಾಂತೇ ಸಚಾಗ್ನಿರ್ನೋಪಲಭ್ಯತೇ ।
ನಶ್ಯತೀತ್ಯೇವ ಜಾನಾಮಿ ಶಾಂತಮಗ್ನಿಮನಿಂಧನಂ ॥ ೨೨ ॥

ಗತಿರ್ಯಸ್ಯ ಪ್ರಮಾಣಂ ವಾ ಸಂಸ್ಥಾನಂ ವಾ ನ ವಿದ್ಯತೇ ।
ಸಮಿಧಾಮುಪಯೋಗಾಂತೇ ಯಥಾಗ್ನಿರ್ನೋಪಲಭ್ಯತೇ ॥ ೨೩ ॥

ಆಕಾಶಾನುಗತತ್ವಾದ್ಧಿ ದುರ್ಗ್ರಾಹ್ಯೋ ಹಿ ನಿರಾಶ್ರಯಃ ।
ತಥಾ ಶರೀರಸಂತ್ಯಾಗೇ ಜೀವೋ ಹ್ಯಾಕಾಶವತ್ಸ್ಥಿತಃ ॥ ೨೪ ॥

ನ ನಶ್ಯತೇ ಸುಸೂಕ್ಷ್ಮತ್ವಾದ್ಯಥಾ ಜ್ಯೋತಿರ್ನ ಸಂಶಯಃ ।
ಪ್ರಾಣಾನ್ಧಾರಯತೇ ಹ್ಯಗ್ನಿಃ ಸಜೀವ ಉಪಧಾರ್ಯತಾಂ ॥ ೨೫ ॥

ವಾಯುಸಂಧಾರಣೋ ಹ್ಯಗ್ನಿರ್ನಶ್ಯತ್ಯುಚ್ಛ್ವಾಸನಿಗ್ರಹಾತ್ ।
ತಸ್ಮಿನ್ನಷ್ಟೇ ಶರೀರಾಗ್ನೌ ತತೋ ದೇಹಮಚೇತನಂ ॥ ೨೬ ॥

---

೨೨-೨೫. ಭೃಗುವು ಹೇಳಿದನು :—ಕಾಷ್ಠಾದಿಗಳು ಸುಟ್ಟು ಭಸ್ಮವಾದ ಮೇಲೆ ಅಲ್ಲಿದ್ದ ಅಗ್ನಿಯು ದೃಶ್ಯವಾಗುವುದಿಲ್ಲ. ಅಷ್ಟುಮಾತ್ರದಿಂದ ಜ್ಞಾನ, ತತ್ಸಾಧನ, ಆಶ್ರಯ ಇವುಗಳಿಲ್ಲದಿರುವ, ಶಾಂತವಾದ ಅಗ್ನಿಯನ್ನು ನಷ್ಟವಾಯಿತೆಂದೇ ತಿಳಿಯುವೆನೆಂದು ಹೇಳಬಾರದು. ಏಕೆಂದರೆ ಆಶ್ರಯವಿಲ್ಲದುದನ್ನು ಗ್ರಹಿಸಲಶಕ್ಯವು. ಆದುದರಿಂದ ಕಟ್ಟಿಗೆಯು ಸುಟ್ಟು ಭಸ್ಮವಾದಮೇಲೆ ಅದರಲ್ಲಿದ್ದ ಅಗ್ನಿಯು ಆಕಾಶದಲ್ಲಿ ಲೀನವಾಗಿ ದೃಗ್ಗೋಚರವಾಗುವುದಿಲ್ಲ. ಅದರಂತೆ ಶರೀರವನ್ನು ಬಿಟ್ಟಮೇಲೆಯೂ ಜೀವನು ಆಕಾಶದಂತೆ ಇದ್ದೇ ಇರುವನು. ಅಗ್ನಿಯು ಹೇಗೆ ನಷ್ಟವಾಗುವುದಿಲ್ಲವೋ ಅದರಂತೆ ಸೂಕ್ಷ್ಮವಾಗಿರುವುದರಿಂದ ಜೀವನೂ ನಷ್ಟವಾಗುವುದಿಲ್ಲ. ಈ ವಿಷಯದಲ್ಲಿ ಸಂದೇಹವಿಲ್ಲ. ಅಗ್ನಿಯು ಪ್ರಾಣಗಳನ್ನು ಧರಿಸುತ್ತದೆ. ಆ ಜ್ಯೋತಿಯೇ ಜೀವವೆಂದು ತಿಳಿ.

೨೬-೨೭. ವಾಯುಧಾರಕವಾದ ಅಗ್ನಿಯು ಉಸಿರುಬಿಡುವುದನ್ನು ನಿಗ್ರಹಿಸಿರುವುದರಿಂದ ನಷ್ಟವಾಗುತ್ತದೆ. ಆ ಶರೀರಾಗ್ನಿಯು ನಷ್ಟವಾಗುವುದರಿಂದ

**ಪತಿತಂ ಯಾತಿ ಭೂಮಿತ್ವಮಯನಂ ತಸ್ಯ ಹಿ ಕ್ಷಿತಿಃ ।**
**ಜಂಗಮಾನಾಂ ಹಿ ಸರ್ವೇಷಾಂ ಸ್ಥಾವರಾಣಾಂ ತಥೈವ ಚ ॥ ೨೭ ॥**

**ಆಕಾಶಂ ಪವನೋಽನ್ವೇತಿ ಜ್ಯೋತಿಸ್ತಮನುಗಚ್ಛತಿ ।**
**ತೇಷಾಂ ತ್ರಯಾಣಾಮೇಕತ್ವಾತ್ತ್ರಯಂ ಭೂಮೌ ಪ್ರತಿಷ್ಠಿತಂ ॥ ೨೮ ॥**

**ಯತ್ರ ಖಂ ತತ್ರ ಪವನಸ್ತತ್ರಾಗ್ನಿರ್ಯತ್ರ ಮಾರುತಃ ।**
**ಅಮೂರ್ತಯಸ್ತೇ ವಿಜ್ಞೇಯಾ ಮೂರ್ತಿಮಂತಃ ಶರೀರಿಣಃ ॥ ೨೯ ॥**

ಭರದ್ವಾಜ ಉವಾಚ

**ಯದ್ಯಗ್ನಿಮಾರುತೌ ಭೂಮಿಃ ಖಮಾಪಶ್ಚ ಶರೀರಿಷು ।**
**ಜೀವಃ ಕಿಂ ಲಕ್ಷಣಸ್ತತ್ರೇತ್ಯೇತದಾಚಕ್ಷ್ವ ಮೇಽನಘ ॥ ೩೦ ॥**

**ಪಂಚಾತ್ಮಕೇ ಪಂಚರತೌ ಪಂಚ ವಿಜ್ಞಾನಸಂಜ್ಞಕೇ ।**
**ಶರೀರೇ ಪ್ರಾಣಿನಾಂ ಜೀವಂ ವೇತ್ತುಮಿಚ್ಛಾಮಿ ಯಾದೃಶಂ ॥ ೩೧ ॥**

---

ಚೇತನವಲ್ಲದ ದೇಹವು ನಷ್ಟವಾಗಿ ಪೃಥಿವೀಭಾವವನ್ನು ಹೊಂದುತ್ತದೆ. ಅದಕ್ಕೆ ಮತ್ತು ಚರ, ಸ್ಥಿರವಾದ ಸಕಲ ವಸ್ತುಗಳಿಗೂ ಸಹ ಪೃಥಿವಿಯೇ ಆಶ್ರಯವು.

೨೮. ವಾಯುವು ಆಕಾಶದಲ್ಲಿ ಲೀನವಾಗುವುದು. ತೇಜಸ್ಸು ವಾಯುವನ್ನುಅನುಸರಿಸುತ್ತದೆ. ಆಕಾಶ, ವಾಯು, ತೇಜಸ್ಸುಗಳು ಒಂದೇ ಆಶ್ರಯದಲ್ಲಿರುವುದರಿಂದ ಆ ಮೂರೂ ಭೂಮಿಯಲ್ಲಿ ಇರುತ್ತವೆ.

೨೯. ಆಕಾಶವಿದ್ದೆಡೆಯಲ್ಲಿ ವಾಯುವೂ, ವಾಯುವಿದ್ದೆಡೆಯಲ್ಲಿ ಅಗ್ನಿಯೂ ಇರುತ್ತವೆ. ಅವು ಶರೀರವಿಲ್ಲದುವು, ಆತ್ಮರು ಶರೀರವುಳ್ಳವರು.

೩೦. ಭರದ್ವಾಜನು ಹೇಳಿದನು :—ಶರೀರಗಳಲ್ಲಿ ತೇಜಸ್ಸು, ಭೂಮಿ, ಆಕಾಶ ಮತ್ತು ಜಲ ಇವುಗಳು ಸೇರಿರುವುದಾದರೆ ಅಲ್ಲಿರುವ ಜೀವನು ಎಂತಹವನು? ಅನಘನೇ! ಅದನ್ನು ನನಗೆ ಹೇಳು.

೩೧. ಪಾಂಚಭೌತಿಕವು, ಗಂಧಾದಿ ವಿಷಯಪಂಚಕದಲ್ಲಿ ಆಸಕ್ತಿಯುಳ್ಳದು, ಪಂಚಜ್ಞಾನೇಂದ್ರಿಯವುಳ್ಳದೂ ಆದ ಪ್ರಾಣಿಶರೀರದಲ್ಲಿರುವ ಜೀವನು ಎಂತಹವನೆಂಬುದನ್ನು ತಿಳಿದುಕೊಳ್ಳಲಿಚ್ಛಿಸುವೆನು.

ಮಾಂಸಶೋಣಿತಸಂಘಾತೇ ಮೇದಃ ಸ್ನಾಯ್ವಸ್ಥಿಸಂಚಯೇ ।
ಭಿದ್ಯಮಾನೇ ಶರೀರೇ ತು ಜೀವೋ ನೈವೋಪಲಭ್ಯತೇ ॥ ೩೨ ॥

ಯದ್ಯಜ್ಜೀವಶರೀರಂ ತು ಪಂಚಭೂತಸಮನ್ವಿತಂ ।
ಶಾರೀರೇ ಮಾನಸೇ ದುಃಖೇ ಕಸ್ತಾಂ ವೇದಯತೇ ರುಜಂ ॥ ೩೩ ॥

ಶೃಣೋತಿ ಕಥಿತಂ ಜೀವಃ ಕರ್ಣಾಭ್ಯಾಂ ನ ಶೃಣೋತಿ ತತ್ ।
ಮಹರ್ಷೇ ಮನಸಿ ವ್ಯಗ್ರೇ ತಸ್ಮಾಜ್ಜೀವೋ ನಿರರ್ಥಕಃ ॥ ೩೪ ॥

ಸರ್ವೇ ಪಶ್ಯಂತಿ ಯದ್ದೃಶ್ಯಂ ಮನೋಯುಕ್ತೇನ ಚಕ್ಷುಷಾ ।
ಮನಸಿ ವ್ಯಾಕುಲೇ ಚಕ್ಷುಃ ಪಶ್ಯನ್ನಪಿ ನ ಪಶ್ಯತಿ ॥ ೩೫ ॥

ನ ಪಶ್ಯತಿ ನ ಚಾಘ್ರಾತಿ ನ ಶೃಣೋತಿ ನ ಭಾಷತೇ ।
ನ ಚ ಸ್ಪರ್ಶಮಸೌ ವೇತ್ತಿ ನಿದ್ರಾವಶಗತಃ ಪುನಃ ॥ ೩೬ ॥

---

೩೨. ಮಾಂಸ, ರಕ್ತ, ಮೇದಸ್ಸು (ಕೊಬ್ಬು), ನರ, ಮೂಳೆ ಇವುಗಳ ಸಂಘಾತರೂಪವಾದ ಶರೀರವು ಭೇದಿಸಲ್ಪಟ್ಟಾಗ್ಯೂ ಜೀವನು ಕಾಣುವುದಿಲ್ಲ.

೩೩. ಪಂಚಭೂತಗಳಿಂದ ಕೂಡಿರುವ ಜೀವಶರೀರದಲ್ಲೆಲ್ಲಾ ಶಾರೀರಕ ಅಥವಾ ಮಾನಸಿಕ ದುಃಖವು ಸಂಭವಿಸಿದಾಗ ಆ ದುಃಖವನ್ನು ಯಾವನು ತಿಳಿಯುವನು ?

೩೪. ಹೇಳಿದ ಶಬ್ದವನ್ನು ಜೀವನು ಕಿವಿಗಳಿಂದ ಕೇಳುವನು. ಮನಸ್ಸು ವ್ಯಾಕುಲವಾಗಿದ್ದರೆ ಅದೇ ಕಿವಿಯಿಂದ ಶಬ್ದವನ್ನು ಕೇಳುವುದಿಲ್ಲ. ಆದುದರಿಂದ ಜೀವನು ನಿಷ್ಫಲನು.

೩೫. ಎಲ್ಲರೂ ಮನಸ್ಸಿನ ಸಹಕಾರವನ್ನು ಹೊಂದಿದ ಕಣ್ಣಿನಿಂದ ದೃಶ್ಯವಸ್ತುವನ್ನು ನೋಡುವರು. ಮನಸ್ಸು ವ್ಯಗ್ರವಾದಾಗ ಎದುರಿಗಿದ್ದಾಗ್ಯೂ ಅದನ್ನು ನೋಡುವುದಿಲ್ಲ.

೩೬. ಜೀವನು ನಿದ್ರೆಮಾಡುತ್ತಿರುವಾಗ ನೋಡುವುದಿಲ್ಲ. ಆಘ್ರಾಣಿಸುವುದಿಲ್ಲ ಕೇಳುವುದಿಲ್ಲ, ಮಾತನಾಡುವುದಿಲ್ಲ, ಸ್ಪರ್ಶವನ್ನೂ ಸಹ ತಿಳಿಯುವುದಿಲ್ಲ ಎಂದರೆ ನಿದ್ರೆಮಾಡುವ ಕಾಲದಲ್ಲಿ ಚಕ್ಷುರಾದಿ ಬಾಹ್ಯೇಂದ್ರಿಯಗಳು ವ್ಯಾಪಾರಮಾಡುವುದಿಲ್ಲವೆಂದು ತಾತ್ಪರ್ಯ.

ಹೃಷ್ಯತಿ ಕ್ರುಧ್ಯತೇ ಕೋಽತ್ರ ಶೋಚತ್ಯುದ್ವಿಜತೇ ಚ ಕಃ ।
ಇಚ್ಛತಿ ಧ್ಯಾಯತಿ ದ್ವೇಷ್ಟಿ ವಾಕ್ಯಂ ವಾಚಯತೇ ಚ ಕಃ ॥ ೩೭ ॥

ಭೃಗುರುವಾಚ

ಯಃ ಪಂಚಸಾಧಾರಣಮತ್ರ ಕಿಂಚಿತ್
ಶರೀರಮೇಕೋ ವಹತೇಽಂತರಾತ್ಮಾ ।
ಸ ವೇತ್ತಿ ಗಂಧಾಂಶ್ಚ ರಸಾನ್ ಶ್ರುತೀಶ್ಚ
ಸ್ಪರ್ಶಂ ಚ ರೂಪಂ ಚ ಗುಣಾಂಶ್ಚ ಯೇಽನ್ಯೇ ॥ ೩೮ ॥

ಪಂಚಾತ್ಮಕೇ ಪಂಚಗುಣಪ್ರದರ್ಶೀ
ಸ ಸರ್ವಗಾತ್ರಾನುಗತೋಽಂತರಾತ್ಮಾ ।
ಸ ವೇತ್ತಿ ದುಃಖಾನಿ ಸುಖಾನಿ ಚಾತ್ರ
ತದ್ವಿಪ್ರಯೋಗಾತ್ತು ನ ವೇತ್ತಿ ದೇಹೀ ॥ ೩೯ ॥

---

೩೭. ಈ ಶರೀರದಲ್ಲಿ ಸಂತೋಷಿಸುವವನು ಯಾರು? ಕ್ರೋಧಪಡುವವನಾರು? ದುಃಖಪಡುವವನಾರು? ಉದ್ವೇಗಪಡುವವನಾರು? ಇಚ್ಛಿಸುವವನು, ಧ್ಯಾನಮಾಡುವವನು, ದ್ವೇಷಿಸುವವನು ಮತ್ತು ಮಾತನಾಡುವವನೂ ಯಾರು?

೩೮. ಭೃಗುಮುನಿಯು ಹೇಳಿದನು:—ಪಾಂಚಭೌತಿಕವಾದ ಈ ಶರೀರವನ್ನು ಅದರೊಳಗಿರುವ ಒಬ್ಬ ಆತ್ಮನು ಧರಿಸಿರುವನು. ಅವನೇ ಗಂಧ, ರಸ, ಶಬ್ದ, ಸ್ಪರ್ಶ, ರೂಪ ಮತ್ತು ಇತರ ಗುಣಗಳು ಅವುಗಳೆಲ್ಲವನ್ನೂ ಆಯಾಯ ಇಂದ್ರಿಯಗಳ ಮೂಲಕವಾಗಿ ಗ್ರಹಿಸುತ್ತಾನೆ.

೩೯. ಶರೀರದಲ್ಲೆಲ್ಲಾ ಅನುಗತವಾಗಿರುವ ಅಂತರಾತ್ಮನು ಪಾಂಚಭೌತಿಕವಾದ ಶರೀರದಲ್ಲಿ ಗಂಧಾದಿ ಐದು ಗುಣಗಳನ್ನೂ ಪ್ರದರ್ಶಿಸುವನು. ಅವನೇ ಶರೀರದಲ್ಲಿ ಸುಖದುಃಖಗಳನ್ನು ತಿಳಿಯುವನು. ದೇಹಿಯು ಅದರ ವಿಯೋಗವಾದಮೇಲೆ ತಿಳಿಯುವುದಿಲ್ಲ.

ಯದಾ ನ ರೂಪಂ ನ ಸ್ಪರ್ಶೋ ನೋಷ್ಮಭಾವಶ್ಚ ಪಾವಕೇ ।
ತದಾ ಶಾಂತೇ ಶರೀರಾಗ್ನೌ ದೇಹತ್ಯಾಗೇನ ನಶ್ಯತಿ ॥ ೪೦ ॥

ಆಪೋಮಯಮಿದಂ ಸರ್ವಮಾಪೋ ಮೂರ್ತಿಃ ಶರೀರಿಣಾಂ ।
ತತ್ರಾತ್ಮಾ ಮಾನಸೋ ಬ್ರಹ್ಮಾ ಸರ್ವಭೂತೇಷು ಲೋಕಕೃತ್ ॥ ೪೧ ॥

ಆತ್ಮಾನಂ ತಂ ವಿಜಾನೀಹಿ ಸರ್ವಲೋಕಹಿತಾತ್ಮಕಂ ।
ತಸ್ಮಿನ್ಯಃ ಸಂಶ್ರಿತೋ ದೇಹೇ ಹ್ಯಬ್ಬಿಂದುರಿವ ಪುಷ್ಕರೇ ॥ ೪೨ ॥

ಕ್ಷೇತ್ರಜ್ಞಂ ತಂ ವಿಜಾನೀಹಿ ನಿತ್ಯಂ ಲೋಕಹಿತಾತ್ಮಕಂ ।
ತಮೋ ರಜಶ್ಚ ಸತ್ವಂ ಚ ವಿದ್ಧಿ ಜೀವಗುಣಾನಿಮಾನ್ ॥ ೪೩ ॥

ಅಚೇತನಂ ಜೀವಗುಣಂ ವದಂತಿ
ಸ ಚೇಷ್ಟತೇ ಚೇಷ್ಟಯತೇ ಚ ಸರ್ವಂ ।
ಅತಃ ಪರಂ ಕ್ಷೇತ್ರವಿದೋ ವದಂತಿ
ಪ್ರಾವರ್ತಯದ್ಯೋ ಭುವನಾನಿ ಸಪ್ತ ॥ ೪೪ ॥

---

೪೦. ರೂಪ, ಸ್ಪರ್ಶ ಅಗ್ನಿಯ ಉಷ್ಣತ್ವ ಇವುಗಳಿಲ್ಲದಿರುವಾಗ ಶರೀರಾಗ್ನಿಯು ಶಾಂತವಾಗಲು ದೇಹತ್ಯಾಗಮಾಡುವುದರಿಂದ ಜೀವನು ನಾಶವಾಗುವನೆಂದು ತಿಳಿಯುವುದು.

೪೧. ಈ ಸಕಲವೂ ಜಲಮಯವು. ಜೀವಾತ್ಮರ ಶರೀರವೂ ಜಲವು. ಜಗತ್ಕರ್ತನಾದ ಮಾನಸನಾಮಕನಾದ ಬ್ರಹ್ಮನೇ ಸಕಲ ಪ್ರಾಣಿಗಳಲ್ಲಿಯೂ ಇರುವನು.

೪೨. ಪದ್ಮದಲ್ಲಿ ಜಲಬಿಂದುಗಳು ಆಶ್ರಯಿಸಿರುವಂತೆ ಆ ದೇಹದಲ್ಲಿ ಆಶ್ರಯಿಸಿರುವ, ಲೋಕಕ್ಕೆಲ್ಲಾ ಹಿತಕಾರಿಯಾದ ಆತನನ್ನು ಅಂತರಾತ್ಮನೆಂದು ತಿಳಿ.

೪೩. ಸರ್ವದಾ ಲೋಕಹಿತಕಾರಿಯಾದ ಅವನನ್ನು ಕ್ಷೇತ್ರಜ್ಞನೆಂದು ತಿಳಿ. ತಮಸ್ಸು, ರಜಸ್ಸು, ಸತ್ವ ಇವುಗಳನ್ನು ಜೀವಗುಣಗಳೆಂದು ತಿಳಿ.

೪೪. ಜೀವಗುಣವು ಅಚೇತನವೆಂದು ಹೇಳುತ್ತಾರೆ. ಅಂತರಾತ್ಮನೇ ಚೇಷ್ಟೆಮಾಡುತ್ತಾನೆ. ಸಕಲವನ್ನೂ ಚೇಷ್ಟೆಮಾಡುವಂತೆಯೂ ನಿಯಮಿಸುವನು.

ನ ಜೀವನಾಶೋಽಸ್ತಿ ಹಿ ದೇಹಭೇಧೇ
ಮಿಥ್ಯೈತದಾಹುರ್ಮ್ರನ ಇತ್ಯಬುದ್ಧಾಃ ।
ಜೀವಸ್ತು ದೇಹಾಂತರಿತಃ ಪ್ರಯಾತಿ
ದಶಾರ್ಧತಸ್ತಸ್ಯ ಶರೀರಭೇಧಃ ॥ ೪೫ ॥

ಏವಂ ಭೂತೇಷು ಸರ್ವೇಷು ಗೂಢಶ್ಚರತಿ ಸರ್ವದಾ ।
ದೃಶ್ಯತೇ ತ್ವಗ್ರಯಾ ಬುದ್ಧ್ಯಾ ಸೂಕ್ಷ್ಮಯಾ ತತ್ವದರ್ಶಿಭಿಃ ॥ ೪೬ ॥

ತಂ ಪೂರ್ವಾಪರರಾತ್ರೇಷು ಯುಂಜಾನಃ ಸತತಂ ಬುಧಃ ।
ಲಬ್ಧಾಹಾರೋ ವಿಶುದ್ಧಾತ್ಮಾ ಪಶ್ಯತ್ಯಾತ್ಮಾನಮಾತ್ಮನಿ ॥ ೪೭ ॥

ಚಿತ್ತಸ್ಯ ಹಿ ಪ್ರಸಾದೇನ ಹಿತ್ವಾ ಕರ್ಮ ಶುಭಾಶುಭಂ ।
ಪ್ರಸನ್ನಾತ್ಮಾತ್ಮನಿ ಸ್ಥಿತ್ವಾ ಸುಖಮಾನಂತ್ಯಮಶ್ನುತೇ ॥ ೪೮ ॥

---

ಕ್ಷೇತ್ರಜ್ಞಾನಿಗಳು ಇದಕ್ಕಿಂತಲೂ ಅಧಿಕವಾಗಿ ಅವನೇ ಏಳು ಲೋಕಗಳಿಗೂ ಪ್ರವರ್ತಕನೆಂದು ಹೇಳುವರು.

೪೫. ದೇಹವು ಬದಲಾಯಿಸಿದಾಗ್ಯೂ ಜೀವನಾಶವಾಗುವುದಿಲ್ಲ. ಅಜ್ಞಾನಿಗಳು ಮನಸ್ಸೇ ಜೀವನು, ಅವನು ದೇಹದಲ್ಲಿದ್ದು ಅದರ ಸಂಗಡ ಹೋಗುತ್ತಾನೆ. ಅವನಿಗೆ ಪಂಚಭೂತಗಳಿಂದ ಶರೀರಭೇದವಾಗುತ್ತದೆ ಎಂಬುದಾಗಿ ಹೇಳುತ್ತಾರೆ. ಅದು ಸುಳ್ಳು.

೪೬. ಈ ರೀತಿಯಾಗಿ ಅಂತರಾತ್ಮನು ಯಾವಾಗಲೂ ಸಕಲ ಪ್ರಾಣಿಗಳಲ್ಲಿಯೂ ಗೋಪ್ಯವಾಗಿ ಸಂಚರಿಸುತ್ತಿರುವನು. ಅವನು ತತ್ವಜ್ಞಾನಿಗಳಿಗೆ ಶ್ರೇಷ್ಠವಾದ ಸೂಕ್ಷ್ಮಬುದ್ಧಿಯಿಂದ ದೃಶ್ಯನಾಗುವನು.

೪೭. ತೃಪ್ತನು, ಪರಿಶುದ್ಧಚಿತ್ತನೂ ಆದ ಜ್ಞಾನಿಯು ಪೂರ್ವಾಪರ ರಾತ್ರಿಗಳಲ್ಲಿಯೂ ಅಂತರಾತ್ಮನನ್ನು ಧ್ಯಾನಿಸುತ್ತಾ, ತನ್ನ ಹೃದಯದಲ್ಲಿಯೇ ಆತ್ಮನನ್ನು ಸಾಕ್ಷಾತ್ಕರಿಸುವನು.

೪೮. ಶುಭಾಶುಭಕರ್ಮಗಳನ್ನು ಬಿಟ್ಟು ಮನಃಪ್ರಸನ್ನತೆಯಿಂದ ಪ್ರಸನ್ನನಾದ ಆತ್ಮನು ಆತ್ಮನಲ್ಲಿಯೇ ಇದ್ದು ಅನಂತಸುಖವನ್ನೇ ಪಡೆಯುತ್ತಾನೆ.

ಮಾನಸೋಗ್ನಿಃ ಶರೀರೇಷು ಜೀವ ಇತ್ಯಭಿಧೀಯತೇ ।
ಸೃಷ್ಟಿಃ ಪ್ರಜಾಪತೇರೇಷಾ ಭೂತಾಧ್ಯಾತ್ಮವಿನಿಶ್ಚಯೇ ॥ ೪೯ ॥

ಅಸೃಜದ್ಬ್ರಾಹ್ಮಣಾನೇವ ಪೂರ್ವಂ ಬ್ರಹ್ಮಾ ಪ್ರಜಾಪತಿಃ ।
ಆತ್ಮತೇಜೋಭಿನಿರ್ವೃತ್ತಾನ್ಭಾಸ್ಕರಾಗ್ನಿಸಮಪ್ರಭಾನ್ ॥ ೫೦ ॥

ತಪಃ ಸತ್ಯಂ ಚ ಧರ್ಮಂ ಚ ತಥಾ ಬ್ರಹ್ಮ ಚ ಶಾಶ್ವತಂ ।
ಆಚಾರಂ ಚೈವ ಶೌಚಂ ಚ ಸ್ವರ್ಗಾಯ ವಿದಧೇ ಪ್ರಭುಃ ॥ ೫೧ ॥

ದೇವದಾನವಗಂಧರ್ವಾ ದೈತ್ಯಾಸುರಮಹೋರಗಾಃ ।
ಯಕ್ಷರಾಕ್ಷಸನಾಗಾಶ್ಚ ಪಿಶಾಚಾಮನುಜಾಸ್ತಥಾ ॥ ೫೨ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಣಾಮಸಿತಸ್ತಥಾ ।

ಭರಧ್ವಾಜ ಉವಾಚ

ಚಾತುರ್ವರ್ಣ್ಯಸ್ಯ ವರ್ಣೇನ ಯದಿ ವರ್ಣೋ ವಿಭಿದ್ಯತೇ ॥ ೫೩ ॥

---

೪೯. ಶರೀರಗಳಲ್ಲಿರುವ ಮಾನಸಿಕ ಜ್ಯೋತಿಸ್ಸೇ ಜೀವವೆನಿಸುವುದು. ಈ ರೀತಿ ಭೂತ ಮತ್ತು ಅಧ್ಯಾತ್ಮಗಳನ್ನು ವಿವೇಚನೆಮಾಡಿರುವುದೇ ಬ್ರಹ್ಮನ ಸೃಷ್ಟಿಯು-

೫೦. ಪ್ರಜಾಪತಿಯಾದ ಬ್ರಹ್ಮನು ಆತ್ಮತೇಜಸ್ಸುಗಳಿಂದ ಸುಖಪಡುವ ಸೂರ್ಯ ಮತ್ತು ಅಗ್ನಿ ಇವರುಗಳಿಗೆ ಸಮಾನವಾದ ತೇಜಸ್ಸುಳ್ಳ ಬ್ರಾಹ್ಮಣರನ್ನೇ ಪೂರ್ವದಲ್ಲಿ ಸೃಷ್ಟಿಸಿದನು.

೫೧. ಆ ಬ್ರಾಹ್ಮಣರಿಗೆ ತಪಸ್ಸು, ಸತ್ಯವಚನ, ಧರ್ಮ, ನಿತ್ಯವಾದ ವೇದಾಧ್ಯಯನ, ಆಚಾರ ಮತ್ತು ಶೌಚ ಇವುಗಳು ಸ್ವರ್ಗಸಾಧನವೆಂದು ಸ್ವಾಮಿಯು ವಿಧಿಸಿದನು.

೫೨-೫೩. ಹಾಗೆಯೇ ದೇವತೆ, ದಾನವ, ಗಂಧರ್ವ, ದೈತ್ಯ, ಅಸುರ, ಮಹಾಸರ್ಪ, ಯಕ್ಷ, ರಾಕ್ಷಸ, ನಾಗ, ಪಿಶಾಚ ಮನುಜರು, ಅವರಲ್ಲಿಯೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣವಿಭಾಗ, ಶೂದ್ರರಿಗೆ ಕೃಷ್ಣ ವರ್ಣ ಇವುಗಳಲ್ಲೆಲ್ಲವೂ ಏರ್ಪಟ್ಟವು.

ಸ್ವೇದಮೂತ್ರಪುರೀಷಾಣಿ ಶ್ಲೇಷ್ಮ ಪಿತ್ಥಂ ಸಶೋಣಿತಂ ।
ತ್ವಂತಃ ಕ್ಷರತಿ ಸರ್ವೇಷಾಂ ಕಸ್ಮಾದ್ವರ್ಣೋ ವಿಭಜ್ಯತೇ ॥ ೫೪ ॥

ಜಂಗಮಾನಾಮಸಂಖ್ಯೇಯಾಃ ಸ್ಥಾವರಾಣಾಂ ಚ ಜಾತಯಃ ।
ತೇಷಾಂ ವಿವಿಧವರ್ಣಾನಾಂ ಕುತೋ ವರ್ಣವಿನಿಶ್ಚಯಃ ॥ ೫೫ ॥

ಭೃಗುರುವಾಚ

ನ ವಿಶೇಷೋಽಸ್ತಿ ವರ್ಣಾನಾಂ ಸರ್ವಂ ಬ್ರಹ್ಮಮಯಂ ಜಗತ್ ।
ಬ್ರಹ್ಮಣಾ ಪೂರ್ವಸೃಷ್ಟಂ ಹಿ ಕರ್ಮಣಾ ವರ್ಣತಾಂ ಗತಂ ॥ ೫೬ ॥

ಕಾಮಭೋಗಾಃ ಪ್ರಿಯಾಸ್ತೀಕ್ಷ್ಣಾಃ ಕ್ರೋಧಿತಾಃ ಪ್ರಿಯಸಾಹಸಾಃ ।
ತ್ಯಕ್ತಸ್ವಕರ್ಮರಕ್ತಾಂಗಾಸ್ತೇ ದ್ವಿಜಾಃ ಕ್ಷತ್ರತಾಂ ಗತಾಃ ॥ ೫೭ ॥

---

೫೩-೫೪. ಭರದ್ವಾಜನು ಹೇಳಿದನು :—ಬೆವರು, ಮೂತ್ರ, ಮಲ, ಶ್ಲೇಷ್ಮ, ಪಿತ್ಥ ಮತ್ತು ರಕ್ತ ಇವುಗಳು ಸಕಲವರ್ಣದವರ ಶರೀರದಲ್ಲಿಯೂ ಸಮಾನವಾಗಿ ಚಲಿಸುತ್ತಿರುವಾಗ ಚತುರ್ವರ್ಣದವರಿಗೆ ಬಣ್ಣದಿಂದ ಜಾತಿಯು ಭೇದಿಸಲ್ಪಡಲು ಕಾರಣವೇನು ?

೫೫, ಚರಪ್ರಾಣಿಗಳು ಮತ್ತು ಸ್ಥಿರವೃಕ್ಷಗಳಲ್ಲಿ ಅಸಂಖ್ಯಾತವಾದ ಜಾತಿಗಳಿವೆ. ನಾನಾವಿಧ ವರ್ಣೋಪೇತಗಳಾದ ಅವುಗಳಲ್ಲಿ ಜಾತಿವಿವೇಕವನ್ನು ತಿಳಿಯುವ ಬಗೆ ಹೇಗೆ ?

೫೬. ಭೃಗುವು ಮಾತನಾಡಿದನು :—ಈ ಸಕಲ ಜಗತ್ತಿನಲ್ಲಿಯೂ ಬ್ರಹ್ಮನು ಅಂತರಾತ್ಮನಾಗಿರುವುದರಿಂದ ಜಗತ್ತೆಲ್ಲವೂ ಬ್ರಹ್ಮಮಯವೆನಿಸಿದೆ. ಹೀಗೆ ಬ್ರಹ್ಮಮಯವೆಂಬಲ್ಲಿ ವರ್ಣವ್ಯತ್ಯಾಸವಿಲ್ಲ. ಬ್ರಹ್ಮನು ಪೂರ್ವದಲ್ಲಿ ಕರ್ಮಾನುಸಾರವಾಗಿ ವರ್ಣವನ್ನು ಸೃಷ್ಟಿಸಿದನು

೫೭. ಇಷ್ಟವಾದುದನ್ನು ಭೋಗಿಸುವವರು, ಪ್ರಿಯರು, ಕ್ರೂರರು, ಕೋಪಿಷ್ಠರು, ಸಾಹಸಪ್ರಿಯರು, ಸ್ವಕರ್ಮತ್ಯಾಗದಿಂದ ರಕ್ತಾಂಗರೂ ಆದ ದ್ವಿಜರು ಕ್ಷತ್ರಿಯರಾಗುವರು.

ಗೋಭ್ಯೋ ವೃತ್ತಿಂ ಸಮಾಸ್ಥಾಯ ಪೀತಾಃ ಕೃಷ್ಯುಪಜೀವಿನಃ ।
ಸ್ವಧರ್ಮಾನ್ನಾನುತಿಷ್ಠಂತಿ ತೇ ದ್ವಿಜಾ ವೈಶ್ಯತಾಂ ಗತಾಃ ॥ ೫೮ ॥

ಹಿಂಸ್ರಾನೃತಪರಾ ಲುಬ್ಧಾಃ ಸರ್ವಕರ್ಮೋಪಜೀವಿನಃ ।
ಕೃಷ್ಣಾಃ ಶೌಚಪರಿಭ್ರಷ್ಟಾಸ್ತೇ ದ್ವಿಜಾಃ ಶೂದ್ರತಾಂ ಗತಾಃ ॥ ೫೯ ॥

ಇತ್ಯೇತೈಃ ಕರ್ಮಭಿರ್ವ್ಯಸ್ತಾ ದ್ವಿಜಾ ವರ್ಣಾಂತರಂ ಗತಾಃ ।
ಬ್ರಾಹ್ಮಣಾ ಧರ್ಮತಂತ್ರಸ್ಥಾಸ್ತಪಸ್ತೇಷಾಂ ನ ನಶ್ಯತಿ ॥ ೬೦ ॥

ಬ್ರಹ್ಮ ಧಾರಯತಾಂ ನಿತ್ಯಂ ವ್ರತಾನಿ ನಿಯಮಾಂಸ್ತಥಾ ।
ಬ್ರಹ್ಮಣೈವ ಪುರಾಸೃಷ್ಟಂ ಯೇನ ಜಾನಂತಿ ತದ್ವಿದಃ ॥ ೬೧ ॥

ತೇಷಾಂ ಬಹುವಿಧಾಸ್ತ್ವನ್ಯಾಸ್ತತ್ರ ತತ್ರ ದ್ವಿಜಾತಯಃ ।
ಪಿಶಾಚಾ ರಾಕ್ಷಸಾಃ ಪ್ರೇತಾ ವಿವಿಧಾ ಮ್ಲೇಚ್ಛಜಾತಯಃ ॥ ೬೨ ॥

---

೫೮. ಗೋವುಗಳಿಂದ ಜೀವನಮಾಡುತ್ತಾ, ಪೀತವರ್ಣಯುಕ್ತರು, ಕೃಷ್ಯುಪಜೀವಿಗಳೂ ಆಗಿ ಸ್ವಧರ್ಮವನ್ನು ಆಚರಿಸದಿರುವ ದ್ವಿಜರು ವೈಶ್ಯರಾಗುವರು.

೫೯. ಹಿಂಸೆ, ಅನೃತವಚನ ಇವುಗಳಲ್ಲಾಸಕ್ತರಾಗಿ ಲೋಭಿಗಳು, ಸಮಸ್ತ ಕರ್ಮಗಳಿಂದಲೂ ಜೀವಿಸುವವರು, ಕಪ್ಪುಬಣ್ಣದವರು, ಶೌಚವನ್ನು ಬಿಟ್ಟಿರುವವರೂ ಆದ ದ್ವಿಜರು ಶೂದ್ರರಾಗುವರು.

೬೦-೬೧. ಈ ಪ್ರಕಾರ ಭಿನ್ನ ಭಿನ್ನ ಕರ್ಮಗಳಿಂದ ವ್ಯಾಪ್ತರಾದ ದ್ವಿಜರು ಭಿನ್ನ ಭಿನ್ನ ವರ್ಣದವರಾಗುವರು. ಧರ್ಮವೆಂಬ ಶಕ್ತಿಯನ್ನಾಶ್ರಯಿಸಿರುವವರು ಬ್ರಾಹ್ಮಣರು. ಪೂರ್ವದಲ್ಲಿಯೇ ಬ್ರಹ್ಮನಿಂದ ಜ್ಞಾನಸಿದ್ಧ್ಯರ್ಥವಾಗಿ ಸೃಷ್ಟವಾದ ವೇದಾಧ್ಯಯನ ನಿಯಮ ಇವುಗಳನ್ನು ಧರಿಸಿರುವ ಬ್ರಾಹ್ಮಣರ ತಪಸ್ಸು ನಾಶವಾಗುವುದಿಲ್ಲ.

೬೨-೬೩. ಅವರಲ್ಲಿ ಬಹುವಿಧವಾದ ಬೇರೆ ದ್ವಿಜರು ಅಲ್ಲಲ್ಲಿರುತ್ತಾರೆ. ಮ್ಲೇಚ್ಛಜಾತಿಗಳು, ಪಿಶಾಚ, ರಾಕ್ಷಸ, ಪ್ರೇತ ಮುಂತಾಗಿ ನಾನಾವಿಧವಾಗಿವೆ. ಧರ್ಮಮೂಲಕವಾದ ಆ ಸೃಷ್ಟಿಯು ಮಾನಸವೆನಿಸುವುದು.

ಸಾ ಸೃಷ್ಟಿರ್ಮಾನಸೀ ನಾಮ ಧರ್ಮತಂತ್ರಪರಾಯಣಾ ।

ಭರದ್ವಾಜ ಉವಾಚ

ಬ್ರಾಹ್ಮಣಃ ಕೇನ ಭವತಿ ಕ್ಷತ್ರಿಯೋ ವಾ ದ್ವಿಜೋತ್ತಮ ॥ ೬೩ ॥

ವೈಶ್ಯಃ ಶೂದ್ರಶ್ಚ ವಿಪ್ರರ್ಷೇ ತದ್ಬ್ರೂಹಿ ವದತಾಂ ವರ ।

ಭೃಗುರುವಾಚ

ಜಾತಕರ್ಮಾದಿಭಿರ್ಯಸ್ತು ಸಂಸ್ಕಾರೈಃ ಸಂಸ್ಕೃತಃ ಶುಚಿಃ ॥ ೬೪ ॥

ವೇದಾಧ್ಯಯನಸಂಪನ್ನಃ ಬ್ರಹ್ಮಕರ್ಮಸ್ವವಸ್ಥಿತಃ ।
ಶೌಚಾಚಾರಸ್ಥಿತಃ ಸಮ್ಯಗ್ವಿದ್ಯಾಭ್ಯಾಸೀ ಗುರುಪ್ರಿಯಃ ॥ ೬೫ ॥

ನಿತ್ಯವ್ರತೀ ಸತ್ಯಪರಃ ಸ ವೈ ಬ್ರಾಹ್ಮಣ ಉಚ್ಯತೇ ।
ಸತ್ಯಂ ದಾನಮಥೋಽದ್ರೋಹ ಆನೃಶಂಸ್ಯಂ ಕೃಪಾ ಘೃಣಾ ॥ ೬೬ ॥

ತಾಪಸ್ಯಂ ದೃಶ್ಯತೇ ಯತ್ರ ಸ ಬ್ರಾಹ್ಮಣ ಇತಿ ಸ್ಮೃತಃ ।
ಕ್ಷತ್ರಜಂ ಸೇವತೇ ಕರ್ಮ ವೇದಾಧ್ಯಯನಸಂಗತಃ ॥ ೬೭ ॥

---

೬೩-೬೪. ಭರದ್ವಾಜನು ಹೇಳಿದನು :—ಜೀವರು ಯಾವ ಯಾವ ಧರ್ಮಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆನಿಸುವರು ? ದ್ವಿಜವರ್ಯನು, ವಕ್ತೃಶ್ರೇಷ್ಠನೂ ಆಗಿರುವ ಬ್ರಹ್ಮರ್ಷಿಯೇ! ಅದನ್ನು ಹೇಳು.

೬೪-೬೬. ಭೃಗುವು ಹೇಳಿದನು :—ಜಾತಕರ್ಮಾದಿ ಷೋಡಶಸಂಸ್ಕಾರಗಳಿಂದ ಸಂಸ್ಕರಿಸಲ್ಪಟ್ಟು ಪರಿಶುದ್ಧನು, ವೇದಾಧ್ಯಯನಕರ್ತನು, ವೇದೋಕ್ತ ಕರ್ಮವನ್ನು ಆಚರಿಸುವವನು, ಶೌಚ ಮತ್ತು ಆಚಾರಗಳನ್ನು ಅನುಷ್ಠಾನ ಮಾಡುವವನು, ಚೆನ್ನಾಗಿ ವಿದ್ಯೆಯನ್ನು ಕಲಿಯುವವನು, ಗುರ್ವನುಗ್ರಹ ಪಾತ್ರನು, ನಿತ್ಯವ್ರತಪರನು, ಸತ್ಯವಚನದಲ್ಲಿ ಆಸಕ್ತನೂ ಆಗಿರುವವನು ಬ್ರಾಹ್ಮಣನೆನಿಸುವನು.

೬೬-೬೭. ಸತ್ಯ, ದಾನ, ಅದ್ರೋಹ, ಮೃದುತ್ವ, ದಯೆ, ವಿಷಯ ಜುಗುಪ್ಸೆ ಮತ್ತು ತಪಸ್ಸು ಇವುಗಳು ಯಾರಲ್ಲಿ ಉಪಲಬ್ಧವಾಗುವುವೋ ಅವನು ಬ್ರಾಹ್ಮಣನು ಎಂದು ವಿಹಿತವಾಗಿದೆ.

ದಾನಾದಾನರತಿರ್ಯಸ್ತು ಸ ವೈ ಕ್ಷತ್ರಿಯ ಉಚ್ಯತೇ ।
ವಿಶತ್ಯಾಶು ಪಶುಭ್ಯಶ್ಚ ಕೃಷ್ಯಾದಾನರತಿಃ ಶುಚಿಃ ॥ ೬೮ ॥

ವೇದಾಧ್ಯಯನಸಂಪನ್ನಃ ಸ ವೈಶ್ಯ ಇತಿ ಸಂಜ್ಞಿತಃ ।
ಸರ್ವಭಕ್ಷರತಿರ್ನಿತ್ಯಂ ಸರ್ವಕರ್ಮಕರೋಽಶುಚಿಃ ॥ ೬೯ ॥

ತ್ಯಕ್ತವೇದಸ್ತ್ವನಾಚಾರಃ ಸ ವೈ ಶೂದ್ರ ಇತಿ ಸ್ಮೃತಃ ।
ಶೂದ್ರೇ ಚೈತದ್ಭವೇಲ್ಲಕ್ಷ್ಮ ದ್ವಿಜೇ ತಚ್ಚ ನ ವಿದ್ಯತೇ ॥ ೭೦ ॥

ನ ವೈ ಶೂದ್ರೋ ಭವೇಚ್ಛೂದ್ರೋ ಬ್ರಾಹ್ಮಣೋ ಬ್ರಾಹ್ಮಣೋ ನ ಚ ।
ಸರ್ವೋಪಾಯೈಸ್ತು ಲೋಭಸ್ಯ ಕ್ರೋಧಸ್ಯ ಚ ವಿನಿಗ್ರಹಃ ॥ ೭೧ ॥

ಏತತ್ಪವಿತ್ರಂ ಜ್ಞಾನಿನಾಂ ತಥಾ ಚೈವಾತ್ಮಸಂಯಮಃ ।
ವರ್ಜ್ಯೌ ಸರ್ವಾತ್ಮನಾ ತೌ ಹಿ ಶ್ರೇಯೋಘಾತಾರ್ಥಮುದ್ಯತೌ ॥ ೭೨ ॥

---

೬೭-೬೮. ವೇದಾಧ್ಯಯನಸಂಪನ್ನನು, ದಾನಾದಾನಪರನೂ ಆಗಿ ಕ್ಷತ್ರಜಕರ್ಮವನ್ನು ಮಾಡುವವನು ಕ್ಷತ್ರಿಯನೆನಿಸುವನು.

೬೮-೬೯. ಪಶುರಕ್ಷಣೆ, ವ್ಯವಸಾಯ ಮುಂತಾದುವುಗಳಲ್ಲಿ ಶೀಘ್ರವಾಗಿ ಪ್ರವೇಶಿಸಿ ಅದರಲ್ಲಿ ನಿರತನಾಗುವವನು, ಪರಿಶುದ್ಧನು, ವೇದಾಧ್ಯಯನಸಂಪನ್ನನೂ ಆಗಿರುವವನು ವೈಶ್ಯನೆನಿಸುವನು.

೬೯-೭೦. ಯಾವಾಗಲೂ ಎಲ್ಲವನ್ನೂ ತಿನ್ನುತ್ತಿರುವ, ಎಲ್ಲಾ ಕರ್ಮಗಳನ್ನೂ ಮಾಡುವ, ವೇದವನ್ನು ಬಿಟ್ಟು, ಅನಾಚಾರದಿಂದ ಅಶುದ್ಧನಾಗಿರುವವನು ಶೂದ್ರನೆನಿಸುವನು. ಈ ಲಕ್ಷಣವು ಶೂದ್ರನಲ್ಲಿರಬೇಕು. ದ್ವಿಜನಲ್ಲಿರಬಾರದು.

೭೧-೭೨. ಶೂದ್ರನೂ ಸಹ ಈ ಲಕ್ಷಣವಿಲ್ಲದಿದ್ದರೆ ಶೂದ್ರನಾಗುವುದಿಲ್ಲ. ಹಾಗೆಯೇ ಬ್ರಾಹ್ಮಣನೂ ಬ್ರಾಹ್ಮಣನಾಗುವುದಿಲ್ಲ. ಎಲ್ಲಾ ಉಪಾಯಗಳಿಂದಲೂ ಲೋಭ, ಕ್ರೋಧಗಳನ್ನು ವಿಶೇಷವಾಗಿ ನಿಗ್ರಹಿಸುವುದು, ಅದರಂತೆಯೇ ಇಂದ್ರಿಯ ನಿಯಮವೂ ಸಹ ಜ್ಞಾನಿಗಳಿಗೆ ಪವಿತ್ರವಾದುದು. ಈ ಲೋಭ ಕ್ರೋಧಗಳು ಯಾವಾಗಲೂ ಶ್ರೇಯಸ್ಸನ್ನು ನಾಶಮಾಡಲುದ್ಯುಕ್ತಗಳಾಗುವುವು. ಆದಕಾರಣ ಅವುಗಳನ್ನು ಸರ್ವಪ್ರಕಾರದಿಂದಲೂ ತ್ಯಜಿಸಬೇಕು.

ನಿತ್ಯಂ ಕ್ರೋಧಾಚ್ಛ್ರಿಯಂ ರಕ್ಷೇತ್ತಪೋ ರಕ್ಷೇತ್ತು ಮತ್ಸರಾತ್ ।
ವಿದ್ಯಾಂ ಮಾನಾಪಮಾನಾಭ್ಯಾಮಾತ್ಮಾನಂ ತು ಪ್ರಮಾದತಃ ॥ ೭೩ ॥

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ತ್ಯಾಗೇ ಯಸ್ಯ ಹುತಂ ಸರ್ವಂ ಸ ತ್ಯಾಗೀ ಸ ಚ ಬುದ್ಧಿಮಾನ್ ॥ ೭೪ ॥

ಅಹಿಂಸ್ರಃ ಸರ್ವಭೂತಾನಾಂ ಮೈತ್ರಾಯಣಗತಶ್ಚರೇತ್ ।
ಪರಿಗ್ರಹಾತ್ಪರಿತ್ಯಜ್ಯ ಭವೇದ್ಬುಧ್ಯಾ ಜಿತೇಂದ್ರಿಯಃ ॥ ೭೫ ॥

ಅಶೋಕಸ್ಥಾನಮಾತಿಷ್ಠೇದಿಹ ಚಾಮುತ್ರ ಚಾಭಯಂ ।
ತಪೋ ನಿತ್ಯೇನ ದಾಂತೇನ ಮುನಿನಾ ಸಂಯತಾತ್ಮನಾ ॥ ೭೬ ॥

---

೭೩. ಯಾವಾಗಲೂ ಸಂಪತ್ತನ್ನು ಕ್ರೋಧದ ದೆಸೆಯಿಂದ ರಕ್ಷಿಸಬೇಕು ಎಂದರೆ ಕ್ರೋಧವು ಸಂಪತ್ತನ್ನು ಹಾಳುಮಾಡುವುದು. ಆದುದರಿಂದ ಅದನ್ನು ಬಿಡಬೇಕೆಂದು ತಾತ್ಪರ್ಯ. ಮಾತ್ಸರ್ಯದಿಂದ ತಪಸ್ಸನ್ನು ಕಾಪಾಡಬೇಕು. ಮಾನಾಪಮಾನಗಳಿಂದ ವಿದ್ಯೆಯನ್ನೂ, ಆಲಸ್ಯದಿಂದ ಆತ್ಮನನ್ನೂ ರಕ್ಷಿಸಬೇಕು.

೭೪. ಯಾವನು ಮಾಡುವ ಸಮಸ್ತ ಕರ್ಮಗಳು ಕಾಮನೆ (ಫಲಾಪೇಕ್ಷೆ) ಮತ್ತು ಸಂಕಲ್ಪ ಇವುಗಳನ್ನು ಬಿಟ್ಟಿರುತ್ತವೆಯೋ, ಯಾವುದನ್ನು ತ್ಯಜಿಸಿದರೆ ಸಕಲ ಹೋಮಗಳನ್ನೂ ಮಾಡಿದಂತಾಗುವುದೋ ಅಂತಹವನೇ ತ್ಯಾಗಿ ಮತ್ತು ಬುದ್ಧಿವಂತನು.

೭೫. ಸಕಲ ಪ್ರಾಣಿಗಳಿಗೂ ಹಿಂಸಕನಾಗದೆ ಮಿತ್ರಭಾವದಿಂದಲೇ ನಡೆಯಬೇಕು. ಪ್ರತಿಗ್ರಹವನ್ನು ಬಿಟ್ಟು ಬುದ್ಧಿಪೂರ್ವಕವಾಗಿ ಜಿತೇಂದ್ರಿಯನಾಗಬೇಕು.

೭೬. ಆತ್ಮಸಂಯಮಯುಕ್ತನಾದ ಮುನಿಯಿಂದ ಯಾವಾಗಲೂ ಇಂದ್ರಿಯನಿಗ್ರಹಪೂರ್ವಕವಾಗಿ ಆಚರಿಸಲ್ಪಟ್ಟ ತಪಸ್ಸು ಈ ಲೋಕ ಪರಲೋಕಗಳಲ್ಲಿ ಭಯದುಃಖಗಳಿಲ್ಲದ ಸ್ಥಾನವನ್ನು ಸಂಪಾದಿಸಿ ಕೊಡುವುದು.

ಅಜಿತಂ ಜೇತುಕಾಮೇನ ವ್ಯಾಸಂಗೇಷು ಹ್ಯಸಂಗಿನಾ ।
ಇಂದ್ರಿಯೈರ್ಗೃಹ್ಯತೇ ಯದ್ಯತ್ತತ್ತದ್ವ್ಯಕ್ತಮಿತಿ ಸ್ಥಿತಿಃ ॥ ೭೭ ॥

ಅವ್ಯಕ್ತಮಿತಿ ವಿಜ್ಞೇಯಂ ಲಿಂಗಗ್ರಾಹ್ಯಮತೀಂದ್ರಿಯಂ ।
ಅವಿಶ್ರಂಭೇಣ ಮಂತವ್ಯಂ ವಿಶ್ರಂಭೇ ಧಾರಯೇನ್ಮನಃ ॥ ೭೮ ॥

ಮನಃ ಪ್ರಾಣೇನ ಗೃಹ್ಣೀಯಾತ್ಪ್ರಾಣಂ ಬ್ರಹ್ಮಣಿ ಧಾರಯೇತ್ ।
ನಿರ್ವೇದಾದೇವ ನಿರ್ವಾಣಂ ನ ಚ ಕಿಂಚಿದ್ವಿಚಿಂತಯೇತ್ ॥ ೭೯ ॥

ಸುಖಂ ವೈ ಬ್ರಾಹ್ಮಣೋ ಬ್ರಹ್ಮನ್ನಿರ್ವೇದೇನಾಧಿಗಚ್ಛತಿ ।
ಶೌಚೇ ತು ಸತತಂ ಯುಕ್ತಃ ಸದಾಚಾರಸಮನ್ವಿತಃ ॥ ೮೦ ॥

ಸ್ವನುಕ್ರೋಶಶ್ಚ ಭೂತೇಷು ತದ್ದ್ವಿಜಾತಿಷು ಲಕ್ಷಣಂ ।
ಸತ್ಯಂ ವ್ರತಂ ತಪಃ ಶೌಚಂ ಸತ್ಯಂ ವಿಸೃಜತೇ ಪ್ರಜಾಃ ॥ ೮೧ ॥

---

೭೭. ವಿಷಯಸಂಗವುಳ್ಳವರಲ್ಲಿ ಸಂಗಮಾಡದಿರುವ, ಸ್ವಾಧೀನವಾಗದೇ ಇರುವುದನ್ನು ಅಧೀನಮಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವನು ಇಂದ್ರಿಯ ಗಳಿಂದ ಗ್ರಹಿಸುವ ವಿಷಯವೆಲ್ಲವೂ ವ್ಯಕ್ತವೆಂದು ನಿರ್ಣಯ.

೭೮. ಅನುಮಾನದಿಂದ ಗ್ರಹಿಸಲರ್ಹವಾಗಿ ಅತೀಂದ್ರಿಯವಾಗಿರುವು ದನ್ನು ಅವ್ಯಕ್ತವೆಂದು ತಿಳಿಯಬೇಕು. ತತ್ವನಿರ್ಣಯಕ್ಕಾಗಿ ಮನನಮಾಡ ಬೇಕು. ತತ್ವನಿರ್ಣಯವಾದಮೇಲೆ ಅದರಲ್ಲಿ ಮನಸ್ಸನ್ನು ಧಾರಣೆಮಾಡಿ ಕೊಳ್ಳಬೇಕು.

೭೯. ಪ್ರಾಣದಿಂದ ಮನಸ್ಸನ್ನು ಗ್ರಹಿಸಬೇಕು. ಪ್ರಾಣವನ್ನು ಬ್ರಹ್ಮ ನಲ್ಲಿಡಬೇಕು. ವೈರಾಗ್ಯದಿಂದಲೇ ಮೋಕ್ಷವು ಲಭಿಸುತ್ತದೆ. ಬೇರಾವುದನ್ನೂ ಚಿಂತಿಸಬಾರದು.

೮೦. ಯಾವಾಗಲೂ ಶೌಚಯುಕ್ತನಾಗಿ ಸದಾಚಾರಿಯಾದ ಬ್ರಾಹ್ಮಣನು ವೈರಾಗ್ಯದಿಂದಲೇ ಸುಖವನ್ನು ಪಡೆಯುವನು.

೮೧. ಪ್ರಾಣಿಗಳ ವಿಷಯದಲ್ಲಿ ಅತ್ಯಂತ ದಯೆಯು, ಸತ್ಯ, ವ್ರತ, ತಪಸ್ಸು, ಶೌಚ ಇವುಗಳು ದ್ವಿಜರ ಲಕ್ಷಣವು. ಸತ್ಯವು ಪ್ರಜೆಗಳನ್ನು ಸೃಷ್ಟಿಸುತ್ತದೆ.

ಸತ್ಯೇನ ಧಾರ್ಯತೇ ಲೋಕಃ ಸ್ವಃ ಸತ್ಯೇನೈವ ಗಚ್ಛತಿ !
ಅನೃತಂ ತಮಸೋ ರೂಪಂ ತಮಸಾ ನೀಯತೇ ಹ್ಯಧಃ ॥ ೮೨ ॥

ತಮೋಗ್ರಸ್ತಾ ನ ಪಶ್ಯಂತಿ ಪ್ರಕಾಶಂ ತಮಸಾಽಽವೃತಾಃ ।
ಸುದುಷ್ಪ್ರಕಾಶಮಿತ್ಯಾಹುರ್ನರಕಂ ತಮ ಏವ ಚ ॥ ೮೩ ॥

ಸತ್ಯಾನೃತಂ ತದುಭಯಂ ಪ್ರಾಪ್ಯತೇ ಜಗತೀಚರೈಃ ।
ತತ್ರಾಪ್ಯೇವಂ ದ್ವಿಧಾ ಲೋಕೇ ವೃತ್ತಿಃ ಸತ್ಯಾನೃತಾ ಭವೇತ್ ॥ ೮೪ ॥

ಧರ್ಮಾಧರ್ಮೌ ಪ್ರಕಾಶಶ್ಚ ತಮೋ ದುಃಖಂ ಸುಖಂ ತಥಾ ।
ಶಾರೀರೈರ್ಮಾನಸೈರ್ದುಃಖೈಃ ಸುಖೈಶ್ಚಾಪ್ಯಸುಖೋದಯೈಃ ॥ ೮೫ ॥

ಲೋಕಸೃಷ್ಟಂ ಪ್ರಪಶ್ಯಂತೋ ನ ಮುಹ್ಯಂತಿ ವಿಚಕ್ಷಣಾಃ ।
ತತ್ರ ದುಃಖವಿಮೋಕ್ಷಾರ್ಥಂ ಪ್ರಯತೇತ ವಿಚಕ್ಷಣಃ ॥ ೮೬ ॥

---

೮೨. ಸತ್ಯದಿಂದಲೇ ಲೋಕವು ರಕ್ಷಿತವಾಗುತ್ತದೆ. ಸತ್ಯದಿಂದಲೇ ಜನರು ಸ್ವರ್ಗವನ್ನು ಪಡೆಯುತ್ತಾರೆ. ಅನೃತ (ಸುಳ್ಳು) ವು ತಮಸ್ಸಿನ ರೂಪವು. ತಮಸ್ಸಿನಿಂದ ಅಧಃಪತನವಾಗುವುದು.

೮೩. ಅಜ್ಞಾನ ಮತ್ತು ಅಂಧಕಾರಗಳಿಂದ ಆವರಿಸಲ್ಪಟ್ಟಿರುವವರು ಪ್ರಕಾಶವನ್ನು ನೋಡಿ ತಿಳಿಯಲಾರರು. ಅಜ್ಞಾನ ಮತ್ತು ಕಗ್ಗತ್ತಲುಗಳಿಂದ ಆವರಿಸಲ್ಪಟ್ಟಿರುವ ನರಕವನ್ನು ತಮಸ್ಸೆನ್ನುವರು.

೮೪. ಲೋಕದಲ್ಲಿರುವ ಪ್ರಾಣಿಗಳು ಬ್ರಹ್ಮಜಗತ್ತುಗಳೆರಡನ್ನೂ ಹೊಂದುವರು. ಲೋಕದಲ್ಲಿನ ಪ್ರವೃತ್ತಿಯೂ ಸಹ ಇದೇ ರೀತಿಯಾಗಿ ಬ್ರಹ್ಮ ಜಗತ್ತುಗಳನ್ನು ಹೊಂದಲು ಅನುಕೂಲವಾಗುವಂತೆ ಎರಡು ವಿಧವಾಗುವುದು.

೮೫-೮೬. ಧರ್ಮವು ಪ್ರಕಾಶ ಮತ್ತು ಸುಖಕರವು. ಅಧರ್ಮವು ತಮಸ್ಸು ಮತ್ತು ದುಃಖಕರವು. ಶಾರೀರಕ, ಮಾನಸಿಕ ದುಃಖಗಳು ಮತ್ತು ಕ್ಲೇಶಕರವಾದ ಸುಖ ಇವುಗಳಿಂದ ಮಿಶ್ರವಾದ ಲೋಕದಲ್ಲಿರುವ ವಸ್ತುವನ್ನು ನೋಡಿ ವಿವೇಚನಶೀಲರು ಮೋಹಿಸುವುದಿಲ್ಲ. ಅದರಲ್ಲಿಯೂ ವಿವೇಕಿಯಾದವನು ದುಃಖವನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸುವನು.

ಸುಖಂ ಹ್ಯನಿತ್ಯಂ ಭೂತಾನಾಮಿಹಲೋಕೇ ಪರತ್ರ ಚ ।
ರಾಹುಗ್ರಸ್ತಸ್ಯ ಸೋಮಸ್ಯ ಯಥಾ ಜೋತ್ಸ್ನಾ ನ ಭಾಸತೇ ॥ ೮೭ ॥
ತಥಾ ತಮೋಭಿಭೂತಾನಾಂ ಭೂತಾನಾಂ ನಶ್ಯತೇ ಸುಖಂ ॥ ೮೮ ॥

ತತ್ಖಲು ದ್ವಿವಿಧಂ ಸುಖಮುಚ್ಯತೇ ಶಾರೀರಂ ಮಾನಸಂ ಚ । ಇಹಖಲ್ವಮುಷ್ಮಿಂಶ್ಚ ಲೋಕೇ ವಸ್ತುಪ್ರವೃತ್ತಯಃ ಸುಖಾರ್ಥಮಭಿಧೀಯಂತೇ । ನ ಹೀತಃ ಪರತ್ರ ಅಪವರ್ಗಫಲಾದ್ವಿಶಿಷ್ಟತರಮಸ್ತಿ । ಸ ಏವ ಕಾಮ್ಯೋ ಗುಣವಿಶೇಷೋ ಧರ್ಮಾರ್ಥಗುಣಾರಂಭಸ್ತದ್ಧೇತುರಸ್ಯೋತ್ಪತ್ತಿಸ್ಸುಖಪ್ರಯೋಜನಾರ್ಥಮಾರಂಭಾಃ ॥ ॥ ೮೯ ॥

ಭರದ್ವಾಜ ಉವಾಚ

ಯದ್ಯೈತದ್ಭವತಾಭಿಹಿತಂ ಸುಖಾನಾಂ ಪರಮಾಃ ಸ್ತ್ರಿಯ ಇತಿ ।
ನ ತದುಪಗೃಹ್ಣೀಮೋ ನ ಹ್ಯೇಷಾಮೃಷೀಣಾಂ ಮಹತಿ ಸ್ಥಿತಾನಾಂ ॥ ೯೦ ॥

---

೮೭-೮೮. ಈ ಲೋಕ ಮತ್ತು ಸ್ವರ್ಗಾದಿ ಪರಲೋಕಗಳಲ್ಲಿ ಪ್ರಾಣಿಗಳಿಗಾಗುವ ಸುಖವು ಅನಿತ್ಯವು. ರಾಹುಗ್ರಾಸ (ಗ್ರಹಣ)ದಿಂದ ಚಂದ್ರನ ಬೆಳದಿಂಗಳು ಹೇಗೆ ಪ್ರಕಾಶಿಸುವುದಿಲ್ಲವೋ ಅದರಂತೆ ತಮೋಗುಣದಿಂದ ಆವರಿಸಲ್ಪಟ್ಟ ಪ್ರಾಣಿಗಳ ಸುಖವು ನಷ್ಟವಾಗುತ್ತದೆ.

೮೯. ಆ ಸುಖವು ಶಾರೀರ, ಮಾನಸ ಎಂಬುದಾಗಿ ಎರಡು ವಿಧವೆಂದು ಉಕ್ತವಾಗಿದೆ. ಈ ಲೋಕ ಪರಲೋಕಗಳಲ್ಲಿ ಎಲ್ಲರೂ ಸುಖಕ್ಕಾಗಿಯೇ ಪ್ರವರ್ತಿಸುವರೆಂದು ಪ್ರಸಿದ್ಧವು. ಪರಲೋಕದಲ್ಲಿ ಮೋಕ್ಷಸುಖಕ್ಕಿಂತ ಹೆಚ್ಚಿನ ಸುಖವಿಲ್ಲ. ಅದೇ ಅಪೇಕ್ಷೆಪಡಲರ್ಹವಾದ ಗುಣವಿಶೇಷವು. ಗುಣಪ್ರಯತ್ನವು ಧರ್ಮಫಲಕವು. ಪ್ರಾಣಿವರ್ಗದ ಉತ್ಪತ್ತಿಯು ಅದಕ್ಕೆ ಕಾರಣವು. ಕರ್ಮಗಳು ಸುಖರೂಪಪ್ರಯೋಜನಕ್ಕೆ ಸಾಧನವು.

೯೦. ಭರದ್ವಾಜನು ಹೇಳಿದನು :— ಭೋಗಸಾಧನಗಳಲ್ಲಿ ಸ್ತ್ರೀಯರು ಉತ್ಕೃಷ್ಟರೆಂದು ನೀನು ಹೇಳಿದೆಯಷ್ಟೆ. ಮಹಾಫಲಪ್ರದವಾದ ತಪಸ್ಸಿನಲ್ಲಿ ನಿರತರಾಗಿರುವ ಋಷಿಗಳು ಆ ಸುಖವನ್ನು ಬಯಸುವುದಿಲ್ಲವಾದಕಾರಣ ಅದನ್ನು ಒಪ್ಪಲಾರೆವು.

ಅಪ್ರಾಪ್ಯ ಏಷ ಕಾಮ್ಯಗುಣವಿಶೇಷೋ ನ ಚೈನಮಭಿಶೀಲ-
ಯಂತಿ । ತಪಸಿ ಶ್ರೂಯೇತ ತ್ರಿಲೋಕಕೃದ್ಬ್ರಹ್ಮಾ ಪ್ರಭು-
ರೇಕಾಕೀ ತಿಷ್ಠತಿ । ಬ್ರಹ್ಮಚಾರೀ ನ ಕಾಮಸುಖೇಷ್ವಾತ್ಮಾನ-
ಮವದಧಾತಿ ॥ ॥ ೯೧ ॥

ಅಪಿ ಚ ಭಗವಾನ್ವಿಶ್ವೇಶ್ವರ ಉಮಾಪತಿಃ ಕಾಮಮಭಿವರ್ತ-
ಮಾನಮನಂಗತ್ವೇನ ಶಮಮನಯತ್ ॥ ॥ ೯೨ ॥

ತಸ್ಮಾದ್ಭೂಮೌ ನ ತು ಮಹಾತ್ಮಭೀರಂಜಯತಿ ಗೃಹೀತೋ
ನ ತ್ವೇಷ ತಾವದ್ವಿಶಿಷ್ಟೋ ಗುಣವಿಶೇಷ ಇತಿ ॥ ॥ ೯೩ ॥

ನೈತದ್ಭಗವತಃ ಪ್ರತ್ಯೇಮಿ ಭವತಾ ತೂಕ್ತಂ ಸುಖಾನಾಂ
ಪರಮಾಃ ಸ್ತ್ರಿಯ ಇತಿ ಲೋಕಪ್ರವಾದೋ ಹಿ ದ್ವಿವಿಧಃ
ಫಲೋದಯಃ ಸುಕೃತಾತ್ಸುಕೃತಮವಾಪ್ಯತೇ ಅನ್ಯಥಾ ದುಃಖ-
ಮಿತಿ ॥ ॥ ೯೪ ॥

---

೯೧. ಹೊಂದಲಶಕ್ಯವಾದ ಸುಖವೆಂಬ ಕಾಮ್ಯಗುಣವಿಶೇಷವು ಈ ಆತ್ಮನನ್ನು ಸುಶೀಲನನ್ನಾಗಿ ಮಾಡುವುದಿಲ್ಲ. ತಪಸ್ಸು ಎಂದರೆ ತತ್ವವಿಚಾರ ಮಾಡುವುದರಿಂದ ಲೋಕತ್ರಯಕರ್ತನಾದ ಬ್ರಹ್ಮನು ಏಕಾಕಿಯಾಗಿಯೇ ಸುಖಿಯಾಗಿದ್ದನು. ಅವನು ಬ್ರಹ್ಮಚಾರಿಯಾಗಿ ಕಾಮಸುಖಗಳಲ್ಲಿ ಮನಸ್ಸುಕೊಡಲಿಲ್ಲವೆಂದು ತಿಳಿಯುವುದು.

೯೨. ಮತ್ತು ಪಾರ್ವತೀಪತಿಯಾದ ವಿಶ್ವೇಶ್ವರಸ್ವಾಮಿಯೂ ಸಹ ಪ್ರಸಕ್ತನಾದ ಕಾಮನನ್ನು ಅನಂಗನನ್ನಾಗಿ ಮಾಡಿದನು.

೯೩. ಆದಕಾರಣ ಭೂಲೋಕದಲ್ಲಿ ಈ ಉತ್ತಮವಾದ ಕಾಮ್ಯಗುಣವಿಶೇಷವು ಮಹಾತ್ಮರಿಂದ ಇಚ್ಛಿಸಲ್ಪಡುವುದಿಲ್ಲ ಮತ್ತು ಸ್ವೀಕರಿಸಲ್ಪಡುವುದಿಲ್ಲ.

೯೪. ಇಂತಹುದನ್ನು ಭಗವಂತನಿಗೆ ಗ್ರಾಹ್ಯವೆಂದು ತಿಳಿಯಲಾರೆನು ; ನೀನಾದರೋ ಸುಖಗಳಲ್ಲಿ ಸ್ತ್ರೀಯರು ಉತ್ತಮರೆಂದು ಹೇಳಿದೆ. ಸಾಧುಕರ್ಮದಿಂದ ಪುಣ್ಯವೂ, ಇತರ ಕರ್ಮದಿಂದ ದುಃಖವೂ ಎಂಬುದಾಗಿ ಎರಡು ವಿಧವಾದ ಫಲಪ್ರಾಪ್ತಿಯಾಗುವುದೆಂದು ಲೋಕವ್ಯವಹಾರವೂ ಇದೆ.

## ಭೃಗುರುವಾಚ

ಅತ್ರೋಚ್ಯತೇ ಅನೃತಾತ್ಖಲು ತಮಃ ಪ್ರಾದುರ್ಭೂತಂ ತತಸ್ತಮೋಗ್ರಸ್ತಾ ಅಧರ್ಮಮೇವಾನುವರ್ತಂತೇ । ನ ಧರ್ಮಂ ಕ್ರೋಧಲೋಭಮೋಹಹಿಂಸಾನೃತಾದಿಭಿರವಚ್ಛಿನ್ನಾಃ ಖಲ್ವಸ್ಮಿನ್ಲೋಕೇ ನಾಮುತ್ರ ಸುಖಮಾಪ್ನುವಂತಿ । ವಿವಿಧವ್ಯಾಧಿರುಜೋಪತಾಪೈರವಕೀರ್ಯಂತೇ ವಧಬಂಧನಪರಿಕ್ಲೇಶಾದಿಭಿಶ್ಚ ಕ್ಷುತ್ಪಿಪಾಸಾಶ್ರಮಕೃತೈರುಪತಾಪೈರುಪತಪ್ಯಂತೇ । ವರ್ಷವಾತಾತ್ಯುಷ್ಣಾತಿಶೀತಕೃತೈಶ್ಚ ಪ್ರತಿಭಯೈಃ ಶಾರೀರೈರ್ದುಃಖೈರುಪತಪ್ಯಂತೇ । ಬಂಧುಧನವಿನಾಶವಿಪ್ರಯೋಗಕೃತೈಶ್ಚ ಮಾನಸೈಃ ಶೋಕೈರಭಿಭೂಯಂತೇ ಜರಾಮೃತ್ಯುಕೃತೈಶ್ಚಾನ್ಯೈರಿತಿ ಯಸ್ತ್ವೇತೈಃ ॥ ॥ ೯೫ ॥

---

೯೫. ಭೃಗುವು ಹೇಳಿದನು :— ಈ ವಿಷಯದಲ್ಲಿ ಸಮಾಧಾನವನ್ನು ಹೇಳುತ್ತೇನೆ. ಅನೃತದಿಂದಲ್ಲವೇ ತಮಸ್ಸು ಹುಟ್ಟಿರುವುದು. ಆದಕಾರಣ ತಮೋಗುಣದಿಂದ ಕೂಡಿರುವವರು ಧರ್ಮವನ್ನು ಬಿಟ್ಟು ಅಧರ್ಮವನ್ನೇ ಅನುಸರಿಸುವರು. ಕ್ರೋಧ, ಲೋಭ, ಮೋಹ, ಹಿಂಸೆ, ಸುಳ್ಳು ಮುಂತಾದುವುಗಳಿಂದ ಆವರಿಸಲ್ಪಟ್ಟಿರುವವರು ಈ ಲೋಕ ಪರಲೋಕಗಳಲ್ಲಿ ಸುಖವನ್ನು ಪಡೆಯುವುದಿಲ್ಲ. ನಾನಾವಿಧ ರೋಗಗಳ ಬಳಲಿಕೆಯಿಂದ ನರಳುತ್ತಿರುವರು. ಹಿಂಸೆ, ಬಂಧನಗಳಿಂದುಂಟಾಗುವ ಕ್ಲೇಶಾದಿಗಳಿಂದ ಮತ್ತು ಹಸಿವು ಬಾಯಾರಿಕೆಗಳ ಶ್ರಮದಿಂದಾಗುವ ಬಳಲಿಕೆಯಿಂದಲೂ ತಪಿಸುತ್ತಿರುವರು. ಮಳೆ, ಗಾಳಿ, ಅತಿಬಿಸಿ, ಅತಿಶೀತಗಳ ಪ್ರಭಾವದಿಂದಾಗುವ ಶಾರೀರದುಃಖಗಳಿಂದ ನರಳುತ್ತಿರುವರು. ಬಂಧುವಿಯೋಗ ಅಥವಾ ಧನನಾಶದಿಂದಲೂ ಮುಪ್ಪು ಮರಣಗಳಿಂದಲೂ ಉಂಟಾಗುವ ಮಾನಸದುಃಖಗಳಿಂದಲೂ ನೈಜಸುಖವನ್ನನುಭವಿಸದೇ ನರಳುತ್ತಿರುವರು-

ಶಾರೀರಂ ಮಾನಸಂ ನಾಸ್ತಿ ನ ಜರಾ ನ ಚ ಪಾತಕಂ ।
ನಿತ್ಯಮೇವ ಸುಖಂ ಸ್ವರ್ಗೇ ಸುಖಂ ದುಃಖಮಿಹೋಭಯಂ ॥ ೯೬ ॥

ನರಕೇ ದುಃಖಮೇವಾಹುಃ ಸುಖಂ ತತ್ಪರಮಂ ಪದಂ ।
ಪೃಥಿವೀ ಸರ್ವಭೂತಾನಾಂ ಜನಯಿತ್ರೀ ತದ್ವಿಧಾಃ ಸ್ತ್ರಿಯಃ ॥ ೯೭ ॥

ಪುಮಾನ್ಪ್ರಜಾಪತಿಸ್ತತ್ರ ಶುಕ್ರಂ ತೇಜೋಮಯಂ ವಿದುಃ ।
ಇತ್ಯೇತಲ್ಲೋಕನಿರ್ಮಾತಾ ಧರ್ಮಸ್ಯ ಚರಿತಸ್ಯ ಚ ॥ ೯೮ ॥

ತಪಸಶ್ಚ ಸುತಪ್ತಸ್ಯ ಸ್ವಾಧ್ಯಾಯಸ್ಯ ಹುತಸ್ಯ ಚ ।
ಹುತೇನ ಶಾಮ್ಯತೇ ಪಾಪಂ ಸ್ವಾಧ್ಯಾಯೋ ಶಾಂತಿರುತ್ತಮಾ ॥ ೯೯ ॥

ದಾನೇನ ಭೋಗಾನಿತ್ಯಾಹುಸ್ತಪಸಾ ಸ್ವರ್ಗಮಾಪ್ನುಯಾತ್ ।
ದಾನಂ ತು ದ್ವಿವಿಧಂ ಪ್ರಾಹುಃ ಪರತ್ರಾರ್ಥಮಿಹೈವ ಚ ॥ ೧೦೦ ॥

---

೯೬. ಉಕ್ತಕಾರಣಗಳಿಂದ ಶಾರೀರದುಃಖ, ಮಾನಸದುಃಖ, ಮುಪ್ಪು ಮತ್ತು ಪಾಪ ಇವುಗಳಿಲ್ಲದಿರುವವನಿಗೆ ಸ್ವರ್ಗದಲ್ಲಿ ಶಾಶ್ವತವಾಗಿ ಸುಖವಾಗುತ್ತದೆ. ಈ ಲೋಕದಲ್ಲಿ ಸುಖ ದುಃಖಗಳೆರಡೂ ಆಗುವುವು.

೯೭. ನರಕದಲ್ಲಿ ದುಃಖವೇ ಆಗುವುದು; ಸುಖವು ಪರಮಪದದಲ್ಲಿಯೇ ಆಗುವುದು. ಪೃಥಿವಿಯು ಸಕಲ ಭೂತಗಳಿಗೂ ಜನಕವು. ಸ್ತ್ರೀಯರೂ ಆ ವಿಧದವರು.

೯೮-೯೯. ಪುರುಷನು ಪ್ರಜಾಪತಿಯು. ವೀರ್ಯವು ತೇಜೋಮಯ ಎಂಬುದೇ ಪ್ರಾಜ್ಞರ ಮತ. ಈ ರೀತಿಯಾದ ಲೋಕವನ್ನು ನಿರ್ಮಾಣಮಾಡಿದವನೇ ಧರ್ಮ, ಕರ್ಮ, ಚೆನ್ನಾಗಿ ಮಾಡಿದ ತಪಸ್ಸು, ವೇದಾಧ್ಯಯನ ಮತ್ತು ಹೋಮ ಇವುಗಳಿಗೆ ಮೂಲನು. ಹೋಮದಿಂದ ಪಾಪನಾಶವಾಗುವುದು. ಉತ್ತಮವಾದ ಶಾಂತಿಯುಂಟಾಗುವುದು.

೧೦೦. ದಾನದಿಂದ ಭೋಗಗಳನ್ನೂ, ತಪಸ್ಸಿನಿಂದ ಸ್ವರ್ಗವನ್ನೂ ಹೊಂದುವನು. ದಾನವು ಪರಲೋಕದಲ್ಲಿ ಫಲವನ್ನು ಕೊಡುವುದು, ಈ ಲೋಕದಲ್ಲಿ ಫಲಪ್ರದವು ಎಂಬುದಾಗಿ ಎರಡುವಿಧವೆಂದು ಹೇಳುತ್ತಾರೆ.

ಸದ್ಭ್ಯೋ ಯದ್ದೀಯತೇ ಕಿಂಚಿತ್ತತ್ಪರತ್ರೋಪತಿಷ್ಠತೇ ।
ಅಸದ್ಭ್ಯೋ ದೀಯತೇ ಯತ್ತು ತದ್ದಾನಮಿಹಭುಜ್ಯತೇ ।
ಯಾದೃಶಂ ದೀಯತೇ ದಾನಂ ತಾದೃಶಂ ಫಲಮಶ್ನುತೇ　　॥ ೧೦೧ ॥

ಭರದ್ವಾಜ ಉವಾಚ

ಕಿಂ ಕಸ್ಯ ಧರ್ಮಾಚರಣಂ ಕಿಂ ವಾ ಧರ್ಮಸ್ಯ ಲಕ್ಷಣಂ ।
ಧರ್ಮಃ ಕತಿವಿಧೋ ವಾಽಪಿ ತದ್ಭವಾನ್ವಕ್ತುಮರ್ಹತಿ　　॥ ೧೦೨ ॥

ಭೃಗುರುವಾಚ

ಸ್ವಧರ್ಮಾಚರಣೇ ಯುಕ್ತಾ ಯೇ ಭವಂತಿ ಮನೀಷಿಣಃ ।
ತೇಷಾಂ ಸ್ವರ್ಗಫಲಾವಾಪ್ತಿರ್ಯೋಽನ್ಯಥಾ ಸ ವಿಮುಹ್ಯತೇ　　॥ ೧೦೩ ॥

ಭರದ್ವಾಜ ಉವಾಚ

ಯದೇತಚ್ಚಾತುರಾಶ್ರಮ್ಯಂ ಬ್ರಹ್ಮರ್ಷಿವಿಹಿತಂ ಪುರಾ ।
ತೇಷಾಂ ಸ್ವೇ ಸ್ವೇ ಸಮಾಚಾರಾಸ್ತನ್ಮೇ ವಕ್ತುಮಿಹಾರ್ಹಸಿ　　॥ ೧೦೪ ॥

---

೧೦೧. ಸತ್ಪಾತ್ರದಲ್ಲಿ ಕೊಟ್ಟ ಅಲ್ಪದಾನವೂ ಪಾರಲೌಕಿಕ ಫಲವನ್ನು ಕೊಡುತ್ತದೆ. ಅಪಾತ್ರರಿಗೆ ಕೊಟ್ಟ ದಾನವು ಈ ಲೋಕದಲ್ಲಿಯೇ ಉಪಭೋಗಸಾಧನವು. ಎಂತಹ ದಾನಮಾಡುವನೋ ಅಂತಹ ಫಲವನ್ನೇ ಅನುಭವಿಸುವನು.

೧೦೨. ಭರದ್ವಾಜನು ಹೇಳಿದನು—ಧರ್ಮಕ್ಕೆ ಲಕ್ಷಣವೇನು ? ಯಾವ ಧರ್ಮಾಚರಣೆಯು ಯಾರಿಗೆ ವಿಹಿತವಾಗಿದೆ ? ಧರ್ಮವು ಎಷ್ಟುವಿಧ ? ಅವುಗಳನ್ನೆಲ್ಲಾ ನೀನು ಹೇಳಲು ಅರ್ಹನು. ಆದುದರಿಂದ ನನಗೆ ಹೇಳು.

೧೦೩. ಭೃಗುವು ನುಡಿದನು--ತಮ್ಮ ವರ್ಣಾಶ್ರಮಗಳಿಗೆ ವಿಹಿತವಾದ ಧರ್ಮಗಳನ್ನು ಆಚರಿಸುವ ಮನುಷ್ಯರಿಗೆ ಸ್ವರ್ಗಫಲಪ್ರಾಪ್ತಿಯಾಗುವುದು. ಸ್ವಧರ್ಮಾನುಷ್ಠಾನಮಾಡದವರು ಮೋಹಿತರಾಗಿ ದುಃಖಕ್ಕೀಡಾಗುವರು.

೧೦೪. ಭರದ್ವಾಜನು ಮಾತನಾಡಿದನು—ಪೂರ್ವದಲ್ಲಿ ಬ್ರಹ್ಮರ್ಷಿಯಿಂದ ವಿಧಿಸಲ್ಪಟ್ಟ ನಾಲ್ಕು ಆಶ್ರಮಗಳ ವಿಹಿತಧರ್ಮಗಳನ್ನು ಪ್ರತ್ಯೇಕವಾಗಿ ನನಗೆ ಹೇಳು.

ಭೃಗುರುವಾಚ

**ಪೂರ್ವಮೇವ ಬ್ರಹ್ಮಣಾಲೋಕಿತಮನುತಿಷ್ಠತಾ ಧರ್ಮ-**
**ಸಂರಕ್ಷಣಾರ್ಥಮಾಶ್ರಮಾಶ್ಚತ್ವಾರೋಽಭಿನಿರ್ದಿಷ್ಟಾಃ ॥ ॥ ೧೦೫ ॥**

**ತತ್ರ ಗುರುಕುಲವಾಸಮೇವ ಪ್ರಥಮಮಾಶ್ರಮಮಾಹರಂತಿ**
**ಸಮ್ಯಗತ್ರ ಶೌಚಸಂಸ್ಕಾರನಿಯಮವ್ರತವಿನಿಯತಾತ್ಮಾ ಉಭೇ**
**ಸಂಧ್ಯೇ ಭಾಸ್ಕರಾಗ್ನಿದೈವತಾನ್ಯುಪಸ್ಥಾಯ ವಿಹಾಯ ತದ್ಧಾ-**
**ಲಸ್ಯಂ ಗುರೋರಭಿವಾದನವೇದಾಭ್ಯಾಸಶ್ರವಣಪವಿತ್ರೀಕೃತಾಂ-**
**ತರಾತ್ಮಾ ತ್ರಿಷವಣಮುಪಸ್ಪೃಶ್ಯ ಬ್ರಹ್ಮಚರ್ಯಾಗ್ನಿಪರಿಚರಣ-**
**ಗುರುಶುಶ್ರೂಷಾನಿತ್ಯಭಿಕ್ಷಾಭೈಕ್ಷ್ಯಾದಿ ಸರ್ವನಿವೇದಿತಾಂತ-**
**ರಾತ್ಮಾ ಗುರುವಚನನಿದೇಶಾನುಷ್ಠಾನಾಪ್ರತಿಕೂಲೋ ಗುರು-**
**ಪ್ರಸಾದಲಬ್ಧಸ್ವಾಧ್ಯಾಯತತ್ಪರಃ ಸ್ಯಾತ್ ॥ ॥ ೧೦೬ ॥**

---

೧೦೫. ಭೃಗುವು ಹೇಳಿದನು—ಪೂರ್ವದಲ್ಲಿಯೇ ಬ್ರಹ್ಮನು ಲೋಕನೀತಿಯನ್ನಾಶ್ರಯಿಸಿ ಧರ್ಮಸಂರಕ್ಷಣೆಮಾಡುದಕ್ಕಾಗಿ ನಾಲ್ಕು ಆಶ್ರಮಗಳನ್ನು ನಿರ್ದೇಶಿಸಿದನು.

೧೦೬. ಅವುಗಳಲ್ಲಿ ಗುರುಕುಲವಾಸ (ಬ್ರಹ್ಮಚರ್ಯೆ) ವನ್ನೇ ಮೊದಲನೆಯ ಆಶ್ರಮವೆಂದು ಹೇಳಿರುವರು. ಈ ಆಶ್ರಮದಲ್ಲಿ ಶೌಚ, ಸಂಸ್ಕಾರ, ನಿಯಮವ್ರತಗಳನ್ನು ತಪ್ಪದೇ ಚೆನ್ನಾಗಿ ಆಚರಿಸಿ ಎರಡು ಸಂಧ್ಯಾವಂದನೆಗಳಲ್ಲಿ ಸೂರ್ಯ ಅಗ್ನಿ ದೇವತೆಗಳ ಉಪಸ್ಥಾನಗಳನ್ನು ಮಾಡಿ, ಸೋಮಾರಿತನವನ್ನು ಬಿಟ್ಟು, ಗುರುಗಳಿಗೆ ನಮಸ್ಕಾರ, ವೇದಾಭ್ಯಾಸ, ಶಾಸ್ತ್ರಶ್ರವಣ ಇವುಗಳಿಂದ ಪರಿಶುದ್ಧವಾಗಿ ಮಾಡಲ್ಪಟ್ಟ ಅಂತಃಕರಣವುಳ್ಳವನಾಗಿ, ತ್ರಿಕಾಲಗಳಲ್ಲಿ ಸ್ನಾನ ಮಾಡಿ, ಬ್ರಹ್ಮಚರ್ಯ, ಅಗ್ನಿಪರಿಚರ್ಯೆ, ಗುರುಸೇವೆ, ನಿತ್ಯಭಿಕ್ಷೆ ಮುಂತಾದ ಸಕಲವನ್ನು ಅಂರಾತ್ಮನಿಗೆ ಸಮರ್ಪಿಸಿ, ಗುರುಗಳ ಅಪ್ಪಣೆ ಮತ್ತು ಅನುಷ್ಠಾನಗಳಿಗನುಕೂಲನಾಗಿ ಗುರ್ವನುಗ್ರಹಲಬ್ಧವೇದಶಾಸ್ತ್ರಾಧ್ಯಯನನಿಷ್ಠನಾಗಬೇಕು.

ಭವತಿ ಚಾತ್ರ ಶ್ಲೋಕಃ—

ಗುರುಂ ಯಸ್ತು ಸಮಾರಾಧ್ಯ ದ್ವಿಜೋ ವೇದಮವಾಪ್ನುಯಾತ್ ।
ತಸ್ಯ ಸ್ವರ್ಗಫಲಾವಾಪ್ತಿಃ ಸಿಧ್ಯತೇ ಚಾಸ್ಯಮಾನಸಂ ೧೦೭ ॥

ಇತಿ ಗಾರ್ಹಸ್ಥ್ಯಂ ಖಲು ದ್ವಿತೀಯಮಾಶ್ರಮಂ ವದಂತಿ ತಸ್ಯ ಸದಾಚಾರಲಕ್ಷಣಂ ಸರ್ವಮನುವ್ಯಾಖ್ಯಾಸ್ಯಾಮಃ ಸಮಾವೃತಾನಾಂ ಸದಾಚಾರಾಣಾಂ ಸಹಧರ್ಮಚರ್ಯಫಲಾರ್ಥಿನಾಂ ಗೃಹಾಶ್ರಮೋ ವಿಧೀಯತೇ ॥ ॥ ೧೦೮ ॥

ಧರ್ಮಾರ್ಥಕಾಮಾವಾಪ್ತಿರ್ಹ್ಯತ್ರ ತ್ರಿವರ್ಗಸಾಧನಮಪೇಕ್ಷ್ಯ ಅಗರ್ಹಿತಕರ್ಮಣಾ ಧನಾನ್ಯಾದಾಯ ಸ್ವಾಧ್ಯಾಯೋಪಲಬ್ಧಪ್ರಕರ್ಷೇಣ ವಾ ಬ್ರಹ್ಮರ್ಷಿನಿರ್ಮಿತೇನ ವಾ ಅದ್ಭಿಃ ಸಾಗರಗತೇನ ವಾ ದ್ರವ್ಯನಿಯಮಾಭ್ಯಾಸದೈವತಪ್ರಸಾದೋಪಲಬ್ಧೇನ ವಾ ಧನೇನ ಗೃಹಸ್ಥೋ ಗಾರ್ಹಸ್ಥ್ಯಂ ವರ್ತಯೇತ್ ॥ ॥ ೧೦೯ ॥

---

೧೦೭. ಈ ವಿಷಯದಲ್ಲಿ ಮುಂದಿನ ಶ್ಲೋಕವು ಪ್ರಮಾಣವಾಗುತ್ತದೆ:—ಗುರುಗಳನ್ನು ಆರಾಧಿಸಿ ವೇದಾಭ್ಯಾಸಮಾಡಿದ ಮನುಷ್ಯನಿಗೆ ಸ್ವರ್ಗಫಲವು ಮತ್ತು ಮನೋಭಿಷ್ಟವೂ ಸಹ ಸಿದ್ಧಿಸುವುದು.

೧೦೮. ಗಾರ್ಹಸ್ಥ್ಯವೇ ಎರಡನೆಯ ಆಶ್ರಮವೆಂದು ಹೇಳುತ್ತಾರೆ. ಅದರ ಸದಾಚಾರಾದಿ ಲಕ್ಷಣವನ್ನೆಲ್ಲಾ ನಿರೂಪಿಸುವೆವು—ಸಮಾವರ್ತನ ಸಂಸ್ಕಾರದಿಂದ ಪ್ರಾಪ್ತವಾದ ಸದಾಚಾರಗಳುಳ್ಳ ದಂಪತಿಗಳು ಕೂಡಿ ಧರ್ಮಾಚರಣೆ ಮಾಡಿ ಫಲವನ್ನು ಹೊಂದಬೇಕೆಂದು ಅಪೇಕ್ಷಿಸುವವರಿಗೆ ಗೃಹಸ್ಥಾಶ್ರಮವು ವಿಧಿಸಲ್ಪಟ್ಟಿದೆ.

೧೦೯. ಈ ಗೃಹಸ್ಥಾಶ್ರಮದಲ್ಲಿ ಅನುಷ್ಠಾನಮಾಡಿದ ತ್ರಿವರ್ಗಸಾಧನೆಗಳಿಗೆ ಅನುಗುಣವಾಗಿ ಧರ್ಮ, ಅರ್ಥ, ಕಾಮಗಳ ಲಾಭವಾಗುವುದು. ಗೃಹಸ್ಥನು ಅನಿಷಿದ್ಧಕರ್ಮದಿಂದ ಹಣವನ್ನು ಸಂಪಾದಿಸಿ, ವೇದಾಧ್ಯಯನಲಬ್ಧೋತ್ಕರ್ಷದಿಂದ ಅಥವಾ ಬ್ರಹ್ಮರ್ಷಿನಿರ್ಮಿತೋತ್ಕರ್ಷದಿಂದ ಅಥವಾ ಸಮುದ್ರದಲ್ಲಿರುವ ನೀರು, ದ್ರವ್ಯನಿಯಮಾಭ್ಯಾಸ ದೇವತಾಪ್ರಸಾದಗಳಿಂದ ಬಂದ ಹಣದಿಂದಲಾದರೂ ಗೃಹಕೃತ್ಯವನ್ನು ನಡೆಯಿಸಬೇಕು.

ತದ್ಧಿ ಸರ್ವಾಶ್ರಮಾಣಾಂ ಮೂಲಮುದಾಹರಂತಿ ಗುರುಕುಲ ನಿವಾಸಿನಃ । ಪರಿವ್ರಾಜಕಾಯೇಽನ್ಯೇ ಸಂಕಲ್ಪಿತವ್ರತನಿಯಮ-ಧರ್ಮಾನುಷ್ಠಾನಿನಸ್ತೇಷಾಮಪ್ಯಂತರಾ ಚ ಭಿಕ್ಷಾಬಲಿಸಂವಿ-ಭಾಗಾಃ ಪ್ರವರ್ತಂತೇ ॥ ॥ ೧೧೦ ॥

ವಾನಪ್ರಸ್ಥಾನಾಂ ಚ ದ್ರವ್ಯೋಪಸ್ಕಾರ ಇತಿ । ಪ್ರಾಯಶಃ ಖಲ್ವೇತೇ ಸಾಧವಃ ಸಾಧುಪಥ್ಯೋದನಾಃ ಸ್ವಾಧ್ಯಾಯಪ್ರಸಂಗಿ-ನಸ್ತೀರ್ಥಾಭಿಗಮನದೇಶದರ್ಶನಾರ್ಥಂ ಪೃಥಿವೀಂ ಪರ್ಯಟಂತಿ ॥೧೧೧॥

ತೇಷಾಂ ಪ್ರತ್ಯುತ್ಥಾನಾಭಿಗಮನಮನಸೂಯಾವಾಕ್ಯದಾನ-ಸುಖಸತ್ಕಾರಾಸನಸುಖಶಯನಾಭ್ಯವಹಾರಸತ್ಕ್ರಿಯಾ ಚೇತಿ ॥೧೧೨॥

ಭವತಿ ಚಾತ್ರ ಶ್ಲೋಕಃ—

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿನಿವರ್ತತೇ ।
ಸ ದತ್ವಾ ದುಷ್ಕೃತಂ ತಸ್ಮೈ ಪುಣ್ಯಮಾದಾಯ ಗಚ್ಛತಿ ॥ ೧೧೩ ॥

---

೧೧೦. ಗುರುಕುಲನಿವಾಸಿಗಳು ಅದನ್ನೇ ಆಶ್ರಮಗಳಿಗೆಲ್ಲಾ ಮೂಲವೆಂದು ಹೇಳುತ್ತಾರೆ. ಸನ್ಯಾಸಿಗಳಿಗೂ ಮತ್ತು ಸಂಕಲ್ಪಪೂರ್ವಕವಾಗಿ ವ್ರತ ನಿಯಮಧರ್ಮಗಳನ್ನು ಆಚರಿಸುವ ಇತರರಿಗೂ ಸಹ ಗೃಹಸ್ಥರು ತಮ್ಮ ಹಣದಲ್ಲಿ ಭಿಕ್ಷೆ ಬಲಿಗಳ ರೂಪವಾಗಿ ಭಾಗಕೊಡಬೇಕು.

೧೧೧. ವಾನಪ್ರಸ್ಥರಿಗೆ ಗೃಹಸ್ಥರು ದ್ರವ್ಯಾದಿಗಳಿಂದ ಸತ್ಕರಿಸುವ ಬಗೆಯನ್ನು ಹೇಳುವೆನು—ಪ್ರಾಯಶಃ ಇವರು ಸಾಧುಗಳು, ಒಳ್ಳೆಯ ಪಥ್ಯವಾದ ಆಹಾರವನ್ನು ತಿನ್ನುವವರು, ವೇದಾಧ್ಯಯನದಲ್ಲಿ ಆಸಕ್ತರಾಗಿರುವವರೂ ಆಗಿ ತೀರ್ಥಯಾತ್ರೆ ಮತ್ತು ದೇಶದರ್ಶನಗಳಿಗಾಗಿ ಭೂಮಿಯಲ್ಲಿ ತಿರುಗುತ್ತಿರುವವರು.

೧೧೨. ಪ್ರತ್ಯುತ್ಥಾನಮಾಡಿ ಅವರನ್ನು ಇದಿರುಗೊಳ್ಳುವುದು, ಅಸೂಯೆಯಿಲ್ಲದಿರುವಿಕೆ, ಸವಿನುಡಿ, ಸುಖಸತ್ಕಾರ, ಆಸನ, ಸುಖಶಯನ, ಭೋಜನ ಇವುಗಳಿಂದ ಸತ್ಕರಿಸಬೇಕು.

೧೧೩. ಈ ವಿಷಯದಲ್ಲಿ ಶ್ಲೋಕವು ಪ್ರಮಾಣವಾಗಿದೆ. ಅತಿಥಿಯು ಆತಿಥ್ಯವನ್ನು ಸ್ವೀಕರಿಸದೆ ನಿರಾಶೆಯಿಂದ ಯಾರ ಮನೆಯನ್ನು ಬಿಟ್ಟು ಹೊರ

ಅಪಿ ಚಾತ್ರ ಯಜ್ಞಕ್ರಿಯಾಭಿರ್ದೇವತಾಃ ಪ್ರೀಯಂತೇ
ನಿವಾಪೇನ ಪಿತರಃ ವಿದ್ಯಾಭ್ಯಾಸಶ್ರವಣಧಾರಣೇನ ಋಷಯಃ
ಅಪತ್ಯೋತ್ಪಾದನೇನ ಪ್ರಜಾಪತಿರಿತಿ ॥ ॥ ೧೧೪ ॥

ಶ್ಲೋಕೌ ಚಾತ್ರ ಭವತಃ—
ವಾತ್ಸಲ್ಯಾಃ ಸರ್ವಭೂತೇಭ್ಯೋ ಜಂತೋಃ ಶ್ರೋತ್ರಹಿತಾ ಗಿರಃ ।
ಪರಿತಾಪೋಪಘಾತಶ್ಚ ಪಾರುಷ್ಯಂ ಚಾತ್ರ ಗರ್ಹಿತಂ ॥ ೧೧೫ ॥

ಅವಜ್ಞಾನಮಹಂಕಾರೋ ದಂಭಶ್ಚೈವ ವಿಗರ್ಹಿತಃ ।
ಅಹಿಂಸಾ ಸತ್ಯಮಕ್ರೋಧಂ ಸರ್ವಾಶ್ರಮಗತಂ ತಪಃ ॥ ೧೧೬ ॥

ಅಪಿ ಚಾತ್ರ ಮಾಲ್ಯಾಭರಣವಸ್ತ್ರಾಭ್ಯಂಗನಿತ್ಯೋಪಭೋಗ-
ನೃತ್ಯಗೀತವಾದಿತ್ರಶ್ರುತಿಸುಖನಯನಸ್ನೇಹಾರಾಮಾದರ್ಶನಾ-
ನಾಂ ಪ್ರಾಪ್ತಿರ್ಭಕ್ಷ್ಯಭೋಜ್ಯಲೇಹ್ಯಪೇಯಚೋಷ್ಯಾಣಾಮಭ್ಯ-
ವಹಾರ್ಯಾಣಾಂ ವಿವಿಧಾನಾಮುಪಭೋಗಃ ॥ ೧೧೭ ॥

---

ಡುವನೋ, ಅವನಿಗೆ ಪಾಪವನ್ನು ಕೊಟ್ಟು ಪುಣ್ಯವನ್ನು ತೆಗೆದುಕೊಂಡು ಹೋಗುವನು.

೧೧೪. ಮತ್ತು ಯಜ್ಞಕರ್ಮಗಳಿಂದ ದೇವತೆಗಳನ್ನೂ, ತರ್ಪಣಾದಿಗಳಿಂದ ಪಿತೃಗಳನ್ನೂ, ವಿದ್ಯಾಭ್ಯಾಸಶ್ರವಣಧಾರಣೆಗಳಿಂದ ಋಷಿಗಳನ್ನೂ, ಮಕ್ಕಳನ್ನು ಹುಟ್ಟಿಸುವುದರಿಂದ ಪ್ರಜೇಶ್ವರನನ್ನೂ ತೃಪ್ತಿಪಡಿಸಬೇಕು.

೧೧೫. ಈ ವಿಷಯದಲ್ಲಿ ಎರಡು ಶ್ಲೋಕಗಳು ಸಂವಾದಗಳಾಗಿವೆ—ಸರ್ವಪ್ರಾಣಿಗಳಲ್ಲಿಯೂ ದಯೆ ಮತ್ತು ಕಿವಿಗಿಂಪಾಗುವ ಮಾತುಗಳು ವಿಹಿತವು. ಇತರರನ್ನು ಸಂಕಟಪಡಿಸುವುದು, ಬಡಿಯುವುದು, ಕಠಿನಮಾತನಾಡುವುದೂ ಸಹ ನಿಂದ್ಯವು.

೧೧೬. ಅವಜ್ಞಾನ ಎಂದರೆ ತಿರಸ್ಕಾರ, ಗರ್ವ ಮತ್ತು ಜಂಭ, ಇವುಗಳು ನಿಷಿದ್ಧವು. ಅಹಿಂಸೆ, ಸತ್ಯ, ಅಕ್ರೋಧ ಇವುಗಳು ಆಶ್ರಮಗಳಿಗೆಲ್ಲಾ ವಿಹಿತವಾದ ತಪಸ್ಸು.

೧೧೭-೧೧೮. ಮತ್ತು ಗೃಹಸ್ಥಾಶ್ರಮದಲ್ಲಿ ಪುಷ್ಪಮಾಲಿಕೆ, ಆಭರಣ, ವಸ್ತ್ರ, ಅಭ್ಯಂಜನ, ವಿಷಯೋಪಭೋಗ, ನರ್ತನ, ಸಂಗೀತ ಮತ್ತು

ಸ್ವವಿಹಾರಸಂತೋಷಃ ಕಾಮಸುಖಾವಾಪ್ತಿರಿತಿ ।
ತ್ರಿವರ್ಗಗುಣನಿರ್ವೃತ್ತಿರ್ಯಸ್ಯ ನಿತ್ಯಂ ಗೃಹಾಶ್ರಮೇ ।
ಸ ಸುಖಾನ್ಯನುಭೂಯೇಹ ಶಿಷ್ಟಾನಾಂ ಗತಿಮಾಪ್ನುಯಾತ್ ॥ ೧೧೮ ॥

ಉಂಛವೃತ್ತಿರ್ಗೃಹಸ್ಥೋ ಯಃ ಸ್ವಧರ್ಮಚರಣೇರತಃ ।
ತ್ಯಕ್ತಕಾಮಸುಖಾರಂಭಃ ಸ್ವರ್ಗಸ್ತಸ್ಯ ನ ದುರ್ಲಭಃ ॥ ೧೧೯ ॥

ವಾನಪ್ರಸ್ಥಾಃ ಖಲ್ವಪಿ ಧರ್ಮಮನುಸರಂತಃ ಪುಣ್ಯಾನಿ ತೀರ್ಥಾನಿ ನದೀಪ್ರಸ್ರವಣಾನಿ ಅಭುಕ್ತೇಷ್ವರಣ್ಯೇಷು ಮೃಗವರಾಹಮಹಿಷಶಾರ್ದೂಲವನಗಜಾಕೀರ್ಣೇಷು ತಪಸ್ಯಂತ ಅನುಸಂಚರಂತಿ ॥ ॥ ೧೨೦ ॥

---

ವಾದ್ಯಗಳ ಶ್ರವಣಸುಖ, ದರ್ಶನಸುಖ, ವಿಹಿತವಿಷಯಗಳಲ್ಲಿ ಪ್ರೇಮ, ಸ್ವಸ್ತ್ರೀ ದರ್ಶನಸುಖ, ಭಕ್ಷ್ಯ, ಭೋಜ್ಯ, ಗೊಜ್ಜು, ಪೇಯ, ಚೋಷ್ಯ ಮುಂತಾದ ನಾನಾ ವಿಧವಾದ ತಿನ್ನುವ ಪದಾರ್ಥಗಳ ಉಪಭೋಗ, ವಿಹಾರಸುಖ, ಕಾಮ ಸುಖ ಇವುಗಳೆಲ್ಲವೂ ಪ್ರಾಪ್ತವಾಗುತ್ತದೆ. ಗೃಹಸ್ಥಾಶ್ರಮದಲ್ಲಿ ನಿತ್ಯವೂ ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗಸಾಧನವಾದ ಗುಣಗಳನ್ನು ಸಂಪಾದಿಸುವವನು ಇಲ್ಲಿ ಸುಖಗಳನ್ನನುಭವಿಸಿ, ಉಳಿದವುಗಳಿಗೆ ಪರಲೋಕದಲ್ಲಿ ಫಲವನ್ನು ಹೊಂದುವನು.

೧೧೯. ಉಂಛವೃತ್ತಿಯಿಂದ ಜೀವಿಸುವ, ತನ್ನ ವರ್ಣಾಶ್ರಮಗಳಿಗೆ ವಿಹಿತವಾಗಿರುವ ಧರ್ಮ್ಮಾಚರಣೆಯಲ್ಲಿ ಆಸಕ್ತನಾಗಿರುವ, ಕಾಮಸುಖಪ್ರಯತ್ನ ಗಳನ್ನು ತ್ಯಜಿಸಿರುವ ಗೃಹಸ್ಥನಿಗೆ ಸ್ವರ್ಗವು ಸುಲಭವಾಗಿ ದೊರೆಯುತ್ತದೆ.

೧೨೦. ವಾನಪ್ರಸ್ಥರೂ ಸಹ ಧರ್ಮ, ಪುಣ್ಯಕರ ತೀರ್ಥಗಳು ಮತ್ತು ನದೀ ಪ್ರಸ್ರವಣಗಳು ಇವುಗಳನ್ನಾಶ್ರಯಿಸಿದವರಾಗಿ ಜಿಂಕೆ, ಹಂದಿ, ಎಮ್ಮೆ, ಹುಲಿ, ಕಾಡಾನೆ ಇವುಗಳಿಂದ ತುಂಬಿದ ಅಪೂರ್ವವಾದ ಕಾಡುಗಳಲ್ಲಿ ತಪಸ್ಸು ಮಾಡುತ್ತಾ ಸಂಚರಿಸುತ್ತಿರುವರು.

ತ್ಯಕ್ತಗ್ರಾಮ್ಯವಸ್ತ್ರಾಭ್ಯವಹಾರೋಪಭೋಗಾಃ ವನ್ಯೌಷಧಿಫಲಮೂಲಪರ್ಣಪರಿಮಿತವಿಚಿತ್ರನಿಯತಾಹಾರಾಃ ಸ್ಥಾನಾಸನಿನೋ ಭೂಪಾಷಾಣಸಿಕತಾಶರ್ಕರಾವಾಲುಕಾಭಸ್ಮಶಾಯಿನಃ ಕಾಶಕುಶಚರ್ಮವಲ್ಕಲಸಂವೃತಾಂಗಾಃ ಕೇಶಶ್ಮಶ್ರುನಖರೋಮಧಾರಿಣೋ ನಿಯತಕಾಲೋಪಸ್ಪರ್ಶನಾಃ ಶುಷ್ಕಬಲಿಹೋಮಕಾಲಾನುಷ್ಠಾಯಿನಃ ಸಮಿತ್ಕುಶಕುಸುಮಾಪಹಾರಸಂಮಾರ್ಜನಲಬ್ಧವಿಶ್ರಾಮಾಃ ಶೀತೋಷ್ಣಪವನವಿಷ್ಕಂಭವಿಭಿನ್ನಸರ್ವತ್ವಚೋ ವಿವಿಧನಿಯಮಯೋಗಚರ್ಯಾನುಷ್ಠಾನವಿಹಿತಪರಿಶುಷ್ಕಮಾಂಸಶೋಣಿತತ್ವಗಸ್ಥಿಭೂತಾ ಧೃತಿಪರಾಃ ಸತ್ವಯೋಗಾಚ್ಛರೀರಾಣ್ಯುದ್ವಹಂತೇ ॥ ॥ ೧೨೧ ॥

---

೧೨೧. ಗ್ರಾಮದಲ್ಲಿ ಮಾಡಿದ ಬಟ್ಟೆ, ಬೋಜನ, ಮುಂತಾದ ಉಪಭೋಗಸಾಧನಗಳನ್ನು ಬಿಟ್ಟು ಕಾಡಿನಲ್ಲಿ ಬೆಳೆದ ಧಾನ್ಯ ಹಣ್ಣು, ಗೆಡ್ಡೆ, ಎಲೆ ಇವುಗಳನ್ನೊಳಗೊಂಡ ವಿಲಕ್ಷಣವಾದ ಕ್ಲ್ರುಪ್ತಾಹಾರವನ್ನು ಸೇವಿಸುತ್ತಾ ಭೂಮಿಯನ್ನೇ ಆಸನವಾಗಿ ಮಾಡಿಕೊಂಡು ನೆಲ, ಕಲ್ಲು, ಮರಳಿನ ರಾಶಿ ಮತ್ತು ಬೂದಿಗಳಮೇಲೆ ಮಲಗಿಕೊಳ್ಳುತ್ತಾ, ಕಾಚೀಹುಲ್ಲು, ದರ್ಭೆ, ಚರ್ಮ, ಚೀರವಸ್ತ್ರ ಇವುಗಳನ್ನು ಹೊದ್ದುಕೊಂಡು ತಲೆಯಕೂದಲು, ಮೀಸೆ, ಉಗುರು, ಮುಖದಕೂದಲು ಇವುಗಳನ್ನು ಬೆಳೆಸಿ, ನಿಯಮಿತಸಮಯದಲ್ಲಿ ಜಲೋಪಸ್ಪರ್ಶಮಾಡುತ್ತಾ, ವಿಹಿತಕಾಲದಲ್ಲಿ ಶುಷ್ಕಬಲಿ ಮತ್ತು ಹೋಮಗಳನ್ನನುಷ್ಠಾನಮಾಡುವವರಾಗಿ, ಸಮಿತ್ತು, ದರ್ಭೆ ಮತ್ತು ಪುಷ್ಪ ಇವುಗಳನ್ನು ತೆಗೆದುಕೊಂಡು ಬರುವುದು, ಕಸಬಳಿಯುವುದು ಈ ಕಾರ್ಯಗಳಿಂದ ಪ್ರಾಪ್ತವಾದ ವಿಶ್ರಾಂತಿಯುಳ್ಳವರಾಗಿ ಚಳಿ, ಗಾಳಿ, ಬಿಸಿಲುಗಳಿಂದ ಬಿರಿದ ಚರ್ಮಗಳುಳ್ಳವರಾಗಿ ನಾನಾ ವಿಧನಿಯಮ, ಯೋಗಾಭ್ಯಾಸ ಇವುಗಳ ಆಚರಣೆಯಿಂದ ಒಣಗಿದ ರಕ್ತಮಾಂಸಚರ್ಮಗಳುಳ್ಳವರಾಗಿ ಧೈರ್ಯವನ್ನುಹೊಂದಿ ಸಾತ್ವಿಕತೇಜಸ್ಸಿನಿಂದ ಶರೀರಗಳನ್ನು ಧರಿಸಿರುತ್ತಾರೆ.

ಯಸ್ತ್ವೇತಾಂ ನಿಯತಚರ್ಯಾಂ ಬ್ರಹ್ಮರ್ಷಿವಿಹಿತಾಂ ಚರೇತ್ ।
ಸ ದಹೇದಗ್ನಿವದ್ದೋಷಾನ್ ಜಯೇಲ್ಲೋಕಾಂಶ್ಚ ದುರ್ಜಯಾನ್ ॥೧೨೨॥

ಪರಿವ್ರಾಜಕಾನಾಂ ಪುನರಾಚಾರಸ್ತದ್ಯಥಾ—

ವಿಮುಚ್ಯಾಗ್ನಿಂ ಧನಕಲತ್ರಪರಿಬರ್ಹಸಂಗೇಷ್ವಾತ್ಮನಃ ಸ್ನೇಹಪಾಶಾನವಧೂಯ ಪರಿವ್ರಜಂತಿ ಸಮಲೋಷ್ಟಾಶ್ಮಕಾಂಚನಾಸ್ತ್ರಿವರ್ಗಪ್ರವೃತ್ತೇಷ್ವಸಕ್ತಬುದ್ಧಯಃ ॥ ೧೨೩ ॥

ಅರಿಮಿತ್ರೋದಾಸೀನಾನಾಂ ತುಲ್ಯದರ್ಶನಾಃ ಸ್ಥಾವರಜರಾಯುಜಾಂಡಜಸ್ವೇದಜಾನಾಂ ಭೂತಾನಾಂ ವಾಙ್ಮನಃಕರ್ಮಭಿರನಭಿದ್ರೋಹಿಣೋಽನಿಕೇತಾಃ ಪರ್ವತಪುಲಿನವೃಕ್ಷಮೂಲದೇವಾಯತನಾನ್ಯನುಸಂಚರಂತೋ ವಾಸಾರ್ಥಮುಪೇಯುರ್ನಗರಂ ಗ್ರಾಮಂ ವಾ ನ ಕ್ರೋಧದರ್ಪಲೋಭಮೋಹಕಾರ್ಪಣ್ಯದಂಭಪರಿವಾದಾಭಿಮಾನನಿವೃತ್ತಹಿಂಸಾ ಇತಿ ॥ ॥ ೧೨೪ ॥

---

೧೨೨. ಬ್ರಹ್ಮರ್ಷಿಯಿಂದ ವಿಧಿಸಲ್ಪಟ್ಟ ಈ ಕ್ಲಪ್ತಚರ್ಯೆಯನ್ನು ಆಚರಿಸುವವನು ಬೆಂಕಿಯಂತೆ ದೋಷಗಳನ್ನು ಸುಡುವನು ಮತ್ತು ಜಯಿಸಲಶಕ್ಯವಾದ ಲೋಕಗಳನ್ನು ಜಯಿಸುವನು.

೧೨೩. ಸನ್ಯಾಸಿಗಳ ಧರ್ಮವಾವುದೆಂದರೆ—ಅಗ್ನಿಯನ್ನು ತ್ಯಜಿಸಿ ಹಣ ಹೆಂಡತಿ, ಪರಿವಾರಸಂಗಗಳಲ್ಲಿ ತನಗಿದ್ದ ಅಭಿಮಾನವೆಂಬ ಬಂಧನವನ್ನು ಕಿತ್ತು ಹಾಕಿ ಸನ್ಯಾಸಾಶ್ರಮವನ್ನು ಸ್ವೀಕರಿಸುವರು. ಅವರು ಕಟ್ಟಿಗೆ, ಕಲ್ಲು, ಸುವರ್ಣ ಇವುಗಳನ್ನು ಸಮಾನವಾಗಿ ಎಂದರೆ ಕಟ್ಟಿಗೆ, ಕಲ್ಲುಗಳಂತೆ ಸುವರ್ಣವೂ ಹೇಯವೆಂದು ತಿಳಿದು, ಧರ್ಮಾರ್ಥಕಾಮಗಳೆಂಬ ತ್ರಿವರ್ಗಸಾಧನಗಳಲ್ಲಿ ಆಸಕ್ತರಾಗದೇ ಏಕಾಂತ ಭಕ್ತರಾಗುವರು.

೧೨೪. ಅವರು ಶತ್ರು, ಮಿತ್ರ ಉದಾಸೀನರಾದವರನ್ನು ಸಮವಾಗಿ

ಭವಂತಿ ಚಾತ್ರ ಶ್ಲೋಕಾಃ—

ಅಭಯಂ ಸರ್ವಭೂತೇಭ್ಯೋ ದತ್ವಾ ಯಶ್ಚರತೇ ಮುನಿಃ ।
ನ ತಸ್ಯ ಸರ್ವಭೂತೇಭ್ಯೋ ಭಯಮುತ್ಪದ್ಯತೇ ಕ್ವಚಿತ್ ॥ ೧೨೫ ॥

ಕೃತ್ವಾಗ್ನಿಹೋತ್ರಂ ಸ್ವಶರೀರಸಂಸ್ಥಂ
ಶಾರೀರಮಗ್ನಿಂ ಸ್ವಮುಖೇ ಜುಹೋತಿ ।
ವಿಪ್ರಸ್ತು ಭೈಕ್ಷ್ಯೋಪಗತೈರ್ಹವಿರ್ಭಿಃ
ಚಿತಾಗ್ನಿನಾ ಸಂವ್ರಜತೇ ಹಿ ಲೋಕಾನ್ ॥ ೧೨೬ ॥

---

ನೋಡುತ್ತಾ, ಸ್ಥಾವರ, (ವೃಕ್ಷಾದಿಗಳು) ಮನುಷ್ಯರು, ಕೋಳಿ ಮುಂತಾದುವು ಕ್ರಿಮಿದಂಶಾದಿಗಳು ಇವುಗಳಿಗೆ ವಾಕ್ಕು, ಮನಸ್ಸು, ಕ್ರಿಯೆ ಇವುಗಳಿಂದ ದ್ರೋಹ ಮಾಡದಂತೆ ನಿಯತವಾಸಸ್ಥಾನವಿಲ್ಲದೆ, ಬೆಟ್ಟ, ನದಿಯತೀರ, ವೃಕ್ಷದಮೂಲ ದೇವಾಲಯ ಇವುಗಳಲ್ಲಿ ಸಂಚರಿಸುತ್ತಾ ವಾಸಕ್ಕೋಸ್ಕರ ಹಳ್ಳಿ ಅಥವಾ ಪಟ್ಟಣ ಗಳಿಗೆ ಹೋಗದಂತೆ, ಕ್ರೋಧ, ದರ್ಪ, ಲೋಭ, ಮೋಹ. ದೈನ್ಯ, ಜಂಭ, ನಿಂದೆ ಮತ್ತು ಅಭಿಮಾನ ಇವುಗಳನ್ನು ಬಿಟ್ಟು ತತ್ಪ್ರಯುಕ್ತವಾದ ಬಾಧೆಗೀಡಾಗ ದಂತೆ ಇರಬೇಕು.

೧೨೫. ಈ ವಿಷಯದಲ್ಲಿ ಶ್ಲೋಕಗಳೂ ಇವೆ—ಸರ್ವಪ್ರಾಣಿಗಳಿಗೂ ಅಭಯಕೊಟ್ಟು ಸಂಚರಿಸುವ ಮುನಿಗೆ ಯಾವ ದೇಶಕಾಲಗಳಲ್ಲಿಯೂ ಯಾವ ಪ್ರಾಣಿಯಿಂದಲೂ ಭಯವುಂಟಾಗುವುದಿಲ್ಲ.

೧೨೬. ಅಗ್ನಿಹೋತ್ರವನ್ನು ತನ್ನ ಶರೀರದೊಳಗಿರುವಂತೆ ಮಾಡಿ ಶರೀ ರದಲ್ಲಿರುವ ಅಗ್ನಿಯನ್ನು ತನ್ನ ಬಾಯಿಯಲ್ಲಿ ಹೋಮಮಾಡುವನು. ಬ್ರಾಹ್ಮಣ ನಾದರೋ ಭಿಕ್ಷಾಟನದಿಂದ ಲಭಿಸಿದ ಹವಿಸ್ಸುಗಳನ್ನು ಕೊಟ್ಟು ಚಿತಿಸ್ಥವಾದ ಅಗ್ನಿಯಿಂದ ಉತ್ತಮಲೋಕಗಳಿಗೆ ಹೋಗುತ್ತಾನೆ.

**ನ್ಯೋಕ್ತಾಶ್ರಮಂ ಯಶ್ಚರತೇ ಯಥೋಕ್ತಂ**
**ಶುಚಿಸ್ಸಸಂಕಲ್ಪಿತಯುಕ್ತಬುದ್ಧಿಃ ।**
**ಅನಿಂಧನಂ ಜ್ಯೋತಿರಿವ ಪ್ರಶಾಂತಂ**
**ಸ ಬ್ರಹ್ಮಲೋಕಂ ಶ್ರಯತೇ ದ್ವಿಜಾತಿಃ ॥ ೧೨೭ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ದ್ವಿತೀಯಪಾದೇ ಭೃಗುಭರದ್ವಾಜಸಂವಾದೇ ಬ್ರಾಹ್ಮಣಾಚಾರನಿರೂಪಣಂ ನಾಮ ತ್ರಿಚತ್ವಾರಿಂಶೋಽಧ್ಯಾಯಃ**

---

೧೨೭. ಪರಿಶುದ್ಧನಾದ, ತನ್ನ ಸಂಕಲ್ಪಾನುಸಾರ ಯುಕ್ತಬುದ್ಧಿಯುಳ್ಳ, ವಿಧಾನೋಕ್ತಪ್ರಕಾರ ಸನ್ಯಾಸಾಶ್ರಮವನ್ನು ಸ್ವೀಕರಿಸುವ ದ್ವಿಜನು ಕಟ್ಟಿಗೆ ಮುಂತಾದುವಿಲ್ಲದ ಅಗ್ನಿಯಂತೆ ಪ್ರಶಾಂತವಾದ ಬ್ರಹ್ಮಲೋಕವನ್ನು ಆಶ್ರಯಿಸುವನು.

ಇಂತು ಶ್ರೀನಾರದಪುರಾಣದೊಳು ಪೂರ್ವಭಾಗ ದ್ವಿತೀಯಪಾದದಲ್ಲಿ ಭೃಗು-ಭರದ್ವಾಜ ಸಂವಾದರೂಪವಾದ ಬ್ರಾಹ್ಮಣಾಚಾರ ನಿರೂಪಣೆಯೆಂಬ ನಲವತ್ತುಮೂರನೆಯ ಅಧ್ಯಾಯವು ಮುಗಿದುದು.

## ಕಥಾಸಾರಾಂಶ

ಭರದ್ವಾಜನು ಶರೀರದಲ್ಲಿ ಪಂಚಭೂತಾತಿರಿಕ್ತವಾದ ಜೀವನ ಆವಶ್ಯಕತೆಯ ವಿಷಯವನ್ನು ಕುರಿತು ಪ್ರಶ್ನೆಮಾಡಿದನು. ಭೃಗುವು ಪಂಚಭೂತಗಳ ಸ್ಥಿತಿ, ಜೀವನ ಆವಶ್ಯಕತೆ ಮುಂತಾದುವನ್ನು ಅನೇಕ ದೃಷ್ಟಾಂತಗಳಿಂದ ವಿವರಿಸಿ, ಮರಣಾನಂತರ ಜೀವನಸ್ಥಿತಿಯನ್ನೂ ವಿಶದಪಡಿಸಿ, ಬ್ರಾಹ್ಮಣಾದಿ ಚತುರ್ವರ್ಣಸೃಷ್ಟಿಪ್ರಕಾರವನ್ನೂ ಹೇಳಿ ವರ್ಣಭೇದ, ಆಶ್ರಮಭೇದ ಇವುಗಳನ್ನೂ, ಅದರ ಧರ್ಮಗಳನ್ನೂ ವಿವೇಚನೆಮಾಡಿ, ವಿಸ್ತಾರವಾಗಿ ನಿರೂಪಿಸಿರುವನು.

## ಚತುಶ್ಚತ್ವಾರಿಂಶೋಽಧ್ಯಾಯಃ

### ಭರದ್ವಾಜ ಉವಾಚ

**ಅಸ್ಮಾಲ್ಲೋಕಾತ್ಪರೋ ಲೋಕಃ ಶ್ರೂಯತೇ ನೋಪಲಭ್ಯತೇ ।**
**ತಮಹಂ ಜ್ಞಾತುಮಿಚ್ಛಾಮಿ ತದ್ಭವಾನ್ವಕ್ತುಮರ್ಹತಿ ॥ ೧ ॥**

### ಭೃಗುರುವಾಚ

**ಉತ್ತರೇ ಹಿಮವತ್ಪಾರ್ಶ್ವೇ ಪುಣ್ಯೇ ಸರ್ವಗುಣಾನ್ವಿತೇ ।**
**ಪುಣ್ಯಃ ಕ್ಷೇಮ್ಯಶ್ಚ ಕಾಮ್ಯಶ್ಚ ಸ ಪರೋ ಲೋಕ ಉಚ್ಯತೇ ॥ ೨ ॥**

**ತತ್ರ ಹ್ಯಪಾಪಕರ್ಮಾಣಃ ಶುಚಯೋಽತ್ಯಂತನಿರ್ಮಲಾಃ ।**
**ಲೋಭಮೋಹಪರಿತ್ಯಕ್ತಾ ಮಾನವಾ ನಿರುಪದ್ರವಾಃ ॥ ೩ ॥**

---

## ನಲವತ್ತನಾಲ್ಕನೆಯ ಅಧ್ಯಾಯವು

೧. ಭರದ್ವಾಜನು ಹೇಳಿದನು—ಈ ಲೋಕಕ್ಕಿಂತ ಭಿನ್ನವಾದ ಉತ್ತಮಲೋಕವಿದೆಯೆಂದು ಕೇಳಿರುವೆನು, ಆದರೆ ಅದು ಕಾಣಿಸುವುದಿಲ್ಲ. ಅದನ್ನು ತಿಳಿಯಲು ಇಚ್ಛಿಸುವೆನು. ಆ ವಿಷಯವನ್ನು ನೀನು ನನಗೆ ಹೇಳು.

೨. ಭೃಗುವು ಹೇಳಿದನು—ಉತ್ತರದಿಕ್ಕಿನಲ್ಲಿ ಪುಣ್ಯಕರವು, ಸಕಲಗುಣಗಳಿಂದ ಕೂಡಿರುವುದೂ ಆಗಿರುವ ಹಿಮಾಲಯ ಪರ್ವತದ ಪಕ್ಕದಲ್ಲಿ ಇರುವ ಪುಣ್ಯ, ಕ್ಷೇಮ ಮತ್ತು ಇಷ್ಟಾರ್ಥಗಳಿಗೆ ಸಾಧನವಾದ ಲೋಕವು ಪರಲೋಕವೆಂದು ಉಕ್ತವಾಗಿದೆ.

೩. ಅಲ್ಲಿ ಪಾಪಕೃತ್ಯವನ್ನು ಮಾಡದಿರುವ ಶುದ್ಧರು, ಆತ್ಯಂತಿಕವಾಗಿ ಕಲ್ಮಷವಿಲ್ಲದಿರುವ, ಲೋಭ, ಮೋಹಗಳನ್ನು ಬಿಟ್ಟಿರುವ, ಉಪದ್ರವಶೂನ್ಯರಾದ ಮನುಷ್ಯರಿರುವರು.

ಸ ಸ್ವರ್ಗಸದೃಶೋ ದೇಶಃ ತತ್ರ ಹ್ಯುಕ್ತಾಃ ಶುಭಾ ಗುಣಾಃ ।
ಕಾಲೇ ಮೃತ್ಯುಃ ಪ್ರಭವತಿ ಸ್ಪೃಶಂತಿ ವ್ಯಾಧಯೋ ನ ಚ ॥ ೪ ॥

ನ ಲೋಭಃ ಪರದಾರೇಷು ಸ್ವದಾರನಿರತೋ ಜನಃ ।
ನಾನ್ಯೋ ಹಿ ವಧ್ಯತೇ ತತ್ರ ದ್ರವ್ಯೇಷು ಚ ನ ವಿಸ್ಮಯಃ ॥ ೫ ॥

ಪರೋ ಹ್ಯಧರ್ಮೋ ನೈವಾಸ್ತಿ ಸಂದೇಹೋ ನಾಪಿ ಜಾಯತೇ ।
ಕೃತಸ್ಯ ತು ಫಲಂ ತತ್ರ ಪ್ರತ್ಯಕ್ಷಮುಪಲಭ್ಯತೇ ॥ ೬ ॥

ಯಾನಾಸನಾಶನೋಪೇತಾಃ ಪ್ರಾಸಾದಭವನಾಶ್ರಯಾಃ ।
ಸರ್ವಕಾಮೈರ್ವೃತಾಃ ಕೇಚಿದ್ಧೇಮಾಭರಣಭೂಷಿತಾಃ ॥ ೭ ॥

ಪ್ರಾಣಧಾರಣಮಾತ್ರಂ ತು ಕೇಷಾಂಚಿದುಪಪದ್ಯತೇ ।
ಧರ್ಮೇಣ ಮಹತಾ ಕೇಚಿತ್ಕುರ್ವಂತಿ ಪ್ರಾಣಧಾರಣಂ ॥ ೮ ॥

---

೪. ಆ ಪ್ರದೇಶವು ಸ್ವರ್ಗಕ್ಕೆ ಸಮಾನವು, ಅಲ್ಲಿ ಶುಭಗುಣಗಳೇ ಇರುತ್ತವೆ. ಅಲ್ಲಿರುವವರಿಗೆ ಯುಕ್ತಕಾಲದಲ್ಲಿ ಮರಣವುಂಟಾಗುವುದು. ಅಲ್ಲಿ ರೋಗಗಳ ಸಂಪರ್ಕವಿಲ್ಲ.

೫. ಅಲ್ಲಿನ ಜನರು ಪರಸ್ತ್ರೀಯರನ್ನು ಆಶಿಸುವುದಿಲ್ಲ. ಸ್ವಪತ್ನೀರತರಾಗಿರುವರು. ಇನ್ನೊಬ್ಬನನ್ನು ಹಿಂಸಿಸುವುದಿಲ್ಲ. ದ್ರವ್ಯಗಳಲ್ಲಿ ಆಶ್ಚರ್ಯವಿಲ್ಲ ಎಂದರೆ ದ್ರವ್ಯವನ್ನು ದೊಡ್ಡದೆಂದು ತಿಳಿದು ಅದನ್ನು ಆಶಿಸುವುದಿಲ್ಲ.

೬. ಅಲ್ಲಿ ಅಧರ್ಮವಂತೂ ಇಲ್ಲವೇ ಇಲ್ಲ. ಸಂಶಯವೂ ಹುಟ್ಟುವುದಿಲ್ಲ. ಮಾಡಿದ ಕರ್ಮಗಳಿಗೆ ಪ್ರತ್ಯಕ್ಷವಾಗಿ ಫಲವು ಕಾಣುತ್ತದೆ.

೭. ಅಲ್ಲಿ ಉಪ್ಪರಿಗೆ ಮನೆಯಲ್ಲಿ ವಾಸಿಸುವವರಾಗಿ, ವಾಹನ, ಆಸನ, ಆಹಾರ ಇವುಗಳಿಂದ ಯುಕ್ತರಾಗಿ ಸಕಲೇಷ್ಟಸಿದ್ಧಿಯನ್ನು ಪಡೆದು ಕೆಲವರು ಬಂಗಾರದ ಆಭರಣಗಳಿಂದ ಅಲಂಕೃತರಾಗಿರುವರು.

೮. ಅಲ್ಲಿ ಕೆಲವರು ಪ್ರಾಣವನ್ನು ಮಾತ್ರ ಧರಿಸಿರುವರು. ಮಹತ್ತಾದ ಧರ್ಮದಿಂದಲೇ ಕೆಲವರು ಪ್ರಾಣಧಾರಣೆಯನ್ನು ಮಾಡುವರು.

ಇಹ ಧರ್ಮಪರಾಃ ಕೇಚಿತ್ಕೇಚಿನ್ನೈಷ್ಕೃತಿಕಾ ನರಾಃ ।
ಸುಖಿತಾ ದುಃಖಿತಾಃ ಕೇಚಿನ್ನಿರ್ಧನಾ ಧನಿನೋಽಪರೇ ॥ ೯ ॥

ಇಹ ಶ್ರಮೋ ಭಯಂ ಮೋಹಃ ಕ್ಷುಧಾ ತೀವ್ರಾ ಚ ಜಾಯತೇ ।
ಲೋಭಶ್ಚಾರ್ಥಕೃತೋ ನೃಣಾಂ ಯೇನ ಮುಹ್ಯಂತ್ಯಪಂಡಿತಾಃ ॥ ೧೦ ॥

ಯಸ್ತದ್ವೇದೋಭಯಂ ಪ್ರಾಜ್ಞಃ ಪಾಪ್ಮನಾ ನ ಸ ಲಿಪ್ಯತೇ ।
ಸೋಪಧಂ ನಿಕೃತಿಃ ಸ್ತೇಯಂ ಪರಿವಾದೋಽಭ್ಯಸೂಯತಾ ॥ ೧೧ ॥

ಪರೋಪಘಾತೋ ಹಿಂಸಾ ಚ ಪೈಶುನ್ಯಮನೃತಂ ತಥಾ
ಏತಾನ್ಸಂಸೇವತೇ ಯಸ್ತು ತಪಸ್ತಸ್ಯ ಪ್ರಹೀಯತೇ ॥ ೧೨ ॥

ಯಸ್ತ್ವೇತಾನಾಚರೇದ್ವಿದ್ವಾನ್ನ ತಪಸ್ತಸ್ಯ ವರ್ಧತೇ ।
ಇಹ ಚಿಂತಾ ಬಹುವಿಧಾ ಧರ್ಮಾಽಧರ್ಮಸ್ಯ ಕರ್ಮಣಃ ॥ ೧೩ ॥

---

೯. ಇಲ್ಲಿ ಕೆಲವರು ಧರ್ಮಪರರು. ಕೆಲವು ಜನರು ಅಧರ್ಮಪರರು. ಕೆಲವರು ಸುಖದುಃಖಯುತರು. ಕೆಲವರು ಬಡವರು. ಇತರರು ಧನಿಕರು.

೧೦. ಈ ಲೋಕದಲ್ಲಿ ಶ್ರಮ, ಭಯ, ಅಜ್ಞಾನ ಹೆಚ್ಚಾದ ಹಸಿವೂ ಸಹ ಉಂಟಾಗುತ್ತವೆ. ಅಜ್ಞಾನಿಗಳು ಮೋಹಪಡುವ ಹಣಕ್ಕಾಗಿ ಜನರು ಆಶೆಪಡುವರು.

೧೧-೧೨. ಈ ಎರಡನ್ನೂ ತಿಳಿದಿರುವವನು ಪಾಪಲೇಪವನ್ನು ಹೊಂದುವುದಿಲ್ಲ. ಪರದೋಷಾನ್ವೇಷಣೆ, ಕಪಟ, ಚೌರ್ಯ, ದೂಷಣೆ, ಹೊಟ್ಟೆ ಕಿಚ್ಚು, ಪರೋಪದ್ರವ, ಹಿಂಸೆ, ಚಾಡಿಹೇಳುವುದು ಮತ್ತು ಸುಳ್ಳು ಇವು ಗಳನ್ನಾಚರಿಸುವವನ ತಪಸ್ಸು ಕ್ಷೀಣವಾಗುತ್ತದೆ.

೧೩. ಜ್ಞಾನಿಯಾದವನು ಇವುಗಳನ್ನಾಚರಿಸಿದರೂ ಅವನ ತಪಸ್ಸು ವೃದ್ಧಿಯಾಗುವುದಿಲ್ಲ. ಈ ಲೋಕದಲ್ಲಿ ಧರ್ಮ, ಅಧರ್ಮ ಮತ್ತು ಕರ್ಮ ಎಂಬೀ ವಿಷಯಗಳಲ್ಲಿ ನಾನಾವಿಧವಾದ ಚಿಂತೆಯು ಸಂಭವಿಸುತ್ತದೆ.

**ಕರ್ಮಭೂಮಿರಿಯಂ ಲೋಕೇ ಇಹ ಕೃತ್ವಾ ಶುಭಾಶುಭಂ ।**
**ಶುಭೈಃ ಶುಭಮಾಪ್ನೋತಿ ತಥಾಽಶುಭಮಥಾನ್ಯಥಾ ॥ ೧೪ ॥**

**ಇಹ ಪ್ರಜಾಪತಿಃ ಪೂರ್ವಂ ದೇವಾಸ್ಸರ್ಷಿಗಣಾಸ್ತಥಾ ।**
**ಇಷ್ಟೇಷ್ಟತಪಸಃ ಪೂತಾ ಬ್ರಹ್ಮಲೋಕಮುಪಾಶ್ರಿತಾಃ ॥ ೧೫ ॥**

**ಉತ್ತರಃ ಪೃಥಿವೀಭಾಗಃ ಸರ್ವಃ ಪುಣ್ಯತಮಃ ಶುಭಃ ।**
**ಇಹಸ್ಥಾಸ್ತತ್ರ ಜಾಯಂತೇ ಯೇ ವೈ ಪುಣ್ಯಕೃತೋ ಜನಾಃ ॥ ೧೬ ॥**

**ಯದಿ ಸತ್ಕಾರಮಿಚ್ಛಂತಿ ತಿರ್ಯಗ್ಯೋನಿಷು ಚಾಪರೇ ।**
**ಕ್ಷೀಣಾಯುಷಸ್ತಥಾಚಾನ್ಯೇ ನಶ್ಯಂತಿ ಪೃಥಿವೀತಲೇ ॥ ೧೭ ॥**

**ಅನ್ಯೋನ್ಯಭಕ್ಷಣಾಸಕ್ತಾ ಲೋಭಮೋಹಸಮನ್ವಿತಾಃ ।**
**ಇಹೈವ ಪರಿವರ್ತಂತೇ ನ ಚ ಯಾಂತ್ಯುತ್ತರಾಂ ದಿಶಂ ॥ ೧೮ ॥**

---

೧೪. ಲೋಕಗಳಲ್ಲಿ ಇದೇ ಕರ್ಮಭೂಮಿಯು. ಇಲ್ಲಿ ವಿಹಿತನಿಷಿದ್ಧ ಕರ್ಮಗಳನ್ನು ಮಾಡಿ ವಿಹಿತಕರ್ಮಗಳಿಂದ ಶುಭಫಲವನ್ನೂ ನಿಷಿದ್ಧಕರ್ಮ ದಿಂದ ಅಶುಭಫಲವನ್ನೂ ಸಹ ಹೊಂದುತ್ತಾನೆ.

೧೫. ಈ ಲೋಕದಲ್ಲಿ ಪ್ರಜಾಪತಿಯು, ದೇವತೆಗಳು, ಋಷಿಗಳು ಪೂರ್ವಕಾಲದಲ್ಲಿ ಇಷ್ಟದೇವತೆಯನ್ನು ಕುರಿತು ತಪಸ್ಸುಮಾಡಿ ಅದರಿಂದ ಪರಿ ಶುದ್ಧರಾಗಿ ಬ್ರಹ್ಮಲೋಕವನ್ನು ಪಡೆದರು.

೧೬. ಉತ್ತರಪೃಥವೀಭಾಗವೆಲ್ಲವೂ ಪುಣ್ಯತಮ ಮತ್ತು ಮಂಗಳ ಕರವು. ಇಲ್ಲಿ ಪುಣ್ಯಮಾಡಿದ ಜನರು ಅಲ್ಲಿ ಹುಟ್ಟುತ್ತಾರೆ.

೧೭. ಅಲ್ಲಿ ಸತ್ಕಾರವನ್ನಿಚ್ಛಿಸುವವರು ಈಲೋಕದಲ್ಲಿ ತಿರ್ಯಂಗ್ಜಂತು ಗಳಾಗಿಯಾದರೂ ಹುಟ್ಟಲು ಆಶಿಸುತ್ತಾರೆ. ಇನ್ನು ಕೆಲವರು ಕ್ಷೀಣಾಯುಷ್ಕ ರಾಗಿ ಭೂಲೋಕದಲ್ಲಿಯೇ ನಾಶವಾಗುವರು.

೧೮. ಅವರು ಪರಸ್ಪರ ಭಕ್ಷಣೆಮಾಡಬೇಕೆಂದು ಅಪೇಕ್ಷೆಯುಳ್ಳವರಾಗಿ ಲೋಭ, ಮೋಹಗಳಿಂದ ಕೂಡಿ ಈ ಲೋಕದಲ್ಲಿಯೇ ಸುತ್ತುತ್ತಿರುವರು. ಉತ್ತರ ದಿಕ್ಕಿಗೆ ಹೋಗುವುದಿಲ್ಲ.

**ಗುರೂನುಪಾಸತೇ ಯೇತು ನಿಯತಾ ಬ್ರಹ್ಮಚಾರಿಣಃ ।**
**ಪಂಥಾನಂ ಸರ್ವಲೋಕಾನಾಂ ವಿಜಾನಂತಿ ಮನೀಷಿಣಃ ॥ ೧೯ ॥**

**ಇತ್ಯುಕ್ತೋಽಯಂ ಮಯಾ ಧರ್ಮಃ ಸಂಕ್ಷಿಪ್ತೋ ಬ್ರಹ್ಮನಿರ್ಮಿತಃ ।**
**ಧರ್ಮಾಧರ್ಮೌ ಹಿ ಲೋಕಸ್ಯ ಯೋ ವೈ ವೇತ್ತಿ ಸ ಬದ್ಧಿಮಾನ್ ॥ ೨೦ ॥**

**ಭರದ್ವಾಜ ಉವಾಚ**

**ಅಧ್ಯಾತ್ಮಂ ನಾಮ ಯದಿದಂ ಪುರುಷಸ್ಯೇಹ ಚಿಂತ್ಯತೇ ।**
**ಯದಧ್ಯಾತ್ಮಂ ಯಥಾ ಚೈತತ್ತನ್ಮೇ ಬ್ರೂಹಿ ತಪೋಧನ ॥ ೨೧ ॥**

**ಭೃಗುರುವಾಚ**

**ಅಧ್ಯಾತ್ಮಮಿತಿ ವಿಪ್ರರ್ಷೇ ಯದೇತದನುಪೃಚ್ಛಸಿ ।**
**ತದ್ವ್ಯಾಖ್ಯಾಸ್ಯಾಮಿ ತೇ ತಾತ ಶ್ರೇಯಸ್ಕರತಮಂ ಸುಖಂ ॥ ೨೨ ॥**

**ಸೃಷ್ಟಿಪ್ರಳಯಸಂಯುಕ್ತಮಾಚಾರ್ಯೈಃ ಪರಿದರ್ಶಿತಂ ।**
**ಯದ್ಜ್ಞಾತ್ವಾ ಪುರುಷೋ ಲೋಕೇ ಪ್ರೀತಿಂ ಸೌಖ್ಯಂ ಚ ವಿಂದತಿ ॥ ೨೩ ॥**

**ಫಲಲಾಭಶ್ಚ ತಸ್ಯ ಸ್ಯಾತ್ಸರ್ವಭೂತಹಿತಂ ಚ ತತ್ ।**
**ಪೃಥಿವೀವಾಯುರಾಕಾಶಮಾಪೋಜ್ಯೋತಿಶ್ಚ ಪಂಚಮಂ ॥ ೨೪ ॥**

---

೧೯. ಗುರುಕುಲವಾಸಮಾಡುವ, ನಿಯಮಯುಕ್ತರಾದ ಬ್ರಹ್ಮಚಾರಿ ಮನುಜರು ಸಕಲಲೋಕಗಳ ಮಾರ್ಗವನ್ನೂ ತಿಳಿಯುವರು.

೨೦. ಬ್ರಹ್ಮನಿರ್ಮಿತವಾದ ಧರ್ಮವು ಈರೀತಿಯಾಗಿ ನನ್ನಿಂದ ಸಂಗ್ರಹವಾಗಿ ಹೇಳಲ್ಪಟ್ಟಿದೆ. ಈ ಲೋಕದಲ್ಲಿ ಧರ್ಮಾಧರ್ಮಗಳನ್ನು ತಿಳಿಯುವವನೇ ಬುದ್ಧಿವಂತನು.

೨೧. ಭರದ್ವಾಜನು ಹೇಳಿದನು—ಪುರುಷನು ಚಿಂತಿಸುವ ಅಧ್ಯಾತ್ಮವೆಂಬುದು ಯಾವುದು? ಅದು ಹೇಗಿದೆ? ತಪಸ್ವಿಯೇ! ಅದನ್ನು ಹೇಳು.

೨೨-೨೪. ಭೃಗುವು ಹೇಳಿದನು—ಬ್ರಹ್ಮರ್ಷಿಯೇ! ನೀನು ಕೇಳಿದ ಅಧ್ಯಾತ್ಮವು ಅತ್ಯಂತ ಶ್ರೇಯಸ್ಕರವು ಮತ್ತು ಸುಖಕರವು. ಅದನ್ನು ತಿಳಿಯುವವನು ಪ್ರೀತಿಸೌಖ್ಯಗಳನ್ನು ಹೊಂದುತ್ತಾನೆ. ಅವನಿಗೆ ಅದರ ಫಲಪ್ರಾಪ್ತಿಯೂ

ಮಹಾಭೂತಾನಿ ಭೂತಾನಾಂ ಸರ್ವೇಷಾಂ ಪ್ರಭವಾಪ್ಯಯೌ ।
ಯತಃ ಸೃಷ್ಟಾನಿ ತತ್ರೈವ ತಾನಿ ಯಾಂತಿ ಲಯಂ ಪುನಃ ॥ ೨೫ ॥

ಮಹಾಭೂತಾನಿ ಭೂತೇಭ್ಯೋ ಸಾಗರಸ್ಯೋರ್ಮಯೋ ಯಥಾ ।
ಪ್ರಸಾರ್ಯ ಚ ಯಥಾಂಗಾನಿ ಕೂರ್ಮಃ ಸಂಹರತೇ ಪುನಃ ॥ ೨೬ ॥

ತದ್ವದ್ಭೂತಾನಿ ಭೂತಾತ್ಮಾ ಸೃಷ್ಟಾನಿ ಹರತೇ ಪುನಃ ।
ಮಹಾಭೂತಾನಿ ಪಂಚೈವ ಸರ್ವಭೂತೇಷು ಭೂತಕೃತ್ ॥ ೨೭ ॥

ಅಕರೋತ್ತೇಷು ವೈ ಸಮ್ಯಕ್ ತಂ ತು ಜೀವೋ ನ ಪಶ್ಯತಿ ।
ಶಬ್ದಃ ಶ್ರೋತ್ರಂ ತಥಾ ಖಾನಿ ತ್ರಯಮಾಕಾಶಯೋನಿಜಂ ॥ ೨೮ ॥

---

ಆಗುತ್ತದೆ. ಅದು ಸಕಲ ಪ್ರಾಣಿಗಳಿಗೂ ಹಿತಕರವಾದುದು. ಅಂತಹುದನ್ನು ಆಚಾರ್ಯರಿಂದ ಉಪದಿಷ್ಟವಾದ ಸೃಷ್ಟಿ ಪ್ರಳಯಸಹಿತವಾಗಿ ವಿವರಿಸಿ ಹೇಳುವೆನು.

೨೪-೨೫. ಪೃಥಿವೀ, ವಾಯು, ಆಕಾಶ, ಜಲ, ಐದನೆಯದಾದ ತೇಜಸ್ಸು ಇವುಗಳು ಮಹಾಭೂತಗಳು. ಇವುಗಳಿಗೆಲ್ಲಾ ಉತ್ಪತ್ತಿನಾಶಗಳಿವೆ. ಇವು ಯಾವುದರಿಂದ ಉತ್ಪನ್ನವಾಗುವುವೋ ಅಲ್ಲಿಯೇ ಲಯವನ್ನು ಹೊಂದುತ್ತವೆ.

೨೬-೨೭. ಸಮುದ್ರದಲ್ಲಿ ಹುಟ್ಟಿದ ಅಲೆಗಳು ಹೇಗೆ ಅಲ್ಲಿಯೇ ಲೀನವಾಗುತ್ತವೆಯೋ, ಕೂರ್ಮ (ಆಮೆ) ವು ತನ್ನ ಅವಯವಗಳನ್ನು ವಿಸ್ತರಿಸಿ ತಾನೇ ಹೇಗೆ ಸೆಳೆದುಕೊಳ್ಳುತ್ತದೆಯೋ, ಅದರಂತೆ ಭೂತಸೃಷ್ಟಿಕರ್ತನಾದ ಆತ್ಮನು ಭೂತಗಳಿಂದ ಭೂತಗಳನ್ನು ಸೃಷ್ಟಿಸಿ ಉತ್ಪನ್ನವಾದ ಭೂತಗಳನ್ನು ಪುನಃ ಅಲ್ಲಿಯೇ ಲೀನವಾಗುವಂತೆ ಮಾಡುವನು.

೨೭-೨೮. ಭೂತಕರ್ತನು ಸಕಲಪ್ರಾಣಿಗಳಲ್ಲಿಯೂ ಪಂಚಮಹಾಭೂತಗಳನ್ನೇ ಸಂಯೋಜನೆ ಮಾಡಿದನು. ಅವನನ್ನು ಜೀವನು ನೋಡುವುದಿಲ್ಲ. ಶಬ್ದ, ಶ್ರೋತ್ರ ಮತ್ತು ಇಂದ್ರಿಯ ಈ ಮೂರು ಆಕಾಶದಿಂದ ಹುಟ್ಟಿ ಆಕಾಶ ಸಂಬಂಧಿಗಳಾಗಿವೆ.

ವಾಯೋಃ ಸ್ಪರ್ಶಸ್ತಥಾ ಚೇಷ್ಟಾ ತ್ವಕ್ಚೈವ ತ್ರಿತಯಂ ಸ್ಮೃತಂ ।
ರೂಪಂ ಚಕ್ಷುಸ್ತಥಾ ಪಾಕಃ ತ್ರಿವಿಧಂ ತೇಜ ಉಚ್ಯತೇ ॥ ೨೯ ॥

ರಸಾಃ ಕ್ಲೇದಶ್ಚ ಜಿಹ್ವಾ ಚ ತ್ರಯೋ ಜಲಗುಣಾಃ ಸ್ಮೃತಾಃ ।
ಘ್ರೇಯಂ ಘ್ರಾಣಂ ಶರೀರಂ ಚ ಏತೇ ಭೂಮಿಗುಣಾಸ್ತ್ರಯಃ ॥ ೩೦ ॥

ಮಹಾಭೂತಾನಿ ಪಂಚೈವ ಷಷ್ಠಂ ಚ ಮನ ಉಚ್ಯತೇ ।
ಇಂದ್ರಿಯಾಣಿ ಮನಶ್ಚೈವ ವಿಜ್ಞಾನಾನ್ಯಸ್ಯ ಭಾರತ ॥ ೩೧ ॥

ಸಪ್ತಮೀ ಬುದ್ಧಿರಿತ್ಯಾಹುಃ ಕ್ಷೇತ್ರಜ್ಞಃ ಪುನರಷ್ಟಮಃ ।
ಶ್ರೋತ್ರಂ ವೈ ಶ್ರವಣಾರ್ಥಾಯ ಸ್ಪರ್ಶನಾಯ ಚ ತ್ವಕ್ಸ್ಮೃತಾ ॥ ೩೨ ॥

ರಸಾದಾನಾಯ ರಸನಾ ಗಂಧಾದಾನಾಯ ನಾಸಿಕಾ ।
ಚಕ್ಷುರಾಲೋಕನಾಯೈವ ಸಂಶಯಂ ಕುರುತೇ ಮನಃ ॥ ೩೩ ॥

---

೨೯. ಸ್ಪರ್ಶ, ಚೇಷ್ಟೆ, ತ್ವಕ್ಕು ಈ ಮೂರು ವಾಯುಸಂಬಂಧಿಗಳೆಂದೂ, ರೂಪ, ಚಕ್ಷುರಿಂದ್ರಿಯ, ಪಾಕಗಳೆಂಬ ಮೂರು ತೇಜಸ್ಸಂಬಂಧಿಗಳೆಂದೂ ಉಕ್ತವಾಗಿದೆ.

೩೦. ರಸ, ಕ್ಲೇದ, ನಾಲಗೆ ಈಮೂರು ಜಲಸಂಬಂಧಿಗಳು. ಗಂಧ, ಘ್ರಾಣೇಂದ್ರಿಯ, ಶರೀರ ಇವುಗಳು ಪಾರ್ಥಿವಗಳು.

೩೧. ಮಹಾಭೂತಗಳು ಐದು, ಆರನೆಯದು ಮನಸ್ಸು ಎಂದು ಉಕ್ತವಾಗಿದೆ. ಆತ್ಮನಿಗೆ ಘ್ರಾಣಾದಿಪಂಚಬಾಹ್ಯೇಂದ್ರಿಯಗಳು ಮತ್ತು ಮನಸ್ಸು ಜ್ಞಾನಸಾಧನಗಳು.

೩೨-೩೩. ಏಳನೆಯದು ಬುದ್ಧಿಯು, ಕ್ಷೇತ್ರಜ್ಞನು ಎಂಟನೆಯವನು ಎಂದು ಹೇಳುತ್ತಾರೆ. ಶಬ್ದವನ್ನು ಕೇಳುವುದಕ್ಕಾಗಿ ಶ್ರೋತ್ರೇಂದ್ರಿಯವೂ, ಸ್ಪರ್ಶವನ್ನು ತಿಳಿಯುವುದಕ್ಕೋಸ್ಕರ ತ್ವಗಿಂದ್ರಿಯವೂ ರಸವನ್ನು ಗ್ರಹಿಸಲು ರಸನೇಂದ್ರಿಯವೂ, ಗಂಧಗ್ರಹಣಾರ್ಥವಾಗಿ ಘ್ರಾಣೇಂದ್ರಿಯವೂ ನೋಡುವುದಕ್ಕೋಸ್ಕರ ಚಕ್ಷುರಿಂದ್ರಿಯವೂ ನಿರ್ಮಿತವಾಗಿವೆ. ಮನಸ್ಸು ವಿಚಾರ ಮಾಡಲು ಸಾಧನವು.

ಬುದ್ಧಿರಧ್ಯವಸಾನಾಯ ಕ್ಷೇತ್ರಜ್ಞಃ ಸಾಕ್ಷಿವತ್ಸ್ಥಿತಃ ।
ಊರ್ಧ್ವಂ ಪಾದತಲಾಭ್ಯಾಂ ಯದವಾಕ್ಪೋದಕ್ಚ ಪಶ್ಯತಿ ॥ ೩೪ ॥

ಏತೇನ ಸರ್ವಮೇವೇದಂ ವಿಭುನಾ ವ್ಯಾಪ್ತಮಂತರಂ ।
ಪುರುಷೈರಿಂದ್ರಿಯಾಣೀಹ ವೇದಿತವ್ಯಾನಿ ಕೃತ್ಸ್ನಶಃ ॥ ೩೫ ॥

ತಮೋ ರಜಶ್ಚ ಸತ್ವಂ ಚ ತೇಽಪಿ ಭಾವಾಸ್ತದಾಶ್ರಿತಾಃ ।
ಏತಾಂ ಬುದ್ಧಿಂ ನರೋ ಬುದ್ಧ್ವಾ ಭೂತಾನಾಮಾಗತಿಂ ಗತಿಂ ॥ ೩೬ ॥

ಸಮವೇಕ್ಷ್ಯ ಶನೈಶ್ಚೈವಂ ಲಭತೇ ಶಮಮುತ್ತಮಂ ।
ಗುಣೈರ್ನಿನಶ್ಯತೇ ಬುದ್ಧಿರ್ಬುದ್ಧೇರೇವೇಂದ್ರಿಯಾಣ್ಯಪಿ ॥ ೩೭ ॥

ಮನಃ ಷಷ್ಠಾನಿ ಭೂತಾನಿ ಬುಧ್ಯಭಾವೇ ಕುತೋ ಗುಣಾಃ ।
ಇತಿ ತನ್ಮಯಮೇವೈತತ್ಸರ್ವಂ ಸ್ಥಾವರಜಂಗಮಂ ॥ ೩೮ ॥

---

೩೪. ಬುದ್ಧಿಯು ನಿಶ್ಚಯವನ್ನು ಹುಟ್ಟಿಸುತ್ತದೆ. ಕ್ಷೇತ್ರಜ್ಞನು ಸಾಕ್ಷಿಯಂತಿದ್ದು ಅಂಗಾಲುಗಳಿಂದ ಮೇಲ್ಭಾಗ ಮತ್ತು ಉಭಯಪಾರ್ಶ್ವಗಳಲ್ಲಿಯೂ ನೋಡುತ್ತಿರುವನು.

೩೫. ವಿಭುವಾದ ಆ ಕ್ಷೇತ್ರಜ್ಞನಿಂದ ಈ ಅವಕಾಶವೆಲ್ಲವೂ ವ್ಯಾಪ್ತವಾಗಿದೆ. ಇಲ್ಲಿ ಎಲ್ಲಾ ಇಂದ್ರಿಯಗಳೂ ಇವೆಯೆಂದು ಪುರುಷರು ತಿಳಿಯಬೇಕು.

೩೬-೩೭. ತಮಸ್ಸು ರಜಸ್ಸು ಮತ್ತು ಸತ್ವಗುಣ ಎಂಬ ಭಾವಗಳೂ ಸಹ ಅದನ್ನೇ ಆಶ್ರಯಿಸಿವೆ. ಇಂತಹ ಬುದ್ಧಿಯನ್ನು ಪುರುಷನು ಸಂಪಾದಿಸಿ ಪ್ರಾಣಿಗಳ ವಿಹಿತನಿಷಿದ್ಧಗಮನಾಗಮನಗಳನ್ನು ತಿಳಿದು ಕ್ರಮವಾಗಿ ಉತ್ತಮ ಶಾಂತಿಯನ್ನು ಹೊಂದುವನು.

೩೭-೩೮. ಗುಣಗಳಿಂದ ಬುದ್ಧಿಯು ನಾಶವಾಗುವುದು. ಬುದ್ಧಿಯಿಂದಲೇ ಮನಸ್ಸಿನಿಂದ ಸಹಿತವಾದ ಆರು ಭೂತೇಂದ್ರಿಯಗಳೂ ನಷ್ಟವಾಗುವುವು. ಬುದ್ಧಿಯು ಹೋದಮೇಲೆ ಗುಣಗಳು ಉಂಟಾಗುವುದಿಲ್ಲ. ಈರೀತಿ ಸ್ಥಿರಚರಾತ್ಮಕವಾದ ಸಕಲವೂ ಗುಣಮಯವೇ ಆಗಿದೆ.

ಪ್ರಲೀಯತೇ ಚೋದ್ಭವತಿ ತಸ್ಮಾನ್ನಿರ್ದಿಶ್ಯತೇ ತಥಾ ।
ಯೇನ ಪಶ್ಯತಿ ತಚ್ಚಕ್ಷುಃ ಶೃಣೋತಿ ಶ್ರೋತ್ರಮುಚ್ಯತೇ ॥ ೩೯ ॥

ಜಿಘ್ರತಿ ಘ್ರಾಣಮಿತ್ಯಾಹುಃ ರಸಂ ಜಾನಾತಿ ಜಿಹ್ವಯಾ ।
ತ್ವಚಾ ಸ್ಪರ್ಶಯತಿ ಸ್ಪರ್ಶಂ ಬುದ್ಧಿರ್ವಿಕ್ರಿಯತೇ ಸಕೃತ್ ॥ ೪೦ ॥

ಯೇನ ಪ್ರಾರ್ಥಯತೇ ಕಿಂಚಿತ್ತದಾ ಭವತಿ ತನ್ಮನಃ ।
ಅಧಿಷ್ಠಾನಾತ್ತು ಬುದ್ಧೇರ್ಹಿ ಪೃಥಗರ್ಥಾನಿ ಪಂಚಧಾ ॥ ೪೧ ॥

ಇಂದ್ರಿಯಾಣೀತಿ ತಾನ್ಯಾಹುಸ್ತದದೃಶ್ಯೋಽಧಿತಿಷ್ಠತಿ ।
ಪುರುಷೇ ವರ್ತತೇ ಬುದ್ಧಿಸ್ತ್ರಿಷು ಭಾವೇಷು ತಿಷ್ಠತಿ ॥ ೪೨ ॥

---

೩೯. ಸರ್ವವೂ ಗುಣಗಳಿಂದಲೇ ಹುಟ್ಟುತ್ತದೆ ಮತ್ತು ಅದರಿಂದಲೇ ಲಯಹೊಂದುತ್ತದೆಯಾದಕಾರಣ ಗುಣಮಯವೆಂದು ಹೇಳಲ್ಪಟ್ಟಿದೆ. ನೋಡುವುದಕ್ಕೆ ಸಾಧನವಾದುದು ಚಕ್ಷುರಿಂದ್ರಿಯವೆಂದೂ, ಕೇಳುವುದಕ್ಕೆ ಸಾಧನವಾದುದು ಶ್ರೋತ್ರೇಂದ್ರಿಯವೆಂದೂ ಹೇಳಿದೆ.

೪೦. ವಾಸನೆಯನ್ನು ಗ್ರಹಿಸುವುದಕ್ಕೆ ಸಾಧನವಾದುದು ಘ್ರಾಣೇಂದ್ರಿಯವೆಂದೂ ಹೇಳುವರು. ರಸನೇಂದ್ರಿಯದಿಂದ ರಸವನ್ನು (ರುಚಿ), ತ್ವಗಿಂದ್ರಿಯದಿಂದ ಸ್ಪರ್ಶವನ್ನೂ ಗ್ರಹಿಸುವರು. ಬುದ್ಧಿಯು ಕೆಲವುವೇಳೆ ವಿಕಾರವನ್ನು ಹೊಂದುವುದು.

೪೧. ಅದು ವಿಷಯವನ್ನಪೇಕ್ಷಿಸಿದಾಗ ಮನಸ್ಸಾಗುವುದು. ಬುದ್ಧಿಯು ಇಂದ್ರಿಯಗಳಿಂದ ಬೇರೆಬೇರೆ ವಿಷಯಗಳನ್ನು ಗ್ರಹಿಸುವ ಪ್ರಯುಕ್ತ ಅವು ಐದು ವಿಧಗಳಾಗಿ ಪ್ರತ್ಯೇಕಿಸಲ್ಪಟ್ಟಿವೆ.

೪೨. ಅವುಗಳನ್ನೇ ಇಂದ್ರಿಯಗಳೆಂದು ಹೇಳುವರು. ಅವುಗಳಿಗೆ ಕಾಣದಹಾಗೆ ಪುರುಷನಿರುವನು. ಪುರುಷನಲ್ಲಿರುವ ಬುದ್ಧಿಯು ಸತ್ವ, ರಜಸ್ಸು ತಮಸ್ಸುಗಳೆಂಬ ಮೂರು ಭಾವಗಳಲ್ಲಿ ಇರುತ್ತದೆ.

**ಕದಾಚಿಲ್ಲಭತೇ ಪ್ರೀತಿಂ ಕದಾಚಿದುಪಶೋಚತಿ ।**
**ನ ಸುಖೇನ ನ ದುಃಖೇನ ಕದಾಚಿದಪಿ ವರ್ತತೇ ॥ ೪೩ ॥**

**ಏವಂ ನರಾಣಾಂ ಮನಸಿ ತ್ರಿಷು ಭಾವೇಷು ವರ್ತತೇ ।**
**ಸೇಯಂ ಭಾವಾತ್ಮಿಕಾ ಭಾವಾಂಸ್ತ್ರೀನೇತಾನತಿವರ್ತತೇ ॥ ೪೪ ॥**

**ಸರಿತಾಂ ಸಾಗರೋ ಭರ್ತಾ ವೇಲಾನಾಮಿವ ವಾರಿಧಿಃ ।**
**ಅತಿಭಾವಗತಾ ಬುದ್ಧಿರ್ಭಾವೈರ್ಮನಸಿ ವರ್ತತೇ ॥ ೪೫ ॥**

**ವರ್ತಮಾನೋ ಮುನಿಸ್ತ್ವೇವ ಸ್ವಭಾವಮನುವರ್ತತೇ ।**
**ಇಂದ್ರಿಯಾಣಿ ಹಿ ಸರ್ವಾಣಿ ಪ್ರವರ್ತಯತಿ ಸಾ ಸದಾ ॥ ೪೬ ॥**

**ಪ್ರೀತಿಃ ಸತ್ವಂ ರಜಃ ಶೋಕಸ್ತಮಃ ಕ್ರೋಧಸ್ತು ತೇ ತ್ರಯಃ ।**
**ಯೇ ಯೇ ಚ ಭಾವಾ ಲೋಕೇಽಸ್ಮಿನ್ಸರ್ವೇಷ್ವೇತೇಷು ವೈ ತ್ರಿಷು ॥ ೪೭ ॥**

---

೪೩. ಪುರುಷನು ಒಂದುಕಾಲದಲ್ಲಿ ಸುಖವನ್ನೂ ಇನ್ನೊಂದು ಕಾಲದಲ್ಲಿ ದುಃಖವನ್ನೂ ಹೊಂದುವನು. ಸುಖದುಃಖಗಳು ಯಾವಾಗಲೂ ಒಟ್ಟಿಗೆ ಬರುವುದಿಲ್ಲ.

೪೪. ಈಪ್ರಕಾರ ಪುರುಷರ ಮನಸ್ಸು ಭಾವತ್ರಯ ಇವುಗಳಲ್ಲಿರುವ ಆ ಬುದ್ಧಿಯು ಭಾವಾತ್ಮಕವೇ ಆಗಿ ಮೂರು ಭಾವಗಳನ್ನು ಅತಿಕ್ರಮಿಸುವುದು.

೪೫. ಉಕ್ಕುವುದನ್ನು ಸಮುದ್ರವು ಭರಿಸುವಂತೆ ನದಿಗಳನ್ನು ಸಾಗರವು ಭರಿಸುತ್ತದೆ. ಅತ್ಯಂತವಾಗಿ ಭಾವನಿಷ್ಠವಾದ ಬುದ್ಧಿಯು ಭಾವರೂಪವಾಗಿಯೇ ಮನಸ್ಸಿನಲ್ಲಿರುತ್ತದೆ.

೪೬. ಮುನಿಯು ಇಲ್ಲಿಯೇ ಇದ್ದಾಗ್ಯೂ ಸ್ವಭಾವವನ್ನು ಅನುಸರಿಸಿರುವನು. ಅದು ಯಾವಾಗಲೂ ಇಂದ್ರಿಯಗಳನ್ನು ಪ್ರವರ್ತಿಸುವಂತೆ ಮಾಡುತ್ತದೆ.

೪೭. ಸುಖವು ಸತ್ವವಿಕಾರವು. ದುಃಖವು ರಜೋಮಯವು. ಕ್ರೋಧವು ತಮೋಗುಣದ ಕಾರ್ಯವು. ಈರೀತಿ ಸುಖಾದಿಗಳು ತ್ರಿಗುಣಮಯವು.

ಇತಿ ಬುದ್ಧಿಗತಾಃ ಸರ್ವಾ ವ್ಯಾಖ್ಯಾತಾಸ್ತವ ಭಾವನಾಃ ।
ಇಂದ್ರಿಯಾಣಿ ಚ ಸರ್ವಾಣಿ ವಿಜೇತವ್ಯಾನಿ ಧೀಮತಾ ॥ ೪೮ ॥

ಸತ್ವಂ ರಜಸ್ತಮಶ್ಚೈವ ಪ್ರಾಣಿನಾಂ ಸಂಶ್ರಿತಾಃ ಸದಾ ।
ತ್ರಿವಿಧಾ ವೇದನಾಶ್ಚೈವ ಸರ್ವಸತ್ವೇಷು ದೃಶ್ಯತೇ ॥ ೪೯ ॥

ಸಾತ್ವಿಕೀ ರಾಜಸೀ ಚೈವ ತಾಮಸೀ ಚೇತಿ ಮಾನದ ।
ಸುಖಸ್ಪರ್ಶಃ ಸತ್ವಗುಣೋ ದುಃಖಸ್ಪರ್ಶೋ ರಜೋಗುಣಃ ॥ ೫೦ ॥

ತಮೋಗುಣೇನ ಸಂಯುಕ್ತೌ ಭವತೋ ವ್ಯಾವಹಾರಿಕೌ ।
ತವ ಯತ್ಪ್ರೀತಿಸಂಯುಕ್ತಂ ಕಾಯೇ ಮನಸಿ ವಾ ಭವೇತ್ ॥ ೫೧ ॥

ವರ್ತತೇ ಸಾತ್ವಿಕೋ ಭಾವ ಇತ್ಯಾಚಕ್ಷೀತ ತತ್ತಥಾ ।
ಅಥ ಯದ್ದುಃಖಸಂಯುಕ್ತಮಪ್ರೀತಿಕರಮಾತ್ಮನಃ ॥ ೫೨ ॥

---

ಈಲೋಕದಲ್ಲಿ ಕಂಡುಬರುವ ಭಾವಗಳೆಲ್ಲವೂ ಈ ಮೂರರಲ್ಲಿಯೇ ಅಂತರ್ಗತವಾಗುವುವು.

೪೮. ಈರೀತಿಯಾಗಿ ಬುದ್ಧಿನಿಷ್ಠವಾದ ಭಾವನೆಗಳೆಲ್ಲಾ ನಿನಗೆ ನಿರೂಪಿಸಲ್ಪಟ್ಟುವು. ಜ್ಞಾನಿಯಾದವನು ಇಂದ್ರಿಯಗಳನ್ನೆಲ್ಲಾ ಜಯಿಸಬೇಕು.

೪೯-೫೦. ಪ್ರಾಣಿಗಳಲ್ಲಿ ಯಾವಾಗಲೂ ಸತ್ವ, ರಜಸ್ಸು ಮತ್ತು ತಮಸ್ಸುಗಳು ಆಶ್ರಯಿಸಿರುತ್ತವೆ. ಸಕಲ ಪ್ರಾಣಿಗಳಲ್ಲಿಯೂ ಸಾತ್ವಿಕ, ರಾಜಸ, ತಾಮಸ ಎಂದು ಮೂರು ವಿಧವಾದ ಅನುಭವಗಳೂ ಕಂಡುಬರುತ್ತವೆ. ಸತ್ವಗುಣದಿಂದ ಸುಖಸಂಬಂಧವೂ, ರಜೋಗುಣದಿಂದ ದುಃಖಸಂಬಂಧವೂ ಆಗುವುದು.

೫೧-೫೨. ಸತ್ವರಜೋಗುಣಗಳು ತಮೋಗುಣಮಿಶ್ರಿತವಾಗಿ ಪ್ರವೃತ್ತಿಯನ್ನು ಹುಟ್ಟಿಸುವುವು- ಆತ್ಮನಿಗೆ ಶಾರೀರಕ ಅಥವಾ ಮಾನಸಿಕವಾಗಿ ಹರ್ಷವುಂಟಾದರೆ ಅದು ಸಾತ್ವಿಕಭಾವದಿಂದುಂಟಾಯಿತೆಂದೂ, ಅಪ್ರೀತಿಕರವಾಗಿ ದುಃಖವುಂಟಾದಾಗ ಅದು ರಜೋಗುಣ ಸಂಬಂಧದಿಂದ ಬಂದುದೆಂದೂ ತಿಳಿ.

**ಪ್ರವೃತ್ತಂ ರಜ ಇತ್ಯೇವಂ ಜಾನೀಹಿ ಮುನಿಸತ್ತಮ ।**
**ಅಥ ಯನ್ಮೋಹಸಂಯುಕ್ತಮವ್ಯಕ್ತವಿಷಯಂ ಭವೇತ್ ॥ ೫೩ ॥**

**ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ।**
**ಪ್ರಹರ್ಷಃ ಪ್ರೀತಿರಾನಂದಃ ಸುಖಂ ವಾ ಶಾಂತಚಿತ್ತತಾ ॥ ೫೪ ॥**

**ಕಥಂಚಿದಭಿವರ್ತಂತ ಇತ್ಯೇತೇ ಸಾತ್ವಿಕಾಗುಣಾಃ ।**
**ಅತುಷ್ಟಿಃ ಪರಿತಾಪಶ್ಚ ಶೋಕೋ ಲೋಭಸ್ತಥಾ ಕ್ಷಮಾ ॥ ೫೫ ॥**

**ಲಿಂಗಾನಿ ರಜಸಸ್ತಾನಿ ದೃಶ್ಯಂತೇ ದೇಹಹೇತುಭಿಃ ।**
**ಅಪಮಾನಸ್ತಥಾ ಮೋಹಃ ಪ್ರಮಾದಃ ಸ್ವಪ್ನತಂದ್ರಿತೇ ॥ ೫೬ ॥**

**ಕಥಂಚಿದಭಿವರ್ತಂತೇ ವಿವಿಧಾಸ್ತಾಮಸಾ ಗುಣಾಃ ।**
**ದೂಷಣಂ ಬಹುಧಾಗಾಮಿ ಪ್ರಾರ್ಥನಾಸಂಶಯಾತ್ಮಕಂ ॥ ೫೭ ॥**

---

೫೩-೫೪. ಅವ್ಯಕ್ತವಿಷಯಕವಾಗಿ ಮೋಹಪಡಿಸುವ, ಊಹಿಸಲು ಅಥವಾ ತಿಳಿಯಲು ಅಶಕ್ಯವಾದುದನ್ನು ತಮೋಗುಣಕಾರ್ಯವೆಂದು ನಿಶ್ಚಯಿಸಬೇಕು.

೫೪-೫೫. ಸಂತೋಷ, ಸ್ನೇಹ, ಆನಂದ, ಸುಖ, ಮನಃಶಾಂತಿ ಇವುಗಳು ಹೇಗಿದ್ದರೂ ಅವು ಸಾತ್ವಿಕಗುಣಗಳಾಗುವುವು.

೫೫-೫೬. ಅಸಂತೋಷ, ಪಶ್ಚಾತ್ತಾಪ, ದುಃಖ, ಲೋಭ, ಮತ್ತು ಕ್ಷಮೆ ಇವುಗಳು ರಜೋಗುಣದ ಚಿಹ್ನೆಗಳು. ಅವು ಮನುಷ್ಯರಿಂದ ದುಷ್ಟವಾಗುವುವು.

೫೬-೫೭. ಅವಮಾನ, ಮೋಹ, ಚಿತ್ತವಿಭ್ರಮೆ, ಸ್ವಪ್ನ, ಆಲಸ್ಯ ಎಂಬುದಾಗಿ ತಾಮಸಗುಣಗಳು ನಾನಾವಿಧವಾಗಿವೆ.

ಮನಃ ಸ್ವನಿಯತಂ ಯಸ್ಯ ಸ ಸುಖೀ ಪ್ರೇತ್ಯ ಚೇಹ ಚ ।
ಸತ್ವಕ್ಷೇತ್ರಜ್ಞಯೋರೇತದಂತರಂ ಯಸ್ಯ ಸೂಕ್ಷ್ಮಯೋಃ ॥ ೫೮ ॥

ಸೃಜತೇ ತು ಗುಣಾನೇಕೋ ಏಕೋ ನ ಸೃಜತೇ ಗುಣಾನ್ ।
ಮಶಕೋದುಂಬುರೌ ವಾಽಪಿ ಸಂಪ್ರಯುಕ್ತೌ ಯಥಾ ಸದಾ ॥ ೫೯ ॥

ಅನ್ಯೋನ್ಯಮೇತೌ ಸ್ಯಾತಾಂ ಚ ಸಂಪ್ರಯೋಗಸ್ತಥೋಭಯೋಃ ।
ಪೃಥಗ್ಭೂತೌ ಪ್ರಕೃತ್ಯಾ ತೌ ಸಂಪ್ರಯುಕ್ತೌ ಚ ಸರ್ವದಾ ॥ ೬೦ ॥

ಯಥಾ ಮತ್ಸ್ಯೋ ಜಲಂ ಚೈವ ಸಂಪ್ರಯುಕ್ತಸ್ತಥೈವ ತೌ ।
ನ ಗುಣಾ ವಿದುರಾತ್ಮಾನಂ ಸ ಗುಣಾನ್ವೇತ್ತಿ ಸರ್ವಶಃ ॥ ೬೧ ॥

ಪರಿದ್ರಷ್ಟಾ ಗುಣಾನಾಂ ತು ಸಂಸ್ರಷ್ಟಾ ಮನ್ಯತೇ ತಥಾ ।
ಇಂದ್ರಿಯೈಸ್ತು ಪ್ರದೀಪಾರ್ಥಂ ಕುರುತೇ ಬುದ್ಧಿಸತ್ತಮೈಃ ॥ ೬೨ ॥

---

೫೭-೫೮. ಬಹುಪ್ರಕಾರವಾಗಿ ಬರುವ ದೂಷಣೆ, ಆಶೆ ಮತ್ತು ಸಂಶಯುಗಳಿಗಾಸ್ಪದವಾದ ಮನಸ್ಸನ್ನು ಸ್ವಾಧೀನವಾಗಿಟ್ಟುಕೊಂಡಿರುವವನು ಇಹಲೋಕ ಪರಲೋಕಗಳಲ್ಲಿ ಸುಖಪಡುವನು.

೫೮-೫೯. ಸೂಕ್ಷ್ಮವಾದ ಪ್ರಕೃತಿ ಆತ್ಮರುಗಳಿಗೆ ಇದೇ ವೈಲಕ್ಷಣ್ಯವು. ಪ್ರಕೃತಿಯು ಗುಣಗಳನ್ನು ಹುಟ್ಟಿಸುತ್ತದೆ. ಇನ್ನೊಬ್ಬನು ಗುಣಗಳಿಗೆ ಉಪಾದಾನಕಾರಣನಾಗುವುದಿಲ್ಲ.

೫೯-೬೦. ಸೊಳ್ಳೆ ಮತ್ತು ಅತ್ತಿಹಣ್ಣು ಇವೆರಡೂ ಯಾವಾಗಲೂ ಸೇರಿ ಇರುವಂತೆ ಪ್ರಕೃತಿ ಆತ್ಮರೂ ಸಹ ಪರಸ್ಪರ ಸಂಬದ್ಧರಾಗಿಯೇ ಇರುವರು. ಹಾಗೆಯೇ ಇವರಿಗೆ ನಿಯತವಾದ ಸಂಬಂಧವೂ ಇದೆ.

೬೦-೬೧. ಸ್ವಾಭಾವಿಕವಾಗಿ ಇವೆರಡೂ ಭಿನ್ನವು. ಆದರೆ ಮೀನು, ಜಲ ಇವೆರಡು ಸಂಬದ್ಧವಾಗಿರುವಂತೆ ಇವೆರಡೂ ಸರ್ವದಾ ಒಂದಕ್ಕೊಂದು ಸೇರಿಕೊಂಡೇ ಇರುತ್ತವೆ. ಗುಣಗಳು ಆತ್ಮನನ್ನು ತಿಳಿಯುವುದಿಲ್ಲ. ಆತ್ಮನಾದರೋ ಗುಣಗಳನ್ನೆಲ್ಲಾ ತಿಳಿಯುವನು.

೬೨. ಗುಣಗಳ ಸೃಷ್ಟಿಕರ್ತನು ಮತ್ತು ದ್ರಷ್ಟೃವೂ ಆದ ಆತ್ಮನು ಬುದ್ಧಿಸಹಿತವಾದ ಇಂದ್ರಿಯಗಳಿಂದ ಜ್ಞಾನಾರ್ಥವಾಗಿ ಯತ್ನಮಾಡುವನೆಂದು ತಿಳಿಯುವನು.

ನಿರ್ವಿಚೇಷ್ಟೈರಜಾನದ್ಭಿಃ ಪರಮಾತ್ಮಾ ಪ್ರದೀಪವಾನ್ ।
ಸೃಜತೇ ಹಿ ಗುಣಾನ್ಸತ್ವಂ ಕ್ಷೇತ್ರಜ್ಞಃ ಪರಿಪಶ್ಯತಿ ॥ ೬೩ ॥

ಸಂಪ್ರಯೋಗಸ್ತಯೋರೇಷ ಸತ್ವಕ್ಷೇತ್ರಜ್ಞಯೋರ್ಧ್ರುವಂ ।
ಆಶ್ರಯೋ ನಾಸ್ತಿ ಸತ್ವಸ್ಯ ಕ್ಷೇತ್ರಜ್ಞಸ್ಯ ಚ ಕಶ್ಚನ ॥ ೬೪ ॥

ಸತ್ವಂ ಮನಃ ಸಂಸೃಜತೇ ನ ಗುಣಾನ್ವೈ ಕದಾಚನ ।
ರಶ್ಮಿಂಸ್ತೇಷಾಂ ಸ ಮನಸಾ ಯದಾ ಸಮ್ಯಙ್ನಿಯಚ್ಛತಿ ॥ ೬೫ ॥

ತದಾ ಪ್ರಕಾಶತೇಽಸ್ಯಾತ್ಮಾ ಘಟೇ ದೀಪೋ ಜ್ವಲನ್ನಿವ ।
ತ್ಯಕ್ತ್ವಾ ಯಃ ಪ್ರಾಕೃತಂ ಕರ್ಮ ನಿತ್ಯಮಾತ್ಮರತಿರ್ಮುನಿಃ ॥ ೬೬ ॥

ಸರ್ವಭೂತಾತ್ಮಭೂಸ್ತಸ್ಮಾತ್ಸ ಗಚ್ಛೇದುತ್ತಮಾಂ ಗತಿಂ ।
ಯಥಾ ವಾರಿಚರಃ ಪಕ್ಷೀ ಸಲಿಲೇನ ನ ಲಿಪ್ಯತೇ ॥ ೬೭ ॥

---

೬೩. ಚೇಷ್ಟಾರಹಿತರಾದ ಅಜ್ಞಾನಿಗಳಿಗೂ ಪರಮಾತ್ಮನು ಪ್ರಕಾಶವನ್ನು ಕೊಡುವನು. ಪ್ರಕೃತಿಯು ಗುಣಗಳನ್ನು ಹುಟ್ಟಿಸುತ್ತದೆ. ಅವನ್ನು ಕ್ಷೇತ್ರಜ್ಞನಾದ ಆತ್ಮನು ತಿಳಿಯುವನು.

೬೪. ಪ್ರಕೃತಿಪುರುಷರಿಗೆ ಈ ಸಂಸರ್ಗವು ನಿಯತವು. ಪ್ರಕೃತಿ ಮತ್ತು ಕ್ಷೇತ್ರಜ್ಞ ಇವರಿಗೆ ಯಾವ ಆಶ್ರಯವೂ ಇಲ್ಲ.

೬೫-೬೬. ಬುದ್ಧಿಯು ಮನಸ್ಸನ್ನು ಸಂಬಂಧಿಸುತ್ತದೆ. ಯಾವಾಗಲೂ ಗುಣಗಳನ್ನು ಸಂಬಂಧಿಸುವುದಿಲ್ಲ. ಪುರುಷನು ಆ ಗುಣಗಳ ರಶ್ಮಿಯನ್ನು ಮನಸ್ಸಿನೊಡನೆ ಸಂಯೋಜನೆಮಾಡಿದಾಗ ಉರಿಯುತ್ತಿರುವ ದೀಪವು ಘಟವನ್ನು ಪ್ರಕಾಶಿಸುವಂತೆ ಇವನಿಗೆ ಆತ್ಮನು ತಿಳಿಯುವನು.

೬೬-೬೭. ಪ್ರಾಕೃತಕರ್ಮವನ್ನು ಬಿಟ್ಟು ನಿತ್ಯವೂ ಆತ್ಮೋಪಾಸನೆಯಲ್ಲಿ ಆಸಕ್ತನಾದ ಮುನಿಯು ಸಕಲ ಭೂತಗಳಿಗೂ ಆತ್ಮಭೂತನಾದ ಸ್ವಾಮಿಯ ಅನುಗ್ರಹದಿಂದ ಉತ್ತಮಗತಿಯನ್ನು ಪಡೆಯವನು.

ಏವಮೇವ ಕೃತಪ್ರಜ್ಞೋ ಭೂತೇಷು ಪರಿವರ್ತತೇ ।
ಏವಂ ಸ್ವಭಾವಮೇವೈತತ್ಸ್ವಬುಧ್ಯಾ ವಿಹರೇನ್ನರಃ ॥ ೬೮ ॥

ಅಶೋಚನ್ನಪ್ರಹೃಷ್ಯಂಶ್ಚ ಸಮೋ ವಿಗತಮತ್ಸರಃ ।
ಭಾವಯುಕ್ತ್ಯಾ ಪ್ರಯುಕ್ತಸ್ತು ಸ ನಿತ್ಯಂ ಸೃಜತೇ ಗುಣಾನ್ ॥ ೬೯ ॥

ಊರ್ಣನಾಭಿರ್ಯಥಾ ಸೂತ್ರಂ ವಿಜ್ಞೇಯಾಸ್ತಂತುವದ್ಗುಣಾಃ ।
ಪ್ರಧ್ವಸ್ತಾ ನ ನಿವರ್ತಂತೇ ನಿವೃತ್ತಿರ್ನೋಪಲಭ್ಯತೇ ॥ ೭೦ ॥

ಪ್ರತ್ಯಕ್ಷೇಣ ಪರೋಕ್ಷಂ ತದನುಮಾನೇನ ಸಿಧ್ಯತಿ ।
ಏವಮೇಕೇ ವ್ಯವಸ್ಯಂತಿ ನಿವೃತ್ತಿರಿತಿ ಚಾಪರೇ ॥ ೭೧ ॥

ಉಭಯಂ ಸಂಪ್ರಧಾರ್ಯೈತದ್ವ್ಯವಸ್ಯೇತ ಯಥಾಮತಿ ।
ಇತೀಮಂ ಹೃದಯಗ್ರಂಥಿಂ ಬುದ್ಧಿಚಿಂತಾಮಯಂ ದೃಢಂ ॥ ೭೨ ॥

---

೬೭-೬೮. ನೀರಿನಲ್ಲೇ ಸಂಚರಿಸುವ ಪಕ್ಷಿಯು ನೀರಿನ ಸಂಬಂಧವನ್ನು ಹೊಂದದಿರುವಂತೆ ಜ್ಞಾನಿಯಾದವನು ಭೂತಗಳಲ್ಲಿ ನಿರ್ಲಿಪ್ತನಾಗಿ ತಿರುಗುತ್ತಿರುವನು. ಇದು ಸ್ವಭಾವಸಿದ್ಧವಾದುದೇ ಸರಿ. ಈರೀತಿಯಾಗಿ ಪುರುಷನು ತನ್ನ ಬುದ್ಧಿಯಿಂದ ನಡೆಯಬೇಕು.

೬೯ ೭೦. ದುಃಖ ಸಂತೋಷಗಳನ್ನು ಗಣಿಸದೇ ಯಾವಾಗಲೂ ಒಂದೇ ವಿಧವಾಗಿರುವ, ಮಾತ್ಸರ್ಯವನ್ನು ಬಿಟ್ಟಿರುವ, ಭಾವಯೋಜನೆಯಿಂದ ಪ್ರವರ್ತಿಸುವವನು ಊರ್ಣನಾಭಿ ಎಂಬ ಕೀಟವು(ಜೇಡರ ಹುಳು) ದಾರವನ್ನು ಸೃಷ್ಟಿಸುವಂತೆ ಯಾವಾಗಲೂ ಗುಣಗಳನ್ನು ಸೃಷ್ಟಿಸುವನು. ಅವನ್ನು ತಂತುವಿನಂತೆ ತಿಳಿಯಬೇಕು. ಅವು ನಷ್ಟವಾದರೂ ನಿವೃತ್ತವಾಗುವುದಿಲ್ಲ. ಅವಕ್ಕೆ ನಿವೃತ್ತಿಯು ಪ್ರತ್ಯಕ್ಷದಿಂದ ಕಂಡುಬಂದಿಲ್ಲ.

೭೧. ಪರೋಕ್ಷವಾದ ಅದು ಪ್ರತ್ಯಕ್ಷವಾದ ಅದರ ಕಾರ್ಯದಿಂದ (ಅನುಮಾನದಿಂದ) ಗ್ರಹಿಸಲ್ಪಡುತ್ತದೆ ಎಂದು ಕೆಲವರು ತಿಳಿಯುವರು. ಇತರರು ನಿವೃತ್ತಿಯುಂಟೆಂದು ತಿಳಿಯುವರು.

೭೨-೭೩. ಇವೆರಡನ್ನೂ ಗ್ರಹಿಸಿ ತನ್ನ ಬುದ್ಧ್ಯನುಸಾರವಾಗಿ ವಿವೇಚನೆ ಮಾಡಿ ನಿರ್ಣಯಿಸಿಕೊಳ್ಳಬೇಕು. ಈರೀತಿ ಬುದ್ಧಿಚಿಂತಾತ್ಮಕವಾದ, ಗಟ್ಟಿಯಾ

**ವಿಮುಚ್ಯ ಸುಖಮಾಸೀತ ನ ಶೋಚೇಚ್ಛಿನ್ನಸಂಶಯಃ ।**
**ಮಲಿನಾಃ ಪ್ರಾಪ್ನುಯುಃ ಶುದ್ಧಿಂ ಯಥಾ ಪೂರ್ಣಾಂ ನದೀಂ ನರಾಃ ॥ ೭೩॥**

**ಅವಗಾಹ್ಯ ಸುವಿದ್ವಾಂಸೋ ವಿದ್ಧಿ ಜ್ಞಾನಾಭಿಧೇ ತಥಾ ।**
**ಮಹಾನದ್ಯಾ ಹಿ ಪಾರಜ್ಞಸ್ತಪ್ಯತೇ ನ ತದನ್ಯಥಾ ॥ ೭೪ ॥**

**ನ ತು ತಪ್ಯತಿ ತತ್ವಜ್ಞಃ ಕುಲಜ್ಞಸ್ತು ತರತ್ಯುತ ।**
**ಏವಂ ಯೇ ವಿದುರಧ್ಯಾತ್ಮಂ ಕೈವಲ್ಯಂ ಜ್ಞಾನಮುತ್ತಮಂ ॥ ೭೫ ॥**

**ಏವಂ ಬುಧ್ವಾ ನರಃ ಸರ್ವೋ ಭೂತಾನಾಮುಮತಿಂ ಗತಿಂ ।**
**ಅವೇಕ್ಷ್ಯ ಚ ಶನೈರ್ಬುಧ್ಯಾ ಲಭತೇ ಚ ಶಮಂ ತತಃ ॥ ೭೬ ॥**

---

ಗಿರುವ ಹೃದಯಗ್ರಂಥಿ (ಗಂಟಿನೋಪಾದಿಯಲ್ಲಿರುವ ಮನಸ್ಸಿನ ಸಂಮುಗ್ಧವಾದ ಅವಸ್ಥೆ) ಯನ್ನು ಬಿಡಿಸಿ ಸಂಶಯ ಪರಿಹಾರಮಾಡಿಕೊಂಡು ಸುಖವಾಗಿರಬೇಕು ದುಃಖಪಡಬಾರದು.

೭೩-೭೪. ಕಶ್ಮಲಯುಕ್ತರಾದ ಜನರು ತುಂಬಿದ ನದಿಯಲ್ಲಿ ಮುಳುಗಿ ಸ್ನಾನಮಾಡಿ ಶುದ್ಧರಾಗುವಂತೆ ಒಳ್ಳೆಯ ತತ್ವಜ್ಞಾನಿಗಳು ಜ್ಞಾನವೆಂಬ ಸಮುದ್ರದಲ್ಲಿ ಅವಗಾಹನಸ್ನಾನಮಾಡಿ ಪರಿಶುದ್ಧರಾಗುವರೆಂದು ತಿಳಿ.

೭೪-೭೫. ಮಹಾನದಿಯ ತೀರಜ್ಞಾನಿಯು ಅದನ್ನು ದಾಟುವುದಕ್ಕೆ ಹೇಗೆ ಕ್ಲೇಶಪಡುವುದಿಲ್ಲವೋ ಅದರಂತೆ ತತ್ವಜ್ಞನಾಗಿ ಕುಲಧರ್ಮವನ್ನು ತಿಳಿದು ಆಚರಿಸುವವನು ಕ್ಲೇಶಪಡುವುದಿಲ್ಲ. ಈ ಸಂಸಾರಸಾಗರವನ್ನು ದಾಟುವನು. ಈರೀತಿ ಅಧ್ಯಾತ್ಮಜ್ಞಾನಿಯಾದವನು ಮೋಕ್ಷಸಾಧನವಾದ ಉತ್ತಮ ಜ್ಞಾನವನ್ನು ಹೊಂದುವನು.

೭೬. ಈರೀತಿಯಾಗಿ ತತ್ವವನ್ನು ತಿಳಿದು ಜನರೆಲ್ಲರೂ ಪ್ರಾಣಿಗಳ ಅಜ್ಞಾನ ದುರ್ಗತಿಗಳನ್ನು ನೋಡಿ ಕ್ರಮವಾಗಿ ಜ್ಞಾನಸಂಪಾದಿಸಿ ಶಾಂತಿಯನ್ನು ಪಡೆಯಬೇಕು.

ತ್ರಿವರ್ಗೋ ಯಸ್ಯ ವಿದಿತಃ ಪ್ರೇಕ್ಷ್ಯ ಯಶ್ಚ ವಿಮುಂಚತಿ ।
ಅನ್ವಿಷ್ಯ ಮನಸಾ ಯುಕ್ತಸ್ತತ್ತ್ವದರ್ಶೀ ನಿರುತ್ಸುಕಃ ॥ ೭೭ ॥

ನ ಚಾತ್ಮಾ ಶಕ್ಯತೇ ದ್ರಷ್ಟುಮಿಂದ್ರಿಯೇಷು ವಿಭಾಗಶಃ ।
ತತ್ರ ತತ್ರ ವಿಸೃಷ್ಟೇಷು ದುರ್ವಾರ್ಯೇಷ್ವಕೃತಾತ್ಮಭಿಃ ॥ ೭೮ ॥

ಏತದ್ಬುಧ್ವಾ ಭವೇದ್ಬುದ್ಧಃ ಕಿಮನ್ಯದ್ಬುದ್ಧಲಕ್ಷಣಂ ।
ವಿಜ್ಞಾಯ ತದ್ಧಿ ಮನ್ಯಂತೇ ಕೃತಕೃತ್ಯಾ ಮನೀಷಿಣಃ ॥ ೭೯ ॥

ನ ಭವತಿ ವಿದುಷಾಂ ತತೋ ಭಯಂ
ಯದವಿದುಷಾಂ ಸುಮಹದ್ಭಯಂ ಭವೇತ್ ।
ನ ಹಿ ಗತಿರಧಿಕಾಽಸ್ತಿ ಕಸ್ಯಚಿತ್
ಸತಿ ಹಿ ಗುಣೇ ಪ್ರವದತ್ಯತುಲ್ಯತಾಂ ॥ ೮೦ ॥

---

೭೭. ಧರ್ಮಾರ್ಥಕಾಮಗಳೆಂಬ ತ್ರಿವರ್ಗವನ್ನು ತಿಳಿದು ನೋಡಿಯೂ ಅದರಲ್ಲಿ ಉತ್ಸಾಹವಿಲ್ಲದೇ ಅದನ್ನು ಬಿಟ್ಟು ಪರಮಾತ್ಮನನ್ನು ಹುಡುಕಿ ಧ್ಯಾನಿಸುವವನು ತತ್ತ್ವಾಪರೋಕ್ಷಜ್ಞಾನಿಯಾಗುವನು.

೭೮. ಪ್ರವರ್ತಿಸಬಾರದ ವಿಷಯಗಳಲ್ಲಿ ಆಯಾಯಾ ಇಂದ್ರಿಯಗಳು ವಿಭಕ್ತವಾಗಿ ಪ್ರವರ್ತಿಸಲು ಅವಕಾಶಕೊಡುವ ಪಾಪಾತ್ಮರು ಪರಮಾತ್ಮನನ್ನು ನೋಡಲು ಸಮರ್ಥರಾಗುವುದಿಲ್ಲ.

೭೯. ಇದನ್ನು ತಿಳಿದರೆ ಜ್ಞಾನಿಯಾಗುವನು. ಇದಲ್ಲದೇ ಜ್ಞಾನಿಗೆ ಬೇರೆ ಲಕ್ಷಣವೇನು ? ಮನುಷ್ಯರು ಅದನ್ನು ತಿಳಿದು ಅದರಿಂದಲೇ ಕೃತಕೃತ್ಯರೆಂದು ಭಾವಿಸುವರು.

೮೦. ಯಾವುದು ಅಜ್ಞಾನಿಗಳಿಗೆ ಭಯಂಕರವೋ ಅದರಿಂದ ಜ್ಞಾನಿಗಳಿಗೆ ಭಯವಾಗುವುದಿಲ್ಲ. ಸದ್ಗುಣವಂತನಿಗೆ ಸಮನಾದವನಾರೂ ಇಲ್ಲ. ಅವನಿಗಿಂತ ಹೆಚ್ಚಿನ ರಕ್ಷಕರೂ ಇಲ್ಲ.

ಯಃ ಕರೋತ್ಯನಭಿಸಂಧಿಪೂರ್ವಕಂ
ತಚ್ಚ ನಿರ್ದಹತಿ ಯತ್ಪುರಾಕೃತಂ ।
ನಾಪ್ರಿಯಂ ತದುಭಯಂ ಕುತಃ ಪ್ರಿಯಂ
ತಸ್ಯ ತಜ್ಜನಯತೀಹ ಕುರ್ವತಃ ॥ ೮೧ ॥

ಲೋಕಮಾಯುರಭಿಸೂಯತೇ ಜನ-
ಸ್ತಸ್ಯ ತಜ್ಜನಯತೀಹ ಕುರ್ವತಃ ।
ತತ್ರ ಪಶ್ಯ ಕುಶಲಾನ್ನ ಶೋಚತೇ
ಜಾಯತೇ ಯದಿ ಭಯಂ ಪದಂ ಸದಾ ॥ ೮೨ ॥

ಭರದ್ವಾಜ ಉವಾಚ

ಧ್ಯಾನಯೋಗಂ ಸಮಾಚಕ್ಷ್ವ ಮಹ್ಯಂ ತತ್ಪದಸಿದ್ಧಯೇ ।
ಯದ್ಧ್ಯಾತ್ವಾ ಮುಚ್ಯತೇ ಬ್ರಹನ್ನರಸ್ತ್ರಿವಿಧತಾಪತಃ ॥ ೮೩ ॥

---

೮೧. ಫಲಾಭಿಸಂಧಿರಹಿತವಾಗಿ ಕರ್ಮವಮಾಡಿದರೆ ಅದು ಹಿಂದೆ ಮಾಡಿದ ಅಪ್ರಿಯವಾದ ಪುಣ್ಯಪಾಪಗಳನ್ನು ದಹಿಸುತ್ತದೆ. ಪ್ರಿಯಾಪ್ರಿಯಗಳೆರಡನ್ನೂ ದಹಿಸುವುದಿಲ್ಲ. ಏಕೆಂದರೆ ಅಂತಹ ಕರ್ಮವನ್ನು ಮಾಡುವವನಿಗೆ ಅದು ಪ್ರಿಯವನ್ನು ಹುಟ್ಟಿಸುತ್ತದೆ.

೮೨. ಲೋಕವು ಮತ್ತು ಆಯುಸ್ಸು ಇವುಗಳನ್ನು ಜನರು ಅಪೇಕ್ಷಿಸುತ್ತಾರೆ. ಕರ್ಮವಮಾಡುವವನಿಗೆ ಅದು ಲಭಿಸುತ್ತದೆ. ಒಳ್ಳೆಯದಾದರೆ ದುಃಖಪಡುವುದಿಲ್ಲ, ಭಯಂಕರಸ್ಥಿತಿಬಂದರೆ ದುಃಖವುಂಟಾಗುವುದು. ಅದನ್ನು ವಿವೇಚನೆಮಾಡು.

೮೩. ಭರದ್ವಾಜನು ಹೇಳಿದನು—ಬ್ರಹ್ಮಜ್ಞಾನಿಯಾದ ಭೃಗುಮುನಿಯೇ! ಪುರುಷನು ತಾಪತ್ರಯದಿಂದ ಮುಕ್ತನಾಗುವುದಕ್ಕೆ ಮತ್ತು ಶಾಶ್ವತಸ್ಥಾನವು ದೊರೆಯುವುದಕ್ಕೂ ಸಾಧನವಾದ ಧ್ಯಾನಯೋಗವನ್ನು ನನಗೆ ಹೇಳು.

ಭೃಗುರುವಾಚ

ಹಂತ ತೇ ಸಂಪ್ರವಕ್ಷ್ಯಾಮಿ ಜ್ಞಾನಯೋಗಂ ಚತುರ್ವಿಧಂ ।
ಯಂ ಜ್ಞಾತ್ವಾ ಶಾಶ್ವತೀಂ ಸಿದ್ಧಿಂ ಗಚ್ಛಂತೀಹ ಮಹರ್ಷಯಃ ॥ ೮೪ ॥

ಯಥಾ ಸ್ವನುಷ್ಠಿತಂ ಧ್ಯಾನಂ ತಥಾ ಕುರ್ವಂತಿ ಯೋಗಿನಃ ।
ಮಹರ್ಷಯೋ ಜ್ಞಾನತೃಪ್ತಾ ನಿರ್ವಾಣಗತಮಾನಸಾಃ ॥ ೮೫ ॥

ನಾವರ್ತಂತೇ ಪುನಶ್ಚಾಪಿ ಮುಕ್ತಾಃ ಸಂಸಾರದೋಷತಃ ।
ಜನ್ಮದೋಷಪರಿಕ್ಷೀಣಾಃ ಸ್ವಭಾವೇ ಪರ್ಯವಸ್ಥಿತಾಃ ॥ ೮೬ ॥

ನಿರ್ದ್ವಂದ್ವಾ ನಿತ್ಯಸತ್ವಸ್ಥಾ ವಿಮುಕ್ತಾ ನಿಷ್ಪರಿಗ್ರಹಾಃ ।
ಅಸಂಗಾನ್ಯನಿಷಿದ್ಧಾನಿ ಮನಃ ಶಾಂತಿಕರಾಣಿ ಚ ॥ ೮೭ ॥

---

೮೪. ಭೃಗುವು ಹೇಳತೊಡಗಿದನು—ಮಹರ್ಷಿಗಳು ಯಾವುದನ್ನು ತಿಳಿದು ಶಾಶ್ವತಸಿದ್ಧಿಯನ್ನು ಹೊಂದುವರೋ ಅಂತಹ ನಾಲ್ಕುವಿಧವಾದ ಜ್ಞಾನ ಯೋಗವನ್ನು ನಿನಗೆ ಹೇಳುವೆನು.

೮೫-೮೬. ಸಿದ್ಧಿಯನ್ನು ಹೊಂದುವ ರೀತಿಯಲ್ಲಿ ಯೋಗಿಗಳು ಧ್ಯಾನ ಮಾಡುವರು. ಮೋಕ್ಷಾಕಾಂಕ್ಷಿಗಳಾಗಿ ಜ್ಞಾನದಿಂದ ತೃಪ್ತಿಯನ್ನು ಹೊಂದಿರುವ ಮಹರ್ಷಿಗಳು ಸಂಸಾರಬಂಧದಿಂದ ಮುಕ್ತರಾಗುವರು. ಪುನಃ ಸಂಸಾರಕ್ಕೆ ಹಿಂತಿರುಗುವುದಿಲ್ಲ.

೮೬-೮೭. ಮುಕ್ತರು ಜನನಮರಣವನ್ನು ಪರಿಹರಿಸಿಕೊಂಡು ನೈಜವಾದ ಸ್ವರೂಪವನ್ನನುಭವಿಸುತ್ತಾ ಸುಖದುಃಖಾದಿದ್ವಂದ್ವಸಹಿಷ್ಣುಗಳು, ಯಾವಾಗಲೂ ಸತ್ವಗುಣವನ್ನೇ ಅನುಭವಿಸುವವರೂ, ಪರಿಗ್ರಹಮಾಡದಿರುವವರೂ ಆಗಿ ಫಲಾಪೇಕ್ಷೆಯಿಲ್ಲದೇ ಮನಃಶಾಂತಿಕರವಾದ ಅನಿಷಿದ್ಧಕರ್ಮಗಳನ್ನೇ ಮಾಡುತ್ತಿರುವರು.

ತತ್ರ ಧ್ಯಾನೇನ ಸಂಶ್ಲಿಷ್ಟಮೇಕಾಗ್ರಂ ಧಾರಯೇನ್ಮನಃ ।
ಪಿಂಡೀಕೃತ್ಯೇಂದ್ರಿಯಗ್ರಾಮಮಾಸೀನಃ ಕಾಷ್ಠವನ್ಮುನಿಃ ॥ ೮೮ ॥

ಶಬ್ದಂ ನ ವಿಂದೇಚ್ಛ್ರೋತ್ರೇಣ ತ್ವಚಾ ಸ್ಪರ್ಶಂ ನ ವೇದಯೇತ್ ।
ರೂಪಂ ನ ಚಕ್ಷುಷಾ ವಿದ್ಯಾಜ್ಜಿಹ್ವಯಾ ನ ರಸಾಂಸ್ತಥಾ ॥ ೮೯ ॥

ಘ್ರೇಯಾಣ್ಯಪಿ ಚ ಸರ್ವಾಣಿ ಜಹ್ಯಾದ್ಧ್ಯಾನೇನ ತತ್ವವಿತ್ ।
ಪಂಚವರ್ಗಪ್ರಮಾಥೀನಿ ನೇಚ್ಛೇಚ್ಚೈತಾನಿ ವೀರ್ಯವಾನ್ ॥ ೯೦ ॥

ತತೋ ಮನಸಿ ಸಂಗೃಹ್ಯ ಪಂಚವರ್ಗಂ ವಿಚಕ್ಷಣಃ ।
ಸಮಾದಧ್ಯಾನ್ಮನೋ ಭ್ರಾಂತಮಿಂದ್ರಿಯೈಃ ಸಹ ಪಂಚಭಿಃ ॥ ೯೧ ॥

ವಿಸಂಚಾರಿ ನಿರಾಲಂಬಂ ಪಂಚದ್ವಾರಂ ಬಲಾಬಲಂ ।
ಪೂರ್ವಧ್ಯಾನಪಥೇ ಧೀರಃ ಸಮಾದಧ್ಯಾನ್ಮನಃ ಸ್ಥಿರಂ ॥ ೯೨ ॥

---

೮೮. ಮುನಿಯು ಕಾಷ್ಠದಂತೆ ಅಚಲವಾಗಿ ಕುಳಿತು ಇಂದ್ರಿಯ ಸಮೂಹವನ್ನು ಒಟ್ಟುಗೂಡಿಸಿ ಧ್ಯಾನಸಂಸಕ್ತಮನಸ್ಸನ್ನು ಏಕಾಗ್ರವಾಗಿ ಧರಿಸಬೇಕು.

೮೯-೯೦. ತತ್ವಸಾಕ್ಷಾತ್ಕಾರವನ್ನು ಪಡೆಯಬೇಕೆಂದು ಧ್ಯಾನದಲ್ಲಾಸಕ್ತನಾದವನು ಕಿವಿಯಿಂದ ಬಾಹ್ಯಶಬ್ದವನ್ನು ಕೇಳಬಾರದು. ತ್ವಗಿಂದ್ರಿಯದಿಂದ ಸ್ಪರ್ಶವನ್ನು ತಿಳಿಯಬಾರದು. ಕಣ್ಣಿನಿಂದ ರೂಪವನ್ನು ನೋಡಬಾರದು. ನಾಲಿಗೆಯಿಂದ ರುಚಿಯನ್ನು ಸವಿಯಬಾರದು. ವಾಸನೆನೋಡುವ ವಸ್ತುಗಳನ್ನು ತ್ಯಜಿಸಬೇಕು. ಜ್ಞಾನಸಾಮರ್ಥ್ಯವುಳ್ಳವನು ಪ್ರಮಾದಕರವಾದ ಈ ಪಂಚ ಗಂಧಾದಿವಿಷಯಗಳನ್ನು ಅಪೇಕ್ಷಿಸಬಾರದು.

೯೧. ಆದಕಾರಣ ವಿವೇಕಿಯು ಪಂಚೇಂದ್ರಿಯಗಳೊಡನೆ ವಿಷಯಗಳಲ್ಲಿ ತಿರುಗುತ್ತಿರುವ ಮನಸ್ಸನ್ನು ವಿಷಯಗಳಕಡೆಗೆ ಹೋಗದಂತೆ ತಡೆದು ಧ್ಯೇಯತತ್ವದಲ್ಲಿಯೇ ನಿಲ್ಲಿಸಬೇಕು.

೯೨. ಧೀರನು ಆಲಂಬನರಹಿತವಾಗಿ ಸಂಚರಿಸುತ್ತಿರುವ ಐದು ದ್ವಾರಗಳುಳ್ಳ ಬಲಾಬಲವಾದ ಮನಸ್ಸನ್ನು ಪೂರ್ವಧ್ಯಾನಮಾರ್ಗದಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡಬೇಕು.

ಇಂದ್ರಿಯಾಣಿ ಮನಶ್ಚೈವ ಯದಾ ಪಿಂಡೀಕರೋತ್ಯಯಂ ।
ಏಷ ಧ್ಯಾನಪಥಃ ಪೂರ್ವೋ ಮಯಾ ಸಮನುವರ್ಣಿತಃ ॥ ೯೩ ॥

ತಸ್ಯ ತತ್ಪೂರ್ವಸಂರುದ್ಧ ಆತ್ಮಷಷ್ಠಮನಂತರಂ ।
ಸ್ಫುರಿಷ್ಯತಿ ಸಮುದ್ಭ್ರಾಂತಾ ವಿದ್ಯುದಂಬುಧರೇ ಯಥಾ ॥ ೯೪ ॥

ಜಲಬಿಂದುರ್ಯಥಾ ಲೋಲಃ ಪರ್ಣಸ್ಥಃ ಸರ್ವತಶ್ಚಲಃ ।
ಏವಮೇವಾಸ್ಯ ಚಿತ್ತಂ ಚ ಭವತಿ ಧ್ಯಾನವರ್ತ್ಮನಿ ॥ ೯೫ ॥

ಸಮಾಹಿತಂ ಕ್ಷಣಂ ಕಿಂಚಿದ್ಧ್ಯಾನವರ್ತ್ಮನಿ ತಿಷ್ಠತಿ ।
ಪುನರ್ವಾಯುಪಥಂ ಭ್ರಾಂತಂ ಮನೋ ಭವತಿ ವಾಯುವತ್ ॥ ೯೬ ॥

ಅನಿರ್ವೇದೋ ಗತಕ್ಲೇಶೋ ಗತತಂದ್ರೋ ಹ್ಯಮತ್ಸರೀ ।
ಸಮಾದಧ್ಯಾತ್ಪುನಶ್ಚೇತೋ ಧ್ಯಾನೇನ ಧ್ಯಾನಯೋಗವಿತ್ ॥ ೯೭ ॥

---

೯೩. ಯೋಗಿಯು ಇಂದ್ರಿಯ ಮತ್ತು ಮನಸ್ಸುಗಳನ್ನು ಒಟ್ಟುಗೂಡಿಸುವುದೇ ನನ್ನಿಂದ ಪೂರ್ವದಲ್ಲಿ ಹೇಳಲ್ಪಟ್ಟ ಧ್ಯಾನಮಾರ್ಗವು.

೯೪. ಆ ಧ್ಯಾನಮಾರ್ಗಕ್ಕೆ ಪೂರ್ವದಲ್ಲಿ ಗೋಚರಿಸದೇ ಇದ್ದ ಆರನೆಯವನಾದ ಆತ್ಮನು ಆಮೇಲೆ ಮೇಘದಲ್ಲಿನ ಮಿಂಚು ಸಮುದ್ಭ್ರಾಂತವಾಗಿ ಪ್ರಕಾಶಿಸುವಂತೆ ಹೊಳೆಯುವನು.

೯೫. ಎಲೆಯಲ್ಲಿರುವ ನೀರಿನ ತೊಟ್ಟು ಎಲ್ಲಾ ಕಡೆಯಲ್ಲಿಯೂ ಚಲಿಸುತ್ತಾ ಚಂಚಲವಾಗಿರುವಂತೆ ಯೋಗಾಭ್ಯಾಸಮಾಡುವವನ ಚಿತ್ತವು ಧ್ಯಾನಮಾರ್ಗದಲ್ಲಿ ಚಂಚಲವಾಗಿರುತ್ತದೆ.

೯೬. ಮನಸ್ಸು ಕ್ಷಣಮಾತ್ರ ಸ್ವಲ್ಪ ಸಮಾಧಾನವಾಗಿ ಧ್ಯಾನಮಾರ್ಗದಲ್ಲಿರುತ್ತದೆ. ಪುನಃ ಅದು ವಾಯುಮಾರ್ಗದಲ್ಲಿ ವಾಯುವಿನಂತೆ ತಿರುಗುತ್ತದೆ.

೯೭. ಧ್ಯಾನಯೋಗಜ್ಞಾನಿಯು ಪಶ್ಚಾತ್ತಾಪ, ಕ್ಲೇಶ, ಆಲಸ್ಯ, ಮಾತ್ಸರ್ಯ ಇವುಗಳನ್ನು ಬಿಟ್ಟು ಪುನಃ ಮನಸ್ಸನ್ನು ಧ್ಯಾನದಲ್ಲಿ ನಿಲ್ಲಿಸಬೇಕು.

**ವಿಚಾರಶ್ಚ ವಿತರ್ಕಶ್ಚ ವಿವೇಕಶ್ಚೋಪಜಾಯತೇ ।**
**ಮುನೇಃ ಸಮಾಧಿಯುಕ್ತಸ್ಯ ಪ್ರಥಮಂ ಧ್ಯಾನಮಾದಿತಃ ॥ ೯೮ ॥**

**ಮನಸಾ ಕ್ಲಿಶ್ಯಮಾನಸ್ತು ಸಮಾಧಾನಂ ಚ ಕಾರಯೇತ್ ।**
**ನ ನಿರ್ವೇದಂ ಮುನಿರ್ಗಚ್ಛೇತ್ಕುರ್ಯಾದೇವಾತ್ಮನೋ ಹಿತಂ ॥ ೯೯ ॥**

**ಪಾಂಸುಭಸ್ಮಕರೀಷಾಣಾಂ ಯಥಾ ವೈ ರಾಶಯಶ್ಚ ತಾಃ ।**
**ಸಹಸಾ ವಾರಿಣಾ ಸಿಕ್ತಾ ನ ಯಾಂತಿ ಪರಿಭಾವನಾಃ ॥ ೧೦೦ ॥**

**ಕಿಂಚಿತ್ಸ್ನಿಗ್ಧಂ ಯಥಾ ಚ ಸ್ಯಾಚ್ಛುಷ್ಕಂ ಚೂರ್ಣಮಭಾವಿತಂ ।**
**ಕ್ರಮೇಣ ತು ಶನೈರ್ಗಚ್ಛೇತ್ಸರ್ವಂ ತತ್ಪರಿಭಾವನಂ ॥ ೧೦೧ ॥**

**ಏವಮೇವೇಂದ್ರಿಯಗ್ರಾಮಂ ಶನೈಃ ಶಂ ಪರಿಭಾವಯೇತ್ ।**
**ಸಂಹರೇತ್ಕ್ರಮಶಶ್ಚೈವ ಸಮ್ಯಕ್ ತತ್ಪ್ರಶಮಿಷ್ಯತಿ ॥ ೧೦೨ ॥**

---

೯೮. ಸಮಾಧ್ಯವಸ್ಥೆಯನ್ನು ಹೊಂದಿದ ಮುನಿಗೆ ಮೊದಲು ಧ್ಯಾನವು ಅದಕ್ಕೆ ಕಾರಣವಾಗಿ ವಿಚಾರ, ವಿತರ್ಕ ಮತ್ತು ವಿವೇಕ ಇವುಗಳು ಹಿಂದೆಯೇ ಉಂಟಾಗಿರುತ್ತವೆ.

೯೯. ಮನಸ್ಸಿನಲ್ಲಿ ಕ್ಲೇಶಪಡುತ್ತಿರುವವನು ಸಮಾಧಾನತಂದುಕೊಳ್ಳಬೇಕು. ಮುನಿಯು ನಿರ್ವೇದವನ್ನು ಹೊಂದಬಾರದು. ಆತ್ಮನಿಗೆ ಹಿತವಾದುದನ್ನು ಮಾಡಲೇಬೇಕು.

೧೦೦-೧೦೨. ಧೂಳಿ, ಬೂದಿ, ಬೆರಣಿ ಇವುಗಳ ರಾಶಿಗಳನ್ನು ನೀರಿನಲ್ಲಿ ನೆನೆಸಿದ ಕೂಡಲೇ ಪರಿಭಾವನೆಯನ್ನು ಹೊಂದದೇ ಹೇಗೆ ಕ್ರಮವಾಗಿ ಪರಿಭಾವನೆಯನ್ನು ಹೊಂದುತ್ತದೆಯೋ, ಶುಷ್ಕವಾದ ಪಿಂಡೀಭಾವವನ್ನು ಹೊಂದದಿರುವ ಹಿಟ್ಟಿಗೆ ಸ್ವಲ್ಪ ನೀರನ್ನು ಸೇರಿಸಿದರೆ ಅದೆಲ್ಲವೂ ಹೇಗೆ ಕ್ರಮವಾಗಿ ಪಿಂಡೀಭಾವವನ್ನು ಹೊಂದುತ್ತದೆಯೋ ಅದರಂತೆಯೇ ವಿಷಯಗಳನ್ನು ಪರಿಹರಿಸಿಕೊಂಡು ಇಂದ್ರಿಯಸಮೂಹವನ್ನು ಸುಖಪರಿಣಾಮವನ್ನಾಗಿ ಮಾಡಿಸಬೇಕು. ಹಾಗೆ ಮಾಡಿದರೆ ಇಂದ್ರಿಯವು ಶಾಂತವಾಗುವುದು.

ಸ್ವಯಮೇವ ಮನಶ್ಚೈವಂ ಪಂಚವರ್ಗಂ ಮುನೀಶ್ವರ ।
ಪೂರ್ವಂ ಧ್ಯಾನಪಥೇ ಸ್ಥಾಪ್ಯ ನಿತ್ಯಯೋಗೇನ ಶಾಮ್ಯತಿ　　　॥ ೧೦೩ ॥

ನ ತತ್ಪುರುಷಾಕಾರೇಣ ನ ಚ ದೇವೇನ ಕೇನಚಿತ್ ।
ಸುಖಮೇಷ್ಯತಿ ತತ್ತಸ್ಯ ಯದೇವಂ ಸಂಯತಾತ್ಮನಃ　　　॥ ೧೦೪ ॥

ಸುಖೇನ ತೇನ ಸಂಯುಕ್ತೋ ರಂಸ್ಯತೇ ಧ್ಯಾನಕರ್ಮಣಿ ।
ಗಚ್ಛಂತಿ ಯೋಗಿನೋಹ್ಯೇವಂ ನಿರ್ವಾಣಂ ತು ನಿರಾಮಯಂ　　　॥ ೧೦೫ ॥

ಸನಂದನ ಉವಾಚ

ಇತ್ಯುಕ್ತೋ ಭೃಗುಣಾ ಬ್ರಹ್ಮನ್ಭರದ್ವಾಜಃ ಪ್ರತಾಪವಾನ್ ।
ಭೃಗುಂ ಪರಮಧರ್ಮಾತ್ಮಾ ವಿಸ್ಮಿತಃ ಪ್ರತ್ಯಪೂಜಯತ್　　　॥ ೧೦೬ ॥

---

೧೦೩. ಮುನಿವರ್ಯನೇ ! ಈಪ್ರಕಾರವಾಗಿ ಮನಸ್ಸು ತಾನಾಗಿಯೇ ಇಂದ್ರಿಯಪಂಚಕವನ್ನು ಪೂರ್ವದಲ್ಲಿಯೇ ಧ್ಯಾನಮಾರ್ಗಕ್ಕೆ ತಂದು ಯಾವಾಗಲೂ ಧ್ಯಾನಯೋಗವನ್ನು ಆಶ್ರಯಿಸುವುದರಿಂದ ಶಾಂತವಾಗುತ್ತದೆ.

೧೦೪. ಈರೀತಿಯಾಗಿ ಶಾಂತಾತ್ಮನಿಗೆ ಆಗುವ ಸುಖವು ಪುರುಷಪ್ರಯತ್ನದಿಂದಲಾಗಲೀ ಅದೃಷ್ಟವಿಶೇಷದಿಂದಲಾಗಲೀ ಆಗುವುದಿಲ್ಲ.

೧೦೫. ಶಾಂತಾತ್ಮನು ಆ ಸುಖದಿಂದ ಕೂಡಿ ಧ್ಯಾನಮಾಡುತ್ತಾ ಸಂತೋಷಿಸುವನು. ಯೋಗಿಗಳು ಇದೇರೀತಿಯಾಗಿ ನಿರ್ದೋಷವಾದ ಮೋಕ್ಷವನ್ನು ಪಡೆಯುವರು.

೧೦೬. ಸನಂದನನು ಹೇಳಿದನು — ಈರೀತಿಯಾಗಿ ಭೃಗುಮುನಿಯಿಂದ ಉಕ್ತನಾದುದನ್ನು ಕೇಳಿ ಪ್ರತಾಪಶಾಲಿಯೂ, ಪರಮಧಾರ್ಮಿಕನೂ ಆದ ಭರದ್ವಾಜನು ಭೃಗುಮುನಿಯನ್ನು ಪೂಜಿಸಿದನು.

**ಏಷ ತೇ ಪ್ರಸವೋ ವಿದ್ವನ್ನಗತಃ ಸಂಪ್ರಕೀರ್ತಿತಃ ।**
**ನಿಖಿಲೇನ ಮಹಾಪ್ರಾಜ್ಞ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೦೭ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ದ್ವಿತೀಯಪಾದೇ ಚತುಶ್ಚತ್ವಾರಿಂಶತ್ತಮೋಽಧ್ಯಾಯಃ**

---

೧೦೭. ಮಹಾಪ್ರಾಜ್ಞನಾದ ನಾರದನೇ! ನಿನಗಾಗಿ ಈ ಜಗತ್ಸೃಷ್ಟಿ ಪ್ರಕಾರವನ್ನು ಸಮಗ್ರವಾಗಿ ಹೇಳಿರುವೆನು. ಮತ್ತೇನನ್ನು ಕೇಳಲು ಅಪೇಕ್ಷಿಸುವೆ?

ಇಂತು ಶ್ರೀನಾರದೀಯಪುರಾಣ ದ್ವಿತೀಯಪಾದದಲ್ಲಿ ನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

**ಕಥಾಸಾರಾಂಶ**

ಭರದ್ವಾಜನು ಪರಲೋಕವಿಷಯದಲ್ಲಿ ಪ್ರಶ್ನೆಮಾಡಲು ಭೃಗುವು ಪರಲೋಕವಿರುವ ಸ್ಥಾನ, ಈಲೋಕ ಪರಲೋಕಗಳಿಗಿರುವ ವ್ಯತ್ಯಾಸ, ಪರಲೋಕ ಪ್ರಾಪ್ತಿಸಾಧನ ಮುಂತಾದುವನ್ನು ವಿಶದಪಡಿಸಿರುವನು. ತರುವಾಯ ಅಧ್ಯಾತ್ಮವನ್ನು ವಿಶದವಾಗಿ ನಿರೂಪಿಸಿ ಸೃಷ್ಟಿಪ್ರಕಾರವನ್ನು ವಿವರಿಸಿ ಸಪರಿಕರವಾಗಿ ಧ್ಯಾನಯೋಗವನ್ನು ನಿರೂಪಿಸಿದೆ.

# ಪಂಚಚತ್ವಾರಿಂಶೋಽಧ್ಯಾಯಃ

**ಸೂತ ಉವಾಚ**

**ಸನಂದನವಚಃ ಶ್ರುತ್ವಾ ಮೋಕ್ಷಧರ್ಮಾಶ್ರಿತಂ ದ್ವಿಜಾಃ ।**
**ಪುನಃ ಪಪ್ರಚ್ಛ ತತ್ವಜ್ಞೋ ನಾರದೋಽಧ್ಯಾತ್ಮಸತ್ಕಥಾಂ ॥ ೧ ॥**

**ನಾರದ ಉವಾಚ**

**ಶ್ರುತಂ ಮಯಾ ಮಹಾಭಾಗ ಮೋಕ್ಷಶಾಸ್ತ್ರಂ ತ್ವಯೋದಿತಂ ।**
**ನ ಚ ಮೇ ಜಾಯತೇ ತೃಪ್ತಿಃ ಭೂಯೋ ಭೂಯೋಽಪಿ ಶೃಣ್ವತಃ ॥ ೨ ॥**

**ಯಥಾ ಸಂಮುಚ್ಯತೇ ಜಂತುರವಿದ್ಯಾಬಂಧನಾನ್ಮುನೇ ।**
**ತಥಾ ಕಥಯ ಸರ್ವಜ್ಞ ಮೋಕ್ಷಧರ್ಮಂ ಸದಾಶ್ರಿತಂ ॥ ೩ ॥**

---

## ನಲವತ್ತೈದನೆಯ ಅಧ್ಯಾಯವು

೧. ಸೂತನು ಹೇಳಿದನು—ತತ್ವಜ್ಞಾನಿಗಳಾದ ಬ್ರಾಹ್ಮಣರೇ! ಮೋಕ್ಷಧರ್ಮವಿಷಯಕವಾದ ಸನಂದನನ ವಾಕ್ಯವನ್ನು ಕೇಳಿ ನಾರದನು ಪುನಃ ಅಧ್ಯಾತ್ಮಸತ್ಕಥೆಯನ್ನು ಪ್ರಶ್ನೆಮಾಡಿದನು.

೨. ನಾರದನು ಹೇಳಿದನು—ಧನ್ಯನಾದ ಸನಂದನನೇ! ನೀನು ಹೇಳಿದ ಮೋಕ್ಷಶಾಸ್ತ್ರವನ್ನು ಕೇಳಿದೆನು. ಆದರೆ ಪುನಃಪುನಃ ಕೇಳಿದರೂ ನನಗೆ ತೃಪ್ತಿಯುಂಟಾಗಲಿಲ್ಲ.

೩. ಸರ್ವಜ್ಞನೇ! ಈ ಜೀವನು ಅವಿದ್ಯಾಬಂಧನದಿಂದ ಬಿಡುಗಡೆಯಾಗುವುದಕ್ಕೆ ಸಾಧನವಾದ, ಸಾಧುಗಳು ಆಚರಿಸುವ ಮೋಕ್ಷಧರ್ಮವನ್ನು ನನಗೆ ಹೇಳು.

## ಸನಂದನ ಉವಾಚ

**ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಂ ।**
**ಯಥಾ ಮೋಕ್ಷಮನುಪ್ರಾಪ್ತೋ ಜನಕೋ ಮಿಥಿಲಾಧಿಪಃ ॥ ೪ ॥**

**ಜನಕೋ ಜನದೇವಸ್ತು ಮಿಥಿಲಾಯಾ ಅಧೀಶ್ವರಃ ।**
**ಔರ್ಧ್ವದೇಹಿಕಧರ್ಮಾಣಾಮಾಸೀದ್ಯುಕ್ತೋ ವಿಚಿಂತನೇ ॥ ೫ ॥**

**ತಸ್ಯ ಸ್ಮ ಶತಮಾಚಾರ್ಯಾ ವಸಂತಿ ಸತತಂ ಗೃಹೇ ।**
**ದರ್ಶಯಂತಃ ಪೃಥಗ್ಧರ್ಮಾನ್ನಾನಾಪಾಷಂಡವಾದಿನಃ ॥ ೬ ॥**

**ಸ ತೇಷಾಂ ಪ್ರೇತ್ಯಭಾವೇ ಚ ಪ್ರೇತ್ಯಜಾತೌ ವಿನಿಶ್ಚಯೇ ।**
**ಆಗಮಸ್ಥಃ ಸ ಭೂಯಿಷ್ಠಮಾತ್ಮತತ್ತ್ವೇನ ತುಷ್ಯತಿ ॥ ೭ ॥**

**ತತ್ರ ಪಂಚಶಿಖೋ ನಾಮ ಕಾಪಿಲೇಯೋ ಮಹಾಮುನಿಃ ।**
**ಪರಿಧಾವನ್ಮಹೀಂ ಕೃತ್ಸ್ನಾಂ ಜಗಾಮ ಮಿಥಿಲಾಮಥ ॥ ೮ ॥**

---

೪. ಸನಂದನನು ಹೇಳಿದನು—ಈ ವಿಷಯದಲ್ಲಿಯೂ ಮಿಥಿಲಾಪತಿಯಾದ ಜನಕನು ಮೋಕ್ಷವನ್ನು ಪಡೆದ ವಿಧಾನವನ್ನು ನಿರೂಪಿಸಿರುವ ಪುರಾತನೇತಿಹಾಸವನ್ನು ಹೇಳುತ್ತಾರೆ.

೫. ಮಿಥಿಲಾದೇಶಕ್ಕೆ ರಾಜನಾದ ಜನದೇವನೆಂಬ ಜನಕವಂಶಜನು ಮರಣಾನಂತರ ಕರ್ತವ್ಯಧರ್ಮಗಳನ್ನು ಚಿಂತಿಸುವವನಾದನು.

೬. ಅವನ ಮನೆಯಲ್ಲಿ ಯಾವಾಗಲೂ ನಾನಾವಿಧವಾದ ಪಾಷಂಡ ಮತಸಿದ್ಧವಾದ ನಾಸ್ತಿಕ ಧರ್ಮಗಳನ್ನು ಬೋಧಿಸುತ್ತಿದ್ದ ನೂರುಮಂದಿ ಆಚಾರ್ಯರಿದ್ದರು.

೭. ಆರಾಜನಾದರೋ ಬಹಳ ವೈದಿಕನಿಷ್ಠೆಯುಳ್ಳವನಾಗಿದ್ದುದರಿಂದ, ಆ ಆಚಾರ್ಯರು ಆತ್ಮಸ್ವರೂಪ, ಪುನರ್ಜನ್ಮ, ಮರಣ ಈವಿಷಯಗಳಲ್ಲಿ ಹೇಳುತ್ತಿದ್ದ ನಾಸ್ತಿಕವಾದಗಳನ್ನು ಕೇಳಿಯೂ ಅದು ತನ್ನ ಮನಸ್ಸಿಗೊಪ್ಪದೇಹೋದುದರಿಂದ ಸಂತುಷ್ಟನಾಗಿರಲಿಲ್ಲ.

೮. ಆ ಸಂದರ್ಭದಲ್ಲಿ ಕಪಿಲೆಯ ಪುತ್ರನಾದ ಪಂಚಶಿಖನೆಂಬ ಮಹರ್ಷಿಯು ಸಮಸ್ತಭೂಮಿಯನ್ನೂ ಸಂಚರಿಸುವವನಾಗಿ ಮಿಥಿಲಾಪಟ್ಟಣಕ್ಕೆ ಬಂದುಸೇರಿದನು.

ಸರ್ವಸನ್ಯಾಸಧರ್ಮಾಣಾಂ ತತ್ವಜ್ಞಾನವಿನಿಶ್ಚಯೇ ।
ಸುಪರ್ಯವಸಿತಾರ್ಥಶ್ಚ ನಿರ್ದ್ವಂದ್ವೋ ನಷ್ಟಸಂಶಯಃ ॥ ೯ ॥

ಋಷೀಣಾಮಾಹುರೇಕಂ ಯಂ ಕಾಮಾದವಸಿತಂ ನೃಷು ।
ಶಾಶ್ವತಂ ಸುಖಮತ್ಯಂತಮನ್ವಿಚ್ಛನ್ತಂ ಸುದುರ್ಲಭಂ ॥ ೧೦ ॥

ಯಮಾಹುಃ ಕಪಿಲಂ ಸಾಂಖ್ಯಾಃ ಪರಮರ್ಷಿಂ ಪ್ರಜಾಪತಿಂ ।
ಸಮೇತ್ಯ ತೇನ ರೂಪೇಣ ವಿಸ್ಮಾಪಯತಿ ಹಿ ಸ್ವಯಂ ॥ ೧೧ ॥

ಆಸುರೇಃ ಪ್ರಥಮಂ ಶಿಷ್ಯಂ ಯಮಾಹುಶ್ಚಿರಜೀವಿನಂ ।
ಪಂಚಸ್ರೋತಸಿ ಯಸ್ಸತ್ರಮಾಸ್ತೇ ವರ್ಷಸಹಸ್ರಕಂ ॥ ೧೨ ॥

---

೯. ಅವನು ಸಮಸ್ತ ಸನ್ಯಾಸಧರ್ಮಗಳ ತತ್ವಜ್ಞಾನವನ್ನು ನಿರ್ಧರಿಸುವುದರಿಂದಾಗುವ ಪ್ರಯೋಜನವನ್ನು ಚೆನ್ನಾಗಿ ಬಲ್ಲವನೂ, ಸುಖದುಃಖಾದಿ ದ್ವಂದ್ವಗಳನ್ನು ಜಯಿಸಿದವನೂ, ಎಲ್ಲಾ ವಿಷಯಗಳನ್ನೂ ವಿಮರ್ಶಿಸಿ ತತ್ವ ಸಂಶಯವನ್ನು ಹೋಗಲಾಡಿಸಿಕೊಂಡವನೂ ಆಗಿದ್ದನು.

೧೦. ಭಗವದಿಚ್ಛೆಯಿಂದ ಲಭಿಸುವ, ಬಹುದುರ್ಲಭವೂ, ಶಾಶ್ವತವೂ ಆದ ಆತ್ಯಂತಿಕಸುಖವನ್ನು ಮನುಷ್ಯರಿಗುಂಟುಮಾಡಬೇಕೆಂದು ಬಯಸುತ್ತಿದ್ದ ಆ ಮುನಿಯನ್ನು ಋಷಿಶ್ರೇಷ್ಠನೆಂದು ಹೇಳುವರು.

೧೧. ಜ್ಞಾನಯೋಗಿಗಳು ಯಾವ ಕಪಿಲಸ್ವಾಮಿಯನ್ನು ಜ್ಞಾನಪೂರ್ಣನೂ, ಪ್ರಜೇಶ್ವರನೂ ಎಂದು ಹೇಳುವರೋ ಆ ಕಪಿಲದೇವನೇ ತನ್ನ ಪ್ರಶಿಷ್ಯನಾದ ಆ ಮುನಿಯರೂಪದಿಂದ ಬಂದು ಜನರನ್ನು ವಿಸ್ಮಯಗೊಳಿಸುವನೋ ಎಂಬಂತೆ ಆ ಮುನಿಯು ವಿರಾಜಿಸುತ್ತಿದ್ದನು.

೧೨. ಅವನು ಪಂಚಸ್ರೋತಸ್ಸೆಂಬ ಕ್ಷೇತ್ರದಲ್ಲಿ ಸಹಸ್ರವರ್ಷಗಳ ಕಾಲದ ಸತ್ರಯಾಗವನ್ನು ನಡೆಸತೊಡಗಿದ್ದ ಆಸುರಿಯೆಂಬ ಮುನಿಯ ಪ್ರಥಮ ಶಿಷ್ಯನೂ ಮತ್ತು ಚಿರಂಜೀವಿಯೂ ಆಗಿದ್ದನು.

**ಪಂಚಸ್ರೋತಸಮಾಗಮ್ಯ ಕಾಪಿಲಂ ಮಂಡಲಂ ಮಹತ್ ।**
**ಪುರುಷಾವಸ್ಥಮವ್ಯಕ್ತಂ ಪರಮಾರ್ಥಂ ನ್ಯವೇದಯತ್ ॥ ೧೩ ॥**

**ಇಷ್ಟ್ವಾ ಸತ್ರೇಣ ಸಂಯುಕ್ತೋ ಭೂಯಶ್ಚ ತಪಸಾಽಽಸುರಿಃ ।**
**ಕ್ಷೇತ್ರಕ್ಷೇತ್ರಜ್ಞಯೋರ್ವ್ಯಕ್ತಿಂ ಬುಬುಧೇ ದೇವದರ್ಶನಾತ್ ॥ ೧೪ ॥**

**ಯತ್ತದೇಕಾಕ್ಷರಂ ಬ್ರಹ್ಮ ನಾನಾರೂಪಂ ಪ್ರದೃಶ್ಯತೇ ।**
**ಆಸುರಿರ್ಮಂಡಲೇ ತಸ್ಮಿನ್ಪ್ರತಿಪೇದೇ ತದವ್ಯಯಂ ॥ ೧೫ ॥**

**ತಸ್ಯ ಪಂಚಶಿಖಃ ಶಿಷ್ಯೋ ಮಾನುಷ್ಯಾಃ ಪಯಸಾ ಭೃತಃ ।**
**ಬ್ರಾಹ್ಮಣೀ ಕಪಿಲಾ ನಾಮ ಕಾಚಿದಾಸೀತ್ಕುಟುಂಬಿನೀ ॥ ೧೬ ॥**

**ತಸ್ಯಾಃ ಪುತ್ರತ್ವಮಾಗತ್ಯ ಸ್ತ್ರಿಯಾಃ ಸ ಪಿಬತಿ ಸ್ತನೌ ।**
**ತತಶ್ಚ ಕಾಪಿಲೇಯತ್ವಂ ಲೇಭೇ ಬುದ್ಧಿಂ ಚ ನೈಷ್ಠಿಕೀಂ ॥ ೧೭ ॥**

---

೧೩. ಆ ಆಸುರಿಮುನಿಯು ಪಂಚಸ್ರೋತಸ್ಸಿಗೆ ಬಂದು ಪುರುಷಾಕಾರನೂ, ಅವ್ಯಕ್ತನೂ, ಸರ್ವೋತ್ತಮನೂ ಆದ ಕಪಿಲದೇವನ ಮಹಾಮಂಡಲವನ್ನು ತಿಳಿದನು.

೧೪. ಅವನು ಸತ್ರಯಾಗವನ್ನು ಮಾಡಿದ ಬಳಿಕ ಅಧಿಕವಾದ ತಪಸ್ಸನ್ನಾಚರಿಸಿ ಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡು ಕ್ಷೇತ್ರಕ್ಷೇತ್ರಜ್ಞರ ವಿವೇಚನೆಯನ್ನು ತಿಳಿದನು.

೧೫. ಆಸುರಿಯು ಏಕಾಕ್ಷರವಾದ ಪ್ರಣವದಿಂದ ಪ್ರತಿಪಾದ್ಯನಾದ, ಜಗತ್ತಿನಲ್ಲಿ ನಾನಾ ರೂಪಗಳಿಂದ ಕಾಣಿಸಿಕೊಳ್ಳುವ, ನಾಶರಹಿತನಾದ ಪರಬ್ರಹ್ಮನನ್ನು ಆ ಮಂಡಲದಲ್ಲಿ ತಿಳಿದನು.

೧೬–೧೭. ಅವನಿಗೆ ಮನುಷ್ಯಸ್ತ್ರೀಯ ಸ್ತನ್ಯದಿಂದ ಬೆಳೆದ ಪಂಚಶಿಖನೆಂಬ ಒಬ್ಬ ಶಿಷ್ಯನಿದ್ದನು. ಅವನು ಬ್ರಾಹ್ಮಣಗೃಹಿಣಿಯಾದ ಕಪಿಲೆಯೆಂಬ ಒಬ್ಬಸ್ತ್ರೀಯ ಸಾಕುಮಗನಾಗಿ ಆಕೆಯ ಸ್ತನ್ಯಪಾನಮಾಡುತ್ತಿದ್ದನು. ಅದರಿಂದ ಅವನು ಕಾಪಿಲೇಯನೆನಿಸಿ ಆಸ್ತಿಕ್ಯಬುದ್ಧಿಯನ್ನು ಹೊಂದಿದನು.

ಏತನ್ಮೇ ಭಗವಾನಾಹ ಕಾಪಿಲೇಯಸ್ಯ ಸಂಭವಂ ।
ತಸ್ಯ ತತ್ಕಾಪಿಲೇಯತ್ವಂ ಸರ್ವವಿತ್ವಮನುತ್ತಮಂ ॥ ೧೮ ॥

ಸಾಮಾನ್ಯಂ ಜನಕಂ ಜ್ಞಾತ್ವಾ ಧರ್ಮಜ್ಞೋ ಜ್ಞಾನಿನಂ ಮುನೇ ।
ಉಪೇತ್ಯ ಶತಮಾಚಾರ್ಯಾನ್ಮೋಹಯಾಮಾಸ ಹೇತುಭಿಃ ॥ ೧೯ ॥

ಜನಕಸ್ತ್ವಭಿಸಂರಕ್ತಃ ಕಾಪಿಲೇಯಾನುದರ್ಶನಾತ್ ।
ಉತ್ಸೃಜ್ಯ ಶತಮಾಚಾರ್ಯಾನ್ಪೃಷ್ಠತೋಽನುಜಗಾಮ ತಂ ॥ ೨೦ ॥

ತಸ್ಮೈ ಪರಮಕಲ್ಯಾಯ ಪ್ರಣತಾಯ ಚ ಧರ್ಮತಃ ।
ಅಬ್ರವೀತ್ಪರಮಂ ಮೋಕ್ಷಂ ಯತಃ ಸಾಂಖ್ಯಂ ವಿಧೀಯತೇ ॥ ೨೧ ॥

---

೧೮. ಈರೀತಿ ಕಾಪಿಲೇಯನ ಜನ್ಮವೃತ್ತಾಂತವನ್ನೂ, ಅವನು ಕಾಪಿಲೇಯನೆನಿಸಿದ ಬಗೆಯನ್ನೂ, ಸರ್ವಜ್ಞನೂ, ಶ್ರೇಷ್ಠನೂ ಆದ ಸಂಗತಿಯನ್ನೂ ನನಗೆ ಭಗವಂತನು ಹೇಳಿದನು.

೧೯. ಮುನಿಯೇ! ಜ್ಞಾನಿಯಾದ ಜನಕನು ಅವನ ಮನೆಯಲ್ಲಿದ್ದ ಆಚಾರ್ಯರೆಲ್ಲರೂ ಸಮಾನರೆಂದು ಭಾವಿಸಿರುವುದನ್ನು ಧರ್ಮಜ್ಞನಾದ ಪಂಚಶಿಖನು ತಿಳಿದು, ಆ ರಾಜನ ಬಳಿಗೆ ಬಂದು ಸಯುಕ್ತಿಕವಾಗಿ ವಾದಮಾಡಿ ಆ ನೂರು ಮಂದಿ ಆಚಾರ್ಯರನ್ನೂ ಮೋಹಗಳಿಸಿದನು.

೨೦. ಜನಕನಾದರೋ ಕಾಪಿಲೇಯನನ್ನು ನೋಡಿದಮೇಲೆ ಅವನಲ್ಲಿಯೇ ಅನುರಕ್ತನಾಗಿ ಆ ನೂರುಮಂದಿ ಆಚಾರ್ಯರನ್ನೂ ಬಿಟ್ಟು ಆ ಮುನಿಯನ್ನೇ ಹಿಂಬಾಲಿಸಿದನು.

೨೧. ಧರ್ಮವನ್ನು ತಿಳಿಯುವುದಕ್ಕಾಗಿ ತನ್ನ ಬಳಿಗೆ ಬಂದು ನಮಸ್ಕರಿಸಿದ ಪರಮ ಸಮರ್ಥನಾದ ಆ ಜನಕನಿಗೆ ಪಂಚಶಿಖಮುನಿಯು ಸಾಂಖ್ಯವೆಂದು ವಿಹಿತವಾದ ಉತ್ತಮಮೋಕ್ಷಮಾರ್ಗವನ್ನುಪದೇಶಿಸಿದನು.

**ಜಾತಿನಿರ್ವೇದಮುಕ್ತ್ವಾ ಸ ಕರ್ಮನಿರ್ವೇದಮಬ್ರವೀತ್ ।**
**ಕರ್ಮನಿರ್ವೇದಮುಕ್ತ್ವಾ ಚ ಸರ್ವನಿರ್ವೇದಮಬ್ರವೀತ್ ॥ ೨೨ ॥**

**ಯದರ್ಥಂ ಧರ್ಮಸಂಸರ್ಗಃ ಕರ್ಮಣಾಂ ಚ ಫಲೋದಯಃ ।**
**ತಮನಾಶ್ವಾಸಿಕಂ ಮೋಹಂ ವಿನಾಶಿ ಚಲಮಧ್ರುವಂ ॥ ೨೩ ॥**

**ದೃಶ್ಯಮಾನೇ ವಿನಾಶೇ ಚ ಪ್ರತ್ಯಕ್ಷೇ ಲೋಕಸಾಕ್ಷಿಕೇ ।**
**ಆಗಮಾತ್ಪರಮಸ್ತೀತಿ ಬ್ರುವನ್ನಪಿ ಪರಾಜಿತಃ ॥ ೨೪ ॥**

**ಆತ್ಮನಾ ಹ್ಯಾತ್ಮನೋ ನಿತ್ಯಂ ಕ್ಲೇಶೋ ಮೃತ್ಯುಜರಾಽಽಮಯಃ ।**
**ಆತ್ಮಾನಂ ಮನ್ಯತೇ ಮೋಹಾತ್ತದಸಮ್ಯಕ್ಪರಂ ಮತಂ ॥ ೨೫ ॥**

---

೨೨. ಅವನು ಸಂಸಾರದಲ್ಲಿ ವೈರಾಗ್ಯವುಂಟಾಗುವ ಬಗೆಯನ್ನು ಹೇಳಿ, ಫಲಾಶೆಯಿಂದ ಕರ್ಮವು ತಾಜ್ಯವೆಂದುಪದೇಶಿಸಿ, ಸತ್ಯಲೋಕಪರ್ಯಂತವಾಗಿ ಸರ್ವವೂ ನಶ್ವರವೆಂಬುದನ್ನು ವಿವರಿಸಿದನು.

೨೩. ಧರ್ಮಾನುಷ್ಠಾನ ಕರ್ಮಫಲಪ್ರಾಪ್ತಿಗಳಿಗೆ ಸಾಧನವೂ, ನಂಬಲನರ್ಹವೂ, ನಾಶಕರವೂ, ಚಂಚಲವೂ, ಅಸ್ಥಿರವೂ ಆದ ಮೋಹವನ್ನು ವಿವರಿಸಿ ಹೀಗೆ ಹೇಳಿದನು.

೨೪. ದೇಹಕ್ಕೆ ವಿನಾಶವುಂಟೆಂಬುದು ಪ್ರತ್ಯಕ್ಷಸಿದ್ಧವು. ಇದಕ್ಕೆ ಲೋಕವೇ ಸಾಕ್ಷಿ. ಹೀಗಿದ್ದರೂ ಬರೀ ಆಗಮಪ್ರಮಾಣದಿಂದ ಶರೀರಕ್ಕಿಂತಲೂ ಬೇರೆಯಾದ ಆತ್ಮವುಂಟೆಂದು ಹೇಳುವ ವಾದಿಯಮಾತು ನಿಲ್ಲಲಾರದು.

೨೫. ಜೀವನಿಗೆ ಯಾವಾಗಲೂ ಮರಣ, ಮುಪ್ಪು, ವ್ಯಾಧಿ ಇವುಗಳ ಕ್ಲೇಶವು ಸ್ವಾಭಾವಿಕವೇ ಸರಿ. ವಿವೇಚನೆಯಿಲ್ಲದೆ ಶರೀರಕ್ಕಿಂತಲೂ ಆತ್ಮವು ಬೇರೆಯಾಗಿದೆಯೆಂದು ತಿಳಿಯುವುದು ತಪ್ಪು.

**ಅಥ ಚೇದೇವಮಪ್ಯಸ್ತಿ ಯಲ್ಲೋಕೇ ನೋಪಪದ್ಯತೇ ।**
**ಅಜರೋಽಯಮಮೃತ್ಯುಶ್ಚ ರಾಜಾಽಸೌ ಮನ್ಯತೇ ಯಥಾ ॥ ೨೬ ॥**

**ಅಸ್ತಿ ನಾಸ್ತೀತಿ ಚಾಪ್ಯೇತತ್ತಸ್ಮಿನ್ನಸತಿಲಕ್ಷಣೇ ।**
**ಕಿಮಧಿಷ್ಠಾಯ ತದ್ಬ್ರೂಯಾಲ್ಲೋಕಯಾತ್ರಾವಿನಿಶ್ಚಯಂ ॥ ೨೭ ॥**

**ಪ್ರತ್ಯಕ್ಷಂ ಹ್ಯೇತಯೋರ್ಮೂಲಂ ಕೃತಾಂತಸ್ಯೈತಯೋರಪಿ ।**
**ಪ್ರತ್ಯಕ್ಷೇಣಾಗಮೋ ಭಿನ್ನಃ ಕೃತಾಂತೋ ವಾ ನ ಕಶ್ಚನ ॥ ೨೮ ॥**

**ಯತ್ರ ತತ್ರಾನುಮಾನೇಽಸ್ಮಿನ್ಕೃತಂ ಭಾವಯತೋಽಪಿ ಚ ।**
**ನಾನ್ಯೋ ಜೀವಃ ಶರೀರಸ್ಯ ನಾಸ್ತಿಕಾನಾಂ ಮತೇ ಸ್ಥಿತಃ ॥ ೨೯ ॥**

---

೨೬. ಹೀಗಿದ್ದರೂ ಲೋಕದಲ್ಲಿ ಉಪಲಬ್ಧವಾಗದೆಯೂ, ಯುಕ್ತಿಯಿಂದ ಸಿದ್ಧಿಸದೆಯೂ ಇರುವ ಶರೀರಭಿನ್ನನಾದ ಆತ್ಮನು ಇರುವನೆಂದು ಹೇಳಿದರೆ ಈ ರಾಜನು ಜರಾಮರಣಗಳಿಲ್ಲದ ಆತ್ಮನನ್ನು ತಿಳಿಯುವ ಬಗೆ ಹೇಗೆ?

೨೭. ಲೋಕದಲ್ಲಿ ಇದೆ, ಇಲ್ಲ ಎಂದು ನಿರ್ಣಯಿಸಿ ವ್ಯವಹಾರಮಾಡಲು ಸಾಧಕಗಳಾದ ಪ್ರಮಾಣವಿಲ್ಲದಿರುವಾಗ ಶರೀರಭಿನ್ನನಾದ ಆತ್ಮನು 'ಇದ್ದಾನೆ' ಅಥವಾ 'ಇಲ್ಲ' ಎಂಬುದಾಗಿ ಯಾವುದರ ಆಧಾರದಮೇಲೆ ನಿರ್ಣಯಿಸಿ ಹೇಳಬೇಕು?

೨೮. ಅನುಮಾನಾಗಮಗಳೆರಡಕ್ಕೂ ಪ್ರತ್ಯಕ್ಷವೇ ಮೂಲವಾಗಿರುವುದು. ಆದಕಾರಣ ಅವುಗಳಿಂದ ವಿಷಯವನ್ನು ನಿರ್ಣಯಿಸುವುದು ಪ್ರತ್ಯಕ್ಷ ಸಮ್ಮತವಾಗಿರಬೇಕು. ಪ್ರತ್ಯಕ್ಷದಿಂದ ಆಗಮವು ವಿರೋಧಿಸಲ್ಪಟ್ಟರೆ ಅದರಿಂದ ಯಾವ ನಿರ್ಣಯವೂ ಆಗುವುದಿಲ್ಲ.

೨೯. ಈರೀತಿಯಾಗಿ ಪ್ರತ್ಯಕ್ಷವಿರುದ್ಧವಾದ ಅನುಮಾನವು ಪ್ರಮಾಣವಾಗುವುದಿಲ್ಲವಾದಕಾರಣ ಶರೀರಭಿನ್ನನಾದ ಆತ್ಮನಿರುವನೆಂದು ಅನುಮಾನದಿಂದ ಸಿದ್ಧಿಸುತ್ತದೆಯೆಂದು ಭಾವಿಸುವುದು ಸರಿಯಲ್ಲ. ಆದಕಾರಣ ಶರೀರಕ್ಕಿಂತ ಭಿನ್ನನಾದ ಜೀವನಿಲ್ಲವೆಂಬುದು ನಾಸ್ತಿಕರಮತವು ಎಂದು ನಾಸ್ತಿಕವಾದವನ್ನು ವಿವರಿಸಿ ಹೇಳಿದನು.

ರೇತೋ ಧಾತುರ್ವಟಕಣಿಕಾ ಘೃತಧೂಮಾಧಿವಾಸನಂ ।
ಜಾತಿಸ್ಮೃತಿರಯಸ್ಕಾಂತಃ ಸೂರ್ಯಕಾಂತೋಂಬುಭಕ್ಷಣಂ ॥ ೩೦ ॥

ಪ್ರೇತ್ಯ ಭೂತಾಪ್ಯಯಶ್ಚೈವ ದೇವತಾಭ್ಯುಪಯಾಚನಂ ।
ಮೃತೇ ಕರ್ಮನಿವೃತ್ತಿಶ್ಚ ಪ್ರಮಾಣಮಿತಿ ನಿಶ್ಚಯಃ ॥ ೩೧ ॥

ನನ್ವೇತೇ ಹೇತವಃಸಂತಿ ಯೇ ಕೇಚಿನ್ಮೂರ್ತಿಸಂಸ್ಥಿತಾಃ ।
ಅಮೂರ್ತಸ್ಯ ಹಿ ಮೂರ್ತೇನ ಸಾಮಾನ್ಯಂ ನೋಪಲಭ್ಯತೇ ॥ ೩೨ ॥

ಅವಿದ್ಯಾ ಕರ್ಮ ತೃಷ್ಣಾ ಚ ಕೇಚಿದಾಹುಃ ಪುನರ್ಭವೇ ।
ತಸ್ಮಿನ್ನಷ್ಟೇ ಚ ದಗ್ಧೇ ಚ ದೇಹೇ ಮರಣಧರ್ಮಿಣಿ ॥ ೩೩ ॥

ಅನ್ಯೋಽಸೌ ಜಾಯತೇ ಪ್ರೇತಸ್ತದಾಹುಃ ತತ್ವಮಕ್ಷಯಂ ।
ಯದಾ ಸ್ವರೂಪತಶ್ಚಾನ್ಯೋ ಜಾತಿತಃ ಶ್ರುತಿತೋರ್ಥತಃ ॥ ೩೪ ॥

---

೩೦-೩೧. ರೇತಸ್ಸು (ರೇತಸ್ಸಿನಿಂದ ಶರೀರ ಹುಟ್ಟುತ್ತದೆಂಬುದು) ವಾತ ಪಿತ್ತಾದಿ ಧಾತುಗಳು, ಆಲದಬೀಜ, ತುಪ್ಪ, ಹೊಗೆಯಿಂದ ಗಿಡಕ್ಕೆ ಮಾಡುವ ಕಸಿ, ಪೂರ್ವಜನ್ಮಸ್ಮರಣೆ, ಅಯಸ್ಕಾಂತಶಿಲೆ, ಸೂರ್ಯಕಾಂತಶಿಲೆ, ನೀರು ಕುಡಿಯುವುದು, ಸತ್ತಮೇಲೆ ಶರೀರವು ಭೂತಗಳಲ್ಲಿ ಲಯವಾಗುವುದು, ದೇವತಾ ಪ್ರಾರ್ಥನೆ, ಮೃತ ದೇಹದಲ್ಲಿ ಚೇಷ್ಟೆ ಇಲ್ಲದಿರುವಿಕೆ ಇವುಗಳೆಲ್ಲವೂ ಅತೀಂದ್ರಿಯ ವಸ್ತುವು ಉಂಟೆಂಬ ವಿಷಯದಲ್ಲಿಯೂ ಅನುಮಾನಪ್ರಾಮಾಣ್ಯ ವಿಷಯದಲ್ಲಿಯೂ ಪ್ರಮಾಣವು.

೩೨. ಈ ಕಾರಣಗಳಲ್ಲಿ ಕೆಲವು ಬದುಕಿರುವ ಶರೀರಗಳಲ್ಲಿಯೇ ಕಾರ್ಯವನ್ನು ನಡೆಯಿಸುತ್ತವೆ. ಅಮೂರ್ತಗಳಲ್ಲಿ (ಅಸತ್ತುಗಳಲ್ಲಿ) ಮೂರ್ತ (ಸದ್ವಸ್ತುವಿನ) ಸಾದೃಶ್ಯವು ಉಪಲಬ್ಧವಾಗುವುದಿಲ್ಲ.

೩೩-೩೪. ಅವಿದ್ಯೆ, ಕರ್ಮ ಮತ್ತು ಕಾಮ ಇವುಗಳು ಪೂರ್ವಜನ್ಮಕ್ಕೆ ಕಾರಣವೆಂದು ಕೆಲವರು ಹೇಳುತ್ತಾರೆ. ಮರಣಶೀಲವಾದ ಶರೀರವು ದಹಿಸಲ್ಪಟ್ಟಾಗ್ಯೂ ಶರೀರಭಿನ್ನನಾದ ಜೀವನು ಇದ್ದೇಯಿರುವನು. ಜೀವನನ್ನು ನಾಶವಿಲ್ಲದ ವಸ್ತುವೆಂದು ಹೇಳುವರು.

ಕಥಮಸ್ಮಿನ್ಸ ಇತ್ಯೇವ ಸಂಬೋಧಃ ಸ್ಯಾದಸಂಹಿತಃ ।
ಏವಂ ಸತಿ ಚ ಕಾ ಪ್ರೀತಿಃ ದಾನವಿದ್ಯಾತಪೋಬಲೈಃ ॥ ೩೫ ॥

ಯದಸ್ಯಾಚರಿತಂ ಕರ್ಮ ಸಾಮಾನ್ಯಾತ್ಪ್ರತಿಪದ್ಯತೇ ।
ಅಪಿ ತ್ವಯಮಿಹೈವಾನ್ಯೈಃ ಪ್ರಾಕೃತೈರ್ದುಃಖಿತೋ ಭವೇತ್ ॥ ೩೬ ॥

ಸುಖಿತೋ ದುಃಖಿತೋ ವಾಽಪಿ ದೃಶ್ಯಾದೃಶ್ಯವಿನಿರ್ಣಯಃ ।
ಯಥಾ ಹಿ ಮುಸಲೈರ್ಹನ್ಯುಃ ಶರೀರಂ ತತ್ಪುನರ್ಭವೇತ್ ॥ ೩೭ ॥

ವೃಥಾ ಜ್ಞಾನಂ ಯದನ್ಯಚ್ಚ ಯೇನೈತನ್ನೋಪಲಭ್ಯತೇ ।
ಋತುಸಂವತ್ಸರೌ ತಿಷ್ಯಃ ಶಿತೋಷ್ಣೌ ಚ ಪ್ರಿಯಾಪ್ರಿಯೇ ॥ ೩೮ ॥

---

೩೪-೩೫. ಸ್ವರೂಪದಿಂದಲೂ, ಸ್ವಭಾವದಿಂದಲೂ, ಅನುಭವ ಮತ್ತು ವಿಷಯಗಳಿಂದಲೂ ಸಹ ಭಿನ್ನವಾದ ಈ ಶರೀರದಲ್ಲಿ ಅದೇ ಇದು ಎಂಬ ಪ್ರತ್ಯಭಿಜ್ಞೆಯು ಹೇಗೆ ಸಂಭವಿಸೀತು? ತಾನು ಮಾಡದ ಕರ್ಮಫಲವು ಬರುವುದಾದರೂ ಹೇಗೆ? ಹೀಗೆ ನಶ್ವರವಾದ ಶರೀರವೇ ಆತ್ಮನಾದರೆ ದಾನ, ಅಧ್ಯಯನ, ತಪಸ್ಸು ಮುಂತಾದುವುಗಳಲ್ಲಿ ಫಲಾಪೇಕ್ಷೆಯಿಂದ ಪ್ರವರ್ತಿಸುವುದು ಹೇಗೆ?

೩೬. ಸಾಮಾನ್ಯವಾಗಿ ಮನುಷ್ಯರಿಂದ ಆಚರಿಸಲ್ಪಟ್ಟ ಕರ್ಮವು ಫಲಪ್ರದವಾಗುತ್ತದೆ. ಆದರೆ ಇವನು ಲೌಕಿಕವಾದ ಇತರ ಕರ್ಮಗಳಿಂದ ದುಃಖಿಯಾಗುವನು.

೩೭. ಶರೀರದ ಒಂದು ಭಾಗವನ್ನು ಒನಕೆಯಿಂದ ಹೊಡೆದರೆ ಅದು ಪುನಃ ಬೆಳೆಯುವಂತೆ ಸುಖಾನುಭವ ಅಥವಾ ದುಃಖಾನುಭವಗಳಿಂದ ದೃಶ್ಯ ಅಥವಾ ಅದೃಶ್ಯಗಳನ್ನು ನಿಶ್ಚಯಿಸಬೇಕು.

೩೮-೩೯. ಪರಲೋಕಾದಿಗಳು ಉಪಲಬ್ಧವಾಗುವುದಿಲ್ಲವಾದಕಾರಣ ಜ್ಞಾನ ಕರ್ಮಗಳೆಲ್ಲವೂ ವ್ಯರ್ಥವು. ಋತು, ಸಂವತ್ಸರ, ಯುಗ, ಶೀತ, ಉಷ್ಣ, ಪ್ರಿಯ, ಅಪ್ರಿಯ ಇವುಗಳು ಕಾಲಾದಿಭೇದದಿಂದ ಹೇಗೆ ದೃಶ್ಯವು, ಅದೃಶ್ಯವೂ ಆಗು

ಯಥಾತೀತಾ ನ ದೃಶ್ಯಂತೇ ತಾದೃಶಃ ಸತ್ವಸಂಕ್ಷಯಃ ।
ಜರಯಾಭಿಪರೀತಸ್ಯ ಮೃತ್ಯುನಾ ಚ ವಿನಾಶಿತಂ ॥ ೩೯ ॥

ದುರ್ಬಲಂ ದುರ್ಬಲಂ ಪೂರ್ವಂ ಗೃಹಸ್ಯೇವ ವಿನಶ್ಯತಿ ।
ಇಂದ್ರಿಯಾಣಿ ಮನೋ ವಾಯುಃ ಶೋಣಿತಂ ಮಾಂಸಮಸ್ಥಿ ಚ ॥ ೪೦ ॥

ಆನುಪೂರ್ವ್ಯಾ ವಿನಶ್ಯಂತಿ ಸ್ವಂ ಧಾತುಮುಪಯಾಂತಿ ಚ ।
ಲೋಕಯಾತ್ರಾವಿಘಾತಶ್ಚ ದಾನಧರ್ಮಫಲಾಗಮೇ ॥ ೪೧ ॥

ತದರ್ಥಂ ವೇದಶಬ್ದಾಶ್ಚ ವ್ಯವಹಾರಾಶ್ಚ ಲೌಕಿಕಾಃ ।
ಇತಿ ಸಮ್ಯಙ್ಮನಸ್ಯೇತೇ ಬಹವಃ ಸಂತಿ ಹೇತವಃ ॥ ೪೨ ॥

ಏತದಸ್ತೀತಿ ನಾಸ್ತೀತಿ ನ ಕಶ್ಚಿತ್ಪ್ರತಿದೃಶ್ಯತೇ ।
ತೇಷಾಂ ವಿಮೃಶತಾಮೇವ ತತ್ಸಮ್ಯಗಭಿಧಾವತಾಂ ॥ ೪೩ ॥

---

ವುವೋ ಪ್ರಾಣಿ ನಾಶವೂ ಸಹ ಹಾಗೆಯೇ ಆಗುವುದು. ಮುಪ್ಪು ಬಂದವನಿಗೆ ಮೃತ್ಯುವಿನಿಂದ ವಿನಾಶವಾಗುವುದು.

೪೦-೪೧. ಇಂದ್ರಿಯಗಳು, ಮನಸ್ಸು, ವಾಯು, ರಕ್ತ, ಮಾಂಸ ಮತ್ತು ಅಸ್ಥಿ, ಇವುಗಳಲ್ಲಿ ಪೂರ್ವಪೂರ್ವವು ದುರ್ಬಲವಾಗಿ ಮನೆಯಂತೆ ಕ್ರಮವಾಗಿ ನಾಶವಾಗುವುದು. ಹೀಗೆ ಕ್ರಮವಾಗಿ ನಷ್ಟವಾಗಿ ಅದರ ಮೂಲಭೂತ ಧಾತುಗಳನ್ನು (ಪಂಚಭೂತಗಳನ್ನು) ಹೊಂದಿ ಲೋಕವ್ಯಾಪಾರವು ಲುಪ್ತವಾಗುತ್ತದೆ.

೪೨-೪೩. ದಾನ ಧರ್ಮರೂಪವಾದ ಫಲಗಳಿಗಾಗಿ ವೇದವಿಧಿಗಳು ಮತ್ತು ಅದಕ್ಕನುಸಾರವಾದ ಲೌಕಿಕವ್ಯವಹಾರಗಳೂ ಪ್ರವೃತ್ತವಾಗಿವೆ. ಈ ಪ್ರಕಾರ ಬಹುಕಾರಣಗಳು ಮನಸ್ಸಿನಲ್ಲಿ ಇವೆ. ಆದಕಾರಣ ಇದು ಉಂಟು ಇಲ್ಲವೆಂಬುದನ್ನು ಯಾರೂ ನೋಡುವುದಿಲ್ಲ. ವಿಮರ್ಶನಶೀಲರಾಗಿ ಅದರಲ್ಲಿಯೇ ಮನಸ್ಸನ್ನು ಓಡಿಸುವವರಿಗೆ ಮಾತ್ರ ತತ್ವಸೂಕ್ಷ್ಮವು ತಿಳಿಯುವುದು. ಬುದ್ಧಿಯು ಸಾಮಾನ್ಯವಾಗಿ ಯಾವುದಾದರೊಂದು ವಿಷಯದಲ್ಲಿ ಇರುತ್ತದೆ. ಅದು ಅಲ್ಲಿಯೇ

ಕ್ವಚಿನ್ನಿವಸತೇ ಬುದ್ಧಿಃ ತತ್ರ ಜೀರ್ಯತಿ ವೃಕ್ಷವತ್ ।
ಏವಮರ್ಥೈರನರ್ಥೈಶ್ಚ ದುಃಖಿತಾಃ ಸರ್ವಜಂತವಃ ॥ ೪೪ ॥

ಆಗಮ್ಯೈರಪಕೃಷ್ಯಂತೇ ಹಸ್ತಿಪೈರ್ಹಸ್ತಿನೋ ಯಥಾ ॥ ೪೫ ॥

ಅರ್ಥಾಂಸ್ತಥಾ ಹಂತಿ ಸುಖಾವಹಾಂಶ್ಚ
ಲಿಹಂತ ಏತೇ ಬಹವೋಽಪಶುಷ್ಕಾಃ ।
ಮಹತ್ತರಂ ದುಃಖಮಭಿಪ್ರಪನ್ನಾ
ಹಿತ್ವಾಮಿಷಂ ಮೃತ್ಯುವಶಂ ಪ್ರಯಾಂತಿ ॥ ೪೬ ॥

ವಿನಾಶಿನೋಽಹ್ಯಧ್ರುವಜೀವಿನಃ ಕಿಂ
ಕಿಂ ಬಂಧುಭಿರ್ಮಿತ್ರಪರಿಗ್ರಹೈಶ್ಚ ।
ವಿಹಾಯ ಯೋ ಗಚ್ಛತಿ ಸರ್ವಮೇವ
ಕ್ಷಣೇನ ಗತ್ವಾ ನ ನಿವರ್ತತೇ ಚ ॥ ೪೭ ॥

---

ವೃಕ್ಷದಂತೆ ಜೀರ್ಣವಾಗುವುದು. ಈರೀತಿಯಾಗಿ ಪ್ರಾಪ್ತವಾಗುವ ಅರ್ಥ ಮತ್ತು ಅನರ್ಥಗಳಿಂದ ಮಾವಟಿಗರು ಆನೆಗಳನ್ನು ಎಳೆಯುವಂತೆ ಸಕಲಪ್ರಾಣಿಗಳೂ ದುಃಖಯುಕ್ತರಾಗಿ ಸೆಳೆಯಲ್ಪಡುವರು.

೪೬. ಈರೀತಿಯಾದ ಶುಷ್ಕವಾದಗಳು ಸುಖಪ್ರದಗಳಾದ ಅರ್ಥಗಳನ್ನು ನಾಶಪಡಿಸುತ್ತವೆ. ಸುಖವನ್ನು ಬಯಸುವ ಇಂತಹವರು ಮಹತ್ತಾದ ದುಃಖಕ್ಕೀಡಾಗಿ ಮೃತ್ಯುವಶರಾಗುವರು.

೪೭. ಮನುಷ್ಯರು ವಿನಾಶಶೀಲವಾದ ಅಸ್ಥಿರ ಜೀವನವನ್ನು ಉಳ್ಳವರು. ಹೀಗಿರುವಾಗ ಬಂಧುಗಳಿಂದ ಮತ್ತು ಮಿತ್ರಪರಿಗ್ರಹದಿಂದ ಏನು ಫಲ? ಸಕಲ ಐಹಿಕವನ್ನೂ ಬಿಟ್ಟು ಹೋಗುವವನೇ ಕ್ಷಣಮಾತ್ರದಲ್ಲಿ ಉತ್ತಮ ಸ್ಥಾನವನ್ನು ಹೊಂದಿ ಪುನಃ ಈ ಸಂಸಾರಬಂಧಕ್ಕೆ ಹಿಂತಿರುಗುವುದಿಲ್ಲ.

ಭೂವ್ಯೋಮತೋಯಾನಲವಾಯವೋಽಪಿ
ಸದಾ ಶರೀರಂ ಪ್ರತಿಪಾಲಯಂತಿ ।
ಇತೀದಮಾಲಕ್ಷ್ಯ ರತಿಃ ಕುತೋ ಭವೇ
ದ್ವಿನಾಶಿನೋಽಪ್ಯಸ್ಯ ನ ಶರ್ಮ ವಿದ್ಯತೇ ॥ ೪೮ ॥

ಇದಮನುಪಾಧಿವಾಕ್ಯಮಚ್ಛಲಂ
ಪರಮನಿರಾಮಯಮಾತ್ಮಸಾಕ್ಷಿಕಂ ।
ನರಪತಿರಭಿವೀಕ್ಷ್ಯ ವಿಸ್ಮಿತಃ
ಪುನರನುಯೋಕ್ತುಮಿದಂ ಪ್ರಚಕ್ರಮೇ ॥ ೪೯ ॥

ಜನಕ ಉವಾಚ

ಭಗವನ್ಯದಿ ನ ಪ್ರೇತ್ಯ ಸಂಜ್ಞಾ ಭವತಿ ಕಸ್ಯಚಿತ್ ।
ಏವಂ ಸತಿ ಕಿಮಜ್ಞಾನಂ ಜ್ಞಾನಂ ವಾ ಕಿಂ ಕರಿಷ್ಯತಿ ॥ ೫೦ ॥

ಸರ್ವಮುಚ್ಛೇದನಿಷ್ಠಂ ಸ್ಯಾತ್ಪಶ್ಯ ಚೈತದ್ದ್ವಿಜೋತ್ತಮ ।
ಅಪ್ರಮತ್ತಃ ಪ್ರಮತ್ತೋ ವಾ ಕಿಂ ವಿಶೇಷಂ ಕರಿಷ್ಯತಿ ॥ ೫೧ ॥

---

೪೮. ಭೂಮಿ, ಆಕಾಶ, ಜಲ, ತೇಜಸ್ಸು ಮತ್ತು ವಾಯು ಇವುಗಳು (ಪೃಥಿವ್ಯಾದಿ ಪಂಚಭೂತಾಭಿಮಾನಿ ದೇವತೆಗಳು) ಯಾವಾಗಲೂ ಶರೀರವನ್ನು ರಕ್ಷಿಸಿಕೊಂಡು ಬರುತ್ತವೆ ಎಂಬುದನ್ನು ನೋಡಿದರೆ ಈ ದೇಹದಲ್ಲಿ ಪ್ರೇಮವು ಹೇಗೆತಾನೇ ಬಂದೀತು? ವಿನಾಶಿಯಾದ ಈ ಶರೀರಕ್ಕೆ ಸುಖವಿಲ್ಲ.

೪೯. ಛಲರಹಿತವು, ಉತ್ತಮವು, ನಿರ್ದೋಷವು, ಅನುಭವಸಿದ್ಧವೂ ಆದ ಈ ಸ್ವಾಭಾವಿಕೋಕ್ತಿಯನ್ನು ಜನಕರಾಜನು ಕೇಳಿ ವಿಸ್ಮಯಗೊಂಡು ಪುನಃ ಇದನ್ನೇ ಕೇಳಲು ಉಪಕ್ರಮಿಸಿದನು.

೫೦. ಜನಕನು ಹೇಳಿದನು—ಪೂಜ್ಯರೇ! ಮರಣಾನಂತರ ಯಾರಿಗೂ ಸಂಜ್ಞೆಯಿಲ್ಲದಿರುವ ಪಕ್ಷದಲ್ಲಿ ಅಜ್ಞಾನ ಅಥವಾ ಜ್ಞಾನವು ಏನನ್ನು ಮಾಡುತ್ತದೆ?

೫೧. ದ್ವಿಜಶ್ರೇಷ್ಠನೇ! ಇದನ್ನು ನೋಡು; ಸಕಲವೂ ವಿನಾಶಶೀಲವಾಗಿರುವುದು. ಅಪ್ರಮತ್ತ ಅಥವಾ ಪ್ರಮತ್ತನು ಯಾವ ವಿಶೇಷವನ್ನು ಮಾಡಿಯಾನು?

ಅಸಂಸರ್ಗೋ ಹಿ ಭೂತೇಷು ಸಂಸರ್ಗೋ ವಾ ವಿನಾಶಿಷು ।
ಕಸ್ಮೈ ಕ್ರಿಯೇತ ಕಲ್ಪೇತ ನಿಶ್ಚಯಃ ಕೋಽತ್ರ ತತ್ವತಃ ॥ ೫೨ ॥

ಸನಂದನ ಉವಾಚ

ತಮಸಾ ಹಿ ಮತಿಶ್ಛನ್ನಾ ವಿಭ್ರಾಂತಮಿವಚಾತುರಂ ।
ಪುನಃ ಪ್ರಶಮಯನ್ವಾಕ್ಯೈಃ ಕವಿಃ ಪಂಚಶಿಖೋಽಬ್ರವೀತ್ ॥ ೫೩ ॥

ಪಂಚಶಿಖ ಉವಾಚ

ಉಚ್ಛೇದನಿಷ್ಠಾ ದೇಹೇಽಸ್ತಿ ಭಾವನಿಷ್ಠಾ ನ ವಿದ್ಯತೇ ।
ಅಯಂ ಹ್ಯಪಿ ಸಮಾಹಾರಃ ಶರೀರೇಂದ್ರಿಯಚೇತಸಾಂ ॥ ೫೪ ॥

ವರ್ತತೇ ಪೃಥಗನ್ಯೋಽನ್ಯಮುಪ್ಯಾಶ್ರಿತ್ಯ ಕರ್ಮಸು ।
ಧಾತವಃ ಪಂಚಧಾ ತೋಯಂ ಖಂ ವಾಯುರ್ಜ್ಯೋತಿಷೀ ಧರಾ ॥ ೫೫ ॥

ತೇಷು ಭಾವೇನ ತಿಷ್ಠಂತಿ ವಿಯುಜ್ಯಂತೇ ಸ್ವಭಾವತಃ ।
ಆಕಾಶಂ ವಾಯುರೂಷ್ಮಾ ಚ ಸ್ನೇಹೋ ಯಶ್ಚಾಪಿ ಪಾರ್ಥಿವಃ ॥ ೫೬ ॥

---

೫೨. ನಶ್ವರವಾದ ಭೂತಗಳಲ್ಲಿ ಅಸಂಬಂಧ ಅಥವಾ ಸಂಬಂಧವು ಏನನ್ನು ಮಾಡಲು ಸಮರ್ಥವಾದೀತು? ಈ ವಿಷಯಗಳಲ್ಲಿ ನಿರ್ಣಯವಾವುದು? ಯಥಾರ್ಥವಾಗಿ ಹೇಳಬೇಕು.

೫೩. ಸನಂದನನು ನುಡಿದನು—ಅಜ್ಞಾನವೆಂಬ ಕತ್ತಲೆಯಿಂದ ಬುದ್ಧಿಯು ಆಚ್ಛಾದಿತವಾಗಿರುವುದರಿಂದ ಒದ್ದಾಡುತ್ತಿರುವ, ರೋಗಿಯೋಪಾದಿಯಲ್ಲಿರುವ ರಾಜನನ್ನು ಜ್ಞಾನಿಯಾದ ಪಂಚಶಿಖನು ಸವಿನುಡಿಗಳಿಂದ ಸಂತೈಸಿ ಮಾತನಾಡಿದನು.

೫೪–೫೬. ಪಂಚಶಿಖನು ಹೇಳಿದನು—ದೇಹವು ವಿನಾಶಶೀಲವು; ಶಾಶ್ವತವಾಗಿರುವುದಲ್ಲ. ಈ ಶರೀರ, ಇಂದ್ರಿಯ, ಬುದ್ಧಿಗಳ ಸಮಾಹಾರವು ಒಂದನ್ನೊಂದು ಆಶ್ರಯಿಸಿಕೊಂಡು ಕರ್ಮಗಳಲ್ಲಿ ಪ್ರವರ್ತಿಸುತ್ತದೆ. ಪಂಚಧಾತುಗಳು ಜಲ, ಆಕಾಶ, ವಾಯು, ತೇಜಸ್ಸು ಮತ್ತು ಪೃಥಿವೀ ಎಂಬ ಐದುವಿಧ ಭೂತಗಳಲ್ಲಿಯೂ ಸೂಕ್ಷ್ಮರೂಪದಿಂದಿರುತ್ತವೆ. ಸ್ಥೂಲರೂಪದಿಂದ ಇರುವುದಿಲ್ಲ.

**ಏಷ ಪಂಚಸಮಾಹಾರಃ ಶರೀರಮಪಿ ನೈಕಧಾ ।**
**ಜ್ಞಾನಮೂಷ್ಮಾ ಚ ವಾಯುಶ್ಚ ತ್ರಿವಿಧಃ ಕಾರ್ಯಸಂಗ್ರಹಃ ॥ ೫೭ ॥**

**ಇಂದ್ರಿಯಾಣೀಂದ್ರಿಯಾರ್ಥಾಶ್ಚ ಸ್ವಭಾವಶ್ಚೇತನಾ ಮನಃ ।**
**ಪ್ರಾಣಾಪಾನೌ ವಿಕಾರಶ್ಚ ಧಾತವಶ್ಚಾತ್ರ ನಿಸ್ಸೃತಾಃ ॥ ೫೮ ॥**

**ಶ್ರವಣಂ ಸ್ಪರ್ಶನಂ ಜಿಹ್ವಾ ದೃಷ್ಟಿರ್ನಾಸಾ ತಥೈವ ಚ ।**
**ಇಂದ್ರಿಯಾಣೀತಿ ಪಂಚೈತೇ ಚಿತ್ತಪೂರ್ವಂಗಮಾ ಗುಣಾಃ ॥ ೫೯ ॥**

**ತತ್ರ ವಿಜ್ಞಾನಸಂಯುಕ್ತಾ ತ್ರಿವಿಧಾ ಚೇತನಾ ಧ್ರುವಾ ।**
**ಸುಖದುಃಖೇತಿ ಯಾಮಾಹುರದುಃಖೇತ್ಯಸುಖೇತಿ ಚ ॥ ೬೦ ॥**

**ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಮೂರ್ತಯಃ ।**
**ಏತೇ ಹ್ಯಾಮರಣಾತ್ಪಂಚ ಸದ್ಗುಣಜ್ಞಾನಸಿದ್ಧಯೇ ॥ ೬೧ ॥**

---

ಶರೀರವೂ ಸಹ ಆಕಾಶ, ವಾಯು, ತೇಜಸ್ಸು, ಜಲ, ಪೃಥಿವೀ ಈ ಐದರ ಸಮುದಾಯವೇ ಆಗಿದೆ. ಒಂದೇ ಅಲ್ಲ. ಜ್ಞಾನ, ತೇಜಸ್ಸು ಮತ್ತು ವಾಯು ಎಂಬುದಾಗಿ ಕಾರ್ಯಸಂಗ್ರಹವೂ ಮೂರು ವಿಧ.

೫೮. ಶರೀರದಲ್ಲಿ ಇಂದ್ರಿಯ, ವಿಷಯ, ಸ್ವಭಾವ, ಬುದ್ಧಿ ಮನಸ್ಸು, ಪ್ರಾಣ, ಅಪಾನಾದಿವಾಯುಗಳು ಮತ್ತು ಧಾತು ಇವುಗಳು ಸಮಾವಿಷ್ಟವಾಗಿವೆ.

೫೯. ಕಿವಿ, (ಶ್ರೋತ್ರ) ತ್ವಕ್, ನಾಲಿಗೆ, ಕಣ್ಣು ಮತ್ತು ಮೂಗು ಈ ಐದೂ ಇಂದ್ರಿಯಗಳು. ಇವುಗಳು ಮನಸ್ಸಿನ ಸಹಕಾರದಿಂದ ಗುಣಗಳನ್ನು ಗ್ರಹಿಸುತ್ತವೆ.

೬೦. ಮನಸ್ಸು ವಿಜ್ಞಾನಸಹಿತವಾಗಿ ಚೇತನವೆನಿಸಿ ಸುಖದಶೆ, ದುಃಖ ದಶೆ, ಇವೆರಡೂ ಇಲ್ಲದದಶೆ ಎಂಬುದಾಗಿ ಮೂರು ಅವಸ್ಥೆಗಳನ್ನು ಹೊಂದುವುದು.

೬೧. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳು ಶರೀರವನ್ನಾಶ್ರಯಿಸಿವೆ. ಈ ಐದೂ ಮರಣಪರ್ಯಂತವಾಗಿ ಇಂದ್ರಿಯಗಳಿಂದ ಜ್ಞಾನವನ್ನು ಹುಟ್ಟಿಸುತ್ತವೆ.

**ತೇಷು ಕರ್ಮವಿಸರ್ಗಶ್ಚ ಸರ್ವತತ್ವಾರ್ಥನಿಶ್ಚಯಃ ।**
**ತಮಾಹುಃ ಪರಮಂ ಶುದ್ಧಂ ಪಾರೇ ಚ ರಜಸಃ ಪ್ರಭುಂ ॥ ೬೨ ॥**

**ಇಮಂ ಗುಣಸಮಾಹಾರಮಾತ್ಮಭಾವೇನ ಪಶ್ಯತಃ ।**
**ಅಸಮ್ಯಗ್ದರ್ಶಿನೋ ದುಃಖಮನಂತಂ ನೋಪಶಾಮ್ಯತಿ ॥ ೬೩ ॥**

**ಅನಾತ್ಮೇತಿ ಚ ಯದ್ದೃಷ್ಟಂ ತನ್ನಾಹಂ ನ ಮಮೇತ್ಯಪಿ ।**
**ವರ್ತತೇ ಕಿಮಧಿಷ್ಠಾನಾ ಪ್ರಸಕ್ತಾ ದುಃಖಸಂತತಿಃ ॥ ೬೪ ॥**

**ತತ್ರ ಸಮ್ಯಗ್ಮನೋ ನಾಮ ತ್ಯಾಗಶಾಸ್ತ್ರಮನುತ್ತಮಂ ।**
**ಶೃಣುಯಾತ್ತಚ್ಚ ಮೋಕ್ಷಾಯ ಭಾಷ್ಯಮಾಣಂ ಭವಿಷ್ಯತಿ ॥ ೬೫ ॥**

**ತ್ಯಾಗ ಏವ ಹಿ ಸರ್ವೇಷಾಮುಕ್ತಾನಾಮಪಿ ಕರ್ಮಣಾಂ ।**
**ನಿತ್ಯಂ ಮಿಥ್ಯಾವಿನೀತಾನಾಂ ಕ್ಲೇಶೋ ದುಃಖಾವಹೋ ಮತಃ ॥ ೬೬ ॥**

---

೬೨. ಅವುಗಳಲ್ಲಿ ಕರ್ಮಫಲತ್ಯಾಗ, ಸಕಲ ತತ್ವಾರ್ಥನಿಶ್ಚಯ ಇವೆರಡೂ ಎಲ್ಲಕ್ಕೂ ಮೇಲಾದುದೆಂದೂ, ರಜೋಗುಣವನ್ನತಿಕ್ರಮಿಸಿರುವ ಪರಿಶುದ್ಧವಾದ ಮೋಕ್ಷಕ್ಕೆ ಸಾಧನವೆಂದೂ ವಿದ್ವಾಂಸರು ಹೇಳುವರು.

೬೩. ಈ ಗುಣಸಮಾಹಾರದಿಂದುಂಟಾದ ದೇಹವನ್ನೇ ಆತ್ಮನೆಂದು ತಿಳಿಯುವವನು ಮಿಥ್ಯಾಜ್ಞಾನಿಯು. ಅವನಿಗೆ ದುಃಖವು ನಾಶವಾಗುವುದಿಲ್ಲ. ಅನಂತವೇ ಆಗುವುದು

೬೪. ಶರೀರವನ್ನು ಆತ್ಮವಲ್ಲವೆಂದು ತಿಳಿದರೆ ನಾನು, ನನ್ನದು ಎಂಬುದು ಸಹ ಇರುವುದಿಲ್ಲ. ದುಃಖಸಂತತಿಯು ಯಾವುದನ್ನವಲಂಬಿಸಿ ಪ್ರಸಕ್ತವಾದೀತು ?

೬೫. ಅದರಲ್ಲಿ ಸಜ್ಜನರು ಸರ್ವೋತ್ತಮವಾದ ತ್ಯಾಗಶಾಸ್ತ್ರವನ್ನು ಶ್ರವಣಮಾಡುವರು. ಅದು ಮೋಕ್ಷಸಾಧನವಾಗುವುದು.

೬೬. ಉಕ್ತವಾದ ಸಕಲ ಕರ್ಮಗಳಲ್ಲಿಯೂ ತ್ಯಾಗವೇ ಉತ್ತಮವಾದುದು. ಎಂದರೆ ಫಲಾಶೆಯನ್ನು ಬಿಡಬೇಕೆಂದು ಭಾವ. ಮಿಥ್ಯಾವಿನೀತರಾದವರಿಗೆ ಯಾವಾಗಲೂ ದುಃಖಪ್ರದವಾದ ಮಾನಸಿಕ ಕ್ಲೇಶವು ಸಂಭವಿಸುವುದು.

ದ್ರವ್ಯತ್ಯಾಗೇ ತು ಕರ್ಮಾಣಿ ಭೋಗತ್ಯಾಗೇ ವ್ರತಾನಿ ಚ
ಸುಖತ್ಯಾಗೇ ತಪೋಯೋಗಃ ಸರ್ವತ್ಯಾಗೇ ಸಮಾಪನಾ ॥ ೬೭ ॥

ತಸ್ಯ ಮಾರ್ಗೋಯಮದ್ವೈಧಃ ಸರ್ವತ್ಯಾಗಸ್ಯ ದರ್ಶಿತಃ ।
ವಿಪ್ರಹಾಣಾಯ ದುಃಖಸ್ಯ ದುರ್ಗತಿಸ್ತ್ವನ್ಯಥಾ ಭವೇತ್ ॥ ೬೮ ॥

ಪಂಚ ಜ್ಞಾನೇಂದ್ರಿಯಾಣ್ಯುಕ್ತ್ವಾ ಮನಃಷಷ್ಠಾನಿ ಚೇತಸಿ ।
ಬಲಷಷ್ಠಾನಿ ವಕ್ಷ್ಯಾಮಿ ಪಂಚ ಕರ್ಮೇಂದ್ರಿಯಾಣಿ ತು ॥ ೬೯ ॥

ಹಸ್ತೌ ಕರ್ಮೇಂದ್ರಿಯಂ ಜ್ಞೇಯಮಥ ಪಾದೌ ಗತೀಂದ್ರಿಯಂ ।
ಪ್ರಜನಾನಂದಯೋಃರ್ಮೇಢ್ರೋ ವಿಸರ್ಗೇ ಪಾಯುರಿಂದ್ರಿಯಂ ॥ ೭೦ ॥

ವಾಕ್ಚ ಶಬ್ದವಿಶೇಷಾರ್ಥಮಿತಿ ಪಂಚಾನ್ವಿತಂ ವಿದುಃ ।
ಏವಮೇಕಾದಶೈತಾನಿ ಬುಧ್ವಾ ತೂಪಹತಂ ಮನಃ ॥ ೭೧ ॥

---

೬೭. ದ್ರವ್ಯತ್ಯಾಗಮಾಡಿದರೆ ಕರ್ಮಗಳು, ಭೋಗವನ್ನು ಬಿಟ್ಟರೆ ವ್ರತಗಳು, ಸುಖವನ್ನು ತ್ಯಜಿಸಿದರೆ ತಪಸ್ಸೂ ಸಿದ್ಧಿಸುತ್ತವೆ. ಹೀಗೆ ಸಕಲವೂ ಆಶೆಯನ್ನು ಬಿಡುವುದರಲ್ಲಿಯೇ ಪರ್ಯವಸಾನವಾಗುತ್ತವೆ.

೬೮. ದುಃಖವನ್ನು ನಾಶಪಡಿಸುವುದಕ್ಕೆ ಸರ್ವತ್ಯಾಗವೇ ಅದ್ವಿತೀಯವಾದ ಮಾರ್ಗವೆಂದು ಉಕ್ತವಾಗಿದೆ. ಅದನ್ನು ಆಶ್ರಯಿಸದಿದ್ದರೆ ದುರ್ಗತಿಯೇ ಆಗುವುದು.

೬೯. ಆರನೆಯದಾದ ಮನಸ್ಸಿನಿಂದ ಸಹಿತವಾದ ಐದು ಜ್ಞಾನೇಂದ್ರಿಯಗಳು ಬುದ್ಧಿಯಲ್ಲಿ ವರ್ತಿಸತಕ್ಕ ರೀತಿಯು ನಿರೂಪಿಸಲ್ಪಟ್ಟಿತು. ಬಲ (ಪ್ರಾಣ) ವೆಂಬ ಆರನೆಯದರಿಂದ ಸಹಿತವಾದ ಪಂಚ ಕರ್ಮೇಂದ್ರಿಯಗಳನ್ನು ಹೇಳುವೆನು.

೭೦. ಕೈಗಳು ಕರ್ಮಸಾಧನವಾದ ಇಂದ್ರಿಯವು. ಸಂಚಾರಕ್ಕೆ ಸಾಧನವಾದುದು ಪಾದಗಳೆಂಬ ಇಂದ್ರಿಯವು. ಸಂತಾನ ಮತ್ತು ಆನಂದಕ್ಕೆ ಸಾಧನವಾದ ಇಂದ್ರಿಯವು ಶಿಶ್ನವು. ಪಾಯು ಎಂಬ ಇಂದ್ರಿಯವು ಮಲವಿಸರ್ಜನೆಗೆ ಸಾಧನವು.

೭೧. ವಾಕ್ಕು ಎಂಬುದು ಮಾತನಾಡುವುದಕ್ಕೆ ಕಾರಣವು. ಈ ಐದೂ ಕರ್ಮೇಂದ್ರಿಯಗಳು. ಮನಸ್ಸೂ ಸೇರಿ ಒಟ್ಟು ಹನ್ನೊಂದು ಇಂದ್ರಿಯಗಳು. ಬುದ್ಧಿಯಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳಬೇಕು.

**ಕರ್ಣೌ ಶಬ್ದಶ್ಚ ಚಿತ್ತಂ ಚ ತ್ರಯಃ ಶ್ರವಣಸಂಗ್ರಹೇ ।**
**ತಥಾ ಸ್ಪರ್ಶೇ ತಥಾ ರೂಪೇ ತಥೈವ ರಸಗಂಧಯೋಃ ॥ ೭೨ ॥**

**ಏವಂ ಪಂಚ ತ್ರಿಕಾ ಹ್ಯೇತೇ ಗಣಾಸ್ತದುಪಲಬ್ಧಯೇ ।**
**ಯೇನಾಯಂ ತ್ರಿವಿಧೋ ಭಾವಃ ಪರ್ಯಾಯಾತ್ಸಮುಪಸ್ಥಿತಃ ॥ ೭೩ ॥**

**ಸಾತ್ವಿಕೋ ರಾಜಸಶ್ಚಾಪಿ ತಾಮಸಶ್ಚಾಪಿ ತೇ ತ್ರಯಃ ।**
**ತ್ರಿವಿಧಾ ವೇದನಾ ಯೇಷು ಪ್ರಸೃತಾ ಸರ್ವಸಾಧನೀ ॥ ೭೪ ॥**

**ಪ್ರಹರ್ಷಃ ಪ್ರೀತಿರಾನಂದಃ ಸುಖಂ ಸಂಶಾಂತಚಿತ್ತತಾ ।**
**ಅಕುತಶ್ಚಿತ್ಕುತಶ್ಚಿದ್ವಾ ಚಿತ್ತತಃ ಸಾತ್ವಿಕೋ ಗುಣಃ ॥ ೭೫ ॥**

---

೭೨. ಶಬ್ದವನ್ನು ಗ್ರಹಿಸಬೇಕಾದರೆ ಕಿವಿ, ಶಬ್ದ, ಮನಸ್ಸು ಈ ಮೂರೂ ಆವಶ್ಯಕವು. ಅದರಂತೆಯೇ ಸ್ಪರ್ಶ, ರೂಪ, ರಸ, ಗಂಧ ಇವುಗಳನ್ನು ಗ್ರಹಿಸುವುದಕ್ಕೂ ಮೂರು ಸಾಧನಗಳು ಬೇಕು.

೭೩-೭೪. ತ್ವಕ್ಕು (ಚರ್ಮ) ಸ್ಪರ್ಶ ಮತ್ತು ಮನಸ್ಸು ಈ ಮೂರೂ ಸ್ಪರ್ಶಗ್ರಾಹಕಗಳು. ಕಣ್ಣು, ರೂಪ ಮನಸ್ಸು ಈ ಮೂರೂ ರೂಪವನ್ನು ಗ್ರಹಿಸುವುವು. ಜಿಹ್ವೆ, ರಸ, ಮನಸ್ಸು ಈ ಮೂರೂ ರಸಗ್ರಾಹಕಗಳು. ಮೂಗು ಗಂಧ, ಮನಸ್ಸು ಈ ಮೂರೂ ಗಂಧಗ್ರಾಹಕವಾದ ಸಾಧನಗಳು ಎಂದು ವಿವೇಚನೆಯಿಂದ ತಿಳಿದುಕೊಳ್ಳಬೇಕು. ಈರೀತಿಯಾಗಿ ಐದುತ್ರಿಕ (ಮೂರು ಮೂರು ಸಾಧಕಗಳ ಐದು ಗುಂಪು) ಗಳು ಗುಣಗ್ರಹಣಕ್ಕೆ ಸಾಧನಗಳು. ಸತ್ವ ರಜಸ್ತಮೋ ಗುಣಗಳ ಭಾವವು ಒಂದಾದಮೇಲೆ ಒಂದು ಕ್ರಮವಾಗಿ ಬರುತ್ತದೆ. ಅದು ಸಾತ್ವಿಕ, ರಾಜಸ, ತಾಮಸ ಎಂಬುದಾಗಿ ಮೂರು ವಿಧವಾಗಿದೆ. ಅದಕ್ಕೆ ತಕ್ಕಂತೆ ಅವುಗಳ ಅನುಭವವೂ ಸಹ ಮೂರು ವಿಧವಾಗಿದೆ.

೭೫. ಪ್ರಹರ್ಷ, ಪ್ರೀತಿ, ಆನಂದ, ಸುಖ ಮತ್ತು ಮನಃಶಾಂತಿ ಇವುಗಳು ಸಹಜವಾಗಿಯೋ ಅಥವಾ ಆವುದಾದರೊಂದು ಕಾರಣದಿಂದಲೋ ಚಿತ್ತದಲ್ಲುಂಟಾಗುವ ಸಾತ್ವಿಕಗುಣಗಳು.

**ಅತುಷ್ಟಿಃ ಪರಿತಾಪಶ್ಚ ಶೋಕೋ ಲೋಭಸ್ತಥಾಽಕ್ಷಮಾ ।
ಲಿಂಗಾನಿ ರಜಸಸ್ತಾನಿ ದೃಶ್ಯಂತೇ ಹೇತ್ವಹೇತುತಃ ॥ ೭೬ ॥**

**ಅವಿವೇಕಸ್ತಥಾ ಮೋಹಃ ಪ್ರಮಾದಃ ಸ್ವಪ್ನತಂದ್ರಿತೇ ।
ಕಥಂಚಿದಪಿ ವರ್ತಂತೇ ವಿವಿಧಾಸ್ತಾಮಸಾ ಗುಣಾಃ ॥ ೭೭ ॥**

**ಇಮಾಂ ಚ ಯೋ ವೇದ ವಿಮೋಕ್ಷಬುದ್ಧಿ-
ಮಾತ್ಮಾನಮನ್ವಿಚ್ಛತಿ ಚಾಪ್ರಮತ್ತಃ ।
ನ ಲಿಪ್ಯತೇ ಕರ್ಮಫಲೈರನಿಷ್ಟೈಃ
ಪತ್ರಂ ಬಿಸಸ್ಯೇವ ಜಲೇನ ಸಿಕ್ತಂ ॥ ೭೮ ॥**

**ದೃಢೈರ್ಹಿ ಪಾಶೈರ್ವಿವಿಧೈರ್ವಿಮುಕ್ತಃ
ಪ್ರಜಾನಿಮಿತ್ತೈರಪಿ ದೈವತೈಶ್ಚ ।
ಯದಾಹ್ಯಸೌ ದುಃಖಸೌಖ್ಯೇ ಜಹಾತಿ
ಮುಕ್ತಸ್ತದಾಽಗ್ರ್ಯಂ ಗತಿಮೇತ್ಯಲಿಂಗಃ ॥ ೭೯ ॥**

---

೭೬. ಅತೃಪ್ತಿ, ಪರಿತಾಪ, ಶೋಕ, ಲೋಭ ಮತ್ತು ಅಸಹನೆ ಇವುಗಳು ಕಾರಣವಿರಲಿ ಅಥವಾ ಇಲ್ಲದಿರಲಿ ಉಪಲಬ್ಧವಾಗುವ ರಜೋಗುಣದ ಚಿಹ್ನೆಗಳು.

೭೭. ಅವಿವೇಕ, ಮೋಹ, ಆಲಸ್ಯ, ಸ್ವಪ್ನ ಮತ್ತು ತೂಕಡಿಕೆ ಮುಂತಾಗಿ ತಾಮಸಗುಣಗಳು ನಾನಾವಿಧವಾಗಿವೆ.

೭೮. ಈವಿಧವಾದ ತ್ಯಾಗಬುದ್ಧಿಯನ್ನು ಸಂಪಾದಿಸಿ ಆಲಸ್ಯವಿಲ್ಲದೇ ಆತ್ಮತತ್ವವನ್ನು ತಿಳಿಯಲಿಚ್ಛಿಸುವವನು ನೀರಿನಲ್ಲಿರುವ ತಾವರೆಯೆಲೆಯು ನೀರಿನ ಲೇಪವನ್ನು ಹೊಂದದಿರುವಂತೆ ಅನಿಷ್ಟವಾದ ಕರ್ಮಫಲಗಳ ಲೇಪವನ್ನು ಹೊಂದುವುದಿಲ್ಲ.

೭೯. ಮಾನುಷ ಮತ್ತು ದೈವನಿರ್ಮಿತಗಳಾದ ನಾನಾವಿಧ ದೃಢಬಂಧನದಿಂದ ಬಿಡಿಸಲ್ಪಟ್ಟು ಈ ಜೀವನು ದುಃಖ ಮತ್ತು ಐಹಿಕ ಸೌಖ್ಯಗಳನ್ನು ಬಿಟ್ಟಾಗ ಲಿಂಗದೇಹರಹಿತನಾಗಿ ಉತ್ತಮಗತಿಯನ್ನು ಹೊಂದಿ ಮುಕ್ತನಾಗುವನು.

ಶ್ರುತಿಪ್ರಮಾಣಾಗಮಮಂಗಲೈಶ್ಚ
ಶೇತೇ ಜರಾಮೃತ್ಯುಭಯಾದತೀತಃ ।
ಕ್ಷೀಣೇ ಚ ಪುಣ್ಯೇ ವಿಗತೇ ಚ ಪಾಪೇ
ತಯೋರ್ನಿಮಿತ್ತೇ ಚ ಫಲೇ ವಿನಷ್ಟೇ ॥ ೮೦ ॥

ಆಲೇಪಮಾಕಾಶಮಲಿಂಗಮೇವ
ಮಾಸ್ಥಾಯ ಪಶ್ಯಂತಿ ಮಹತ್ಯಸಕ್ತಾಃ ।
ಯಥೋರ್ಣನಾಭಿಃ ಪರಿವರ್ತಮಾನ-
ಸ್ತಂತುಕ್ಷಯೇ ತಿಷ್ಠತಿ ಪಾತ್ಯಮಾನಃ ॥ ೮೧ ॥

ತಥಾ ವಿಮುಕ್ತಃ ಪ್ರಜಹಾತಿ ದುಃಖಂ
ವಿಧ್ವಂಸತೇ ಲೋಷ್ಠ ಇವಾದ್ರಿಮೃಚ್ಛನ್ ।
ಯಥಾ ರುರುಃ ಶೃಂಗಮಥೋ ಪುರಾಣಂ ।
ಹಿತ್ವಾ ತ್ವಚಂ ವಾಪ್ಯುರಗೋ ಯಥಾ ಚ ॥ ೮೨ ॥

---

೮೦-೮೧. ವೇದ ಮತ್ತು ಪ್ರಮಾಣಭೂತವಾದ ಆಗಮಗಳಲ್ಲಿ ಉಕ್ತವಾದ ಶ್ರೇಯಸ್ಕರ ಕರ್ಮಗಳನ್ನನುಷ್ಠಾನಮಾಡಿ ಮುಪ್ಪು, ಮರಣ ಇವುಗಳ ಭೀತಿಯನ್ನು ತಪ್ಪಿಸಿಕೊಂಡು ಸುಖಿಯಾಗುವನು. ಪುಣ್ಯ ಪಾಪಗಳಿಂದಾಗುವ ಇಷ್ಟಾನಿಷ್ಟಫಲಗಳೆಲ್ಲವೂ ನಷ್ಟವಾದಮೇಲೆ ಪ್ರಕೃತಿವಿದೂರನಾಗಿ ಲಿಂಗದೇಹವಿಲ್ಲದೇ ಸ್ವರೂಪದಿಂದಲೇ ಇದ್ದು ಕರ್ಮಲೇಪವಿಲ್ಲದ ಆಕಾಶಶಬ್ದವಾಚ್ಯನಾದ ಪರಮಾತ್ಮನನ್ನು ಸಾಕ್ಷಾತ್ಕರಿಸುವರು.

೮೧-೮೨. ಜೇಡರಹುಳುವು ಸುತ್ತಲೂ ತಿರುಗಿ ಬಲೆಯನ್ನು ಕಲ್ಪಿಸಿಕೊಂಡಮೇಲೆ ಅದರಲ್ಲಿಯೇ ನಿಲ್ಲುವಂತೆ ಜೀವನು ಕರ್ಮಪ್ರಾಪ್ತವಾದ ದೇಹದಲ್ಲಿ ಸೇರಿರುವನು. ಅದೇ ಹುಳುವು ತನ್ನ ಗೂಡನ್ನು ಬಿಟ್ಟು ಹೊರಗೆ ಬರುವಂತೆ ಮುಕ್ತನಾದವನು ಸುಖಿಯಾಗುವನು. ಆಗ ಅವನ ದುಃಖಗಳೆಲ್ಲಾ ಪರ್ವತಶಿಖರದಿಂದ ಬಿದ್ದ ಮಣ್ಣುಹೆಂಟೆಯಂತೆ ನಾಶವಾಗುವುವು.

**ವಿಹಾಯ ಗಚ್ಛತ್ಯನವೇಕ್ಷಮಾಣಃ**
**ತಥಾ ವಿಮುಕ್ತೋ ವಿಜಹಾತಿ ದುಃಖಂ ।**
**ದ್ರುಮಂ ಯಥಾ ವಾಽಪ್ಯುದಕೇ ಪತಂತ-**
**ಮುತ್ಸೃಜ್ಯ ಪಕ್ಷೀ ನಿಪತತ್ಯಸಕ್ತಃ ॥ ೮೩ ॥**

**ತಥಾ ಹ್ಯಸೌ ದುಃಖಸೌಖ್ಯೇ ವಿಹಾಯ ।**
**ಮುಕ್ತಃ ಪರಾರ್ಧ್ಯಾಂ ಗತಿಮೇತ್ಯಲಿಂಗಃ ॥ ೮೪ ॥**

**ಇದಮಮೃತಪದಂ ನಿಶಮ್ಯ ರಾಜಾ**
**ಸ್ವಯಮಿಹ ಪಂಚಶಿಖೇನ ಭಾಷ್ಯಮಾಣಂ ।**
**ನಿಖಿಲಮಭಿಸಮೀಕ್ಷ್ಯ ನಿಶ್ಚಿತಾರ್ಥಃ**
**ಪರಮಸುಖೀ ವಿಜಹಾರ ವೀತಶೋಕಃ ॥ ೮೫ ॥**

**ಅಪಿಚ ಭವತಿ ಮೈಥಿಲೇನ ಗೀತಂ**
**ನಗರಮುಪಾಹಿತಮಗ್ನಿನಾಽಭಿವೀಕ್ಷ್ಯ ।**
**ನ ಖಲು ಮಮ ಹಿ ದಹ್ಯತೇಽತ್ರ ಕಿಂಚಿ-**
**ತ್ಸ್ವಯಮಿದಮಾಹ ಕಿಲ ಸ್ಮ ಭೂಮಿಪಾಲಃ ॥ ೮೬ ॥**

---

೮೨-೮೩. ದುಷ್ಪ್ರೆಯೆಂಬ ಮೃಗವು ಹಳೆಯ ಕೊಂಬನ್ನೂ, ಸರ್ಪವು ಹಳೆಯ ಚರ್ಮವನ್ನೂ ಬಿಟ್ಟು (ಪರೆಯನ್ನು ಬಿಟ್ಟು) ಅದನ್ನು ನೋಡದೇ ಹೋಗುವಂತೆ ಮುಕ್ತನು ತನ್ನ ದುಃಖವನ್ನು ಬಿಟ್ಟಮೇಲೆ ಪುನಃ ಅದನ್ನು ಹೊಂದದೆ ಸುಖಿಯಾಗುವನು.

೮೩-೮೪. ಒಂದು ಮರದಮೇಲೆ ಕುಳಿತಿರುವ ಪಕ್ಷಿಯು ಆ ಮರವು ನೀರಿನಲ್ಲಿ ಮುಳುಗಿ ಹೋಗುವ ಸ್ಥಿತಿಯನ್ನು ಹೊಂದಿದಾಗ ಒಡನೆಯೇ ಅದನ್ನು ಬಿಟ್ಟು ಅದರ ಚಿಂತೆಯೇ ಇಲ್ಲದೆ ಹಾರಿಹೋಗುವಂತೆ ಈ ಆತ್ಮನು ದುಃಖ ಮತ್ತು ಸುಖಗಳನ್ನು ಬಿಟ್ಟು ಲಿಂಗದೇಹಸಂಬಂಧವನ್ನೂ ಪರಿಹರಿಸಿಕೊಂಡು ಮುಕ್ತನಾಗಿ ಉತ್ತಮಗತಿಯನ್ನು ಪಡೆಯುವನು.

೯೫. ಮೋಕ್ಷಸಾಧನವಾದ ಪಂಚಶಿಖನ ಈ ಉಪದೇಶವನ್ನು ಜನಕ ರಾಜನು ಸಾಕ್ಷಾತ್ತಾಗಿ ಕೇಳಿ ತತ್ವನಿರ್ಣಯವನ್ನು ಹೊಂಧಿ ಶೋಕವನ್ನು ಕಳೆದುಕೊಂಡು ಪರಮಸುಖದಿಂದಿದ್ದನು.

೮೬. ದೊರೆಯು ಇದನ್ನು ಕೇಳಿ ತತ್ವಜ್ಞಾನಿಯಾದ ಮೇಲೆ ಅವನ

**ಇಮಂ ಹಿ ಯಃ ಪಠತಿ ವಿಮೋಕ್ಷನಿಶ್ಚಯಂ**
**ಮಹಾಮುನೇ ಸತತಮವೇಕ್ಷತೇ ತಥಾ ।**
**ಉಪದ್ರವಾನ್ನಾನುಭವತ್ಯದುಃಖಿತಃ**
**ಪ್ರಮುಚ್ಯತೇ ಕಪಿಲಮಿವೈತ್ಯ ಮೈಥಿಲಃ　　॥ ೮೭ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ ದ್ವಿತೀಯಪಾದೇ ಪಂಚಚತ್ವಾರಿಂಶತ್ತಮೋಽಧ್ಯಾಯಃ**

---

ಪಟ್ಟಣವು ಬೆಂಕಿಯಿಂದ ಸುಡುತ್ತಿದ್ದುದನ್ನು ನೋಡಿ ನನ್ನದಾವುದನ್ನೂ ಈ ಅಗ್ನಿದಾಹವು ಬಾಧಿಸುತ್ತಿಲ್ಲವೆಂದು ಹೇಳಿದನು.

೮೭. ಮಹಾಮುನಿಯೇ! ಮೋಕ್ಷದಾಯಕವಾದ ಈ ಉಪಾಖ್ಯಾನವನ್ನು ಪಠನಮಾಡುವವನು ಮತ್ತು ಯಾವಾಗಲೂ ಮನನ ಮಾಡುವವನೂ ಸಹ ಸಕಲ ದುಃಖಗಳಿಂದ ಮುಕ್ತನಾಗಿ ಮಿಥಿಲಾಧಿಪತಿಯು ಕಾಪಿಲಮುನಿಯನ್ನಾಶ್ರಯಿಸಿ ಈ ಉಪಾಖ್ಯಾನಶ್ರವಣದಿಂದ ಮುಕ್ತನಾದಂತೆ ಮುಕ್ತನಾಗುವನು.

ಇಂತು ಶ್ರೀನಾರದೀಯಪುರಾಣದೊಳು ಬೃಹದುಪಾಖ್ಯಾನವೆಂಬ ದ್ವಿತೀಯಪಾದದಲ್ಲಿ ನಲವತ್ತೈದನೆಯ ಅಧ್ಯಾಯವು ಮುಗಿದುದು.

## ಕಥಾಸಾರಾಂಶ

ನಾರದನು ಈ ಸಂಸಾರಬಂಧದಿಂದ ಮುಕ್ತಿಯಾಗುವ ಬಗೆಯನ್ನು ಪುನಃ ಪ್ರಶ್ನೆಮಾಡಲು ಸನಂದನನು ಈ ವಿಷಯದಲ್ಲಿಯೇ ಜನಕರಾಜನು ಕಾಪಿಲೇಯನಾದ ಪಂಚಶಿಖಾಚಾರ್ಯನನ್ನು ಪ್ರಶ್ನೆಮಾಡಿ ಉತ್ತರವನ್ನು ಪಡೆದ ಇತಿಹಾಸವನ್ನು ವಿಶದವಾಗಿ ಹೇಳಿದನು. ಇದರಲ್ಲಿ ಧರ್ಮ, ಅಧರ್ಮ, ಸ್ವರ್ಗ ನರಕಾದಿಗಳಿಲ್ಲವೆಂಬ ನಾಸ್ತಿಕವಾದವನ್ನು ಪ್ರಸ್ತಾಪಿಸಿ ಸಕಾರಣವಾಗಿ ಅದನ್ನು ನಿರಾಕರಿಸಿ ಧರ್ಮಾಧರ್ಮಾದಿಗಳ ಅಸ್ತಿತ್ವವನ್ನು ಸಮರ್ಥಿಸಿ ಉತ್ಪತ್ತಿ ಲಯ ಪ್ರಕಾರವನ್ನೂ ನಿರೂಪಿಸಿ ಮೋಕ್ಷೋಪಾಯವಾದ ತತ್ವಜ್ಞಾನಸ್ವರೂಪವನ್ನೂ ವಿವರಿಸಿದೆ.

# ಷಟ್ಚತ್ವಾರಿಂಶೋಽಧ್ಯಾಯಃ

**ಸೂತ ಉವಾಚ**

**ತಚ್ಛ್ರುತ್ವಾ ನಾರದೋ ವಿಪ್ರಾ ನ್ಮೈಥಿಲಾಧ್ಯಾತ್ಮಮುತ್ತಮಂ ।**
**ಪುನಃ ಪಪ್ರಚ್ಛ ತಂ ಪ್ರೀತ್ಯಾ ಸನಂದನಮುದಾರಧೀಃ ॥ ೧ ॥**

**ನಾರದ ಉವಾಚ**

**ಆಧ್ಯಾತ್ಮಿಕಾದಿ ತ್ರಿವಿಧಂ ತಾಪಂ ನಾನುಭವೇದ್ಯಥಾ ।**
**ಪ್ರಬ್ರೂಹಿ ತನ್ಮಮೇ ಮಹ್ಯಂ ಪ್ರಪನ್ನಾಯ ದಯಾನಿಧೇ ॥ ೨ ॥**

**ಸನಂದನ ಉವಾಚ**

**ತದಸ್ಯ ತ್ರಿವಿಧಂ ದುಃಖಮಿಹ ಜಾತಸ್ಯ ಪಂಡಿತ ।**
**ಗರ್ಭೇ ಜರಾದ್ಯವಸ್ಥಾನೇ ಸ್ಥಾನೇಷು ಪ್ರಭವಿಷ್ಯತಃ ॥ ೩ ॥**

---

## ನಲವತ್ತಾರನೆಯ ಅಧ್ಯಾಯ

೧. ಸೂತನು ನುಡಿದನು—ಶೌನಕಾದಿ ಬ್ರಾಹ್ಮಣರೇ! ಉದಾರಬುದ್ಧಿಯುಳ್ಳ ನಾರದನು ಮಿಥಿಲಾಧಿಪತಿಯಾದ ಜನಕನಿಗೆ ಹೇಳಿದ ಉತ್ತಮವಾದ, ಅಧ್ಯಾತ್ಮತತ್ವವನ್ನು ಕೇಳಿ ವಿಶ್ವಾಸದಿಂದ ಸನಂದನನನ್ನು ಪುನಃ ಕೇಳಿದನು.

೨. ನಾರದನು ಹೇಳಿದನು—ದಯಾಳುವಾದ ಸನಂದನ ಮುನಿಯೇ! ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕವೆಂಬ ಮೂರುವಿಧ ತಾಪವನ್ನು ಅನುಭವಿಸದಂತೆ ಮಾಡುವ ಉಪಾಯವನ್ನು ಹೇಳು. ನಿನಗೆ ಶರಣಾಗತನಾಗಿರುವೆನು.

೩. ಸನಂದನನು ಹೇಳಿದನು—ಜ್ಞಾನಿಯಾದ ನಾರದನೇ! ಈ ಭೂಲೋಕದಲ್ಲಿ ಹುಟ್ಟಿದವನಿಗೆ ಗರ್ಭವಾಸ, ಮುಪ್ಪು ಮುಂತಾದ ಅವಸ್ಥೆಗಳಿಂದ ಮೂರುವಿಧ ದುಃಖವುಂಟಾಗುವುದು.

ನಿರಸ್ತಾತಿಶಯಾಹ್ಲಾದಸುಖಭಾವೈಕಲಕ್ಷಣಾ ।
ಭೇಷಜಂ ಭಗವತ್ಪ್ರಾಪ್ತಿರೇಕಾ ಚಾತ್ಯಂತಿಕೀ ಮತಾ ॥ ೪ ॥

ತಸ್ಮಾತ್ತತ್ಪ್ರಾಪ್ತಯೇ ಯತ್ನಃ ಕರ್ತವ್ಯಃ ಪಂಡಿತೈರ್ನರೈಃ ।
ತತ್ಪ್ರಾಪ್ತಿಹೇತುರ್ಜ್ಞಾನಂ ಚ ಕರ್ಮ ಚೋಕ್ತಂ ಮಹಾಮುನೇ ॥ ೫ ॥

ಆಗಮೋತ್ಥಂ ವಿವೇಕಾಚ್ಚ ದ್ವಿಧಾ ಜ್ಞಾನಂ ತಥೋಚ್ಯತೇ ।
ಶಬ್ದಬ್ರಹ್ಮಾಗಮಮಯಂ ಪರಂ ಬ್ರಹ್ಮ ವಿವೇಕಜಂ ॥ ೬ ॥

ಮನುರಪ್ಯಾಹ ವೇದಾರ್ಥಂ ಸ್ಮೃತ್ವಾಯಂ ಮುನಿಸತ್ತಮಃ ।
ತದೇತಚ್ಛ್ರೂಯತಾಮತ್ರ ಸುಬೋಧಂ ಗದತೋ ಮಮ ॥ ೭ ॥

ದ್ವೇ ಬ್ರಹ್ಮಣೀ ವೇದಿತವ್ಯೇ ಶಬ್ದಬ್ರಹ್ಮ ಪರಂ ಚ ಯತ್ ।
ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ॥ ೮ ॥

---

೪. ಅದಕ್ಕೆ ನಿರತಿಶಯ ಆಹ್ಲಾದವೆಂಬ ಸುಖಭಾವಮಾತ್ರಸ್ವರೂಪವಾದ, ದುಃಖಮಿಶ್ರವಲ್ಲದ ಭಗವತ್ಪ್ರಾಪ್ತಿ (ಮುಕ್ತಿ) ಯೆಂಬುದೊಂದೇ ಔಷಧವು (ಪರಿಹಾರೋಪಾಯವು).

೫. ಆದಕಾರಣ ಜ್ಞಾನಿಗಳು ಆ ಭಗವತ್ಪ್ರಾಪ್ತಿಗಾಗಿ ಪ್ರಯತ್ನಮಾಡಬೇಕು. ನಾರದ ಮಹಾಮುನಿಯೇ! ಅಂತಹ ಭಗವತ್ಪ್ರಾಪ್ತಿಗೆ ಜ್ಞಾನ, ಕರ್ಮ ಎಂಬುದಾಗಿ ಕಾರಣಗಳು ಉಕ್ತವಾಗಿವೆ.

೬. ಜ್ಞಾನವು ಆಗಮಜನ್ಯ, ವಿವೇಕಜನ್ಯ ಎಂದು ಎರಡು ವಿಧವಾಗಿ ಉಕ್ತವಾಗಿದೆ. ಶಬ್ದಬ್ರಹ್ಮನು ಆಗಮಮಯನು ; ಪರಬ್ರಹ್ಮನು ವಿವೇಕಜನ್ಯ ಜ್ಞಾನಗಮ್ಯನು.

೭. ಮುನಿಶ್ರೇಷ್ಠನಾದ ಮನುವೂ ಸಹ ವೇದಾರ್ಥವನ್ನು ಅನುಸಂಧಾನಮಾಡಿ ಹೇಳಿರುವ ತತ್ವವನ್ನು ಚೆನ್ನಾಗಿ ತಿಳಿಯುವಂತೆ ಹೇಳುವೆನು ಕೇಳು.

೮. ಶಬ್ದಬ್ರಹ್ಮ ಮತ್ತು ಪರಬ್ರಹ್ಮ ಎಂಬ ಎರಡು ಬ್ರಹ್ಮರುಗಳನ್ನು ತಿಳಿಯಬೇಕು. ಶಬ್ದಬ್ರಹ್ಮನ ವಿಷಯದಲ್ಲಿ ತತ್ವಜ್ಞಾನಿಯಾದವನು ಪರಬ್ರಹ್ಮನನ್ನು ಹೊಂದುವನು.

ದ್ವೇ ವಿದ್ಯೇ ವೇದಿತವ್ಯೇ ಚೇತ್ಯಾಹ ಚಾಥರ್ವಣೀ ಶ್ರುತಿಃ |
ಪರಮಾ ತ್ವಕ್ಷರಪ್ರಾಪ್ತಿರ್ಋಗ್ವೇದಾದಿಮಯಾ ಪರಾ ॥ ೯ ॥

ಯತ್ತದವ್ಯಕ್ತಮಜರಮನೀಹಮಜಮವ್ಯಯಂ |
ಅನಿರ್ದೇಶ್ಯಮರೂಪಂ ಚ ಪಾಣಿಪಾದಾದಿಸಂಯುತಂ ॥ ೧೦ ॥

ವಿಭುಂ ಸರ್ವಗತಂ ನಿತ್ಯಂ ಭೂತಯೋನಿಮಕಾರಣಂ |
ವ್ಯಾಪ್ಯಂ ವ್ಯಾಪ್ತಂ ಯತಃ ಸರ್ವಂ ತಂ ವೈ ಪಶ್ಯಂತಿ ಸೂರಯಃ ॥ ೧೧ ॥

ತದ್ಬ್ರಹ್ಮ ಪರಮಂ ಧಾಮ ತದ್ಧ್ಯೇಯಂ ಮೋಕ್ಷಕಾಂಕ್ಷಿಭಿಃ |
ಶ್ರುತಿವಾಕ್ಯೋದಿತಂ ಸೂಕ್ಷ್ಮಂ ತದ್ವಿಷ್ಣೋಃ ಪರಮಂ ಪದಂ ॥ ೧೨ ॥

ತದೇವ ಭಗವದ್ವಾಚ್ಯಂ ಸ್ವರೂಪಂ ಪರಮಾತ್ಮನಃ |
ವಾಚಕೋ ಭಗವಚ್ಛಬ್ದಸ್ತಸ್ಯೋದ್ದಿಷ್ಟೋऽಕ್ಷಯಾತ್ಮನಃ ॥ ೧೩ ॥

---

೯. ಅಥರ್ವಣಶ್ರುತಿಯೂ ಸಹ ಎರಡು ವಿದ್ಯೆಗಳು ಜ್ಞಾತವ್ಯವೆಂದು ಹೇಳಿದೆ. ಅಕ್ಷರನಾಮಕ ಪರಮಾತ್ಮನ ಸ್ವರೂಪವನ್ನು ತಿಳಿಯುವುದಕ್ಕೆ ಸಾಧಕವಾದುದು ಪರವಿದ್ಯೆಯೆನಿಸುವುದು. ಅಂತಹ ಋಗ್ವೇದಾದಿಗಳೇ ಪರವಿದ್ಯೆಯು.

೧೦-೧೧. ಅವ್ಯಕ್ತನು, ಮುಪ್ಪಿಲ್ಲದವನು, ನಿಸ್ಪೃಹನು, ಉತ್ಪತ್ತಿನಾಶಗಳಿಲ್ಲದವನು ಇಂತಹವನೇ ಎಂದು ನಿರ್ದೇಶಿಸಲನರ್ಹನು. ಪ್ರಾಕೃತರೂಪವಿಲ್ಲದವನು, ಹಸ್ತಪಾದಾದಿಗಳಿಂದ ಕೂಡಿರುವವನು, ಸರ್ವಶಕ್ತನು, ಸಕಲ ಪದಾರ್ಥಗಳಲ್ಲಿಯೂ ಇರುವವನು, ನಿತ್ಯನು, ಭೂತಕಾರಣನು, ಲೌಕಿಕಕಾರಣವಿಲಕ್ಷಣನು, ವ್ಯಾಪ್ತವಾದ ಸಕಲವಸ್ತುಗಳಿಗೂ ವ್ಯಾಪ್ತಿಪ್ರದನೂ ಆದ ಭಗವಂತನನ್ನು ಜ್ಞಾನಿಗಳು ಸಾಕ್ಷಾತ್ಕರಿಸುವರು.

೧೨. ಆ ಬ್ರಹ್ಮನು ಉತ್ಕೃಷ್ಟತೇಜೋಮಯನು. ಅವನೇ ಮುಮುಕ್ಷುಧ್ಯೇಯನು. ಅವನೇ ವೇದಪ್ರತಿಪಾದ್ಯವಾದ ಸೂಕ್ಷ್ಮತತ್ತ್ವವು. ಅದೇ ಉತ್ತಮವಾದ ವಿಷ್ಣುಸ್ವರೂಪವು.

೧೩. ಅದೇ ''ಭಗವಾನ್'' ಎಂಬ ಶಬ್ದಕ್ಕೆ ವಾಚ್ಯವಾದ ಪರಮಾತ್ಮನ ಸ್ವರೂಪವು. ಪೂರ್ಣನಾದ ಆ ವಿಷ್ಣುವಿಗೆ ''ಭಗವಾನ್'' ಎಂಬ ಶಬ್ದವು ವಾಚಕವು.

**ಏವಂ ನಿಗದಿತಾರ್ಥಸ್ಯ ಯತ್ತತ್ತ್ವಂ ತಸ್ಯ ತತ್ತ್ವತಃ ।**
**ಜ್ಞಾಯತೇ ಯೇನತದ್ಜ್ಞಾನಂ ಪರಮನ್ಯತ್ತ್ರಯೀಮಯಂ ॥ ೧೪ ॥**

**ಅಶಬ್ದಗೋಚರಸ್ಯಾಪಿ ತಸ್ಯ ವೈ ಬ್ರಹ್ಮಣೋ ದ್ವಿಜ ।**
**ಪೂಜಾಯಾಂ ಭಗವಚ್ಛಬ್ದಃ ಪರತ್ರ ಹ್ಯೌಪಚಾರಿಕಃ ॥ ೧೫ ॥**

**ಶುದ್ಧೇ ಮಹಾವಿಭೂತ್ಯಾಖ್ಯೇ ಪರೇ ಬ್ರಹ್ಮಣಿ ವರ್ತತೇ ।**
**ಭಗವನ್ಭಗವಚ್ಛಬ್ದಃ ಸರ್ವಕಾರಣಕಾರಣೇ ॥ ೧೬ ॥**

**ಜ್ಞೇಯಂ ಸಂಜ್ಞಾತೇತಿ ತಥಾ ಭಕಾರೋಽರ್ಥದ್ವಯಾತ್ಮಕಃ ।**
**ತೇನಾಗಮಯಿತಾ ಸ್ರಷ್ಟಾ ಗಕಾರೋಽಯಂ ತಥಾ ಮುನೇ ॥ ೧೭ ॥**

**ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಃ ಶ್ರಿಯಃ ।**
**ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥ ೧೮ ॥**

---

೧೪. ಈ ಪ್ರಕಾರ ಉಕ್ತವಾದ ಪರಮಾರ್ಥ ತತ್ತ್ವವನ್ನು ಯಥಾವತ್ತಾಗಿ ತಿಳಿಸಿ ಕೊಡುವುದೇ ಪರಜ್ಞಾನವು (ಪರವಿದ್ಯೆ). ಬೇರೆಯಾದುದು ಅಪರವಿದ್ಯೆಯು.

೧೫. ಸಂಪೂರ್ಣವಾಗಿ ಶಬ್ದಗೋಚರನಾಗದಿದ್ದಾಗ್ಯೂ, ಆ ಬ್ರಹ್ಮನ ವಿಷಯದಲ್ಲಿ ಪೂಜ್ಯತ್ವಾರ್ಥದಲ್ಲಿ ಭಗವಚ್ಛಬ್ದವು ಉಕ್ತವಾಗಿದೆ. ಆ ಶಬ್ದವು ಇತರ ವಸ್ತುವಿನಲ್ಲಿ ಔಪಚಾರಿಕವು.

೧೬. ಭಗವಚ್ಛಬ್ದವು ನಿರ್ದೋಷನಾದ, ಸಕಲಕಾರಣಗಳಿಗೂ ಶಕ್ತಿದಾಯಕನಾಗಿರುವುದರಿಂದ ಮುಖ್ಯಕಾರಣನಾಗಿರುವ, ಮಹಾವಿಭೂತಿ ನಾಮಕನಾದ ಪರಬ್ರಹ್ಮನನ್ನು ಬೋಧಿಸುತ್ತದೆ.

೧೭. ಜ್ಞೇಯನು ಮತ್ತು ಸಂಜ್ಞಾತ ಎಂಬುದಾಗಿ ಅರ್ಥದ್ವಯವನ್ನು ಭಕಾರವು ಬೋಧಿಸುತ್ತದೆ. ಹಾಗೆಯೇ ಗಕಾರವೂಸಹ ಆಗಮಯಿತೃ, ಸ್ರಷ್ಟೃ ಎಂಬ ಅರ್ಥದ್ವಯವನ್ನು ಬೋಧಿಸುತ್ತದೆ.

೧೮. ಸಮಗ್ರವಾದ ಐಶ್ವರ್ಯ, ವೀರ್ಯ, ಯಶಸ್ಸು, ಸಂಪತ್ತು, ಜ್ಞಾನ ಮತ್ತು ವೈರಾಗ್ಯ ಈ ಆರಕ್ಕೆ ಭಗ ಎಂದು ಹೆಸರು.

**ನಿವಸಂತಿ ತತ್ರ ಭೂತಾನಿ ಭೂತಾತ್ಮನ್ಯಖಿಲಾತ್ಮನಿ ।**
**ಸರ್ವಭೂತೇಷ್ವಶೇಷೇಷು ವಕಾರಾರ್ಥಸ್ತತೋಽವ್ಯಯಃ ॥ ೧೯ ॥**

**ಏವಮೇವ ಮಹಾಶಬ್ದೋ ಭಗವಾನಿತಿ ಸತ್ತಮ ।**
**ಪರಬ್ರಹ್ಮಭೂತಸ್ಯ ವಾಸುದೇವಸ್ಯ ನಾನ್ಯಗಃ ॥ ೨೦ ॥**

**ತತ್ರ ಪೂಜ್ಯಪದಾರ್ಥೋಕ್ತಿಃ ಪರಿಭಾಷಾಸಮನ್ವಿತಃ ।**
**ಶಬ್ದೋಽಯಂ ನೋಪಚಾರೇಣ ಚಾನ್ಯತ್ರ ಹ್ಯುಪಚಾರತಃ ॥ ೨೧ ॥**

**ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಂ ।**
**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥ ೨೨ ॥**

**ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ ।**
**ಭಗವಚ್ಛಬ್ದವಾಚ್ಯಾನಿ ವಿನಾಹೇಯೈರ್ಗುಣಾದಿಭಿಃ ॥ ೨೩ ॥**

---

೧೯. ಭೂತಾಂತರ್ಗತನು, ನಿಖಿಲ ನಿಯಾಮಕನೂ ಆದ ಆ ಪರಬ್ರಹ್ಮನಲ್ಲಿ ಭೂತಗಳು ವಾಸಿಸುತ್ತವೆ. ಅವನು ಸಕಲ ಭೂತಗಳಲ್ಲಿಯೂ ಅಂತರ್ಗತನಾಗಿರುವನು. ಆದುದರಿಂದ ನಾಶರಹಿತನಾದ ಪರಮಾತ್ಮನು ವಕಾರವಾಚ್ಯನೆಂದು ತಿಳಿಯಬೇಕು.

೨೦. ಸಾಧುವರ್ಯನೇ! ಈರೀತಿಯಾಗಿ "ಭಗವಾನ್" ಎಂಬುದು ಮಹಾಶಬ್ದವು. ಅದು ಪರಬ್ರಹ್ಮನಾದ ವಾಸುದೇವನಿಗೇ ವಾಚಕವು. ಇತರರಿಗೆ ವಾಚಕವಾಗುವುದಿಲ್ಲ.

೨೧. ಆ ಭಗವಂತನಲ್ಲಿ ಈ ಶಬ್ದವು ಪರಿಭಾಷೆಯಿಂದ ಪೂಜ್ಯ ಎಂಬ ಅರ್ಥವನ್ನು ಹೇಳುತ್ತದೆ. ಉಪಚಾರದಿಂದಲ್ಲ. ಇತರರಲ್ಲಿ ಈ ಶಬ್ದವು ಔಪಚಾರಿಕವು.

೨೨. ಸೃಷ್ಟಿ, ಪ್ರಲಯ, ಭೂತಗಳ ಆಗಮನಗಮನಗಳು, ವಿದ್ಯೆ ಮತ್ತು ಅವಿದ್ಯೆ ಇವುಗಳನ್ನು ತಿಳಿದವನೇ ಭಗವಚ್ಛಬ್ದವಾಚ್ಯನು.

೨೩. ಹೇಯವಾದ ಗುಣಾದಿಗಳವಿನಹ ಸಮಗ್ರವಾದ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ಮತ್ತು ತೇಜಸ್ಸು ಇವುಗಳು ಭಗವಚ್ಛಬ್ದಾರ್ಥಗಳು.

**ಸರ್ವಾಣಿ ತತ್ರ ಭೂತಾನಿ ವಸಂತಿ ಪರಮಾತ್ಮನಿ ।**
**ಭೂತೇಷು ವಸತೇ ಸಾಂತರ್ವಾಸುದೇವಸ್ತತಃ ಸ್ಮೃತಃ**
**ಖಾಂಡಿಕ್ಯಂ ಜನಕಂ ಪ್ರಾಹ ಪೃಷ್ಟಃ ಕೇಶಿಧ್ವಜಃ ಪುರಾ ॥ ೨೪ ॥**

**ನಾಮವ್ಯಾಖ್ಯಾಮನಂತಸ್ಯ ವಾಸುದೇವಸ್ಯ ತತ್ವತಃ ।**
**ಭೂತೇಷು ವಸತೇ ಸಾಂತರ್ವಸಂತ್ಯತ್ರ ಚ ತಾನಿ ಯತ್ ।**
**ಧಾತಾ ವಿಧಾತಾ ಜಗತಾಂ ವಾಸುದೇವಸ್ತತಃ ಪ್ರಭುಃ ॥ ೨೫ ॥**

**ಸ ಸರ್ವಭೂತಪ್ರಕೃತಿಂ ವಿಕಾರಂ**
**ಗುಣಾದಿದೋಷಾಂಶ್ಚ ಮುನೇ ವ್ಯತೀತಾಃ ।**
**ಅತೀತಸರ್ವಾವರಣೋಽಖಿಲಾತ್ಮಾ**
**ತೇನಾಸ್ತೃತಂ ಯದ್ಭುವನಾಂತರಾಲಂ ॥ ೨೬ ॥**

---

೨೪–೨೫. ಸಕಲ ಭೂತಗಳೂ ಪರಮಾತ್ಮನನ್ನೇ ಆಶ್ರಯಿಸಿವೆ. ಪರಮಾತ್ಮನು ಸಕಲ ಭೂತಗಳಲ್ಲಿ ಅಂತರ್ಗತನಾಗಿರುವನು. ಆದುದರಿಂದ ಅವನು ವಾಸುದೇವನೆನಿಸಿಕೊಳ್ಳುವನು. ಪೂರ್ವದಲ್ಲಿ ಜನಕರಾಜನಿಂದ ಪ್ರಶ್ನೆಮಾಡಿಸಿಕೊಳ್ಳಲ್ಪಟ್ಟ .ಕೇಶಿಧ್ವಜನು ಖಾಂಡಿಕ್ಯನೆಂಬ ಆ ಜನಕರಾಜನಿಗೆ ಅನಂತನಾದ ವಾಸುದೇವನ ನಾಮವ್ಯಾಖ್ಯಾನವನ್ನು ಯಥಾವತ್ತಾಗಿ ಹೇಳಿದನು.

೨೫. ಸ್ವಾಮಿಯು ಭೂತಗಳಲ್ಲಿ ಅಂತರ್ಗತನಾಗಿರುವುದರಿಂದಲೂ, ಭೂತಗಳು ಅವನಲ್ಲಿ ವಾಸಿಸುವುದರಿಂದಲೂ ಜಗತ್ತಿಗೆ ಸೃಷ್ಟಿಕರ್ತನು, ವಿಶೇಷ ಸೃಷ್ಟಿಕರ್ತನೂ ಆಗಿರುವುದರಿಂದಲೂ ವಾಸುದೇವನೆಂದು ಉಕ್ತನಾಗಿರುವನು.

೨೬. ಮುನಿಯೇ! ಆ ಭಗವಂತನು ಸಕಲ ಭೂತಪ್ರಕೃತಿ, ವಿಕಾರ ಮತ್ತು ಗುಣ್ಯಾದಿ ದೋಷಗಳು ಇವುಗಳನ್ನು ಅತಿಕ್ರಮಿಸಿರುವನು. ಎಂದರೆ ದೋಷಸಂಬಂಧವಿಲ್ಲದವನಾಗಿದ್ದಾನೆಂದು ತಾತ್ಪರ್ಯ. ಮತ್ತು ಅವನು ಅವಿದ್ಯಾ ಕಾಮುಕರ್ಮಾದಿ ಆವರಣಗಳ ಸಂಪರ್ಕವಿಲ್ಲದವನು, ಅಖಿಲಾಂತರ್ಯಾಮಿಯೂ ಆಗಿರುವನು. ಅವನಿಂದ ಈ ಲೋಕಾಂತರಾಳವೆಲ್ಲವೂ ವ್ಯಾಪ್ತವಾಗಿದೆ.

ಸಮಸ್ತಕಲ್ಯಾಣಗುಣಂ ಗುಣಾತ್ಮಕೋ
ಹಿತ್ವಾತಿದುಃಖಾವೃತಭೂತಸರ್ಗಃ ।
ಇಚ್ಛಾಗೃಹೀತಾಭಿಮತೋರುದೇಹಃ
ಸಂಸಾಧಿತಾಶೇಷಜಗದ್ಧಿತೋಽಸೌ ॥ ೨೭ ॥

ತೇಜೋಬಲೈಶ್ವರ್ಯಮಹಾವಬೋಧಃ
ಸ್ವವೀರ್ಯಶಕ್ತ್ಯಾದಿಗುಣೈಕರಾಶಿಃ ।
ಪರಃ ಪರಾಣಾಂ ಸಕಲಾ ನ ಯತ್ರ
ಕ್ಲೇಶಾದಯಃ ಸಂತಿ ಪರಾವರೇಶೇ ॥ ೨೮ ॥

ಸ ಈಶ್ವರೋ ವ್ಯಷ್ಟಿಸಮಷ್ಟಿರೂಪೋಽ-
ವ್ಯಕ್ತಸ್ವರೂಪಃ ಪ್ರಕಟಸ್ವರೂಪಃ ।
ಸರ್ವೇಶ್ವರಃ ಸರ್ವನಿಸರ್ಗವೇತ್ತಾ
ಸಮಸ್ತಶಕ್ತಿಃ ಪರಮೇಶ್ವರಾಖ್ಯಃ ॥ ೨೯ ॥

---

೨೭. ಈ ಭಗವಂತನು ಲೌಕಿಕಕಲ್ಯಾಣಗುಣಗಳನ್ನೆಲ್ಲಾ ಬಿಟ್ಟು ಅಪ್ರಾಕೃತಜ್ಞಾನಾನಂದಾದಿಸ್ವರೂಪನು, ಅತ್ಯಂತ ದುಃಖಭರಿತವಾದ ಪ್ರಾಣಿಗಳನ್ನು ಸೃಷ್ಟಿಸುವನು, ಸ್ವೇಚ್ಛೆಯಿಂದ ಸ್ವೀಕರಿಸಲ್ಪಟ್ಟ ಉತ್ಕೃಷ್ಟ ಶರೀರವುಳ್ಳವನು ಮತ್ತು ಸಕಲ ಲೋಕಕ್ಕೂ ಹಿತವನ್ನು ಸಿದ್ಧಗೊಳಿಸುವವನೂ ಆಗಿರುವನು.

೨೮. ದುಃಖಾದಿ ದೋಷಸಂಪರ್ಕವಿಲ್ಲದ ಪರಾವರೇಶನಾದ ಭಗವಂತನು ತೇಜಸ್ಸು, ಬಲ, ಐಶ್ವರ್ಯ, ಮಹತ್ತಾದ ಜ್ಞಾನ, ಇವುಗಳುಳ್ಳವನು, ವೀರ್ಯ, ಶಕ್ತಿ ಮುಂತಾದ ಗುಣಗಳ ರಾಶಿಸ್ವರೂಪನು, ಉತ್ತಮರಾದ ಬ್ರಹ್ಮಾದಿಗಳಿಗಿಂತಲೂ ಉತ್ತಮನು.

೨೯. ಅವನು ಈಶ್ವರನು, ವ್ಯಷ್ಟಿಸಮಷ್ಟಿಸ್ವರೂಪನು, ವ್ಯಕ್ತವಲ್ಲದ ನಿಜಸ್ವರೂಪವುಳ್ಳವನು, ಭಕ್ತರಿಗೆ ಮಾತ್ರ ತನ್ನ ಸ್ವರೂಪವನ್ನು ತೋರಿಸುವವನು, ಸರ್ವನಿಯಾಮಕನು, ಸಕಲ ವಸ್ತುಗಳ ಸ್ವಭಾವಜ್ಞನು, ಪೂರ್ಣಶಕ್ತನು, ಪರಮೇಶ್ವರನಾಮಕನೂ ಆಗಿರುವನು.

ಸ ಜ್ಞಾಯತೇ ಯೇನ ತದಸ್ತದೋಷಂ
ಶುದ್ಧಂ ಪರಂ ನಿರ್ಮಲಮೇವ ರೂಪಂ ।
ಸಂದೃಶ್ಯತೇ ಚಾಪ್ಯವಗಮ್ಯತೇ ಚ
ತದ್ಜ್ಞಾನಮಜ್ಞಾನಮತೋಽನ್ಯದುಕ್ತಂ ॥ ೩೦ ॥

ಸ್ವಾಧ್ಯಾಯಸಂಯಮಾಭ್ಯಾಂ ಸ ದೃಶ್ಯತೇ ಪುರುಷೋತ್ತಮಃ ।
ತತ್ಪ್ರಾಪ್ತಿಕಾರಣಂ ಬ್ರಹ್ಮ ತದೇತತ್ಪ್ರತಿಪದ್ಯತೇ ॥ ೩೧ ॥

ಸ್ವಾಧ್ಯಾಯಾದ್ಯೋಗಮಾಸೀತ ಯೋಗಾತ್ಸ್ವಾಧ್ಯಾಯಮಾಮನೇತ್ ।
ಸ್ವಾಧ್ಯಾಯಯೋಗಸಂಪತ್ತ್ಯಾ ಪರಮಾತ್ಮಾ ಪ್ರಕಾಶತೇ ॥ ೩೨ ॥

ತದೀಕ್ಷಣಾಯ ಸ್ವಾಧ್ಯಾಯಶ್ಚಕ್ಷುರ್ಯೋಗಸ್ತಥಾ ಪರಂ ।
ನ ಮಾಂಸಚಕ್ಷುಷಾ ದ್ರಷ್ಟುಂ ಬ್ರಹ್ಮಭೂತಃ ಸ ಶಕ್ಯತೇ ॥ ೩೩ ॥

---

೩೦. ದೋಷರಹಿತ, ಶುದ್ಧ ಉತ್ತಮ ಮತ್ತು ನಿರ್ಮಲವಾದ ಆ ಭಗವತ್ಸ್ವರೂಪವನ್ನು ತಿಳಿಯಲು, ನೋಡಲು, ಮತ್ತು ಹೊಂದಲು ಸಾಧನವಾದುದೇ ಜ್ಞಾನವು, ಅಂತಹುದಲ್ಲದುದು ಅಜ್ಞಾನವು ಎಂದು ಉಕ್ತವಾಗಿದೆ.

೩೧. ಸ್ವಾಧ್ಯಾಯ ಮತ್ತು ಸಂಯಮಗಳಿಂದ ಆ ಪುರುಷೋತ್ತಮನು ದೃಷ್ಟನಾಗುವನು. ಪರಬ್ರಹ್ಮನ ಅನುಗ್ರಹದಿಂದಲೇ ಅವನ ಪ್ರಾಪ್ತಿಯಾಗುವುದು. ಆದಕಾರಣ ಬ್ರಹ್ಮಜ್ಞಾನವನ್ನು ಸಂಪಾದಿಸಬೇಕು.

೩೨. ಸ್ವಾಧ್ಯಾಯದಿಂದ ಯೋಗವೂ, ಯೋಗದಿಂದ ಸ್ವಾಧ್ಯಾಯವೂ ಸಿದ್ಧಿಸುತ್ತದೆ. ಸ್ವಾಧ್ಯಾಯ ಮತ್ತು ಯೋಗ ಇವೆರಡರಿಂದ ಪರಮಾತ್ಮಪ್ರಕಾಶವುಂಟಾಗುತ್ತದೆ.

೩೩. ಪರಮಾತ್ಮನನ್ನು ದರ್ಶನಮಾಡುವುದಕ್ಕೆ ಸ್ವಾಧ್ಯಾಯ, ದಿವ್ಯ ಚಕ್ಷುಸ್ಸು ಇವು ಸಾಧನವು. ಬ್ರಹ್ಮನನ್ನು ಪ್ರಾಕೃತವಾದ ಈ ಮಾಂಸ ಚಕ್ಷುಸ್ಸಿನಿಂದ ನೋಡಲು ಸಾಧ್ಯವಾಗುವುದಿಲ್ಲ.

ನಾರದ ಉವಾಚ

ಭಗವಂಸ್ತ್ವಮಹಂ ಯೋಗಂ ಜ್ಞಾತುಮಿಚ್ಛಾಮಿ ತಂ ವದ ।
ಜ್ಞಾತೇ ಯತ್ರಾಖಿಲಾಧಾರಂ ಪಶ್ಯೇಯಂ ಪರಮೇಶ್ವರಂ ॥ ೩೪ ॥

ಸನಂದನ ಉವಾಚ

ಕೇಶಿಧ್ವಜೋ ಯಥಾ ಪ್ರಾಹ ಖಾಂಡಿಕ್ಯಾಯ ಮಹಾತ್ಮನೇ ।
ಜನಕಾಯ ಪುರಾ ಯೋಗಂ ತಥಾಽಹಂ ಕಥಯಾಮಿ ತೇ ॥ ೩೫ ॥

ನಾರದ ಉವಾಚ

ಖಾಂಡಿಕ್ಯಃ ಕೋಽಭವದ್ಬ್ರಹ್ಮನ್ಕೋ ವಾ ಕೇಶಿಧ್ವಜೋಽಭವತ್ ।
ಕಥಂ ತಯೋಶ್ಚ ಸಂವಾದೋ ಯೋಗಸಂಬಂಧವಾನಭೂತ್ ॥ ೩೬ ॥

ಸನಂದನ ಉವಾಚ

ಧರ್ಮಧ್ವಜೋ ವೈ ಜನಕಸ್ತಸ್ಯ ಪುತ್ರೋಽಮಿತಧ್ವಜಃ ।
ಕೃತಧ್ವಜೋಽಸ್ಯ ಭ್ರಾತಾಽಭೂತ್ಸದಾಽಧ್ಯಾತ್ಮರತಿರ್ನೃಪಃ ॥ ೩೭ ॥

---

೩೪. ನಾರದನು ಹೇಳಿದನು—ಸಮಸ್ತ ಪ್ರಪಂಚಕ್ಕೂ ಆಧಾರನಾದ ಪರಮೇಶ್ವರನ ಸಾಕ್ಷಾತ್ಕಾರಕ್ಕೆ ಯೋಗಜ್ಞಾನವು ಸಾಧನವಾಗಿದೆ. ಆದಕಾರಣ ಆ ಯೋಗವನ್ನು ತಿಳಿಯಲಪೇಕ್ಷಿಸುತ್ತೇನೆ. ಪೂಜ್ಯನಾದ ಸನಂದನನೇ! ಅದನ್ನು ನನಗೆ ಹೇಳು.

೩೫. ಪೂರ್ವದಲ್ಲಿ ಮಹಾತ್ಮನು, ಖಾಂಡಿಕ್ಯನಾಮಕನೂ ಆದ ಜನಕ ರಾಜನಿಗೆ ಕೇಶಿಧ್ವಜನು ಹೇಳಿದ ಯೋಗವನ್ನು ಹಾಗೆಯೇ ನಾನು ನಿನಗೆ ಹೇಳುವೆನು ಎಂದು ಸನಂದನನು ಹೇಳಿದನು.

೩೬. ನಾರದನು ಹೇಳಿದನು—ಬ್ರಹ್ಮಜ್ಞಾನಿಯಾದ ಸನಂದನನೇ! ಖಾಂಡಿಕ್ಯನಾರು? ಕೇಶಿಧ್ವಜನಾದರೂ ಯಾರು? ಅವರಿಗೆ ಯೋಗವಿಷಯಕ ವಾದ ಸಂವಾದವು ಹೇಗಾಯಿತು?

೩೭. ಸನಂದನನು ಹೇಳಿದನು—ಧರ್ಮಧ್ವಜನು ಜನಕವಂಶಜನು. ಅಮಿತ ಧ್ವಜನು ಅವನ ಮಗನು. ಇವನ ಭ್ರಾತೃ (ಸಹೋದರ) ವೇ ಕೃತಧ್ವಜನು.

ಕೃತಧ್ವಜಸ್ಯ ಪುತ್ರೋಽಭೂದ್ಧನ್ಯಃ ಕೇಶಿಧ್ವಜೋ ದ್ವಿಜ ।
ಪುತ್ರೋಽಮಿತಧ್ವಜಸ್ಯಾಪಿ ಖಾಂಡಿಕ್ಯಜನಕಾಭಿಧಃ ॥ ೩೮ ॥

ಕರ್ಮಮಾರ್ಗೇ ಹಿ ಖಾಂಡಿಕ್ಯಃ ಸ್ವರಾಜ್ಯಾದವರೋಪಿತಃ ।
ಪುರೋಧಸಾ ಮಂತ್ರಿಭಿಶ್ಚ ಸಮವೇತೋಽಲ್ಪಸಾಧನಃ ॥ ೩೯ ॥

ರಾಜ್ಯಾನ್ನಿರಾಕೃತಃ ಸೋಽಥ ದುರ್ಗಾರಣ್ಯಚರೋಽಭವತ್ ।
ಇಯಾಜ ಸೋಽಪಿ ಸುಬಹೂನ್ಯಜ್ಞಾನ್ ಜ್ಞಾನವ್ಯಪಾಶ್ರಯಃ ॥ ೪೦ ॥

ಬ್ರಹ್ಮವಿದ್ಯಾಮಧಿಷ್ಠಾಯ ಕರ್ತುಂ ಮೃತ್ಯುಮಪಿ ಸ್ವಯಂ ।
ಏಕದಾ ವರ್ತಮಾನಸ್ಯ ಯೋಗೇ ಯೋಗವಿದಾಂ ವರ ॥ ೪೧ ॥

ತಸ್ಯ ಧೇನುಂ ಜಘಾನೋಗ್ರಃ ಶಾರ್ದೂಲೋ ವಿಜನೇ ವನೇ ।
ತತೋ ರಾಜಾಽಽಹ ತಾಂ ಜ್ಞಾತ್ವಾ ಧೇನುಂ ವ್ಯಾಘ್ರೇಣ ಚರ್ತ್ವಿಜಃ ॥ ೪೨॥

---

ಆವನು ರಾಜನಾಗಿದ್ದಾಗ್ಯೂ ಯಾವಾಗಲೂ ಅಧ್ಯಾತ್ಮವಿಚಾರದಲ್ಲಾಸಕ ನಾಗಿದ್ದನು.

೩೮. ದ್ವಿಜನೇ! ಕೃತಧ್ವಜನಿಗೆ ಧನ್ಯನಾದ ಕೇಶಿಧ್ವಜನೆಂಬ ಮಗ ನಾದನು. ಅಮಿತಧ್ವಜನ ಮಗನೇ ಖಾಂಡಿಕ್ಯನೆಂಬ ನಾಮಾಂತರವುಳ್ಳ ಜನಕರಾಜನು.

೩೯. ಖಾಂಡಿಕ್ಯನು ತನ್ನ ರಾಜ್ಯಭಾರದಿಂದ ಬಿಡಿಸಲ್ಪಟ್ಟವನಾಗಿ ಪುರೋಹಿತ, ಮಂತ್ರಿ ಇವರುಗಳೊಡನೆ ಕರ್ಮಮಾರ್ಗದಲ್ಲಿ ಪ್ರಸಕ್ತನಾಗಿ ಅಲ್ಪ ಸಾಧನ ಸಂಪನ್ನನಾದನು.

೪೦. ತರುವಾಯ ರಾಜ್ಯದಿಂದ ನಿರಾಕೃತನಾದ ಆ ಜನಕನು ಬೆಟ್ಟ ಕಾಡುಗಳಲ್ಲಿ ಸಂಚರಿಸುತ್ತಿದ್ದನು. ಆ ಕೇಶಿಧ್ವಜನೂ ಸಹ ಜ್ಞಾನಾಕಾಂಕ್ಷಿಯಾಗಿ ಬಹು ಯಜ್ಞಗಳನ್ನು ಮಾಡಿದನು.

೪೧-೪೨. ಯೋಗಜ್ಞಾನಿವರೇಣ್ಯನೇ! ಒಂದಾನೊಂದು ದಿನ ಮೃತ್ಯು ವನ್ನು ಪರಿಹರಿಸಿಕೊಳ್ಳಬೇಕೆಂದು ಬ್ರಹ್ಮವಿದ್ಯೆಯನ್ನಧಿಕರಿಸಿ ಸ್ವತಃ ಯೋಗಾ ನುಷ್ಠಾನದಲ್ಲಿ ಪ್ರಸಕ್ತನಾಗಿದ್ದ ಆ ಕೇಶಿಧ್ವಜನ ಹಸುವನ್ನು ನಿರ್ಜನವಾದ ಕಾಡಿ ನಲ್ಲಿ ಕ್ರೂರವಾದ ಹುಲಿಯು ಸಂಹರಿಸಿತು.

**ಪ್ರಾಯಶ್ಚಿತ್ತಂ ಸ ಪಪ್ರಚ್ಛ ಕಿಮತ್ರೇತಿ ವಿಧೀಯತಾಂ ।**
**ತೇ ಚೋಚುರ್ನ ವಯಂ ವಿದ್ಮಃ ಕಶೇರುಃ ಪೃಚ್ಛ್ಯತಾಮಿತಿ ॥ ೪೩ ॥**

**ಕಶೇರುರಪಿ ತೇನೋಕ್ತಸ್ತಥೇತಿ ಪ್ರಾಹ ನಾರದ ।**
**ಶುನಕಂ ಪೃಚ್ಛ ರಾಜೇಂದ್ರ ನಾಹಂ ವೇದ ಸ ವೇತ್ಸ್ಯತಿ ॥ ೪೪ ॥**

**ಸ ಗತ್ವಾ ತಮಪೃಚ್ಛಚ್ಚ ಸೋಽಪ್ಯಾಹ ನೃಪತಿಂ ಮುನೇ ।**
**ನ ಕಶೇರುರ್ನ ಚೈವಾಹಂ ನ ಚಾನ್ಯಃ ಸಾಂಪ್ರತಂ ಭುವಿ ॥ ೪೫ ॥**

**ವೇತ್ತ್ಯೇಕ ಏವ ತ್ವಚ್ಛತ್ರುಃ ಖಾಂಡಿಕ್ಯೋ ಯೋ ಜಿತಸ್ತ್ವಯಾ ।**
**ಸ ಚಾಹ ತಂ ವ್ರಜಾಮ್ಯೇವ ಪ್ರಷ್ಟುಮಾತ್ಮರಿಪುಂ ಮುನೇ ॥ ೪೬ ॥**

---

೪೨-೪೩. ತರುವಾಯ ರಾಜನು ಹುಲಿಯಿಂದ ಗೋವು ಹತವಾದುದನ್ನು ತಿಳಿದು ಇದಕ್ಕೆ ಪ್ರಾಯಶ್ಚಿತ್ತವೇನು? ವಿಧಾನ ಮಾಡಿರಿ ಎಂದು ಋತ್ವಿಕ್ಕುಗಳನ್ನು ಕೇಳಿದನು. ಅವರು ನಮಗೆ ತಿಳಿಯದು ಕಶೇರುವನ್ನು ಕೇಳೋಣವಾಗಲಿ ಎಂದು ಹೇಳಿದರು.

೪೪. ಕಶೇರುವನ್ನು ಕೇಳಲು ಅವನೂ ಹಾಗೆಯೇ ಈ ವಿಷಯವು ನನಗೆ ತಿಳಿಯದು ಶುನಕನಿಗೆ ತಿಳಿದಿದೆ. ರಾಜೇಂದ್ರನೇ! ಅವನನ್ನು ಕೇಳು ಎಂದು ಹೇಳಿದನು.

೪೫. ಆ ರಾಜನು ಹೋಗಿ ಶುನಕನನ್ನು ಕೇಳಿದನು. ಅವನೂ ಸಹ ದೊರೆಯನ್ನು ಕುರಿತು ಕಶೇರು, ನಾನು ಅಥವಾ ಭೂಮಂಡಲದಲ್ಲಿ ಈಗಿರುವ ಯಾವನೂ ಇದನ್ನು ತಿಳಿದಿಲ್ಲ.

೪೬. ನಿನ್ನಿಂದ ಪರಾಜಿತನಾದ ನಿನ್ನ ಶತ್ರುವಾದ ಖಾಂಡಿಕ್ಯನೊಬ್ಬನೇ ಇದನ್ನು ತಿಳಿದಿರುವನೆಂದು ಹೇಳಿದನು. ಶತ್ರುವಾದಾಗ್ಯೂ ನಾನು ಖಾಂಡಿಕ್ಯನ ಬಳಿಗೇ ಹೋಗಿ ಪ್ರಾಯಶ್ಚಿತ್ತವನ್ನು ಕೇಳುವೆನು.

ಸ್ತ್ರಾಪ್ತ ಏವ ಮಯಾ ಯಜ್ಞೋ ಯದಿ ಮಾಂ ಸ ಹನಿಷ್ಯತಿ ।
ಪ್ರಾಯಶ್ಚಿತ್ತಂ ಸ ಚೇತ್ಪೃಷ್ಟೋ ವದಿಷ್ಯತಿ ರಿಪುರ್ಮಮ ॥ ೪೭ ॥

ತತಶ್ಚಾವಿಕಲೋ ಯೋಗೋ ಮುನಿಶ್ರೇಷ್ಠ ಭವಿಷ್ಯತಿ ।
ಇತ್ಯುಕ್ತ್ವಾ ರಥಮಾರುಹ್ಯ ಕೃಷ್ಣಾಜಿನಧರೋ ನೃಪಃ ॥ ೪೮ ॥

ವನಂ ಜಗಾಮ ಯತ್ರಾಸ್ತೇ ಖಾಂಡಿಕ್ಯಃ ಸ ಮಹಾಮತಿಃ ।
ತಮಾಯಾಂತಂ ಸಮಾಲೋಕ್ಯ ಖಾಂಡಿಕ್ಯೋ ರಿಪುಮಾತ್ಮನಃ ॥ ೪೯ ॥

ಪ್ರೋವಾಚ ಕ್ರೋಧತಾಮ್ರಾಕ್ಷಃ ಸಮಾರೋಪಿತಕಾರ್ಮುಕಃ ।

ಖಾಂಡಿಕ್ಯ ಉವಾಚ

ಕೃಷ್ಣಾಜಿನತ್ವಕ್ಕವಚಭಾವೇನಾಸ್ಮಾನ್ಹನಿಷ್ಯಸಿ ॥ ೫೦ ॥

ಕೃಷ್ಣಾಜಿನಧರೇ ವೇತ್ಸಿ ನ ಮಯಿ ಪ್ರಹರಿಷ್ಯತಿ ।
ಮೃಗಾನಾಂ ವದ ಪೃಷ್ಠೇಷು ಮೂಢ ಕೃಷ್ಣಾಜಿನಂ ನ ಕಿಂ ॥ ೫೧ ॥

---

೪೭–೪೮. ಮುನಿಶ್ರೇಷ್ಠನೇ! ಅದರಿಂದ ಅವನು ನನ್ನನ್ನು ಕೊಂದರೆ ನನಗೆ ಯಜ್ಞವೇ ಪ್ರಾಪ್ತವಾಯಿತು. ಹಾಗಿಲ್ಲದೆ ಪ್ರಾಯಶ್ಚಿತ್ತವನ್ನು ಹೇಳಿದರೆ ಯೋಗವು ಸಾಂಗವಾಗುವುದು.

೪೮–೪೯. ಹೀಗೆ ಹೇಳಿ ಕೃಷ್ಣಾಜಿನವನ್ನು ಧರಿಸಿದ ದೊರೆಯು ರಥವನ್ನು ಹತ್ತಿ, ಮಹಾಬುದ್ಧಿವಂತನಾದ ಖಾಂಡಿಕ್ಯನಿರುವ ಕಾಡಿಗೆ ಹೋದನು.

೪೯–೫೦. ಬರುತ್ತಿದ್ದ ತನ್ನ ಶತ್ರುವಾದ ಕೇಶಿಧ್ವಜನನ್ನು ನೋಡಿ ಖಾಂಡಿಕ್ಯನು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಧನುಸ್ಸನ್ನು ಸಮಾರೋಪಣೆಮಾಡಿ ಹೀಗೆ ಮಾತನಾಡಿದನು.

೫೦-೫೧. ಖಾಂಡಿಕ್ಯನು ಹೇಳಿದನು—ಮೂಢನಾದ ಕೇಶಿಧ್ವಜನೇ! ಕೃಷ್ಣಾಜಿನವನ್ನು ಅಂಗಿಯಾಗಿ ಧರಿಸಿ ಸಾಧುಭಾವವನ್ನು ತೋರಿಸಿ ನಮ್ಮನ್ನು ಕೊಲ್ಲಲು ಬಂದಿರುವೆ. ಮತ್ತು ನೀನು ಕೃಷ್ಣಾಜಿನವನ್ನು ಧರಿಸಿರುವುದರಿಂದ ನನ್ನನ್ನು ಹೊಡೆಯುವುದಿಲ್ಲವೆಂದೂ ಭಾವಿಸಿರುವೆ. ಮೂಢನೇ! ಜಿಂಕೆಗಳ ಪೃಷ್ಠಭಾಗದಲ್ಲಿ ಕೃಷ್ಣಾಜಿನವಲ್ಲದೇ ಏನಿದೆ? ಹೇಳು.

**ಯೇಷಾಂ ಮತ್ವಾ ವೃಥಾ ಚೋಗ್ರಾಃ ಪ್ರಹಿತಾಃ ಶಿತಸಾಯಕಾಃ ।**
**ಸ ತ್ವಾಮಹಂ ಹನಿಷ್ಯಾಮಿ ನ ಮೇ ಜೀವನ್ವಿಮೋಕ್ಷ್ಯಸೇ ॥ ೫೨ ॥**
**†ಆತತಾಯ್ಯಸಿ ದುರ್ಬುದ್ಧೇ ಮಮ ರಾಜ್ಯಹರೋ ರಿಪುಃ ।**

**ಕೇಶಿಧ್ವಜ ಉವಾಚ**

**ಖಾಂಡಿಕ್ಯ ಸಂಶಯಂ ಪ್ರಷ್ಟುಂ ಭವಂತಮಹಮಾಗತಃ ॥ ೫೩ ॥**

**ನತ್ವಾಂ ಹಂತುಂ ವಿಚಾರ್ಯೈತತ್ಕೋಪಂ ಬಾಣಂ ಚ ಮುಂಚ ವಾ ।**
**ತತಃ ಸ ಮಂತ್ರಿಭಿಃ ಸಾರ್ಧಮೇಕಾಂತೇ ಸ ಪುರೋಹಿತಃ ॥ ೫೪ ॥**

**ಮಂತ್ರಯಾಮಾಸ ಖಾಂಡಿಕ್ಯಃ ಸರ್ವೈರೇವ ಮಹಾಮತಿಃ ।**
**ತಮೂಚುರ್ಮಂತ್ರಿಣೋ ವಧ್ಯೋ ರಿಪುರೇಷ ವಶಂ ಗತಃ ॥ ೫೫ ॥**

---

೫೨-೫೩. ಕಾರಣವಿಲ್ಲದೇ ನನ್ನ ಮೇಲೆ ಕ್ರೂರವಾದ ನಿಶಿತಬಾಣಗಳನ್ನು ಪ್ರಯೋಗಿಸಿ ಹಿಂಸೆಮಾಡಿದ ನಿನ್ನನ್ನು ಕೊಲ್ಲುವೆನು. ನೀನು ಜೀವಂತನಾಗಿ ನನ್ನಿಂದ ಬಿಡಿಸಿಕೊಳ್ಳಲಾಗುವುದಿಲ್ಲ. ದುರ್ಬುದ್ಧಿಯುಳ್ಳವನೇ! ನೀನು ನನ್ನ ರಾಜ್ಯವನ್ನು ಅಪಹರಿಸಿದ ಶತ್ರುವು. †ಆತತಾಯಿಯಾಗಿರುವೆ.

೫೩-೫೪. ಖಾಂಡಿಕ್ಯನೇ! ತತ್ವಸಂಶಯವನ್ನು ಪರಿಹರಿಸಿಕೊಳ್ಳಲು ನಿನ್ನಲ್ಲಿಗೆ ಬಂದಿರುವೆನು. ನಿನ್ನನ್ನು ಸಂಹರಿಸಲು ಬಂದಿಲ್ಲ. ವಿಚಾರಮಾಡು. ಕೋಪವನ್ನು ಬಿಟ್ಟು ಬಾಣವನ್ನು ಕೆಳಗಿಡು ಎಂದು ಕೇಶಿಧ್ವಜನು ಹೇಳಿದನು.

೫೪-೫೬. ಅನಂತರ ಮಹಾಜ್ಞಾನಿಯಾದ ಖಾಂಡಿಕ್ಯನು ಪುರೋಹಿತ, ಮಂತ್ರಿ ಮುಂತಾದವರೆಲ್ಲರೊಡನೆ ರಹಸ್ಯವಾಗಿ ಆಲೋಚಿಸಿದನು. ನಮ್ಮ

---

†ಅಗ್ನಿದೋ ಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ ।
ಕ್ಷೇತ್ರದಾರಾಪಹಾರೀ ಚ ಷಡೇತೇ ಹ್ಯಾತತಾಯಿನಃ ॥
ಆತತಾಯಿನಮಾಯಾಂತಂ ಹನ್ಯಾದೇವಾವಿಚಾರಯನ್ ।
ನಾತತಾಯಿವಧೇ ದೋಷೋ ಹಂತುರ್ಭವತಿ ಕಶ್ಚನ ॥

†ಕೊಲ್ಲಬೇಕೆಂಬ ಉದ್ದೇಶದಿಂದ ಬೆಂಕಿ ಹಾಕುವವನು, ವಿಷವನ್ನು ಕೊಡುವವನು, ಕೈಯಲ್ಲಿ ಶಸ್ತ್ರವನ್ನು ಧರಿಸಿರುವವನು, ಹಣವನ್ನು ಅಪಹರಿಸಿದವನು, ಭೂಮಿ ಮತ್ತು ಹೆಂಡತಿ ಇವರನ್ನಪಹರಿಸಿದವನು, ಈ ಆರು ಜನರು ಆತತಾಯಿಗಳೆನಿಸುವರು. ಆತತಾಯಿಯಾಗಿ ಬಂದವನನ್ನು ವಿಚಾರಮಾಡದೆ ಸಂಹರಿಸಬೇಕು. ಆತತಾಯಿ ವಧೆಯನ್ನು ಮಾಡಿದವನಿಗೆ ಯಾವ ಪಾಪವೂ ಬರುವುದಿಲ್ಲ.

ಹತೇಽತ್ರ ಪೃಥಿವೀ ಸರ್ವಾ ತವ ವಶ್ಯಾ ಭವಿಷ್ಯತಿ ।
ಖಾಂಡಿಕ್ಯಶ್ಚಾಹ ತಾನ್ಸರ್ವಾನೇವಮೇವ ನ ಸಂಶಯಃ ॥ ೫೬ ॥

ಹತೇ ತು ಪೃಥಿವೀ ಸರ್ವಾ ಮಮ ವಶ್ಯಾ ಭವಿಷ್ಯತಿ ।
ಪರಲೋಕಜಯಸ್ತಸ್ಯ ಪೃಥಿವೀ ಸಕಲಾ ಮಮ ॥ ೫೭ ॥

ನ ಹನ್ಮಿ ಚೇಲ್ಲೋಕಜಯೋ ಮಮ ತ್ವಸ್ಯ ವಸುಂಧರಾ ।
ಪರಲೋಕಜಯೋಽನಂತಃ ಸ್ವಲ್ಪಕಾಲೋ ಮಹೀಜಯಃ ॥ ೫೮ ॥

ತಸ್ಮಾನ್ನೈನಂ ಹನಿಷ್ಯೇಹಂ ಯತ್ಪೃಚ್ಛತಿ ವದಾಮಿ ತತ್ ।
ತತಸ್ತಮಭ್ಯುಪೇತ್ಯಾಹ ಖಾಂಡಿಕ್ಯೋ ಜನಕೋ ರಿಪುಂ ॥ ೫೯ ॥

---

ಅಧೀನಕ್ಕೆ ಸಿಕ್ಕಿದ ಈ ಶತ್ರುವನ್ನು ಸಂಹರಿಸಬೇಕು. ಇವನು ಹತನಾದರೆ ರಾಜ್ಯವೆಲ್ಲಾ ನಿನ್ನ ಅಧೀನವಾಗುವುದು ಎಂದು ಮಂತ್ರಿಗಳು ಹೇಳಿದರು. ಖಾಂಡಿಕ್ಯನಾದರೋ ಇವನು ಹತನಾದರೆ ರಾಜ್ಯವೆಲ್ಲಾ ನನಗೇ ಸಿಕ್ಕುವುದೇನೋ ನಿಜ ಸಂದೇಹವಿಲ್ಲ.

೫೭-೫೮. ಆದರೆ ಇವನನ್ನು ಕೊಂದರೆ ರಾಜ್ಯವೆಲ್ಲವೂ ನನ್ನ ವಶವಾಗುವುದು. ಇವನಿಗಾದರೋ ಪರಲೋಕದಲ್ಲಿ ಜಯವಾಗುವುದು. ಇವನನ್ನು ಕೊಲ್ಲದಿದ್ದರೆ ನನಗೆ ಪರಲೋಕಜಯವೂ, ಇವನಿಗೆ ರಾಜ್ಯಲಾಭವೂ ಆಗುತ್ತದೆ. ಪರಲೋಕಜಯವು ಅನಂತವಾದುದು. ಭೂಜಯವು ಸ್ವಲ್ಪಕಾಲಮಾತ್ರವೇ ಇರುವುದು.

೫೯. ಆದುದರಿಂದ ಇವನನ್ನು ನಾನು ಕೊಲ್ಲುವುದಿಲ್ಲ. ಇವನು ಕೇಳುವುದನ್ನು ಹೇಳುವೆನು ಎಂಬುದಾಗಿ ಮಂತ್ರಿ ಮುಂತಾದವರಿಗೆಲ್ಲಾ ಹೇಳಿ ತರುವಾಯ ಖಾಂಡಿಕ್ಯನೆಂಬ ಜನಕನು ಶತ್ರುವಾದ ಕೇಶಿಧ್ವಜನ ಬಳಿಗೆ ಹೋಗಿ ಹೀಗೆಂದನು.

ಪ್ರಷ್ಟವ್ಯಂ ಯತ್ತ್ವಯಾ ಸರ್ವಂ ತತ್ಪೃಚ್ಛ ತ್ವಂ ವದಾಮ್ಯಹಂ ।
ತತಃ ಪ್ರಾಹ ಯಥಾವೃತ್ತಂ ಹೋಮಧೇನುವಧಂ ಮುನೇ ॥ ೬೦ ॥

ತತಶ್ಚ ತಂ ಸ ಪಪ್ರಚ್ಛ ಪ್ರಾಯಶ್ಚಿತ್ತಂ ಹಿ ತದ್ವ್ರತಂ ।
ಸ ಚಾಚಷ್ಟ ಯಥಾನ್ಯಾಯಂ ಮುನೇ ಕೇಶಿಧ್ವಜಾಯ ತತ್ ॥ ೬೧ ॥

ಪ್ರಾಯಶ್ಚಿತ್ತಮಶೇಷಂ ಹಿ ಯದ್ವೈ ತತ್ರ ವಿಧೀಯತೇ ।
ವಿದಿತಾರ್ಥಃ ಸ ತೇನೈವಮನುಜ್ಞಾತೋ ಮಹಾತ್ಮನಾ ॥ ೬೨ ॥

ಯಾಗಭೂಮಿಮುಪಾಗತ್ಯ ಚಕ್ರೇ ಸರ್ವಾಂ ಕ್ರಿಯಾಂ ಕ್ರಮಾತ್ ।
ಕ್ರಮೇಣ ವಿಧಿವದ್ಯಾಗಂ ನೀತ್ವಾ ಸೋಽವಭೃಥಾಪ್ಲುತಃ ॥ ೬೩ ॥

ಕೃತಕೃತ್ಯಸ್ತತೋ ಭೂತ್ವಾ ಚಿಂತಯಾಮಾಸ ಪಾರ್ಥಿವಃ ।
ಪೂಜಿತಾ ಋತ್ವಿಜಃ ಸರ್ವೇ ಸದಸ್ಯಾ ಮಾನಿತಾ ಮಯಾ ॥ ೬೪ ॥

---

೬೦. ನೀನು ಕೇಳಬೇಕಾದುದನ್ನೆಲ್ಲಾ ಕೇಳು, ಎಲ್ಲವನ್ನೂ ಹೇಳುವೆನು ಎಂದು ಅವನಿಗೆ ಹೇಳಿದನು. ನಾರದಮುನಿಯೇ! ಅನಂತರ ಕೇಶಿಧ್ವಜನು ಹೋಮಾರ್ಥವಾಗಿ ನಿಯೋಜಿಸಿದ್ದ ಗೋವಿನ ವಧೆಯಾದ ಪ್ರಕಾರವನ್ನು ಹೇಳಿದನು.

೬೧. ನಾರದಮುನಿಯೇ! ಅನಂತರ ಕೇಶಿಧ್ವಜನು ಜನಕನನ್ನು ಕುರಿತು ತನ್ನ ವ್ರತಕ್ಕೆ ಸಂಭವಿಸಿದ ಲೋಪಕ್ಕೆ ಪ್ರಾಯಶ್ಚಿತ್ತವನ್ನು ಕೇಳಿದನು. ಖಾಂಡಿಕ್ಯನೂ ಕೇಶಿಧ್ವಜನಿಗೆ ಅಂತಹ ಸಂದರ್ಭದಲ್ಲಿ ಮಾಡಬೇಕಾದ ಅಶೇಷ ಪ್ರಾಯಶ್ಚಿತ್ತವನ್ನು ಶಾಸ್ತ್ರೋಕ್ತಪ್ರಕಾರವಾಗಿ ಉಪದೇಶಿಸಿದನು.

೬೨-೬೩. ಉಪದೇಶದಿಂದ ವಿಷಯಗಳನ್ನು ತಿಳಿದುಕೊಂಡು ಮಹಾತ್ಮನಾದ ಅವನ ಅಪ್ಪಣೆಯನ್ನು ಪಡೆದು ಕೇಶಿಧ್ವಜನು ಯಾಗಸ್ಥಾನಕ್ಕೆ ಬಂದು ಕ್ರಮವಾಗಿ ಸಕಲ ಕರ್ಮಗಳನ್ನೂ ಮಾಡಿ ವಿಧ್ಯುಕ್ತಕ್ರಮದಿಂದ ಯಾಗವನ್ನು ಪೂರೈಸಿ ಅವಭೃತಸ್ನಾನಮಾಡಿದನು.

೬೪. ತರುವಾಯ ರಾಜನು ಕೃತಕೃತ್ಯನಾಗಿ ಆಲೋಚಿಸಿದನು. ನಾನು ಋತ್ವಿಕ್ಕುಗಳನ್ನೆಲ್ಲಾ ಸತ್ಕರಿಸಿದೆನು, ಸದಸ್ಯರನ್ನು ಗೌರವಿದೆನು.

ತಥೈವಾರ್ಥಿಜನೋಽಪ್ಯರ್ಥೈರ್ಯೋಜಿತೋಽಭಿಮತೈರ್ಮಯಾ ।
ಯಥಾಽಹಂ ಮರ್ತ್ಯಲೋಕಸ್ಯ ಮಯಾ ಸರ್ವಂ ವಿಚೇಷ್ಟಿತಂ ॥ ೬೫ ॥

ಅನಿಷ್ಪನ್ನಕ್ರಿಯಂ ಚೇತಸ್ತಥಾ ನ ಮಮ ಕಿಂ ಯಯಾ ।
ಇತ್ಥಂ ತು ಚಿಂತಯನ್ನೇವ ಸಸ್ಮಾರ ಸ ಮಹೀಪತಿಃ ॥ ೬೬ ॥

ಖಾಂಡಿಕ್ಯಾಯ ನ ದತ್ತೇತಿ ಮಯಾ ವೈ ಗುರುದಕ್ಷಿಣಾ ।
ಸ ಜಗಾಮ ತತೋ ಭೂಯೋ ರಥಮಾರುಹ್ಯ ಪಾರ್ಥಿವಃ ॥ ೬೭ ॥

ಸ್ವಾಯಂಭುವಃ ಸ್ಥಿತೋ ಯತ್ರ ಖಾಂಡಿಕ್ಯೋಽರಣ್ಯದುರ್ಗಮಂ ।
ಖಾಂಡಿಕ್ಯೋಽಪಿ ಪುನಃ ದೃಷ್ಟ್ವಾ ತಮಾಯಾಂತಂ ಧೃತಾಯುಧಃ ॥ ೬೮ ॥

ತಸ್ಥೌ ಹಂತುಂ ಕೃತಮತಿಸ್ತಮಾಹ ಸ ಪುನರ್ನೃಪಃ ।
ಅಹಂ ತೇ ನಾಪಕಾರಾಯ ಪ್ರಾಪ್ತಃ ಖಾಂಡಿಕ್ಯ ಮಾ ಕ್ರುಧಃ ॥ ೬೯ ॥

---

೬೫. ಹಾಗೆಯೇ ಭಿಕ್ಷುಕರಿಗೆ ಬೇಕಾದುದನ್ನೆಲ್ಲಾ ಕೊಟ್ಟೆನು. ಮನುಷ್ಯಲೋಕದಲ್ಲಿ ಮಾಡಬೇಕಾದುದನ್ನೆಲ್ಲಾ ಮಾಡಿರುವೆನು.

೬೬. ಆದಾಗ್ಯೂ ನನ್ನ ಮನಸ್ಸಿನಲ್ಲಿ ಕರ್ತವ್ಯವ್ಯಾಪಾರವು ಮುಗಿಯಿತೆಂಬ ಭಾವನೆಯುಂಟಾಗಲಿಲ್ಲ, ಅದಕ್ಕೆ ಕಾರಣವೇನು ? ಎಂಬುದಾಗಿ ಯೋಚಿಸುತ್ತಿರುವಾಗಲೇ ದೊರೆಗೆ ಜ್ಞಾಪಕಬಂದಿತು.

೬೭. ಅವನು ಖಾಂಡಿಕ್ಯನಿಗೆ ಗುರುದಕ್ಷಿಣೆಯನ್ನು ಕೊಡಲಿಲ್ಲವೆಂಬುದನ್ನು ಜ್ಞಾಪಿಸಿಕೊಂಡು ಕೂಡಲೇ ಪುನಃ ರಥವನ್ನೇರಿ ಖಾಂಡಿಕ್ಯನ ಬಳಿಗೆ ಬಂದನು.

೬೮-೬೯. ಕೇಶಿಧ್ವಜನು ಸ್ವಾಯಂಭುವ ಕುಲೋತ್ಪನ್ನನಾದ ಖಾಂಡಿಕ್ಯನು ವಾಸವಾಗಿದ್ದ ದುರ್ಗಮವಾದ ಕಾಡಿಗೆ ಬಂದನು. ಆಯುಧಧಾರಿಯಾಗಿ ಪುನಃ ಬರುತ್ತಿರುವ ಕೇಶಿಧ್ವಜನನ್ನು ನೋಡಿ ಖಾಂಡಿಕ್ಯನು ಅವನನ್ನು ಸಂಹರಿಸಬೇಕೆಂದು ನಿಶ್ಚಯಮಾಡಿ ನಿಂತನು.

೬೯-೭೦. ದೊರೆಯಾದ ಕೇಶಿಧ್ವಜನು ಖಾಂಡಿಕ್ಯನನ್ನು ಕುರಿತು ಖಾಂಡಿಕ್ಯನೇ! ನಾನು ನಿನಗೆ ಅಪಕಾರಮಾಡಲು ಬಂದವನಲ್ಲ, ಕೋಪಮಾಡ

ಗುರೋರ್ನಿಷ್ಕೃತಿದಾನಾಯ ಮಾಮವೇಹಿ ಸಮಾಗತಂ ।
ನಿಷ್ಪಾದಿತೋ ಮಯಾ ಯಾಗಃ ಸಮ್ಯಕ್ತ್ವದುಪದೇಶತಃ ॥ ೭೦ ॥

ಸೋಽಹಂ ತೇ ದಾತುಮಿಚ್ಛಾಮಿ ವೃಣೀಷ್ವ ಗುರುದಕ್ಷಿಣಾಂ ।
ಇತ್ಯುಕ್ತೋ ಮಂತ್ರಯಾಮಾಸ ಸ ಭೂಯೋ ಮಂತ್ರಿಭಿಸ್ಸಹ ॥ ೭೧ ॥

ಗುರೋರ್ನಿಷ್ಕೃತಿಕಾಮೋಽಯಂ ಕಿಮಯಂ ಪ್ರಾರ್ಥ್ಯತಾಂ ಮಯಾ ।
ತಮೂಚುರ್ಮಂತ್ರಿಣೋ॰ರಾಜ್ಯಮಶೇಷಂ ಯಾಚ್ಯತಾಮಯಂ ॥ ೭೨ ॥

ಕೃತಿಭಿಃ ಪ್ರಾರ್ಥ್ಯತೇ ರಾಜ್ಯಮನಾಯಾಸಿತಸೈನಿಕೈಃ ।
ಪ್ರಹಸ್ಯ ತಾನಾಹ ನೃಪಃ ಸ ಖಾಂಡಿಕ್ಯೋ ಮಹಾಮತಿಃ ॥ ೭೩ ॥

ಸ್ವಲ್ಪಕಾಲಂ ಮಹೀರಾಜ್ಯಂ ಮಾದೃಶೈಃ ಪ್ರಾರ್ಥ್ಯತೇ ಕಥಂ ।
ಏವಮೇತದ್ಭವಂತೋಽತ್ರ ಸ್ವಾರ್ಥಸಾಧನಮಂತ್ರಿಣಃ ॥ ೭೪ ॥

---

ಬೇಡ. ಗುರುವಾದ ನಿನಗೆ ಗುರುದಕ್ಷಿಣೆಯನ್ನು ಸಮರ್ಪಿಸಲು ಬಂದಿರುವೆನೆಂದು ತಿಳಿ.

೭೦-೭೧. ನಿನ್ನ ಉಪದೇಶದಿಂದ ನನ್ನ ಯಾಗವು ಸಾಂಗವಾಗಿ ನೆರವೇರಿತು. ಆದುದರಿಂದ ನಾನು ನಿನಗೆ ಗುರುದಕ್ಷಿಣೆಯನ್ನು ಕೊಡಲು ಅಪೇಕ್ಷಿಸಿ ಬಂದಿರುವೆನು. ಗುರುದಕ್ಷಿಣೆಯನ್ನು ಕೇಳು ಎಂದು ಹೇಳಿದನು.

೭೧-೭೨. ಅದನ್ನು ಕೇಳಿ ಖಾಂಡಿಕ್ಯನು ಮಂತ್ರಿಗಳೊಡನೆ ಇವನು ಗುರುವಾದ ನನಗೆ ಪ್ರತ್ಯರ್ಪಣೆ ಮಾಡಬೇಕೆಂದು ಬಂದಿರುವನು. ನಾನು ಏನನ್ನು ಕೇಳಲಿ? ಎಂಬುದಾಗಿ ಆಲೋಚಿಸಿದನು. ಮಂತ್ರಿಗಳು ಸಮಸ್ತ ರಾಜ್ಯವನ್ನೂ ಕೇಳಬೇಕೆಂದು ಖಾಂಡಿಕ್ಯನಿಗೆ ಹೇಳಿದರು.

೭೩-೭೪. ಸೈನಿಕರಿಗೆ ಆಯಾಸವಿಲ್ಲದೆ (ಯುದ್ಧಮಾಡದೇ) ಜ್ಞಾನಿಗಳು ರಾಜ್ಯವನ್ನು ಯಾಚಿಸುವರೆಂದು ಹೇಳಿ ನಕ್ಕು ಮಹಾಜ್ಞಾನಿಯಾದ ಖಾಂಡಿಕ್ಯ ರಾಜನು ಅವರನ್ನು ಕುರಿತು ಈ ರಾಜ್ಯವು ಸ್ವಲ್ಪಕಾಲ ಅನುಭವಿಸತಕ್ಕುದು. ನಮ್ಮಂತಹವರು ಅಶಾಶ್ವತವಾದ ಈ ರಾಜ್ಯವನ್ನು ಹೇಗೆ ಪ್ರಾರ್ಥಿಸುವುದು? ನೀವು ಸ್ವಾರ್ಥಪರರಾದ ಮಂತ್ರಿಗಳು, ತತ್ವಜ್ಞರಲ್ಲ.

ಪರಮಾರ್ಥಃ ಕಥಂ ಕೋऽತ್ರ ಯೂಯಂ ನಾತ್ರ ವಿಚಕ್ಷಣಾಃ ।
ಇತ್ಯುಕ್ತ್ವಾ ಸಮುಪೇತ್ಯೈನಂ ಸ ತು ಕೇಶಿಧ್ವಜಂ ನೃಪಂ ॥ ೭೫ ॥

ಉವಾಚ ಕಿಮವಶ್ಯಂ ತ್ವಂ ದಾಸ್ಯಸಿ ಗುರುದಕ್ಷಿಣಾಂ ।
ಬಾಢಮಿತ್ಯೇವ ತೇನೋಕ್ತಃ ಖಾಂಡಿಕ್ಯಸ್ತಮಥಾಬ್ರವೀತ್ ॥ ೭೬ ॥

ಭವಾನಧ್ಯಾತ್ಮವಿಜ್ಞಾನಪರಮಾರ್ಥವಿಚಕ್ಷಣಃ ।
ಯದಿಚೇದ್ದೀಯತೇ ಮಹ್ಯಂ ಭವತಾ ಗುರುನಿಷ್ಕ್ರಯಃ ॥ ೭೭ ॥

ತತ್ಕ್ಲೇಶಪ್ರಶಮಾಯಾಲಂ ಯತ್ಕರ್ಮ ತದುದೀರಯ ।

ಕೇಶಿಧ್ವಜ ಉವಾಚ

ನ ಪ್ರಾರ್ಥಿತಂ ತ್ವಯಾ ಕಸ್ಮಾನ್ಮಮ ರಾಜ್ಯಮಕಂಟಕಂ ॥ ೭೮ ॥

ರಾಜ್ಯಲಾಭಾದ್ಧಿ ನಾಸ್ತ್ಯನ್ಯತ್ಕ್ಷತ್ರಿಯಾಣಾಮತಿಪ್ರಿಯಂ ।

ಖಾಂಡಿಕ್ಯ ಉವಾಚ

ಕೇಶಿಧ್ವಜ ನಿಬೋಧ ತ್ವಂ ಮಯಾ ನ ಪ್ರಾರ್ಥಿತಂ ಯತಃ ॥ ೭೯ ॥

---

೭೫-೭೬. ಈ ರಾಜ್ಯದಲ್ಲಿ ಏನು ಪರಮಾರ್ಥವಿದೆ? ಈ ವಿಷಯದಲ್ಲಿ ನೀವು ವಿವೇಚನಶೀಲರಲ್ಲ ಎಂಬುದಾಗಿ ಆ ಮಂತ್ರಿಗಳಿಗೆ ಹೇಳಿ ಖಾಂಡಿಕ್ಯನು ಕೇಶಿಧ್ವಜ ದೊರೆಯಹತ್ತಿರ ಬಂದು ನೀನು ಖಂಡಿತವಾಗಿ ಗುರುದಕ್ಷಿಣೆಯನ್ನು ಕೊಡುವೆಯಾ? ಏನು ಎಂದು ಕೇಳಿದನು. ಹೌದು ಕೊಡುತ್ತೇನೆ ಎಂದು ಅವನು ಹೇಳಿದುದನ್ನು ಕೇಳಿ ಖಾಂಡಿಕ್ಯನು ಕೇಶಿಧ್ವಜನಿಗೆ ಹೇಳಿದನು.

೭೭-೭೮. ಅಧ್ಯಾತ್ಮತತ್ವಜ್ಞಾನಪರಮಾರ್ಥಗಳ ವಿವೇಚನಶೀಲನಾದ ನೀನು ನನಗೆ ಗುರುದಕ್ಷಿಣೆಯನ್ನು ಕೊಡುವುದಾದರೆ ಸಂಸಾರದುಃಖವನ್ನು ನೀಗಿಕೊಳ್ಳಲು ಸಾಧಕವಾದ ಕರ್ಮವಾವುದೆಂಬುದನ್ನು ಹೇಳು.

೭೮-೭೯. ಕೇಶಿಧ್ವಜನು ಹೇಳಿದನು—ಕ್ಷತ್ರಿಯರಿಗೆ ರಾಜ್ಯಲಾಭಕ್ಕಿಂತ ಬೇರೆ ಅತ್ಯಂತ ಪ್ರಿಯವಾದುದಿಲ್ಲ. ಆದಾಗ್ಯೂ ನೀನು ನಿಷ್ಕಂಟಕವಾದ ನನ್ನ ರಾಜ್ಯವನ್ನು ಯಾಚಿಸಲಿಲ್ಲ ಕಾರಣವೇನು? ಎಂದು ಖಾಂಡಿಕ್ಯನನ್ನು ಕೇಳಿದನು.

ರಾಜ್ಯಮೇತದಶೇಷೇಣ ಯನ್ನ ಗೃಧ್ನಂತಿ ಪಂಡಿತಾಃ ।
ಕ್ಷತ್ರಿಯಾಣಾಮಯಂ ಧರ್ಮೋ ಯತ್ಪ್ರಜಾಪರಿಪಾಲನಂ ॥ ೮೦ ॥

ವಧಶ್ಚ ಧರ್ಮಯುದ್ಧೇನ ಸ್ವರಾಜ್ಯಪರಿಪಂಥಿನಾಂ ।
ಯತ್ರಾಶಕ್ತಸ್ಯ ಮೇ ದೋಷೋ ನೈವಾಸ್ತ್ಯನ್ಯಕೃತೇ ತ್ವಯಾ ॥ ೮೧ ॥

ಬಂಧಾಯೈವ ಭವತ್ಯೇಷಾ ಹ್ಯವಿದ್ಯಾ ಚಾಕ್ರಮೋಜ್ಝಿತಾ ।
ಜನ್ಮೋಪಭೋಗಲಿಪ್ಸಾರ್ಥಮಿಯಂ ರಾಜ್ಯಸ್ಪೃಹಾ ಮಮ ॥ ೮೨ ॥

ಅನ್ಯೇಷಾಂ ದೋಷಜಾ ನೈವ ಧರ್ಮಮೇವಾನುರುಧ್ಯತೇ ।
ನ ಯಾಚ್ಞಾ ಕ್ಷತ್ರಬಂಧೂನಾಂ ಧರ್ಮಾಯೈತತ್ಸತಾಂ ಮತಂ ॥ ೮೩ ॥

ಅತೋ ನ ಯಾಚಿತಂ ರಾಜ್ಯಮವಿದ್ಯಾಂತರ್ಗತಂ ತವ ।
ರಾಜ್ಯಂ ಗೃಧ್ನಂತಿ ವಿದ್ವಾಂಸೋ ಮಮತ್ವಾಕೃಷ್ಟಚೇತಸಃ ॥ ೮೪ ॥

---

೭೯. ಖಾಂಡಿಕ್ಯನು ಹೇಳಿದನು—ಕೇಶಿಧ್ವಜನೇ! ನಾನು ನಿನ್ನ ರಾಜ್ಯವನ್ನು ಅಪೇಕ್ಷಿಸದಿರುವುದಕ್ಕೆ ಕಾರಣವನ್ನು ಹೇಳುವೆನು ತಿಳಿ.

೮೦-೮೧. ಪ್ರಜಾರಕ್ಷಣೆ, ತನ್ನ ರಾಜ್ಯಭಾರಕ್ಕೆ ವಿಘ್ನಕಾರಿಗಳನ್ನು ಧರ್ಮಯುದ್ಧಮಾಡಿ ಸಂಹರಿಸುವುದು ಕ್ಷತ್ರಿಯರಿಗೆ ಧರ್ಮವಾದುದರಿಂದ ಜ್ಞಾನಿಗಳು ಈ ರಾಜ್ಯವನ್ನು ಸಂಪೂರ್ಣವಾಗಿ ಆಶಿಸುವುದಿಲ್ಲ. ಅಂತಹ ಕ್ಷತ್ರಿಯ ಧರ್ಮವನ್ನು ನಿರ್ವಹಿಸಲು ನಾನು ಅಶಕ್ತನಾಗಿರುವುದರಿಂದ ಬೇರೆ ಕೇಳಿದರೂ ದೋಷವಿಲ್ಲ.

೮೨-೮೩. ಈ ರಾಜ್ಯಾಶೆಯು ಕ್ರಮವಾದ ಅವಿದ್ಯಾವಿಲಾಸವೇ ಸರಿ. ಅದು ಬಂಧಕ್ಕೇ ಸಾಧನವು. ಪರರ ರಾಜ್ಯವನ್ನು ಉಪಭೋಗಾಪೇಕ್ಷೆಯಿಂದ ಆಶಿಸುವುದು ದೋಷಕರವು. ಧರ್ಮಾನುಸಾರಿಯಲ್ಲ. ಯಾಚನೆಯು ಕ್ಷತ್ರಿಯರಿಗೆ ಧರ್ಮವಲ್ಲ. ಇದೇ ಸಜ್ಜನರ ಮತವು.

೮೪-೮೫. ಆದಕಾರಣ ರಾಜ್ಯವನ್ನು ನಾನು ಯಾಚಿಸಲಿಲ್ಲ. ರಾಜ್ಯವು ಅವಿದ್ಯಾಂತರ್ಗತವು. ನನ್ನದೆಂಬ ಅಭಿಮಾನದಿಂದ ವಿಕೃತವಾದ ಮನಸ್ಸುಳ್ಳ

ಅಹಂಮಾನಮಹಾಪಾನಮದಮತ್ತಾ ನ ಮಾದೃಶಾಃ ।

ಕೇಶಿಧ್ವಜ ಉವಾಚ

ಅಹಂ ಚ ವಿದ್ಯಯಾ ಮೃತ್ಯುಂ ತರ್ತುಕಾಮಃ ಕರೋಮಿ ವೈ　　॥ ೮೫ ॥

ರಾಜ್ಯಂ ಯಜ್ಞಾಂಶ್ಚ ವಿವಿಧಾನ್ಭೋಗೇ ಪುಣ್ಯಕ್ಷಯಂ ತಥಾ ।
ತದಿದಂ ತೇ ಮನೋ ದಿಷ್ಟ್ಯಾ ವಿವೇಕೈಶ್ವರ್ಯತಾಂ ಗತಂ　　॥ ೮೬ ॥

ಶ್ರೂಯತಾಂ ಚಾಪ್ಯವಿದ್ಯಾಯಾಃ ಸ್ವರೂಪಂ ಕುಲನಂದನ ।
ಅನಾತ್ಮನ್ಯಾತ್ಮಬುದ್ಧಿರ್ಯಾ ಸ್ವಾವಿದ್ಯಾ ವಿಷಮಾ ಮತಿಃ　　॥ ೮೭ ॥

ಅವಿದ್ಯಾತರುಸಂಭೂತಂ ಬೀಜನೇತದ್ದ್ವಿಧಾ ಸ್ಥಿತಂ ।
ಪಂಚಭೂತಾತ್ಮಕೇ ದೇಹೇ ದೇಹೀ ಮೋಹತಮೋವೃತಃ　　॥ ೮೮ ॥

---

"ಅಹಂ" ನಾನು ಎಂಬ ಅಭಿಮಾನರೂಪವಾದ ಮಹಾಪಾನದಿಂದ ಉಂಟಾದ ಮದದಿಂದ ಕೊಬ್ಬಿರುವ ವಿದ್ವಾಂಸರು ನಿನ್ನ ರಾಜ್ಯವನ್ನು ಆಶಿಸುವರು. ನಮ್ಮಂತಹವರು ಆಶಿಸುವುದಿಲ್ಲ ಎಂದು ಖಾಂಡಿಕ್ಯನು ಕಾರಣವನ್ನು ವಿವರಿಸಿದನು.

೮೫-೮೬. ಕೇಶಿಧ್ವಜನು ಹೇಳಿದನು—ನಾನಾದರೋ ವಿದ್ಯೆಯಿಂದಲೇ ಮೃತ್ಯುವನ್ನುಲ್ಲಂಘಿಸಬೇಕೆಂಬ ಅಪೇಕ್ಷೆಯಿಂದ ರಾಜ್ಯಭಾರ ಮತ್ತು ನಾನಾವಿಧ ಯಜ್ಞಗಳನ್ನು ಮಾಡುತ್ತಿದ್ದೇನೆ. ಹಾಗೆಯೇ ಭೋಗದಿಂದ ಪುಣ್ಯಕ್ಷಯವೂ ಆಗುವುದು. ಆದುದರಿಂದ ನೀನು ಹೇಳುವುದು ನಿನ್ನ ಕಲ್ಮಷಮನಸ್ಸಿನಿಂದ ಯುಕ್ತವಾದ ಅವಿವೇಕದ ಪರಾಕಾಷ್ಠೆಯೇ ಸರಿ ಎಂದರೆ ನಿನ್ನ ಹೇಳಿಕೆಯು ಅವಿವೇಕದ ವಿಲಾಸವು. ಯುಕ್ತವಾದುದಲ್ಲವೆಂದು ತಾತ್ಪರ್ಯ.

೮೭. ಕುಲನಂದನನೇ! (ವಂಶವನ್ನು ಸಂತೋಷಪಡಿಸುವವನೇ) ಅವಿದ್ಯೆಯ ಸ್ವರೂಪವನ್ನು ಹೇಳುವೆನು, ಕೇಳು. ಆತ್ಮವಲ್ಲದುದನ್ನು ಆತ್ಮನೆಂದು ತಿಳಿಯುವ ವಿಷಮಬುದ್ಧಿಯೇ ಅವಿದ್ಯೆಯು.

೮೮-೮೯. ಅವಿದ್ಯೆಯೆಂಬ ವೃಕ್ಷದಿಂದ ಹುಟ್ಟಿದ ಈ ಬೀಜವು ಎರಡು ವಿಧವಾಗಿದೆ. ದುರ್ಮತಿಯಾದ ಆತ್ಮನು ಅಜ್ಞಾನಾಂಧಕಾರದಿಂದಾವರಿ

ಅಹಮೇತದಿತೀತ್ಯುಚ್ಚೈಃ ಕುರುತೇ ಕುಮತಿರ್ಮತಿಂ ।
ಆಕಾಶವಾಯ್ವಗ್ನಿಜಲಪೃಥಿವೀಭಿಃ ಪೃಥಕ್ ಸ್ಥಿತೇ ॥ ೮೯ ॥

ಆತ್ಮನ್ಯಾತ್ಮಮಯಂ ಭಾವಂ ಕಃ ಕರೋತಿ ಕಲೇಬರೇ ।
ಕಲೇಬರೋಪಭೋಗ್ಯಂ ಹಿ ಗೃಹಕ್ಷೇತ್ರಾದಿಕಂ ಚ ಯತ್ ॥ ೯೦ ॥

ಅದೇಹೇ ಹ್ಯಾತ್ಮನಿ ಪ್ರಾಜ್ಞೋ ಮಮೇದಮಿತಿ ಮನ್ಯತೇ ।
ಇತ್ಥಂ ಚ ಪುತ್ರಪೌತ್ರೇಷು ತದ್ದೇಹೋತ್ಪಾದಿತೇಷು ಚ ॥ ೯೧ ॥

ಕರೋತಿ ಪಂಡಿತಃ ಸ್ವಾಮ್ಯಮನಾತ್ಮನಿ ಕಲೇಬರೇ ।
ಸರ್ವದೇಹೋಪಭೋಗಾಯ ಕುರುತೇ ಕರ್ಮ ಮಾನವಃ ॥ ೯೨ ॥

ದೇಹಶ್ಚಾನ್ಯೋ ಯದಾ ಪುಂಸಸ್ತದಾ ಬಂಧಾಯ ತತ್ಪರಂ ।
ಮೃಣ್ಮಯಂ ಹಿ ಯಥಾ ಗೇಹಂ ಲಿಪ್ಯತೇ ವೈ ಮೃದಂಭಸಾ ॥ ೯೩ ॥

---

ಸಲ್ಪಟ್ಟು ಪಂಚಭೂತಾತ್ಮಕವಾದ ದೇಹವನ್ನು ನಾನೇ ಎಂದು ದೃಢವಾಗಿ ತಿಳಿಯುವನು.

೮೯-೯೦. ಆತ್ಮನು ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥಿವಿಗಳಿಂದ ಬೇರೆಯಾಗಿರುವುದರಿಂದ ಅಂತಹ ಪಂಚಭೂತಾತ್ಮಕದೇಹದಲ್ಲಿ ಆತ್ಮನೆಂಬ ಭಾವನೆಯನ್ನು ಯಾವನು ಮಾಡಿಯಾನು ?

೯೦-೯೧. ಆತ್ಮನು ದೇಹಭಿನ್ನನೆಂದು ತಿಳಿದಿರುವ ಪ್ರಾಜ್ಞನು ಶರೀರೋಪಭೋಗ್ಯವಾದ ಮನೆ, ಭೂಮಿ ಮುಂತಾದುವನ್ನು ಇದು ನನ್ನದು ಎಂದು ತಿಳಿಯುವನು. ಇದೇಪ್ರಕಾರ ಅವನ ದೇಹದಿಂದ ಹುಟ್ಟಿದ ಮಕ್ಕಳು, ಮೊಮ್ಮಕ್ಕಳುಗಳನ್ನೂ ಸಹ ನನ್ನವರೆಂದು ತಿಳಿಯುವನು.

೯೨. ಜ್ಞಾನಿಯು ಆತ್ಮಭಿನ್ನವಾದ ಶರೀರಕ್ಕೆ ತಾನು ಸ್ವಾಮಿಯೆಂದು ತಿಳಿಯುವನು. ಮನುಷ್ಯನು ಸಕಲದೇಹೋಪಭೋಗಕ್ಕಾಗಿ ಕರ್ಮವನ್ನು ಮಾಡುವನು.

೯೩-೯೪. ಆತ್ಮನಿಗೆ ಭಿನ್ನವಾದ ಪಾಂಚಭೌತಿಕ ದೇಹವು ಯಾವಾಗಲೂ ಬಂಧಕವು. ಮಣ್ಣಿನಿಂದ ಕಟ್ಟಿದ ಮನೆಯು ನೀರಿನಿಂದ ಮಣ್ಣನ್ನು

ಪಾರ್ಥಿವೋಽಯಂ ತಥಾ ದೇಹೋ ಮೃದಂಭೋಲೇಪನಸ್ಥಿತಿಃ ।
ಪಂಚಭೋಗಾತ್ಮಕೈರ್ಭೋಗ್ಯೈಃ ಪಂಚಭೋಗಾತ್ಮಕಂ ವಪುಃ ॥ ೯೪ ॥

ಆಪ್ಯಾಯತೇ ಯದಿ ತತಃ ಪುಂಸೋ ಗರ್ವೋಽತ್ರ ಕಿಂ ಕೃತಃ ।
ಅನೇಕಜನ್ಮಸಾಹಸ್ರಂ ಸಂಸಾರಪದವೀಂ ವ್ರಜನ್ ॥ ೯೫ ॥

ಮೋಹಾಶ್ರಮಂ ಪ್ರಯಾತೋಽಸೌ ವಾಸನಾರೇಣುಗುಂಠಿತಃ ।
ಪ್ರಕ್ಷಾಲ್ಯತೇ ಯದಾ ಸೌಮ್ಯ ರೇಣುಜ್ಞಾನೋಷ್ಣವಾರಿಣಾ ॥ ೯೬ ॥

ತದಾ ಸಂಸಾರಪಾಂಥಸ್ಯ ಯಾತಿ ಮೋಹಾಶ್ರಮಃ ಶಮಂ ।
ಮೋಹಾಶ್ರಮೇ ಶಮಂ ಯಾತೇ ಸ್ವಚ್ಛಾಂತಃಕರಣಃ ಪುಮಾನ್ ॥ ೯೭ ॥

ಅನನ್ಯಾತಿಶಯಾಧಾರಃ ಪರಂ ನಿರ್ವಾಣಮೃಚ್ಛತಿ ।
ನಿರ್ವಾಣಮಯಏವಾಯಮಾತ್ಮಾ ಜ್ಞಾನಮಯೋಽಮಲಃ ॥ ೯೮ ॥

---

ಕಲೆಸಿ ಮೆತ್ತುವುದರಿಂದ ಹೇಗೆ ಭದ್ರವಾಗುವುದೋ ಅದರಂತೆ ಈ ಪಾರ್ಥಿವ ದೇಹವೂ ಪೃಥಿವೀ ಜಲಗಳ ಲೇಪನದಿಂದ ಸ್ಥಿತವಾಗುವುದು.

೯೪-೯೫. ಪಂಚಭೂತಾತ್ಮಕವಾದ ಭೋಗಗಳಿಂದ ಪಂಚಭೂತಾತ್ಮಕ ಶರೀರವು ರಕ್ಷಿಸಲ್ಪಡುವುದಾದರೆ ಈ ವಿಷಯದಲ್ಲಿ ಆತ್ಮನ ಗರ್ವಕ್ಕೆ ಕಾರಣ ವೇನಿದೆ ?

೯೫-೯೬. ಈ ಆತ್ಮನು ಅನೇಕ ಸಾವಿರ ಜನ್ಮಗಳು ಸಂಸಾರಮಾಡಿ ಮಿಥ್ಯಾಜ್ಞಾನವಾಸನೆಯ ಅಂಶದಿಂದ ಶಕ್ತಿಯನ್ನು ಕಳೆದುಕೊಂಡು ಅಜ್ಞಾನಾವಸ್ಥೆಯನ್ನು ಹೊಂದಿರುವನು.

೯೬-೯೭. ಸೌಮ್ಯನೇ ! ಮಿಥ್ಯಾಜ್ಞಾನವಾಸನಾಂಶವು ಜ್ಞಾನವೆಂಬ ಬಿಸಿ ನೀರಿನಿಂದ ತೊಳೆಯಲ್ಪಟ್ಟಾಗ ಸಂಸಾರಿಯ ಅಜ್ಞಾನಾವಸ್ಥೆಯು ಹೋಗುವುದು.

೯೭-೯೮. ಅಜ್ಞಾನಾವಸ್ಥೆಯು ಹೋದಮೇಲೆ ಆತ್ಮನು ನಿರ್ಮಲಾಂತಃ ಕರಣನಾಗಿ ಅನ್ಯಪ್ರಯುಕ್ತವಾದ ದೋಷರಹಿತನಾಗಿ ಉತ್ಕೃಷ್ಟ ಸುಖರೂಪ ವಾದ ಮೋಕ್ಷವನ್ನು ಹೊಂದುವನು. ಈ ಆತ್ಮನು ಸ್ವತಃ ಸುಖಮಯನು, ಜ್ಞಾನಮಯನು ಮತ್ತು ನಿರ್ಮಲನೂ ಆಗಿರುವನು.

**ದುಃಖಾಜ್ಞಾನಮಯಾ ಧರ್ಮಾಃ ಪ್ರಕೃತೇಸ್ತೇ ತು ನಾತ್ಮನಃ ।**
**ಜಲಸ್ಯ ನಾಗ್ನಿನಾ ಸಂಗಃ ಸ್ಥಾಲೀ ಸಂಗಾತ್ತಥಾಪಿ ಹಿ ॥ ೯೯ ॥**

**ಶಬ್ದೋದ್ರೇಕಾದಿಕಾನ್ಧರ್ಮಾನ್ಕರೋತಿ ಹಿ ಯಥಾ ಬುಧಃ ।**
**ತಥಾತ್ಮಾ ಪ್ರಕೃತೇಃ ಸಂಗಾದಹಂಮಾನಾದಿದೂಷಿತಃ ॥ ೧೦೦ ॥**

**ಭಜತೇ ಪ್ರಾಕೃತಾನ್ಧರ್ಮಾನ್ನ್ಯಸ್ತಸ್ತಂಭೋ ಹಿ ಸೋಽವ್ಯಯಃ ।**
**ತದೇತತ್ಕಥಿತಂ ಬೀಜಮವಿದ್ಯಾಯಾ ಮಯಾ ತವ ॥ ೧೦೧ ॥**

**ಕ್ಲೇಶಾನಾಂ ಚ ಕ್ಷಯಕರಂ ಯೋಗಾದನ್ಯನ್ನ ವಿದ್ಯತೇ ॥ ೧೦೨ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ**
**ದ್ವಿತೀಯಪಾದೇ ಷಟ್ಚತ್ವಾರಿಂಶತ್ತಮೋಽಧ್ಯಾಯಃ**

---

೯೯-೧೦೦. ದುಃಖಾಜ್ಞಾನಮಯವಾದ ಧರ್ಮಗಳೆಲ್ಲವೂ ಪ್ರಕೃತಿಯ ಸಂಬಂಧದಿಂಟಾಗುವುವು. ಆತ್ಮನಿಗೆ ಸ್ವಾಭಾವಿಕವಲ್ಲ. ನೀರಿಗೆ ಸಾಕ್ಷಾತ್ತಾಗಿ ಬೆಂಕಿಯ ಸಂಬಂಧವಿಲ್ಲದಿದ್ದಾಗ್ಯೂ ಬೆಂಕಿಗೆ ಸಂಬಂಧಿಸಿದ ಪಾತ್ರೆಯ ಸಂಪರ್ಕದಿಂದ ನೀರು ಶಬ್ದಮಾಡುವುದು, ಕುದಿಯುವುದು ಮುಂತಾದ ವಿಕಾರ ಧರ್ಮಗಳನ್ನು ಹೊಂದುವಂತೆ ಜ್ಞಾನಸ್ವರೂಪನಾದ ಆತ್ಮನು ಪ್ರಕೃತಿಯ ಸಂಬಂಧದಿಂದ ಅಹಂಕಾರಾದಿದೂಷಿತನಾಗುವನು.

೧೦೧. ನಾಶರಹಿತನಾದ ಆತ್ಮನು ಅವಿದ್ಯಾಸಂಬಂಧದಿಂದ ಪ್ರಾಕೃತ ಧರ್ಮಗಳನ್ನು ಹೊಂದುವನು. ಈರೀತಿಯಾದ ಅವಿದ್ಯೆಯಿಂದಾಗುವ ಅನರ್ಥವನ್ನು ನಿನಗೆ ಹೇಳಿರುವೆನು.

೧೦೨. ಯೋಗವೇ ದುಃಖಗಳನ್ನು ನಾಶಪಡಿಸುವುದು. ಇನ್ನಾವುದೂ ದುಃಖಗಳನ್ನು ನಾಶಮಾಡಲಾರದು.

ಇಂತು ಶ್ರೀನಾರದೀಯಪುರಾಣ ಪೂರ್ವಭಾಗದ ಬೃಹದುಪಾಖ್ಯಾನವೆಂಬ ದ್ವಿತೀಯಪಾದದಲ್ಲಿ ನಲವತ್ತಾರನೆಯ ಅಧ್ಯಾಯವು ಮುಗಿದುದು.

## ಕಥಾಸಾರಾಂಶ

ಆಧ್ಯಾತ್ಮಿಕಾದಿ ತಾಪತ್ರಯವನ್ನು ಪರಿಹರಿಸಿಕೊಳ್ಳುವ ಬಗೆಯನ್ನು ನಾರದನು ಕೇಳಿದನು. ಸನಂದನನು ತಾಪತ್ರಯಪರಿಹಾರಕ್ಕೆ ಭಗವದ್ಪ್ರಾಪ್ತಿಯೊಂದೇ ಸಾಧನವು, ಅದಕ್ಕೆ ಜ್ಞಾನ, ಕರ್ಮ ಇವುಗಳೆರಡೂ ಸಾಧನಗಳು ಎಂದು ಹೇಳಿ ಜ್ಞಾನಸ್ವರೂಪವನ್ನು ವಿವರಿಸುವ ಪ್ರಸಂಗದಲ್ಲಿ ಭಗವಚ್ಛಬ್ದದ ಅವಯವಾರ್ಥವನ್ನು ವಿಶದಪಡಿಸಿ, ಜ್ಞಾನವೇ ಉತ್ತಮಸಾಧನವೆಂದೂ ಅದಕ್ಕೆ ಅಧ್ಯಯನ ಮತ್ತು ಯೋಗಗಳು ಸಾಧನವೆಂದೂ ಹೇಳಿದನು. ಯೋಗ ಸ್ವರೂಪವನ್ನು ವಿವರಿಸಬೇಕೆಂದು ನಾರದನು ಪುನಃ ಕೇಳಲು ಯೋಗವಿಷಯದಲ್ಲಿ ಪೂರ್ವದಲ್ಲಿ ನಡೆದ ಖಾಂಡಿಕ್ಯ, ಕೇಶಿಧ್ವಜರ ಸಂವಾದವು ಉಕ್ತವಾಗಿದೆ. ಅದರಲ್ಲಿ ವಿದ್ಯೆ, ಅವಿದ್ಯೆ ಇವುಗಳ ಸ್ವರೂಪ, ಅದರಿಂದಾಗುವ ಅರ್ಥಾನರ್ಥಗಳು ಆತ್ಮನ ನೈಜಸ್ವರೂಪ ಮುಂತಾದುವು ವಿವರಿಸಲ್ಪಟ್ಟವೆ.

## ಸಪ್ತಚತ್ವಾರಿಂಶೋಽಧ್ಯಾಯಃ

ಸನಂದನ ಉವಾಚ

ಏತದಧ್ಯಾತ್ಮಜ್ಞಾನಾದ್ಯಂ ವಚಃ ಕೇಶಿಧ್ವಜಸ್ಯ ಸಃ ।
ಖಾಂಡಿಕ್ಯೋಽಮೃತವಚ್ಛ್ರುತ್ವಾ ಪುನರಾಹತ ಮೀರಯನ್ ॥ ೧ ॥

ಖಾಂಡಿಕ್ಯ ಉವಾಚ

ತದ್ಬ್ರೂಹಿ ತ್ವಂ ಮಹಾಭಾಗ ಯೋಗಂ ಯೋಗವಿದುತ್ತಮ ।
ವಿಜ್ಞಾತಯೋಗಶಾಸ್ತ್ರಾರ್ಥಸ್ತ್ವಮಸ್ಯಾಂ ನಿಮಿಸಂತತೌ ॥ ೨ ॥

ಕೇಶಿಧ್ವಜ ಉವಾಚ

ಯೋಗಸ್ವರೂಪಂ ಖಾಂಡಿಕ್ಯ ಶ್ರೂಯತಾಂ ಗದತೋ ಮಮ ।
ಯತ್ರ ಸ್ಥಿತೋ ನ ಚ್ಯವತೇ ಪ್ರಾಪ್ಯ ಬ್ರಹ್ಮಲಯಂ ಮುನಿಃ ॥ ೩ ॥

---

## ನಲವತ್ತೇಳನೆಯ ಅಧ್ಯಾಯವು

೧. ಸನಂದನನು ಹೇಳಿದನು—ಆ ಖಾಂಡಿಕ್ಯನು ಕೇಶಿಧ್ವಜನ ಅಮೃತದಂತಿರುವ ಅಧ್ಯಾತ್ಮಜ್ಞಾನಾದಿಗಳನ್ನು ವಿಶದಪಡಿಸುವ ವಾಣಿಯನ್ನು ಕೇಳಿ ಅವನನ್ನು ಶ್ಲಾಘಿಸುತ್ತಾ ಪುನಃ ಪ್ರಶ್ನಿಸಿದನು.

೨. ಖಾಂಡಿಕ್ಯನು ಹೇಳಿದನು--ಧನ್ಯನು, ಯೋಗಜ್ಞಾನಿವರೇಣ್ಯನೂ ಆಗಿರುವ ಕೇಶಿಧ್ವಜನೇ! ನೀನು ಈ ನಿಮಿಚಕ್ರವರ್ತಿಯ ವಂಶದಲ್ಲಿ ಯೋಗಶಾಸ್ತ್ರವನ್ನು ತಿಳಿದವನಾದುದರಿಂದ ನನಗೆ ಯೋಗವನ್ನು ಹೇಳು.

೩. ಕೇಶಿಧ್ವಜನು ಹೇಳಿದನು—ಖಾಂಡಿಕ್ಯನೇ! ಯೋಗಸ್ವರೂಪವನ್ನು ಹೇಳುವೆನು ಕೇಳು. ಬ್ರಹ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸಿ ಯೋಗವನ್ನಾಚರಿಸುವ ಮುನಿಯು ಚ್ಯುತಿಯನ್ನು ಹೊಂದುವುದಿಲ್ಲ.

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ।
ಬಂಧಸ್ಯ ವಿಷಯಾಸಂಗಿ ಮುಕ್ತೇರ್ನಿರ್ವಿಷಯಂ ತಥಾ ॥ ೪ ॥

ವಿಷಯೇಭ್ಯಃ ಸಮಾಹೃತ್ಯ ವಿಜ್ಞಾನಾತ್ಮಾ ಬುಧೋ ಮನಃ ।
ಚಿಂತಯೇನ್ಮುಕ್ತಯೇ ತೇನ ಬ್ರಹ್ಮಭೂತಂ ಪರೇಶ್ವರಂ ॥ ೫ ॥

ಆತ್ಮಭಾವಂ ನಯೇತ್ತೇನ ತದ್ಬ್ರಹ್ಮಧ್ಯಾಪನಂ ಮನಃ ।
ವಿಕಾರ್ಯಮಾತ್ಮನಃ ಶಕ್ತ್ಯಾ ಲೋಹಮಾಕರ್ಷಕೋ ಯಥಾ ॥ ೬ ॥

ಆತ್ಮಪ್ರಯತ್ನಸಾಪೇಕ್ಷಾ ವಿಶಿಷ್ಟಾ ಯಾ ಮನೋಗತಿಃ ।
ತಸ್ಯಾ ಬ್ರಹ್ಮಣಿ ಸಂಯೋಗೋ ಯೋಗ ಇತ್ಯಭಿಧೀಯತೇ ॥ ೭ ॥

ಏವಮತ್ಯಂತವೈಶಿಷ್ಟ್ಯಯುಕ್ತಧರ್ಮೋಪಲಕ್ಷಣಂ ।
ಯಸ್ಯ ಯೋಗಃ ಸ ವೈ ಯೋಗೀ ಮುಮುಕ್ಷುರಭಿಧೀಯತೇ ॥ ೮ ॥

---

೪. ಮನಸ್ಸೇ ಮನುಷ್ಯರಿಗೆ ಬಂಧಮೋಕ್ಷಗಳೆರಡಕ್ಕೂ ಕಾರಣವು. ಮನಸ್ಸು ವಿಷಯದಲ್ಲಿಯೇ ಆಸಕ್ತವಾದರೆ ಅದು ಬಂಧವನ್ನುಂಟುಮಾಡುವುದು ಅದೇ ಮನಸ್ಸು ವಿಷಯದಲ್ಲಿ ಆಸಕ್ತಿಯನ್ನು ಬಿಟ್ಟು ಭಗವಧ್ಯಾನರತವಾದರೆ ಮೋಕ್ಷವನ್ನು ಕೊಡುವುದು.

೫. ವಿಜ್ಞಾನಸ್ವರೂಪಿಯಾದ ಜ್ಞಾನಿಯು ಮನಸ್ಸನ್ನು ವಿಷಯಗಳ ದೆಸೆಯಿಂದ ದೂರವಾಗಿ ಸೆಳೆದುಕೊಂಡು ಅಂತಹ ನಿರ್ವಿಷಯಕವಾದ ಮನಸ್ಸಿನಿಂದ ಪೂರ್ಣನಾದ ಪರಮೇಶ್ವರನನ್ನು ಮುಕ್ತಿಗೋಸ್ಕರ ಧ್ಯಾನಿಸಬೇಕು.

೬. ಅಯಸ್ಕಾಂತ ಶಿಲೆಯು ಲೋಹವನ್ನಾಕರ್ಷಿಸುವಂತೆ ಆತ್ಮಶಕ್ತಿಯಿಂದ ವಿಕಾರ ಹೊಂದಲರ್ಹವಾದ, ಬ್ರಹ್ಮಧ್ಯಾನ ಸಾಧಕವಾದ ಮನಸ್ಸನ್ನು ಧ್ಯಾನದಿಂದ ಆತ್ಮನಲ್ಲಿ ನೆಲೆಯಾಗಿ ನಿಲ್ಲುವಂತೆ ಮಾಡಬೇಕು.

೭. ಆತ್ಮಪ್ರಯತ್ನಸಾಪೇಕ್ಷವಾದ ಮನಸ್ಸಿನ ವಿಶಿಷ್ಟಗತಿಯನ್ನೂ ಬ್ರಹ್ಮನಲ್ಲಿ ಸಂಯೋಜನೆ ಮಾಡುವುದು ಯೋಗವೆನಿಸುತ್ತದೆ.

೮. ಈ ರೀತಿ ಆತ್ಯಂತಿಕವಾಗಿ ಇತರರಿಗೆ ಸಲ್ಲದ ವಿಶೇಷಧರ್ಮಗಳಿಗೆ ಸಾಧಕವಾದ ಯೋಗವನ್ನನುಷ್ಠಾನ ಮಾಡುವ ಮುಮುಕ್ಷುವು ಯೋಗಿಯೆನಿಸಿಕೊಳ್ಳುವನು.

ಯೋಗಯುಕ್ತಃ ಪ್ರಥಮಂ ಯೋಗೀ ಯುಂಜಮಾನೋಽಭಿಧೀಯತೇ ।
ವಿನಿಷ್ಪನ್ನಸಮಾಧಿಸ್ತು ಪರಬ್ರಹ್ಮೋಪಲಬ್ಧಿಮಾನ್ ॥ ೯ ॥

ಯದ್ಯಂತರಾಯದೋಷೇಣ ದುಷ್ಯತೇ ನಾಸ್ಯ ಮಾನಸಂ ।
ಜನ್ಮಾಂತರೈರಭ್ಯಸನಾನ್ಮುಕ್ತಿಃ ಪೂರ್ವಸ್ಯ ಜಾಯತೇ ॥ ೧೦ ॥

ವಿನಿಷ್ಪನ್ನಸಮಾಧಿಸ್ತು ಮುಕ್ತಿಮತ್ರೈವ ಜನ್ಮನಿ ।
ಪ್ರಾಪ್ನೋತಿ ಯೋಗೀ ಯೋಗಾಗ್ನಿದಗ್ಧಕರ್ಮಾ ಚ ಯೋಽಚಿರಾತ್ ॥ ೧೧॥

ಬ್ರಹ್ಮಚರ್ಯಮಹಿಂಸಾಂ ಚ ಸತ್ಯಾಸ್ತೇಯಾಪರಿಗ್ರಹಾನ್ ।
ಸೇವೇತ ಯೋಗೀ ನಿಷ್ಕಾಮೋ ಯೋಗಿತಾಂ ಸ್ವಮನೋ ನಯನ್ ॥ ೧೨ ॥

ಸ್ವಾಧ್ಯಾಯಶೌಚಸಂತೋಷತಪಃಸುನಿಯಮಾನ್ಯಮಾನ್ ।
ಕುರ್ವೀತ ಬ್ರಹ್ಮಣಿ ತಥಾ ಪರಸ್ಮಿನ್ಪ್ರವಣಂ ಮನಃ ॥ ೧೩ ॥

---

೯. ಯೋಗಿಯು ಯೋಗವನ್ನನುಷ್ಠಾನಮಾಡುವವನಾಗಿ ಮೊದಲು ಯುಂಜಮಾನ ಎನಿಸಿಕೊಳ್ಳುವನು. ಸಮಾಧಿಸಿಷ್ಪತ್ತಿಯಾದಮೇಲೆ ಪರಬ್ರಹ್ಮ ಸಾಕ್ಷಾತ್ಕಾರ ಹೊಂದುವನು.

೧೦. ಯುಂಜಾನಯೋಗಿಯ ಮನಸ್ಸು ಮಧ್ಯದಲ್ಲಿ ಸಂಭವಿಸಬಹುದಾದ ವಿಘ್ನದೋಷದಿಂದ ಕಲುಷಿತವಾಗದಿದ್ದರೆ ಜನ್ಮಾಂತರಗಳಲ್ಲಿ ಅಭ್ಯಾಸ ಮಾಡಿದಮೇಲೆ ಅವನಿಗೆ ಮುಕ್ತಿಯಾಗುವುದು.

೧೧. ಸಮಾಧಿನಿಷ್ಪತ್ತಿಯನ್ನು ಪಡೆದ ಯೋಗಿಯು ಶೀಘ್ರವಾಗಿ ತನ್ನ ಕರ್ಮಸಮೂಹವನ್ನು ಯೋಗಾಗ್ನಿಯಿಂದ ದಹಿಸಿ ಈ ಜನ್ಮದಲ್ಲಿಯೇ ಮುಕ್ತಿಯನ್ನು ಪಡೆಯುವನು.

೧೨. ಯೋಗಿಯು ತನ್ನ ಮನಸ್ಸನ್ನು ಯೋಗದಲ್ಲಿ ಸಂಯೋಜನೆ ಮಾಡಿ ಫಲಾಶೆಯಿಲ್ಲದೇ ಕೇವಲ ಭಗವತ್ಪ್ರೀತ್ಯರ್ಥವಾಗಿ ಬ್ರಹ್ಮಚರ್ಯೆ, ಅಹಿಂಸೆ, ಸತ್ಯ, ಅಸ್ತೇಯ ಮತ್ತು ಅಪರಿಗ್ರಹಗಳನ್ನು ಸೇವಿಸಬೇಕು.

೧೩. ಯೋಗಿಯು ಸ್ವಾಧ್ಯಾಯ (ವೇದಾಧ್ಯಯನ) ಶೌಚ, ಸಂತೋಷ ಹರಿಪೂಜೆ, ತಪಸ್ಸು ಎಂಬ ನಿಯಮಗಳನ್ನೂ ಆಚರಿಸಿ ಪರಬ್ರಹ್ಮನಲ್ಲಿ ಮನಃ ಪ್ರಾವಣ್ಯವನ್ನು ಹೊಂದಬೇಕು-

ಏತೇ ಯಮಾಶ್ಚ ನಿಯಮಾಃ ಪಂಚ ಪಂಚ ಪ್ರಕೀರ್ತಿತಾಃ ।
ವಿಶಿಷ್ಟಫಲದಾಃ ಕಾಮ್ಯಾ ನಿಷ್ಕಾಮಾನಾಂ ವಿಮುಕ್ತಿದಾಃ ॥ ೧೪ ॥

ಏವಂ ಭದ್ರಾಸನಾದೀನಾಂ ಸಮಾಸ್ಥಾಯ ಗುಣ್ಯೆರ್ಯುತಃ ।
ಯಮಾಖ್ಯೈರ್ನಿಯಮಾಖ್ಯೈಶ್ಚ ಯುಂಜೀತ ನಿಯತೋ ಯತಿಃ ॥ ೧೫ ॥

ಪ್ರಾಣಾಖ್ಯಮನಲಂಬಸ್ಥಮಭ್ಯಾಸಾತ್ಕುರುತೇ ತು ಯತ್ ।
ಪ್ರಾಣಾಯಾಮಃ ಸ ವಿಜ್ಞೇಯಃ ಸಬೀಜೋಽಬೀಜ ಏವ ಚ ॥ ೧೬ ॥

ಪರಸ್ಪರೇಣಾಭಿಭವಂ ಪ್ರಾಣಾಪಾನೌ ಯದಾಽನಿಲೌ ।
ಕುರುತಃ ಸದ್ವಿಧಾನೇನ ತೃತೀಯಃ ಸಂಯಮಾತ್ತಯೋಃ ॥ ೧೭ ॥

ತಸ್ಯ ಚಾಲಂಬನವತಃ ಸ್ಥೂಲಂ ರೂಪಂ ಮಹಾಮತೇ ।
ಆಲಂಬನಮನಂತಸ್ಯ ಯೋಗಿನೋಽಭ್ಯಸತಃ ಸ್ಮೃತಂ ॥ ೧೮ ॥

---

೧೪. ಈ ರೀತಿ ಐದು ಯಮಗಳು ಐದು ನಿಯಮಗಳೂ ಹೇಳಲ್ಪಟ್ಟವು. ಇವನ್ನು ಫಲಾಪೇಕ್ಷೆಯಿಂದ ಆಚರಿಸಿದರೆ ಆಯಾಯಾ ಫಲಗಳನ್ನು ಮಾತ್ರ ಕೊಡುತ್ತವೆ. ಫಲಾಶೆಯಿಲ್ಲದೆ ಅನುಷ್ಠಾನಮಾಡುವವರಿಗೆ ಇವು ಮೋಕ್ಷಪ್ರದ ವಾಗುವುವು.

೧೫. ಈ ಪ್ರಕಾರ ಯತಿಯು ಭದ್ರಾಸನನಾದಿಗಳಲ್ಲಿ ಕುಳಿತು ಯಮ ಮತ್ತು ನಿಯಮಗಳೆಂಬ ಗುಣಗಳಿಂದ ಸಹಿತನಾಗಿ ಯೋಗವನ್ನಾಚರಿಸಬೇಕು.

೧೬. ಅಭ್ಯಾಸದಿಂದ ಪ್ರಾಣವಾಯುವನ್ನು ಅವಲಂಬಸ್ಥಾನದಲ್ಲಿ ನಿಲ್ಲು ವಂತೆ ಮಾಡುವುದೇ ಪ್ರಾಣಾಯಾಮವೆಂದು ತಿಳಿಯಬೇಕು. ಅದು ಸಬೀಜ ಮತ್ತು ಅಬೀಜ ಎಂಬುದಾಗಿ ಎರಡುವಿಧವು.

೧೭-೧೮. ಪ್ರಾಣಾಪಾನವಾಯುಗಳು ಅನ್ಯೋನ್ಯವಾಗಿ ತಿರಸ್ಕಾರ ಮಾಡುತ್ತಿರುವಾಗ ಸಮೀಚೀನವಾದ ರೀತಿಯಿಂದ ಅವುಗಳನ್ನು ಸಂಯಮನ ಮಾಡುವುದರಿಂದ ಮೂರನೆಯ ವಾಯುವು ನಿಷ್ಪನ್ನವಾಗುವುದು. ಆಲಂಬನ ವನ್ನು ಹೊಂದಿದ ಆ ವಾಯುವಿನ ಸ್ಥೂಲರೂಪವೇ ಚಿರಕಾಲದಿಂದ ಬಿಡದೇ ಅಭ್ಯಾಸಮಾಡುತ್ತಿರುವ ಯೋಗಿಗೆ ಆಲಂಬನವೆಂದು ಉಕ್ತವಾಗಿದೆ.

**ಶಬ್ದಾದಿಷ್ವನುರಕ್ತಾನಿ ನಿಗೃಹ್ಯಾಕ್ಷಾಣಿ ಯೋಗವಿತ್ ।**
**ಕುರ್ಯಾಚ್ಚಿತ್ತಾನುಕಾರೀಣಿ ಪ್ರತ್ಯಾಹಾರಪರಾಯಣಃ ॥ ೧೯ ॥**

**ಯೋಗಿನಾಂ ಪರಮಾ ತೇನ ಜಾಯತೇ ನಿಶ್ಚಲಾತ್ಮತಾ ।**
**ಇಂದ್ರಿಯಾಣಾಮವಶ್ಯೈಸ್ತೈರ್ನ ಯೋಗೀ ಯೋಗಸಾಧಕಃ ॥ ೨೦ ॥**

**ಪ್ರಾಣಾಯಾಮೇನ ಪವನೈಃ ಪ್ರತ್ಯಾಹಾರೇಣ ಚೇಂದ್ರಿಯೈಃ ।**
**ವಶೀಕೃತೈಸ್ತತಃ ಕುರ್ಯಾತ್ಸ್ಥಿರಂ ಚೇತಃ ಶುಭಾಶ್ರಯೇ ॥ ೨೧ ॥**

**ಖಾಂಡಿಕ್ಯ ಉವಾಚ**

**ಕಥ್ಯತಾಂ ಮೇ ಮಹಾಭಾಗ ಚೇತಸೋ ಯಃ ಶುಭಾಶ್ರಯಃ ।**
**ಯದಾಧಾರಮಶೇಷಂ ತು ಹಂತಿ ದೋಷಸಮುದ್ಭವಂ ॥ ೨೨ ॥**

**ಕೇಶಿಧ್ವಜ ಉವಾಚ**

**ಆಶ್ರಯಶ್ಚೇತಸೋ ಜ್ಞಾನಿನ್ ದ್ವಿಧಾ ತಚ್ಚ ಸ್ವರೂಪತಃ ।**
**ರೂಪಂ ಮೂರ್ತಮಮೂರ್ತಂ ಚ ಪರಂಚಾಪರಮೇವ ಚ ॥ ೨೩ ॥**

---

೧೯. ಯೋಗಜ್ಞಾನಿಯು ಪ್ರತ್ಯಾಹಾರದಲ್ಲಿ ಆಸಕ್ತನಾಗಿ ಶಬ್ದಾದಿ ವಿಷಯಸಂಬದ್ಧವಾದ ಇಂದ್ರಿಯಗಳನ್ನು ನಿಗ್ರಹಿಸಿ ಚಿತ್ತವನ್ನನುಸರಿಸುವಂತೆ ಮಾಡಬೇಕು.

೨೦. ಯೋಗಿಗಳಿಗೆ ಅಂತಹ ಇಂದ್ರಿಯ ನಿಗ್ರಹದಿಂದ ಉತ್ಕೃಷ್ಟವಾದ ನಿಶ್ಚಲಸ್ಥಿತಿಯುಂಟಾಗುತ್ತದೆ. ಯೋಗಿಯು ನಿಗ್ರಹಿಸದಿರುವ ಇಂದ್ರಿಯಗಳ ಅವಸ್ಥೆಗಳಿಂದ ಯೋಗಸಿದ್ಧಿಯನ್ನು ಹೊಂದುವುದಿಲ್ಲ.

೨೧. ಪ್ರಾಣಾಯಾಮದಿಂದ ವಶಪಡಿಸಿಕೊಂಡ ವಾಯು, ಪ್ರತ್ಯಾಹಾರದಿಂದ ಅಧೀನಮಾಡಿಕೊಂಡ ಇಂದ್ರಿಯ ಇವುಗಳಿಂದ ಕಲ್ಯಾಣನಿಧಿಯಾದ ಭಗವಂತನಲ್ಲಿ ಮನಸ್ಸನ್ನು ಸ್ಥಿರವಾಗುವಂತೆ ಮಾಡಬೇಕು.

೨೨. ಖಾಂಡಿಕ್ಯನು ಹೇಳಿದನು—ಮನಸ್ಸು ಯಾವುದನ್ನಾಶ್ರಯಿಸಿದರೆ ಸಕಲ ದೋಷಗಳನ್ನೂ ನಾಶಪಡಿಸುವುದೋ ಅಂತಹ, ಮನಸ್ಸಿನ ಶುಭಾಶ್ರಯವು ಯಾವುದು? ಧನ್ಯನೇ! ಅದನ್ನು ನನಗೆ ಹೇಳು.

೨೩. ಕೇಶಿಧ್ವಜನು ಹೇಳಿದನು—ಜ್ಞಾನಿಯೇ! ಮನಸ್ಸಿನ ಆಶ್ರಯವು ಸಹಜವಾಗಿ ಮೂರ್ತಾಮೂರ್ತವೆಂತಲೂ, ಪರ, ಅಪರವೆಂತಲೂ ಎರಡು ವಿಧವು.

ತ್ರಿವಿಧಾ ಭಾವನಾ ರೂಪಂ ವಿಶ್ವಮೇತತ್ತ್ರಿಧೋಚ್ಯತೇ ।
ಬ್ರಹ್ಮಾಖ್ಯಾ ಕರ್ಮಸಂಜ್ಞಾ ಚ ತಥಾ ಚೈವೋಭಯಾತ್ಮಿಕಾ ॥ ೨೪ ॥

ಕರ್ಮಭಾವಾತ್ಮಿಕಾ ಹ್ಯೇಕಾ ಬ್ರಹ್ಮಭಾವಾತ್ಮಿಕಾ ಪರಾ ।
ಉಭಯಾತ್ಮಿಕಾ ತಥೈವಾನ್ಯಾ ತ್ರಿವಿಧಾ ಭಾವಭಾವನಾ ॥ ೨೫ ॥

ಸನಕಾದ್ಯಾ ಸದಾ ಜ್ಞಾನಿನ್ ಬ್ರಹ್ಮಭಾವನಯಾ ಯುತಾಃ ।
ಕರ್ಮಭಾವನಯಾ ಚಾನ್ಯೇ ದೇವಾದ್ಯಾಃ ಸ್ಥಾವರಾಶ್ಚರಾಃ ॥ ೨೬ ॥

ಹಿರಣ್ಯಗರ್ಭಾದಿಷು ಚ ಬ್ರಹ್ಮಕರ್ಮಾತ್ಮಿಕಾ ದ್ವಿಧಾ ।
ಅಧಿಕಾರಬೋಧಯುಕ್ತೇಷು ವಿದ್ಯತೇ ಭಾವಭಾವನಾ ॥ ೨೭ ॥

ಅಕ್ಷೀಣೇಷು ಸಮಸ್ತೇಷು ವಿಶೇಷಜ್ಞಾನಕರ್ಮಸು ।
ವಿಶ್ವಮೇತತ್ಪರಂ ಚಾನ್ಯದ್ಭೇದಭಿನ್ನದಶಾಂ ನೃಪ ॥ ೨೮ ॥

---

೨೪. ಬ್ರಹ್ಮ, ಕರ್ಮ, ಉಭಯಾತ್ಮಕ ಎಂಬುದಾಗಿ ಭಾವನೆಯು ಮೂರು ವಿಧವು. ಇಂತಹ ಭಾವನಾಮಯವಾದ ವಿಶ್ವವೂ ಸಹ ಮೂರು ವಿಧವೆಂದು ಉಕ್ತವಾಗಿದೆ.

೨೫. ಕರ್ಮಭಾವವೆಂಬುದೊಂದು, ಬ್ರಹ್ಮಭಾವವೆಂಬುದು ಇನ್ನೊಂದು ಉಭಯಾತ್ಮಕವಾದುದು ಮತ್ತೊಂದು ಈರೀತಿ ಭಾವ ಭಾವನೆಯು ಮೂರು ವಿಧವು.

೨೬. ಜ್ಞಾನಿಯಾದ ಖಾಂಡಿಕ್ಯನೇ ! ಸನಕಾದಿಗಳು ಯಾವಾಗಲೂ ಬ್ರಹ್ಮಭಾವನೆಯುಳ್ಳವರು. ಇತರ ದೇವತೆಗಳು ಮುಂತಾದ ಸ್ಥಾವರ ಜಂಗಮ ಪ್ರಾಣಿಗಳು ಕರ್ಮಭಾವನೆಯುಳ್ಳವರು.

೨೭. ಅಧಿಕಾರ, ಜ್ಞಾನ ಇವುಗಳುಳ್ಳ ಚತುರ್ಮುಖಬ್ರಹ್ಮ ಮುಂತಾದವರಲ್ಲಿ ಬ್ರಹ್ಮಕರ್ಮಾತ್ಮಕವಾದ ದ್ವಿವಿಧ ಭಾವನೆಯಿದೆ.

೨೮. ದೊರೆಯೇ! ಸಮಸ್ತವಾದ ಜ್ಞಾನ, ಕರ್ಮ ವಿಶೇಷಗಳು ಕ್ಷೀಣವಾಗದಿರುವಾಗ ಇದು ಜಗತ್ತು, ಪರಬ್ರಹ್ಮನು ಬೇರೆ ಎಂದರೆ ಇವೆರಡಕ್ಕೂ ಸಂಬಂಧವಿಲ್ಲವೆಂಬುದಾಗಿ ತಿಳಿಯುವನು.

**ಪ್ರತ್ಯಸ್ತಮಿತಭೇದಂ ಯತ್ಸತ್ತಾಮಾತ್ರಮಗೋಚರಂ ।**
**ವಚಸಾಮಾತ್ಮಸಂಶೋಧ್ಯಂ ತದ್ಜ್ಞಾನಂ ಬ್ರಹ್ಮಸಂಜ್ಞಿತಂ ॥ ೨೯ ॥**

**ತಚ್ಚ ವಿಷ್ಣೋಃ ಪರಂ ರೂಪಮರೂಪಸ್ಯಾಜನಸ್ಯ ಚ ।**
**ವಿಶ್ವಸ್ವರೂಪವೈರೂಪ್ಯಲಕ್ಷಣಂ ಪರಮಾತ್ಮನಃ ॥ ೩೦ ॥**

**ನ ತದ್ಯೋಗಯುಜಾ ಶಕ್ಯಂ ನೃಪ ಚಿಂತಯಿತುಂ ಯತಃ ।**
**ತತಃ ಸ್ಥೂಲಂ ಹರೇ ರೂಪಂ ಚಿಂತ್ಯಂ ಯಚ್ಚಕ್ಷುಗೋಚರಂ ॥ ೩೧ ॥**

**ಹಿರಣ್ಯಗರ್ಭೋ ಭಗವಾನ್ವಾಸವೋಽಥ ಪ್ರಜಾಪತಿಃ ।**
**ಮರುತೋ ವಸವೋ ರುದ್ರಾ ಭಾಸ್ಕರಾಸ್ತಾರಕಾಗ್ರಹಾಃ ॥ ೩೨ ॥**

**ಗಂಧರ್ವಾ ಯಕ್ಷದೈತ್ಯಾಶ್ಚ ಸಕಲಾ ದೇವಯೋನಯಃ ।**
**ಮನುಷ್ಯಾಃ ಪಶವಃ ಶೈಲಾಃ ಸಮುದ್ರಾಃ ಸರಿತೋ ದ್ರುಮಾಃ ॥ ೩೩ ॥**

---

೨೯. ರೂಪಾದಿ ಭೇದವಿಲ್ಲದ, ವಾಗಾದಿಗಳಿಗೆ ಸಮಗ್ರವಾಗಿ ಗೋಚರವಾಗದಿರುವ, ಸ್ವಾಧೀನಸತ್ತೆಯುಳ್ಳ, ಆತ್ಮನನ್ನು ಶುದ್ಧಿಪಡಿಸುವ ಜ್ಞಾನವು ಬ್ರಹ್ಮಸಂಜ್ಞಕವು.

೩೦. ಪ್ರಾಕೃತರೂಪಾದಿಗಳು, ಉತ್ಪತ್ತಿ ಇವುಗಳಿಲ್ಲದ ವಿಷ್ಣುವಿನ ಪರರೂಪವೇ ಪರಮಾತ್ಮನಲ್ಲಿರುವ ಜಗತ್ಸ್ವರೂಪ ವೈಧರ್ಮ್ಯವು.

೩೧. ದೊರೆಯೇ! ಅಂತಹ ಭಗವದ್ರೂಪವು ಯೋಗದಿಂದ ಚಿಂತಿಸಲು ಶಕ್ಯವಲ್ಲ. ಆದಕಾರಣ ಚಕ್ಷುರಾದೀಂದ್ರಿಯಗಳಿಗೆ ಗೋಚರವಾಗುವ ಹರಿಯ ಸ್ಥೂಲರೂಪವನ್ನು ಧ್ಯಾನಿಸಬೇಕು.

೩೨-೩೫. ಹಿರಣ್ಯಗರ್ಭ, ಪೂಜ್ಯನಾದ ಇಂದ್ರನು, ಪ್ರಜಾಪತಿ, ವಾಯು, ವಸು, ರುದ್ರ, ಆದಿತ್ಯ, ತಾರಕಗ್ರಹಗಳು, ಗಂಧರ್ವ, ಯಕ್ಷ, ದೈತ್ಯ, ದೇವಯೋನಿಯಲ್ಲಿ ಹುಟ್ಟಿದ ಸಮಸ್ತವು, ಮನುಷ್ಯ, ಪಶು, ಪರ್ವತ, ಸಮುದ್ರ ನದೀ, ವೃಕ್ಷ, ಸಮಸ್ತಭೂತಗಳು, ಭೂತಕಾರಣಗಳಾದ ಪ್ರಕೃತ್ಯಾದಿ ವಿಶೇಷ ಪರ್ಯಂತವಾದವು, ಚೇತನ, ಅಚೇತನ ಒಂದೇ ಪಾದವುಳ್ಳದು, ದ್ವಿಪಾದ, ಬಹು

ಭೂಪ ಭೂತಾನ್ಯಶೇಷಾಣಿ ಭೂತಾನಾಂ ಯೇ ಚ ಹೇತವಃ ।
ಪ್ರದಾನಾದಿವಿಶೇಷಾಂತಾಶ್ಚೇತನಾಚೇತನಾತ್ಮಕಂ ॥ ೩೪ ॥

ಏಕಪಾದಂ ದ್ವಿಪಾದಂ ಚ ಬಹುಪಾದಮಪಾದಕಂ ।
ಮೂರ್ತಮೇತದ್ಧರೇ ರೂಪಂ ಭಾವನಾತ್ರಿತಯಾತ್ಮಕಂ ॥ ೩೫ ॥

ಏತತ್ಸರ್ವಮಿದಂ ವಿಶ್ವಂ ಜಗದೇತಚ್ಚರಾಚರಂ ।
ಪರಬ್ರಹ್ಮಸ್ವರೂಪಸ್ಯ ವಿಷ್ಣೋಃ ಶಕ್ತಿಸಮನ್ವಿತಂ ॥ ೩೬ ॥

ವಿಷ್ಣುಶಕ್ತಿಃ ಪರಾ ಪ್ರೋಕ್ತಾ ಕ್ಷೇತ್ರಜ್ಞಾಖ್ಯಾ ತಥಾಽಪರಾ ।
ಅವಿದ್ಯಾ ಕರ್ಮಸಂಜ್ಞಾಽನ್ಯಾ ತೃತೀಯಾ ಶಕ್ತಿರಿಷ್ಯತೇ ॥ ೩೭ ॥

ಯೇಯಂ ಕ್ಷೇತ್ರಜ್ಞಶಕ್ತಿಃ ಸಾ ಚೇಷ್ಟಿತಾ ನೃಪ ಕರ್ಮಜಾ ।
ಅಸಾರಭೂತೇ ಸಂಸಾರೇ ಪ್ರೋಕ್ತಾ ತತ್ರ ಮಹಾಮತೇ ॥ ೩೮ ॥

ಸಂಸಾರತಾಪಾನಖಿಲಾನವಾಪ್ನೋತ್ಯನುಸಂಜ್ಞಿತಾನ್ ।
ತಯಾ ನರೋ ಹಿತತ್ವಾತ್ತು ಶಕ್ತಿಃ ಕ್ಷೇತ್ರಜ್ಞಸಂಜ್ಞಿತಾ ॥ ೩೯ ॥

---

ಪಾದವುಳ್ಳದು, ಪಾದವೇ ಇಲ್ಲದುದು ಇವೆಲ್ಲವೂ ತ್ರಿವಿಧ ಭಾವನಾತ್ಮಕವಾದ ಹರಿಯ ಪ್ರತಿಮೆಯು.

೩೬. ಚರಾಚರಾತ್ಮಕವಾದ ಈ ಸಮಸ್ತ ಪ್ರಪಂಚವೂ ಪರಬ್ರಹ್ಮ ಸ್ವರೂಪನಾದ ವಿಷ್ಣುವಿನ ಶಕ್ತಿಯಿಂದ ಕೂಡಿದೆ.

೩೭- ಕ್ಷೇತ್ರಜ್ಞವೆಂಬ ವಿಷ್ಣುಶಕ್ತಿಯು ಪರವೆಂತಲೂ, ಅವಿದ್ಯೆಯು ಅಪರಶಕ್ತಿಯೆಂತಲೂ ಉಕ್ತವಾಗಿದೆ.

೩೮. ಮಹಾಬುದ್ಧಿವಂತನಾದ ದೊರೆಯೇ! ಅಸಾರಭೂತವಾದ ಸಂಸಾರದಲ್ಲಿ ಕ್ಷೇತ್ರಜ್ಞಶಕ್ತಿಯು ಕರ್ಮದಿಂದ ವ್ಯಕ್ತವಾಗಿ ಚೇಷ್ಟಾಯುಕ್ತವಾಗುತ್ತದೆಂದು ಹೇಳಿದೆ.

೩೯. ಆ ಶಕ್ತಿಯಿಂದ ಮನುಷ್ಯನು ಅದಕ್ಕೆ ಅನುಗುಣವಾದ ನಾಮಧೇಯವುಳ್ಳ ಸಂಸಾರತಾಪಗಳನ್ನೆಲ್ಲಾ ಹೊಂದುವನು, ಅದು ಹಿತವಾಗಿರುವುದರಿಂದ ಕ್ಷೇತ್ರಜ್ಞವೆಂಬ ನಾಮಧೇಯವನ್ನು ಹೊಂದಿದೆ.

**ಸರ್ವಭೂತೇಷು ಭೂಪಾಲ ತಾರತಮ್ಯೇನ ಲಕ್ಷ್ಯತೇ ।**
**ಅಪ್ರಾಣವತ್ಸು ಖಲ್ವಲ್ಪಾ ಸ್ಥಾವರೇಷು ತತೋಽಧಿಕಾ ॥ ೪೦ ॥**

**ಸರೀಸೃಪೇಷು ತೇಭ್ಯೋಽನ್ಯಾಽಪ್ಯತಿಶಕ್ತ್ಯಾ ಪತತ್ರಿಷು ।**
**ಪತತ್ರಿಭ್ಯೋ ಮೃಗಾಸ್ತೇಭ್ಯಃ ಸ್ವಶಕ್ತ್ಯಾ ಪಶವೋಽಧಿಕಾಃ ॥ ೪೧ ॥**

**ಪಶುಭ್ಯೋ ಮನುಜಾಶ್ಚಾತಿಶಕ್ತ್ಯಾ ಪುಂಸಃ ಪ್ರಭಾವಿತಾಃ ।**
**ತೇಭ್ಯೋಽಪಿ ನಾಗಗಂಧರ್ವಯಕ್ಷಾದ್ಯಾ ದೇವತಾ ನೃಪ ॥ ೪೨ ॥**

**ಶಕ್ರಸ್ಸಮಸ್ತದೇವೇಭ್ಯಸ್ತತಶ್ಚಾತಿಪ್ರಜಾಪತಿಃ ।**
**ಹಿರಣ್ಯಗರ್ಭೋಽಪಿ ತತಃ ಪುಂಸಃ ಶಕ್ತ್ಯುಪಲಕ್ಷಿತಃ ॥ ೪೩ ॥**

**ಏತಾನ್ಯಶೇಷರೂಪಾಣಿ ತಸ್ಯ ರೂಪಾಣಿ ಪಾರ್ಥಿವ ।**
**ಯತಸ್ತಚ್ಛಕ್ತಿಯೋಗೇನ ಯುಕ್ತಾನಿ ನಭಸಾ ಯಥಾ ॥ ೪೪ ॥**

---

೪೦. ದೊರೆಯೇ! ಆ ವಿಷ್ಣುಶಕ್ತಿಯು ಸಕಲಪ್ರಾಣಿಗಳಲ್ಲಿಯೂ ತಾರತಮ್ಯದಿಂದ ಜ್ಞಾತವಾಗುತ್ತದೆ. ಪ್ರಾಣವಿಲ್ಲದ ವಸ್ತುಗಳಲ್ಲಿ ವಿಷ್ಣುಶಕ್ತಿಯು ಅತ್ಯಲ್ಪವು. ಸ್ಥಾವರ ಪ್ರಾಣಿಗಳಲ್ಲಿ ಅದಕ್ಕಿಂತ ಹೆಚ್ಚಾಗಿದೆ.

೪೧. ಹಾವುಗಳಲ್ಲಿ ಅದಕ್ಕಿಂತಲೂ ವಿಲಕ್ಷಣಶಕ್ತಿಯೂ, ಅದಕ್ಕೂ ಹೆಚ್ಚಾಗಿ ಪಕ್ಷಿಗಳಲ್ಲಿಯೂ, ಅವುಗಳಿಗಿಂತಲೂ ಮೃಗಗಳಲ್ಲಿ, ಅದಕ್ಕಿಂತಲೂ ಪಶುಗಳಲ್ಲಿ ಶಕ್ತಿಯು ಕ್ರಮವಾಗಿ ಹೆಚ್ಚಾಗಿರುವುದು.

೪೨-೪೩. ಪಶುಗಳಿಗಿಂತ ಮನುಷ್ಯರು ಅಧಿಕ ವಿಷ್ಣುಶಕ್ತಿಯುಳ್ಳವರು. ಮನುಷ್ಯರಿಗಿಂತಲೂ ನಾಗ, ಗಂಧರ್ವ, ಯಕ್ಷಾದಿಗಳು, ದೇವತೆಗಳು, ಸಾಮಾನ್ಯ ದೇವತೆಗಳಿಗಿಂತಲೂ ಇಂದ್ರನೂ, ಅವನಿಗಿಂತ ಪ್ರಜಾಪತಿಯೂ, ಅವನಿಗಿಂತಲೂ ಹಿರಣ್ಯಗರ್ಭನೂ ಕ್ರಮವಾಗಿ ಅಧಿಕಾದಿಕ ವಿಷ್ಣುಶಕ್ತಿಯುಳ್ಳವರು.

೪೪. ದೊರೆಯೇ! ಈ ಸಮಸ್ತರೂಪಗಳೂ ಆಕಾಶದಂತೆ ವಿಷ್ಣುಶಕ್ತಿಯೋಗದಿಂದ ಕೂಡಿರುವುದರಿಂದ ವಿಷ್ಣುಪ್ರತಿಮೆಗಳೆನಿಸುವುವು.

ದ್ವಿತೀಯಂ ವಿಷ್ಣುಸಂಜ್ಞಸ್ಯ ಯೋಗಿಧ್ಯೇಯಂ ಮಹಾಮತೇ ।
ಅಮೂರ್ತಂ ಬ್ರಹ್ಮಣೋ ರೂಪಂ ಯತ್ಸದಿತ್ಯುಚ್ಯತೇ ಬುಧೈಃ ॥ ೪೫ ॥

ಸಮಸ್ತಾಶ್ಶಕ್ತಯಶ್ಚೈತಾ ನೃಪ ಯತ್ರ ಪ್ರತಿಷ್ಠಿತಾಃ ।
ನ ಹಿ ಸ್ವರೂಪರೂಪಂ ವೈ ರೂಪಮನ್ಯದ್ಧರೇರ್ಮಹತ್ ॥ ೪೬ ॥

ಸಮಸ್ತಶಕ್ತಿರೂಪಾಣಿ ತತ್ಕರೋತಿ ಜನೇಶ್ವರ ।
ದೇವತಿರ್ಯಙ್ಮನುಷ್ಯಾದಿ ಚೇಷ್ಟಾವಂತಿ ಸ್ವಲೀಲಯಾ ॥ ೪೭ ॥

ಜಗತಾಮುಪಕಾರಾಯ ತಸ್ಯ ಕರ್ಮನಿಮಿತ್ತಜಾ ।
ಚೇಷ್ಟಾ ತಸ್ಯಾಪ್ರಮೇಯಸ್ಯ ವ್ಯಾಪಿನ್ಯವಿಹಿತಾತ್ಮಿಕಾ ॥ ೪೮ ॥

ತದ್ರೂಪಂ ವಿಶ್ವರೂಪಸ್ಯ ಚಿಂತ್ಯಂ ಯೋಗಯುಜಾ ನೃಪ ।
ತಸ್ಯ ಹ್ಯಾತ್ಮವಿಶುಧ್ಯರ್ಥಂ ಸರ್ವಕಿಲ್ಬಿಷನಾಶನಂ ॥ ೪೯ ॥

---

೪೫. ಮಹಾಬುದ್ಧಿವಂತನಾದ ಖಾಂಡಿಕ್ಯನೇ! ಜ್ಞಾನಿಗಳು "ಸತ್" ಎಂದು ಹೇಳುವ ಬ್ರಹ್ಮನ ಅಮೂರ್ತರೂಪವು ವಿಷ್ಣುವಿನ ಯೋಗಿಧ್ಯೇಯವಾದ ಎರಡನೆಯ ರೂಪವು.

೪೬. ದೊರೆಯೇ! ಈ ಸಕಲ ಶಕ್ತಿಗಳೂ ಎಲ್ಲಿ ಪ್ರತಿಷ್ಠಿತವಾಗಿವೆಯೋ ಅದು ಹರಿಯ ಸ್ವರೂಪಾಂಶವಲ್ಲ. ಅವನ ಮಹತ್ತಾದ ಸ್ವರೂಪವು ಬೇರೆ ಎಂದು ತಿಳಿಯಬೇಕು.

೪೭. ದೊರೆಯೇ! ಆ ಹರಿಯ ರೂಪವು ತನ್ನ ಲೀಲೆಯಿಂದ ಸಕಲ ಶಕ್ತಿರೂಪಗಳನ್ನೂ ದೇವತೆ, ತಿರ್ಯಗ್ಜಂತು, ಮನುಷ್ಯ ಮುಂತಾದವರ ಚೇಷ್ಟೆಯುಳ್ಳುದನ್ನಾಗಿ ಮಾಡುತ್ತದೆ.

೪೮. ಲೋಕೋಪಕಾರಕ್ಕಾಗಿ ಅದರ ಕರ್ಮನಿಮಿತ್ತದಿಂದುಂಟಾದ, ಅಪ್ರಮೇಯನಾದ ಹರಿಯ ಚೇಷ್ಟೆಯು ಪರರಿಂದ ವಿಧಿಸಲ್ಪಡದೆಯೇ ಎಂದರೆ ಸ್ವತಂತ್ರವಾಗಿ ವ್ಯಾಪಕವಾಗಿದೆ.

೪೯. ದೊರೆಯೇ! ವಿಶ್ವರೂಪನಾದ ಹರಿಯ ಸಕಲ ಪಾಪನಾಶಕವಾದ ಆ ರೂಪವನ್ನು ಯೋಗಯುಕ್ತನಾದವನು ಆತ್ಮಶುದ್ಧ್ಯರ್ಥವಾಗಿ ಧ್ಯಾನ ಮಾಡಬೇಕು.

ಯಥಾಗ್ನಿರುದ್ಧತಶಿಖಃ ಕಕ್ಷಂ ದಹತಿ ಸಾನಿಲಃ ।
ತಥಾ ಚಿತ್ತಸ್ಥಿತೋ ವಿಷ್ಣುರ್ಯೋಗಿನಾಂ ಸರ್ವಕಿಲ್ಬಿಷಂ ॥ ೫೦ ॥

ತಸ್ಮಾತ್ಸಮಸ್ತಶಕ್ತೀನಾಮಾದ್ಯಂತೇ ತತ್ರ ಚೇತಸಃ ।
ಕುರ್ವೀತ ಸಂಸ್ಥಿತಿಂ ಸಾಧು ವಿಜ್ಞೇಯಾ ಶುದ್ಧಲಕ್ಷಣಾ ॥ ೫೧ ॥

ಶುಭಾಶ್ರಯಃ ಸ ಚಿತ್ತಸ್ಯ ಸರ್ವಗಸ್ಯ ತಥಾತ್ಮನಃ ।
ತ್ರಿಭಾವಭಾವನಾತೀತೋ ಮುಕ್ತಯೇ ಯೋಗಿನಾಂ ನೃಪ ॥ ೫೨ ॥

ಅನ್ಯೇ ತು ಪುರುಷವ್ಯಾಘ್ರ ಚೇತಸೋ ಯೇ ವ್ಯಪಾಶ್ರಯಾಃ ।
ಅಶುದ್ಧಾಸ್ತೇ ಸಮಸ್ತಾಸ್ತು ದೇವಾದ್ಯಾಃ ಕರ್ಮಯೋನಯಃ ॥ ೫೩ ॥

ಮೂರ್ತಂ ಭಗವತೋ ರೂಪಂ ಸರ್ವಾಪಾಶ್ರಯನಿಸ್ಪೃಹಃ ।
ಏಷಾ ವೈ ಧಾರಣಾ ಜ್ಞೇಯಾ ಯಚ್ಚಿತ್ತಂ ತತ್ರ ಧಾರ್ಯತೇ ॥ ೫೪ ॥

---

೫೦. ಮೇಲೆ ಜ್ವಲಿಸುವ ಸ್ವಭಾವವುಳ್ಳ ಅಗ್ನಿಯು ಗಾಳಿಯಿಂದ ಸಹಿತವಾದರೆ ಸುತ್ತಮುತ್ತಲಿರುವ ಪೊದೆಗಳನ್ನು ಸುಡುವಂತೆ ಚಿತ್ತದಲ್ಲಿರುವ ವಿಷ್ಣುವು ಯೋಗದಿಂದ ಯೋಗಿಗಳ ಪಾಪವೆಲ್ಲವನ್ನೂ ಸುಡುವನು.

೫೧. ಆದಕಾರಣ ಶಕ್ತಿಗಳಿಗೆಲ್ಲಾ ಆದಿಭೂತನು ಮತ್ತು ಪರಮಾವಧಿಯೂ ಆಗಿರುವ ಆ ಭಗವಂತನಲ್ಲಿ ಮನಸ್ಸನ್ನು ನೆಲೆಯಾಗಿ ನಿಲ್ಲುವಂತೆ ಮಾಡಬೇಕು. ಪರಿಶುದ್ಧವಾದ ಆ ಸಂಸ್ಥಿತಿಯನ್ನು ಸಾಧುವೆಂದು ತಿಳಿಯಬೇಕು.

೫೨. ದೊರೆಯೇ! ಚಿತ್ತಕ್ಕೆ ಮತ್ತು ಸರ್ವಗತನಾದ ಆತ್ಮನಿಗೂ ಸಹ ಶುಭಾಶ್ರಯನು, ತ್ರಿವಿಧಭಾವ ಭಾವನೆಗಳನ್ನು ಅತಿಕ್ರಮಿಸಿದವನೂ ಆದ ಆ ಹರಿಯು ಯೋಗಿಗಳಿಗೆ ಮುಕ್ತಿಯನ್ನು ಕೊಡುವನು.

೫೩. ಪುರುಷಶ್ರೇಷ್ಠನೇ! ಕರ್ಮದಿಂದ ನಾನಾ ಯೋನಿಗಳಲ್ಲಿ ಹುಟ್ಟಿದ ದೇವತೆ ಮುಂತಾದ ಇತರ ಚಿತ್ತಾಶ್ರಯರೆಲ್ಲರೂ ಅಶುದ್ಧರೆಂದು ತಿಳಿಯಬೇಕು.

೫೪. ಸಕಲ ಅಶುದ್ಧಾಶ್ರಯಗಳ ಅಪೇಕ್ಷೆಯಿಲ್ಲದಿರುವುದು ಭಗವಂತನ ಮೂರ್ತರೂಪವು. ಆ ಮೂರ್ತರೂಪದಲ್ಲಿ ಮನಸ್ಸನ್ನು ಸ್ಥಿರವಾಗುವಂತೆ ಧರಿಸುವುದೇ ಧಾರಣೆಯೆಂದು ತಿಳಿಯಬೇಕು.

**ತತ್ರ ಮೂರ್ತಂ ಹರೇ ರೂಪಂ ಯಾದೃಕ್ಚಿಂತ್ಯಂ ನರಾಧಿಪ ।**
**ತಚ್ಛ್ರೂಯತಾಮನಾಧಾರೇ ಧಾರಣಾ ನೋಪಪದ್ಯತೇ　　॥ ೫೫ ॥**

**ಪ್ರಸನ್ನಚಾರುವದನಂ ಪದ್ಮಪತ್ರಾಯತೇಕ್ಷಣಂ ।**
**ಸುಕಪೋಲಂ ಸುವಿಸ್ತೀರ್ಣಂ ಲಲಾಟಫಲಕೋಜ್ಜ್ವಲಂ　　॥ ೫೬ ॥**

**ಸಮಕರ್ಣಾಂಶವಿನ್ಯಸ್ತಚಾರುಕರ್ಣೋಪಭೂಷಣಂ ।**
**ಕಂಬುಗ್ರೀವಂ ಸುವಿಸ್ತೀರ್ಣಶ್ರೀವತ್ಸಾಂಕಿತವಕ್ಷಸಂ　　॥ ೫೭ ॥**

**ವಲಿತ್ರಿಭಂಗಿನಾ ಭಗ್ನನಾಭಿನಾ ಚೋದರೇಣ ವೈ ।**
**ಪ್ರಲಂಬಾಷ್ಟಭುಜಂ ವಿಷ್ಣುಮಥವಾಪಿ ಚತುರ್ಭುಜಂ　　॥ ೫೮ ॥**

**ಸಮಸ್ಥಿತೋರುಜಂಘಂ ಚ ಸುಸ್ಥಿರಾಂಘ್ರಿಕರಾಂಬುಜಂ ।**
**ಚಿಂತಯೇದ್ಬ್ರಹ್ಮಭೂತಂ ತಂ ಪೀತನಿರ್ಮಲವಾಸಸಂ　　॥ ೫೯ ॥**

---

೫೫. ದೊರೆಯೇ! ಆಶ್ರಯವಿಲ್ಲದೆ ಧಾರಣೆಯು ಸಂಭವಿಸುವುದಿಲ್ಲವಾದ ಕಾರಣ ಹರಿಯ ಎಂತಹ ಮೂರ್ತರೂಪವನ್ನು ಚಿಂತಿಸಬೇಕೆಂಬುದನ್ನು ಹೇಳುವೆನು ಕೇಳು.

೫೬-೫೯. ಪ್ರಸನ್ನವೂ, ಮನೋಹರವೂ ಆದ ಮುಖ, ಕಮಲಪತ್ರದಂತೆ ವಿಶಾಲವಾದ ನೇತ್ರ, ಚೆನ್ನಾಗಿರುವ ಕೆನ್ನೆ ಇವುಗಳುಳ್ಳ ವಿಶಾಲವಾದ ಹಲಗೆಯಂತಿರುವ ಹಣೆಯಿಂದ ಪ್ರಕಾಶಿಸುತ್ತಿರುವ, ಸಮವಾದ ಕಿವಿಯ ಭಾಗದಲ್ಲಿ ಧರಿಸಲ್ಪಟ್ಟ ಮನೋಹರವಾದ ಕರ್ಣಾಭರಣ (ಕುಂಡಲ ಮುಂತಾದುವು) ವುಳ್ಳ, ಶಂಖದಂತೆ ಕುತ್ತಿಗೆಯುಳ್ಳ, ಶ್ರೀವತ್ಸವನ್ನು ಧರಿಸಿದ ವಿಶಾಲವಾದ ವಕ್ಷಃಸ್ಥಲವುಳ್ಳ, ವಲಿಭಂಗಿಯಿಂದ ಬಗ್ಗಿರುವ ನಾಭಿ ಮತ್ತು ಹೊಟ್ಟೆಗಳಿಂದ ಲಂಭಿಸಿದ ಎಂಟು ಭುಜಗಳು ಅಥವಾ ನಾಲ್ಕು ಭುಜಗಳುಳ್ಳ ಸಮವಾಗಿರುವ ತೊಡೆ ಮತ್ತು ಕಣಕಾಲುಗಳುಳ್ಳ, ಪದ್ಮದಂತಿರುವ ಸ್ಥಿರವಾದ ಪಾದಹಸ್ತಗಳುಳ್ಳ, ನಿರ್ಮಲವಾದ ಹಳದಿ ಬಟ್ಟೆಗಳನ್ನು ಧರಿಸಿರುವ, ಪೂರ್ಣವಾದ ಹರಿಯ ಮೂರ್ತರೂಪವನ್ನು ಧ್ಯಾನಿಸಬೇಕು.

**ಕಿರೀಟಚಾರುಕೇಯೂರಕಟಕಾದಿವಿಭೂಷಿತಂ ।**
**ಶಾರ್ಙ್ಗಶಂಖಗದಾಖಡ್ಗಪ್ರಕಾಶವಲಯಾಂಚಿತಂ ॥ ೬೦ ॥**

**ಚಿಂತಯೇತ್ತನ್ಮಯೋ ಯೋಗೀ ಸಮಾಧಾಯಾತ್ಮಮಾನಸಂ ।**
**ತಾವದ್ಯಾವದ್ದೃಢೀಭೂತಾ ತತ್ರೈವ ನೃಪ ಧಾರಣಾ ॥ ೬೧ ॥**

**ವದತಸ್ತಿಷ್ಠತೋ ಯದ್ವಾ ಸ್ವೇಚ್ಛಯಾ ಕರ್ಮ ಕುರ್ವತಃ ।**
**ನಾಪಯಾತಿ ಯದಾ ಚಿತ್ತಾತ್ಸಿದ್ಧಾಂ ಮನ್ಯೇತ ತಾಂ ತದಾ ॥ ೬೨ ॥**

**ತತಃ ಶಂಖಗದಾಚಕ್ರಶಾರ್ಙ್ಗಾದಿರಹಿತಂ ಬುಧಃ ।**
**ಚಿಂತಯೇದ್ಭಗವದ್ರೂಪಂ ಪ್ರಶಾಂತಂ ಸಾಕ್ಷಸೂತ್ರಕಂ ॥ ೬೩ ॥**

**ಸಾ ಯದಾ ಧಾರಣಾ ತದ್ವದವಸ್ಥಾನವತೀ ತತಃ ।**
**ಕಿರೀಟಕೇಯೂರಮುಖೈಃ ಭೂಷಣೈಃ ರಹಿತಂ ಸ್ಮರೇತ್ ॥ ೬೪ ॥**

---

೬೦-೬೧. ಯೋಗಿಯು ತನ್ನ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಕಿರೀಟ ಮನೋಹರವಾದ ಬಾಹ್ವಾಭರಣ, ಹಸ್ತಾಭರಣ, ಮುಂತಾದುವುಗಳಿಂದ ಲಂಕೃತನಾದ, ಧನಸ್ಸು, ಶಂಖ, ಗದೆ, ಕತ್ತಿ ಇವುಗಳಿಂದ ಪ್ರಕಾಶಿಸುತ್ತಿರುವ ಕಡಗಗಳನ್ನು ಧರಿಸಿರುವ ಭಗವದ್ರೂಪವನ್ನು ಅದರಲ್ಲಿಯೇ ಮನಸ್ಸು ದೃಢವಾಗಿ ನಿಲ್ಲುವವರೆಗೂ ಧ್ಯಾನಿಸಬೇಕು. ಅದೇ ಧಾರಣೆಯು.

೬೨. ಮಾತನಾಡುತ್ತಿರುವಾಗ, ಸುಮ್ಮನೆ ನಿಂತಿರುವಾಗ, ಸ್ವೇಚ್ಛಾನುಸಾರವಾಗಿ ಕೆಲಸಮಾಡುತ್ತಿರುವಾಗಲೂ ಸಹ ಮನಸ್ಸು ಭಗವದ್ರೂಪವನ್ನು ಬಿಟ್ಟು ಬೇರೆ ವಿಷಯದಲ್ಲಿ ಹೋಗದಿದ್ದರೆ ಆಗ ಧಾರಣೆಯು ಸಿದ್ಧವಾಯಿತೆಂದು ತಿಳಿಯಬೇಕು.

೬೩. ತರುವಾಯ ಶಂಖ, ಗದೆ, ಚಕ್ರ, ಧನುಸ್ಸು ಇವುಗಳಿಲ್ಲದ, ಅಕ್ಷಮಾಲೆಸಹಿತವಾದ ಪ್ರಶಾಂತಭಗವದ್ರೂಪವನ್ನು ಧ್ಯಾನಿಸಬೇಕು.

೬೪. ಆ ಧಾರಣೆಯು ಹಿಂದಿನ ಧಾರಣೆಯಂತೆ ಸಿದ್ಧವಾದಮೇಲೆ ಕಿರೀಟ, ಬಾಹ್ವಾಭರಣ ಮುಂತಾದ ಆಭರಣರಹಿತವಾದ ಭಗವದ್ರೂಪವನ್ನು ಧ್ಯಾನಿಸಬೇಕು.

ತದೇಕಾವಯವಂ ಚೈವಂ ಚೇತಸಾ ಹಿ ಪುನರ್ಬುಧಃ ।
ಕುರ್ಯಾತ್ತತೋಽವಯವಿನಿ ಪ್ರಣಿಧಾನಪರೋ ಭವೇತ್ ॥ ೬೫ ॥

ತದ್ರೂಪಪ್ರತ್ಯಯೇ ಚೈಕಸಂತತಿಶ್ಚಾನ್ಯ ನಿಸ್ಪೃಹಾ ।
ತದ್ಧ್ಯಾನಂ ಪ್ರಥಮೈರಂಗೈಃ ಷಡ್ಭಿರ್ನಿಷ್ಪಾದ್ಯತೇ ನೃಪ ॥ ೬೬ ॥

ತಸ್ಯೈವ ಕಲ್ಪನಾಹೀನಂ ಸ್ವರೂಪಗ್ರಹಣಂ ಹಿ ಯತ್ ।
ಮನಸಾ ಧ್ಯಾನಂ ನಿಷ್ಪಾದ್ಯ ಸಮಾಧಿಃ ಸೋಽಭಿಧೀಯತೇ ॥ ೬೭ ॥

ವಿಜ್ಞಾನಂ ಪ್ರಾಪಕಂ ಪ್ರಾಪ್ಯೇ ಪರೇ ಬ್ರಹ್ಮಣಿ ಪಾರ್ಥಿವ ।
ಪ್ರಾಪಣೀಯಸ್ತಥೈವಾತ್ಮಾ ಪ್ರಕ್ಷೀಣಾಶೇಷಭಾವನಃ ॥ ೬೮ ॥

ಕ್ಷೇತ್ರಜ್ಞಃ ಕರಣೀ ಜ್ಞಾನಂ ಕರಣಂ ತೇನ ತಸ್ಯ ತತ್ ।
ನಿಷ್ಪಾದ್ಯ ಮುಕ್ತಿಕಾರ್ಯಂ ವೈ ಕೃತಕೃತ್ಯೋಽತಿವರ್ತತೇ ॥ ೬೯ ॥

---

೬೫. ಇದೇ ರೀತಿ ಜ್ಞಾನಿಯು ಆ ಧಾರಣೆಯು ಸಿದ್ಧಿಸಿದಮೇಲೆ ಏಕೈಕಾವಯವವನ್ನು ಧ್ಯಾನಿಸಬೇಕು. ಅದು ಸಿದ್ಧಿಸಿದ ನಂತರ ಅವಯವಿಯಾದ ಭಗವಂತನಲ್ಲಿ ಚಿತ್ತವನ್ನು ಲೀನವಾಗುವಂತೆ ಮಾಡಬೇಕು.

೬೬. ವಿಷಯಾಂತರನಿರಪೇಕ್ಷವಾಗಿ ಒಂದನ್ನೇ ವಿಷಯೀಕರಿಸುವ ಆ ಭಗವದ್ರೂಪಜ್ಞಾನಧಾರೆಯೇ ಧ್ಯಾನವು. ದೊರೆಯೇ! ಅದು ಆರು ಅಂಗಗಳಿಂದ ನಿಷ್ಪನ್ನವಾಗುತ್ತದೆ.

೬೭. ಸ್ವಾಭಾವಿಕವಾದ ಭಗವಂತನ ಸ್ವರೂಪವನ್ನು ಈ ರೀತಿಯಾಗಿ ಮನಸ್ಸಿನಿಂದ ಗ್ರಹಿಸುವುದು .ಧ್ಯಾನವೆನಿಸುತ್ತದೆ. ಅದೇ ಸಮಾಧಿಯೆನಿಸುವುದು.

೬೮. ದೊರೆಯೇ! ಪ್ರಾಪ್ಯನಾದ ಪರಬ್ರಹ್ಮನನ್ನು ಹೊಂದಲು ವಿಜ್ಞಾನವು ಸಾಧಕವು. ಸಮಸ್ತ ಭಾವನೆಗಳನ್ನೂ ಹೋಗಲಾಡಿಸಿಕೊಂಡು ಆತ್ಮನು ಬ್ರಹ್ಮನನ್ನು ಹೊಂದಲರ್ಹನು.

೬೯. ಕ್ಷೇತ್ರಜ್ಞನು ಸಾಧಕನು, ಜ್ಞಾನವು ಸಾಧನವು, ಅದರಿಂದ ಆತ್ಮನು ಮುಕ್ತಿಫಲವನ್ನು ಹೊಂದಿ ಕೃತಕೃತ್ಯನಾಗಿ ಸಂಸಾರವನ್ನು ದಾಟಬೇಕು.

ತದ್ಭಾವಭಾವನಾಪನ್ನಸ್ತತೋಽಸೌ ಪರಮಾತ್ಮನಃ ।
ಭವತ್ಯಭೇದೀ ಭೇದಶ್ಚ ತಸ್ಯಾಜ್ಞಾನಕೃತೋ ಭವೇತ್ ॥ ೭೦ ॥

ವಿಭೇದಜನಕೇಽಜ್ಞಾನೇ ನಾಶಮಾತ್ಯಂತಿಕಂ ಗತೇ ।
ಆತ್ಮನೋ ಬ್ರಹ್ಮಣಾ ಭೇದಂ ಸಂಮತಂ ಕಃ ಕರಿಷ್ಯತಿ ॥ ೭೧ ॥

ಇತ್ಯುಕ್ತಸ್ತೇ ಮಯಾ ಯೋಗಃ ಖಾಂಡಿಕ್ಯ ಪರಿಪೃಚ್ಛತಃ ।
ಸಂಕ್ಷೇಪವಿಸ್ತರಾಭ್ಯಾಂ ತು ಕಿಮನ್ಯತ್ಕ್ರಿಯತಾಂ ತವ ॥ ೭೨ ॥

ಖಾಂಡಿಕ್ಯ ಉವಾಚ

ಕಥಿತೋ ಯೋಗಸದ್ಭಾವಃ ಸರ್ವಮೇವ ಕೃತಂ ಮಮ ।
ತವೋಪದೇಶಾತ್ಸಕಲೋ ನಷ್ಟಶ್ಚಿತ್ತಮಲೋ ಮಮ ॥ ೭೩ ॥

---

೭೦. ಉಕ್ತಭಾವನೆಯನ್ನು ಹೊಂದಿದವನು ಜಗತ್ತಿನಲ್ಲಿ ಅಂತರ್ಗತನಾಗಿರುವ ಆ ಪರಮಾತ್ಮನು ಅಭಿನ್ನನೆಂದು ತಿಳಿಯುವನು. ಜಗತ್ತಿನಲ್ಲಿರುವ ಆವನ ರೂಪಗಳಿಗೆ ಭೇದವುಂಟೆಂದು ತಿಳಿಯುವುದು ಅಜ್ಞಾನಮೂಲಕವು.

೭೧. ಭೇದಜ್ಞಾಪಕವಾದ ಅಜ್ಞಾನವು ಸಂಪೂರ್ಣವಾಗಿ ನಾಶಹೊಂದಿದಮೇಲೆ ವಿಶ್ವಾಂತರ್ಗತನಾದ ಆತ್ಮನು ಬೇರೆ ಬ್ರಹ್ಮನು ಬೇರೆ ಎಂದು ಯಾವನು ತಿಳಿದಾನು?

೭೨. ಖಾಂಡಿಕ್ಯನೇ! ನೀನು ಕೇಳಿದ ಯೋಗವನ್ನು ಸಂಕ್ಷೇಪವಾಗಿಯೂ, ವಿಸ್ತಾರವಾಗಿಯೂ ನಿರೂಪಿಸಿರುವೆನು, ನಿನಗೆ ಇನ್ನೇನನ್ನು ಮಾಡಲಿ ಹೇಳು.

೭೩ ಖಾಂಡಿಕ್ಯನು ಹೇಳಿದನು—ದೊರೆಯೇ! ಯೋಗವು ಉಕ್ತವಾಯಿತು, ನನಗೆ ಬೇಕಾದುದೆಲ್ಲವನ್ನೂ ನೀನು ಮಾಡಿರುವೆ. ನಿನ್ನ ಉಪದೇಶದಿಂದ ನನ್ನ ಮನಃ ಕಾಲುಷ್ಯವೆಲ್ಲವೂ ಹೋಯಿತು.

**ಮಮೇತಿ ಯನ್ಮಯಾ ಪ್ರೋಕ್ತಮಸದೇತನ್ನ ಚಾನ್ಯಥಾ ।**
**ನರೇಂದ್ರ ಗದಿತುಂ ಶಕ್ಯಮಪಿ ವಿಜ್ಞೇಯವೇದಿಭಿಃ ॥ ೭೪ ॥**

**ಅಹಂ ಮಮೇತ್ಯವಿದ್ಯೇಯಂ ವ್ಯವಹಾರಸ್ತಥಾಽನಯೋಃ ।**
**ಪರಮಾರ್ಥಸ್ತ್ವಸಂಲಾಪ್ಯೋ ವಚಸಾಂ ಗೋಚರೋ ನ ಯಃ ॥ ೭೫ ॥**

**ತದ್ಗಚ್ಛ ಶ್ರೇಯಸೇ ಸರ್ವಂ ಮಮೈತದ್ಭವತಾ ಕೃತಂ ।**
**ಯದ್ವಿಮುಕ್ತಿಪರೋ ಯೋಗಃ ಪ್ರೋಕ್ತಃ ಕೇಶಿಧ್ವಜಾಽವ್ಯಯಃ ॥ ೭೬ ॥**

**ಸನಂದನ ಉವಾಚ**

**ಯಥಾರ್ಹಂ ಪೂಜಯಾ ತೇನ ಖಾಂಡಿಕ್ಯೇನ ಸ ಪೂಜಿತಃ ।**
**ಆಜಗಾಮ ಪುರಂ ಬ್ರಹ್ಮಂಸ್ತತಃ ಕೇಶಿಧ್ವಜೋ ನೃಪಃ ॥ ೭೭ ॥**

---

೭೪. ನರಪತಿಯೇ! ನನ್ನದು ಎಂಬುದಾಗಿ ನಾನು ಹೇಳಿದುದು ತಪ್ಪು. ಅದು ಸರಿಯಲ್ಲ, ಇದೇ ತತ್ವವು ಬೇರೆ ಪ್ರಕಾರವಿಲ್ಲವೆಂದು ಸಾಮಾನ್ಯ ತತ್ವ ಜ್ಞಾನಿಗಳಿಂದ ಹೇಳಲು ಸಾಧ್ಯವಾಗುವುದೇ ?

೭೫. "ನಾನು, ನನ್ನದು" ಎಂಬುದು ಅಜ್ಞಾನದಿಂದುಂಟಾಗುವುದು. ಇವುಗಳ ವ್ಯವಹಾರವೂ ಸಹ ಅವಿದ್ಯೆಯಿಂದಲೇ ಆಗುವುದು. ಉತ್ತಮವಾದ ತತ್ವವು ಇಂತಹುದೇ ಎಂದು ಸಮಗ್ರವಾಗಿ ವ್ಯವಹರಿಸಲು ಸಾಧ್ಯವಿಲ್ಲ ಅದು ವಾಗಾದಿಗಳಿಗೆ ಗೋಚರವಾಗುವುದಿಲ್ಲ.

೭೬. ಕೇಶಿಧ್ವಜನೇ! ನೀನು ಶಾಶ್ವತ ಮುಕ್ತಿಸಾಧಕವಾದ ಯೋಗವನ್ನು ಹೇಳಿ, ನನ್ನ ಶ್ರೇಯಸ್ಸಿಗೆ ಸಾಧಕವಾದುದೆಲ್ಲವನ್ನೂ ಮಾಡಿರುವೆಯಾದ ಕಾರಣ ಇನ್ನು ನೀನು ಹೊರಡಬಹುದು.

೭೭. ಸನಂದನನು ಹೇಳಿದನು—ಬ್ರಹ್ಮಜ್ಞಾನಿಯಾದ ನಾರದನೇ! ತರುವಾಯ ಕೇಶಿಧ್ವಜದೊರೆಯು ಆ ಖಾಂಡಿಕ್ಯನಿಂದ ಯಥಾಯೋಗ್ಯವಾಗಿ ಸತ್ಕರಿಸಲ್ಪಟ್ಟು ಹಿಂತಿರುಗಿ ತನ್ನ ಪಟ್ಟಣಕ್ಕೆ ಬಂದನು.

ಖಾಂಡಿಕ್ಯೋಽಪಿ ಸುತಂ ಕೃತ್ವಾ ರಾಜಾನಂ ಯೋಗಸಿದ್ಧಯೇ ।
ವಿಶಾಲಾಮುಗಮತ್ಕೃಷ್ಣೇ ಸಮಾವೇಶಿತಮಾನಸಃ ॥ ೭೮ ॥

ಸ ತತ್ರೈಕಾಂತಿಕೋ ಭೂತ್ವಾ ಯಮಾದಿಗುಣಸಂಯುತಃ ।
ವಿಷ್ಣ್ವಾಖ್ಯೇ ನಿರ್ಮಲೇ ರಮ್ಯೇ ಬ್ರಹ್ಮಣ್ಯಾಪ ನಿರ್ಲಯಂ ॥ ೭೯ ॥

ಕೇಶಿಧ್ವಜೋಽಪಿ ಮುಕ್ತ್ಯರ್ಥಂ ಸ ಕರ್ಮಕ್ಷಪಣೋನ್ಮುಖಃ ।
ಬುಭುಜೇ ವಿಷಯಾನ್ಕರ್ಮ ಚಕ್ರೇ ಚಾನಭಿಸಂಧಿತಂ ॥ ೮೦ ॥

ಸ ಕಲ್ಯಾಣೋಪಭೋಗೈಶ್ಚ ಕ್ಷೀಣಪಾಪೋಽಮಲಸ್ತತಃ ।
ಅವಾಪ ಸಿದ್ಧಿಮತ್ಯಂತತ್ರಿತಾಪಕ್ಷಪಣೀಂ ಮುನೇ ॥ ೮೧ ॥

---

೭೮. ಖಾಂಡಿಕ್ಯನೂ ಸಹ ಮಗನಿಗೆ ರಾಜ್ಯಭಾರವನ್ನು ವಹಿಸಿ ಕೃಷ್ಣನನ್ನು ಧ್ಯಾನಿಸುತ್ತಾ ಯೋಗಸಿದ್ಧಿಗಾಗಿ ವಿಶಾಲಕ್ಷೇತ್ರಕ್ಕೆ ಹೋದನು.

೭೯. ಅವನು ಅಲ್ಲಿ ಏಕಾಂತ ಭಕ್ತನಾಗಿ ಯಮಾದಿಗುಣಗಳಿಂದ ಕೂಡಿ, ನಿರ್ಮಲವು, ಮನೋಹರವೂ ಆದ ವಿಷ್ಣ್ವಾಖ್ಯಬ್ರಹ್ಮನಲ್ಲಿಯೇ ಚಿತ್ತವಿಟ್ಟು ಸಮಾಧಿಸ್ಥನಾದನು.

೮೦. ಕೇಶಿಧ್ವಜನೂ ಸಹ ತನ್ನ ಕರ್ಮಗಳನ್ನು ನಾಶಪಡಿಸಲುದ್ಯುಕ್ತನಾಗಿ ವಿಷಯಗಳನ್ನು ಭೋಗಿಸಿದನು, ಮುಕ್ತಿಗೋಸ್ಕರ ಫಲಾಶೆಯಿಲ್ಲದೆ ಕೇವಲ ಭಗವತ್ಪ್ರೀತ್ಯರ್ಥವಾಗಿ ಕರ್ಮವನ್ನೂ ಸಹ ಮಾಡಿದನು.

೮೧. ನಾರದಮುನಿಯೇ! ಅವನು ಮಂಗಳಕರವಾದ ಉಪಭೋಗಗಳಿಂದ ಪಾಪನಾಶಮಾಡಿಕೊಂಡು ಶುದ್ಧನಾಗಿ ತಾಪತ್ರಯವನ್ನು ಅತ್ಯಂತವಾಗಿ ನಾಶಪಡಿಸುವಂತಹ ಸಿದ್ಧಿಯನ್ನು ಪಡೆದನು.

**ಏತತ್ತೇ ಕಥಿತಂ ಸರ್ವಂ ಯನ್ಮಾಂ ತ್ವಂ ಪರಿಪೃಷ್ಟವಾನ್ ।**
**ತಾಪತ್ರಯಚಿಕಿತ್ಸಾರ್ಥಂ ಕಿಮನ್ಯತ್ಕಥಯಾಮಿ ತೇ ॥ ೮೨ ॥**

**ಇತಿ ಶ್ರೀ ನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ ದ್ವಿತೀಯಪಾದೇ ಸಪ್ತಚತ್ವಾರಿಂಶತ್ತಮೋಽಧ್ಯಾಯಃ**

---

೮೨. ನಾರದನೇ! ನೀನು ಕೇಳಿದ ತಾಪತ್ರಯಪರಿಹಾರೋಪಾಯವನ್ನೆಲ್ಲಾ ಹೇಳಿರುವೆನು. ನಿನಗೆ ಇನ್ನೇನನ್ನು ಹೇಳಲಿ ?

ಇಂತು ಶ್ರೀನಾರದೀಯಪುರಾಣ ಪೂರ್ವಭಾಗ ಬೃಹದುಪಾಖ್ಯಾನವೆಂಬ ದ್ವಿತೀಯಪಾದದಲ್ಲಿ ನಲವತ್ತೇಳನೆಯ ಅಧ್ಯಾಯವು ಮುಗಿದುದು.

## ಕಥಾಸಾರಾಂಶ

ಖಾಂಡಿಕ್ಯನು ಕೇಳಿದ ಯೋಗಸ್ವರೂಪವನ್ನು ಕೇಶಿಧ್ವಜನು ವಿವರಿಸಿರುವನು. ಬಂಧಮೋಕ್ಷಗಳಿಗೆ ಮನಸ್ಸೇ ಕಾರಣವು. ಅದು ವಿಷಯಾಸಕ್ತವಾದರೆ ಬಂಧಕ್ಕೆ ಕಾರಣವಾಗುವುದು; ಬ್ರಹ್ಮನಲ್ಲಿ ಆಸಕ್ತವಾದರೆ ಮುಕ್ತಿಪ್ರದವಾಗುವುದೆಂದು ಹೇಳಿ, ನಿಷ್ಕಾಮಕರ್ಮ, ತ್ರಿವಿಧಭಾವನೆಗಳು, ವಿಷ್ಣುವಿನ ಮೂರ್ತಾಮೂರ್ತರೂಪ, ಅದರ ಧ್ಯಾನಪ್ರಕಾರ, ಧ್ಯಾನಫಲ ಮುಂತಾದುವು ವಿಶದವಾಗಿ ನಿರೂಪಿಸಲ್ಪಟ್ಟಿವೆ.

# ಅಷ್ಟಚತ್ವಾರಿಂಶೋಽಧ್ಯಾಯಃ

**ನಾರದ ಉವಾಚ**

**ಶ್ರುತಂ ಮಯಾ ಮಹಾಭಾಗ ತಾಪತ್ರಯಚಿಕಿತ್ಸಿತಂ ।**
**ತಥಾಽಪಿ ಮೇ ಮನೋ ಭ್ರಾಂತಂ ನ ಸ್ಥಿತಿಂ ಲಭತೇಂಜಸಾ ॥ ೧ ॥**

**ಆತ್ಮವ್ಯತಿಕ್ರಮಂ ಬ್ರಹ್ಮನ್ದುರ್ಜನಾಚರಿತಂ ಕಥಂ ।**
**ಸೋಢುಂ ಶಕ್ಯೇತ ಮನುಜೈಸ್ತನ್ಮಮಾಖ್ಯಾಹಿ ಮಾನದ ॥ ೨ ॥**

**ಸೂತ ಉವಾಚ**

**ತಚ್ಛ್ರುತ್ವಾ ನಾರದೇನೋಕ್ತಂ ಬ್ರಹ್ಮಪುತ್ರಃ ಸನಂದನಃ ।**
**ಉವಾಚ ಹರ್ಷಸಂಯುಕ್ತಃ ಸ್ಮರನ್ಭರತಚೇಷ್ಟಿತಂ ॥ ೩ ॥**

---

## ನಲವತ್ತೆಂಟನೆಯ ಅಧ್ಯಾಯವು

೧. ನಾರದನು ಹೇಳಿದನು—ಧನ್ಯನಾದ ಸನಂದನನೇ! ತಾಪತ್ರಯ ಪರಿಹಾರೋಪಾಯವನ್ನು ತಿಳಿದೆನು. ಆದರೂ ಭ್ರಮಿಸುತ್ತಿರುವ ನನ್ನ ಮನಸ್ಸು ನಿಶ್ಚಲವಾಗಲಿಲ್ಲ.

೨. ಬ್ರಹ್ಮಜ್ಞಾನಿಯೂ, ಮಾನದಾತೃವೂ ಆದ ಸನಂದನನೇ! ಆತ್ಮ ಧರ್ಮಕ್ಕೆ ವಿರುದ್ಧವಾದ ದುರ್ಜನ ವ್ಯಾಪಾರವನ್ನು ಸಹಿಸಲು ಮನುಷ್ಯರಿಗೆ ಹೇಗೆ ಸಾಧ್ಯವಾದೀತು? ಆ ಪ್ರಕಾರವನ್ನು ನನಗೆ ಹೇಳು.

೩. ಸೂತನು ಹೇಳಿದನು—ಬ್ರಹ್ಮಕುಮಾರನಾದ ಸನಂದನನು ನಾರದನ ಆ ಮಾತನ್ನು ಕೇಳಿ ಭರತನ ವ್ಯಾಪಾರವನ್ನು ಜ್ಞಾಪಿಸಿಕೊಂಡವನಾಗಿ ಸಂತೋಷದಿಂದ ಮಾತನಾಡಿದನು.

## ಸನಂದನ ಉವಾಚ

ಅತ್ರ ತೇ ಕಥಯಿಷ್ಯಾಮಿ ಇತಿಹಾಸಂ ಪುರಾತನಂ ।
ಯಂ ಶ್ರುತ್ವಾ ತನ್ಮನೋ ಭ್ರಾಂತಮಾಸ್ಥಾನಂ ಲಭತೇ ಭೃಶಂ ॥ ೪ ॥

ಆಸೀತ್ಪುರಾ ಮುನಿಶ್ರೇಷ್ಠ ಭರತೋ ನಾಮ ಭೂಪತಿಃ ।
ಆರ್ಷಭೋ ಯಸ್ಯ ನಾಮ್ನೇದಂ ಭಾರತಂ ಖಂಡಮುಚ್ಯತೇ ॥ ೫ ॥

ಸ ರಾಜಾ ಪ್ರಾಪ್ತರಾಜ್ಯಸ್ತು ಪಿತೃಪೈತಾಮಹಂ ಕ್ರಮಾತ್ ।
ಪಾಲಯಾಮಾಸ ಧರ್ಮೇಣ ಪಿತೃವದ್ರಂಜಯನ್ ಪ್ರಜಾಃ ॥ ೬ ॥

ಈಜೇ ಚ ವಿವಿಧೈರ್ಯಜ್ಞೈರ್ಭಗವಂತಮಧೋಕ್ಷಜಂ ।
ಸರ್ವದೇವಾತ್ಮಕಂ ಧ್ಯಾಯನ್ನಾನಾಕರ್ಮಸು ತನ್ಮತಿಃ ॥ ೭ ॥

ತತಃ ಸಮುತ್ಪಾದ್ಯ ಸುತಾನ್ವಿರಕ್ತೋ ವಿಷಯೇಷು ಸಃ ।
ಮುಕ್ತ್ವಾ ರಾಜ್ಯಂ ಯಯೌ ವಿದ್ವಾನ್ಪುಲಸ್ತ್ಯಪುಲಹಾಶ್ರಮಂ ॥ ೮ ॥

---

೪. ಸನಂದನನು ಮಾತನಾಡಿದನು—ಈ ವಿಷಯದಲ್ಲಿ ಯಾವ ಇತಿಹಾಸವನ್ನು ಕೇಳಿದರೆ ಭ್ರಮಿಸುತ್ತಿರುವ ನಿನ್ನ ಮನಸ್ಸು ಅತ್ಯಂತ ಸ್ಥೈರ್ಯ ಹೊಂದುವುದೋ ಅಂತಹ ಪ್ರಾಚೀನೇತಿಹಾಸವೊಂದನ್ನು ನಿನಗೆ ಹೇಳವೆನು.

೫. ಮುನಿವರ್ಯನೇ! ಈ ದೇಶವು ಯಾರ ಹೆಸರಿನಿಂದ ಪ್ರಸಿದ್ಧಿಗೆ ಬಂದಿತೋ ಅಂತಹ ಭರತನೆಂಬ ರಾಜನು ಪೂರ್ವದಲ್ಲಿದ್ದನು.

೬. ಆ ದೊರೆಯು ಕ್ರಮವಾಗಿ ಪಿತೃ ಪಿತಾಮಹರಿಂದ ರಕ್ಷಿತವಾದ ರಾಜ್ಯವು ಪ್ರಾಪ್ತವಾದಮೇಲೆ ತನ್ನ ತಂದೆಯಂತೆ ಪ್ರಜೆಗಳನ್ನು ಸಂತೋಷ ಪಡಿಸುತ್ತಾ ಧರ್ಮದಿಂದ ರಾಜ್ಯವನ್ನು ಕಾಪಾಡುತ್ತಿದ್ದನು.

೭. ಬ್ರಹ್ಮಜ್ಞಾನಿಯಾದ ಭರತನು ಅನೇಕವಿಧ ಕರ್ಮಗಳಲ್ಲಿ ಸರ್ವ ದೇವಾಂತರ್ಗತನು, ಅಧೋಕ್ಷಜನಾಮಕನೂ ಆದ ಭಗವಂತನನ್ನು ಧ್ಯಾನಿಸುತ್ತಾ ನಾನಾವಿಧ ಯಜ್ಞಗಳನ್ನು ಮಾಡಿದನು.

೮-೯. ತರುವಾಯ ಜ್ಞಾನಿಯಾದ ಆ ಭರತನು ಮಕ್ಕಳನ್ನು ಪಡೆದು ವಿಷಯ ಗಳಲ್ಲಿ ವಿರಕ್ತನಾಗಿ, ರಾಜ್ಯವನ್ನು ಬಿಟ್ಟು, ಪುಲಸ್ತ್ಯಪುಲಹ ಮುನಿಗಳ ಆಶ್ರಮ

**ಶಾಲಗ್ರಾಮಂ ಮಹಾಕ್ಷೇತ್ರಂ ಮುಮುಕ್ಷುಜನಸೇವಿತಂ ।**
**ತತ್ರಾಸೌ ತಾಪಸೋ ಭೂತ್ವಾ ವಿಷ್ಣೋರಾರಾಧನಂ ಮುನೇ ॥ ೯ ॥**

**ಚಕಾರ ಭಕ್ತಿಭಾವೇನ ಯಥಾಲಬ್ಧಸಪರ್ಯಯಾ ।**
**ನಿತ್ಯಂ ಪ್ರಾತಃ ಸಮಾಪ್ಲುತ್ಯ ನಿರ್ಮಲೇಂಭಸಿ ನಾರದ ॥ ೧೦ ॥**

**ಉಪತಿಷ್ಠೇದ್ರವಿಂ ಭಕ್ತ್ಯಾ ಗೃಣನ್ ಬ್ರಹ್ಮಾಕ್ಷರಂ ಪರಂ ।**
**ಅಥಾಶ್ರಮೇ ಸಮಾಗತ್ಯ ವಾಸುದೇವಂ ಜಗತ್ಪತಿಂ ॥ ೧೧ ॥**

**ಸಮಾಹೃತೈಃ ಸ್ವಯಂ ದ್ರವ್ಯೈಃ ಸಮಿತ್ಕುಶಮೃದಾದಿಭಿಃ ।**
**ಫಲೈಃ ಪುಷ್ಪೈಸ್ತಥಾ ಪತ್ರೈಸ್ತುಲಸ್ಯಾ ಸ್ವಚ್ಛವಾರಿಭಿಃ ॥ ೧೨ ॥**

**ಪೂಜಯನ್ನ್ಪ್ರಯತೋ ಭೂತ್ವಾ ಭಕ್ತಿಪ್ರಸರಸಂಪ್ಲುತಃ ।**
**ಸ ಚೈಕದಾ ಮಹಾಭಾಗಃ ಸ್ನಾತ್ವಾ ಪ್ರಾತಃ ಸಮಾಹಿತಃ ॥ ೧೩ ॥**

---

ವಾದ, ಮುಮುಕ್ಷುಜನಗಳಿಂದ ಸೇವಿಸಲ್ಪಟ್ಟ ಸಾಲಗ್ರಾಮವೆಂಬ ಮಹಾಕ್ಷೇತ್ರಕ್ಕೆ ಹೋದನು.

೯-೧೦. ನಾರದನೇ! ಇವನು ಮುನಿಯಾಗಿ ಅಲ್ಲಿ ದೊರಕಿದ ದ್ರವ್ಯಗಳನ್ನು ಅರ್ಪಿಸುತ್ತಾ, ಭಕ್ತಿಭಾವದಿಂದ ವಿಷ್ಣುಪೂಜೆಯನ್ನು ಮಾಡಿದನು.

೧೦-೧೧. ಪ್ರತಿದಿನವೂ ಬೆಳಗ್ಗೆ ಪರಿಶುದ್ಧವಾದ ನೀರಿನಲ್ಲಿ ಅವಗಾಹನ ಸ್ನಾನಮಾಡಿ, ಪರಮಾಕ್ಷರನಾದ ಬ್ರಹ್ಮನನ್ನು ಭಕ್ತಿಯಿಂದ ಸ್ತುತಿಸುತ್ತಾ, ಸೂರ್ಯೋಪಸ್ಥಾನವನ್ನು ಮಾಡುತ್ತಿದ್ದನು.

೧೧-೧೩. ಅನಂತರ ಆಶ್ರಮಕ್ಕೆ ಬಂದು ಜಗದೊಡೆಯನಾದ ವಾಸುದೇವನನ್ನು ತಾನೇ ತಂದ ಸಮಿತ್ತು, ದರ್ಭೆ ಮುಂತಾದ ದ್ರವ್ಯಗಳು, ಫಲ, ಪುಷ್ಪ, ಪತ್ರ, ತುಲಸೀ ಮತ್ತು ನಿರ್ಮಲೋದಕ ಇವುಗಳಿಂದ ಉತ್ಕೃಷ್ಟ ಭಕ್ತಿಭರಿತನಾಗಿ ನಿಯಮದಿಂದ ಪೂಜಿಸುತ್ತಿದ್ದನು.

೧೩-೧೪. ಧನ್ಯನಾದ ಆ ಭರತನು ಒಂದಾನೊಂದುದಿನ ಪ್ರಾತಃಕಾಲ

ಚಕ್ರನದ್ಯಾಂ ಜಪಂಸ್ತಸ್ಥೌ ಮುಹೂರ್ತತ್ರಯಮಂಬುನಿ ।
ಅಥಾಜಗಾಮ ತತ್ತೀರಂ ಜಲಂ ಪಾತುಂ ಪಿಪಾಸಿತಾ ॥ ೧೪ ॥

ಆಸನ್ನಪ್ರಸವಾ ಬ್ರಹ್ಮನ್ನೇಕೈವ ಹರಿಣೀ ವನಾತ್ ।
ತತಃ ಸಮಭವತ್ತತ್ರ ಪೀತಪ್ರಾಯೇ ಜಲೇ ತಯಾ ॥ ೧೫ ॥

ಸಿಂಹಸ್ಯ ನಾದಃ ಸುಮಹಾನ್ಸರ್ವಪ್ರಾಣಿಭಯಂಕರಃ ।
ತತಃ ಸಾ ಸಿಂಹನಾದಾದುತ್ಪ್ಲುತಾ ನಿಮ್ನಗಾತಟಂ ॥ ೧೬ ॥

ಅತ್ಯುಚ್ಚಾರೋಹಣೇನಾಸ್ಯಾ ನದ್ಯಾಂ ಗರ್ಭಃ ಪಪಾತ ಹ ।
ತಮುಹ್ಯಮಾನಂ ವೇಗೇನ ವೀಚಿಮಾಲಾಪರಿಪ್ಲುತಂ ॥ ೧೭ ॥

ಜಗ್ರಾಹ ಭರತೋ ಗರ್ಭಾತ್ಪತಿತಂ ಮೃಗಪೋತಕಂ ।
ಗರ್ಭಪ್ರಚ್ಯುತಿದುಃಖೇನ ಪ್ರೋತ್ತುಂಗಾಕ್ರಮಣೇನ ಚ ॥ ೧೮ ॥

---

ದಲ್ಲಿ ಚಕ್ರನದಿಯಲ್ಲಿ ಸ್ನಾನಮಾಡಿ ಸಮಾಧಾನಚಿತ್ತನಾಗಿ ನೀರಿನಲ್ಲಿಯೇ ನಿಂತು ಮೂರು ಮುಹೂರ್ತಗಳವರೆಗೆ ಜಪ ಮಾಡುತ್ತಿದ್ದನು.

೧೪-೧೫. ಆಗ ಪೂರ್ಣ ಗರ್ಭಿಣಿಯಾಗಿ ಪ್ರಸವಕಾಲ ಸಮೀಪಿಸಿದ ಒಂದು ಜಿಂಕೆಯು ಬಾಯಾರಿಕೆಯಿಂದ ಬಳಲಿ ನೀರು ಕುಡಿಯುವುದಕ್ಕಾಗಿ ಆ ಚಕ್ರನದಿಯ ಬಳಿಗೆ ಏಕಾಕಿಯಾಗಿ ಬಂದಿತು.

೧೫-೧೬. ತರುವಾಯ ಅಲ್ಲಿ ಜಿಂಕೆಯು ನೀರನ್ನು ಕುಡಿಯುವಷ್ಟರಲ್ಲಿ ಸಕಲ ಪ್ರಾಣಿಗಳಿಗೂ ಭಯಂಕರವಾದ ದೊಡ್ಡ ಸಿಂಹನಾದವು ಕೇಳಿಸಿತು. ಕೂಡಲೇ ಆ ಜಿಂಕೆಯು ಸಿಂಹಧ್ವನಿಯಿಂದ ಭಯಪಟ್ಟು ನದಿಯದಡಕ್ಕೆ ಹಾರಿತು.

೧೭-೧೮. ಬಹಳ ಎತ್ತರಪ್ರದೇಶಕ್ಕೆ ಹಾರಿದುದರಿಂದ ಈ ಜಿಂಕೆಯ ಗರ್ಭವು ನದಿಯಲ್ಲಿ ಬಿದ್ದಿತು. ಅಲೆಗಳ ಪರಂಪರೆಯಿಂದ ತೇಲಿಕೊಂಡು ವೇಗವಾಗಿ ಬರುತ್ತಿದ್ದ ಆ ಜಿಂಕೆಯ ಮರಿಯನ್ನು ಭರತನು ತೆಗೆದುಕೊಂಡನು.

**ಮುನೀಂದ್ರ ಸಾ ತು ಹರಿಣೀ ನಿಪಪಾತ ಮಮಾರ ಚ ।**
**ಹರಿಣೀಂ ತಾಂ ವಿಲೋಕ್ಯಾಥ ವಿಪನ್ನಾಂ ನೃಪತಾಪಸಃ ॥ ೧೯ ॥**

**ಮೃಗಪೋತಂ ಸಮಾಗೃಹ್ಯ ಸ್ವಮಾಶ್ರಮಮುಪಾಗತಃ ।**
**ಚಕಾರಾನುದಿನಂ ಚಾಸೌ ಮೃಗಪೋತಸ್ಯ ವೈ ನೃಪಃ ॥ ೨೦ ॥**

**ಪೋಷಣಂ ಪುಷ್ಯಮಾಣಶ್ಚ ಸ ತೇನ ವವೃಧೇ ಮುನೇ ।**
**ಚಚಾರಾಶ್ರಮಪರ್ಯಂತಂ ತೃಣಾನಿ ಗಹನೇಷು ಸಃ ॥ ೨೧ ॥**

**ದೂರಂ ಗತ್ವಾ ಚ ಶಾರ್ದೂಲತ್ರಾಸಾದಭ್ಯಾಯಯೌ ಪುನಃ ।**
**ಪ್ರಾತರ್ಗತ್ವಾsತಿದೂರಂ ಚ ಸಾಯಮಾಯಾತ್ಯಥಾಶ್ರಮಂ ॥ ೨೨ ॥**

**ಪುನಶ್ಚ ಭರತಸ್ಯಾಭೂದಾಶ್ರಮಸ್ಯೋಟಜಾಂತರೇ ।**
**ತಸ್ಯ ತಸ್ಮಿನ್ ಮೃಗೇ ದೂರಸಮೀಪಪರಿವರ್ತಿನಿ ॥ ೨೩ ॥**

---

೧೮-೧೯. ಮುನಿವರ್ಯನೇ! ಬಹಳ ಎತ್ತರಪ್ರದೇಶಕ್ಕೆ ಹಾರುವಾಗ ಸಂಭವಿಸಿದ ಗರ್ಭಪತನ ದುಃಖದಿಂದ ಆ ಜಿಂಕೆಯು ಕೆಳಗೆ ಬಿದ್ದು ಸತ್ತಿತು.

೧೯-೨೦. ಅನಂತರ ರಾಜರ್ಷಿಯಾದ ಭರತನು ವಿಪತ್ತಿಗೀಡಾದ ಆ ಜಿಂಕೆಯನ್ನು ನೋಡಿ ಅದರ ಮರಿಯನ್ನು ತೆಗೆದುಕೊಂಡು ತನ್ನ ಆಶ್ರಮಕ್ಕೆ ಬಂದನು. ಇವನು ಪ್ರತಿದಿನವೂ ಆ ಜಿಂಕೆಯ ಮರಿಯನ್ನು ಪೋಷಿಸುತ್ತಿದ್ದನು.

೨೧. ನಾರದಮುನಿಯೇ! ಆ ಭರತನ ರಕ್ಷಣೆಯಿಂದ ಜಿಂಕೆಮರಿಯು ಕ್ರಮವಾಗಿ ಬೆಳೆಯಿತು. ಅದು ಪ್ರತಿದಿನವೂ ಕಾಡುಗಳಲ್ಲಿ ಹುಲ್ಲನ್ನು ತಿಂದು ಆಶ್ರಮಕ್ಕೆ ಬರುತ್ತಿದ್ದಿತು.

೨೨. ದೂರಹೋಗಿ ಹುಲಿಯ ಭಯದಿಂದ ಪುನಃ ಹಿಂತಿರುಗಿ ಬರುತ್ತಿದ್ದಿತು. ಬೆಳಗ್ಗೆ ಬಹಳ ದೂರ ಹೋಗಿ ಸಾಯಂಕಾಲ ಆಶ್ರಮಕ್ಕೆ ಬರುತ್ತಿದ್ದಿತು.

೨೩-೨೪. ಪುನಃ ಭರತನ ಆಶ್ರಮದ ಪರ್ಣಶಾಲೆಯಲ್ಲಿಯೇ ಇರುತ್ತಿದ್ದಿತು. ದೂರಹೋಗಿ ಬರುತ್ತಿದ್ದ ಆ ಜಿಂಕೆಯಲ್ಲಿ ಭರತನ ಮನಸ್ಸು ಅತ್ಯಂತಾ

ಆಸೀಚ್ಚೇತಃ ಸಮಾಸಕ್ತಂ ನ ತಥಾ ಹ್ಯಚ್ಯುತೇ ಮುನೇ ।
ವಿಮುಕ್ತರಾಜ್ಯತನಯಃ ಪ್ರೋಜ್ಝಿತಾಶೇಷಬಾಂಧವಃ ॥ ೨೪ ॥

ಮಮತ್ವಂ ಸ ಚಕಾರೋಚ್ಚೈಸ್ತಸ್ಮಿನ್ಹರಿಣಿಪೋತಕೇ ।
ಕಿಂ ವೃಕೈರ್ಭಕ್ಷಿತೋ ವ್ಯಾಘ್ರೈಃ ಕಿಂ ಸಿಂಹೇನ ನಿಪಾತಿತಃ ॥ ೨೫ ॥

ಚಿರಾಯಮಾಣೇ ನಿಷ್ಕ್ರಾಂತೇ ತಸ್ಯಾಸೀದಿತಿ ಮಾನಸಂ ।
ಪ್ರೀತಿಪ್ರಸನ್ನವದನೇ ಪಾರ್ಶ್ವಸ್ಥೇ ಚಾಭವನ್ಮೃಗೇ ॥ ೨೬ ॥

ಸಮಾಧಿಭಂಗಸ್ತಸ್ಯಾಸೀನ್ಮಮತ್ವಾಕೃಷ್ಟಮಾನಸಃ ।
ಕಾಲೇನ ಗಚ್ಛತಾ ಸೋಽಥ ಕಾಲಂ ಚಕ್ರೇ ಮಹೀಪತಿಃ ॥ ೨೭ ॥

ಪಿತೇವ ಲೋಕೇ ಪುತ್ರಸ್ಯ ಮೃಗಪೋತಸ್ಯ ರಕ್ಷಕಃ ।
ಮೃಗಮೇವ ತದಾಽದ್ರಾಕ್ಷೀತ್ತ್ಯಜನ್ಪ್ರಾಣಾನಸಾವಪಿ ॥ ೨೮ ॥

---

ಸಕ್ತವಾಯಿತು. ನಾರದನೇ! ಅಚ್ಯುತನಲ್ಲಿ ಅವನ ಮನಸ್ಸು ಹಾಗೆ ಆಸಕ್ತವಾಗಲಿಲ್ಲ.

೨೪-೨೫. ರಾಜ್ಯ, ಮಕ್ಕಳು, ಬಂಧುಗಳು ಇವರೆಲ್ಲರನ್ನೂ ಬಿಟ್ಟಿದ್ದ ಆ ಭರತನು ಆ ಜಿಂಕೆಯ ಮರಿಯಲ್ಲಿ ವಿಶೇಷ ಮಮತೆಯನ್ನು ತೋರಿಸುತ್ತಿದ್ದನು.

೨೫-೨೬. ಅದು ಹೋಗಿಬರುವುದು ಸಾವಕಾಶವಾದರೆ ಏನಾಯಿತೋ! ಜಿಂಕೆಯಮರಿಯನ್ನು ತೋಳವೋ, ಹುಲಿಯೋ ಅಥವಾ ಸಿಂಹವೋ ತಿಂದಿರಬಹುದು ಮುಂತಾಗಿ ಆ ಭರತನಿಗೆ ಮನಸ್ಸು ಬಹಳ ವ್ಯಾಕುಲವಾಗುತ್ತಿದ್ದಿತು.

೨೬-೨೭. ಪ್ರೀತಿಯಿಂದ ಪ್ರಸನ್ನಮುಖವುಳ್ಳ ಹತ್ತಿರವಿದ್ದ ಜಿಂಕೆಯಲ್ಲಿ ಮಮತೆಯಿಂದ ಮನಸ್ಸು ಸೆಳೆಯಲ್ಪಟ್ಟು ಆ ಭರತನಿಗೆ ಸಮಾಧಿಭಂಗವಾಗುತ್ತಿದ್ದಿತು. ಹಾಗೆ ಕಾಲಕಳೆದಮೇಲೆ ಆ ಭರತರಾಜನೂ ಮೃತನಾದನು.

೨೮. ಲೋಕದಲ್ಲಿ ತಂದೆಯು ಮಗನನ್ನು ರಕ್ಷಿಸುವಂತೆ ಇವನು ಜಿಂಕೆಯ ಮರಿಯನ್ನು ರಕ್ಷಿಸುತ್ತಿದ್ದುದರಿಂದ ಅದನ್ನೇ ನೋಡುತ್ತಾ ಪ್ರಾಣಬಿಟ್ಟನು.

ಮೃಗೋ ಬಭೂವ ಸ ಮುನೇ ತಾದೃಶೀಂ ಭಾವನಾಂ ಗತಃ ।
ಜಾತಿಸ್ಮರತ್ವಾದುದ್ವಿಗ್ನಃ ಸಂಸಾರಸ್ಯ ದ್ವಿಜೋತ್ತಮ ॥ ೨೯ ॥

ವಿಹಾಯ ಮಾತರಂ ಭೂಯಃ ಶಾಲಗ್ರಾಮಮುಪಾಯಯೌ ।
ಶುಷ್ಕೈಸ್ತೃಣೈಸ್ತಥಾ ಪರ್ಣೈಃ ಸ ಕುರ್ವನ್ನಾತ್ಮಪೋಷಣಂ ೩೦ ॥

ಮೃಗತ್ವಹೇತುಭೂತಸ್ಯ ಕರ್ಮಣೋ ನಿಷ್ಕೃತಿಂ ಯಯೌ ।
ತತ್ರ ಚೋತ್ಸೃಷ್ಟದೇಹೋಽಸೌ ಜಜ್ಞೇ ಜಾತಿಸ್ಮರೋ ದ್ವಿಜಃ ॥ ೩೧ ॥

ಸದಾಚಾರವತಾಂ ಶುದ್ಧೇ ಯೋಗಿನಾಂ ಪ್ರವರೇ ಕುಲೇ ।
ಸರ್ವವಿಜ್ಞಾನಸಂಪನ್ನಃ ಸರ್ವಶಾಸ್ತ್ರಾರ್ಥತತ್ವವಿತ್ ॥ ೩೨ ॥

ಅಪಶ್ಯತ್ಸ ಮುನಿಶ್ರೇಷ್ಠಃ ಸ್ವಾತ್ಮಾನಂ ಪ್ರಕೃತೇಃ ಪರಂ ।
ಆತ್ಮನೋಽಧಿಗತಜ್ಞಾನಾದ್ದೇವಾದೀನಿ ಮಹಾಮುನೇ ॥ ೩೩ ॥

---

೨೯-೩೦. ದ್ವಿಜಶ್ರೇಷ್ಠನಾದ ನಾರದಮುನಿಯೇ! ಮೃಗಭಾವನೆಯಿಂದಲೇ ಸತ್ತಪ್ರಯುಕ್ತ ಆ ಭರತನು ಜಿಂಕೆಯಾಗಿಯೇ ಹುಟ್ಟಿದನು. ಜನ್ಮಾಂತರ ಸ್ಮರಣೆಯುಳ್ಳವನಾದುದರಿಂದ ಅವನು ಹಿಂದಿನಂತೆ ಸಂಸಾರದಲ್ಲಿ ಜುಗುಪ್ಸೆಯುಳ್ಳವನಾಗಿ ತಾಯಿಯನ್ನು ಬಿಟ್ಟು ಪುನಃ ಸಾಲಗ್ರಾಮ ಕ್ಷೇತ್ರಕ್ಕೆ ಬಂದನು.

೩೦-೩೧. ಅವನು ಒಣಗಿದ ಹುಲ್ಲು ಮತ್ತು ಎಲೆಗಳಿಂದ ತನ್ನ ಪೋಷಣೆಯನ್ನು ಮಾಡಿಕೊಳ್ಳುತ್ತಾ, ಜಿಂಕೆಯ ಜನ್ಮ ಬರುವುದಕ್ಕೆ ಕಾರಣವಾದ ಕರ್ಮವನ್ನು ಪರಿಹರಿಸಿಕೊಂಡನು.

೩೧-೩೨. ಇವನು ಅಲ್ಲಿಯೇ ಶರೀರವನ್ನು ಬಿಟ್ಟು ಸದಾಚಾರಿಗಳಾದ ಯೋಗಿಗಳ ನಿರ್ಮಲವಾದ ಶ್ರೇಷ್ಠವಂಶದಲ್ಲಿ ಸಕಲ ವಿಜ್ಞಾನಸಂಪನ್ನನು, ಸಕಲ ಶಾಸ್ತ್ರಾರ್ಥ ತತ್ವಜ್ಞನೂ ಆದ ದ್ವಿಜೋತ್ತಮನಾಗಿ ಹುಟ್ಟಿದನು. ಆಗಲೂ ಇವನಿಗೆ ಜನ್ಮಾಂತರಸ್ಮರಣೆಯಿದ್ದಿತು.

೩೩-೩೪. ಆ ಮುನಿಶ್ರೇಷ್ಠನು ಸ್ವತಂತ್ರನಾದ ಆತ್ಮನನ್ನು ಪ್ರಕೃತಿ ವಿಲಕ್ಷಣನೆಂದು ತಿಳಿದನು. ನಾರದಮಹಾಮುನಿಯೇ! ಆತ್ಮಜ್ಞಾನವನ್ನು

**ಸರ್ವಭೂತಾನ್ಯಭೇದೇನ ದದರ್ಶ ಸ ಮಹಾಮತಿಃ ।**
**ನ ಪಪಾಠ ಗುರುಪ್ರೋಕ್ತಂ ಕೃತೋಪನಯನಃ ಶ್ರುತಂ ॥ ೩೪ ॥**

**ನ ದದರ್ಶ ಚ ಕರ್ಮಾಣಿ ಶಾಸ್ತ್ರಾಣಿ ಜಗೃಹೇ ನ ಚ ।**
**ಉಕ್ತೋಽಪಿ ಬಹುಶಃ ಕಿಂಚಿಜ್ಜಡಂ ವಾಕ್ಯಮಭಾಷತ ॥ ೩೫ ॥**

**ತದಪ್ಯಸಂಸ್ಕಾರಗುಣಂ ಗ್ರಾಮ್ಯಭಾಷೋಕ್ತಿಸಂಯುತಂ ।**
**ಅವಧೂತವಪುಃ ಸೋಽಪಿ ಮಲಿನಾಂಬರಧೃಙ್ಮನೇ ॥ ೩೬ ॥**

**ಛನ್ನದಂತಾಂತರಃ ಸರ್ವೈಃ ಪರಿಭೂತಃ ಸ ನಾಗರೈಃ ।**
**ಸಂಮಾನೇನ ಪರಾಂ ಹಾನಿಂ ಯೋಗರ್ಧೇಃ ಕುರುತೇ ಯತಃ ॥ ೩೭ ॥**

**ಜನೇನಾವಮತೋ ಯೋಗೀ ಯೋಗಸಿದ್ಧಿಂ ಚ ವಿಂದತಿ ।**
**ತಸ್ಮಾಚ್ಚರೇತ ವೈ ಯೋಗೀ ಸತಾಂ ಧರ್ಮಮದೂಷಯನ್ ॥ ೩೮ ॥**

---

ಸಂಪಾದಿಸಿದ್ದುದರಿಂದ ಮಹಾಜ್ಞಾನಿಯಾದ ಆ ದ್ವಿಜನು ದೇವತೆಗಳೇ ಮುಂತಾಗಿ ಸಕಲಪ್ರಾಣಿಗಳಲ್ಲಿಯೂ ಆತ್ಮನು ಅಭಿನ್ನನಾಗಿರುವನೆಂದು ತಿಳಿದನು. ಉಪನಯನವಾದಮೇಲೆ ಅವನು ಗುರುಗಳು ಹೇಳಿಕೊಟ್ಟುದುದನ್ನು ಕೇಳಿದನೇ ಹೊರತು ಪಾಠಮಾಡಲಿಲ್ಲ.

೩೫- ಅವನು ಕರ್ಮಗಳನ್ನು ಗಮನಿಸಲಿಲ್ಲ. ಶಾಸ್ತ್ರಗಳನ್ನು ಗ್ರಹಿಸಲಿಲ್ಲ. ಬಹುಬಾರಿ ಕೇಳಿದರೂ ಒಂದೇಸಾರಿ ಮಾತನಾಡುತ್ತಿದ್ದನು. ಅದೂ ಅಬೋಧಕವಾಗಿಯೇ ಇರುತ್ತಿತ್ತು.

೩೬-೩೭. ಅಷ್ಟೇ ಅಲ್ಲ; ಅದು ಅಸಂಸ್ಕೃತವಾಗಿ ತಪ್ಪಾಗಿಯೂ, ಕೇವಲ ಗ್ರಾಮ್ಯನುಡಿಗಳಿಂದ ಕೂಡಿದುದೂ ಆಗಿರುತ್ತಿತ್ತು. ನಾರದಮುನಿಯೇ! ಅವನು ಅವಧೂತವೇಷಧಾರಿಯು, ಕಲ್ಮಷವಸ್ತ್ರವನ್ನುಟ್ಟಿರುವವನು, ಮುಚ್ಚಲ್ಪಟ್ಟ ಹಲ್ಲುಗಳುಳ್ಳವನೂ ಆಗಿ ನಗರವಾಸಿಗಳೆಲ್ಲರಿಂದಲೂ ತಿರಸ್ಕೃತನಾದನು.

೩೭-೩೮. ಮರ್ಯಾದೆಮಾಡಿಸಿಕೊಳ್ಳುವುದರಿಂದ ಯೋಗವೃದ್ಧಿಗೆ ಮಹಾಹಾನಿಯುಂಟಾಗುವುದು. ಜನರಿಂದ ಅವಮಾನಮಾಡಿಸಿಕೊಳ್ಳಲ್ಪಟ್ಟ ಯೋಗಿಯು ಯೋಗಸಿದ್ಧಿಯನ್ನು ಪಡೆಯುವನು.

ಜನಾ ಯಥಾವಮನ್ಯೇರನ್ನಿಚ್ಛೇಯುರ್ನೈವ ಸಂಗತಿಂ ।
ಹಿರಣ್ಯಗರ್ಭವಚನಂ ವಿಚಿಂತ್ಯೇತ್ಥಂ ಮಹಾಮತಿಃ ॥ ೩೯ ॥

ಆತ್ಮಾನಂ ದರ್ಶಯಾಮಾಸ ಜಡೋನ್ಮತ್ತಾಕೃತಿಂ ಜನೇ ।
ಭುಂಕ್ತೇ ಕಲ್ಮಾಷವಟಿಕಾಃ ಶಾಕಂ ವನ್ಯಫಲಂ ಕಣಾಃ ॥ ೪೦ ॥

ಯದ್ಯದಾಪ್ನೋತಿ ಸ ಬಹೂನತ್ತಿ ವೈ ಕಾಲಸಂಭವಂ ।
ಪಿತರ್ಯುಪರತೇ ಸೋಽಥ ಭ್ರಾತೃಭ್ರಾತೃವ್ಯಬಾಂಧವೈಃ ॥ ೪೧ ॥

ಕಾರಿತಃ ಕ್ಷೇತ್ರಕರ್ಮಾದಿಕದನ್ನಾಹಾರಪೋಷಿತಃ ।
ಸ ವೃಕ್ಷಪೀತಾಪಚಯೋ ಜಡಕಾರೀ ಚ ಕರ್ಮಣಿ ॥ ೪೨ ॥

ಸರ್ವಲೋಕೋಪಕರಣಂ ಬಭೂವಾಹಾರವೇತನಃ ।
ತಂ ತಾದೃಶಮಸಂಸ್ಕಾರಂ ವಿಪ್ರಾಕೃತಿವಿಚೇಷ್ಟಿತಂ ॥ ೪೩ ॥

---

೩೮–೪೦. ಆದಕಾರಣ ಯೋಗಿಯು 'ಜನರು ತನ್ನನ್ನು ಅಪಮಾನ ಮಾಡುವ ಮತ್ತು ತನ್ನ ಸಹವಾಸವನ್ನು ಅಪೇಕ್ಷಿಸದಿರುವ ರೀತಿಯಲ್ಲಿ ನಡೆಯುತ್ತಾ ಸಜ್ಜನರ ನಡೆವಳಿಕೆಗಳನ್ನು ದೂಷಿಸದೆ ವರ್ತಿಸಬೇಕು' ಎಂಬ ಹಿರಣ್ಯಗರ್ಭನ ಮಾತನ್ನು ಪರಿಶೀಲಿಸಿ ಮಹಾಜ್ಞಾನಿಯಾದ ಆ ದ್ವಿಜನು ತನ್ನನ್ನು ಅಜ್ಞಾನಿ ಮತ್ತು ಉನ್ಮತ್ತನಂತೆ ಜನರಲ್ಲಿ ಪ್ರದರ್ಶಿಸಿದನು.

೪೦–೪೧. ಅವನು ವಿಚಿತ್ರಬಣ್ಣದ ಹಿಟ್ಟುಗಳು, ಕಾಯಿ, ಪಲ್ಯ, ಕಾಡಿನಲ್ಲಿ ಬೆಳೆದ ಹಣ್ಣು, ಕಾಳುಗಳು, ಸಮಯೋಚಿತವಾಗಿ ಯಾವ ಯಾವುದು ಸಿಕ್ಕುತ್ತದೆಯೋ ಅಂತಹವುಗಳನ್ನು ಬಹಳವಾಗಿ ತಿನ್ನುತ್ತಿದ್ದನು.

೪೧-೪೨. ತಂದೆಯು ಸತ್ತಮೇಲೆ ಅವನು ಸಹೋದರ, ಅವನ ಮಕ್ಕಳು ಮುಂತಾದ ಬಂಧುಗಳಿಂದ ಕೊಡಲ್ಪಟ್ಟ ಕದನ್ನವನ್ನು ತಿಂದು ಜೀವಿಸುತ್ತಾ ಭೂಮಿಯ ಕೆಲಸ (ಕೃಷಿ) ಮಾಡುವುದರಲ್ಲಿ ನಿಯಮಿತನಾಗಿದ್ದನು.

೪೨-೪೩. ಅವನು ಗಿಡಗಳನ್ನು ಕಸಿಮಾಡಿ ನೀರೆರೆಯುವುದೇ ಮೊದಲಾದ ನಿಯಮಿತ ಕಾರ್ಯಗಳನ್ನು ಮೆಲ್ಲಗೆ ಮಾಡುತ್ತಾ ಅದಕ್ಕೆ ಕೂಲಿಯಾಗಿ ಜನರು ಕೊಟ್ಟ ಆಹಾರವನ್ನು ತಿಂದು ಎಲ್ಲರಿಗೂ ಆಳಾಗಿದ್ದನು.

ಕ್ಷತ್ತಾ ಸೌವೀರರಾಜಸ್ಯ ವಿಷ್ಟಿಯೋಗ್ಯಮಮನ್ಯತ ।
ಸ ರಾಜಾ ಶಿಬಿಕಾರೂಢೋ ಗಂತುಂ ಕೃತಮತಿರ್ದ್ವಿಜಂ ॥ ೪೪ ॥

ಬಭೂವೇಕ್ಷುಮತೀತೀರೇ ಕಪಿಲರ್ಷೇರ್ವರಾಶ್ರಮಂ ।
ಶ್ರೇಯಃ ಕಿಮತ್ರ ಸಂಸಾರೇ ದುಃಖಪ್ರಾಯೇ ನೃಣಾಮಿತಿ ॥ ೪೫ ॥

ಪ್ರಷ್ಟುಂ ತಂ ಮೋಕ್ಷಧರ್ಮಜ್ಞಂ ಕಪಿಲಾಖ್ಯಂ ಮಹಾಮುನಿಂ ।
ಉವಾಹ ಶಿಬಿಕಾಮಸ್ಯ ಕ್ಷತ್ತುರ್ವಚನಚೋದಿತಃ ॥ ೪೬ ॥

ನೃಣಾಂ ವಿಷ್ಟಿಗೃಹೀತಾನಾಮನ್ಯೇಷಾಂ ಸೋಽಪಿ ಮಧ್ಯಗಃ ।
ಗೃಹೀತೋ ವಿಷ್ಟಿನಾ ವಿಪ್ರಃ ಸರ್ವಜ್ಞಾನೈಕಭಾಜನಂ· ॥ ೪೭ ॥

ಜಾತಿಸ್ಮರೋಽಸೌ ಪಾಪಸ್ಯ ಕ್ಷಯಕಾಮ ಉವಾಹ ತಾಂ ।
ಯಯೌ ಜಡಗತಿಸ್ತತ್ರ ಯುಗಮಾತ್ರಾವಲೋಕನಂ ॥ ೪೮ ॥

---

೪೩-೪೪. ಬ್ರಾಹ್ಮಣನಾಗಿದ್ದರೂ ವಿಪ್ರನ ಕರ್ಮಮಾಡದಿರುವ ಅಸಂಸ್ಕಾರಿಯಾದ ಆ ದ್ವಿಜನನ್ನು ಸೌವೀರರಾಜನ ಸಾರಥಿಯು ಸಂಬಳವಿಲ್ಲದೇ ವಾಹಕನಾಗಲು ಅರ್ಹನೆಂದು ತಿಳಿದನು.

೪೪-೪೬. ಆ ದೊರೆಯು ಮೋಕ್ಷಧರ್ಮಜ್ಞನಾದ ಕಪಿಲಮಹಾಮುನಿಯನ್ನು ದುಃಖಪ್ರಾಯವಾದ ಈ ಸಂಸಾರದಲ್ಲಿ ಮನುಷ್ಯರಿಗೆ ಶ್ರೇಯಸ್ಸೇನಿದೆ? ಎಂದು ಕೇಳುವುದಕ್ಕಾಗಿ ಇಕ್ಷುಮತೀ ತೀರದಲ್ಲಿರುವ ಕಪಿಲರ್ಷಿಯ ಆಶ್ರಮಕ್ಕೆ ಪಲ್ಲಕ್ಕಿಯಲ್ಲಿ ಕುಳಿತು ಹೋಗಬೇಕೆಂದು ನಿಶ್ಚಯಿಸಿದನು. ಆ ದ್ವಿಜನು ಸಾರಥಿಯ ಮಾತಿನಿಂದ ಪ್ರೇರಿತನಾಗಿ ಈ ರಾಜನ ಪಲ್ಲಕ್ಕಿಯನ್ನು ಹೊತ್ತನು.

೪೭. ಸಂಬಳವಿಲ್ಲದೆ ವಾಹಕರಾಗಲು ಹಿಡಿಯಲ್ಪಟ್ಟಿದ್ದ ಇತರ ಮನುಷ್ಯರ ಸಂಘದಲ್ಲಿ ಇವನು ಸೇರಿದನು. ಸಕಲ ಜ್ಞಾನಗಳಿಗೆ ಮುಖ್ಯಪಾತ್ರನಾದ ಬ್ರಾಹ್ಮಣನು ಬಿಟ್ಟಿಚಾಕರಿಗೆ ನಿಯಮಿತನಾದನು.

೪೮. ಜನ್ಮಾಂತರ ಸ್ಮರಣೆಯುಳ್ಳ ಪಾಪಕ್ಷಯಕಾಮನಾದ ಈ ದ್ವಿಜನು ಆ ಪಲ್ಲಕ್ಕಿಯನ್ನು ಹೊತ್ತನು. ಜ್ಞಾನಿಶ್ರೇಷ್ಠನಾದ ಆ ಬ್ರಾಹ್ಮಣನು ಪಲ್ಲಕ್ಕಿಯ ಕೊಂಬನ್ನೇ ನೋಡುತ್ತಾ ಮಂದಗಮನದಿಂದ ಹೊರಟನು.

ಕುರ್ವನ್ನತಿಮುತಾಂ ಶ್ರೇಷ್ಠಸ್ತೇತ್ವನ್ಯೇ ತ್ವರಿತಂ ಯಯುಃ ।
ವಿಲೋಕ್ಯ ನೃಪತಿಃ ಸೋಽಥ ವಿಷಮಂ ಶಿಬಿಕಾಗತಂ ॥ ೪೯ ॥

ಕಿಮೇತದಿತ್ಯಾಹ ಸಮಂ ಗಮ್ಯತಾಂ ಶಿಬಿಕಾವಹಾಃ ।
ಪುನಸ್ತಥೈವ ಶಿಬಿಕಾಂ ವಿಲೋಕ್ಯ ವಿಷಮಾಂ ಹಸರ್ ॥ ೫೦ ॥

ನೃಪಃ ಕಿಮೇತದಿತ್ಯಾಹ ಭವದ್ಭಿರ್ಗಮ್ಯತೇಽನ್ಯಥಾ ।
ಭೂಪತೇರ್ವದತಸ್ತಸ್ಯ ಶ್ರುತ್ವೇತ್ಥಂ ಬಹುಶೋ ವಚಃ ॥ ೫೧ ॥

ಶಿಬಿಕಾವಾಹಕಾಃ ಪ್ರೋಚುರಯಂ ಯಾತೀತ್ಯಸತ್ವರಂ ।

ರಾಜೋವಾಚ

ಕಿಂ ಶ್ರಾಂತೋಽಸ್ಯಲ್ಪಮಧ್ವಾನಂ ತ್ವಯೋಢಾ ಶಿಬಿಕಾ ಮಮ ॥ ೫೨ ॥

ಕಿಮಾಯಾಸಸಹೋ ನ ತ್ವಂ ಪೀವಾ ನಾಸಿ ನಿರೀಕ್ಷ್ಯಸೇ ।

ಬ್ರಾಹ್ಮಣ ಉವಾಚ

ನಾಹಂ ಪೀವಾ ನ ಚೈವೋಢಾ ಶಿಬಿಕಾ ಭವತೋ ಮಯಾ ॥ ೫೩ ॥

---

೪೯-೫೦. ಇತರ ವಾಹಕರು ವೇಗವಾಗಿ ಹೋಗುತ್ತಿದ್ದರು. ಆಗ ರಾಜನು ಪಲ್ಲಕ್ಕಿಯ ಸ್ಥಿತಿಯಲ್ಲಿ ವ್ಯತ್ಯಾಸವನ್ನು ಕಂಡು ಬೋಯಿಗಳಿರಾ! ಹೀಗೆ ಏಕೆ ವ್ಯತ್ಯಾಸವಾಗಿ ನಡೆಯುತ್ತಿರುವಿರಿ? ಸಮವಾಗಿ ಹೋಗಿರಿ ಎಂದು ಹೇಳಿದನು.

೫೦-೫೧. ಪುನಃ ಪಲ್ಲಕ್ಕಿಯು ಹಾಗೆಯೇ ವ್ಯತ್ಯಾಸವಾಗಿದ್ದುದನ್ನು ನೋಡಿ ದೊರೆಯು ನಗುತ್ತಾ ಏನಿದು? ನೀವು ವ್ಯತ್ಯಾಸವಾಗಿ ನಡೆಯುತ್ತಿರುವಿರಿ ಎಂದು ಕೇಳಿದನು.

೫೧-೫೨. ಈಪ್ರಕಾರ ಬಹುಬಾರಿ ಹೇಳಿದ ರಾಜನ ಮಾತನ್ನು ಕೇಳಿ ಪಲ್ಲಕ್ಕಿಯನ್ನು ಹೊರುತ್ತಿದ್ದವರು ಇವನು ಮೆಲ್ಲಗೆ ಬರುತ್ತಾನೆಂದು ಹೇಳಿದರು.

೫೨-೫೩. ರಾಜನು ಹೇಳಿದನು—ಅಯ್ಯಾ! ನೀನು ನನ್ನ ಪಲ್ಲಕ್ಕಿಯನ್ನು ಸ್ವಲ್ಪದೂರವೇ ಹೊತ್ತಿರುವೆ. ಅಷ್ಟರಿಂದಲೇ ನಿನಗೆ ಶ್ರಮವಾಯಿತೇನು? ನೀನು ದಪ್ಪಕ್ಕಿಲ್ಲವೇ? ಆಯಾಸವನ್ನು ಸಹಿಸಲಾರೆಯೆಂದು ಕಾಣುತ್ತದೆ.

ನ ಶ್ರಾಂತೋಽಸ್ಮಿ ನ ಚಾಯಾಸೋ ವೋಢಾಽನ್ಯೋಽಸ್ತಿ ಮಹೀಪತೇ ।

ರಾಜೋವಾಚ

ಪ್ರತ್ಯಕ್ಷಂ ದೃಶ್ಯತೇ ಪೀನಾ ತ್ವದ್ಯಾಪಿ ಶಿಬಿಕಾ ತ್ವಯಿ ॥ ೫೪ ॥

ಶ್ರಮಶ್ಚ ಭಾರೋದ್ವಹನೇ ಭವತ್ಯೇವ ಹಿ ದೇಹಿನಾಂ ।

ಬ್ರಾಹ್ಮಣ ಉವಾಚ

ಪ್ರತ್ಯಕ್ಷಂ ಭವತಾ ಭೂಪ ಯದ್ದೃಷ್ಟಂ ಮಮ ತದ್ವದ ॥ ೫೫ ॥

ಬಲವಾನಬಲಶ್ಚೇತಿ ವಾಚ್ಯಂ ಪಶ್ಚಾದ್ವಿಶೇಷಣಂ ।
ತ್ವಯೋಢಾ ಶಿಬಿಕಾ ಚೇತಿ ತ್ವಯ್ಯದ್ಯಾಪಿ ಚ ಸಂಸ್ಥಿತಾ ॥ ೫೬ ॥

ಮಿಥ್ಯಾ ತದಪ್ಯತ್ರ ಭವಾನ್ ಶೃಣೋತು ವಚನಂ ಮಮ ।
ಭೂಮೌ ಪಾದಯುಗಂ ಚಾಪಿ ಜಂಘೇ ಪಾದದ್ವಯೇ ಸ್ಥಿತೇ ॥ ೫೭ ॥

ಊರೂ ಜಂಘಾದ್ವಯಾವಸ್ಥೌ ತದಾಧಾರಂ ತತೋದರಂ ।
ವಕ್ಷಸ್ಥಲಂ ತಥಾ ಬಾಹೂ ಸ್ಕಂಧೌ ಚೋದರಸಂಸ್ಥಿತೌ ॥ ೫೮ ॥

---

೫೩–೫೪. ಬ್ರಾಹ್ಮಣನು ಹೇಳಿದನು—ದೊರೆಯೇ! ನಾನು ಸ್ಥೂಲ ಕಾಯನಲ್ಲ, ನಿನ್ನ ಪಲ್ಲಕ್ಕಿಯನ್ನು ಹೊತ್ತವನೂ ಅಲ್ಲ. ನನಗೆ ಆಯಾಸವೂ ಇಲ್ಲ. ಶ್ರಮವೂ ಇಲ್ಲ. ಪಲ್ಲಕ್ಕಿಯನ್ನು ಹೊತ್ತಿರುವವನು ಬೇರೆ ಇದ್ದಾನೆ.

೫೪–೫೫. ರಾಜನು ಹೇಳಿದನು—ನೀನು ಸ್ಥೂಲನಾಗಿರುವುದು, ಪಲ್ಲಕ್ಕಿಯನ್ನು ಹೊತ್ತಿರುವುದೂ ಸಹ ಪ್ರತಕ್ಷವಾಗಿ ಕಾಣುತ್ತಿದೆ. ಭಾರ ಹೊತ್ತರೆ ಪ್ರಾಣಿಗಳಿಗೆ ಶ್ರಮವಾಗುವುದು ಸಹಜ.

೫೫-೫೭. ಬ್ರಾಹ್ಮಣನು ಹೇಳಿದನು—ದೊರೆಯೇ! ನೀನು ಪ್ರತ್ಯಕ್ಷ ವಾಗಿ ಕಂಡುದನ್ನು ನನಗೆ ಹೇಳು. ಬಲವುಳ್ಳವನು, ಬಲಹೀನನು ಎಂಬುದಾಗಿ ವಿಶೇಷಣವನ್ನು ಅನಂತರ ಹೇಳಬಹುದು. ನಿನ್ನಿಂದ ಪಲ್ಲಕ್ಕಿಯು ಹೊರಲ್ಪಟ್ಟಿದೆ ಅದು ಈಗಲೂ ನಿನ್ನಮೇಲಿದೆ ಎಂಬುದು ಸುಳ್ಳು. ಈ ವಿಷಯದಲ್ಲಿ ನೀನು ನನ್ನ ಮಾತನ್ನು ಕೇಳು.

೫೭–೬೯. ಭೂಮಿಯ ಮೇಲೆ ಎರಡು ಪಾದಗಳಿವೆ, ಅವುಗಳಮೇಲೆ ಜಂಘೆ ಗಳಿವೆ, ಜಂಘಾದ್ವಯದ ಮೇಲೆ ಎರಡು ಮೊಣಕಾಲುಗಳಿವೆ, ಅದರ ಮೇಲೆ

ಸ್ಕಂಧಾಶ್ರಿತೇಯಂ ಶಿಬಿಕಾ ಮಮಾಧಾರೋಽತ್ರ ಕಿಂ ಕೃತಃ ।
ಶಿಬಿಕಾಯಾಂ ಸ್ಥಿತಂ ಚೇದಂ ದೇಹಂ ತ್ವದುಪಲಕ್ಷಿತಂ ॥ ೫೯ ॥

ತತ್ರ ತ್ವಮಹಮಪ್ಯತ್ರೇತ್ಯುಚ್ಯತೇ ಚೇದಮನ್ಯಥಾ ।
ಅಹಂ ತ್ವಂ ಚ ತಥಾನ್ಯೇ ಚ ಭೂತೈರೂಹ್ಯಾಶ್ಚ ಪಾರ್ಥಿವ ॥ ೬೦ ॥

ಗುಣಪ್ರವಾಹಪತಿತೋ ಭೂತವರ್ಗೋಽಪಿ ಯಾತ್ಯಯಂ ।
ಕರ್ಮವಶ್ಯಾ ಗುಣಾಶ್ಚೈತೇ ಸತ್ವಾದ್ಯಾಃ ಪೃಥಿವೀಪತೇ ॥ ೬೧ ॥

ಅವಿದ್ಯಾಸಂಚಿತಂ ಕರ್ಮ ತಚ್ಚಾಶೇಷೇಷು ಜಂತುಷು ।
ಆತ್ಮಶುದ್ಧೋಽಕ್ಷರಃ ಶಾಂತೋ ನಿರ್ಗುಣಃ ಪ್ರಕೃತೇಃ ಪರಃ ॥ ೬೨ ॥

ಪ್ರವೃದ್ಧಿಃ ಪಂಚತಾ ನಾಸ್ತಿ ಏಕಸ್ಯಾಖಿಲಜಂತುಷು ।
ಯದಾ ನೋಪಚಯಸ್ತಸ್ಯ ನ ಚೈವಾಪಚಯೋ ನೃಪ ॥ ೬೩ ॥

---

ಹೊಟ್ಟೆ, ಅದರ ಮೇಲೆ ಎದೆ, ಬಾಹುಗಳು, ಅವನ್ನಾಶ್ರಯಿಸಿಕೊಂಡು ಪಲ್ಲಕ್ಕಿಯೂ ಇದೆ. ಹೀಗಿರುವಾಗ ನಾನೇ ಆಧಾರನೆಂಬುವುದು ಹೇಗೆ? ನೀನು ಎಂದು ಹೇಳಿಸಿಕೊಳ್ಳಲ್ಪಡುವ ಈ ಶರೀರವು ಪಲ್ಲಕ್ಕಿಯಲ್ಲಿದೆ.

೬೦. ಅಲ್ಲಿ ನೀನು, ಇಲ್ಲಿ ನಾನು ಇರುವೆವೆಂಬುದು ವ್ಯತ್ಯಾಸದ ಹೇಳಿಕೆಯು. ದೊರೆಯೇ! ನಾನು, ನೀನು ಮತ್ತು ಇತರರೂ ಸಹ ಇರುವರೆಂಬುದನ್ನು ಈ ಭೌತಿಕ ಶರೀರಗಳ ಚೇಷ್ಟೆಯಿಂದಲೇ ಊಹಿಸಿ ತಿಳಿಯಬೇಕು.

೬೧. ಗುಣಪ್ರವಾಹದ ಮಧ್ಯದಲ್ಲಿರುವ ಈ ಭೂತವರ್ಗವೂ ಸಹ ಹೋಗುತ್ತದೆ. ಸತ್ವ ಮುಂತಾದ ಈ ಗುಣಗಳು ಕರ್ಮಾಧೀನಗಳು.

೬೨. ಕರ್ಮವು ಅವಿದ್ಯೆಯಿಂದ ಸಂಪಾದಿಸಲ್ಪಟ್ಟುದು. ಅದು ಸಮಸ್ತ ಪ್ರಾಣಿಗಳಲ್ಲಿಯೂ ಇದೆ. ಪರಮಾತ್ಮನಾದರೋ ನಿರ್ದೋಷನು, ನಾಶರಹಿತನು, ಶಾಂತನು, ಪ್ರಾಕೃತಗುಣರಹಿತನು, ಪ್ರಕೃತಿಗಿಂತಲೂ ಉತ್ತಮನೂ ಆದುದರಿಂದ ಅದಕ್ಕೆ ಬದ್ಧನಲ್ಲ.

೬೩. ದೊರೆಯೇ! ಸಮಸ್ತ ಪ್ರಾಣಿಗಳಲ್ಲಿಯೂ ಅಂತರ್ಗತನಾಗಿರುವ ಆತ್ಮನೊಬ್ಬನಿಗೆ ವೃದ್ಧಿ ಮರಣಗಳಿಲ್ಲ ಅವನಿಗೆ ವೃದ್ಧಿಯೇ ಇಲ್ಲದಮೇಲೆ ಹ್ರಾಸವೆಲ್ಲಿಂದ ಬಂದೀತು?

ತಥಾಪಿ ಬಾಲಿಶೋಽಸಿ ತ್ವಂ ಕಯಾ ಯುಕ್ತ್ಯಾ ತ್ವಯೇರಿತಂ ।
ಭೂಪಾದಜಂಘಾಕಟ್ಯೂರುಜಠರಾದಿಷು ಸಂಸ್ಥಿತಾ ॥ ೬೪ ॥

ಶಿಬಿಕೇಯಂ ಯದಾ ಸ್ಕಂಧೇ ತದಾ ಭಾರಃ ಸಮೋ ಮಯಾ ।
ತಥಾನ್ಯಜಂತುಭಿರ್ಭೂಪ ಶಿಬಿಕೋಢಾ ನ ಕೇವಲಂ ॥ ೬೫ ॥

ಶೈಲದ್ರುಮಗೃಹೋತ್ಥೋಽಪಿ ಪೃಥಿವೀಸಂಭವೋಽಪಿ ಚ ।
ಯಥಾ ಪುಂಸಃ ಪೃಥಗ್ಭಾವಃ ಪ್ರಾಕೃತೈಃ ಕರಣೈರ್ನೃಪ ॥ ೬೬ ॥

ಸೋಢವ್ಯಃ ಸುಮಹಾನ್ಭಾರಃ ಕತಮೋ ನೃಪತೇ ಮಯಾ ।
ಯದ್ದ್ರವ್ಯಾ ಶಿಬಿಕಾ ಚೇಯಂ ತದ್ದ್ರವ್ಯೋ ಭೂತಸಂಗ್ರಹಃ ॥ ೬೭ ॥

ಭವತೋ ಮೇಽಖಿಲಸ್ಯಾಸ್ಯ ಸಮತ್ವೇನೋಪಬೃಂಹಿತಃ ।

ಸನಂದನ ಉವಾಚ

ಏವಮುಕ್ತ್ವಾಽಭವನ್ಮೌನೀ ಸ ವಹನ್ ಶಿಬಿಕಾಂ ದ್ವಿಜಃ ॥ ೬೮ ॥

---

೬೪-೬೫. ಹೀಗಿರುವುದರಿಂದ ನೀನು ಕೇವಲ ಹುಡುಗನಾಗಿರುವೆ. ಯಾವ ಯುಕ್ತಿಯಿಂದ ನೀನು ಪಲ್ಲಕ್ಕಿಯನ್ನು ಹೊತ್ತಿರುವೆಯೆಂದು ಹೇಳುವೆ? ಭೂಮಿ, ಪಾದ, ಜಂಘೆ, ಮೊಣಕಾಲು, ನಡುವು, ಜಠರ ಮುಂತಾದುವುಗಳ ಮೇಲಿರುವ ಈ ಪಲ್ಲಕ್ಕಿಯನ್ನು ನಾನು ಮಾತ್ರವೇ ಅಲ್ಲ, ಇತರ ಜಂತುಗಳೂ ಸಹ ಹೊರುತ್ತಿಲ್ಲ.

೬೬-೬೭. ಪ್ರಕೃತಿನಿರ್ಮಿತ ಸಾಧನಗಳಿಂದ ಪುರುಷನು ಬೇರೆಯಾಗಿರುವನು. ಬೆಟ್ಟ, ಗಿಡ, ಮನೆ ಮತ್ತು ಪೃಥಿವಿ ಇವುಗಳು ಪ್ರಾಕೃತಗಳು. ಇವುಗಳ ಭಾರವನ್ನು ಪ್ರಾಕೃತವಸ್ತುವೇ ಹೊರಬೇಕು. ಹೀಗಿರುವಾಗ ಪ್ರಾಕೃತವಾದ ಪಲ್ಲಕ್ಕಿಯ ಮಹಾಭಾರವನ್ನು ನಾನು ಸಹಿಸುವುದೆಂದರೇನು ?

೬೭-೬೮. ಈ ಪಲ್ಲಕ್ಕಿಯು ಯಾವುದರಿಂದ ನಿರ್ಮಿತವಾಗಿದೆಯೋ ಅದೇ ದ್ರವ್ಯವೇ ನಿನಗೂ, ನನಗೂ, ಈ ಸಮಸ್ತಕ್ಕೂ ಸಮಾನವಾಗಿ ಉಪಬೃಂಹಿತವಾಗಿರುವ ಭೂತಸಮುದಾಯಾತ್ಮಕವಾದ ದೇಹವು.

ಸೋಽಪಿ ರಾಜಾವತೀರ್ಯ್ಯೋರ್ವ್ಯಾಂ ತತ್ಪಾದೌ ಜಗೃಹೇ ತ್ವರನ್ ।

ರಾಜೋವಾಚ

ಭೋ ಭೋ ವಿಸೃಜ್ಯ ಶಿಬಿಕಾಂ ಪ್ರಸಾದಂ ಕುರು ಮೇ ದ್ವಿಜ ॥ ೬೯ ॥

ಕಥ್ಯತಾಂ ಕೋ ಭವಾನತ್ರ ಜಾಲ್ಮರೂಪಧರಃ ಸ್ಥಿತಃ ।
ಯೋ ಭವಾನ್ಯದಪತ್ಯಂ ವಾ ಯದಾಗಮನಕಾರಣಂ ॥ ೭೦ ॥

ತತ್ಸರ್ವಂ ಕಥ್ಯತಾಂ ವಿದ್ವನ್ಮಹ್ಯಂ ಶುಶ್ರೂಷವೇ ತ್ವಯಾ ।

ಬ್ರಾಹ್ಮಣ ಉವಾಚ

ಶ್ರೂಯತಾಂ ಕೋಽಹಮಿತ್ಯೇತದ್ವಕ್ತುಂ ಭೂಪ ನ ಶಕ್ಯತೇ ॥ ೭೧ ॥

ಉಪಭೋಗನಿಮಿತ್ತಂ ಚ ಸರ್ವತ್ರಾಗಮನಕ್ರಿಯಾ ।
ಸುಖದುಃಖೋಪಭೋಗೌ ತು ತೌ ದೇಹಾದ್ಯುಪಪಾದಕೌ ॥ ೭೨ ॥

---

೬೮-೬೯. ಸನಂದನನು ಹೇಳಿದನು—ಈರೀತಿಯಾಗಿ ಹೇಳಿ ಪಲ್ಲಕ್ಕಿಯನ್ನು ಹೊತ್ತಿದ್ದ ಆ ದ್ವಿಜನು ಸುಮ್ಮನಾದನು. ಆ ರಾಜನೂ ಸಹ ಕೂಡಲೇ ಕೆಳಗಿಳಿದು ಆ ಬ್ರಾಹ್ಮಣನ ಪಾದಗಳನ್ನು ಹಿಡಿದುಕೊಂಡನು.

೬೯-೭೧. ರಾಜನು ಹೇಳಿದನು—ಓ ದ್ವಿಜನೇ! ಪಲ್ಲಕ್ಕಿಯನ್ನು ಬಿಟ್ಟು ನನಗೆ ಅನುಗ್ರಹಮಾಡು. ಇಲ್ಲಿ ನೀಚವೇಷವನ್ನು ಧರಿಸಿಕೊಂಡಿರುವ ನೀನು ಯಾರು? ಅದನ್ನು ನನಗೆ ಹೇಳು. ಜ್ಞಾನಿಯೇ! ನೀನು ಯಾರು? ಯಾರ ಮಗನು? ಈ ವೇಷವನ್ನು ತಾಳಿ ಇಲ್ಲಿಗೆ ಬರಲು ಕಾರಣವೇನು? ಅವುಗಳೆಲ್ಲವನ್ನೂ ನಿನ್ನನ್ನು ಸೇವಿಸುತ್ತಿರುವ ನನಗೆ ಹೇಳಬೇಕು.

೭೧-೭೨. ಬ್ರಾಹ್ಮಣನು ಹೇಳಿದನು—ದೊರೆಯೇ! ಕೇಳು, ನಾನು ಯಾರೆಂಬುದನ್ನು ಹೇಳಲು ಸಾಧ್ಯವಿಲ್ಲ. ಕರ್ಮಫಲವನ್ನು ಭೋಗಿಸುವುದಕ್ಕಾಗಿಯೇ ಸರ್ವರೂ ಜನ್ಮವನ್ನೆತ್ತುವರು. ಅಲ್ಲಿನ ಸುಖದುಃಖೋಪಭೋಗಗಳೇ ದೇಹಾದಿಗಳಿಗೆ ಕಾರಣವು.

ಧರ್ಮಾಧರ್ಮೋದ್ಭವೌ ಭೋಕ್ತುಂ ಜಂತುರ್ದೇಹಾದಿಮೃಚ್ಛತಿ ।
ಸರ್ವಸ್ಯೈವ ಹಿ ಭೂಪಾಲ ಜಂತೋಃ ಸರ್ವತ್ರ ಕಾರಣಂ ॥ ೭೩ ॥

ಧರ್ಮಾಧರ್ಮೌ ಯತಸ್ತಸ್ಮಾತ್ಕಾರಣಂ ಪೃಚ್ಛ್ಯತೇ ಕುತಃ ।
ರಾಜೋವಾಚ
ಧರ್ಮಾಧರ್ಮೌ ನ ಸಂದೇಹಃ ಸರ್ವಕಾರ್ಯೇಷು ಕಾರಣಂ ॥ ೭೪ ॥

ಉಪಭೋಗನಿಮಿತ್ತಂ ಚ ದೇಹಾದ್ದೇಹಾಂತರಾಗಮಃ ।
ಯತ್ತ್ವೇತದ್ಭವತಾ ಪ್ರೋಕ್ತಂ ಕೋಽಹಮಿತ್ಯೇತದಾತ್ಮನಃ ॥ ೭೫ ॥

ವಕ್ತುಂ ನ ಶಕ್ಯತೇ ಶ್ರೋತುಂ ತನ್ಮಮೇಚ್ಛಾ ಪ್ರವರ್ತತೇ ।
ಯೋಽಸ್ತಿ ಯೋಽಹಮಿತಿ ಬ್ರಹ್ಮನ್ ಕಥಂ ವಕ್ತುಂ ನ ಶಕ್ಯತೇ ॥ ೭೬ ॥

ಆತ್ಮನ್ಯೇವ ನ ದೋಷಾಯ ಶಬ್ದೋಽಹಮಿತಿ ಯೋ ದ್ವಿಜ ।
ಬ್ರಾಹ್ಮಣ ಉವಾಚ
ಶಬ್ದೋಹಮಿತಿ ದೋಷಾಯ ನಾತ್ಮನ್ಯೇವಂ ತಥೈವ ತತ್ ॥ ೭೭ ॥

---

೭೩-೭೪. ಪ್ರಾಣಿಯು ಧರ್ಮ ಅಧರ್ಮಗಳಿಂದುಂಟಾಗುವ ಸುಖದುಃಖಗಳನ್ನನುಭವಿಸಲು ಶರೀರಾದಿಗಳನ್ನು ಹೊಂದುವನು. ದೊರೆಯೇ ! ಸಕಲ ಪ್ರಾಣಿಗಳಿಗೂ ಎಲ್ಲಿ ಜನ್ಮವನ್ನೆತ್ತಿ ಏನುಮಾಡಬೇಕಾದರೂ ಧರ್ಮಾಧರ್ಮಗಳೇ ಕಾರಣವು. ಆದುದರಿಂದ ಕಾರಣವನ್ನು ಏಕೆ ಕೇಳುವೆ ?

೭೪-೭೫. ರಾಜನು ಹೇಳಿದನು—ಧರ್ಮಾಧರ್ಮಗಳು ಸಕಲಕಾರಣವೆಂಬುದರಲ್ಲಿ ಸಂಶಯವಿಲ್ಲ. ಸುಖದುಃಖಾದಿಗಳ ಉಪಭೋಗಕ್ಕೋಸ್ಕರವೇ ಆತ್ಮನು ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನು ಪಡೆಯುವನು.

೭೫-೭೭. ನಾನು ಯಾರೆಂಬುದನ್ನು ಹೇಳಲು ಸಾಧ್ಯವಿಲ್ಲವೆಂದು ನೀನು ಹೇಳಿದ ವಿಷಯವನ್ನೇ ಕೇಳಬೇಕೆಂದು ನನಗೆ ಅಪೇಕ್ಷೆಯುಂಟಾಗಿದೆ. ವಿಪ್ರನೇ ! "ಅಹಂ" (ನಾನು) ಎಂಬ ಶಬ್ದವಾಚ್ಯನು ಯಾವನೋ ಇದ್ದಾನೆ, ಅವನನ್ನು ಹೇಳಲು ಸಾಧ್ಯವಿಲ್ಲವೆಂಬುದು ಹೇಗೆ ? "ಅಹಂ" ಎಂಬ ಶಬ್ದವು ಆತ್ಮನನ್ನು ಬೋಧಿಸುತ್ತದೆಂದು ಹೇಳುವುದರಲ್ಲಿ ದೋಷವಿಲ್ಲ.

೭೭-೭೮. ಬ್ರಾಹ್ಮಣನು ಹೇಳಿದನು—"ಅಹಂ" ಎಂಬ ಶಬ್ದವೇ ಆತ್ಮನಲ್ಲಿ ದೋಷವಲ್ಲ. ಆದರೆ ಒಂದು ಅರ್ಥವನ್ನು ಬೋಧಿಸಿ ವಿಶ್ರಾಂತವಾಗುವುದೇ

ಅನಾತ್ಮನ್ಯಾತ್ಮವಿಜ್ಞಾನಂ ಶಬ್ದೋ ವಿಶ್ರಾಂತಿಲಕ್ಷಣಃ ।
ಜಿಹ್ವಾ ಬ್ರವೀತ್ಯಹಮಿತಿ ದಂತೌಷ್ಠತಾಲುಕಂ ನೃಪ ॥ ೭೮ ॥

ಏತೇ ನಾಹಂ ಯತಃ ಸರ್ವೇ ವಾಙ್ನಿಷ್ಪಾದನಹೇತವಃ ।
ಕಿಂ ಹೇತುಭಿರ್ವದತ್ಯೇಷಾ ವಾಗೇವಾಹಮಿತಿ ಸ್ವಯಂ ॥ ೭೯ ॥

ತಥಾಪಿ ವಾಗಹಮೇತದ್ವಕ್ತುಮಿತ್ಥಂ ನ ಯುಜ್ಯತೇ ।
ಪಿಂಡಃ ಪೃಥಗ್ಯತಃ ಪುಂಸಃ ಶಿರಃ ಪಾಣ್ಯಾದಿಲಕ್ಷಣಃ ॥ ೮೦ ॥

ತತೋಽಹಮಿತಿ ಕುತ್ರೈನಾಂ ಸಂಜ್ಞಾಂ ಕರೋಮ್ಯಹಂ ।
ಯದ್ಯನ್ಯೋಽಸ್ತಿ ಪರಃ ಕೋಽಪಿ ಮತ್ತಃ ಪಾರ್ಥಿವಸತ್ತಮ ॥ ೮೧ ॥

ತದಾ ವಾಹೋಯಮನ್ಯೇ ಚ ವಕ್ತುಮೇವಮಪೀಷ್ಯತೇ ।
ಯದಾ ಸಮಸ್ತದೇಹೇಷು ಪುಮಾನೇಕೋ ವ್ಯವಸ್ಥಿತಃ ॥ ೮೨ ॥

---

ಶಬ್ದದ ಸ್ವಭಾವವು. ಈ ಶಬ್ದವು ಅನಾತ್ಮನನ್ನು ಆತ್ಮನೆಂದು ಬೋಧಿಸುತ್ತದೆ. ಆದುದರಿಂದ ಇದು ದೋಷವೇ ಸರಿ. ದೊರೆಯೆ! ನಾಲಿಗೆ, ಹಲ್ಲು, ತುಟಿ, ದವಡೆ ಇವುಗಳು "ಅಹಂ" ಎಂದು ಉಚ್ಚರಿಸುತ್ತವೆ.

೭೯. ಶಬ್ದನಿಷ್ಪತ್ತಿಗೆ ಕಾರಣವಾದ ಇವುಗಳೆಲ್ಲವೂ ಅಹಂ ಪದಾರ್ಥವಲ್ಲ. ವಾಕ್ಕು ತಾನು "ಅಹಂ" ಎಂದು ಹೇಳುವುದಕ್ಕೆ ಕಾರಣವೇನು?

೮೦-೮೧. ಆದರೂ ವಾಕ್ಕು "ಅಹಂ" ಎಂಬ ಶಬ್ದವನ್ನು ಈರೀತಿಯಾಗಿ ಹೇಳುವುದು ಸರಿಯಲ್ಲ. ತಲೆ, ಕೈ ಮುಂತಾದ ಅವಯವಸಮೂಹರೂಪಶರೀರವು ಆತ್ಮನಿಗಿಂತ ಭಿನ್ನವಾಗಿರುವುದರಿಂದ ದೊರೆಯೇ! "ಅಹಂ" ಎಂಬೀ ಸಂಜ್ಞೆಯನ್ನು ಎಲ್ಲಿ ಮಾಡಲಿ?

೮೧-೮೪. ರಾಜೋತ್ತಮನೇ! "ಅಹಂ" ಶಬ್ದವಾಚ್ಯನಾದವನಿಗಿಂತ ಭಿನ್ನನಾಗಿ ಉತ್ತಮನಾದವನು ಯಾವನಾದರೂ ಇದ್ದರೆ ಇವನು ವಾಹಕ, ಇವರು ಇತರರು ಎಂಬುದಾಗಿ ಹೇಳಬಹುದು. ಸಕಲ ಶರೀರಗಳಲ್ಲಿಯೂ ಒಬ್ಬನೇ ಪುರುಷನಿರುವಾಗ ನೀನು ಯಾರು? ನಾನು ಯಾರು? ಎಂಬ ಮಾತು

ತದಾ ಹಿ ಕೋ ಭವಾನ್ಕೋಽಹಮಿತ್ಯೇತದ್ವಿಫಲಂ ವಚಃ ।
ತ್ವಂ ರಾಜಾ ಶಿಬಿಕಾ ಚೇಯಂ ವಯಂ ವಾಹಾಃ ಪುರಸ್ಸರಾಃ ॥ ೮೩ ॥

ಅಯಂ ಚ ಭವತೋ ಲೋಕೋ ನ ಸದೇತನ್ನೃಪೋಚ್ಯತೇ ।
ವೃಕ್ಷಾದ್ದಾರು ತತಶ್ಚೇಯಂ ಶಿಬಿಕಾ ತ್ವದಧಿಷ್ಠಿತಾ ॥ ೮೪ ॥

ಕ್ವ ವೃಕ್ಷಸಂಜ್ಞಾ ವೈ ತಸ್ಯಾ ದಾರುಸಂಜ್ಞಾಽಥವಾ ನೃಪ ।
ವೃಕ್ಷಾರೂಢೋ ಮಹಾರಾಜೋ ನಾಯಂ ವದತಿ ತೇ ಜನಃ ॥ ೮೫ ॥

ಸ ಚ ದಾರುಣಿ ಸರ್ವಸ್ತ್ವಾಂ ಬ್ರವೀತಿ ಶಿಬಿಕಾಗತಂ ।
ಶಿಬಿಕಾ ದಾರುಸಂಘಾತಃ ಸ್ವನಾಮಸ್ಥಿತಿಸಂಸ್ಥಿತಿಃ ॥ ೮೬ ॥

ಅನ್ವಿಷ್ಯತಾಂ ನೃಪಶ್ರೇಷ್ಠಾನಂದದಾ ಶಿಬಿಕಾ ತ್ವಯಾ ।
ಏವಂ ಛತ್ರಂ ಶಲಾಕಾಭ್ಯಃ ಪೃಥಗ್ಭಾವೋ ವಿಮೃಶ್ಯತಾಂ ॥ ೮೭ ॥

---

ನಿರರ್ಥಕವು. ನೀನು ದೊರೆ, ಇದು ಪಲ್ಲಕ್ಕಿ, ಮುಂದಿರುವ ನಾವು ವಾಹಕರು, ಇದು ನನ್ನದೇಹ ಎಂಬಿವುಗಳೆಲ್ಲವೂ ಸ್ವತಂತ್ರಗಳಲ್ಲವೆಂದು ಉಕ್ತವಾಗಿದೆ. ವೃಕ್ಷದಿಂದ ಕಟ್ಟಿಗೆಯು, ಅದರಿಂದ ನೀನು ಕುಳಿತಿರುವ ಪಲ್ಲಕ್ಕಿಯೂ ನಿರ್ಮಿತವಾಗಿದೆ.

೮೫. ದೊರೆಯೇ! ಈಗ ವೃಕ್ಷ ಅಥವಾ ದಾರು ಎಂಬ ಹೆಸರೆಲ್ಲಿದೆ? ಜನರು ಪಲ್ಲಕ್ಕಿಯಲ್ಲಿ ಕುಳಿತಿರುವ ನಿನ್ನನ್ನು ಕುರಿತು ಮಹಾರಾಜನು ಗಿಡದ ಮೇಲೆ ಕುಳಿತಿದ್ದಾನೆಂದು ಹೇಳುವುದಿಲ್ಲ.

೮೬-೮೭. ಮಹಾರಾಜನು ಕಟ್ಟಿಗೆಯಮೇಲೆ ಕುಳಿತಿದ್ದಾನೆಂತಲೂ ಹೇಳುವುದಿಲ್ಲ. ಸರ್ವರೂ ನಿನ್ನನ್ನು ಪಲ್ಲಕ್ಕಿಯಲ್ಲಿ ಕುಳಿತಿದ್ದಾನೆಂದು ಹೇಳುತ್ತಾರೆ. ಪಲ್ಲಕ್ಕಿಯು ದಾರು ಪರಿಣಾಮವು. ನೃಪಶ್ರೇಷ್ಠನೇ! ಅದು ನಿನಗೆ ಸುಖಪ್ರದವಾಗಿದೆ. ಅದರ ಹಿಂದಿನ ದಾರು ಮುಂತಾದ ನಾಮಧೇಯಸಂಸ್ಥಿತಿಯನ್ನು ನೀನೇ ವಿಮರ್ಶಿಸು. ಇದೇಪ್ರಕಾರ ಛತ್ರಿಯು ಕಬ್ಬಿಣದ ಕಡ್ಡಿ ಮುಂತಾದುವುಗಳಿಂದ ಪೃಥಕ್ಕಾಗಿರುವುದನ್ನೂ ವಿಮರ್ಶಿಸಬೇಕು.

ಕ್ವ ಜಾತಂ ಛತ್ರಮಿತ್ಯೇಷ ನ್ಯಾಯಸ್ತ್ವಯಿ ತಥಾ ಮಯಿ ।
ಪುಮಾನ್ ಸ್ತ್ರೀ ಗೌರಜಾ ವಾಜೀ ಕುಂಜರೋ ವಿಹಗಸ್ತರುಃ ॥ ೮೮ ॥

ದೇಹೇಷು ಲೋಕಸಂಜ್ಞೇಯಂ ವಿಜ್ಞೇಯಾ ಕರ್ಮಹೇತುಷು ।
ಪುಮಾನ್ನ ದೇವೋ ನ ನರೋ ನ ಪಶುರ್ನಚ ಪಾದಪಃ ॥ ೮೯ ॥

ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ ।
ಯಸ್ತು ರಾಜೇತಿ ಯಲ್ಲೋಕೇ ಯಚ್ಚ ರಾಜಭಟಾತ್ಮಕಂ ॥ ೯೦ ॥

ತಥಾಽನ್ಯಚ್ಚ ನೃಪೇತ್ಥಂ ತನ್ನ ಸತ್ಯಂ ಕಲ್ಪನಾಮಯಂ ।
ಯಸ್ತು ಕಾಲಾಂತರೇಣಾಪಿ ನಾಶಂ ಸಂಜ್ಞಾಮುಪೈತಿ ವೈ ॥ ೯೧ ॥

ಪರಿಣಾಮಾದಿಸಂಭೂತಂ ತದ್ವಸ್ತು ನೃಪ ತಚ್ಚ ಕಿಂ ।
ತ್ವಂ ರಾಜಾ ಸರ್ವಲೋಕಸ್ಯ ಪಿತುಃ ಪುತ್ರೋ ರಿಪೋ ರಿಪುಃ ॥ ೯೨ ॥

---

೮೮. ಛತ್ರಿಯು ಎಲ್ಲಿ ಹುಟ್ಟಿತೆಂಬ ನ್ಯಾಯವು ನೀನು, ನಾನು, ಪುರುಷ, ಸ್ತ್ರೀ, ಗೋವು, ಮೇಕೆ, ಕುದುರೆ, ಆನೆ, ಪಕ್ಷಿ ಮತ್ತು ವೃಕ್ಷ ಇವೆಲ್ಲದರ ವಿಷಯದಲ್ಲಿಯೂ ಸಮಾನವು. ಆದುದರಿಂದ ಎಲ್ಲದರ ತತ್ವವನ್ನೂ ವಿಮರ್ಶಿಸಬೇಕು.

೮೯. ಕರ್ಮ ನಿಮಿತ್ತಕವಾದ ಶರೀರಗಳಿಗೆ ಈಲೋಕ ಎಂಬ ಹೆಸರನ್ನು ತಿಳಿಯಬೇಕು. ಪುರುಷನು ದೇವತೆಯಲ್ಲ, ನರನಲ್ಲ, ಪಶುವಲ್ಲ, ವೃಕ್ಷವಲ್ಲ.

೯೦-೯೧. ದೊರೆಯೇ ! ಇವೆಲ್ಲವೂ ಕರ್ಮನಿರ್ಮಿತವಾದ ಶರೀರದ ಆಕಾರ ಭೇದಗಳು. ರಾಜನೇ ! ಲೋಕದಲ್ಲಿ ರಾಜ, ಆಳು, ಇತರರು ಎಂಬುದೆಲ್ಲವೂ ಇದೇ ರೀತಿಯಾಗಿ ಶಾಶ್ವತವಲ್ಲ. ಕರ್ಮಾಧೀನವಾಗಿವೆ.

೯೧-೯೩. ದೊರೆಯೇ ! ಕಾಲಭೇದದಿಂದ ನಾಶ ಅಥವಾ ಪರಿಣಾಮಗಳಿಂದ ನಾಮಾಂತರವನ್ನು ಹೊಂದುವ ವಸ್ತು ಯಾವುದು ? ರಾಜನೇ ! ನೀನು

**ಪತ್ನ್ಯಾಃ ಪತಿಃ ಪಿತಾ ಸೂನೋಃ ಕಸ್ತ್ವಂ ಭೂಪ ವದಾಮ್ಯಹಂ ।**
**ತ್ವಂ ಕಿಮೇತಚ್ಛಿರಃ ಕಿಂತು ಶಿರಸ್ತವ ತಥೋದರಂ ॥ ೯೩ ॥**

**ಕಿಮು ಪಾದಾದಿಕಂ ತ್ವೇತನ್ನೈವ ಕಿಂ ತೇ ಮಹೀಪತೇ ।**
**ಸಮಸ್ತಾವಯವೇಭ್ಯಸ್ತ್ವಂ ಪೃಥಗ್ಭೂತೋ ವ್ಯವಸ್ಥಿತಃ ॥ ೯೪ ॥**

**ಕೋಽಹಮಿತ್ಯತ್ರ ನಿಪುಣಂ ಭೂತ್ವಾ ಚಿಂತಯ ಪಾರ್ಥಿವ ।**
**ಏವಂ ವ್ಯವಸ್ಥಿತೇ ತತ್ತ್ವೇ ಮಯಾಹಮಿತಿ ಭಾವಿತುಂ ॥ ೯೫ ॥**

**ಪೃಥಕ್ಕರಣನಿಷ್ಪಾದ್ಯಂ ಶಕ್ಯಂ ತು ನೃಪತೇ ಕಥಂ । ॥ ೯೬ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ ದ್ವಿತೀಯಪಾದೇ ಅಷ್ಟಚತ್ವಾರಿಂಶೋಽಧ್ಯಾಯಃ**

---

ಸಕಲಲೋಕಕ್ಕೂ ದೊರೆ, ತಂದೆಗೆ ಮಗ, ಶತ್ರುವಿಗೆ ಶತ್ರು, ಹೆಂಡತಿಗೆ ಗಂಡ, ಮಗನಿಗೆ ತಂದೆ. ಹೀಗಿರುವಾಗ ನಿನ್ನನ್ನು ಯಾರೆಂದು ಹೇಳಲಿ?

೯೩-೯೪. ನೀನು ಈತಲೆಯೋ? ಅಥವಾ ತಲೆಯು ನಿನ್ನದೇ? ಹಾಗೆಯೇ ಹೊಟ್ಟೆ, ಪಾದ ಮುಂತಾದುವು ನೀನೇ? ಅಥವಾ ಅವು ನಿನ್ನವೇ? ದೊರೆಯೇ! ಇದಾವುದೂ ನೀನಲ್ಲ. ನೀನು ಸಕಲಾವಯವಗಳಿಂದಲೂ ಭಿನ್ನನಾದವನೆಂದು ನಿರ್ಣೀತವಾಗಿದೆ.

೯೫-೯೬. ದೊರೆಯೇ! ನಾನು ಯಾರೆಂಬ ವಿಷಯವನ್ನು ಚೆನ್ನಾಗಿ ಯೋಚಿಸು. ಈ ಪ್ರಕಾರ ತತ್ತ್ವವು ಸಿದ್ಧಾಂತಿತವಾಗಿರುವಾಗ ಬೇರೆ ಭಾಗದಿಂದ ನಿಷ್ಪನ್ನವಾದುದನ್ನು ನಾನು (ಅಹಂ) ಎಂದು ಭಾವಿಸಲು ಹೇಗೆ ಸಾಧ್ಯವಾದೀತು?

ಇಂತು ಶ್ರೀನಾರದೀಯಪುರಾಣದೊಳು ಪೂರ್ವಭಾಗದ ಬೃಹದುಪಾಖ್ಯಾನವೆಂಬ ದ್ವಿತೀಯಪಾದದಲ್ಲಿ ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

## ಕಥಾಸಾರಾಂಶ

ನಾರದನು ಆತ್ಮಗುಣವಿರುದ್ಧವಾದ ದುರ್ಜನಾಚರಣೆಯನ್ನು ಸಹಿಸುವ ಬಗೆ ಹೇಗೆ? ಎಂದು ಸನಂದನನನ್ನು ಕೇಳಿದನು. ಅದಕ್ಕೆ ಸನಂದನನು ಭರತನ ಅನೇಕ ಜನ್ಮಗಳ ಇತಿಹಾಸವನ್ನು ಹೇಳಿರುವನು. ಭರತನು ಧರ್ಮ ದಿಂದ ರಾಜ್ಯಪರಿಪಾಲನೆಮಾಡಿ ನಂತರ ಸಾಲಿಗ್ರಾಮ ಕ್ಷೇತ್ರಕ್ಕೆ ಹೋಗಿ ತಪಸ್ಸು ಮಾಡುತ್ತಿರುವಾಗ ಚಕ್ರನದಿಯಲ್ಲಿ ನೀರುಕುಡಿಯಲು ಬಂದ ಮೃಗದ ಗರ್ಭವು ಸಿಂಹನಾದದಿಂದ ಪತಿತವಾಯಿತು. ಅದರಲ್ಲಿದ್ದ ಜಿಂಕೆಮರಿಯನ್ನು ತಂದು ಮಮತೆಯಿಂದ ಸಾಕುತ್ತಿದ್ದು ಅದೇ ಭಾವನೆಯಿಂದ ಸತ್ತು, ಮೃಗವಾಗಿ ಹುಟ್ಟಿ ಅನಂತರ ದ್ವಿಜನಾಗಿ ಹುಟ್ಟಿದನು. ಆಗ ಅವನು ಅವಧೂತ ಮಾರ್ಗದಲ್ಲಿರಲು ಸೌವೀರರಾಜ್ಯದ ದೊರೆಯ ಪಲ್ಲಕ್ಕಿಯವಾಹಕನಾಗಿ ನಿಯಮಿಸಲ್ಪಟ್ಟು ಪಲ್ಲಕ್ಕಿ ಯನ್ನು ಹೊತ್ತುಕೊಂಡು ಮೆಲ್ಲಗೆ ಹೋಗುತ್ತಿರುವಾಗ ದೊರೆಯು ಏಕೆ ಮೆಲ್ಲಗೆ ಹೋಗುತ್ತಿರುವೆಯೆಂದು ಅವನನ್ನು ಕೇಳಿದನು. ಅವನು ತತ್ವವನ್ನು ಹೇಳಲು ಉಪಕ್ರಮಿಸಿದನು. ಅದರಿಂದ ಆ ರಾಜನು ಇವನನ್ನು ಮಹಾಜ್ಞಾನಿಯೆಂದರಿತು ಕ್ಷಮಾಪಣೆಯನ್ನು ಬೇಡಿ ನೀನು ಯಾರೆಂಬುದನ್ನು ತಿಳಿಸಿ ತತ್ವೋಪದೇಶ ಮಾಡಬೇಕೆಂದು ಪ್ರಾರ್ಥಿಸಲು ಆತ್ಮತತ್ವವನ್ನು ವಿಶದವಾಗಿ ಉಪದೇಶಿ ಸಿರುವನು.

# ಏಕೋನಪಂಚಾಶತ್ತಮೋऽಧ್ಯಾಯಃ

### ಸನಂದನ ಉವಾಚ

ನಿಶಮ್ಯ ತಸ್ಯೇತಿ ವಚಃ ಪರಮಾರ್ಥಸಮನ್ವಿತಂ ।
ಪ್ರಶ್ರಯಾವನತೋ ಭೂತ್ವಾ ತಮಾಹ ನೃಪತಿರ್ದ್ವಿಜಂ ॥ ೧ ॥

### ರಾಜೋವಾಚ

ಭಗವನ್ಯತ್ತ್ವಯಾ ಪ್ರೋಕ್ತಂ ಪರಮಾರ್ಥಮಯಂ ವಚಃ ।
ಶ್ರುತೇ ತಸ್ಮಿನ್ಭ್ರಮಂತೀವ ಮನಸೋ ಮಮ ವೃತ್ತಯಃ ॥ ೨ ॥

ಏತದ್ವಿವೇಕವಿಜ್ಞಾನಂ ಯದಿ ಶೇಷೇಷು ಜಂತುಷು ।
ಭವತಾ ದರ್ಶಿತಂ ವಿಪ್ರ ತತ್ಪರಂ ಪ್ರಕೃತೇರ್ಮಹತ್ ॥ ೩ ॥

---

## ನಲವತ್ತೊಂಭತ್ತನೆಯ ಅಧ್ಯಾಯವು

೧. ಸನಂದನನು ಹೇಳಿದನು—ರಾಜನು ಉತ್ತಮಾರ್ಥಯುಕ್ತವಾದ ಆ ಬ್ರಾಹ್ಮಣನ ಮಾತನ್ನು ಕೇಳಿ, ಭಕ್ತಿಯಿಂದ ನಮಸ್ಕರಿಸಿ, ಅವನನ್ನು ಕುರಿತು ಹೇಳಿದನು.

೨. ರಾಜನು ಮಾತನಾಡಿದನು—ಪೂಜ್ಯನೇ! ನೀನು ಹೇಳಿದ ಪರಮಾರ್ಥಪ್ರಚುರವಾದ ಮಾತನ್ನು ಕೇಳಿದಮೇಲೆ ನನ್ನ ಮನೋವೃತ್ತಿಗಳು ಭ್ರಮಿಸುವಂತಾಗಿವೆ.

೩. ಬ್ರಾಹ್ಮಣನೇ! ಉಳಿದ ಪ್ರಾಣಿಗಳ ವಿಷಯದಲ್ಲಿ ನೀನು ಹೇಳಿದುದೇ ವಿವೇಕಜನಿತವಾದ ವಿಜ್ಞಾನವಾದರೆ ಅದೇ ಪ್ರಕೃತಿಗಿಂತ ಮಹತ್ತಾದ ಪರತತ್ವವು.

**ನಾಹಂ ವಹಾಮಿ ಶಿಬಿಕಾಂ ಶಿಬಿಕಾ ಮಯಿ ನ ಸ್ಥಿತಾ ।**
**ಶರೀರಮನ್ಯದಸ್ಮತ್ತೋ ಯೇನೇಯಂ ಶಿಬಿಕಾ ಧೃತಾ ॥ ೪ ॥**

**ಗುಣಪ್ರವೃತ್ತ್ಯಾ ಭೂತಾನಾಂ ಪ್ರವೃತ್ತಿಃ ಕರ್ಮಚೋದಿತಾ ।**
**ಪ್ರವರ್ತಂತೇ ಗುಣಾಶ್ಚೈತೇ ಕಿಂ ಮಮೇತಿ ತ್ವಯೋದಿತಂ ॥ ೫ ॥**

**ಏತಸ್ಮಿನ್ಪರಮಾರ್ಥಜ್ಞ ಮಮ ಶ್ರೋತ್ರಪಥಂ ಗತೇ ।**
**ಮನೋ ವಿಹ್ವಲತಾಮೇತಿ ಪರಮಾರ್ಥಾರ್ಥಿತಾಂ ಗತಂ ॥ ೬ ॥**

**ಪೂರ್ವಮೇವ ಮಹಾಭಾಗ ಕಪಿಲರ್ಷಿಮಹಂ ದ್ವಿಜ ।**
**ಪ್ರಷ್ಟುಮಭ್ಯುದ್ಯತೋ ಗತ್ವಾ ಶ್ರೇಯಃ ಕಿಂ ತ್ವತ್ರ ಸಂಶಯೋ ॥ ೭ ॥**

**ತದಂತರೇ ಚ ಭವತಾ ಯದಿದಂ ವಾಕ್ಯಮೀರಿತಂ ।**
**ತೇನೈವ ಪರಮಾರ್ಥಾರ್ಥಂ ತ್ವಯಿ ಚೇತಃ ಪ್ರಧಾವತಿ ॥ ೮ ॥**

---

೪. ನಾನು ಪಲ್ಲಕ್ಕಿಯನ್ನು ಹೊರುತ್ತಿಲ್ಲ. ಪಲ್ಲಕ್ಕಿಯು ನನ್ನ ಮೇಲಿಲ್ಲ. ಈ ಪಲ್ಲಕ್ಕಿಯನ್ನು ಧರಿಸಿರುವ ಶರೀರವು ನನ್ನ ದೆಸೆಯಿಂದ ಭಿನ್ನವಾದುದು.

೫. ಗುಣಗಳ ಪ್ರವೃತ್ತಿಯೇ ಕರ್ಮಪ್ರೇರಿತವಾದ ಪ್ರಾಣಿಗಳ ಪ್ರವೃತ್ತಿಯು. ಈ ಗುಣಗಳು ಪ್ರವರ್ತಿಸುತ್ತಿರುತ್ತವೆ. ನೀನು ಹೇಳಿದ ‘‘ಮಮ’’ ಎಂಬುದು ಯಾವುದು ?

೬. ಪರಮಾರ್ಥಜ್ಞಾನಿಯಾದ ಬ್ರಾಹ್ಮಣನೇ! ಇದನ್ನು ನಾನು ಕೇಳಿದಮೇಲೆ ಮನಸ್ಸು ಪರಮಾರ್ಥವಿಷಯಕವಾಗಿ ಚಾಂಚಲ್ಯವನ್ನು ಹೊಂದಿದೆ.

೭. ಧನ್ಯನಾದ ಬ್ರಾಹ್ಮಣನೇ! ಈ ಸಂದಿಗ್ಧವಿಷಯದಲ್ಲಿ ನಾನು ಪೂರ್ವದಲ್ಲಿಯೇ ಕಪಿಲಋಷಿಯ ಹತ್ತಿರಕ್ಕೆ ಹೋಗಿ ಯಾವುದು ಶ್ರೇಯಸ್ಸೆಂಬುದನ್ನು ಕೇಳಲುದ್ಯುಕ್ತನಾಗಿದ್ದೆನು. ಅಷ್ಟರೊಳಗೇ ನೀನು ಈ ಮಾತನ್ನು ಹೇಳಿದ್ದರಿಂದ ಪರಮಾರ್ಥಜ್ಞಾನಕ್ಕಾಗಿ ಮನಸ್ಸು ನಿನ್ನಲ್ಲಿಯೇ ಎರಗುತ್ತಿದೆ.

**ಕಪಿಲರ್ಷಿರ್ಭಗವತಃ ಸರ್ವಭೂತಸ್ಯ ವೈ ಕಿಲ ।**
**ವಿಷ್ಣೋರಂಶೋ ಜಗನ್ಮೋಹನಾಶಾಯ ಸಮುಪಾಗತಃ　　॥ ೯ ॥**

**ಸ ಏವ ಭಗವಾನ್ನೂನಮಸ್ಮಾಕಂ ಹಿತಕಾಮ್ಯಯಾ ।**
**ಪ್ರತ್ಯಕ್ಷತಾಮನುಗತಸ್ತಥೈತದ್ಭವತೋಚ್ಯತೇ　　॥ ೧೦ ॥**

**ತನ್ಮಹ್ಯಂ ಮೋಹನಾಶಾಯ ಯಚ್ಛ್ರೇಯಃ ಪರಮಂ ದ್ವಿಜ ।**
**ತದ್ವದಾಖಿಲವಿಜ್ಞಾನಜಲವೀಚ್ಯುದಧಿರ್ಭವಾನ್　　॥ ೧೧ ॥**

**ಬ್ರಾಹ್ಮಣ ಉವಾಚ**

**ಭೂಯಃ ಪೃಚ್ಛಸಿ ಕಿಂ ಶ್ರೇಯಃ ಪರಮಾರ್ಥೇನ ಪೃಚ್ಛಸಿ ।**
**ಶ್ರೇಯಾಂಸಿ ಪರಮಾರ್ಥಾನಿ ಹ್ಯಶೇಷಾಣ್ಯೇವ ಭೂಪತೇ　　॥ ೧೨ ॥**

**ದೇವತಾರಾಧನಂ ಕೃತ್ವಾ ಧನಸಂಪದಮಿಚ್ಛತಿ ।**
**ಪುತ್ರಾನಿಚ್ಛತಿ ರಾಜ್ಯಂ ಚ ಶ್ರೇಯಸ್ತಸ್ಯೈವ ತನ್ನೃಪ　　॥ ೧೩ ॥**

---

೯. ಸರ್ವಾಂತರ್ಗತನಾದ ವಿಷ್ಣುಭಗವಂತನ ಅಂಶನಾದ ಕಪಿಲ ಋಷಿಯು ಜಗತ್ತಿನ ಅಜ್ಞಾನವನ್ನು ನಾಶಪಡಿಸುವುದಕ್ಕಾಗಿ ಬಂದಿರುವನಷ್ಟೆ!

೧೦. ಆ ಭಗವಂತನೇ ಖಂಡಿತವಾಗಿಯೂ ನಮಗೆ ಹಿತವನ್ನು ಮಾಡಲಿಚ್ಛೆಯಿಂದ ಪ್ರತ್ಯಕ್ಷನಾದಂತೆ ಈ ತತ್ತ್ವವು ನಿನ್ನಿಂದ ಉಕ್ತವಾಗಿದೆ.

೧೧. ಬ್ರಾಹ್ಮಣನೇ! ಸಮಸ್ತ ವಿಜ್ಞಾನವೆಂಬ ಜಲತರಂಗಗಳಿಗೆ ಸಮುದ್ರದಂತಿರುವ ನೀನು ನನಗೆ ಅಜ್ಞಾನವನ್ನು ನಾಶಪಡಿಸುವುದಕ್ಕೋಸ್ಕರ ಯಾವುದು ಶ್ರೇಯಸ್ಸೆಂಬುದನ್ನು ಹೇಳು.

೧೨. ಬ್ರಾಹ್ಮಣನು ಹೇಳಿದನು—ದೊರೆಯೇ! ಪುನಃ ಕೇಳುತ್ತಿರುವೆ. ಪರಮಾರ್ಥದೃಷ್ಟಿಯಿಂದ ಶ್ರೇಯಸ್ಸಾವುದೆಂದು ಕೇಳುತ್ತಿರುವೆಯೇನು? ಸಮಸ್ತ ಪರಮಾರ್ಥಗಳೂ ಶ್ರೇಯಸ್ಸುಗಳೇ ಆಗಿವೆ.

೧೩. ದೊರೆಯೇ! ದೇವರ ಪೂಜೆಯನ್ನು ಮಾಡಿ ಒಬ್ಬನು ಐಶ್ವರ್ಯವನ್ನು ಅಪೇಕ್ಷಿಸುವನು. ಇನ್ನೊಬ್ಬನು ಮಕ್ಕಳನ್ನೂ ಮತ್ತೊಬ್ಬನು ರಾಜ್ಯವನ್ನೂ ಅಪೇಕ್ಷಿಸುವನು. ಅವನವನಿಗೆ ಅದೇ ಶ್ರೇಯಸ್ಸು.

ವಿವೇಕಿನಸ್ತು ಸಂಯೋಗಃ ಶ್ರೇಯೋऽಸೌ ಪರಮಾತ್ಮನಾ ।
ಕರ್ಮಯಜ್ಞಾದಿಕಂ ಶ್ರೇಯಃ ಸ್ವರ್ಲೋಕಫಲದಾಯಿ ಯತ್ ॥ ೧೪ ॥

ಶ್ರೇಯಃ ಪ್ರಧಾನಂ ಚ ಫಲೇ ತದೇವಾನಭಿಸಂಹಿತೇ ।
ಆತ್ಮಾ ಧ್ಯೇಯಸ್ಸದಾ ಭೂಪ ಯೋಗಯುಕ್ತೈಸ್ತಥಾ ಪರೈಃ ॥ ೧೫ ॥

ಶ್ರೇಯಸ್ತಸ್ಯೈವ ಸಂಯೋಗಃ ಶ್ರೇಯೋ ಯಃ ಪರಮಾತ್ಮನಃ ।
ಶ್ರೇಯಾಂಸ್ಯೇವಮನೇಕಾನಿ ಶತಶೋऽಥ ಸಹಸ್ರಶಃ ॥ ೧೬ ॥

ಸಂತ್ಯತ್ರ ಪರಮಾರ್ಥಾಸ್ತು ನ ತ್ವೇತೇ ಶ್ರೂಯತಾಂ ಚ ಮೇ ।
ಧರ್ಮಾಯಂ ತ್ಯಜತೇ ಕಿಂತು ಪರಮಾರ್ಥೋ ಧನಂ ಯದಿ ॥ ೧೭ ॥

ವ್ಯಯಂ ಚ ಕ್ರಿಯತೇ ಕರ್ಮ ಕಾಮಪ್ರಾಪ್ತ್ಯುಪಲಕ್ಷಣಂ ।
ಪುತ್ರಶ್ಚೇತ್ಪರಮಾರ್ಥಾಖ್ಯಃ ಸೋऽಪ್ಯನ್ಯಸ್ಯ ನರೇಶ್ವರ ॥ ೧೮ ॥

---

೧೪. ವಿವೇಕಿಯಾದವನಿಗೆ ಪರಮಾತ್ಮನ ಸಾನ್ನಿಧ್ಯಪ್ರಾಪ್ತಿಯೇ ಶ್ರೇಯಸ್ಸು ಸ್ವರ್ಗಲೋಕಪ್ರಾಪ್ತಿಸಾಧನವಾದ ಯಜ್ಞಾದಿಕರ್ಮಗಳೂ ಶ್ರೇಯಸ್ಕರಗಳು.

೧೫. ಅದನ್ನೇ ಫಲಾಪೇಕ್ಷೆಯಿಲ್ಲದೆ ಭಗವತ್ಪ್ರೀತ್ಯರ್ಥವಾಗಿ ಮಾಡಿದರೆ ಅವು ಉತ್ತಮ ಶ್ರೇಯಸ್ಸಾಧನವಾಗುವುದು. ದೊರೆಯೇ! ಯೋಗಿಗಳು ಮತ್ತು ಇತರರೂ ಸಹ ಪರಮಾತ್ಮನನ್ನು ಯಾವಾಗಲೂ ಧ್ಯಾನಿಸಬೇಕು.

೧೬. ಅಂತಹ ಪರಮಾತ್ಮಭಕ್ತನ ಸಾನ್ನಿಧ್ಯವೂ ಶ್ರೇಯಸ್ಕರವು. ಈರೀತಿಯಾಗಿ ಅಧಿಕಾರಿಭೇದದಿಂದ ಶ್ರೇಯಸ್ಸು ಭಿನ್ನವಾಗಿ ನೂರಾರು ಅಥವಾ ಸಾವಿರಾರು ವಿಧವಾಗಿದೆ.

೧೭–೧೮. ಇದರಲ್ಲಿ ಪರಮಾರ್ಥಗಳಿವೆ. ಇವೇ ಪರಮಾರ್ಥವಲ್ಲ. ಹೇಳುತ್ತೇನೆ ಕೇಳು. ಧನದಲ್ಲಿ ಆಶೆಯನ್ನು ಬಿಟ್ಟು ಅದನ್ನು ಸನ್ಮಾರ್ಗದಲ್ಲಿ ವಿನಿಯೋಗಿಸುತ್ತಾ ಕಾಮ್ಯಕರ್ಮವನ್ನು ತ್ಯಜಿಸಿದರೆ ಅದು ಪರಮಾರ್ಥ ಧರ್ಮವಾಗುವುದು.

**ಪರಮಾರ್ಥಭೂತಃ ಸೋಽನ್ಯಸ್ಯ ಪರಮಾರ್ಥೋ ಹಿ ನಃ ಪಿತಾ ।**
**ಏವಂ ನ ಪರಮಾರ್ಥೋಽಸ್ತಿ ಜಗತ್ಯತ್ರ ಚರಾಚರೇ ॥ ೧೯ ॥**

**ಪರಮಾರ್ಥೋ ಹಿ ಕಾರ್ಯಾಣಿ ಕರಣಾನಾಮಶೇಷತಃ ।**
**ರಾಜ್ಯಾದಿಪ್ರಾಪ್ತಿರತ್ರೋಕ್ತಾ ಪರಮಾರ್ಥತಯಾ ಯದಿ ॥ ೨೦ ॥**

**ಪರಮಾರ್ಥಾ ಭವಂತ್ಯತ್ರ ನ ಭವಂತಿ ಚ ವೈ ತತಃ ।**
**ಋಗ್ಯಜುಃಸಾಮನಿಷ್ಪಾದ್ಯಂ ಯಜ್ಞಕರ್ಮ ಮತಂ ತವ ॥ ೨೧ ॥**

**ಪರಮಾರ್ಥಭೂತಂ ತತ್ರಾಪಿ ಶ್ರೂಯತಾಂ ಗದತೋ ಮಮ ।**
**ಯತ್ತು ನಿಷ್ಪಾದ್ಯತೇ ಕಾರ್ಯಂ ಮೃದಾ ಕಾರಣಭೂತಯಾ ॥ ೨೨ ॥**

**ತತ್ಕಾರಣಾನುಗಮನಾಜ್ಜ್ಞಾಯತೇ ನೃಪ ಮೃನ್ಮಯಂ ।**
**ಏವಂ ವಿನಾಶಿಭಿರ್ದ್ರವ್ಯೈಃ ಸಮಿದಾಜ್ಯಕುಶಾದಿಭಿಃ ॥ ೨೩ ॥**

---

೧೮-೧೯. ಪುತ್ರನು ಪರಮಾರ್ಥನಾಮಕನಾದರೆ ಅವನೂ ಅನ್ಯರಿಂದ ಜನಿಸಿದವನು. ಅವನೂ ಇನ್ನೊಬ್ಬನ ಪುತ್ರನಾಗಿ ಪರಮಾರ್ಥಭೂತನು. ನಮಗೆ ಪಿತೃವೇ ಪರಮಾರ್ಥನು. ಈರೀತಿಯಾಗಿ ಈ ಚರಾಚರಾತ್ಮಕ ಪ್ರಪಂಚದಲ್ಲಿ ಪರಮಾರ್ಥವಿಲ್ಲ.

೨೦-೨೧. ಸಮಸ್ತಕಾರಣಗಳಿಗೂ ಕಾರ್ಯಗಳೇ ಪರಮಾರ್ಥವು. ರಾಜ್ಯ ಮುಂತಾದುದರ ಲಾಭವೇ ಇಲ್ಲಿ ಪರಮಾರ್ಥವೆಂದು ಹೇಳಿದರೆ ಇಲ್ಲಿಯೇ ಪರ ಮಾರ್ಥಗಳಾಗುತ್ತವೆ, ಆಮೇಲೆ ಇರುವುದಿಲ್ಲ.

೨೧-೨೨. ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳಿಂದ ನಿಷ್ಪನ್ನವಾಗುವ ಯಜ್ಞಕರ್ಮವೇ ಪರಮಾರ್ಥವೆಂದು ನಿನ್ನ ಅಭಿಪ್ರಾಯ ವಾದರೆ ಅದರಲ್ಲಿಯೂ ಸೂಕ್ಷ್ಮವನ್ನು ಹೇಳುತ್ತೇನೆ, ಕೇಳು.

೨೨-೨೩. ದೊರೆಯೇ! ಉಪಾದಾನಕಾರಣವಾದ ಮಣ್ಣಿನಿಂದ ನಿರ್ಮಾಣವಾಗುವ ಘಟಾದಿಕಾರ್ಯವು ಆ ಕಾರಣ ಸಂಬಂಧದಿಂದ ಮೃಣ್ಮಯ (ಮಣ್ಣಿನ ವಿಕಾರ) ವಾಗಿ ಹುಟ್ಟುತ್ತದೆ.

ನಿಷ್ಪಾದ್ಯತೇ ಕ್ರಿಯಾ ಯಾ ತು ಸಾ ಭವಿತ್ರೀ ವಿನಾಶಿನೀ ।
ಅನಾಶೀ ಪರಮಾರ್ಥಾ ತು ಪ್ರಾಜ್ಞೈರಭ್ಯುಪಗಮ್ಯತೇ ॥ ೨೪ ॥

ಯತ್ತು ನಾಶಿ ನ ಸಂದೇಹೋ ನಾಶಿದ್ರವ್ಯೋಪಪಾದಿತಂ ।
ತದೇವಾಫಲದಂ ಕರ್ಮ ಪರಮಾರ್ಥೋ ಮತೋ ಮಮ ॥ ೨೫ ॥

ಯುಕ್ತಿಸಾಧನಭೂತತ್ವಾತ್ಪರಮಾರ್ಥೋ ನ ಸಾಧನಂ ।
ಧ್ಯಾನಮೇವಾತ್ಮನೋ ಭೂಪ ಪರಮಾರ್ಥಾರ್ಥಶಬ್ದಿತಂ ॥ ೨೬ ॥

ಭೇದಕಾರಿಪರೇಭ್ಯಸ್ತು ಪರಮಾರ್ಥೋ ನ ಭೇದವಾನ್ ।
ಪರಮಾರ್ಥಾತ್ಮನೋರ್ಯೋಗಃ ಪರಮಾರ್ಥ ಇತೀಷ್ಯತೇ ॥ ೨೭ ॥

ಮಿಥ್ಯೈತದನ್ಯದ್ದ್ರವ್ಯಂ ಹಿ ನೈತದ್ದ್ರವ್ಯಮಯಂ ಯತಃ ।
ತಸ್ಮಾಚ್ಛ್ರೇಯಾಂಸ್ಯಶೇಷಾಣಿ ನೃಪೈತಾನಿ ನ ಸಂಶಯಃ ॥ ೨೮ ॥

---

೨೩-೨೪. ಇದೇಪ್ರಕಾರ ನಶ್ವರವಾದ ಸಮಿತ್ತು, ತುಪ್ಪ, ದರ್ಭೆ, ಮುಂತಾದುವುಗಳಿಂದ ನಿಷ್ಪನ್ನವಾಗುವ ಯಜ್ಞಾದಿಕ್ರಿಯೆಯು ನಾಶವುಳ್ಳದೇ ಆಗುತ್ತದೆ. ನಾಶವಿಲ್ಲದುದು ಪರಮಾರ್ಥವೆಂದು ಪ್ರಾಜ್ಞರು ಒಪ್ಪಿರುವರು.

೨೫. ನಾಶವುಳ್ಳ ವಸ್ತುಗಳಿಂದ ನಿರ್ಮಿತವಾಗಿ ಸ್ವಯಂ ನಾಶವುಳ್ಳ ಕರ್ಮವೇ ಫಲಾಶೆಯಿಲ್ಲದೇ ಕೃತವಾದರೆ ಅದು ಪರಮಾರ್ಥಸಾಧನವೆಂಬುದೇ ನನ್ನ ಮತ.

೨೬. ಯುಕ್ತಿಯು ಸಾಧನವಾಗುವುದರಿಂದ ಅದು ಪರಮಾರ್ಥವಾಗುವುದಿಲ್ಲ. ರಾಜನೇ! ಆತ್ಮಧ್ಯಾನವೇ ಪರಮಾರ್ಥಶಬ್ದದ ಅರ್ಥವು.

೨೭. ಭೇದಕಾರಿಯಾದ ಅನ್ಯಧರ್ಮಗಳಿಂದ ಪರಮಾರ್ಥವು ಭೇದವುಳ್ಳದಲ್ಲ. ಪರಮಾರ್ಥವಾದ ಆತ್ಮನ ಯೋಗವು ಪರಮಾರ್ಥವೆಂದು ಅಂಗೀಕೃತವಾಗಿದೆ.

೨೮. ಇದು ಪ್ರಕೃತಿಮಯವಲ್ಲ. ಇದಕ್ಕಿಂದ ಭಿನ್ನವಾದ ದ್ರವ್ಯವು ಪ್ರಾಕೃತವಾದುದರಿಂದ ಅಶಾಶ್ವತವು. ಆದಕಾರಣ ರಾಜನೇ! ಈ ಸಮಸ್ತವೂ ಶ್ರೇಯಸ್ಸುಗಳೇ ಆಗಿವೆ, ಸಂದೇಹವಿಲ್ಲ.

ಪರಮಾರ್ಥಸ್ತು ಭೂಪಾಲ ಸಂಕ್ಷೇಪಾಚ್ಛ್ರೂಯತಾಂ ಮಮ ।
ಏಕೋ ವ್ಯಾಪೀ ಸಮಃ ಶುದ್ಧೋ ನಿರ್ಗುಣಃ ಪ್ರಕೃತೇಃ ಪರಃ ॥ ೨೯ ॥

ಜನ್ಮವೃದ್ಧ್ಯಾದಿರಹಿತ ಆತ್ಮಾ ಸರ್ವಗತೋ ನೃಪ ।
ಪರಿಜ್ಞಾನಮಯೋ ಸದ್ಭಿರ್ನಾಮಜಾತ್ಯಾದಿಭಿರ್ವಿಭುಃ ॥ ೩೦ ॥

ನ ಯೋಗವಾನ್ನ ಯುಕ್ತೋಽಭೂನ್ನೈವ ಪಾರ್ಥಿವ ಯೋಕ್ಷ್ಯತಿ ।
ತಸ್ಯಾತ್ಮಪರದೇಹೇಷು ಸತೋಽಪ್ಯೇಕಮಯಂ ಹಿ ತತ್ ॥ ೩೧ ॥

ವಿಜ್ಞಾನಪರಮಾರ್ಥೋಽಸೌ ವೇತ್ತಿ ನೋ ತಥ್ಯದರ್ಶನಃ ।
ವೇಣುರಂಧ್ರವಿಭೇದೇನ ಭೇದಃ ಷಡ್ಜಾದಿಸಂಯುತಃ ॥ ೩೨ ॥

ಅಭೇದೋ ವ್ಯಾಪಿನೋ ವಾಯೋಸ್ತಥಾ ತಸ್ಯ ಮಹಾತ್ಮನಃ ।
ಏಕತ್ವಂ ರೂಪಭೇದಶ್ಚ ಬಾಹ್ಯಕರ್ಮಪ್ರವೃತ್ತಿಜಃ ॥ ೩೩ ॥

---

೨೯-೩೦. ದೊರೆಯೇ! ಪರಮಾರ್ಥವನ್ನು ಸಂಕ್ಷೇಪವಾಗಿ ಹೇಳುವೆನು ಕೇಳು. ಅದ್ವಿತೀಯ, ವ್ಯಾಪಕ, ಸರ್ವತ್ರಸಮ, ನಿರ್ದೋಷ, ಪ್ರಾಕೃತಗುಣ ರಹಿತ, ಪ್ರಕೃತಿಗಿಂತಲೂ ಉತ್ತಮ, ಉತ್ಪತ್ತಿ, ವೃದ್ಧಿ, ಹ್ರಾಸಶೂನ್ಯ, ಸರ್ವಗತ ಮತ್ತು ಜ್ಞಾನಮಯನೂ ಆದ ಆತ್ಮನು ಪರಮಾರ್ಥವು.

೩೦-೩೧. ವಿಭುವಾದ ಆತ್ಮನು ಪ್ರಕೃತಿಮಯವಾದ ನಾಮ, ಜಾತಿ ಮುಂತಾದುವುಗಳ ಸಂಬಂಧವನ್ನು ಹಿಂದೆ ಹೊಂದಿಲ್ಲ, ಈಗಲೂ ಹೊಂದುತ್ತಿಲ್ಲ, ಮುಂದೆಯೂ ಹೊಂದುವುದಿಲ್ಲ. ಸ್ವದೇಹ ಪರದೇಹಗಳಲ್ಲಿದ್ದರೂ ಪರಮಾತ್ಮನು ಒಬ್ಬನೇ ಆಗಿರುವನು.

೩೨-೩೩. ಇವನು ವಿಜ್ಞಾನರೂಪನಾದ ಪರಮಾರ್ಥವು. ಇದನ್ನು ಮಿಥ್ಯಾಜ್ಞಾನಿಯು ತಿಳಿಯಲಾರನು. ವ್ಯಾಪಕವಾದ ವಾಯುವಿಗೆ ಬಿದಿರಿನ ರಂಧ್ರಭೇದದಿಂದ ಷಡ್ಜಾದಿ ಸ್ವರಯುಕ್ತವಾಗಿ ಭೇದವು ಕಂಡರೂ ಹೇಗೆ ಅಭೇದವೋ ಅದರಂತೆ ಆ ಮಹಾತ್ಮನು ಒಬ್ಬನೇ ಆಗಿರುವನು. ರೂಪಭೇದವು ಬಾಹ್ಯಕರ್ಮಗಳಲ್ಲಿ ಪ್ರವರ್ತಿಸುವುದಕ್ಕಾಗಿ ಪ್ರಸಕ್ತವಾಗಿವೆ.

ದೇವಾದಿಭೇಧಮಧ್ಯಾಸ್ತೇ ನಾಸ್ತ್ಯೇವಾವರಣೋ ಹಿ ಸಃ ।
ಶೃಣ್ವತ್ರ ಭೂಪ ಪ್ರಾಗ್ವೃತ್ತಂ ಯದ್ಗೀತಮೃಭುಣಾ ಭವೇತ್ ॥ ೩೪ ॥

ಅವಬೋಧಂ ಜನಯಿತಾ ನಿದಾಘಸ್ಯ ದ್ವಿಜನ್ಮನಃ ।
ಋಭುರ್ನಾಮಾಽಭವತ್ಪುತ್ರೋ ಬ್ರಹ್ಮಣಃ ಪರಮೇಷ್ಠಿನಃ ॥ ೩೫ ॥

ವಿಜ್ಞಾತತತ್ತ್ವಸದ್ಭಾವೋ ನಿಸರ್ಗಾದೇವ ಭೂಪತೇ ।
ತಸ್ಯ ಶಿಷ್ಯೋ ನಿದಾಘೋಽಭೂತ್ಪುಲಸ್ತ್ಯತನಯಃ ಪುರಾ ॥ ೩೬ ॥

ಪಾದಾದಶೇಷವಿಜ್ಞಾನಂ ಸ ತಸ್ಮೈ ಪರಮಂ ಮುದಾ ।
ಅವಾಪ್ತಜ್ಞಾನತತ್ತ್ವಸ್ಯ ನ ತಸ್ಯಾದ್ವೈತವಾಸನಾ ॥ ೩೭ ॥

ಸ ಋಭುಸ್ತರ್ಕಯಾಮಾಸ ನಿದಾಘಸ್ಯ ನರೇಶ್ವರ ।
ದೇವಿಕಾಯಾಸ್ತಟೇ ವೀರ ನಾಗರಂ ನಾಮ ವೈ ಪುರಂ ॥ ೩೮ ॥

---

೩೪. ಅವನು ಭಿನ್ನದೇವಾದಿಗಳಲ್ಲಿರುವನು, ಅವನಿಗೆ ಆವರಣವಿಲ್ಲ. ದೊರೆಯೇ! ಕೇಳು, ಈ ವಿಷಯದಲ್ಲಿ ಋಭುವು ಹೇಳಿದ ಪೂರ್ವವೃತ್ತಾಂತವನ್ನು ಹೇಳುವೆನು.

೩೫-೩೬. ನಿದಾಘನೆಂಬ ಬ್ರಾಹ್ಮಣನಿಗೆ ಜ್ಞಾನವನ್ನು ಹುಟ್ಟಿಸಿದ ಸ್ವಾಭಾವಿಕವಾಗಿ ತತ್ವಸ್ಥಿತಿಯನ್ನು ತಿಳಿದಿದ್ದ ಋಭು ಎಂಬ ಚತುರ್ಮುಖಬ್ರಹ್ಮಪುತ್ರನಿದ್ದನು. ಪೂರ್ವದಲ್ಲಿ ಪುಲಸ್ತ್ಯನ ಮಗನಾದ ನಿದಾಘನೆಂಬುವನು ಅವನ ಶಿಷ್ಯನಾಗಿದ್ದನು.

೩೭-೩೮. ಋಭುವು ಸಂತೋಷದಿಂದ ನಿದಾಘನಿಗೆ ಉತ್ತಮವಾದ ಸಮಸ್ತವಿಜ್ಞಾನತತ್ವವನ್ನು ಉಪದೇಶಮಾಡಿದನು. ದೊರೆಯೇ ! ವಿಜ್ಞಾನತತ್ವವನ್ನು ತಿಳಿದಮೇಲೆ ಆ ನಿದಾಘನಿಗೆ ಅದ್ವೈತವಾಸನೆಯು ಹೋಯಿತೆಂದು ಋಭುವು ಊಹಿಸಿದನು.

ಸಮೃದ್ಧಮತಿರಮ್ಯಂ ಚ ಪುಲಸ್ತ್ಯೇನ ನಿವೇಶಿತಂ ।
ರಮ್ಯೋಪವನಪರ್ಯಂತಂ ಸ ತಸ್ಮಿನ್ಪಾರ್ಥಿವೋತ್ತಮ ॥ ೩೯ ॥

ನಿದಾಘನಾಮಾ ಯೋಗಜ್ಞಸ್ತಸ್ಯ ಶಿಷ್ಯೋಽವಸತ್ಪುರಾ ।
ದಿವ್ಯೇ ವರ್ಷಸಹಸ್ರೇ ತು ಸಮತೀತ್ಯೇಽಸ್ಯ ತತ್ಪುರಂ ॥ ೪೦ ॥

ಜಗಾಮ ಸ ಋಭುಃ ಶಿಷ್ಯಂ ನಿದಾಘಮವಲೋಕಿತಂ ।
ಸ ತಸ್ಯ ವೈಶ್ವದೇವಾಂತೇ ದ್ವಾರಾಲೋಕನಗೋಚರಃ ॥ ೪೧ ॥

ಸ್ಥಿತಸ್ತೇನ ಗೃಹೀತಾರ್ಘೋ ನಿಜವೇಶ್ಮಪ್ರವೇಶಿತಃ ।
ಪ್ರಕ್ಷಾಲಿತಾಂಘ್ರಿಪಾಣಿಂ ಚ ಕೃತಾಸನಪರಿಗ್ರಹಂ ॥ ೪೨ ॥

ಉವಾಚ ಸ ದ್ವಿಜಶ್ರೇಷ್ಠೋ ಭುಜ್ಯತಾಮಿತಿ ಸಾದರಂ ।

ಋಭುರುವಾಚ

ಭೋ ವಿಪ್ರವರ್ಯ ಭೋಕ್ತವ್ಯಂ ಯದತ್ರ ಭವತೋ ಗೃಹೇ ॥ ೪೩ ॥

---

೩೮-೩೯. ದೇವಿಕಾನದಿಯ ತೀರದಲ್ಲಿ ಸಂಪತ್ತುಳ್ಳದು, ಅತ್ಯಂತ ಮನೋಹರವು, ಪುಲಸ್ತ್ಯನಿಂದ ನಿರ್ಮಿತವಾದುದು, ಸುತ್ತಲೂ ರಮ್ಯವಾದ ತೋಟಗಳುಳ್ಳದೂ ಆಗಿದ್ದ ನಾಗರವೆಂಬ ಪಟ್ಟಣವಿದ್ದಿತು.

೩೯-೪೧. ಅಲ್ಲಿ ಯೋಗಜ್ಞಾನಿಯು, ನಿದಾಘನಾಮಕನೂ ಆದ ಆ ಋಭು ಶಿಷ್ಯನು ಪೂರ್ವದಲ್ಲಿ ವಾಸವಾಗಿದ್ದನು. ರಾಜೋತ್ತಮ ! ದೇವಮಾನದ ಒಂದು ಸಾವಿರ ವರ್ಷಗಳು ಕಳೆದ ಮೇಲೆ ಆ ಋಭುವು ಶಿಷ್ಯನಾದ ನಿದಾಘನನ್ನು ನೋಡುವುದಕ್ಕಾಗಿ ಅವನ ಪಟ್ಟಣಕ್ಕೆ ಹೋದನು.

೪೧-೪೨. ವೈಶ್ವದೇವವಾದ ಮೇಲೆ ಅವನಿಗೆ ಬಾಗಿಲಿನಲ್ಲಿ ಕಾಣಿಸಿಕೊಂಡ ಆ ಋಭುವು ನಿದಾಘನಿಂದ ಮನೆಯೊಳಕ್ಕೆ ಕರೆಯಲ್ಪಟ್ಟು ಪರಿಗ್ರಹಿಸಲ್ಪಟ್ಟನು.

೪೨-೪೩. ದ್ವಿಜವರ್ಯನಾದ ಆ ನಿದಾಘನು ಋಭುವಿನ ಹಸ್ತಪಾದಗಳನ್ನು ತೊಳೆದು, ಅವನನ್ನು ಆಸನದಲ್ಲಿ ಕುಳ್ಳಿರಿಸಿ ಆದರಪೂರ್ವಕವಾಗಿ ಭೋಜನಮಾಡಬೇಕೆಂದು ಹೇಳಿದನು.

ತತ್ಕಥ್ಯತಾಂ ಕದನ್ನೇಷು ನ ಪ್ರೀತಿಃ ಸತತಂ ಮಮ ।

ನಿದಾಘ ಉವಾಚ

ಸಕ್ತುಯಾವಕವ್ರೀಹೀನಾಮಪೂಪಾನಾಂ ಚ ಮೇ ಗೃಹೇ ॥ ೪೪ ॥

ಯದ್ರೋಚತೇ ದ್ವಿಜಶ್ರೇಷ್ಠ ತಾವದ್ಭುಂಕ್ಷ್ವ ಯಥೇಚ್ಛಯಾ ।

ಋಭುರುವಾಚ

ಕದನ್ನಾನಿ ದ್ವಿಜೈತಾನಿ ಮಿಷ್ಟಮನ್ನಂ ಪ್ರಯಚ್ಛ ಮೇ ॥ ೪೫ ॥

ಸಂಯಾವಪಾಯಸಾದೀನಿ ಚೇಕ್ಷುಕಾಽಸವಂತಿ ಚ ।

ನಿದಾಘ ಉವಾಚ

ಗೃಹೇ ಶಾಲಿನಿ ಮದ್ಗೇಹೇ ಯತ್ಕಿಂಚಿದತಿಶೋಭನಂ ॥ ೪೬ ॥

ಭೋಜ್ಯೇಷು ಸಾಧನಂ ಮಿಷ್ಟಂ ತೇನಾಸ್ಯಾನ್ನಂ ಪ್ರಸಾಧಯ ।

ಇತ್ಯುಕ್ತಾ ತೇನ ಸಾ ಪತ್ನೀ ಮಿಷ್ಟಮನ್ನಂ ದ್ವಿಜಸ್ಯ ತತ್ ॥ ೪೭ ॥

---

೪೩–೪೪. ಋಭುವು ಹೇಳಿದನು—ಬ್ರಾಹ್ಮಣಶ್ರೇಷ್ಠನೇ! ನಾನು ಯಾವಾಗಲೂ ಕದನ್ನಗಳನ್ನು ತಿನ್ನುವವನಲ್ಲ. ಆದಕಾರಣ ನಿನ್ನ ಮನೆಯಲ್ಲಿ ಏನನ್ನು ಭೋಜನಮಾಡಬೇಕೆಂಬುದನ್ನು ಹೇಳು.

೪೪–೪೫. ನಿದಾಘನು ಹೇಳಿದನು—ದ್ವಿಜವರ್ಯನೇ! ಯವ, ತಂಡುಲ ಇವುಗಳ ಹಿಟ್ಟು, ಅದರಿಂದ ನಿರ್ಮಿತವಾದ ಅಪೂಪ ಇವುಗಳು ನನ್ನ ಮನೆಯಲ್ಲಿವೆ. ಅದರಲ್ಲಿ ನಿನಗೆ ಇಷ್ಟವಾದುದನ್ನು ಯಥೇಚ್ಛವಾಗಿ ಭೋಜನಮಾಡು

೪೫–೪೬. ಋಭುವು ಹೇಳಿದನು—ದ್ವಿಜನೇ! ಕಬ್ಬಿನ ಹಾಲಿನಿಂದ ಕೂಡಿದ ಯವ, ಪಾಯಸಾದಿಗಳು ಕದನ್ನಗಳು. ನನಗೆ ಮೃಷ್ಟಾನ್ನವನ್ನು ಹಾಕು.

೪೬–೪೭. ಆಗ ನಿದಾಘನು ತನ್ನ ಹೆಂಡತಿಯನ್ನು ಕುರಿತು ನಮ್ಮ ಮನೆಯಲ್ಲಿರುವ ತಂಡುಲದಲ್ಲಿ ಬಹಳ ಚೆನ್ನಾಗಿರುವುದನ್ನಾರಿಸಿ ಅದರಿಂದ ಮೃಷ್ಟಾನ್ನವನ್ನು ಮಾಡಿ ಇವನಿಗೆ ಭೋಜನಮಾಡಿಸು ಎಂದು ಹೇಳಿದನು.

ಪ್ರಸಾಧಿತವತೀ ತದ್ವೈ ಭರ್ತುರ್ವಚನಗೌರವಾತ್ ।
ತಂ ಭುಕ್ತವಂತಮಿಚ್ಛಾತೋ ಮಿಷ್ಟಮನ್ನಂ ಮಹಾಮುನಿಂ ॥ ೪೮ ॥

ನಿದಾಘಃ ಪ್ರಾಹ ಭೂಪಾಲ ಪ್ರಶ್ರಯಾವನತಃ ಸ್ಥಿತಃ ।

ನಿದಾಘ ಉವಾಚ

ಅಪಿ ತೇ ಪರಮಾ ತೃಪ್ತಿರುತ್ಪನ್ನಾ ಪುಷ್ಟಿರೇವ ಚ ॥ ೪೯ ॥

ಅಪಿ ತೇ ಮಾನಸಂ ಸ್ವಸ್ಥಮಾಹಾರೇಣ ಕೃತಂ ದ್ವಿಜ ।
ಕ್ವ ನಿವಾಸೋ ಭವಾನ್ವಿಪ್ರ ಕ್ವ ವಾ ಗಂತುಂ ಸಮುದ್ಯತಃ ॥ ೫೦ ॥

ಆಗಮ್ಯತೇ ಚ ಭವತಾ ಯತಸ್ತಚ್ಚ ನಿವೇದ್ಯತಾಂ ।

ಋಭುರುವಾಚ

ಕ್ಷುಧಿತಸ್ಯ ಚ ಭುಕ್ತೇಽನ್ನೇ ತೃಪ್ತಿರ್ಬ್ರಹ್ಮನ್ವಿಜಾಯತೇ ॥ ೫೧ ॥

೪೭–೪೮. ಈರೀತಿಯಾಗಿ ನಿದಾಘನು ಹೇಳಿದುದನ್ನು ಕೇಳಿ ಅವನ ಹೆಂಡತಿಯು ಪತಿಯ ಮಾತಿನ ಗೌರವದಿಂದ ಮೃಷ್ಟಾನ್ನವನ್ನು ಮಾಡಿ ಋಭು ಮುನಿಗೆ ಭೋಜನಮಾಡಿಸಿದಳು.

೪೮–೪೯. ಆ ಮೃಷ್ಟಾನ್ನವನ್ನು ಯಥೇಷ್ಟವಾಗಿ ಭೋಜನಮಾಡಿದ ಮೇಲೆ ನಿದಾಘನು ಋಭುಮಹಾಮುನಿಗೆ ಭಕ್ತಿಯಿಂದ ನಮಸ್ಕಾರಮಾಡಿ ಈರೀತಿ ಮಾತನಾಡಿದನು.

೪೯-೫೧. ನಿದಾಘನು ಹೇಳಿದನು—ದ್ವಿಜನೇ! ಈ ಆಹಾರದಿಂದ ನಿನಗೆ ಸಂಪೂರ್ಣ ತೃಪ್ತಿಯು ಮತ್ತು ಪುಷ್ಟಿಯೂ ಉಂಟಾಯಿತೇ? ಇದರಿಂದ ನಿನ್ನ ಮನಸ್ಸು ಸಮಾಧಾನವಾಯಿತೇ? ಬ್ರಾಹ್ಮಣನೇ! ನಿನ್ನ ವಾಸಸ್ಥಾನ ವಾವುದು? ಎಲ್ಲಿಗೆ ಹೋಗಲು ಉದ್ಯುಕ್ತನಾಗಿರುವೆ ಇಲ್ಲಿಗೆ ಬರಲು ಕಾರಣ ವೇನು? ಇವೆಲ್ಲವನ್ನೂ ಹೇಳು.

೫೧–೫೨. ಋಭುವು ಹೇಳಿದನು—ಬ್ರಾಹ್ಮಣನೇ! ಹಸಿವಾದವನಿಗೆ ಅನ್ನ ತಿಂದರೆ ತೃಪ್ತಿಯಾಗುತ್ತದೆ. ನನಗೆ ಹಸಿವೆಯಿಲ್ಲ. ತೃಪ್ತಿಯಾಗಲು ಕಾರಣವೇನು?

ನ ಮೇ ಕ್ಷುಧಾ ಭವೇತ್ತೃಪ್ತಿಃ ಕಸ್ಮಾನ್ಮಾಂ ದ್ವಿಜ ಪೃಚ್ಛಸಿ ।
ವಹ್ನಿನಾ ಪಾರ್ಥಿವೇಽನ್ನಾದೌ ದಗ್ಧೇ ವೈ ಕ್ಷುತ್ಸಮುದ್ಭವಃ ॥ ೫೨ ॥

ಭವತ್ಯಂಭಸಿ ಚ ಕ್ಷೀಣೇ ನೃಣಾಂ ತೃಷ್ಣಾ ಸಮುದ್ಭವಃ ।
ಕ್ಷುತ್ತೃಷ್ಣೇ ದೇಹಧರ್ಮಾಖ್ಯೇ ನ ಮಮ್ಯೈತೇ ಯತೋ ದ್ವಿಜ ॥ ೫೩ ॥

ತತಃ ಕ್ಷುತ್ಸಂಭವಾಭಾವಾತ್ತೃಪ್ತಿರಸ್ತ್ಯೇವ ಮೇ ಸದಾ ।
ಮನಸಃ ಸ್ವಸ್ಥತಾ ತುಷ್ಟಿಶ್ಚಿತ್ತಧರ್ಮಾವಿಮೌ ದ್ವಿಜ ॥ ೫೪ ॥

ಚೇತಸೋ ಯಸ್ಯ ಯತ್ಪೃಷ್ಟಂ ಪುಮಾನೇಭಿರ್ನ ಯುಜ್ಯತೇ ।
ಕ್ವ ನಿವಾಸಸ್ತವೇತ್ಯುಕ್ತಂ ಕ್ವ ಗಂತಾಽಸಿ ಚ ಯತ್ತ್ವಯಾ ॥ ೫೫ ॥

ಕುತಶ್ಚಾಗಮ್ಯತೇ ತ್ವೇತತ್ತ್ರಿತಯೇಽಪಿ ನಿಬೋಧ ಮೇ ।
ಪುಮಾನ್ಸರ್ವಗತೋ ವ್ಯಾಪೀತ್ಯಾಕಾಶವದಯಂ ಯತಃ ॥ ೫೬ ॥

---

ನನ್ನನ್ನು ಏತಕ್ಕೆ ಕೇಳುವೆ? ಅಗ್ನಿಯಿಂದ ಪಾರ್ಥಿವವಾದ ಅನ್ನಾದಿಗಳು ದಹಿಸಲ್ಪಟ್ಟರೆ (ಜೀರ್ಣಮಾಡಲ್ಪಟ್ಟರೆ) ಹಸಿವೆಯು ಹುಟ್ಟುತ್ತದೆಯಲ್ಲವೆ?

೫೩. ನೀರು ಬತ್ತಿಹೋದರೆ ಮನುಷ್ಯರಿಗೆ ನೀರಡಿಕೆಯು ಹುಟ್ಟುತ್ತದೆ. ದ್ವಿಜನೇ! ಹಸಿವು ಬಾಯಾರಿಕೆಗಳು ದೇಹಧರ್ಮಗಳು; ಆತ್ಮಧರ್ಮಗಳಲ್ಲ.

೫೪. ಆದಕಾರಣ ನನಗೆ ಹಸಿವು ಸಂಭವಿಸುವ ಪ್ರಸಕ್ತಿಯೇ ಇಲ್ಲದಿರುವುದರಿಂದ ಯಾವಾಗಲೂ ತೃಪ್ತಿಯಿದ್ದೇ ಇರುತ್ತದೆ. ದ್ವಿಜನೇ! ಮನಃಸ್ವಸ್ಥತೆ, ಸಂತೋಷ ಇವೆರಡು ಮನೋಧರ್ಮಗಳು.

೫೫-೫೬. ನೀನು ಕೇಳಿದ ಮನಃಸ್ವಸ್ಥತೆ ಮುಂತಾದ ಮನೋಧರ್ಮಗಳಿಗೂ ಆತ್ಮನಿಗೂ ಸಂಬಂಧವಿಲ್ಲ ನಿನ್ನ ವಾಸಸ್ಥಾನವಾವುದು? ಎಲ್ಲಿಗೆ ಹೋಗುವೆ? ಏತಕ್ಕಾಗಿ ಇಲ್ಲಿಗೆ ಬಂದಿರುವೆ? ಎಂಬೀ ಮೂರು ವಿಷಯದಲ್ಲಿಯೂ ತತ್ವವನ್ನು ಹೇಳುವೆನು ಕೇಳು.

೫೬-೫೭. ಪರಮಾತ್ಮನು ಆಕಾಶದಂತೆ ಸರ್ವಗತನು ಮತ್ತು ವ್ಯಾಪಕನೂ ಆಗಿ ಎಲ್ಲಕ್ಕೂ ನಿಯಾಮಕನಾಗಿರುವನು. ಹೀಗಿರುವಾಗ ನಿನ್ನ ಸ್ಥಳ

**ಕುತಃ ಕುತ್ರ ಕ್ವ ಗಂತಾಸೀತ್ಯೇತದಪ್ಯರ್ಥವತ್ಕಥಂ ।**
**ಸೋಽಹಂ ಗಂತಾ ನ ಚಾಗಂತಾ ನೈಕದೇಶನಿಕೇತನಃ ॥ ೫೭ ॥**

**ತ್ವಂ ಚಾನ್ಯೇ ಚ ನ ಚ ತ್ವಂ ತ್ವಂ ನಾನ್ಯೇ ನೈವಾಹಮಪ್ಯಹಂ ।**
**ಮಿಷ್ಟಾನ್ನೇ ಮಿಷ್ಟಮಿತ್ಯೇಷಾ ಜಿಹ್ವಾ ಸಾ ಮೇ ಕೃತಾ ತವ ॥ ೫೮ ॥**

**ಕಿಂ ವಕ್ಷ್ಯತೀತಿ ತತ್ರಾಪಿ ಶ್ರೂಯತಾಂ ದ್ವಿಜಸತ್ತಮ ।**
**ಮಿಷ್ಟಮೇವ ವದಾಮಿಷ್ಟಂ ತದೇವೋದ್ವೇಗಕಾರಣಂ ॥ ೫೯ ॥**

**ಅಮಿಷ್ಟಂ ಜಾಯತೇ ಮಿಷ್ಟಂ ಮಿಷ್ಟಾದುದ್ವಿಜತೇ ಜನಃ ।**
**ಆದಿಮಧ್ಯಾವಸಾನೇಷು ಕಿಮನ್ನಂ ರುಚಿಕಾರಣಂ ॥ ೬೦ ॥**

---

ವಾವುದು? ಎಲ್ಲಿಗೆ ಹೋಗುವೆ? ಎಲ್ಲಿಂದ ಬಂದಿ? ಎಂಬುದು ಹೇಗೆ ಅರ್ಥವತ್ತಾಗುವುದು? ನಾನು ಸ್ವತಃ ಹೋಗುವವನಲ್ಲ, ಹೋಗದಿರುವವನಲ್ಲ, ಒಂದು ಭಾಗದಲ್ಲಿರುವವನೂ ಅಲ್ಲ.

೫೮-೫೯. ನೀನು ಮತ್ತು ಅನ್ಯರು ಇವರಲ್ಲಿ ನೀನು ನೀನಲ್ಲ, ಅನ್ಯರು ಅನ್ಯರಲ್ಲ, ನಾನೂ ನಾನಲ್ಲ ಎಂದರೆ ಸಕಲ ಶಬ್ದಗಳಿಂದಲೂ ಮುಖ್ಯವಾಗಿ ಜಗದಂತರ್ಯಾಮಿಯಾದ ಪರಮಾತ್ಮನೊಬ್ಬನೇ ಬೋಧಿಸಲ್ಪಡುವನು. ನಾನು, ನೀನು ಮುಂತಾದವರೆಲ್ಲರೂ ಅಮುಖ್ಯರಾಗಿ ಆಯಾಯಾ ಶಬ್ದಗಳಿಂದ ಬೋಧಿತರಾಗಿರುವೆವೆಂದು ಭಾವ. ಮಿಷ್ಟಾನ್ನವನ್ನು ನನ್ನ ಈ ಜಿಹ್ವೆಯು ಮಿಷ್ಟ ಎಂದು ತಿಳಿದಿದೆ. ನಿನ್ನ ಜಿಹ್ವೆಯು ಏನನ್ನು ಹೇಳುತ್ತದೆ? ಎಂದರೆ ಹೇಳುವೆನು ಕೇಳು. ದ್ವಿಜೋತ್ತಮನೇ! ಮಿಷ್ಟವನ್ನು ಅಮಿಷ್ಟವೆಂದು ಹೇಳು. ಅದೇ ಕೋಪಕ್ಕೆ ಕಾರಣವಾಗುವುದು.

೬೦. ಅಮಿಷ್ಟವು ಮಿಷ್ಟವಾಗುವುದು. ಜನರು ಮಿಷ್ಟದಿಂದ ಉದ್ವೇಗ ಹೊಂದುವರು. ಅನ್ನವು ಮೊದಲು, ಮಧ್ಯ, ಕೊನೆಗಳಲ್ಲಿ ರುಚಿಕಾರಣವಾಗುವುದೇ ಏನು?

ಮೃಣ್ಮಯಂ ಹಿ ಮೃದಾ ಯದ್ವದ್ಗೃಹಂ ಲಿಪ್ತಂ ಸ್ಥಿರೀಭವೇತ್ ।
ಪಾರ್ಥಿವೋಽಯಂ ತಥಾ ದೇಹಃ ಪಾರ್ಥಿವೈಃ ಪರಮಾಣುಭಿಃ ॥ ೬೧ ॥

ಯವಗೋಧೂಮಮುದ್ಗಾದಿ ಘೃತಂ ತೈಲಂ ಪಯೋ ದಧಿ ।
ಗುಡಃ ಫಲಾನೀತಿ ತಥಾ ಪಾರ್ಥಿವಾಃ ಪರಮಾಣವಃ ॥ ೬೨ ॥

ತದೇತದ್ಭವತಾ ಜ್ಞಾತ್ವಾ ಮಿಷ್ಟಾಮಿಷ್ಟವಿಚಾರಿ ಯತ್ ।
ತನ್ಮನಃ ಸಮನಾಲಂಬಿ ಕಾರ್ಯಂ ಪ್ರಾಪ್ಯಂ ಹಿ ಮುಕ್ತಯೇ ॥ ೬೩ ॥

ಇತ್ಯಾಕರ್ಣ್ಯ ವಚಸ್ತಸ್ಯ ಪರಮಾರ್ಥಾಶ್ರಿತಂ ನೃಪ ।
ಪ್ರಣಿಪತ್ಯ ಮಹಾಭಾಗೋ ನಿದಾಘೋ ವಾಕ್ಯಮಬ್ರವೀತ್ ॥ ೬೪ ॥

ಪ್ರಸೀದ ಮದ್ಧಿತಾರ್ಥಾಯ ಕಥ್ಯತಾಂ ಯಸ್ತ್ವಮಾಗತಃ ।
ನಷ್ಟೋ ಮೋಹಸ್ತವಾಕರ್ಣ್ಯ ವಚಾಂಸ್ಯೇತಾನಿ ಮೇ ದ್ವಿಜ ॥ ೬೫ ॥

---

೬೧. ಮಣ್ಣಿನಿಂದ ನಿರ್ಮಿತವಾದ ಮನೆಯು ಮಣ್ಣಿನಿಂದ ಮೆತ್ತಲ್ಪಟ್ಟು ಭದ್ರವಾಗುವಂತೆ ಈ ಪಾರ್ಥಿವ ದೇಹವು ಪಾರ್ಥಿವ ಪರಮಾಣುಗಳಿಂದ ಲಿಪ್ತವಾಗಿ ಪುಷ್ಟಿಹೊಂದುವುದು.

೬೨. ಜವೆ, ಗೋಧಿ, ಹೆಸರು ಮುಂತಾದುದು, ತುಪ್ಪ, ಎಣ್ಣೆ, ಹಾಲು, ಮೊಸರು, ಬೆಲ್ಲ ಮತ್ತು ಹಣ್ಣುಗಳು ಎಂಬಿವುಗಳು ಪಾರ್ಥಿವಪರಮಾಣುಗಳು.

೬೩. ಮಿಷ್ಟಾಮಿಷ್ಟವಿಮರ್ಶೆಪೂರ್ವಕವಾಗಿ ಇದೆಲ್ಲವನ್ನೂ ನೀನು ತಿಳಿದು, ಮೋಕ್ಷಕ್ಕೋಸ್ಕರ ಅವಿಕೃತವಾದ ಮನಸ್ಸನ್ನು ಹೊಂದಬೇಕು.

೬೪. ದೊರೆಯೇ! ಋಭುವಿನ ಪರಮಾರ್ಥವಿಷಯಕವಾದ ಈ ಮಾತನ್ನು ಕೇಳಿ ಧನ್ಯನಾದ ನಿದಾಘನು ಅವನಿಗೆ ನಮಸ್ಕಾರಮಾಡಿ ಮಾತನಾಡಿದನು.

೬೫- ದ್ವಿಜನೇ! ಪ್ರಸನ್ನನಾಗು. ನಿನ್ನ ಈ ಮಾತನ್ನು ಕೇಳಿದ್ದರಿಂದ ನನ್ನ ಅಜ್ಞಾನವು ಹೋಯಿತು. ಇಲ್ಲಿಗೆ ಬಂದಿರುವ ನೀನು ಯಾರೆಂಬುದನ್ನು ನನ್ನ ಶ್ರೇಯಸ್ಸಿಗೋಸ್ಕರ ಹೇಳು.

ಋಭುರುವಾಚ

ಋಭುರಸ್ಮಿ ತವಾಚಾರ್ಯಃ ಪ್ರಜ್ಞಾದಾನಾಯ ತೇ ದ್ವಿಜ ।
ಇಹಾಗತೋಽಹಂ ದಾಸ್ಯಾಮಿ ಪರಮಾರ್ಥಸುಬೋಧಿತಂ ॥ ೬೬ ॥

ಏಕ ಏವಮಿದಂ ವಿದ್ಧಿ ನ ಭೇದಿ ಸಕಲಂ ಜಗತ್ ।
ವಾಸುದೇವಾಭಿಧೇಯಸ್ಯ ಸ್ವರೂಪಂ ಪರಮಾತ್ಮನಃ ॥ ೬೭ ॥

ಬ್ರಾಹ್ಮಣ ಉವಾಚ

ತಥೇತ್ಯುಕ್ತ್ವಾ ನಿದಾಘೇನ ಪ್ರಣಿಪಾತಪುರಃಸರಂ ।
ಪೂಜಿತಃ ಪರಯಾ ಭಕ್ತ್ಯಾಽನಿಚ್ಛಿತಃ ಪ್ರಯಯೌ ಋಭುಃ ॥ ೬೮ ॥

ಪುನರ್ವರ್ಷಸಹಸ್ರಾಂತೇ ಸಮಾಯಾತೋ ನರೇಶ್ವರ ।
ನಿದಾಘಜ್ಞಾನದಾನಾಯ ತದೇವ ನಗರಂ ಗುರುಃ ॥ ೬೯ ॥

ನಗರಸ್ಯ ಬಹಿಃ ಸೋಽಥ ನಿದಾಘಂ ದೃಷ್ಟವಾನ್ಮುನಿಃ ।
ಮಹಾಬಲಪರೀವಾರೇ ಪುರಂ ವಿಶತಿ ಪಾರ್ಥಿವೇ ॥ ೭೦ ॥

---

೬೬. ಋಭುವು ಹೇಳಿದನು—ದ್ವಿಜನೇ! ನಾನು ನಿನ್ನ ಗುರುವಾದ ಋಭುವು. ನಿನಗೆ ಉತ್ಕೃಷ್ಟವಾದ ಜ್ಞಾನವನ್ನು ಹುಟ್ಟಿಸಲು ಇಲ್ಲಿಗೆ ಬಂದಿರುವೆನು. ಸುಖವಾಗಿ ಪರಮಾರ್ಥವನ್ನು ತಿಳಿಯುವಂತಹ ಉಪದೇಶಕೊಡುವೆನು.

೬೭. ಈ ರೀತಿಯಾಗಿ ಸಮಸ್ತಜಗದಂತರ್ಗತನಾದ ವಾಸುದೇವ ನಾಮಕನಾದ ಪರಮಾತ್ಮನ ಸ್ವರೂಪವು ಅಭಿನ್ನವು; ಅದು ಭೇದವುಳ್ಳದಲ್ಲ ಎಂದು ತಿಳಿ.

೬೮. ಬ್ರಾಹ್ಮಣನು ಹೇಳಿದನು—ನಿದಾಘನು ಹಾಗೆಯೇ ಸರಿಯೆಂದು ಹೇಳಿ ನಮಸ್ಕಾರಪೂರ್ವಕವಾಗಿ ಪರಮಭಕ್ತಿಯಿಂದ ಗುರುಗಳನ್ನು ಪೂಜಿಸಿದನು. ಆಮೇಲೆ ಋಭುವು ಇಚ್ಛೆಯಿಲ್ಲದಿದ್ದರೂ ಅಲ್ಲಿಂದ ಹೊರಟನು.

೬೯. ದೊರೆಯೇ! ಸಾವಿರ ವರ್ಷಗಳಾದಮೇಲೆ ಗುರುವು ಪುನಃ ನಿದಾಘನಿಗೆ ಜ್ಞಾನದಾನಕ್ಕೋಸ್ಕರ ಅದೇ ಪಟ್ಟಣಕ್ಕೆ ಬಂದನು.

೭೦–೭೧. ಪಟ್ಟಣದ ಹೊರಭಾಗದಲ್ಲಿಯೇ ಆ ಋಭುಮುನಿಯು ಮಹಾಬಲಿಷ್ಠವಾದ ಪರಿವಾರಸಹಿತನಾಗಿ ರಾಜನು ಪಟ್ಟಣವನ್ನು ಪ್ರವೇಶ

**ದೂರಸ್ಥಿತಂ ಮಹಾಭಾಗಂ ಜನಸಂಮರ್ದವರ್ಜಕಂ ।**
**ಕ್ಷುತ್ಕ್ಷಾಮಕಂಠಮಾಯಾಂತಮರಣ್ಯಾತ್ಸಸಮಿತ್ಕುಶಂ ॥ ೭೦ ॥**

**ದೃಷ್ಟ್ವಾ ನಿದಾಘಂ ಸ ಋಭುರುಪಗತ್ಯಾಭಿವಾದ್ಯ ಚ ।**
**ಉವಾಚ ಕಸ್ಮಾದೇಕಾಂತೇ ಸ್ಥೀಯತೇ ಭವತಾ ದ್ವಿಜ ॥ ೭೨ ॥**

**ನಿದಾಘ ಉವಾಚ**

**ಭೋ ವಿಪ್ರ ಜನಸಂಮರ್ದೋ ಮಹಾನೇಷ ಜನೇಶ್ವರೇ ।**
**ಪ್ರವಿವಕ್ಷೌ ಪುರೇ ರಮ್ಯೇ ತೇನಾತ್ರ ಸ್ಥೀಯತೇ ಮಯಾ ॥ ೭೩ ॥**

**ಋಭುರುವಾಚ**

**ನರಾಧಿಪೋಽತ್ರ ಕತಮಃ ಕತಮಶ್ಚೇತರೋ ಜನಃ ।**
**ಕಥ್ಯತಾಂ ಮೇ ದ್ವಿಜಶ್ರೇಷ್ಠ ತ್ವಮಭಿಜ್ಞೋ ಮತೋ ಮಮ ॥ ೭೪ ॥**

---

ಮಾಡುತ್ತಿರಲು ಜನಸಂಮರ್ದವನ್ನು (ಗುಂಪನ್ನು) ಬಿಟ್ಟು ದೂರದಲ್ಲಿದ್ದ, ಹಸಿವಿನಿಂದ ಬಳಲಿದ ಕಂಠವುಳ್ಳ, ಅರಣ್ಯದಿಂದ ಸಮಿತ್ತು ದರ್ಭೆ ಇವುಗಳನ್ನು ತೆಗೆದುಕೊಂಡು ಬರುತ್ತಿದ್ದ ನಿದಾಘನನ್ನು ನೋಡಿದನು.

೭೨. ಆ ಋಭುವು ನಿದಾಘನನ್ನು ನೋಡಿ, ಹತ್ತಿರಕ್ಕೆ ಬಂದು, ಅಭಿವಾದನಮಾಡಿ, ಬ್ರಾಹ್ಮಣನೇ! ನೀನು ಜನರಹಿತವಾದ ರಹಸ್ಯಪ್ರದೇಶದಲ್ಲಿ ಏತಕ್ಕೋಸ್ಕರ ನಿಂತಿರುವೆ ಎಂಬುದಾಗಿ ಕೇಳಿದನು.

೭೩. ನಿದಾಘನು ಹೇಳಿದನು—ಬ್ರಾಹ್ಮಣನೇ! ದೊರೆಯು ಮನೋಹರವಾದ ಪಟ್ಟಣದೊಳಕ್ಕೆ ಹೋಗುತ್ತಿರುವುದರಿಂದ ಈ ದೊಡ್ಡ ಜನಸಂದಣಿಯು ನೆರೆದಿದೆ. ಆದುದರಿಂದ ನಾನು ಇಲ್ಲಿಯೇ ನಿಂತಿದ್ದೇನೆ.

೭೪. ಋಭುವು ಹೇಳಿದನು—ದ್ವಿಜವರ್ಯನೇ! ನೀನು ಅಭಿಜ್ಞನೆಂದು ನಾನು ತಿಳಿದಿದ್ದೇನೆ. ಇಲ್ಲಿ ದೊರೆ ಯಾರು? ಇತರ ಜನರು ಯಾರು? ನನಗೆ ಹೇಳು.

ನಿದಾಘ ಉವಾಚ

ಯೋಽಯಂ ಗಜೇಂದ್ರಮುನ್ಮತ್ತಮದ್ರಿಶೃಂಗಸಮುಚ್ಛ್ರಯಂ ।
ಅಧಿರೂಢೋ ನರೇಂದ್ರೋಽಯಂ ಪರಿತೋ ಯಸ್ತಥೇತರಃ ॥ ೭೫ ॥

ಋಭುರುವಾಚ

ಏತೌ ಹಿ ಗಜರಾಜಾನೌ ದೃಷ್ಟೌ ಹಿ ಯುಗಪನ್ಮಯಾ ।
ಭವತಾ ನಿರ್ವಿಶೇಷೇಣ ಪೃಥಗೇವೋಪಲಕ್ಷಿತೌ ॥ ೭೬ ॥

ತತ್ಕಥ್ಯತಾಂ ಮಹಾಭಾಗ ವಿಶೇಷೋ ಭವತಾನಯೋಃ ।
ಜ್ಞಾತುಮಿಚ್ಛಾಮ್ಯಹಂ ಕೋಽತ್ರ ಗಜಃ ಕೋ ವಾ ನರಾಧಿಪಃ ॥ ೭೭ ॥

ನಿದಾಘ ಉವಾಚ

ಗಜೋ ಯೋಽಯಮಧೋ ಬ್ರಹ್ಮನ್ನುಪರ್ಯಸ್ಯೈಷ ಭೂಪತಿಃ ।
ವಾಹ್ಯವಾಹಕಸಂಬಂಧಂ ಕೋ ನ ಜಾನಾತಿ ವೈ ದ್ವಿಜ ॥ ೭೮ ॥

---

೭೫. ನಿದಾಘನು ಹೇಳಿದನು—ಪರ್ವತದ ಶಿಖರದಂತೆ ಎತ್ತರವಾಗಿರುವ ಮತ್ತವಾದ ಆನೆಯಮೇಲೆ ಕುಳಿತಿರುವವನೇ ದೊರೆಯು. ಅದರ ಸುತ್ತಲೂ ಇರುವವರೇ ಇತರರು.

೭೬. ಋಭುವು ಹೇಳಿದನು—ಈ ಆನೆ ಮತ್ತು ದೊರೆ ಇವರು ನನಗೆ ನಿರ್ವಿಶೇಷವಾಗಿ ಒಟ್ಟಿಗೆ ಕಾಣಿಸುತ್ತಿರುವರು. ನೀನಾದರೋ ಬೇರೆಯೆಂದು ತಿಳಿದಿರುವೆ.

೭೭. ಆದಕಾರಣ ಮಹಾಶಯ! ನೀನು ಇವೆರಡಕ್ಕೂ ವಿಶೇಷವನ್ನು ಹೇಳು. ಇಲ್ಲಿ ಆನೆ ಯಾವುದು? ದೊರೆ ಯಾರು? ಅದನ್ನು ತಿಳಿಯಲು ಅಪೇಕ್ಷೆಪಡುವೆನು.

೭೮. ನಿದಾಘನು ಹೇಳಿದನು—ದ್ವಿಜನೇ! ಕೆಳಗೆ ಕಾಣುವುದೇ ಆನೆಯು. ಇದರಮೇಲೆ ಕುಳಿತಿರುವವನೇ ರಾಜನು. ವಾಹ್ಯ ವಾಹಕಸಂಬಂಧವನ್ನು (ಹೊರಲ್ಪಟ್ಟದು ಮತ್ತು ಹೊತ್ತುಕೊಂಡಿರುವುದು ಇವೆರಡರ ಸಂಬಂಧ) ಯಾರುತಾನೇ ತಿಳಿಯಲಾರರು? ಎಲ್ಲರೂ ತಿಳಿಯುವರೆಂದು ಭಾವ-

ಋಭುರುವಾಚ

ಬ್ರಹ್ಮನ್ಯಥಾऽಹಂ ಜಾನೀಯಾಂ ತಥಾ ಮಾಮವಬೋಧಯ ।
ಅಧಸ್ತತ್ತ್ವಂ ವಿಭಕ್ತಂ ಕಿಂ ಕಿಂ ಚೋರ್ಧ್ವಮಭಿಧೀಯತೇ ॥ ೭೯ ॥

ಬ್ರಾಹ್ಮಣ ಉವಾಚ

ಇತ್ಯುಕ್ತಃ ಸಹಸಾऽऽರುಹ್ಯ ನಿದಾಘಃ ಪ್ರಾಹ ತಂ ಋಭುಂ ।
ಶ್ರೂಯತಾಂ ಕಥಯಾಮ್ಯೇಷ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೮೦ ॥

ಉಪರ್ಯಹಂ ಯಥಾ ರಾಜಾ ತ್ವಮಧಃ ಕುಂಜರೋ ಯಥಾ ।
ಅವಬೋಧಾಯ ತೇ ಬ್ರಹ್ಮನ್ದೃಷ್ಟಾಂತೋ ದರ್ಶಿತೋ ಮಯಾ ॥ ೮೧ ॥

ಋಭುರುವಾಚ

ತ್ವಂ ರಾಜೇವ ದ್ವಿಜಶ್ರೇಷ್ಠ ಸ್ಥಿತೋऽಹಂ ಗಜವದ್ಯದಿ ।
ತದೇವ ತ್ವಂ ಸಮಾಚಕ್ಷ್ವ ಕತಮಸ್ತ್ವಮಹಂ ತಥಾ ॥ ೮೨ ॥

---

೭೯. ಋಭುವು ಮಾತನಾಡಿದನು—ಬ್ರಾಹ್ಮಣನೇ! ನನಗೆ ತಿಳಿಯುವ ರೀತಿಯಲ್ಲಿ ಹೇಳು. ವಿಭಾಗಿಸಲ್ಪಟ್ಟು ಕೆಳಗಿರುವ ತತ್ತ್ವವು ಯಾವುದು? ಮೇಲಿನದು ಯಾವುದು? ವಿವರಿಸಿ ತಿಳಿಸು.

೮೦. ಬ್ರಾಹ್ಮಣನು ಹೇಳಿದನು—ಈ ಪ್ರಕಾರ ಹೇಳಿದ ಋಭುವಿನ ಮಾತನ್ನು ಕೇಳಿ ಕೂಡಲೇ ನಿದಾಘನು ಅವನಮೇಲೆ ಹತ್ತಿ ಕುಳಿತು ನೀನು ನನ್ನನ್ನು ಕೇಳಿರುವ ವಿಷಯವನ್ನು ಹೇಳುತ್ತೇನೆ ಕೇಳು.

೮೧. ಮೇಲೆ ನಾನಿರುವಂತೆ ರಾಜನಿದ್ದಾನೆ. ಕೆಳಗೆ ನೀನಿರುವಂತೆ. ಆನೆಯಿದೆ. ನಿನಗೆ ಚೆನ್ನಾಗಿ ತಿಳಿಯುವುದಕ್ಕಾಗಿ ದೃಷ್ಟಾಂತವನ್ನು ತೋರಿಸಿರುವೆನು.

೮೨. ಋಭುವು ಹೇಳಿದನು—ದ್ವಿಜವರ್ಯನೇ! ನೀನು ರಾಜನಂತೆಯೂ ನಾನು ಆನೆಯಂತೆಯೂ ಇರುವುದಾದರೆ ಅದನ್ನೇ ಹೇಳು. ನಾನು ಯಾರು? ನೀನು ಯಾರು ಎಂಬುದನ್ನು ವಿವರಿಸು.

### ಬ್ರಾಹ್ಮಣ ಉವಾಚ

ಇತ್ಯುಕ್ತಃ ಸತ್ವರಸ್ತಸ್ಯ ಚರಣಾವಭಿವಂದ್ಯ ಸಃ ।
ನಿದಾಘಃ ಪ್ರಾಹ ಭಗವನ್ನಾಚಾರ್ಯಸ್ತ್ವೃಭುರ್ಮಮ ॥ ೪೩ ॥

ನಾನ್ಯಸ್ಯಾದ್ವೈತಸಂಸ್ಕಾರಸಂಸ್ಕೃತಂ ಮಾನಸಂ ತಥಾ ।
ಯಥಾಚಾರ್ಯಸ್ಯ ತೇನ ತ್ವಾಂ ಮನ್ಯೇ ಪ್ರಾಪ್ತಮಹಂ ಗುರುಂ ॥ ೪೪ ॥

### ಋಭುರುವಾಚ

ತವೋಪದೇಶದಾನಾಯ ಪೂರ್ವಶುಶ್ರೂಷಣಾತ್ತವ ।
ಗುರುಸ್ನೇಹಾದೃಭುರ್ನಾಮ ನಿದಾಘಂ ಸಮುಪಾಗತಃ ॥ ೪೫ ॥

ತದೇತದುಪದಿಷ್ಟಂ ತೇ ಸಂಕ್ಷೇಪೇಣ ಮಹಾಮತೇ ।
ಪರಮಾರ್ಥಸಾರಭೂತಂ ಯತ್ತದದ್ವೈತಮಶೇಷತಃ ॥ ೪೬ ॥

---

೪೩. ಬ್ರಾಹ್ಮಣನು ಹೇಳಿದನು—ಈ ರೀತಿಯಾಗಿ ಋಭುವು ಹೇಳಿದುದನ್ನು ಕೇಳಿದ ಕೂಡಲೇ ಆ ನಿದಾಘನು ಅವನ ಪಾದಗಳಿಗೆ ನಮಸ್ಕರಿಸಿ, ಪೂಜ್ಯನೇ! ನೀನು ನನಗೆ ಗುರುವಾದ ಋಭುವೆಂದು ಹೇಳಿದನು.

೪೪. ಆಚಾರ್ಯರಾದ ಋಭುವಿಗಿರುವಂತೆ ಅದ್ವೈತಸಂಸ್ಕಾರದಿಂದ ಸಂಸ್ಕೃತವಾದ ಮನಸ್ಸು ಇನ್ನೊಬ್ಬರಿಗಿಲ್ಲ. ಆದುದರಿಂದ ನಾನು ಇಲ್ಲಿಗೆ ಬಂದಿರುವ ನಿನ್ನನ್ನು ಗುರುವೆಂದು ತಿಳಿದಿದ್ದೇನೆ.

೪೫. ಋಭುವು ಹೇಳಿದನು—ನಿದಾಘನೇ! ನೀನು ಹಿಂದೆ ಮಾಡಿದ ಗುರುಸೇವೆಯಿಂದ ಮತ್ತು ಗುರುಭಕ್ತಿಯಿಂದ ಪ್ರೀತನಾದ ನಿನ್ನ ಗುರುವಾದ ಋಭುವು ನಿನಗೆ ಉಪದೇಶಮಾಡುವುದಕ್ಕೋಸ್ಕರ ನಿದಾಘನನ್ನು ಕುರಿತು ಬಂದಿರುವನು.

೪೬. ಮಹಾಬುದ್ಧಿಶಾಲಿಯಾದ ನಿದಾಘನೇ! ಪರಮಾರ್ಥಸಾರಭೂತವಾದ ಅದ್ವೈತವನ್ನು ಸಂಪೂರ್ಣವಾಗಿ ಸಂಗ್ರಹಿಸಿ ಉಪದೇಶಿಸಿರುವೆನು.

## ಬ್ರಾಹ್ಮಣ ಉವಾಚ

ಏವಮುಕ್ತ್ವಾ ದದೌ ವಿದ್ಯಾಂ ನಿದಾಘಂ ಸ ಋಭುರ್ಗುರುಃ ।
ನಿದಾಘೋಽಪ್ಯುಪದೇಶೇನ ತೇನಾದ್ವೈತಪರೋಽಭವತ್ ॥ ೮೭ ॥

ಸರ್ವಭೂತಾನ್ಯಭೇದೇನ ದದೃಶೇ ಸ ತದಾತ್ಮನಃ ।
ತಥಾ ಬ್ರಹ್ಮತನೌ ಮುಕ್ತಿಮವಾಪ ಪರಮಾಂ ದ್ವಿಜಃ ॥ ೮೮ ॥

ತಥಾ ತ್ವಮಪಿ ಧರ್ಮಜ್ಞ ತುಲ್ಯಾತ್ಮರಿಪುಬಾಂಧವಃ ।
ಭವ ಸರ್ವಗತಂ ಜ್ಞಾನಮಾತ್ಮಾನಮವನೀಪತೇ ॥ ೮೯ ॥

ಸಿತನೀಲಾದಿಭೇದೇನ ಯಥೈಕಂ ದೃಶ್ಯತೇ ನಭಃ ।
ಭ್ರಾಂತದೃಷ್ಟಿಭಿರಾತ್ಮಾಽಪಿ ತಥೈಕಃಸನ್ಪೃಥಕ್ಪೃಥಕ್ ॥ ೯೦ ॥

---

೮೭. ಬ್ರಾಹ್ಮಣನು ಹೇಳಿದನು—ಗುರುವಾದ ಋಭುವು ಈ ಪ್ರಕಾರ ಹೇಳಿ ನಿದಾಘನಿಗೆ ವಿದ್ಯೆಯನ್ನು ಉಪದೇಶಿಸಿದನು. ನಿದಾಘನೂ ಸಹ ಆ ಉಪದೇದಿಂದ ಬ್ರಹ್ಮನು ಅದ್ವಿತೀಯನೆಂಬುದನ್ನು ತಿಳಿದನು.

೮೮. ಆ ದ್ವಿಜನು ಆಗ ಸಮಸ್ತ ಪ್ರಾಣಿಗಳಲ್ಲಿರುವ ಆತ್ಮನಿಗೂ ತನ್ನ ಅಂತರ್ಯಾಮಿಗೂ ಅಭೇದವನ್ನು ತಿಳಿದನು. ಹಾಗೆಯೇ ಬ್ರಹ್ಮಶರೀರದಲ್ಲಿ ಉತ್ತಮ ಮುಕ್ತಿಯನ್ನು ಹೊಂದಿದನು.

೮೯. ಧರ್ಮಜ್ಞಾನಿಯಾದ ದೊರೆಯೇ! ನೀನೂ ಸಹ ಹಾಗೆಯೇ ಸರ್ವಗತನಾದ ಆತ್ಮಸ್ವರೂಪವನ್ನು ತಿಳಿದು ತಾನು, ಶತ್ರು, ಬಂಧು ಇವರಲ್ಲಿ ಸಮದೃಷ್ಟಿಯುಳ್ಳವನಾಗು.

೯೦. ಒಂದೇ ಆಕಾಶವು ಬಿಳಿಯದು, ನೀಲಿಬಣ್ಣವುಳ್ಳದು ಮುಂತಾದ ಭೇದವುಳ್ಳದಾಗಿ ದೃಶ್ಯವಾಗುವಂತೆ ಭ್ರಾಂತರಿಗೆ ಆತ್ಮನು ಒಬ್ಬನಾದರೂ ಬೇರೆ ಬೇರೆಯಾಗಿ ತೋರುವನು.

ಏಕಸ್ಸಮಸ್ತಂ ಯದಿಹಾಸ್ತಿ ಕಿಂಚಿತ್
ತದಚ್ಯುತೋ ನಾಸ್ತಿ ಪರಂ ತತೋಽನ್ಯತ್ ।
ಸೋಽಹಂ ಸ ಚ ತ್ವಂ ಸ ಚ ಸರ್ವಮೇತತ್
ಆತ್ಮಾ ಸ್ವಯಂ ಭಾತ್ಯಪಭೇದಮೋಹಃ ॥ ೯೦ ॥

ಸನಂದನ ಉವಾಚ

ಇತೀರಿತಸ್ತೇನ ಸ ರಾಜವರ್ಯ
ಸ್ತತ್ಯಾಜ ಭೇದಂ ಪರಮಾರ್ಥದೃಷ್ಟಿಃ ।
ಸ ಚಾಪಿ ಜಾತಿಸ್ಮರಣಾವಬೋಧ
ಸ್ತತ್ರೈವ ಜನ್ಮನ್ಯಪವರ್ಗಮಾಪ ॥ ೯೨ ॥

ಪರಮಾರ್ಥಾಧ್ಯಾತ್ಮಮೇತತ್ತುಭ್ಯಮುಕ್ತಂ ಮುನೀಶ್ವರ ।
ಬ್ರಾಹ್ಮಣಕ್ಷತ್ರಿಯವಿಶಾಂ ಶ್ರೋತ್ವಾಣಾಂ ಚಾಪಿ ಮುಕ್ತಿದಂ ॥ ೯೩ ॥

---

೯೧. ಜಗತ್ತಿನಲ್ಲಿರುವ ಸಮಸ್ತವೂ ಅಚ್ಯುತನೊಬ್ಬನ ಅಧೀನವೇ ಆಗಿದೆ. ಅವನನ್ನು ಬಿಟ್ಟಿರುವುದಾವುದೂ ಇಲ್ಲ. ಅವನ ಹೊರತು ಉತ್ತಮವಸ್ತು ಮತ್ತೊಂದಿಲ್ಲ. ನಾನು ನೀನು ಮತ್ತು ಈ ಸಕಲ ವಸ್ತುಗಳಲ್ಲಿಯೂ ಅವನೇ ಇರುವನೆಂದು ತಿಳಿದು ಭೇದಮೋಹವನ್ನು ಕಳೆದುಕೊಂಡವನು ತನ್ನ ಸ್ವರೂಪ ಪ್ರಕಾಶವನ್ನು ಹೊಂದುವನು

೯೨. ಸನಂದನನು ಹೇಳಿದನು—ಈ ಪ್ರಕಾರ ಬ್ರಾಹ್ಮಣನು ಹೇಳಿದುದನ್ನು ಕೇಳಿ ಆ ನೃಪಶ್ರೇಷ್ಠನು ಪರಮಾರ್ಥದೃಷ್ಟಿಯುಳ್ಳವನಾಗಿ ಭೇದಮೋಹವನ್ನು ಬಿಟ್ಟನು. ಅವನೂ ಸಹ ಜನ್ಮಾಂತರ ಸ್ಮರಣೆಯಿಂದ ಜ್ಞಾನವುಳ್ಳವನಾಗಿ ಅದೇ ಜನ್ಮದಲ್ಲಿಯೇ ಮೋಕ್ಷವನ್ನು ಹೊಂದಿದನು.

೯೩. ಮುನಿಶ್ರೇಷ್ಠನಾದ ನಾರದನೇ! ಇದನ್ನು ಶ್ರವಣಮಾಡುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೂ ಸಹ ಮುಕ್ತಿಪ್ರದವಾದ, ಪರಮಾರ್ಥವಾದ, ಈ ಅಧ್ಯಾತ್ಮತತ್ವವನ್ನು ನಿನಗಾಗಿ ಉಪದೇಶಿಸಿರುತ್ತೇನೆ.

**ಯಥಾ ಪೃಷ್ಟಂ ತ್ವಯಾ ಬ್ರಹ್ಮಂಸ್ತಥಾ ತೇ ಗದಿತ**
**ಬ್ರಹ್ಮಜ್ಞಾನಮಿದಂ ಶುದ್ಧಂ ಕಿಮನ್ಯತ್ಕಥಯಾಮಿ ವೈ ॥ ೯೪ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ ದ್ವಿತೀಯಪಾದೇ ಏಕೋನಪಂಚಾಶತ್ತಮೋಽಧ್ಯಾಯಃ**

---

೯೪. ಬ್ರಹ್ಮಜ್ಞಾನಿಯೇ! ನೀನು ಕೇಳಿದ ಪ್ರಕಾರ ಈ ಶುದ್ಧವಾದ ಬ್ರಹ್ಮಜ್ಞಾನವನ್ನು ಉಪದೇಶಿಸಿರುವೆನು. ಇನ್ನು ನಿನಗೆ ಬೇರೆ ಏನನ್ನು ಹೇಳಲಿ.

ಇಂತು ಶ್ರೀನಾರದೀಯಪುರಾಣದೊಳು ಪೂರ್ವಭಾಗದ ಬೃಹದುಪಾಖ್ಯಾನವೆಂಬ ದ್ವಿತೀಯ ಪಾದದಲ್ಲಿ ನಲವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

### ಕಥಾಸಾರಾಂಶ

ಆ ರಾಜನು ಜಡಭರತನನ್ನು ಕುರಿತು ''ಕಪಿಲಋಷಿಯನ್ನು ತತ್ವವಿಷಯದಲ್ಲಿ ಪ್ರಶ್ನೆಮಾಡಿ ತಿಳಿಯಲು ಹೊರಟಿದ್ದೆನು, ನನ್ನ ಅದೃಷ್ಟದಿಂದ ಇಲ್ಲಿಯೇ ಮಹಾಜ್ಞಾನಿಯಾದ ನೀನು ದೊರಕಿದ್ದರಿಂದ ನೀನೇ ದಯಮಾಡಿ ತತ್ವವನ್ನು ನನಗೆ ಉಪದೇಶಮಾಡಬೇಕು'' ಎಂದು ಪ್ರಾರ್ಥಿಸಿದನು. ಬ್ರಾಹ್ಮಣನು ಅನೇಕವಿಧವಾದ ಶ್ರೇಯಸ್ಸುಗಳೆಂದು ತೋರುವುದನ್ನೆಲ್ಲಾ ನಿರ್ದೇಶಿಸಿ ಅವುಗಳೆಲ್ಲವೂ ನಶ್ವರವಾದುದು, ಶಾಶ್ವತವಾದ ಶ್ರೇಯಸ್ಸಲ್ಲ. ಭಗವದನುಗ್ರಹದಿಂದ ಲಭಿಸುವ ಆತ್ಮನ ನೈಜಸ್ವರೂಪಾನುಭವವೇ ಶಾಶ್ವತಶ್ರೇಯಸ್ಸೆಂಬುದನ್ನು ವಿಶದಪಡಿಸಿದನು. ಈ ತತ್ವ ವಿಷಯದಲ್ಲಿ ನಿದಾಘನೆಂಬ ಬ್ರಾಹ್ಮಣನಿಗೂ ಋಭುಮುನಿಗೂ ನಡೆದ ಸಂವಾದವನ್ನು ವಿಸ್ತಾರವಾಗಿ ಹೇಳಿದೆ.

# ಪಂಚಾಶತ್ತಮೋಽಧ್ಯಾಯಃ

---

ಸೂತ ಉವಾಚ

ಶ್ರುತ್ವಾ ಸನಂದನಸ್ಯೇತ್ಥಂ ವಚನಂ ನಾರದೋ ಮುನಿಃ ।
ಅಸಂತುಷ್ಟ ಇವ ಪ್ರಾಹ ಭ್ರಾತರಂ ತಂ ಸನಂದನಂ ॥ ೧ ॥

ನಾರದ ಉವಾಚ

ಭಗವನ್ಸರ್ವಮಾಖ್ಯಾತಂ ಯತ್ಪೃಷ್ಟಂ ಭವತೋ ಮಯಾ ।
ತಥಾಪಿ ನಾತ್ಮಾ ಪ್ರೀಯೇತ ಶೃಣ್ವನ್ಹರಿಕಥಾಂ ಮುಹುಃ ॥ ೨ ॥

ಶ್ರೂಯತೇ ವ್ಯಾಸಪುತ್ರಸ್ತು ಶುಕಃ ಪರಮಧರ್ಮವಿತ್ ।
ಸಿದ್ಧಿಂ ಸುಮಹತೀಂ ಪ್ರಾಪ್ತೋ ನಿರ್ವಿಣ್ಣೋಽನ್ತರಂ ಬಹಿಃ ॥ ೩ ॥

---

## ಐವತ್ತನೆಯ ಅಧ್ಯಾಯವು

೧. ಸೂತನು ಹೇಳಿದನು—ಈರೀತಿಯಾಗಿ ಸನಂದನನ ಮಾತನ್ನು ಕೇಳಿ ನಾರದಮುನಿಯು ಸಹೋದರನಾದ ಸನಂದನನನ್ನು ಕುರಿತು ಅತೃಪ್ತನಾದವನಂತೆ ಮಾತನಾಡಿದನು.

೨. ನಾರದನು ಹೇಳಿದನು—ಪೂಜ್ಯನೇ! ನಾನು ಕೇಳಿದುದನ್ನೆಲ್ಲಾ ನೀನು ಹೇಳಿರುವೆಯಾದರೂ ಬಾರಿಬಾರಿಗೂ ಆ ಹರಿಕಥೆಯನ್ನು ಕೇಳುತ್ತಿದ್ದರೂ ನನ್ನ ಮನಸ್ಸಿಗೆ ತೃಪ್ತಿಯಾಗಿಲ್ಲ.

೩. ವ್ಯಾಸಕುಮಾರನಾದ, ಉತ್ತಮ ಧರ್ಮಜ್ಞಾನವುಳ್ಳ ಶುಕನು ಬಾಹ್ಯಾಂತರಗಳಲ್ಲಿ ವಿರಕ್ತನಾಗಿ ಮಹತ್ತರವಾದ ಸಿದ್ಧಿಯನ್ನು ಹೊಂದಿದುದಾಗಿ ಕೇಳಿರುತ್ತೇನೆ.

ಬ್ರಹ್ಮನ್ಪುಂಸಸ್ತು ವಿಜ್ಞಾನಂ ಮಹತಾಂ ಸೇವನಂ ವಿನಾ ।
ನ ಜಾಯತೇ ಕಥಂ ಪ್ರಾಪ್ತೋ ಜ್ಞಾನಂ ವ್ಯಾಸಾತ್ಮಜಃ ಶಿಶುಃ ॥ ೪ ॥

ತಸ್ಯ ಜನ್ಮರಹಸ್ಯಂ ಮೇ ಕರ್ಮ ಚಾಪ್ಯಸ್ಯ ಶೃಣ್ವತೇ ।
ಸಮಾಖ್ಯಾಹಿ ಮಹಾಭಾಗ ಮೋಕ್ಷಶಾಸ್ತ್ರಾರ್ಥವಿದ್ಭವಾನ್ ॥ ೫ ॥

ಸನಂದನ ಉವಾಚ

ಶೃಣು ವಿಪ್ರ ಪ್ರವಕ್ಷ್ಯಾಮಿ ಶುಕೋತ್ಪತ್ತಿಂ ಸಮಾಸತಃ ।
ಯಾಂ ಶ್ರುತ್ವಾ ಬ್ರಹ್ಮತತ್ವಜ್ಞೋ ಜಾಯತೇ ಮಾನವೋ ಮುನೇ ॥ ೬ ॥

ನ ಹಾಯನೈರ್ನ ಪಲಿತೈರ್ನ ವಿತ್ತೇನ ನ ಬಂಧುಭಿಃ ।
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಃ ಸ ನೋ ಮಹಾನ್ ॥ ೭ ॥

---

೪. ಬಹ್ಮಜ್ಞಾನಿಯೇ! ಮನುಷ್ಯನಿಗೆ ದೊಡ್ಡವರ ಶುಶ್ರೂಷೆಮಾಡಿ ಅನುಗ್ರಹಪೂರ್ವಕವಾದ ಉಪದೇಶವನ್ನು ಪಡೆದ ಹೊರತು ವಿಜ್ಞಾನವುಂಟಾಗುವುದಿಲ್ಲ. ಹೀಗಿರುವಾಗ ಮಗುವಾದ ವ್ಯಾಸಪುತ್ರನು ಹೇಗೆ ಜ್ಞಾನವನ್ನು ಪಡೆದನು ?

೫. ಮಹಾಶಯನೇ! ನೀನು ಮೋಕ್ಷಪ್ರದವಾದ ಶಾಸ್ತ್ರಾರ್ಥತತ್ವವನ್ನು ತಿಳಿದವನು. ಆ ಶುಕನ ಜನ್ಮ ಮತ್ತು ಕರ್ಮಗಳ ರಹಸ್ಯವನ್ನು ಶ್ರೋತೃವಾದ ನನಗೆ ಹೇಳು.

೬. ಸನಂದನನು ಹೇಳಿದನು:—ಬ್ರಾಹ್ಮಣನಾದ ನಾರದಮುನಿಯೇ! ಮನುಜನು ಯಾವ ಶುಕೋತ್ಪತ್ತಿಯನ್ನು ಶ್ರವಣಮಾಡುವುದರಿಂದ ಬ್ರಹ್ಮತತ್ವಜ್ಞಾನಿಯಾಗುವನೋ ಅಂತಹ ಶುಕೋತ್ಪತ್ತಿಯನ್ನು ಸಂಕ್ಷೇಪವಾಗಿ ಹೇಳುತ್ತೇನೆ ಕೇಳು.

೭. ವಯಸ್ಸು, ನರೆತಕೂದಲು, ಹಣ, ಬಂಧು, ಇವುಗಳಿಂದ ಋಷಿಗಳು ಧರ್ಮವನ್ನು ಮಾಡಲಿಲ್ಲ. (ಧರ್ಮಜ್ಞಾನಗಳಿಗೆ ವಯಸ್ಸು ಮುಂತಾದುವು ಪ್ರಧಾನವಲ್ಲ.) ಅನೂಚಾನನಾದವನು ನಮಗೆ ದೊಡ್ಡವನು (ಪೂಜ್ಯನು).

ನಾರದ ಉವಾಚ

ಅನೂಚಾನಃ ಕಥಂ ಬ್ರಹ್ಮನ್ಪುಮಾನ್ಭವತಿ ಮಾನದ ।
ತಸ್ಯ ಕರ್ಮ ಸಮಾಚಕ್ಷ್ವ ಶ್ರೋತುಂ ಕೌತೂಹಲಂ ಮಮ ॥ ೮ ॥

ಸನಂದನ ಉವಾಚ

ಶೃಣು ನಾರದ ವಕ್ಷ್ಯಾಮಿ ಹ್ಯನೂಚಾನಸ್ಯ ಲಕ್ಷಣಂ ।
ಯದ್ಜ್ಞಾತ್ವಾ ಸಾಂಗವೇದಾನಾಮಭಿಜ್ಞೋ ಜಾಯತೇ ನರಃ ॥ ೯ ॥

ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಜ್ಯೋತಿಷಂ ತಥಾ ।
ಛಂದಃಶಾಸ್ತ್ರಂ ಷಡೇತಾನಿ ವೇದಾಂಗಾನಿ ವಿದುರ್ಬುಧಾಃ ॥ ೧೦ ॥

ಋಗ್ವೇದೋಽಥ ಯಜುರ್ವೇದಃ ಸಾಮವೇದೋ ಹ್ಯಥರ್ವಣಃ ।
ವೇದಾಶ್ಚತ್ವಾರ ಏವೈತೇ ಪ್ರೋಕ್ತಾ ಧರ್ಮನಿರೂಪಣೇ ॥ ೧೧ ॥

ಸಾಂಗಾನ್ವೇದಾನ್ಗುರೋರ್ಯಸ್ತು ಸಮಧೀತೇ ದ್ವಿಜೋತ್ತಮಃ ।
ಸೋಽನೂಚಾನಃ ಪ್ರಭವತಿ ನಾನ್ಯಥಾ ಗ್ರಂಥಕೋಟಿಭಿಃ ॥ ೧೨ ॥

---

೮. ನಾರದನು ಹೇಳಿದನು—ಜ್ಞಾನದಾತನಾದ ಸನಂದನನೇ! ಪುರುಷನು ಹೇಗೆ ಅನೂಚಾನನಾಗುವನು? ಅವನ ಕರ್ಮಗಳನ್ನು ತಿಳಿಯಲು ನನಗೆ ಕುತೂಹಲವುಂಟಾಗಿದೆ. ಅದನ್ನು ನನಗೆ ಹೇಳು.

೯. ಸನಂದನನು ಹೇಳಿದನು—ಮನುಷ್ಯನು ಯಾವುದನ್ನು ತಿಳಿದರೆ ಅಂಗಸಹಿತವಾದ ವೇದಗಳ ತತ್ವಜ್ಞಾನಿಯಾಗುವನೋ ಅಂತಹ ಅನೂಚಾನ ಲಕ್ಷಣವನ್ನು ಹೇಳುವೆನು; ನಾರದನೇ! ಕೇಳು.

೧೦. ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಜ್ಯೋತಿಷ ಮತ್ತು ಛಂದಃಶಾಸ್ತ್ರ ಎಂಬೀ ಆರು ವೇದಾಂಗಗಳೆಂದು ಜ್ಞಾನಿಗಳು ತಿಳಿದಿರುವರು.

೧೧. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂಬ ಈ ನಾಲ್ಕು ವೇದಗಳು ಧರ್ಮನಿರೂಪಣೆಗೆ ಸಾಧನವೆಂದು ಉಕ್ತವಾಗಿದೆ.

೧೨. ಗುರುಮುಖದಿಂದ ಸಾಂಗವೇದವನ್ನು ಅಧ್ಯಯನಮಾಡಿದ ದ್ವಿಜವರ್ಯನೇ ಅನೂಚಾನನೆನಿಸುವನು. ಅವುಗಳನ್ನು ಬಿಟ್ಟು ಬೇರೆ ಕೋಟ್ಯಂತರ ಗ್ರಂಥಗಳನ್ನು ಅಧ್ಯಯನಮಾಡಿದರೂ ಅನೂಚಾನನೆನಿಸುವುದಿಲ್ಲ.

ನಾರದ ಉವಾಚ

ಅಂಗಾನಾಂ ಲಕ್ಷಣಂ ಬ್ರೂಹಿ ವೇದಾನಾಂ ಚಾಪಿ ವಿಸ್ತರಾತ್ ।
ತ್ವಮಸ್ಮಾಸು ಮಹಾವಿಜ್ಞಃ ಸಾಂಗೇಷ್ವೇತೇಷು ಮಾನದ ॥ ೧೩ ॥

ಸನಂದನ ಉವಾಚ

ಪ್ರಶ್ನಭಾರೋಽಯಮತುಲಸ್ತ್ವಯಾ ಮಮ ಕೃತೋ ದ್ವಿಜ ।
ಸಂಕ್ಷೇಪಾತ್ಕಥಯಿಷ್ಯಾಮಿ ಸಾರಮೇಷಾಂ ಸುನಿಶ್ಚಿತಂ ॥ ೧೪ ॥

ಸ್ವರಃ ಪ್ರಧಾನಃ ಶಿಕ್ಷಾಯಾಂ ಕೀರ್ತಿತೋ ಮುನಿಭಿರ್ದ್ವಿಜೈಃ ।
ವೇದಾನಾಂ ವೇದವಿದ್ಭಿಸ್ತು ತಚ್ಛೃಣುಷ್ವ ವದಾಮಿ ತೇ ॥ ೧೫ ॥

ಆರ್ಚಿಕಂ ಗಾಥಿಕಂ ಚೈವ ಸಾಮಿಕಂ ಚ ಸ್ವರಾಂತರಂ ।
ಕೃತಾಂತೇ ಸ್ವರಶಾಸ್ತ್ರಾಣಾಂ ಪ್ರಯೋಕ್ತವ್ಯಂ ವಿಶೇಷತಃ ॥ ೧೬ ॥

ಏಕಾಂತರಃ ಸ್ವರೋ ಹ್ಯೃಕ್ಷು ಗಾಥಾಸು ದ್ವ್ಯಂತರಂ ಸ್ವರಃ ।
ಸಾಮಸು ತ್ರ್ಯಂತರಂ ವಿದ್ಯಾದೇತಾವತ್ಸ್ವರತೋಂತರಂ ॥ ೧೭ ॥

---

೧೩. ನಾರದನು ಹೇಳಿದನು—ಮಾನಪ್ರದನಾದ ಸನಂದನನೇ! ನಮ್ಮಗಳ ಪೈಕಿ ನೀನು ಈ ಸಾಂಗವೇದಗಳಲ್ಲಿ ಪ್ರಾಜ್ಞನು. ಆದುದರಿಂದ ಅಂಗ ಮತ್ತು ವೇದ ಇವುಗಳ ಲಕ್ಷಣಗಳನ್ನು ವಿಸ್ತಾರವಾಗಿ ಹೇಳು.

೧೪. ಸನಂದನನು ಹೇಳಿದನು—ದ್ವಿಜನೇ! ಅಸದೃಶವಾದ ಈ ಮಹಾ ಪ್ರಶ್ನೆಯು ನಿನ್ನಿಂದ ಮಾಡಲ್ಪಟ್ಟಿದೆ. ನಿರ್ಣೀತವಾದ ಈ ವೇದಾದಿಗಳ ಸಾರಾಂಶವನ್ನು ಸಂಕ್ಷೇಪವಾಗಿ ಹೇಳುವೆನು.

೧೫. ವೇದವೇತ್ತೃಗಳೂ ದ್ವಿಜರೂ ಆದ ಮುನಿಗಳಿಂದ ವೇದಶಿಕ್ಷೆಯಲ್ಲಿ ಸ್ವರವೇ ಪ್ರಧಾನವೆಂದು ಹೇಳಲ್ಪಟ್ಟಿದೆ. ಅದನ್ನು ಹೇಳುತ್ತೇನೆ ಕೇಳು

೧೬. ಸ್ವರಶಾಸ್ತ್ರಗಳನ್ನು ವಿಶೇಷವಾಗಿ ವಿಮರ್ಶೆಮಾಡಿದರೆ ಆರ್ಚಿಕ, ಗಾಥಿಕ, ಸಾಮಿಕ ಎಂಬ ಸ್ವರಾಂತರಗಳನ್ನು ಋಗ್ಗಾಥಾಸಾಮಗಳಲ್ಲಿ ವಿಶೇಷವಾಗಿ ಪ್ರಯೋಗಿಸಬೇಕೆಂದು ಸಿದ್ಧಾಂತವಾಗುವುದು.

೧೭. ಋಕ್ಕುಗಳಲ್ಲಿ ಏಕಾಂತರಸ್ವರವು, ಗಾಥೆಯಲ್ಲಿ ದ್ವ್ಯಂತರಸ್ವರವು. ಸಾಮಗಳಲ್ಲಿ ತ್ರ್ಯಂತರಸ್ವರ ಎಂಬುದಾಗಿ ಸ್ವರದ ವ್ಯವಧಾನಗಳನ್ನು ತಿಳಿಯಬೇಕು.

ಋಕ್ಸಾಮಯಜುರಂಗಾನಿ ಯೇ ಯಜ್ಞೇಷು ಪ್ರಯುಂಜತೇ ।
ಅವಿಜ್ಞಾನಾದ್ಧಿ ಶಾಸ್ತ್ರಾಣಾಂ ತೇಷಾಂ ಭವತಿ ವಿಸ್ವರಃ ॥ ೧೮ ॥

ಮಂತ್ರೋ ಹೀನಃ ಸ್ವರತೋ ವರ್ಣತೋ ವಾ
ಮಿಥ್ಯಾಪ್ರಯುಕ್ತೋ ನ ತಮರ್ಥಮಾಹ ।
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ
ಯಥೇಂದ್ರಶತ್ರುಃ† ಸ್ವರತೋಽಪರಾಧಾತ್ ॥ ೧೯ ॥

---

೧೮. ಯಜ್ಞಾಂಗಗಳಾದ ಋಕ್ಕು, ಸಾಮ, ಯಜುರ್ವೇದ ಇವುಗಳನ್ನು ಯಜ್ಞದಲ್ಲಿ ವಿನಿಯೋಗಿಸುವವರಿಗೆ ಸ್ವರಶಾಸ್ತ್ರವಾದ ಶಿಕ್ಷೆಯ ಜ್ಞಾನವಿಲ್ಲದಿದ್ದರೆ ವಿಸ್ವರವಾಗುವುದು.

೧೯. ಮಂತ್ರವು ಸ್ವರ, ವರ್ಣಹೀನವಾಗಿಯೂ, ತಪ್ಪಾಗಿಯೂ ಪ್ರಯೋಗಿಸಲ್ಪಟ್ಟರೆ ಅದು ತನ್ನ ನೈಜವಾದ ಅರ್ಥವನ್ನು ಬೋಧಿಸಲಾರದು. ಅದೇ ವಜ್ರಾಯುಧವಾಗಿ ಪರಿಣಮಿಸಿ ಯಜಮಾನನನ್ನು ನಾಶಮಾಡುವುದು. ಹೇಗೆಂದರೆ "ಸ್ವಾಹೇಂದ್ರಶತ್ರುರ್ವರ್ಧಸ್ವ" ಎಂಬ ವಾಕ್ಯದಲ್ಲಿನ †ಇಂದ್ರಶತ್ರು ಎಂಬ ಪದವನ್ನು ತಪ್ಪುಸ್ವರದಿಂದ ಹೇಳಿದ್ದಕ್ಕಾಗಿ ವಕ್ತ್ರಭಿಪ್ರಾಯಕ್ಕೆ ವಿರುದ್ಧವಾಗಿ ಇಂದ್ರನೇ ವೃತ್ರಾಸುರನಿಗೆ ಶತ್ರುವಾಗಿ ಪರಿಣಮಿಸಿ ವೃತ್ರಾಸುರನು ಹಾಳಾದನು.

---

† "ಇಂದ್ರಶತ್ರುಃ" ಎಂಬ ಪದಕ್ಕೆ ತತ್ಪುರುಷ ಅಥವಾ ಬಹುವ್ರೀಹಿ ಎಂಬುದಾಗಿ ಎರಡು ಸಮಾಸಗಳನ್ನು ವಿವಕ್ಷೆಮಾಡಬಹುದು. ತತ್ಪುರುಷಸಮಾಸವನ್ನಾಶ್ರಯಿಸಿದರೆ ಇಂದ್ರಸ್ಯ ಶತ್ರುಃ=ಇಂದ್ರನಿಗೆ ಶತ್ರುವು ಎಂದು ಅರ್ಥವಾಗುತ್ತದೆ. ಬಹುವ್ರೀಹಿಸಮಾಸವನ್ನಾಶ್ರಯಿಸಿದರೆ ಇಂದ್ರಃ ಶತ್ರುಃ ಯಸ್ಯ ಸಃ= ಇಂದ್ರನೇ ಶತ್ರುವಾಗಿ ಉಳ್ಳವನು ಎಂದು ಅರ್ಥವಾಗುತ್ತದೆ. ವೇದವಾಕ್ಯದಲ್ಲಿ ಸಮಾಸಪದದ ಸ್ವರವನ್ನು ನೋಡಿಕೊಂಡು ಅದಕ್ಕನುಸಾರವಾಗಿ ಇಂತಹ ಸಮಾಸವೆಂದು ನಿರ್ಣಯಿಸಬೇಕು ಎಂದರೆ ಸಮಾಸದ ಪೂರ್ವಪದವು ಉದಾತ್ತಸ್ವರಯುಕ್ತವಾಗಿದ್ದರೆ ಬಹುವ್ರೀಹಿಸಮಾಸವನ್ನೂ ಉತ್ತರಪದವು ಉದಾತ್ತವಾಗಿದ್ದರೆ ತತ್ಪುರುಷಸಮಾಸವನ್ನೂ ಹೇಳಬೇಕೆಂದು ಶಾಬ್ದಿಕ ವಿಧಾನವಿದೆ. ಪ್ರಕೃತ

**ಉರಃ ಕಂಠಃ ಶಿರಶ್ಚೈವ ಸ್ಥಾನಾನಿ ತ್ರೀಣಿ ವಾಙ್ಮಯೇ ।**
**ಸವನಾನ್ಯಾಹುರೇತಾನಿ ಸಾಮ್ನಶ್ಚಾಪ್ಯಧರೋತ್ತರೇ ॥ ೨೦ ॥**

**ಉರಃ ಸಪ್ತವಿಚಾರಂ ಸ್ಯಾತ್ತಥಾ ಕಂಠಸ್ತಥಾ ಶಿರಃ ।**
**ನ ಚ ಸಪ್ತೋರಸಿ ವ್ಯಕ್ತಾಸ್ತಥಾ ಪ್ರಾವಚನೋ ವಿಧಿಃ ॥ ೨೧ ॥**

**ಕಠಕಾಲಾಪ್ರವೃತ್ತೇಷು ತೈತ್ತಿರೀಯಾಹ್ವರಕೇಷು ಚ ।**
**ಋಗ್ವೇದೇ ಸಾಮವೇದೇ ಚ ವಕ್ತವ್ಯಃ ಪ್ರಥಮಃ ಸ್ವರಃ ॥ ೨೨ ॥**

---

೨೦. ಎದೆ, ಕಂಠ, ಶಿರಸ್ಸು ಎಂಬ ಮೂರು ಶಬ್ದೋಚ್ಚಾರಣಸ್ಥಾನಗಳನ್ನು ಕ್ರಮವಾಗಿ ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನ ಎಂಬುದಾಗಿ ಹೇಳುತ್ತಾರೆ. ಅಧರೋತ್ತರಭಾವದಿಂದಿರುವ ಸಪ್ತಸ್ವರಾತ್ಮಕವಾದ ಸಾಮಕ್ಕೂ ಸಹ ಸ್ಥಾನತ್ರಯ, ಸವನತ್ರಯ ವ್ಯವಹಾರಗಳುಂಟು.

೨೧. ಉರಸ್ಸು (ಎದೆ) ಕಂಠ ಮತ್ತು ತಲೆ ಇವುಗಳು ಏಳು ಸ್ವರಗಳ ವಿವರಣೆಯುಳ್ಳದಾಗುವುದು. ಎದೆಯಲ್ಲಿ ಮಂದ್ರ ಮತ್ತು ಅತಿಸ್ವಾರಗಳಿಗೆ ಚೆನ್ನಾಗಿ ಅಭಿವ್ಯಕ್ತಿಯಿಲ್ಲವಾದರೂ ಅಧ್ಯಯನಾಧ್ಯಾಪನಕಾಲಗಳಲ್ಲಿ ಅವನ್ನೂ ಯೋಜನೆಮಾಡಬೇಕೆಂಬುದು ವಿಹಿತವು.

೨೨. ಕಠ, ಕಾಲಾ, ಪ್ರವೃತ್ತ, ತೈತ್ತಿರೀಯ, ಆಹ್ವರಕ, ಋಗ್ವೇದ ಮತ್ತು ಸಾಮವೇದ ಇವುಗಳಲ್ಲಿ ಪ್ರಥಮಸ್ವರವನ್ನು ಹೇಳಬೇಕು.

---

†"ಸ್ವಾಹೇಂದ್ರಶತ್ರುರ್ವರ್ಧಸ್ವ" ಎಂಬ ವಾಕ್ಯದಲ್ಲಿನ ಇಂದ್ರಶತ್ರು ಎಂಬ ಸಮಾಸದ ಇಂದ್ರಪದವನ್ನು ಉದಾತ್ತಯುಕ್ತವಾಗಿ ಹೇಳಿದುದರಿಂದ ಅದು ಬಹುವ್ರೀಹಿ ಸಮಾಸವಾಗಿ ಮೇಲ್ಕಂಡಂತೆ ವೃತ್ರಾಸುರನಿಗೆ ಇಂದ್ರನೇ ಶತ್ರು ಎಂದು ಅರ್ಥವಾಗಿಇಂದ್ರನಿಂದಲೇ ವೃತ್ರಾಸುರನು ಹಾಳಾದನು. ಇಂದ್ರಶಬ್ಧವನ್ನು ಉದಾತ್ತ ಸ್ವರಾಂತವಾಗಿ ಹೇಳದೇ ಅನುದಾತ್ತವಾಗಿ ಹೇಳಿ ಉತ್ತರಪದವನ್ನು ಉದಾತ್ತವಾಗಿ ಹೇಳಿದ್ದರೆ ತತ್ಪುರುಷಸಮಾಸವಾಗುತ್ತಿತ್ತು. ಆಗ ವಕ್ತ್ರಭಿಪ್ರಾಯಾನುಸಾರವಾಗಿ ಅರ್ಥವಾಗುತ್ತಿತ್ತು. ಇಂತಹ ಅನರ್ಥಕ್ಕೆ ಅವಕಾಶವಾಗುತ್ತಿರಲಿಲ್ಲ.

ಋಗ್ವೇದಸ್ತು ದ್ವಿತೀಯೇನ ತೃತೀಯೇನ ಚ ವರ್ತತೇ ।
ಉಚ್ಚಮಧ್ಯಮಸಂಘಾತಃ ಸ್ವರೋ ಭವತಿ ಪಾರ್ಥಿವಃ ॥ ೨೩ ॥

ತೃತೀಯಪ್ರಥಮಕ್ರುಷ್ಟಾನ್ ಕುರ್ವಂತ್ಯಾಹ್ವರಕಾಃ ಸ್ವರಾನ್ ।
ದ್ವಿತೀಯಾದ್ಯಾಂಸ್ತು ಮಂದ್ರಾಂತಾಂಸ್ತೈತ್ತಿರೀಯಾಶ್ಚತುಃಸ್ವರಾನ್ ॥ ೨೪ ॥

ಪ್ರಥಮಶ್ಚ ದ್ವಿತೀಯಶ್ಚ ತೃತೀಯೋಽಥ ಚತುರ್ಥಕಃ ।
ಮಂದ್ರಃ ಕ್ರುಷ್ಟೋ ಹ್ಯತಿಸ್ವಾರ ಏತಾನ್ಕುರ್ವಂತಿ ಸಾಮಗಾಃ ॥ ೨೫ ॥

ದ್ವಿತೀಯಪ್ರಥಮಾವೇತೌ ತಾಂಡಿಭಾಲ್ಲವಿನಾಂ ಸ್ವರೌ ।
ತಥಾ ಶಾತಪಥಾವೇತೌ ಸ್ವರೌ ವಾಜಸನೇಯಿನಾಂ ॥ ೨೬ ॥

ಏತೇಽವಿಶೇಷತಃ ಪ್ರೋಕ್ತಾಃ ಸ್ವರಾ ವೈ ಸಾರ್ವವೈದಿಕಾಃ ।
ಇತ್ಯೇತಚ್ಚರಿತಂ ಸರ್ವಂ ಸ್ವರಾಣಾಂ ಸಾರ್ವವೈದಿಕಂ ॥ ೨೭ ॥

---

೨೩. ಋಗ್ವೇದದಲ್ಲಿ ದ್ವಿತೀಯ, ತೃತೀಯಸ್ವರವೂ ಅನುವೃತ್ತವಾಗುವುದು. ಕ್ರುಷ್ಟಪ್ರಥಮಸ್ವರಗಳ ಸಮುದಾಯವು ಲೌಕಿಕವ್ಯವಹಾರದಲ್ಲಿ ಸ್ವರವಾಗುವುದು.

೨೪. ಆಹ್ವರಕ ಎಂದರೆ ಯಜುರ್ವೇದೀಯ ಚರಕಾಂತರ್ಗತಶಾಖೀಯರು ತೃತೀಯ, ಪ್ರಥಮ, ಕ್ರುಷ್ಟಸ್ವರಾನುಸಾರವಾಗಿ ಪಠನೆಮಾಡುವರು. ತೈತ್ತಿರೀಯಶಾಖೀಯರು ದ್ವಿತೀಯಾದಿ ಮಂದ್ರಾಂತಸ್ವರಾನುಸಾರವಾಗಿ ಪಾಠಮಾಡುವರು.

೨೫. ಸಾಮಶಾಖಿಗಳು ಪ್ರಥಮ, ದ್ವಿತೀಯ, ಚತುರ್ಥ, ಮಂದ್ರ, ಕ್ರುಷ್ಟ ಮತ್ತು ಅತಿಸ್ವಾರ ಎಂಬುದಾಗಿ ಸಪ್ತಸ್ವರಗಳನ್ನೂ ಉಪಯೋಗಿಸುವರು.

೨೬. ಉಕ್ತವಾದ ಎರಡನೆಯ ಮತ್ತು ಮೊದಲನೆಯ ಸ್ವರಗಳನ್ನು ತಾಂಡಿ, ಭಾಲ್ಲವಿಶಾಖೀಯರು ಉಪಯೋಗಿಸಿರುವರು, ವಾಜಸನೇಯ ಶಾಖಿಗಳಿಗೆ ಶತಪಥಶ್ರುತಿಯಲ್ಲಿ ಉಪಯೋಗಿಸತಕ್ಕ ಸ್ವರಗಳು ಉಕ್ತವಾಗಿವೆ.

೨೭. ಇವು ಸರ್ವವೇದಸಂಬಂಧಿಯಾದ ಸ್ವರಗಳ ಸಾಮಾನ್ಯಸ್ವರೂಪವು. ಅದನ್ನು ವಿಶೇಷವಾಗಿ ವಿವರಿಸಿಲ್ಲ. ಈರೀತಿ ಸಂಕ್ಷೇಪವಾಗಿ ಉಕ್ತವಾದ ಸ್ವರಗಳ ಸ್ವರೂಪವೇ ವೇದಗಳ ಸರ್ವಸ್ವವೆಂದು ತಿಳಿಯಬೇಕು.

**ಸಾಮವೇದೇ ತು ವಕ್ಷ್ಯಾಮಿ ಸ್ವರಾಣಾಂ ಚರಿತಂ ಯಥಾ ।**
**ಅಲ್ಪಗ್ರಂಥಂ ಪ್ರಭೂತಾರ್ಥಂ ಶ್ರಾವ್ಯಂ ವೇದಾಂಗಮುತ್ತಮಂ ॥ ೨೮ ॥**

**ತಾನರಾಗಸ್ವರಗ್ರಾಮಮೂರ್ಛನಾನಾಂ ತು ಲಕ್ಷಣಂ ।**
**ಪವಿತ್ರಂ ಪಾವನಂ ಪುಣ್ಯಂ ಯಥಾ ತುಭ್ಯಂ ಪ್ರಕೀರ್ತಿತಂ ॥ ೨೯ ॥**

**ಶಿಕ್ಷಾಮಾಹುರ್ದ್ವಿಜಾತೀನಾಮೃಗ್ಯಜುಸ್ಸಾಮಲಕ್ಷಣಂ ।**
**ಸಪ್ತ ಸ್ವರಾಸ್ತ್ರಯೋ ಗ್ರಾಮಾ ಮೂರ್ಛನಾಸ್ತ್ವೇಕವಿಂಶತಿಃ ॥ ೩೦ ॥**

**ತಾನ ಏಕೋನಪಂಚಾಶದಿತ್ಯೇತತ್ಸ್ವರಮಂಡಲಂ ।**
***ಷಡ್ಜಶ್ಚ ಋಷಭಶ್ಚೈವ ಗಾಂಧಾರೋ ಮಧ್ಯಮಸ್ತಥಾ ॥ ೩೧ ॥**

**ಪಂಚಮೋ ಧೈವತಶ್ಚೈವ ನಿಷಾದಃ ಸಪ್ತಮಃ ಸ್ವರಃ ।**
**ಷಡ್ಜಮಧ್ಯಮಗಾಂಧಾರಾಸ್ತ್ರಯೋ ಗ್ರಾಮಾಃ ಪ್ರಕೀರ್ತಿತಾಃ ॥ ೩೨ ॥**

---

೨೮. ಸಾಮವೇದಕ್ಕೆ ಸಂಬಂಧಿಸಿದ ಸ್ವರಗಳ ಸ್ವರೂಪವನ್ನು ಹೇಳುವೆನು—ಬಹು ಅರ್ಥಗಳಿಂದೊಡಗೂಡಿದ, ಸ್ವಲ್ಪ ಶಬ್ದಗಳಿಂದ ಕೂಡಿದ ಸಾಮವೇದಭಾಗವು ಉತ್ತಮವಾದುದು.

೨೯. ತಾನ, ರಾಗ, ಸ್ವರ, ಗ್ರಾಮ, ಮತ್ತು ಮೂರ್ಛನಾ ಇವುಗಳ ಸ್ವರೂಪವು ಪವಿತ್ರವು, ಶುದ್ಧಿಕರವು ಮತ್ತು ಪುಣ್ಯಪ್ರದವು. ಅದನ್ನು ನಿನಗೆ ಹೇಳುತ್ತೇನೆ ಕೇಳು.

೩೦. ದ್ವಿಜಾತಿ ಎಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಅಧ್ಯಯನ ಮಾಡುವ ಋಗ್ವೇದ, ಯಜುರ್ವೇದ ಮತ್ತು ಸಾಮವೇದ ಇವುಗಳ ಸ್ವರೂಪವನ್ನು ವಿವರಿಸುವ ಶಾಸ್ತ್ರವನ್ನು ಶಿಕ್ಷೆಯನ್ನುವರು.

೩೦-೩೧. ಸ್ವರವರ್ಗವು ಏಳು ಸ್ವರಗಳು, ಮೂರು ಗ್ರಾಮಗಳು, ಇಪ್ಪತ್ತೊಂದು ಮೂರ್ಛನೆಗಳು, ನಲವತ್ತೊಂಭತ್ತು ತಾನಗಳು ಇವುಗಳನ್ನೊಳಗೊಂಡಿವೆ.

೩೧-೩೨. *ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ ಮತ್ತು ನಿಷಾದ ಇವು ಏಳು ಸ್ವರಗಳು, ಷಡ್ಜ, ಮಧ್ಯಮ, ಗಾಂಧಾರಗಳೆಂಬ ಮೂರು ಗ್ರಾಮಗಳು ಎಂದು ಹೇಳಲ್ಪಟ್ಟಿವೆ.

---

*ಇಲ್ಲಿ ಹೇಳಿರುವ ಷಡ್ಜ ಮುಂತಾದ ಸ್ವರಗಳು ಲೌಕಿಕವಾದ ಸಂಗೀತ ಮತ್ತು ವೇದ ಇವೆರಡರಲ್ಲಿಯೂ ಉಪಯೋಗಿಸತಕ್ಕವುಗಳು. ಸಂಗೀತದಲ್ಲಿ

ಭೂರ್ಲೋಕಾಜ್ಜಾಯತೇ ಷಡ್ಜೋ ಭುವರ್ಲೋಕಾಚ್ಚ ಮಧ್ಯಮಃ ।
ಸ್ವರ್ಗಾನ್ನಾನ್ಯತ್ರ ಗಾಂಧಾರೋ ಗ್ರಾಮಸ್ಥಾನಾನಿ ತ್ರೀಣಿ ಹಿ ॥ ೩೩ ॥

ಸ್ವರಾಣಾಂ ಚ ವಿಶೇಷೇಣ ಗ್ರಾಮರಾಗಾ ಇತಿ ಸ್ಮೃತಾಃ ।
ವಿಂಶತಿರ್ಮಧ್ಯಮಗ್ರಾಮೇ ಷಡ್ಜಗ್ರಾಮೇ ಚತುರ್ದಶ ॥ ೩೪ ॥

ತಾನಾನ್ಪಂಚದಶೇಚ್ಛಂತಿ ಗಾಂಧಾರಗ್ರಾಮಮಾಶ್ರಿತಾನ್ ।
ನದೀ ವಿಶಾಲಾ ಸುಮುಖೀ ಚಿತ್ರಾ ಚಿತ್ರವತೀ ಸುಖಾ ॥ ೩೫ ॥

ಬಲಾ ಚಾಪ್ಯಥ ವಿಜ್ಞೇಯಾ ದೇವಾನಾಂ ಸಪ್ತ ಮೂರ್ಛನಾಃ ।
ಆಪ್ಯಾಯನೀ ವಿಶ್ವಭೃತಾ ಚಂದ್ರಾ ಹೈಮಾ ಕಪರ್ದಿನೀ ॥ ೩೬ ॥

ಮೈತ್ರೀ ಚ ಬಾರ್ಹತೀ ಚೈವ ಪಿತೄಣಾಂ ಸಪ್ತ ಮೂರ್ಛನಾಃ ।
ಷಡ್ಜೇ ತೂತ್ತರಮಂದ್ರಾ ಸ್ಯಾದೃಷಭೇ ಚಾಭಿರುದ್ಗತಾ ॥ ೩೭ ॥

---

೩೩. ಗಾಂಧಾರಾನುಸಾರವಾಗಿ ಭೂಲೋಕದಲ್ಲಿ ಷಡ್ಜ, ಭುವರ್ಲೋಕದಲ್ಲಿ ಮಧ್ಯಮ, ಸ್ವರ್ಗಲೋಕದಲ್ಲಿ ಗಾಂಧಾರ ಎಂಬೀ ಮೂರು ಗ್ರಾಮಸ್ಥಾನಗಳ ಅವಸ್ಥಾನವು ಸ್ಫುಟವಾಗಿ ಉಪಲಬ್ಧವಾಗುತ್ತದೆ.

೩೪-೩೫. ಸ್ವರಗಳ ರಾಗಪ್ರಕಾರದಿಂದ ಗ್ರಾಮರಾಗಗಳನ್ನು ನಿರ್ಣಯಿಸಬೇಕು. ಮಧ್ಯಮಗ್ರಾಮದಲ್ಲಿ ಇಪ್ಪತ್ತು, ಷಡ್ಜಗ್ರಾಮದಲ್ಲಿ ಹದಿನಾಲ್ಕು, ಗಾಂಧಾರಗ್ರಾಮದಲ್ಲಿ ಹದಿನೈದು ಹೀಗೆ ಒಟ್ಟು ನಲವತ್ತೊಂಭತ್ತು ತಾನಗಳು ಉಕ್ತವಾಗಿವೆ.

೩೫-೩೬. ನಂದೀ, ಸುಮುಖೀ, ಚಿತ್ರಾ, ಚಿತ್ರವತೀ, ಸುಖಾ ಮತ್ತು ಬಲಾ, ಎಂಬ ಏಳು ದೇವತೆಗಳ ಮೂರ್ಛನೆಗಳೆಂದು ತಿಳಿಯಬೇಕು. (ಮೂರ್ಛನೆಯೆಂದರೆ ಕ್ರಮವಾಗಿ ಸಪ್ತಸ್ವರಗಳ ಆರೋಹಣಾವರೋಹಣಗಳು).

೩೬-೩೭. ಅಪ್ಯಾಯನೀ, ವಿಶ್ವಭೃತಾ, ಚಂದ್ರಾ, ಹೈಮಾ, ಕಪರ್ದಿನೀ ಮೈತ್ರೀ, ಮತ್ತು ಬಾರ್ಹತೀ ಎಂಬ ಏಳು ಪಿತೃಗಳ ಮೂರ್ಛನೆಗಳು.

---

*ಪ್ರಯೋಗಸೌಕರ್ಯಕ್ಕಾಗಿ ಅವುಗಳ ಮೊದಲನೆಯ ಅಕ್ಷರಗಳನ್ನು ಮಾತ್ರ ಪರಿಗ್ರಹಿಸಿ ''ಸ, ರಿ, ಗ, ಮ, ಪ, ಧ, ನಿ'' ಎಂಬುದಾಗಿ ವ್ಯವಹರಿಸುವರು.

ಅಶ್ವಕ್ರಾಂತಾ ತು ಗಾಂಧಾರೇ ತೃತೀಯಾ ಮೂರ್ಛನಾ ಸ್ಮೃತಾ ।
ಮಧ್ಯಮೇ ಖಲು ಸೌವೀರಾ ಹೃಷ್ಯಕಾ ಪಂಚಮೇ ಸ್ವರೇ ॥ ೩೮ ॥

ಧೈವತೇ ಚಾಪಿ ವಿಜ್ಞೇಯಾ ಮೂರ್ಛನಾ ತೂತ್ತರಾಯತಾ ।
ನಿಷಾದಾದ್ರಜನೀ ವಿದ್ಯಾದೃಷೀಣಾಂ ಸಪ್ತ ಮೂರ್ಛನಾಃ ॥ ೩೯ ॥

ಉಪಜೀವಂತಿ ಗಂಧರ್ವಾ ದೇವಾನಾಂ ಸಪ್ತ ಮೂರ್ಛನಾಃ ।
ಪಿತೄಣಾಂ ಮೂರ್ಛನಾಃ ಸಪ್ತ ತಥಾ ಯಕ್ಷಾ ನ ಸಂಶಯಃ ॥ ೪೦ ॥

ಋಷೀಣಾಂ ಮೂರ್ಛನಾಃ ಸಪ್ತ ಯಾಸ್ತ್ವಿಮಾ ಲೌಕಿಕಾಃ ಸ್ಮೃತಾಃ ।
ಷಡ್ಜಃ ಪ್ರೀಣಾತಿ ವೈ ದೇವಾನೃಷೀನ್ಪ್ರೀಣಾತಿ ಚರ್ಷಭಃ ॥ ೪೧ ॥

ಪಿತೄನ್ಪ್ರೀಣಾತಿ ಗಾಂಧಾರೋ ಗಂಧರ್ವಾನ್ಮಧ್ಯಮಸ್ವರಃ ।
ದೇವಾನ್ಪಿತೄನೃಷೀಂಶ್ಚೈವ ಸ್ವರಃ ಪ್ರೀಣಾತಿ ಪಂಚಮಃ ।
ಯಕ್ಷಾನ್ನಿಷಾದಃ ಪ್ರೀಣಾತಿ ಭೂತಗ್ರಾಮಂ ಚ ಧೈವತಃ ॥ ೪೨ ॥

---

೩೭–೩೯. ಷಡ್ಜದಲ್ಲಿ ಉತ್ತರಮಂದ್ರವು, ಋಷಭದಲ್ಲಿ ಅಭಿರುದ್ಗತೆಯು, ಗಾಂಧಾರದಲ್ಲಿ ಅಶ್ವಕ್ರಾಂತಾ, ಮಧ್ಯಮದಲ್ಲಿ ಸೌವೀರವು, ಪಂಚಮ ಮತ್ತು ಧೈವತಗಳಲ್ಲಿ ಉತ್ತರಾಯತಾ, ನಿಷಾದದಲ್ಲಿ ರಜನೀ ಎಂಬ ಏಳನ್ನು ಋಷಿಗಳ ಮೂರ್ಛನೆಗಳೆಂದು ತಿಳಿಯಬೇಕು.

೪೦–೪೧. ಗಂಧರ್ವರು ದೇವತೆಗಳ ಸಪ್ತ ಮೂರ್ಛನೆಗಳನ್ನೂ, ಯಕ್ಷರು ಪಿತೃಗಳ ಸಪ್ತಮೂರ್ಛನೆಗಳನ್ನೂ, ಮನುಷ್ಯರು ಋಷಿಗಳ ಸಪ್ತ ಮೂರ್ಛನೆಗಳನ್ನೂ ಅನುಸರಿಸುವರು.

೪೧-೪೨. ಷಡ್ಜವು ದೇವತೆಗಳನ್ನು, ಋಷಭವು ಋಷಿಗಳನ್ನೂ, ಗಾಂಧಾರವು ಪಿತೃಗಳನ್ನೂ, ಮಧ್ಯಮ ಸ್ವರವು ಗಂಧರ್ವರನ್ನೂ, ಪಂಚಮ ಸ್ವರವು ದೇವತೆ ಪಿತೃ ಮತ್ತು ಋಷಿ ಇವರನ್ನೂ, ನಿಷಾದಸ್ವರವು ಯಕ್ಷರನ್ನೂ, ಧೈವತವು ಪ್ರಾಣಿಸಾಮಾನ್ಯವನ್ನೂ ಸಂತೋಷಪಡಿಸುತ್ತವೆ.

ಗಾನಸ್ಯ ತು ದಶವಿಧಾ ಗುಣವೃತ್ತಿಸ್ತು ತದ್ಯಥಾ　　　　॥ ೪೩ ॥

ರಕ್ತಂ ಪೂರ್ಣಮಲಂಕೃತಂ ಪ್ರಸನ್ನಂ ವ್ಯಕ್ತಂ ವಿಕ್ರುಷ್ಟಂ ಶ್ಲಕ್ಷ್ಣಂ ಸಮಂ ಸುಕುಮಾರಂ ಮಧುರಮಿತಿ ಗುಣಾಃ ।

ತತ್ರರಕ್ತಂ ನಾಮ ವೇಣುವೀಣಾಸ್ವರಾಣಾಮೇಕೀಭಾವೋ ರಕ್ತಮಿತ್ಯುಚ್ಯತೇ ॥

ಪೂರ್ಣಂ ನಾಮ ಸ್ವರಶ್ರುತಿಪೂರಣಾಚ್ಛಂದಃಪಾದಾಕ್ಷರಸಂಯೋಗಾತ್ಪೂರ್ಣಮಿತ್ಯುಚ್ಯತೇ ॥

ಅಲಂಕೃತಂ ನಾಮೋಽರಸಿ ಶಿರಸಿ ಕಂಠಯುಕ್ತಮಿತ್ಯಲಂಕೃತಂ ॥

ಪ್ರಸನ್ನಂ ನಾಮಾಪಗತಗದ್ಗದಂ ನಿರ್ವಿಶಂಕಂ ಪ್ರಸನ್ನಮಿತ್ಯುಚ್ಯತೇ ॥

---

೪೩. ಗಾನದ ಗುಣವೃತ್ತಿಯು ಹತ್ತು ವಿಧವು. ಅದೆಂತೆಂದರೆ:—

ರಕ್ತ, ಪೂರ್ಣ, ಅಲಂಕೃತ, ಪ್ರಸನ್ನ, ವ್ಯಕ್ತ, ವಿಕ್ರುಷ್ಟ, ಶ್ಲಕ್ಷ್ಣ, ಸಮ ಸುಕುಮಾರ ಮತ್ತು ಮಧುರ ಎಂಬುದಾಗಿ ಗುಣಗಳು ಹತ್ತು ವಿಧವು.

ಅದರಲ್ಲಿ; ವೇಣು, ವೀಣೆ, ಮತ್ತು ಪುರುಷರ ಸ್ವರಗಳನ್ನು ಒಟ್ಟು ಗೂಡಿಸುವುದರಿಂದುಂಟಾಗುವ ರಂಜನೆಗೆ ರಕ್ತವೆಂದು ಹೆಸರು.

ಸ್ವರ ಶ್ರುತಿಗಳ ಸಂಯೋಜನೆಯಿಂದ ಛಂದಸ್ಸಿನ ಪಾದಾಕ್ಷರಗಳ ಸ್ಫುಟೋಚ್ಚಾರಣೆಯು ಪೂರ್ಣವೆನಿಸುವುದು.

ಮಧ್ಯಮಸ್ಥಾಯಿಯಲ್ಲಿದ್ದ ಧ್ವನಿಯನ್ನು ಮಂದರಸ್ಥಾಯಿಗೆ ತರುವುದು ಅಥವಾ ತಾರಸ್ಥಾಯಿಗೆ ತರುವುದು ಅಲಂಕೃತವೆನಿಸುವುದು.

ಗದ್ಗದ ಮತ್ತು ಶಂಕಾಸ್ಪದವಾಗದಿರುವ ಸ್ವರಕ್ಕೆ ಪ್ರಸನ್ನವೆಂದು ಹೆಸರು.

ವ್ಯಕ್ತಂ ನಾಮ ಪದ-ಪದಾರ್ಥ-ಪ್ರಕೃತಿ-ವಿಕಾರಾಗಮ-ಲೋಪ-ಕೃತ್ತದ್ಧಿತ-ಸಮಾಸ-ಧಾತು-ನಿಪಾತೋಪಸರ್ಗ-ಸ್ವರ--ಲಿಂಗ-ವೃತ್ತಿ-ವಾರ್ತಿಕ-ವಿಭಕ್ತ್ಯರ್ಥ-ವಚನಾನಾಂ ಸಮ್ಯಗುಪಪಾದನಂ ವ್ಯಕ್ತಮಿತ್ಯುಚ್ಯತೇ ॥

ವಿಕ್ರುಷ್ಟಂ ನಾಮೋಚ್ಚೈರುಚ್ಚಾರಿತಂ ವ್ಯಕ್ತಪದಾಕ್ಷರಂ ವಿಕ್ರುಷ್ಟಮಿತ್ಯುಚ್ಯತೇ ॥

ಶ್ಲಕ್ಷ್ಣಂ ನಾಮಾದ್ರುತಮವಿಲಂಬಿತಮುಚ್ಚನೀಚಪ್ಲುತಸಮಾಹಾರಹೇಲತಾಲೋಪನಯಾದಿಭಿರುಪಪಾದನಾಭಿಃ ಶ್ಲಕ್ಷ್ಣಮಿತ್ಯುಚ್ಯತೇ ॥

ಸಮನ್ನಾಮ ಅವಾಪ-ನಿರ್ವಾಪ-ಪ್ರದೇಶ-ಪ್ರತ್ಯಂತರ-ಸ್ಥಾನಾನಾಂ ಸಮಾಸಃ ಸಮಮಿತ್ಯುಚ್ಯತೇ ॥

ಸುಕುಮಾರಂ ನಾಮ ಮೃದುಪದವರ್ಣಸ್ವರಕುಹರಣಯುಕ್ತಂ ಸುಕುಮಾರಮಿತ್ಯುಚ್ಯತೇ ॥

---

ಪದ, ಪದಾರ್ಥ, ಪ್ರಕೃತಿ, ವಿಕಾರ, ಆಗಮ, ಕೃತ್ತು, ತದ್ಧಿತ, ಸಮಾಸ, ಧಾತು, ನಿಪಾತ, ಉಪಸರ್ಗ, ಸ್ವರ, ತಿಜಂತ, ವೃತ್ತಿ, ವಾರ್ತಿಕ, ವಿಭಕ್ತ್ಯರ್ಥ ಮತ್ತು ವಚನಗಳನ್ನು ಚೆನ್ನಾಗಿ ಉಪಪಾದಿಸುವುದು ವ್ಯಕ್ತವೆನಿಸುವುದು.

ಗಟ್ಟಿಯಾಗಿ ಹೇಳುವುದು ಮತ್ತು ಪದಾಕ್ಷರಗಳು ವ್ಯಕ್ತವಾಗಿರುವುದಕ್ಕೆ ವಿಕ್ರುಷ್ಟವೆಂದು ಹೆಸರು.

ಶುಕ್ಲವೆಂದರೆ—ಅತಿಶೀಘ್ರವಾಗಿಯೂ, ಅತಿವಿಳಂಬವಾಗಿಯೂ ಇಲ್ಲದೆ ಸಮವಾಗಿರುವ ಸ್ಥಾಯಿತ್ರಯಾತ್ಮಕವಾದ, ಕಾಲತ್ರಯಕ್ಕನುಗುಣವಾದ ಕಾಲ ಸ್ಥಿತಿ ಮುಂತಾದ ಉಪಪಾದನೆಗಳಿಂದ ಯುಕ್ತವಾದುದು.

ಸಂಪೂರ್ಣವಾಗಿಯೂ, ಸ್ವಲ್ಪ ಕಮ್ಮಿಯಾಗಿಯೂ ನಿಲ್ಲಿಸತಕ್ಕ ವ್ಯವಧಾನ ಸ್ಥಾನಗಳಲ್ಲಿ ಸಮವಾಗಿ ಉಚ್ಚರಿಸುವುದಕ್ಕೆ ಸಮವೆಂದು ಹೆಸರು.

ಮೃದುವಾದ, ಸ್ಫುಟವಲ್ಲದ ಪದ, ವರ್ಣ, ಸ್ವರಗಳನ್ನು ಗಂಟಲಿನಲ್ಲಿ ಬಲಾತ್ಕಾರವಾಗಿ ಹೊರಡಿಸುವುದು ಸುಕುಮಾರವೆನಿಸುವುದು.

ಮಧುರಂ ನಾಮ ಸ್ವಭಾವೋಪನೀತ ಲಲಿತಪದಾಕ್ಷರಗುಣ-
ಸಮೃದ್ಧಂ ಮಧುರಮಿತ್ಯುಚ್ಯತೇ ॥ ಏವಮೇತೈರ್ದಶಭಿಃ ಗುಣೈ-
ರ್ಯುಕ್ತಂ ಗಾನಂ ಭವತಿ ॥

ಏತದ್ವಿಪರೀತಾ ಗೀತಿದೋಷಾ ಉಚ್ಯಂತೇ ।
ಭವಂತಿ ಚಾತ್ರ ಶ್ಲೋಕಾಃ—

ಶಂಕಿತಂ ಭೀತಮುದ್ಘೃಷ್ಟಮವ್ಯಕ್ತಮನುನಾಸಿಕಂ ।
ಕಾಕಸ್ವರಂ ಮೂರ್ಧಗತಂ ತಥಾ ಸ್ಥಾನವಿವರ್ಜಿತಂ ॥ ೪೪ ॥
ವಿಸ್ವರಂ ವಿರಸಂ ಚೈವ ವಿಶ್ಲಿಷ್ಟಂ ವಿಷಮಾಹತಂ ।
ವ್ಯಾಕುಲಂ ತಾಲಹೀನಂ ಚ ಗೀತಿದೋಷಾಶ್ಚತುರ್ದಶ ॥ ೪೫ ॥
ಆಚಾರ್ಯಾಃ ಸಮಮಿಚ್ಛಂತಿ ಪದಚ್ಛೇದಂ ತು ಪಂಡಿತಾಃ ।
ಸ್ತ್ರಿಯೋ ಮಧುರಮಿಚ್ಛಂತಿ ವಿಕ್ರುಷ್ಟಮಿತರೇ ಜನಾಃ ॥ ೪೬ ॥
ಪದ್ಮಪತ್ರಪ್ರಭಃ ಷಡ್ಜ ಋಷಭಃ ಶುಕಪಿಂಜರಃ ।
ಕನಕಾಭಸ್ತು ಗಾಂಧಾರೋ ಮಧ್ಯಮಃ ಕುಂದಸನ್ನಿಭಃ ॥ ೪೭ ॥

---

ಸ್ವಾಭಾವಿಕವಾಗಿ ನಗುಮುಖದಿಂದ ಹೊರಟ ಲಲಿತಪದಾಕ್ಷರಯುಕ್ತ ವಾದ ಗಾನವು ಮಧುರವೆನಿಸುವುದು. ಈ ರೀತಿಯಾದ ಹತ್ತು ಗುಣಗಳಿಂದ ಕೂಡಿರುವುದು ಗಾನವೆನಿಸುವುದು.

ಇದಕ್ಕೆ ವಿರುದ್ಧವಾದವುಗಳು ಗಾನದೋಷಗಳೆನಿಸುವುವು. ಆ ವಿಷಯ ದಲ್ಲಿ ಈ ಶ್ಲೋಕಗಳು ಪ್ರಮಾಣಗಳಾಗಿವೆ:—

೪೪-೪೫. ಶಂಕಿತ, ಭೀತ, ಉದ್ಘೃಷ್ಟ, ಅವ್ಯಕ್ತ, ಅನುನಾಸಿಕ, ಕಾಕ ಸ್ವರ, ಮೂರ್ಧಗತ, ಸ್ಥಾನವಿವರ್ಜಿತ, ವಿಸ್ವರ, ವಿರಸ, ವಿಶ್ಲಿಷ್ಟ, ವಿಷಮಾಹತ, ವ್ಯಾಕುಲ ಮತ್ತು ತಾಳಹೀನ ಎಂಬುದಾಗಿ ಗೀತಿ ದೋಷಗಳು ಹದಿನಾಲ್ಕು.

೪೬. ಆಚಾರ್ಯರು ಸಮಗಾನವನ್ನೂ, ಪಂಡಿತರು ಪದಚ್ಛೇದಗಾನ ವನ್ನೂ, ಹೆಂಗಸರು ಮಧುರಗಾನವನ್ನೂ, ಇತರ ಜನರು ವಿಕ್ರುಷ್ಟಗಾನವನ್ನೂ ಅಪೇಕ್ಷಿಸುವರು. ಹೀಗೆ ಗಾನವು ಸಮ ಮುಂತಾಗಿ ನಾಲ್ಕು ವಿಧವೆಂದು ಭಾವ.

೪೭-೪೮. ಷಡ್ಜವು ಕಮಲಪತ್ರದ ಒಣ್ಣವುಳ್ಳದು. ಋಷಭವು ಗಿಳಿಯ ಬಣ್ಣವುಳ್ಳದು, ಗಾಂಧಾರವು ಚಿನ್ನದಬಣ್ಣವುಳ್ಳದ್ದು, ಮಧ್ಯಮವು ಕೋಲು

**ಪಂಚಮುಸ್ತು ಭವೇತ್ಕೃಷ್ಣಃ ಪೀತಕಂ ಧೈವತಂ ವಿದುಃ ।**
**ನಿಷಾದಃ ಸರ್ವವರ್ಣಶ್ಚ ಸ್ಯಾದಿತ್ಯೇತಾಃ ಸ್ವರವರ್ಣಕಾಃ ॥ ೪೮ ॥**

**ಪಂಚಮೋ ಮಧ್ಯಮಃ ಷಡ್ಜ ಇತ್ಯೇತೇ ಬ್ರಾಹ್ಮಣಾಃ ಸ್ಮೃತಾಃ ।**
**ಋಷಭೋ ದೈವತಶ್ಚಾಪೀತ್ಯೇತೌ ವೈ ಕ್ಷತ್ರಿಯಾವುಭೌ ॥ ೪೯ ॥**

**ಗಾಂಧಾರಶ್ಚ ನಿಷಾದಶ್ಚ ವೈಶ್ಯಾವರ್ಧೇನ ವೈ ಸ್ಮೃತೌ ।**
**ಶೂದ್ರತ್ವಂ ವಿದ್ಧಿ ಚಾರ್ಧೇನ ಪತಿತತ್ವಾನ್ನ ಸಂಶಯಃ ॥ ೫೦ ॥**

**ಋಷಭೋತ್ಥಿತಷಡ್ಜಹತೋ ಧೈವತಸಹಿತಶ್ಚ ಪಂಚಮೋ ಯತ್ರ ।**
**ನಿಪತತಿ ಮಧ್ಯಮರಾಗೇ ತಂ ನಿಷಾದಂ ಷಾಡವಂ ವಿದ್ಯಾತ್ ॥ ೫೧ ॥**

**ಯದಿ ಪಂಚಮೋ ವಿರಮತೇ ಗಾಂಧಾರಶ್ಚಾಂತರೋ ಭವತಿ ।**
**ಋಷಭೋ ನಿಷಾದಸಹಿತಸ್ತಂ ಪಂಚಮಮೀದೃಶಂ ವಿದ್ಯಾತ್ ॥ ೫೨ ॥**

---

ಮಲ್ಲಿಗೆಯ ಬಣ್ಣವುಳ್ಳುದು, ಪಂಚಮವು ಕೃಷ್ಣವರ್ಣೋಪೇತವು, ಧೈವತವು ಹಳದಿಬಣ್ಣವುಳ್ಳುದು, ನಿಷಾದವು ಸಕಲವರ್ಣಯುಕ್ತವಾದುದು. ಈ ರೀತಿಯಾಗಿ ಆಯಾಯಾ ಸ್ವರಾಭಿಮಾನಿ ದೇವತೆಯ ವರ್ಣವನ್ನು ತಿಳಿಯಬೇಕು.

೪೯. ಪಂಚಮ, ಮಧ್ಯಮ, ಷಡ್ಜ ಇವು ಬ್ರಾಹ್ಮಣಜಾತಿಗೆ ಸೇರಿದವು. ಋಷಭ ಮತ್ತು ಧೈವತಗಳೆರಡು ಕ್ಷತ್ರಿಯಜಾತಿಗೆ ಸೇರಿವೆ.

೫೦. ಗಾಂಧಾರ, ನಿಷಾದಗಳು ಅರ್ಧ ವೈಶ್ಯಜಾತಿಗೂ, ಅವರೋಹವಾದ ಅರ್ಧಭಾಗವು ಶೂದ್ರಜಾತಿಗೂ ಸೇರಿವೆಯೆಂದು ನಿಸ್ಸಂಶಯವಾಗಿ ತಿಳಿಯಬೇಕು.

೫೧. ಮಧ್ಯಮಗ್ರಾಮದಲ್ಲಿ ಋಷಭಾನಂತರ ಷಡ್ಜದಿಂದ ಧೈವತಸಹಿತವಾದ ಪಂಚಮವು ಪ್ರತಿಹತವಾಗಿ ನಿಷಾದಸಹಿತವಾದರೆ ಅದನ್ನು ಷಾಡವವೆಂದು ತಿಳಿಯಬೇಕು. (ಲೌಕಿಕ ಗಾನದಲ್ಲಿ ಗಾಂಧಾರವರ್ಜಿತವಾದುದು ಷಾಡವವು).

೫೨. ಮಧ್ಯಮರಾಗದಲ್ಲಿ ಪಂಚಮಸ್ಥಾನ ಬಿಟ್ಟು ಗಾಂಧಾರ, ಋಷಭ, ನಿಷಾದ ಪಂಚಮಇವುಗಳುಳ್ಳುದನ್ನು ಪಂಚಮವೆಂದು ತಿಳಿಯಬೇಕು.

**ಗಾಂಧಾರಸ್ಯಾಧಿಪತ್ಯೇನ ನಿಷಾದಸ್ಯ ಗತಾಗತೈಃ ।**
**ಧೈವತಸ್ಯ ಚ ದೌರ್ಬಲ್ಯಾನ್ಮಧ್ಯಮಗ್ರಾಮ ಉಚ್ಯತೇ ॥ ೫೩ ॥**

**ಈಷತ್ಸ್ಪೃಷ್ಟೋ ನಿಷಾದಸ್ತು ಗಾಂಧಾರಶ್ಚಾಧಿಕೋ ಭವೇತ್ ।**
**ಧೈವತಃ ಕಂಪಿತೋ ಯತ್ರ ಸ ಷಡ್ಜಗ್ರಾಮ ಈರಿತಃ ॥ ೫೪ ॥**

**ಅಂತರಸ್ವರಸಂಯುಕ್ತಕಾಕಲಿರ್ಯತ್ರ ದೃಶ್ಯತೇ ।**
**ತಂ ತು ಸಾಧಾರಿತಂ ವಿದ್ಯಾತ್ಪಂಚಮಸ್ಥಂ ತು ಕೈಶಿಕಂ ॥ ೫೫ ॥**

**ಕೈಶಿಕಂ ಭಾವಯಿತ್ವಾ ತು ಸ್ವರೈಃ ಸರ್ವೈಃ ಸಮಂತತಃ ।**
**ಯಸ್ಮಾತ್ತು ಮಧ್ಯಮೋ ನ್ಯಾಸಸ್ತಸ್ಮಾತ್ಕೈಶಿಕಮಧ್ಯಮಃ ॥ ೫೬ ॥**

---

೫೩. ಮಧ್ಯಮಪ್ರಾರಂಭದಲ್ಲಿ ಗಾಂಧಾರವು ಪ್ರಚುರವಾಗಿಯೂ, ನಿಷಾದದ ಪುನಃಪುನರುಕ್ತಿಯೂ, ಧೈವತದ ಸಕೃದುಕ್ತಿಯೂ ಇರುವುದು ಮಧ್ಯಮಗ್ರಾಮವೆನಿಸುವುದು. (ಸಾಮಾನ್ಯವಾಗಿ ಷಡ್ಜ, ಋಷಭ, ಪಂಚಮಗಳಿದ್ದಾಗ ಮಧ್ಯಮಗ್ರಾಮವಾಗುವುದು.)

೫೪. ಷಡ್ಜಪ್ರಾರಂಭದಲ್ಲಿ ಲಘುವಾಗಿ ನಿಷಾದವನ್ನೂ, ಅಧಿಕವಾಗಿ ಗಾಂಧಾರವನ್ನೂ ಉಚ್ಚರಿಸುವುದು ; ಅನಂತರ ಧೈವತವನ್ನು ಕಂಪನಮಾಡುವುದು ಷಡ್ಜಗ್ರಾಮವಾಗುವುದು.

೫೫. ಷಡ್ಜಪ್ರಾರಂಭದಲ್ಲಿ ಚತುಶ್ರುತಿಕವಾದಾಗ ಅಂತರ ಗಾಂಧಾರದಿಂದ ಯುಕ್ತವಾದ ನಿಷಾದವು ಕಾಕಲಿ ಎಂದರೆ ಚತುಶ್ರುತಿಕವಾದಾಗ ಪಂಚಮಸ್ಥಾನದಲ್ಲಿರುವ ಅದನ್ನು ಸದೃಶಶ್ರುತಿಕೈಶಿಕವೆಂದು ತಿಳಿಯಬೇಕು.

೫೬. ಉಕ್ತವಾದ ಕೈಶಿಕನಿಷಾದವು ಸರ್ವಸ್ವರಗಳಿಂದ ಯೋಜನೆ ಮಾಡಲ್ಪಟ್ಟು ಮಧ್ಯಮದಿಂದಲೇ ಉಪಕ್ರಮಿಸಿ ಅಲ್ಲಿಯೇ ನಿಲ್ಲಿಸಿದಾಗ ಅದು ಕೈಶಿಕಮಧ್ಯಮಗ್ರಾಮರಾಗವಾಗುವುದು.

ಕಾಕಲಿರ್ದೃಶ್ಯತೇ ಯತ್ರ ಪ್ರಾಧಾನ್ಯಂ ಪಂಚಮಸ್ಯ ತು ।
ಕಶ್ಯಪಃ ಕೈಶಿಕಂ ಪ್ರಾಹ ಮಧ್ಯಮಗ್ರಾಮಸಂಭವಮ್ ॥ ೫೭ ॥

ಗೇತಿ ಗೇಯಂ ವಿದುಃ ಪ್ರಾಜ್ಞಾ ಧೇತಿ ಕಾರುಪ್ರವಾದನಂ ।
ವೇತಿ ವಾದ್ಯಸ್ಯ ಸಂಜ್ಞೇಯಂ ಗಂಧರ್ವಸ್ಯ ಪ್ರರೋಚನಮ್ ॥ ೫೮ ॥

ಯಃ ಸಾಮಗಾನಾಂ ಪ್ರಥಮಃ ಸ ವೇಣೋರ್ಮಧ್ಯಮಃ ಸ್ವರಃ ।
ಯೋ ದ್ವಿತೀಯಃ ಸ ಗಾಂಧಾರಸ್ತೃತೀಯಸ್ತ್ವೃಷಭಃ ಸ್ಮೃತಃ ॥ ೫೯ ॥

ಚತುರ್ಥಃ ಷಡ್ಜ ಇತ್ಯಾಹುಃ ಪಂಚಮೋ ಧೈವತೋ ಭವೇತ್ ।
ಷಷ್ಠೋ ನಿಷಾದೋ ವಿಜ್ಞೇಯಃ ಸಪ್ತಮಃ ಪಂಚಮಃ ಸ್ಮೃತಃ ॥ ೬೦ ॥

---

೫೭. ಮಧ್ಯಮಗ್ರಾಮದಿಂದ ಉತ್ಪನ್ನವಾದ ಕಾಕಲಿಯೇ ಚತುಶ್ರುತಿಕ ನಿಷಾದವಾಗುವುದು. ಕಾಕಲಿಯು, ಪಂಚಮದ ಪುನಃಪುನರುಕ್ತಿಯು ಮತ್ತು ಉಳಿದ ಸ್ವರಗಳು ಸಾಮಾನ್ಯವಾಗಿ ಇದ್ದಾಗ ಮಧ್ಯಮಗ್ರಾಮೋತ್ಪನ್ನವಾದ ಕೈಶಿಕವೆಂದು ಕಶ್ಯಪಮುನಿಯು ಹೇಳುವನು.

೫೮. ಪ್ರಾಜ್ಞರು 'ಗಂ' ಎಂಬುದನ್ನು ಗಾನವೆಂದು ತಿಳಿಯುವರು. 'ಧ' ಎಂಬ ಅಕ್ಷರಕ್ಕೆ ವೈಣಿಕನು ಚಾತುರ್ಯದಿಂದ ವೀಣೆಯಮೇಲೆ ಬೆರಳುಗಳನ್ನಿಡುವುದೆಂದರ್ಥವು. 'ವ' ಕಾರವು ನುಡಿಸುವುದು ಎಂಬ ಅರ್ಥವನ್ನು ಬೋಧಿಸುವುದು. ಈ ರೀತಿಯಾಗಿ ಗಂಧರ್ವಪದದ ಅವಯವಾರ್ಥವೆಂದು ತಿಳಿಯಬೇಕು.

೫೯-೬೦. ಸಾಮಗಾಯಕರಿಗೆ ಅಭಿಮತವಾದ ಪ್ರಥಮ ಸ್ವರವು ವೇಣುವಿನ ಮಧ್ಯಮ ಸ್ವರವೂ, ದ್ವಿತೀಯ ಸ್ವರವು ಗಾಂಧಾರವೂ, ತೃತೀಯವು ಋಷಭವೂ, ನಾಲ್ಕನೆಯದು ಷಡ್ಜವೂ, ಐದನೆಯದು ಧೈವತವೂ, ಆರನೆಯದು ನಿಷಾದವೂ, ಏಳನೆಯದು ಪಂಚಮವೂ, ಆಗುತ್ತದೆ.

ಷಡ್ಜಂ ಮಯೂರೋ ವದತಿ ಗಾವೋ ರಂಭಂತಿ ಚಾರ್ಷಭಂ ।
ಅಜಾವಿಕೇ ತು ಗಾಂಧಾರಂ ಕ್ರೌಂಚೋ ವದತಿ ಮಧ್ಯಮಂ ॥ ೬೧ ॥

ಪುಷ್ಪಸಾಧಾರಣೇ ಕಾಲೇ ಕೋಕಿಲೋ ವಕ್ತಿ ಪಂಚಮಂ ।
ಅಶ್ವಸ್ತು ಧೈವತಂ ವಕ್ತಿ ನಿಷಾದಂ ವಕ್ತಿ ಕುಂಜರಂ ॥ ೬೨ ॥

ಕಂಠಾದುತ್ತಿಷ್ಠತೇ ಷಡ್ಜಃ ಶಿರಸಸ್ತ್ವೃಷಭಃ ಸ್ಮೃತಃ ।
ಗಾಂಧಾರಸ್ತ್ವನುನಾಸಿಕ್ಯ ಉರಸೋ ಮಧ್ಯಮಃ ಸ್ವರಃ ॥ ೬೩ ॥

ಉರಸಃ ಶಿರಸಃ ಕಂಠಾದುತ್ಥಿತಃ ಪಂಚಮಃ ಸ್ವರಃ ।
ಲಲಾಟಾದ್ಧೈವತಂ ವಿದ್ಯಾನ್ನಿಷಾದಂ ಸರ್ವಸಂಧಿಜಂ ॥ ೬೪ ॥

ನಾಸಾಂ ಕಂಠಮುರಸ್ತಾಲುಂ ಜಿಹ್ವಾಂ ದಂತಾಂಶ್ಚ ಸಂಶ್ರಿತಃ ।
ಷಡ್ಭಿಃ ಸಂಜಾಯತೇ ಯಸ್ಮಾತ್ತಸ್ಮಾತ್ಷಡ್ಜ ಇತಿ ಸ್ಮೃತಃ ॥ ೬೫ ॥

---

೬೧. ನವಿಲು ಷಡ್ಜಸ್ವರವನ್ನೂ, ಗೋವುಗಳು ಋಷಭವನ್ನೂ, ಮೇಕೆ ಕುರಿಗಳು ಗಾಂಧಾರವನ್ನೂ, ಕ್ರೌಂಚಪಕ್ಷಿಯು ಮಧ್ಯಮುವನ್ನೂ, ನುಡಿಯುತ್ತವೆ.

೬೨. ಕೋಗಿಲೆಯು ವಸಂತಕಾಲದಲ್ಲಿ ಪಂಚಮಸ್ವರವನ್ನೂ, ಕುದುರೆಯು ಧೈವತವನ್ನೂ, ಆನೆಯು ನಿಷಾದಸ್ವರವನ್ನೂ ನುಡಿಯುತ್ತವೆ.

೬೩. ಕಂಠದಿಂದ ಷಡ್ಜವೂ, ಋಷಭವು ಶಿರಸ್ಸಿನಿಂದಲೂ, ನಾಸಿಕೆಯಿಂದ ಗಾಂಧಾರವೂ, ಎದೆಯಿಂದ ಮಧ್ಯಮಸ್ವರವೂ ಉದ್ಭವಿಸುತ್ತವೆ.

೬೪, ಎದೆ, ತಲೆ, ಕಂಠ, ಇವುಗಳಿಂದ ಪಂಚಮಸ್ವರವು ಉದ್ಭವಿಸುತ್ತದೆ. ಹಣೆಯಿಂದ ಧೈವತ ಸ್ವರವೂ, ಎಲ್ಲಾಸಂಧಿಗಳಿಂದ ನಿಷಾದ ಸ್ವರವೂ ಉದ್ಭವಿಸುತ್ತದೆ ಎಂದು ತಿಳಿಯಬೇಕು-

೬೫. ನಾಸಿಕೆ, ಕಂಠ, ಎದೆ, ದವಡೆ, ನಾಲಿಗೆ ಮತ್ತು ಹಲ್ಲುಗಳನ್ನಾಶ್ರಯಿಸಿ ಈ ಆರರಿಂದ ಹುಟ್ಟುತ್ತದೆಯಾದ ಕಾರಣ ಷಡ್ಜ ಎಂದು ಹೇಳಲ್ಪಟ್ಟಿದೆ. ಷಷ್ಟಾದಿಗಳು ಕಂಠಾದಿಗಳಿಂದ ಉತ್ಪನ್ನವಾದರೂ ಇತರ ಸ್ಥಾನಗಳ ಸಂಬಂಧವನ್ನು ಅಪ್ರಧಾನವಾಗಿ ಹೊಂದುತ್ತವೆಯೆಂದು ತಿಳಿಯಬೇಕು.

ವಾಯುಃ ಸಮುತ್ಥಿತೋ ನಾಭೇಃ ಕಂಠಶೀರ್ಷಸಮಾಹತಃ ।
ನರ್ದತ್ಯೃಷಭವದ್ಯಸ್ಮಾತ್ತಸ್ಮಾದೃಷಭ ಉಚ್ಯತೇ ॥ ೬೬ ॥

ವಾಯುಃ ಸಮುತ್ಥಿತೋ ನಾಭೇಃ ಕಂಠಶೀರ್ಷಸಮಾಹತಃ ।
ವಾತಿ ಗಂಧವಹಃ ಪುಣ್ಯೋ ಗಾಂಧಾರಸ್ತೇನ ಹೇತುನಾ ॥ ೬೭ ॥

ವಾಯುಃ ಸಮುತ್ಥಿತೋ ನಾಭೇರುರೋ ಹೃದಿ ಸಮಾಹತಃ ।
ನಾಭಿಂ ಪ್ರಾಪ್ತೋ ಮಹಾನಾದೋ ಮಧ್ಯಮತ್ವಂ ಸಮಶ್ನುತೇ ॥ ೬೮ ॥

ವಾಯುಃ ಸಮುತ್ಥಿತೋ ನಾಭೇರುರೋಹೃತ್ಕಂಠಶಿರೋಹತಃ ।
ಪಂಚಸ್ಥಾನಸ್ಥಿತಸ್ಯಾಸ್ಯ ಪಂಚಮತ್ವಂ ವಿಧೀಯತೇ ॥ ೬೯ ॥

ಧೈವತಂ ಚ ನಿಷಾದಂ ಚ ವರ್ಜಯಿತ್ವಾ ತು ತಾವುಭೌ ।
ಶೇಷಾನ್ಪಂಚಸ್ವರಾಂಸ್ತ್ವನ್ಯಾನ್ ಪಂಚಸ್ಥಾನೋತ್ಥಿತಾನ್ವಿದುಃ ೭೦ ॥

---

೬೬. ವಾಯುವು ನಾಭಿಯಲ್ಲಿ ಹುಟ್ಟಿ ಕಂಠ ಶಿರಸ್ಸುಗಳಲ್ಲಿ ಸಂಚರಿಸುತ್ತಾ ಎತ್ತಿನಂತೆ (ಋಷಭವಂತೆ) ಶಬ್ದಮಾಡುವುದರಿಂದ ಅದು ಋಷಭವೆನಿಸಿದೆ.

೬೭. ನಾಭಿಯಲ್ಲಿ ಹುಟ್ಟಿದ ವಾಯುವು ಕಂಠ ನಾಸಿಕೆಗಳಲ್ಲಿ ಸಂಚರಿಸುತ್ತಾ ಮೂಗು ಒಳ್ಳೆಯ ಗಂಧವನ್ನು ಗ್ರಹಿಸುವಂತೆ ಮಾಡುವುದರಿಂದ ಅದು ಗಾಂಧಾರವೆನಿಸುತ್ತದೆ.

೬೮. ನಾಭಿಯಿಂದ ಹೊರಟವಾಯುವು ಎದೆಯ ಮಧ್ಯದಲ್ಲಿಯೂ, ಉಚ್ಚನೀಚ ಮಧ್ಯದಲ್ಲಿಯೂ ಇದ್ದು ನಾಭಿಯನ್ನು ಸೇರಿ ಮಹಾನಾದವನ್ನು ಉಂಟುಮಾಡುವುದರಿಂದ ಮಧ್ಯಮಭಾವವನ್ನು ಹೊಂದಿದೆ.

೬೯. ನಾಭಿಯಿಂದ ಹುಟ್ಟಿದ ವಾಯುವು ಎದೆ ಹೃದಯ ಕಂಠ ತಲೆಗಳಲ್ಲಿ ಚಲಿಸುತ್ತಾ ಪಂಚಸ್ಥಾನಗಳ ಸಂಬಂಧವನ್ನು ಹೊಂದಿರುವ ಕಾರಣ ಪಂಚಮವೆಂದು ವಿಹಿತವಾಗಿದೆ.

೭೦. ಧೈವತ ಮತ್ತು ನಿಷಾದ ಈ ಎರಡು ಸ್ವರಗಳ ಹೊರತು ಉಳಿದ ಇತರ ಐದು ಸ್ವರಗಳೂ ಐದು ಸ್ಥಾನಗಳಲ್ಲಿ ಹುಟ್ಟಿದವುಗಳೆಂದು ಜ್ಞಾನಿಗಳು ತಿಳಿದಿರುವರು.

**ಪಂಚಸ್ಥಾನಸ್ಥಿತತ್ವೇನ ಸರ್ವಸ್ಥಾನಾನಿ ಧಾರ್ಯತೇ ।**
**ಅಗ್ನಿಗೀತಸ್ವರಃ ಷಡ್ಜಃ ಋಷಭೋ ಬ್ರಹ್ಮಣೋಚ್ಯತೇ ॥ ೭೧ ॥**

**ಸೋಮೇನ ಗೀತೋ ಗಾಂಧಾರೋ ವಿಷ್ಣುನಾ ಮಧ್ಯಮಃ ಸ್ವರಃ ।**
**ಪಂಚಮಸ್ತು ಸ್ವರೋ ಗೀತಸ್ತ್ವಯ್ಯೈವೇತಿ ನಿಧಾರಯ ॥ ೭೨ ॥**

**ಧೈವತಶ್ಚ ನಿಷಾದಶ್ಚ ಗೀತೌ ತುಂಬುರುಣಾ ಸ್ವರೌ ।**
**ಆದ್ಯಸ್ಯ ದೈವತಂ ಬ್ರಹ್ಮಾ ಷಡ್ಜಸ್ಯಾಪ್ಯುಚ್ಯತೇ ಬುಧೈಃ ॥ ೭೩ ॥**

**ತೀಕ್ಷ್ಣದೀಪ್ತಪ್ರಕಾಶತ್ವಾದೃಷಭಸ್ಯ ಹುತಾಶನಃ ।**
**ಗಾವಃ ಪ್ರಗೀತೇ ತುಷ್ಯಂತಿ ಗಾಂಧಾರಸ್ತೇನ ಹೇತುನಾ ॥ ೭೪ ॥**

**ಶ್ರುತ್ವಾ ಚೈವೋಪತಿಷ್ಠಂತಿ ಸೌರಭೇಯಾ ನ ಸಂಶಯಃ ।**
**ಸೋಮಸ್ತು ಪಂಚಮಸ್ಯಾಪಿ ದೈವತಂ ಬ್ರಹ್ಮರಾಟ್ಸ್ಮೃತಂ ॥ ೭೫ ॥**

---

೭೧. ಸ್ವರಗಳು ಐದು ಸ್ಥಾನಗಳ ಸಂಬಂಧಹೊಂದಿದ್ದರೂ ಸಕಲಸ್ಥಾನಗಳ ಸಂಬಂಧವನ್ನೂ ಹೊಂದಿರುತ್ತವೆ. ಷಡ್ಜಸ್ವರವನ್ನು ಅಗ್ನಿಯೂ, ಋಷಭಸ್ವರವನ್ನು ಬ್ರಹ್ಮನೂ ಗಾನಮಾಡಿರುವನು.

೭೨. ಗಾಂಧಾರವು ಸೋಮನಿಂದಲೂ, ಮಧ್ಯಮ ಸ್ವರವು ವಿಷ್ಣುವಿನಿಂದಲೂ, ಪಂಚಮ ಸ್ವರವು ನಿನ್ನಿಂದಲೂ (ನಾರದನಿಂದ) ಗಾನಮಾಡಲ್ಪಟ್ಟಿದೆ ಎಂದು ತಿಳಿ.

೭೩. ಧೈವತ ಮತ್ತು ನಿಷಾದ ಸ್ವರಗಳು ತುಂಬುರುವಿನಿಂದ ಗಾನಮಾಡಲ್ಪಟ್ಟವೆ. ಮೊದಲನೆಯ ಸ್ವರವಾದ ಷಡ್ಜಕ್ಕೆ ಬ್ರಹ್ಮನೇ ಅಭಿಮಾನಿ ದೇವತೆಯೆಂದು ಜ್ಞಾನಿಗಳಿಂದ ಉಕ್ತವಾಗಿದೆ.

೭೪-೭೫. ಋಷಭವು ತೀಕ್ಷ್ಣವಾಗಿ ಪ್ರಜ್ವಲಿಸಲ್ಪಟ್ಟು ಪ್ರಕಾಶಮಾನವಾಗುವುದರಿಂದ ಅದಕ್ಕೆ ಅಗ್ನಿಯೇ ಅಭಿಮಾನಿದೇವತೆಯು. ಗಾಂಧಾರ ಸ್ವರಕ್ಕೆ ಕಾಮಧೇನುವು ದೇವತೆಯು. ಆದಕಾರಣ ಆ ಸ್ವರವನ್ನು ಹಾಡಿದರೆ ಗೋವುಗಳು ಸಂತೋಷದಿಂದ ಕೇಳುತ್ತಾ ಪರವಶವಾಗಿ ನಿಲ್ಲುತ್ತವೆ. ಗೋದೇವತೆಯ ಪ್ರಸಾದವೂ ಉಂಟಾಗುತ್ತದೆ. ಸಂದೇಹವಿಲ್ಲ.

ನಿರ್ಹ್ರಾಸೋ ಯಸ್ಯ ವೃದ್ಧಿಶ್ಚ ಗ್ರಾಮಮಾಸಾದ್ಯ ಸೋಮವತ್ ।
ಅತಿಸಂಧೀಯತೇ ಯಸ್ಮಾದೇತಾನ್ಪೂರ್ವೋತ್ಥಿತಾನ್ಸ್ವರಾನ್ ॥ ೭೬ ॥

ತಸ್ಮಾದಸ್ಯ ಸ್ವರಸ್ಯಾಪಿ ಧೈವತತ್ವಂ ವಿಧೀಯತೇ ।
ನಿಷೀದಂತಿ ಸ್ವರಾ ಯಸ್ಮಾನ್ನಿಷಾದಸ್ತೇನ ಹೇತುನಾ ॥ ೭೭ ॥

ಸರ್ವಾಂಶ್ಚಾಭಿಭವತ್ಯೇಷ ಯದಾದಿತ್ಯೋಽಸ್ಯ ದೈವತಂ ॥ ೭೮ ॥

ದಾರವೀ ಗಾತ್ರವೀಣಾ ಚ ದ್ವೇ ವೀಣೇ ಗಾನಜಾತಿಷು ।
ಸಾಮಿಕೀ ಗಾತ್ರವೀಣಾ ತು ತಸ್ಯಾಸ್ತ್ವಂ ಶೃಣು ಲಕ್ಷಣಂ ।
ಗಾತ್ರವೀಣಾ ತು ಸಾ ಪ್ರೋಕ್ತಾ ಯಸ್ಯಾಂ ಗಾಯಂತಿ ಸಾಮಗಾಃ ॥ ೭೯ ॥

---

೭೫-೭೬. ಬ್ರಾಹ್ಮಣಾಧಿಪತಿಯಾದ ಚಂದ್ರನು ಪಂಚಮಸ್ವರಕ್ಕೆ ಅಧಿದೇವತೆಯು. ಚಂದ್ರನು ಶುಕ್ಲಪಕ್ಷದಲ್ಲಿ ವೃದ್ಧಿಯನ್ನೂ, ಕೃಷ್ಣಪಕ್ಷದಲ್ಲಿ ಹ್ರಾಸವನ್ನೂ ಹೊಂದುವಂತೆ ಪಂಚಮಸ್ವರವು ಷಡ್ಜಮಧ್ಯಮಗತವಾಗಿ ಉಚ್ಚಗಾನವಾಗುವುದರಿಂದ ವೃದ್ಧಿಯನ್ನೂ, ಷಡ್ಜಮಧ್ಯಮಸಂಭವದಿಂದ ಹ್ರಾಸವನ್ನೂ ಹೊಂದುವುದು. ಆದಕಾರಣ ಪಂಚಮವು ದೇವತೆಯಾದ ಸೋಮಸದೃಶವಾಗಿದೆ.

೭೬-೭೮. ಪೂರ್ವದಲ್ಲಿ ಉತ್ಪನ್ನಗಳಾದ ಮಧ್ಯಮಾದಿ ಸ್ವರಗಳನ್ನು ಉಲ್ಲಂಘಿಸಿ ತಡೆಯುವುದರಿಂದ ಈ ಸ್ವರವು ಧೈವತವೆಂದು ವಿಹಿತವಾಗಿದೆ. ನಿಷಾದದಲ್ಲಿಯೇ ಸರ್ವಸ್ವರಗಳೂ ಅಂತರ್ಭಾವವನ್ನು ಹೊಂದುವಂತಿರುವುದರಿಂದ ಇದು ಸಕಲ ಸ್ವರಗಳನ್ನೂ ಹೊರಡಿಸಿದಂತೆ ವ್ಯಕ್ತವಾಗುತ್ತದೆ. ಆದಕಾರಣ ಇದು ನಿಷಾದವೆನಿಸಿದೆ. ಧೈವತ ನಿಷಾದಗಳೆರಡಕ್ಕೂ ಸೂರ್ಯನೇ ಅಧಿದೇವತೆಯು.

೭೯. ಗಾನಜಾತಿಯಲ್ಲಿ ಮರದ ವೀಣೆ ಮತ್ತು ಶರೀರವೀಣೆಯೆಂದು ವೀಣೆಯು ಎರಡು ವಿಧವು. ಅದರಲ್ಲಿ ಶರೀರ ವೀಣೆಯು ಸಾಮಗಾನಕ್ಕೆ ಸಾಧನವು. ಅದರ ಸ್ವರೂಪವನ್ನು ಹೇಳುವೆನು ಕೇಳು. ಸಾಮಶಾಖಿಗಳು ಯಾವ ಶರೀರದಿಂದ ಸಾಮಗಾನಮಾಡುವರೋ ಆ ಶರೀರವೇ ಗಾತ್ರವೀಣೆಯೆನಿಸುವುದು.

ಸ್ವರವ್ಯಂಜನಸಂಯುಕ್ತಾ ಅಂಗುಲ್ಯಂಗುಷ್ಠರಂಜಿತಾ ।
ಹಸ್ತೌ ಸುಸಂಯುತೌ ಧಾರ್ಯೌ ಜಾನುಭ್ಯಾಮುಪರಿ ಸ್ಥಿತೌ ॥ ೮೦ ॥

ಗುರೋರನುಕೃತಿಂ ಕುರ್ಯಾತ್ಪಠನ್ನಾನ್ಯ ಮತಿರ್ಭವೇತ್ ॥ ೮೧ ॥

ಪ್ರಣವಂ ಪ್ರಾಕ್ಪ್ರಯುಂಜೀತ ವ್ಯಾಹೃತೀಸ್ತದನಂತರಂ ।
ಸಾವಿತ್ರೀಂ ಚಾನುವಚನಂ ತತೋ ವೈ ಗಾನಮಾರಭೇತ್ ॥ ೮೨ ॥

ಪ್ರಸಾರ್ಯ ಚಾಂಗುಲೀಃ ಸರ್ವಾ ರೋಪಯೇತ್ಸ್ವರಮಂಡಲಂ ।
ನ ಚಾಂಗುಳೀಭಿರಂಗುಷ್ಠಮಂಗುಷ್ಠೇನಾಂಗುಲೀಃ ಸ್ಪೃಶೇತ್ ॥ ೮೩ ॥

ವಿರಲಾ ನಾಂಗುಲೀಃ ಕುರ್ಯಾನ್ಮೂಲೇ ಚೈತಾ ನ ಸಂಸ್ಪೃಶೇತ್ ।
ಅಂಗುಷ್ಠಾಗ್ರೇಣ ತಾ ನಿತ್ಯಂ ಮಧ್ಯಮೇ ಪರ್ವಣಿ ಸ್ಪೃಶೇತ್ ॥ ೮೪ ॥

---

೮೦. ಸಾಮಗಾನಮಾಡುವಾಗ ಮೊಣಕಾಲುಗಳಮೇಲೆ ಹಸ್ತಗಳನ್ನು ಸರಿಯಾಗಿಟ್ಟುಕೊಂಡು ಸ್ವರವ್ಯಂಜನಮಾತ್ರೆಗಳನ್ನು ಉಚ್ಚಾರಣೆಮಾಡುತ್ತಾ ಹೆಬ್ಬೆರಳುಗಳನ್ನು ಇರತ ಬೆರಳುಗಳಲ್ಲಿ ಸಂಯೋಜಿಸಬೇಕು.

೮೧. ಗುರುಗಳ ಮುಖವನ್ನೇ ನೋಡುತ್ತಾ ಬೇರೆ ವಿಷಯದಲ್ಲಿ ಮನ ಗೊಡದೆ ಅವರು ಹೇಳಿದುದನ್ನೇ ಹೇಳುತ್ತಾ ಉಕ್ತನಿಯಮಪೂರ್ವಕವಾಗಿ ಅಧ್ಯಯನಮಾಡಬೇಕು.

೮೨. ಆದಿಯಲ್ಲಿ ಪ್ರಣವವನ್ನೂ ಅನಂತರ ವ್ಯಾಹೃತಿಗಳನ್ನೂ ಹೇಳ ಬೇಕು. ಬಳಿಕ ಗಾಯತ್ರಿಯನ್ನು ಹೇಳಿ ಗಾನವನ್ನಾರಂಭಿಸಬೇಕು.

೮೩. ಎಲ್ಲಾ ಬೆರಳುಗಳನ್ನೂ ಹರಡಿ ಅವುಗಳನ್ನು ಹೆಬ್ಬೆರಳಿನಿಂದ ಮುಟ್ಟುತ್ತಾ ಸ್ವರಮಾತ್ರೆಗಳನ್ನು ಎಣಿಸುವವನಾಗಿ ಗಾನಮಾಡಬೇಕು. ಇತರ ಬೆರಳುಗಳಿಂದ ಹೆಬ್ಬೆರಳನ್ನು ಮುಟ್ಟಬಾರದು.

೮೪. ಬೆರಳುಗಳನ್ನು ವಿರಳವಾಗಿ ಮಾಡದೆ ಜೋಡಿಸಿಕೊಂಡಿರಬೇಕು. ಇವುಗಳ ಮೂಲಭಾಗವನ್ನು ಸ್ಪರ್ಶಮಾಡಬಾರದು. ಹೆಬ್ಬೆರಳಿನ ಕೊನೆಯಿಂದ ಇತರ ಬೆರಳುಗಳ ಮಧ್ಯದಲ್ಲಿರುವ ಗೆರೆಗಳನ್ನು ಮುಟ್ಟಬೇಕು.

ಮಾತ್ರಾದ್ವಿಮಾತ್ರಾವೃದ್ಧಾನಾಂ ವಿಭಾಗಾರ್ಥಂ ವಿಭಾಗವಿತ್ ।
ಅಂಗುಲೀಭಿರ್ದ್ವಿಮಾತ್ರಂ ತು ಪಾಣೇಃ ಸವ್ಯಸ್ಯ ದರ್ಶಯೇತ್ ॥ ೮೫ ॥

ತ್ರಿರೇಖಾ ಯತ್ರ ದೃಶ್ಯೇತ ಸಂಧಿಂ ತತ್ರ ವಿನಿರ್ದಿಶೇತ್ ।
ಸ ಪರ್ವ ಇತಿ ವಿಜ್ಞೇಯಃ ಶೇಷಮಂತರಮಂತರಂ ॥ ೮೬ ॥

ಯವಾಂತರಂ ತು ಸಾಮಸು ಚ ಋಕ್ಷು ಕುರ್ಯಾತ್ತಿಲಾಂತರಂ ।
ಸ್ವರಾನ್ಮಧ್ಯಮಪರ್ವಸು ಸುನಿವಿಷ್ಟಾನ್ನಿವೇಶಯೇತ್ ॥ ೮೭ ॥

ನ ಚಾತ್ರ ಕಂಪಯೇತ್ಕಿಂಚಿದಂಗಸ್ಯಾವಯವಂ ಬುಧಃ ।
ಅಧಸ್ತನಂ ಮೃದು ನ್ಯಸ್ಯ ಹಸ್ತಮಾಸ್ತೇ ಯಥಾಕ್ರಮಂ ॥ ೮೮ ॥

---

೮೫. (ಕಣ್ಣುರೆಪ್ಪೆಯನ್ನು ಒಂದುಬಾರಿ ಮುಚ್ಚುವಷ್ಟುಕಾಲಕ್ಕೆ ಒಂದು ಮಾತ್ರೆಯೆಂದು ಹೆಸರು. ಅಷ್ಟುಕಾಲಮಾತ್ರದಲ್ಲಿ ಉಚ್ಚರಿಸುವ ವರ್ಣವು ಏಕಮಾತ್ರವೆನಿಸುವುದು. ಹ್ರಸ್ವವು ಏಕಮಾತ್ರವು. ದೀರ್ಘವು ದ್ವಿಮಾತ್ರವು. ಪ್ಲುತವು ತ್ರಿಮಾತ್ರವು. ವ್ಯಂಜನವು ಅರ್ಧಮಾತ್ರವೆಂದು ತಿಳಿಯಬೇಕು.) ಸ್ವರಮಾತ್ರೆಗಳ ಪರಿಜ್ಞಾನವುಳ್ಳವನು ಒಂದು ಎರಡು ಮೂರು ಮಾತ್ರೆಗಳನ್ನು ಪ್ರತ್ಯೇಕವಾಗಿ ತಿಳಿಯಲು ಅಧ್ಯಯನಕಾಲದಲ್ಲಿ ಬೆರಳುಗಳನ್ನು ಸ್ಪರ್ಶಮಾಡಬೇಕು. ಸವ್ಯಹಸ್ತದ ಬೆರಳುಗಳಿಂದ ಎರಡು ಮಾತ್ರೆಗಳನ್ನು ತೋರಿಸಬೇಕು.

೮೬. ಮೂರು ಗೆರೆಗಳಿರುವೆಡೆಯಲ್ಲಿ ಸಂಧಿಪ್ರದೇಶವನ್ನು ಸ್ಪರ್ಶಿಸಬೇಕು. ಅದೇ ಪರ್ವವೆಂದೂ, ಉಳಿದುದು ಅಂತರ, ಅಂತರ (ವ್ಯವಧಾನ) ಎಂದೂ ತಿಳಿಯಬೇಕು.

೮೭. ಸಾಮಗಾನಮಾಡುವಾಗ ಯವಧಾನ್ಯದಷ್ಟು, ಋಕ್ಕುಗಳನ್ನು ಹೇಳುವಾಗ ಎಳ್ಳಿನ ಕಾಳಿನಷ್ಟು ಅಂತರದಲ್ಲಿ ಹೆಬ್ಬೆರಳನ್ನು ನಿಲ್ಲಿಸಿಕೊಂಡು ನ್ಯಾಸವನ್ನಾರಂಭಿಸಬೇಕು. ಸ್ವರಗಳನ್ನು ಉಚ್ಚಾರಣೆಮಾಡುವ ಕಾಲದಲ್ಲಿಯೇ ಮಧ್ಯಮಪರ್ವಗಳಲ್ಲಿ ಹೀಗೆ ಅಂಗುಷ್ಠಯೋಜನೆಯನ್ನು ಮಾಡಬೇಕು.

೮೮- ಜ್ಞಾನಿಯು ಗಾನಕಾಲದಲ್ಲಿ ಸ್ವಲ್ಪವೂ ಮೈಕೈಗಳನ್ನು ಅಲ್ಲಾಡಿಸಬಾರದು. ಕೆಳಗಿರುವ ತೊಡೆ ಕಾಲು ಮುಂತಾದುವುಗಳನ್ನು ಸುಖಾಸನದಲ್ಲಿ ಸ್ಥಾಪಿಸಿ ತೊಡೆಗಳ ಮೇಲೆ ಕೈಗಳನ್ನಿಡಬೇಕು. ಅವುಗಳಲ್ಲಿ ಬಲಗೈಯನ್ನು ಆಕಳಕಿವಿಯಂತೆಯೂ ಎಡಗೈಯನ್ನು ವಿಸ್ತಾರವಾಗಿ ಬಿಚ್ಚಿಯೂ ಇಟ್ಟುಕೊಳ್ಳಬೇಕು.

**ಅಭ್ರಮಧ್ಯೇ ಯಥಾ ವಿದ್ಯುದ್ದೃಶ್ಯತೇ ಮಣಿಸೂತ್ರವತ್ ।**
**ಏಷ ಛೇದೋ ವಿವೃತ್ತೀನಾಂ ಯಥಾ ಬಾಲೇಷುಕರ್ತರಿ　　॥ ೮೯ ॥**

**ಕೂರ್ಮೋಂಗಾನೀವ ಸಂಹೃತ್ಯ ಚೇಷ್ಟಾಂ ದೃಷ್ಟಿಂ ದಿಶಂ ಮನಃ ।**
**ಸ್ವಸ್ಥಃ ಪ್ರಶಾಂತೋ ನಿರ್ಭೀತೋ ವರ್ಣಾನುಚ್ಚಾರಯೇದ್ಬುಧಃ　　॥ ೯೦ ॥**

**ನಾಸಿಕಾಯಾಸ್ತು ಪೂರ್ವೇಣ ಹಸ್ತಂ ಗೋಕರ್ಣವದ್ಧರೇತ್ ।**
**ನಿವೇಶ್ಯ ದೃಷ್ಟಿಂ ಹಸ್ತಾಗ್ರೇ ಶಾಸ್ತ್ರಾರ್ಥಮನುಚಿಂತಯೇತ್　　॥ ೯೧ ॥**

**ಸಮಮುಚ್ಚಾರಯೇದ್ವರ್ಣಾ ಹಸ್ತೇನ ಚ ಮುಖೇನ ಚ ।**
**ಯಥೈವೋಚ್ಚಾರಯೇದ್ವರ್ಣಾಂಸ್ತಥೈವೈನಾ ಸಮಾಪಯೇತ್　　॥ ೯೨ ॥**

---

೮೯. ಮೋಡಗಳ ಮಧ್ಯದಲ್ಲಿ ಮಿಂಚಿನ ಬಳ್ಳಿಯು ಮಣಿಗಳನ್ನು ಪೋಣಿಸಿದ ದಾರದಂತೆ ಅವಿಚ್ಛಿನ್ನವಾಗಿಯೇ ಕಾಣುವ ಹಾಗೆ ಸ್ವರಾದಿ ವೃತ್ತಿಗಳು ಬೇರೆ ಸ್ವರಗಳನ್ನು ಸಂಬಂಧಿಸಿದಾಗ ಸೂಕ್ಷ್ಮವಾಗಿ ಏಕರೂಪವಾಗಿರಬೇಕು. ಎಂದರೆ ವೃತ್ತಿ ವಿಚ್ಛೇದವಾಗಬಾರದು. ಬಾಣಪ್ರಯೋಗಮಾಡುವ ಬಾಲಕನು ಒಂದಾದಮೇಲೊಂದು ಬಾಣವನ್ನು ವಿರಾಮಕೊಡದೆ ಪ್ರಯೋಗಿಸುವಂತೆ ಸ್ವರಗಳನ್ನು ಪುನಃಪುನಃ ಪ್ರಯೋಗಮಾಡಿದರೂ ಸಮಸ್ವರವನ್ನೇ ನುಡಿಯಬೇಕು. ಸ್ವರವಿಚ್ಛೇದಮಾಡಬಾರದು.

೯೦. ಆಮೆಯು ತನ್ನ ಅವಯವಗಳನ್ನು ಒಳಗೆ ಅಡಗಿಸಿಕೊಳ್ಳುವಂತೆ ಜ್ಞಾನಿಯು ಅಂಗಚೇಷ್ಟೆ, ಚಕ್ಷುರಾದಿ ಇಂದ್ರಿಯಗಳು, ನಾನಾದಿಕ್ಕುಗಳಲ್ಲಿ ಪ್ರವರ್ತಿಸುವ ಮನಸ್ಸು ಇವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಸುಖಾಸನದಲ್ಲಿ ಕುಳಿತು ಪ್ರಶಾಂತಮನಸ್ಕನಾಗಿ (ವ್ಯಾಕುಲತೆಯಿಲ್ಲದೆ) ನಿರ್ಭಯನಾಗಿ ವರ್ಣಾದಿಗಳನ್ನು ಉಚ್ಚರಿಸಬೇಕು.

೯೧. ಮೂಗಿನ ಎದುರಿಗೆ ದಕ್ಷಿಣ ಹಸ್ತವನ್ನು ಗೋಕರ್ಣದಂತೆ ಮಾಡಿಕೊಂಡು ತೊಡೆಯಮೇಲೆ ಧರಿಸಬೇಕು. ಅಧ್ಯಯನಮಾಡುವವನು ಹಸ್ತದ ಅಗ್ರಭಾಗದಲ್ಲಿ ದೃಷ್ಟಿಯಿಟ್ಟು ಶಾಸ್ತ್ರಾರ್ಥವನ್ನು ಚಿಂತಿಸಬೇಕು.

೯೨. ಅಕ್ಷರಗಳನ್ನು ಬಾಯಿಯಿಂದ ಹೇಳುವ ಕಾಲದಲ್ಲಿಯೇ ಹಸ್ತದಲ್ಲಿ ನ್ಯಾಸಮಾಡಬೇಕು. ದ್ರುತಾದಿ ಯಾವ ವೃತ್ತಿಯಿಂದ ಅಧ್ಯಯನವನ್ನು ಪ್ರಾರಂಭಿಸುವನೋ ಅದೇ ವೃತ್ತಿಯಿಂದಲೇ ಅಧ್ಯಯನವನ್ನು ಮುಗಿಸಬೇಕು. ಗತಿವ್ಯತ್ಯಾಸಮಾಡಬಾರದು.

**ನಾತ್ಯಾಹನ್ಯಾನ್ನ ನಿರ್ಹನ್ಯಾನ್ನ ಪ್ರಗಾಯೇನ್ನ ಕಂಪಯೇತ್ ।**
**ಸಮಂ ಸಾಮಾನಿ ಗಾಯೇತ ವ್ಯೋಮ್ನಿ ಶ್ಯೇನಗತಿರ್ಯಥಾ ॥ ೯೩ ॥**

**ಯಥಾಪ್ಸು ಚರತಾಂ ಮಾರ್ಗೋ ಮೀನಾನಾಂ ನೋಪಲಭ್ಯತೇ ।**
**ಆಕಾಶೇ ವಾ ವಿಹಂಗಾನಾಂ ತದ್ವತ್ಸ್ವರಗತಾ ಶ್ರುತಿಃ ॥ ೯೪ ॥**

**ಯಥಾ ದಧ್ನಿ ಸರ್ಪಿಃ ಸ್ಯಾತ್ಕಾಷ್ಠಸ್ಥೋ ವಾ ಯಥಾಽನಲಃ ।**
**ಪ್ರಯತ್ನೇನೋಪಲಭ್ಯೇತ ತದ್ವತ್ಸ್ವರಗತಾ ಶ್ರುತಿಃ ॥ ೯೫ ॥**

**ಸ್ವರಾತ್ಸ್ವರಸ್ಯ ಸಂಕ್ರಾಮಂ ಸ್ವರಸಂಧಿಮನುಲ್ಬಣಂ ।**
**ಅವಿಚ್ಛಿನ್ನಂ ಸಮಂ ಕುರ್ಯಾತ್ಸೂಕ್ಷ್ಮಚ್ಛಾಯಾತಪೋಪಮಂ ॥ ೯೬ ॥**

---

೯೩. ಸಾಮಗಾಯಕನು ಅಟ್ಟಹಾಸದಿಂದ ಗಾನಮಾಡಬಾರದು. ವರ್ಣಸ್ಥಾನಕರಣಗಳನ್ನು ಪೀಡಿಸಬಾರದು. ಬಹುಗಟ್ಟಿಯಾಗಿ ಅಥವಾ ಶೀಘ್ರ ವಾಗಿ ಹೇಳಬಾರದು. ದೇಹವನ್ನು ಅಲ್ಲಾಡಿಸಬಾರದು. ಆಕಾಶದಲ್ಲಿ ಗಿಡಗವು ಸಂಚರಿಸುವಂತೆ ಸಾಮಗಳನ್ನು ಸಮವಾಗಿ ಗಾನಮಾಡಬೇಕು.

೯೪. ನೀರಿನಲ್ಲಿ ಮೀನುಗಳು ಮತ್ತು ಆಕಾಶದಲ್ಲಿ ಪಕ್ಷಿಗಳು ಸಂಚರಿಸುವಾಗ ಸಾಮಾನ್ಯವಾಗಿ ಚಲಿಸುವುದು ತಿಳಿದರೂ ಅವುಗಳ ಪಾದಚಲನಾದಿಗಳು ಹೇಗೆ ಉಪಲಬ್ಧವಾಗುವುದಿಲ್ಲವೋ ಅದರಂತೆಯೇ ಸ್ವರಗತವಾದ ಶ್ರುತಿಯನ್ನು ಪ್ರಯಾಸವಿಲ್ಲದೆ ವಿಶೇಷವಾಗಿ ನಿರ್ಣಯಿಸುವಂತಿರಬಾರದು.

೯೫. ಮೊಸರಿನಲ್ಲಿ ತುಪ್ಪವೂ (ಬೆಣ್ಣೆಯು) ಕಟ್ಟಿಗೆಯಲ್ಲಿ ಬೆಂಕಿಯೂ ಪ್ರಯತ್ನದಿಂದ ಉಪಲಬ್ಧವಾಗುವಂತೆ ಸ್ವರಗತವಾದ ಶ್ರುತಿಯೂ ಪ್ರಯತ್ನದಿಂದ ಉಪಲಬ್ಧವಾಗುವುದು.

೯೬. ನೆರಳು ಬಿಸಿಲುಗಳು ಪ್ರದೇಶಾಂತರದಲ್ಲಿ ಅವಿಚ್ಛಿನ್ನವಾಗಿ ಸಂಧಿಸುವಂತೆ ಗಾನದಲ್ಲಿ ಒಂದು ಸ್ವರವು ಇನ್ನೊಂದು ಸ್ವರವನ್ನು ಸಂಧಿಸುವಾಗ ಆ ಸ್ವರಸಂಧಾನವನ್ನು ಉಲ್ಬಣವಾಗದಂತೆಯೂ, ವಿಚ್ಛೇದವನ್ನು ಹೊಂದದಂತೆಯೂ ಸಮವಾಗಿ ಮಾಡಬೇಕು.

ಅನಾಗತಮತಿಕ್ರಾಂತಂ ವಿಚ್ಛಿನ್ನಂ ವಿಷಮಾಹತಂ ।
ತನ್ವಂತಮಸ್ಥಿತಾಂತಂ ಚ ವರ್ಜಯೇತ್ಕರ್ಷಣಂ ಬುಧಃ ॥ ೯೭ ॥

ಸ್ವರಃ ಸ್ಥಾನಾಚ್ಚ್ಯುತೋ ಯಸ್ತು ಸ್ವಂ ಸ್ಥಾನಮತಿವರ್ತತೇ ।
ವಿಸ್ವರಂ ಸಾಮಗಾ ಬ್ರೂಯುರ್ವಿರಕ್ತಮಿತಿ ವೀಣಿನಃ ॥ ೯೮ ॥

ಅಭ್ಯಾಸಾರ್ಥೇ ದ್ರುತಾಂ ವೃತ್ತಿಂ ಪ್ರಯೋಗಾರ್ಥೇ ತು ಮಧ್ಯಮಾಂ ।
ಶಿಷ್ಯಾಣಾಮುಪದೇಶಾರ್ಥಂ ಕುರ್ಯಾದ್ವೃತ್ತಿಂ ವಿಲಂಬಿತಾಂ ॥ ೯೯ ॥

ಗೃಹೀತಗ್ರಂಥ ಏವಂ ತು ಗ್ರಂಥೋಚ್ಚಾರಣಶಿಕ್ಷಕಾನ್ ।
ಹಸ್ತೇನಾಧ್ಯಾಪಯೇಚ್ಛಿಷ್ಯಾನ್ ಶೈಕ್ಷ್ಯೇಣ ವಿಧಿನಾ ದ್ವಿಜಃ ॥ ೧೦೦ ॥

---

೯೭. ಪ್ರಥಮಸ್ವರವನ್ನು ಎಳೆದು ದ್ವಿತೀಯಸ್ವರವನ್ನು ಸಂಧಿಸುವಾಗ ಅನಾಗತ, ಅತಿಕ್ರಾಂತ (ಮೊದಲೇ ಅಥವಾ ಮುಗಿದಮೇಲೆ ಕರ್ಷಣ) ಗಳನ್ನು ಮಾಡಬಾರದು. ಸ್ವರಮಧ್ಯದಲ್ಲಿಯೇ ಎಳೆಯಬೇಕು. ವಿಚ್ಛಿನ್ನ (ಪ್ರಥಮ ಮಾತ್ರೆಯನ್ನು ಪ್ರತ್ಯೇಕಿಸಿ ಕರ್ಷಣ) ವನ್ನು ಮಾಡಬಾರದು. ವಿಷಮಾಹತ (ದೀರ್ಘ ಹ್ರಸ್ವಗಳನ್ನು ವಿಲಂಬದಿಂದ ಕೆಡಿಸುವಿಕೆ) ವನ್ನು, ತನ್ವಂತ (ಮೂರು ಮಾತ್ರೆಗಳಿಗಿಂತಲೂ ಹೆಚ್ಚಾಗಿ ವಿಸ್ತಾರ) ವನ್ನು ಮತ್ತು ಅಸ್ಥಿತಾಂತವನ್ನೂ ಮಾಡಬಾರದು.

೯೮. ತನ್ನ ಸ್ಥಾನವನ್ನು ಬಿಟ್ಟು ಅನ್ಯಥಾರೂಪವನ್ನು ಹೊಂದಿದ ಸ್ವರವನ್ನು ಸಾಮಗರು 'ವಿಸ್ವರ' ವೆಂದೂ, ವೈಣಿಕರು 'ವಿರಕ್ತ' ವೆಂದೂ ಹೇಳುವರು.

೯೯. ಅಭ್ಯಾಸಮಾಡುವಾಗ ದ್ರುತವೃತ್ತಿಯನ್ನೂ, ಪ್ರಯೋಗ ಮಾಡುವಾಗ ಮಧ್ಯಮ ವೃತ್ತಿಯನ್ನೂ, ಶಿಷ್ಯರಿಗೆ ಉಪದೇಶಮಾಡುವಾಗ ವಿಲಂಬಿತ ವೃತ್ತಿಯನ್ನು ಆಶ್ರಯಿಸಬೇಕು.

೧೦೦. ಈರೀತಿಯಾಗಿ ಸಾಮಗಾನಾಧ್ಯಾಪಕರಿಂದ ಶಿಕ್ಷೋಕ್ತವಿಧಾನಾನುಸಾರವಾಗಿ ಸಾಮಗಾನವನ್ನು ಅಧ್ಯಯನ ಮಾಡಿದ ದ್ವಿಜನೇ ಶಿಷ್ಯರಿಗೆ ಸಾಮಗಾನವನ್ನು ಶಿಕ್ಷೋಕ್ತವಿಧಾನಾನುಸಾರವಾಗಿ ಹಸ್ತದಿಂದ ಅಧ್ಯಯನ ಮಾಡಿಸಬೇಕು.

ಕ್ರುಷ್ಟಸ್ಯ ಮೂರ್ಧನಿ ಸ್ಥಾನಂ ಲಲಾಟೇ ಪ್ರಥಮಃಸ್ವರಃ ।
ಭ್ರುವೋರ್ಮಧ್ಯೇ ದ್ವಿತೀಯಸ್ಯ ತೃತೀಯಸ್ಯ ತು ಕರ್ಣಯೋಃ ॥ ೧೦೧ ॥

ಕಂಠಸ್ಥಾನಂ ಚತುರ್ಥಸ್ಯ ಮಂದ್ರಸ್ಯ ರಸನೋಚ್ಯತೇ ।
ಅತಿಸ್ವಾರಸ್ಯ ನೀಚಸ್ಯ ಹೃದಿ ಸ್ಥಾನಂ ವಿಧೀಯತೇ ॥ ೧೦೨ ॥

ಅಂಗುಷ್ಠಸ್ಯೋತ್ತಮೋ ಕ್ರುಷ್ಟೋ ಹ್ಯಂಗುಷ್ಠೇ ಪ್ರಥಮಸ್ಸ್ವರಃ ।
ಪ್ರದೇಶಿನ್ಯಾಂ ತು ಗಾಂಧಾರ ಋಷಭಸ್ತದನಂತರಂ ॥ ೧೦೩ ॥

ಅನಾಮಿಕಾಯಾಂ ಷಡ್ಜಸ್ತು ಕನಿಷ್ಠಾಯಾಂ ತು ಧೈವತಂ ।
ತಸ್ಯಾಧಸ್ತಾಚ್ಚ ಯೋಽಂತ್ಯಸ್ತು ನಿಷಾದಸ್ತತ್ರ ನಿರ್ದಿಶೇತ್ ॥ ೧೦೪ ॥

ಅಪರ್ವತ್ವಾದಸಂಜ್ಞತ್ವಾದವ್ಯಯತ್ವಾಚ್ಚ ನಿತ್ಯಶಃ ।
ಮಂದ್ರೋ ಹಿನುಹಿಭೂತಸ್ತು ಪರಿಸ್ವಾರ ಇತಿ ಸ್ಮೃತಃ ॥ ೧೦೫ ॥

---

೧೦೧-೧೦೨. ಕ್ರುಷ್ಟಸ್ವರದ ಸ್ಥಾನವು ಶಿರಸ್ಸಿನಲ್ಲಿಯೂ, ಪ್ರಥಮ ಸ್ವರದ ಸ್ಥಾನವು ಹಣೆಯಲ್ಲಿಯೂ, ದ್ವಿತೀಯಸ್ವರದ ಸ್ಥಾನವು ಹುಬ್ಬುಗಳ ಮಧ್ಯದಲ್ಲಿಯೂ, ಕಿವಿಗಳಲ್ಲಿ ತೃತೀಯಸ್ವರಸ್ಥಾನವೂ, ಚತುರ್ಥಸ್ವರದ ಸ್ಥಾನವು ಕಂಠವೆಂತಲೂ, ಮಂದ್ರಸ್ವರಕ್ಕೆ ಜಿಹ್ವೆಯೇ ಸ್ಥಾನವೆಂತಲೂ, ನೀಚವಾದ ಅತಿಸ್ವಾರಕ್ಕೆ ಹೃದಯವು ಸ್ಥಾನವೆಂತಲೂ ವಿಹಿತವಾಗಿದೆ.

೧೦೩-೧೦೪. ಗಾನಮಾಡುವಾಗ ಉಚ್ಚನೀಚಸ್ವರಗಳ ಸ್ಥಾನವ್ಯವಸ್ಥೆಗಾಗಿ ಸ್ವರಗಳನ್ನು ಅಂಗುಷ್ಠಾಂಗುಳಿಗಳಲ್ಲಿ ಯೋಜನೆ ಮಾಡಬೇಕು. ಅದೇತೆಂದರೆ—ಬಾಹ್ಯಾಂಗುಷ್ಠದಲ್ಲಿ ಕ್ರುಷ್ಟಸ್ವರವನ್ನೂ, ಅಂಗುಷ್ಠದಲ್ಲಿ ಮಧ್ಯಮಸ್ವರವನ್ನೂ, ತರ್ಜನಿಯಲ್ಲಿ ಗಾಂಧಾರವನ್ನೂ, ಮಧ್ಯದ ಬೆಟ್ಟಿನಲ್ಲಿ ಋಷಭಸ್ವರವನ್ನೂ, ಅನಾಮಿಕ ಅಂಗುಳಿಯಲ್ಲಿ ಷಡ್ಜಸ್ವರವನ್ನೂ, ಕಿಬ್ಬೆರಳಿನಲ್ಲಿ ಧೈವತವನ್ನೂ, ಆದರ ಕೆಳಭಾಗದಲ್ಲಿ ನಿಷಾದಸ್ವರವನ್ನೂ ನಿರ್ದೇಶಿಸಬೇಕು.

೧೦೫. ನಿಷಾದವು ಮಂದ್ರಕ್ಕಿಂತ ಪ್ರತ್ಯೇಕವಾಗಿಲ್ಲವಾದುದರಿಂದ ಅದನ್ನು ನಿರ್ದೇಶಿಸುವ ಪರ್ವಸ್ಥಾನವಿಲ್ಲ ಆದುದರಿಂದಲೇ ಅದು ಪ್ರತ್ಯೇಕವಾಗಿ ತಿಳಿಯುವುದಿಲ್ಲವಾಗಿ ಅಸಂಜ್ಞವಾಗಿದೆ. ಲಿಂಗಭಕ್ತಿವಚನಗಳಿಲ್ಲವಾದುದರಿಂದ ಅವ್ಯಯವಾಗಿದೆ. ಮಂದ್ರವೇ ಪ್ರೇರಣೆಯನ್ನು ಹೊಂದಿ ಪರಿಸ್ವಾರ, ನಿಷಾದ ಎಂಬುದಾಗಿ ಉಕ್ತವಾಗಿದೆ.

ಕ್ರುಷ್ಟೇನ ದೇವಾ ಜೀವಂತಿ ಪ್ರಥಮೇನ ತು ಮಾನುಷಾಃ ।
ಪಶವಸ್ತು ದ್ವಿತೀಯೇನ ಗಂಧರ್ವಾಪ್ಸರಸಸ್ತ್ವನು ॥ ೧೦೬ ॥

ಅಂಡಜಾಃ ಪಿತರಶ್ಚೈವ ಚತುರ್ಥಸ್ವರಜೀವಿನಃ ।
ಮಂದ್ರಂ ತ್ವೇವೋಪಜೀವಂತಿ ಪಿಶಾಚಾಸುರರಾಕ್ಷಸಾಃ ॥ ೧೦೭ ॥

ಅತಿಸ್ವಾರೇಣ ನೀಚೇನ ಶಿಷ್ಟಂ ಸ್ಥಾವರಜಂಗಮಂ ।
ಸರ್ವಾಣಿ ಖಲು ಭೂತಾನಿ ಧಾರ್ಯಂತೇ ಸಾಮಿಕೈಃ ಸ್ವರೈಃ ॥ ೧೦೮ ॥

ದೀಪ್ತಾಽಽಯತಾಕರುಣಾನಾಂ ಮೃದುಮಧ್ಯಮಯೋಸ್ತಥಾ ।
ಶ್ರುತೀನಾಂ ಯೋಽವಿಶೇಷಜ್ಞೋ ನ ಸ ಆಚಾರ್ಯ ಉಚ್ಯತೇ ॥ ೧೦೯ ॥

ದೀಪ್ತಾ ಮಂದ್ರೇ ದ್ವಿತೀಯೇ ಚ ಪ್ರಚತುರ್ಥೇ ತಥೈವ ಚ ।
ಅತಿಸ್ವಾರೇ ತೃತೀಯೇ ಚ ಕ್ರುಷ್ಟೇ ತು ಕರುಣಾ ಶ್ರುತಿಃ ॥ ೧೧೦ ॥

---

೧೦೬. ಕ್ರುಷ್ಟಸ್ವರದಿಂದ ದೇವತೆಗಳೂ, ಪ್ರಥಮಸ್ವರದಿಂದ ಮನುಷ್ಯರೂ, ದ್ವಿತೀಯಸ್ವರದಿಂದ ಪಶುಗಳೂ, ತೃತೀಯಸ್ವರದಿಂದ ಗಂಧರ್ವ ಮತ್ತು ಅಪ್ಸರಸ್ತ್ರೀಯರೂ ಸಂತೋಷಿಸುವರು.

೧೦೭. ಪಕ್ಷಿ ಮತ್ತು ಪಿತೃಗಳು ಚತುರ್ಥ ಸ್ವರದಿಂದಲೂ ಪಿಶಾಚ ಅಸುರ ಮತ್ತು ರಾಕ್ಷಸ ಇವರುಗಳು ಮಂದ್ರಸ್ವರದಿಂದಲೂ ಸಂತೋಷಿಸುವರು.

೧೦೮. ನೀಚವಾದ ಅತಿಸ್ವಾರದಿಂದ ಉಳಿದ ಚರಾಚರಾತ್ಮಕ ಪ್ರಪಂಚವೂ ಸಂತೋಷಿಸುತ್ತದೆ. ಹೀಗೆ ಸಕಲ ಪ್ರಾಣಿಗಳೂ ಸಾಮಿಕ ಸ್ವರಗಳಿಂದ ಪೋಷಿಸಲ್ಪಡುತ್ತವೆ.

೧೦೯. ದೀಪ್ತಾ, ಆಯತಾ, ಕರುಣಾ ಎಂಬ ಶ್ರುತಿಗಳು ಮತ್ತು ಅವುಗಳ ಮೃದು, ಮಧ್ಯಮ ಎಂಬ ವಿಶೇಷಗಳು ಇವುಗಳ ಸೂಕ್ಷ್ಮ ಪ್ರಭೇದಗಳನ್ನು ತಿಳಿಯದಿರುವವನು ಆಚಾರ್ಯನೆನಿಸುವುದಿಲ್ಲ.

೧೧೦. ಮಂದ್ರ, ದ್ವಿತೀಯ, ಚತುರ್ಥ, ಅತಿಸ್ವಾರ ಮತ್ತು ತೃತೀಯ ಎಂಬ ಐದು ಸ್ವರಗಳಲ್ಲಿ ದೀಪ್ತಾಶ್ರುತಿಯೂ, ಕ್ರುಷ್ಟ ಎಂದರೆ ಸಪ್ತಮ ಸ್ವರದಲ್ಲಿ ಕರುಣಾಶ್ರುತಿಯೂ ವಿಹಿತವಾಗಿದೆ.

**ಶ್ರುತಯೋ ಯಾ ದ್ವಿತೀಯಸ್ಯ ಮೃದುಮಧ್ಯಾಯತಾಃ ಸ್ಮೃತಾಃ ।**
**ತಾಸಾಮಪಿ ತು ವಕ್ಷ್ಯಾಮಿ ಲಕ್ಷಣಾನಿ ಪೃಥಕ್ಪೃಥಕ್ ॥ ೧೧೧ ॥**
**ಆಯತಾತ್ವಂ ಭವೇನ್ನೀಚೇ ಮೃದುತ್ವಂ ಚ ವಿಪರ್ಯಯೇ ।**
**ಸ್ವೇ ಸ್ವೇ ಸ್ವರೇ ಮಧ್ಯಮಾತ್ವಂ ತತ್ಸಮೀಕ್ಷ್ಯ ಪ್ರಯೋಜಯೇತ್ ॥ ೧೧೨ ॥**
**ದ್ವಿತೀಯೇ ವಿರತಾ ಯಾ ತು ಕ್ರುಷ್ಟಶ್ಚ ಪರತೋ ಭವೇತ್ ।**
**ದೀಪ್ತಾಂ ತಾಂ ತು ವಿಜಾನೀಯಾತ್ಪ್ರಥಮೇನ ಮೃದು ಸ್ಮೃತಾ ॥ ೧೧೩ ॥**
**ಅತ್ರೈವ ವಿರತಾ ಯಾ ತು ಚತುರ್ಥೇನ ಪ್ರವರ್ತತೇ ।**
**ತಥಾ ಮಂದ್ರೇ ಭವೇದ್ದೀಪ್ತಾ ಸಾಮ್ನಶ್ಚೈವ ಸಮಾಪನೇ ॥ ೧೧೪ ॥**

---

೧೧೧. ದ್ವಿತೀಯಸ್ವರದ ಶ್ರುತಿಗಳು ಮೃದು, ಮಧ್ಯಮ, ಆಯತಾ ಎಂಬುದಾಗಿ ವಿಹಿತವಾಗಿವೆ. ಅವುಗಳಿಗೂ ಪ್ರತ್ಯೇಕಪ್ರತ್ಯೇಕವಾಗಿ ಲಕ್ಷಣ ಗಳನ್ನು ಹೇಳುವೆನು.

೧೧೨. ತೃತೀಯಸ್ವರವು ಮುಂದಿದ್ದರೆ ದ್ವಿತೀಯಸ್ವರಕ್ಕೆ ಆಯತಾ ಎಂಬ ಶ್ರುತಿಯೂ, ಚತುರ್ಥಸ್ವರವು ಮುಂದೆ ಬಂದಾಗ ಮೃದುಭೂತವಾದ ಶ್ರುತಿಯೂ, ಸ್ವರಾಂತರವು ಮುಂದೆ ಬಂದಾಗ ಮಧ್ಯಮಾಶ್ರುತಿಯೂ ವಿಹಿತ ವಾಗಿದೆ. ಈರೀತಿ ವಿಶೇಷಗಳನ್ನು ನಿರ್ಧರಿಸಿ ಸಾಮಸ್ವರವನ್ನು ಪ್ರಯೋಗಿಸ ಬೇಕು.

೧೧೩. (ಕ್ರುಷ್ಟಶಬ್ದದಿಂದ ಕ್ರುಷ್ಟಸ್ವರವು, ಕೆಲವೆಡೆಗಳಲ್ಲಿ ಪ್ರಥಮ ಸ್ವರವು ಲಕ್ಷ್ಯಾನುಸಾರವಾಗಿ ಗ್ರಾಹ್ಯವು). ಕ್ರುಷ್ಟಸ್ವರದ ಮುಂದಿನ ದ್ವಿತೀಯಸ್ವರದಲ್ಲಿ ಅವಸ್ಥಿತವಾದ ಶ್ರುತಿಯನ್ನು ದೀಪ್ತಾ ಎಂದು ತಿಳಿಯಬೇಕು. ಅದು ಪ್ರಥಮಸ್ವರದಲ್ಲಿ ಅವಸ್ಥಿತವಾದರೆ ಮೃದುವೆನಿಸುವುದು.

೧೧೪. ಚತುರ್ಥಸ್ವರದಲ್ಲಿ ಅವಸ್ಥಿತವಾದ ಶ್ರುತಿಯೂ ಸಹ ಮೃದು ದೀಪ್ತೆಯನಿಸುವುದು. ಬೇರೆ ಸ್ವರದಲ್ಲಿ ನಿಂತರೆ ದೀಪ್ತೆಯಾಗುವುದು. ಇದೇ ರೀತಿಯಾಗಿ ಮಂದರದಲ್ಲಿ ಸ್ವರಾಂತರಾನುಗಮನವಾದಾಗ ದೀಪ್ತೆಯಾಗುವುದು. ಇದೇಪ್ರಕಾರ ಸಾಮ ಸಮಾಪ್ತಿಯಾಗುವಾಗ ಯಾವಯಾವ ಸ್ವರದಲ್ಲಿ ಅವಸ್ಥಿ ತವಾಗುವುದೋ ಅದು ಆಯಾಯಾ ಸ್ವರದ ದೀಪ್ತೆಯಾಗುವುದು.

ನಾವಿರತೇ ಶ್ರುತಿಂ ಕುರ್ಯಾತ್ಸ್ವರಯೋರ್ನಾಪಿ ಚಾಂತರೇ ।
ನ ಹ್ರಸ್ವೇ ಚ ದೀರ್ಘೇ ಚ ನ ಚಾಪಿ ಘುಟಸಂಜ್ಞಕೇ ॥ ೧೧೫ ॥

ದ್ವಿವಿಧಾ ಗತಿಃ ಪದಾಂತಸ್ಥಿತಸಂಧಿಃ ಸಹೋಷ್ಮಭಿಃ ।
ಸ್ಥಾನೇಷು ಪಂಚಸ್ವೇತೇಷು ವಿಜ್ಞೇಯಂ ಘುಟಸಂಜ್ಞಿಕಂ ॥ ೧೧೬ ॥

ಸ್ವರಾಂತರಾವಿರತಾನಿ ಹ್ರಸ್ವದೀರ್ಘಘುಟಾನಿ ಚ ।
ಶ್ರುತಿಸ್ಥಾನೇ ವಿಶೇಷೇಣ ಶ್ರುತಿವತ್ಸ್ವರತೋ ವದೇತ್ ॥ ೧೧೭ ॥

ದೀಪ್ತಾಮುದಾತ್ತೇ ಜಾನೀಯಾದ್ದೀಪ್ತಾಂ ಚ ಸ್ವರಿತೇ ವಿದುಃ ।
ಅನುದಾತ್ತೇ ಮೃದುರ್ಜ್ಞೇಯಾ ಗಾಂಧರ್ವಶ್ರುತಿಸಂಪದಃ ॥ ೧೧೮ ॥

---

೧೧೫. ಸ್ವರವು ಪರಿಸಮಾಪ್ತವಾಗದಿರುವಾಗ ಆಯತಾದಿ ಶ್ರುತಿಗಳನ್ನು ಗಾನಮಾಡಬಾರದು. ಅವಿಚ್ಛಿನ್ನವಾಗಿ ಗಾನಮಾಡುತ್ತಿರುವಾಗ ಎರಡುಸ್ವರಗಳ ಮಧ್ಯದಲ್ಲಿ ಶ್ರುತಿಯನ್ನು ಗಾನಮಾಡಬಾರದು. ಹ್ರಸ್ವ, ದೀರ್ಘ, ಘುಟ ಇವುಗಳನ್ನು ಗಾನಮಾಡುವಾಗ ಶ್ರುತಿಯನ್ನು ಸೇರಿಸಬಾರದು.

೧೧೬. ತಾಲವ್ಯವಾದ ಇಕಾರ ಉಕಾರಗಳಿಗೆ ಕ್ರಮವಾಗಿ ಅ, ಇ ಭಾವ, ಅ, ಉ ಭಾವ ಎಂಬುದಾಗಿ ಎರಡು ಗತಿಗಳಿವೆ. ಅವು ಮತ್ತು ಪದಾಂತ (ಪಾದಾಂತ, ಅರ್ಧಚಾರಾಂತ, ಋಗಂತ ಎಂಬೀ ಮೂರು) ಶ, ಷ, ಸ, ಹ ಎಂಬ ಊಷ್ಮವರ್ಣಗಳ ಸಂಧಿ ಈ ಐದು ಸ್ಥಾನಗಳನ್ನೂ ಘುಟ ಎಂದು ತಿಳಿಯಬೇಕು.

೧೧೭. ಸ್ವರ ಮತ್ತು ಸ್ವರಾಂತರವು ಮುಗಿಯದಿರುವಾಗ, ಹ್ರಸ್ವ, ದೀರ್ಘ, ಘುಟ ಇವುಗಳಲ್ಲಿ ಶ್ರುತಿಯನ್ನು ಮಾಡಬಾರದು. ಅದಕ್ಕೆ ಬದಲಾಗಿ ಸ್ವರವನ್ನೇ ಶ್ರುತಿಗೆ ಸಮವಾಗಿ ಹೇಳಬೇಕು.

೧೧೮. ಉಕ್ತವಾದ ಶ್ರುತಿಗಳೆಲ್ಲವೂ ಸಾಮದಲ್ಲಿ ಪ್ರವರ್ತಿಸುತ್ತವೆ. ಇತರ ಗಾನದಲ್ಲಿಯಾದರೋ ಎರಡೇ ಶ್ರುತಿಗಳು ಪ್ರವರ್ತಿಸುತ್ತವೆ. ಗಾಂಧರ್ವ ಗಾನದಲ್ಲಿ ಉದಾತ್ತ ಮತ್ತು ಸ್ವರಿತ ಇವೆರಡುಸ್ವರದಲ್ಲಿಯೂ ದಿಪ್ತಾಶ್ರುತಿಯೂ, ಅನುದಾತ್ತ ಸ್ವರದಲ್ಲಿ ಮೃದುಶ್ರುತಿಯೂ ಬರುತ್ತವೆಂದು ತಿಳಿಯಬೇಕು.

ಉದಾತ್ತಶ್ಚಾನುದಾತ್ತಶ್ಚ ಸ್ವರಿತಪ್ರಚಿತೇ ತಥಾ ।
ನಿಘಾತಶ್ಚೇತಿ ವಿಜ್ಞೇಯಃ ಸ್ವರಭೇದಶ್ಚ ಪಂಚಧಾ ॥ ೧೧೯ ॥

ಅತ ಊರ್ಧ್ವಂ ಪ್ರವಕ್ಷ್ಯಾಮಿ ಆರ್ಚಿಕಸ್ಯ ಸ್ವರತ್ರಯಂ ।
ಉದಾತ್ತಶ್ಚಾನುದಾತ್ತಶ್ಚ ತೃತೀಯಃ ಸ್ವರಿತಃ ಸ್ವರಃ ॥ ೧೨೦ ॥

ಯಚ್ಚೈವೋದಾತ್ತ ಇತ್ಯುಕ್ತಃ ಸ ಏವ ಸ್ವರಿತಾತ್ಪರಃ ।
ಪ್ರಚಯಃ ಪ್ರೋಚ್ಯತೇ ತಜ್ಞೈರ್ನಚಾತ್ರಾನ್ಯಸ್ವರಾಂತರಂ ॥ ೧೨೧ ॥

ವರ್ಣಸ್ವಾರೋಽತೀತಸ್ವಾರಃ ಸ್ವರಿತೋ ದ್ವಿವಿಧಃ ಸ್ಮೃತಃ ।
ಮಾತ್ರಿಕೋ ವರ್ಣ ಏವೇತಿ ದೀರ್ಘಸ್ತೂಚ್ಚರಿತಾದನು ॥ ೧೨೨ ॥

ಸ ತು ಸಪ್ತವಿಧೋ ಜ್ಞೇಯಃ ಸ್ವಾರಃ ಪ್ರತ್ಯಯದರ್ಶನಾತ್ ।
ಪದೇನ ತು ಸ ವಿಜ್ಞೇಯೋ ಭವೇದ್ಯೋ ಯತ್ರ ಯಾದೃಶಃ ॥ ೧೨೩ ॥

---

೧೧೯. ಉದಾತ್ತ, ಅನುದಾತ್ತ, ಸ್ವರಿತ, ಪ್ರಚಯ ಮತ್ತು ನಿಘಾತ ಎಂಬುದಾಗಿ ಸ್ವರವು ಐದುವಿಧವೆಂದು ತಿಳಿಯಬೇಕು. (ಸ್ವರಿತಾಕ್ಷರದ ಮುಂದಿನ ಸ್ವರಿತಾಕ್ಷರವು ಪ್ರಚಯವೆನಿಸುವುದು. ಪ್ರಚಯವು ಮುಂದಿದ್ದಾಗ ಹಿಂದಿನ ಸ್ವರಿತವು ನಿಘಾತವೆನಿಸುವುದು. ಪ್ರಚಯ ಸನ್ನಿಧಾನವಿಲ್ಲದಿರುವಾಗ ಸ್ವರಿತವು ಶುದ್ಧಸ್ವರಿತವಾಗುವುದು.)

೧೨೦. ಇನ್ನುಮುಂದೆ ಋಕ್ಕುಗಳ ಮೂರು ಸ್ವರಗಳನ್ನು ತಿಳಿಸುವೆನು. ಋಕ್ಕುಗಳಲ್ಲಿ ಉದಾತ್ತ, ಅನುದಾತ್ತ ಮತ್ತು ಸ್ವರಿತ ಎಂಬುದಾಗಿ ಮೂರು ಸ್ವರಗಳಿವೆ.

೧೨೧. ಉದಾತ್ತವೆಂದು ವಿಹಿತವಾಗಿರುವ ಸ್ವರವೇ ಸ್ವರಿತಸ್ವರದ ಮುಂದೆ ಬಂದರೆ ಅದನ್ನು ಸ್ವರತತ್ವಜ್ಞರು ಪ್ರಚಯವೆಂದು ಹೇಳುವರು. ಇದು ಬೇರೆಯಾದ ಸ್ವರವಲ್ಲ.

೧೨೨-೧೨೩. ಉದಾತ್ತ ಅನುದಾತ್ತಗಳ ಮಧ್ಯದಲ್ಲಿ ಉಚ್ಚರಿಸಲ್ಪಡುವ ಸ್ವರಕ್ಕೆ ಸ್ವರಿತವೆಂದು ಹೆಸರು. ಸ್ವರಿತಪ್ರಭೇದಗಳನ್ನು ಅಧ್ಯಾಪಕ ಸಂಪ್ರದಾಯದಿಂದ ತಿಳಿಯಬೇಕು. ಸ್ವರಿತವು ವರ್ಣಸ್ವಾರ, ಅತೀತಸ್ವಾರ, ದ್ವಿವಿಧ ಸ್ವರಿತಗಳು, ಮಾತ್ರಿಕ, ವರ್ಣ ಮತ್ತು ದೀರ್ಘ ಎಂದು ಏಳು ವಿಧವಾಗಿದೆಯೆಂದು ಸ್ವರದ ಸೂಕ್ಷ್ಮಜ್ಞಾನದಿಂದ ತಿಳಿಯಬೇಕು. ಎಲ್ಲಿ ಎಂತಹ ಸ್ವರವೆಂಬುದನ್ನು ಗಮಕದಿಂದ ತಿಳಿಯಬೇಕು.

**ಸಪ್ತಸ್ವರಾನ್ಪ್ರಯುಂಜೀತ ದಕ್ಷಿಣಂ ಶ್ರವಣಂ ಪ್ರತಿ ।**
**ಆಚಾರ್ಯೈರ್ವಿಹಿತಂ ಶಾಸ್ತ್ರಂ ಪುತ್ರಶಿಷ್ಯಹಿತೈಷಿಭಿಃ　　॥ ೧೨೪ ॥**

**ಉಚ್ಚಾದುಚ್ಚತರಂ ನಾಸ್ತಿ ನೀಚಾನ್ನೀಚತರಂ ತಥಾ ।**
**ವೈಸ್ವರ್ಯೇ ಸ್ವಾರಸಂಜ್ಞಾಯಾಂ ಕಿಂ ಸ್ಥಾನಂ ಸ್ವಾರಮುಚ್ಯತೇ ॥ ೧೨೫ ॥**

**ಉಚ್ಚನೀಚಸ್ಯ ಯನ್ಮಧ್ಯೇ ಸಾಧಾರಣಮಿತಿ ಶ್ರುತಿಃ ।**
**ತಂ ಸ್ವಾರಂ ಸ್ವಾರಸಂಜ್ಞಾಯಾಂ ಪ್ರತಿಜಾನಂತಿ ಶೈಕ್ಷಿಕಾಃ　　॥ ೧೨೬ ॥**

**ಉದಾತ್ತೇ ನಿಷಾದಗಾಂಧಾರಾವನುದಾತ್ತೇ ಋಷಭಧೈವತೌ ।**
**ಸ್ವರಿತಪ್ರಭವಾಹ್ಯೇತೇ ಷಡ್ಜಮಧ್ಯಮ ಪಂಚಮಾಃ　　॥ ೧೨೭ ॥**

---

೧೨೪. ಪುತ್ರ ಮತ್ತು ಶಿಷ್ಯರ ಹಿತಾಂಕಾಂಕ್ಷಿಗಳಾದ ಆಚಾರ್ಯರು ಈ ಶಾಸ್ತ್ರವನ್ನು ರಚಿಸಿರುವುದರಿಂದ, (ಅವರ ಉದ್ದೇಶವನ್ನು ಸಫಲಗೊಳಿಸಲು) ಬಲಗಿವಿಯಿಂದ ಸಪ್ತಸ್ವರಗಳನ್ನು ಶ್ರವಣಮಾಡಬೇಕು. ಎಂದರೆ ಶ್ರದ್ಧೆಯಿಂದ ಸ್ವರಶಾಸ್ತ್ರವನ್ನು ಅಭ್ಯಾಸಮಾಡಿ ಸ್ವರತತ್ವಗಳನ್ನು ತಿಳಿದುಕೊಳ್ಳಬೇಕೆಂದು ಭಾವ.

೧೨೫. ಉಚ್ಚಸ್ವರಕ್ಕಿಂತಲೂ ಅಧಿಕೋಚ್ಚಸ್ವರವಿಲ್ಲ. ಹಾಗೆಯೇ ನೀಚ ಸ್ವರಕ್ಕಿಂತಲೂ ಅಧಿಕ ನೀಚಸ್ವರವಿಲ್ಲ. ಹೀಗಿರುವುದರಿಂದ ಉದಾತ್ತಾನು ದಾತ್ತ ಸ್ವರವಿಲಕ್ಷಣವಾದ ಸ್ವರಿತ ಎಂಬ ಸಂಜ್ಞೆಗೆ ವಿಷಯವಾವುದು ? ಸ್ವರವು ಉದಾತ್ತಾನುದಾತ್ತವೆಂದು ಎರಡು ವಿಧವಾಗಿರುವುದೇ ಅನುಭವಸಿದ್ಧವಾಗಿದೆ. ಇದಲ್ಲದೇ ಬೇರೆ ಯಾವ ಸ್ವರವೂ ಸಿದ್ಧವಾಗಿಲ್ಲ. ಆದುದರಿಂದ ಸ್ವರಿತ ಎಂದು ಬೇರೆ ಸ್ವರಪ್ರಭೇದವನ್ನು ಹೇಳುವುದು ಹೇಗೆ ಎಂದು ತಾತ್ಪರ್ಯ

೧೨೬. ಉದಾತ್ತಾನುದಾತ್ತ ಸ್ವರಗಳ ಮಧ್ಯವರ್ತಿಯಾದ ಸ್ವರವನ್ನೇ ಶಿಕ್ಷಾಪ್ರವೀಣರು ಸಾಧಾರಣಸ್ವರವೆಂದು ಭಾವಿಸಿ ಅದನ್ನೇ ಸ್ವರಿತ ಎಂಬ ಸಂಜ್ಞೆಗೆ ವಿಷಯವೆಂದು ಹೇಳುವರು.

೧೨೭. ಉದಾತ್ತಸ್ವರದಲ್ಲಿ ನಿಷಾದ, ಗಾಂಧಾರ ಸ್ವರಗಳೂ, ಅನು ದಾತ್ತದಲ್ಲಿ ಋಷಭ, ಧೈವತಸ್ವರಗಳೂ ಅನುಗತವಾಗಿವೆ. ಷಡ್ಜ, ಮಧ್ಯಮ, ಪಂಚಮಸ್ವರಗಳು ಸ್ವರಿತದಿಂದ ಉಂಟಾಗುವುವು.

ಯತ್ರ ಕಖಪರಾ ಊಷ್ಮಾ ಜಿಹ್ವಾ ಮೂಲಪ್ರಯೋಜನಾ ।
ತಾಮುಷ್ಮ್ಯಾಜ್ಞಾಪಯೇನ್ಮಾತ್ರಾಂ ಪ್ರಕೃತ್ಯೈವ ತು ಸಾ ಕಲಾ ॥ ೧೨೮ ॥

ಜಾತ್ಯಃ ಕ್ಷೈಪ್ರೋಽಭಿನಿಹತಸ್ತೈರೋವ್ಯಂಜನ ಏವ ಚ ।
ತಿರೋವಿರಾಮಃ ಪ್ರಶ್ಲಿಷ್ಟಃ ಪಾದವೃತ್ತಶ್ಚ ಸಪ್ತಮಃ ॥ ೧೨೯ ॥

ಸ್ವರಾಣಾಮುಹಮೇತೇಷಾಂ ಪೃಥಗ್ವಕ್ಷ್ಯಾಮಿ ಲಕ್ಷಣಂ ।
ಉದ್ದಿಷ್ಟಾನಾಂ ಯಥಾನ್ಯಾಯಮುದಾಹರಣಮೇವ ಚ ॥ ೧೩೦ ॥

ಸ ಯಕಾರಂ ಸವಂ ವಾಪಿ ಹ್ಯಕ್ಷರಂ ಸ್ವರಿತಂ ಭವೇತ್ ।
ನ ಚೋದಾತ್ತಂ ಪುರಸ್ತಸ್ಯ ಜಾತ್ಯಃ ಸ್ವಾರಃ ಸ ಉಚ್ಯತೇ ॥ ೧೩೧ ॥

ಇ ಉವರ್ಣೌ ಯದೋದಾತ್ತಾವಾಪದ್ಯೇತೇ ಯವೌ ಕ್ವಚಿತ್ ।
ಅನುದಾತ್ತ (ಪ್ರತ್ಯಯ) ಪರೇ ನಿತ್ಯಂ ವಿದ್ಯಾತ್ ಕ್ಷೈಪ್ರಸ್ಯ ಲಕ್ಷಣಂ ॥೧೩೨॥

---

೧೨೮ ಜಿಹ್ವೆಯ ಮೂಲಭಾಗದಿಂದ ಪ್ರಯೋಗಿಸಲ್ಪಡುವ ಕ, ಖ ಎಂಬ ವರ್ಣಗಳ ಹಿಂದಿನ ಅರ್ಧ ವಿಸರ್ಗಗಳು ಸ್ವತಃ ವರ್ಣೈಕದೇಶಗಳಾಗಿರುವುದರಿಂದ ಅವನ್ನೂ ಸಹ ಮಾತ್ರೆಯೆಂದು ಹೇಳಬೇಕು.

೧೨೯. ಉಕ್ತವಾದ ಏಳು ಸ್ವರಗಳಿಗೆ ಕ್ರಮವಾಗಿ ಜಾತ್ಯ, ಕ್ಷೈಪ್ರ, ಅಭಿನಿಹಿತ, ತೈರೋವ್ಯಂಜನ, ತಿರೋವಿರಾಮ, ಪ್ರಶ್ಲಿಷ್ಟ, ಪಾದವೃತ್ತ ಎಂಬುದಾಗಿ ಹೆಸರು.

೧೩೦. ಮೇಲೆ ಹೇಳಿರುವ ಆ ಸ್ವರಗಳಿಗೆ ಒಂದೊಂದಕ್ಕೂ ಪ್ರತ್ಯೇಕವಾಗಿ ಶಾಸ್ತ್ರೋಕ್ತಪ್ರಕಾರ ಲಕ್ಷಣ ಮತ್ತು ಉದಾಹರಣೆಗಳನ್ನು ಹೇಳುವೆನು.

೧೩೧. ಯಕಾರ ಅಥವಾ ವಕಾರದಿಂದ ಸಹಿತವಾದ ಅಕ್ಷರವು ಸ್ವರಿತವಾಗಿದ್ದು ಅದರ ಮುಂದೆ ಉದಾತ್ತ ಸ್ವರವಿಲ್ಲದಿದ್ದರೆ ಅದು ಜಾತ್ಯಸ್ವರವೆನಿಸುವುದು.

೧೩೨. ಉದಾತ್ತವಾದ ಇ ಕಾರ ಉ ಕಾರಗಳಿಗೆ ಪದಾದಿಯಾದ ಅನುದಾತ್ತಾಕಾರವು ಮುಂದೆ ಬಂದರೆ, ಸಂಹಿತೆಯಲ್ಲಿ ಇ ಕಾರವು ಯ ಕಾರವಾಗಿಯೂ, ಉಕಾರವು ವಕಾರವಾಗಿಯೂ ಪರಿಣಮಿಸಿ ಸ್ವರಿತವಾಗುವುದು. ಆ ಸ್ವರವು ಕ್ಷೈಪ್ರವೆನಿಸುವುದು. ಅದೇ ಕ್ಷೈಪ್ರಸ್ವರದ ಲಕ್ಷಣವೆಂದು ತಿಳಿಯಬೇಕು. ಉದಾಹರಣೆ ಶ್ರುಷ್ಟಿ+ಅಗ್ನೇ=ಶ್ರುಷ್ಟ್ಯಗ್ನೇ. ವೀಡು+ಅಂಗಃ=ವೀಡ್ವಂಗಃ.

ಏ ಓ ಆಭ್ಯಾಮುದಾತ್ತಾಭ್ಯಾಮುಕಾರೋ ನಿಹಿತಶ್ಚ ಯಃ ।
ಅಕಾರಂ ಯತ್ರ ಲುಂಪಂತಿ ತಮಭಿನಿಹಿತಂ ವಿದುಃ ॥ ೧೩೩ ॥

ಉದಾತ್ತಪೂರ್ವಂ ಯತ್ಕಿಂಚಿಚ್ಛಂದಸಿ ಸ್ವರಿತಂ ಭವೇತ್ ।
ಏಷ ಸರ್ವಬಹುಸ್ವಾರಸ್ತ್ಯೈರೋವ್ಯಂಜನ ಉಚ್ಯತೇ ॥ ೧೩೪ ॥

ಅವಗ್ರಹಾತ್ಪರಂ ಯತ್ರ ಸ್ವರಿತಂ ಸ್ಯಾದನಂತರಂ ।
ತಿರೋವಿರಾಮಂ ತಂ ವಿದ್ಯಾದುದಾತ್ತೋ ಯದ್ಯವಗ್ರಹಃ ॥ ೧೩೫ ॥

ಇಕಾರಂ ಯತ್ರ ಪಶ್ಯೇಯುರಿಕಾರೇಣೈವ ಸಂಯುತಂ ।
ಉದಾತ್ತಮನುದಾತ್ತೇನ ಪ್ರಶ್ಲಿಷ್ಟಂ ತಂ ನಿಬೋಧತ ॥ ೧೩೬ ॥

ಸ್ವರೇ ಚೇತ್ಸ್ವರಿತಂ ಯತ್ರ ವಿವೃತ್ತಾ ಯತ್ರ ಸಂಹಿತಾ ।
ಏತತ್ಪಾದಾಂತವೃತ್ತಸ್ಯ ಲಕ್ಷಣಂ ಶಾಸ್ತ್ರಚೋದಿತಂ ॥ ೧೩೭ ॥

---

೧೩೩. ಉದಾತ್ತವಾದ ಏ ಕಾರ ಅಥವಾ ಓ ಕಾರಗಳ ಮುಂದೆ ಬರುವ ಅಕಾರವು ಏಕಾರ ಓಕಾರಗಳಲ್ಲಿಯೇ ಸೇರಿ ಸ್ವತಃ ಲುಪ್ತವಾಗಿ ಸ್ವರಿತವಾಗುವುದು. ಅದನ್ನು ಅಭಿನಿಹಿತಸ್ವರವೆಂದು ತಿಳಿಯುವರು ಉದಾ—ತೇಽ ಮನ್ವತ.

೧೩೪. ಸಂಹಿತೆಯಲ್ಲಿ ಸಂಭವಿಸಿದ ಉದಾತ್ತಪೂರ್ವಕವಾದ ಸ್ವರಿತವು ಋಗ್ವೇದ ಯಜುರ್ವೇದಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ತಿರೋಗಮನದಿಂದ ಬರುತ್ತದೆಯಾದಕಾರಣ ಅದು ತೈರವ್ಯಂಜನವೆನಿಸಿಕೊಳ್ಳುತ್ತದೆ.

೧೩೫. ಉದಾತ್ತವಾದ ಅವಗ್ರಹದ ಮುಂದೆ ಸ್ವರಿತವು ಬಂದರೆ ಅದನ್ನು ತಿರೋವಿರಾಮವೆಂದು ತಿಳಿಯಬೇಕು.

೧೩೬. ಉದಾತ್ತವಾದ ಇಕಾರವು ಅನುದಾತ್ತವಾದ ಇಕಾರದಿಂದ ಸಂಯುಕ್ತವಾದಾಗ ಬರುವ ಸ್ವರಿತವನ್ನು ಪ್ರಶ್ಲಿಷ್ಟವೆಂದು ತಿಳಿಯಬೇಕು.

೧೩೭. ಮಂತ್ರದಲ್ಲಿನ ಅಕಾರಾದಿ ಸ್ವರಾಕ್ಷರವು ಸ್ವರಿತಸ್ವರಯುಕ್ತವಾಗಿ ಸಂಹಿತೆಯ ಪದದಿಂದ ವಿಭಕ್ತವಾದಾಗ ಸಂಭವಿಸುವ ಸ್ವರವು ಪಾದವೃತ್ತವೆನಿಸುವುದು. ಅದೇ ಶಾಸ್ತ್ರವಿಹಿತವಾದ ಪಾದವೃತ್ತಸ್ವರಿತಸ್ವರದ ಲಕ್ಷಣವೆಂದು ತಿಳಿಯಬೇಕು.

ಜಾತ್ಯಃ ಸ್ವಾರಃ ಸಜಾತ್ಯೇನ ಶ್ರುಷ್ಟ್ಯಗ್ನೇ ಕ್ಷೈಪ್ರ ಉಚ್ಯತೇ ।
ತೇಽಮನ್ವತಾಭಿನಿಹತಸ್ತ್ಯೈರವ್ಯಂಜನ ಊತಯೇ ॥ ೧೩೮ ॥

ತಿರೋವಿರಾಮೋ ವಿಷ್ಕಭಿತೇ ಪ್ರಶ್ಲಿಷ್ಟೋ ಽಽಂದ್ರಗಿರ್ವಣಃ ।
ಪಾದವೃತ್ತಃ ಕ ಈ ವೇದ ಸ್ವಾರಾಃ ಸಪ್ತೈವಮಾದಯಃ ॥ ೧೩೯ ॥

ಉಚ್ಚಾದೇಕಾಕ್ಷರಾತ್ಪೂರ್ವಂ ಸ್ವರ್ಯತೇ ಯದಿಹಾಕ್ಷರಂ ।
ಸ್ವರಾಣಾಂ ಜಾತ್ಯವರ್ಜಾನಾಮೇಷಾಂ ಪ್ರಕೃತಿರುಚ್ಯತೇ ॥ ೧೪೦ ॥

ಚತ್ವಾರಸ್ತ್ವಾದಿತಸ್ವಾರಾಃ ಕಂಪಂ ಪುಷ್ಯಂತಿ ಶಾಸ್ತ್ರತಃ ।
ಉದಾತ್ತೇ ಚೈಕನೀಚೇ ವಾ ಜುಹ್ವೋಗ್ನಿಸ್ತನ್ನಿದರ್ಶನಂ ॥ ೧೪೧ ॥

ಇಕಾರಾಂತೇ ಪದೇ ಪೂರ್ವೇ ಉಕಾರೇ ಪರತಃ ಸ್ಥಿತೇ ।
ಹ್ರಸ್ವಕಂಪಂ ವಿಜಾನೀಯಾನ್ಮೇಧಾವೀ ನಾತ್ರ ಸಂಶಯಃ ॥ ೧೪೨ ॥

---

೧೩೮–೧೩೯. 'ಸಜಾತ್ಯೇನ' ಎಂಬಲ್ಲಿ ಜಾತ್ಯಸ್ವರವು, 'ಶ್ರುಷ್ಟ್ಯಗ್ನೇ' ಎಂಬಲ್ಲಿ ಕ್ಷೈಪ್ರಸ್ವರವೂ ಉಕ್ತವಾಗಿದೆ. 'ತೇಽಮನ್ವತ' ಎಂಬಲ್ಲಿ ಅಭಿನಿಹತ ಸ್ವರವೂ, 'ಊತಯೇ' ಎಂಬಲ್ಲಿ ತೈರವ್ಯಂಜನಸ್ವರವೂ, 'ವಿಷ್ಕಭಿತೇ' ಎಂಬಲ್ಲಿ ತಿರೋವಿರಾಮಸ್ವರವೂ, 'ಇಂದ್ರಗಿರ್ವಣಃ' ಎಂಬಲ್ಲಿ ಪ್ರಶ್ಲಿಷ್ಟಸ್ವರವೂ, 'ಕ ಈ ವೇದ' ಎಂಬಲ್ಲಿ ಪಾದವೃತ್ತಸ್ವರವೂ ಹೀಗೆ ಏಳು ಸ್ವರಗಳನ್ನು ವೇದದಲ್ಲಿ ತಿಳಿಯಬೇಕು. ಇವೇ ಉಕ್ತವಾದ ಏಳು ಸ್ವರಗಳಿಗೆ ಉದಾಹರಣೆಗಳು.

೧೪೦. ಉದಾತ್ತಸ್ವರದ ಮುಂದೆ ಜಾತ್ಯಸ್ವರಾದಿರಹಿತವಾಗಿ ಉಚ್ಚರಿಸುವ ಅಕ್ಷರವು ಸರಿತವೆನಿಸುವುದು ಎಂಬುದಾಗಿ ಸಾಮಾನ್ಯಲಕ್ಷಣವು ಉಕ್ತವಾಯಿತು.

೧೪೧. ಜಾತ್ಯ, ಕ್ಷೈಪ್ರ, ಅಭಿನಿಹಿತ, ಪ್ರಶ್ಲಿಷ್ಟ ಎಂಬ ನಾಲ್ಕು ಸ್ವರಗಳ ಮುಂದೆ ಉದಾತ್ತಾನುದಾತ್ತಗಳ ಪೈಕಿ ಯಾವುದಾದರೂ ಒಂದು ಬಂದರೆ ಅವು ಶಾಸ್ತ್ರವಿಧಾನಾನುಸಾರವಾಗಿ ಕಂಪಯುಕ್ತವಾಗುವುವು. 'ಜುಹ್ವೋಽಽಗ್ನಿಃ' ಎಂಬುದೇ ಅದಕ್ಕೆ ಉದಾಹರಣೆಯು.

೧೪೨. ಇಕಾರಾಂತ ಪೂರ್ವಪದದ ಮುಂದೆ ಉಕಾರವಿದ್ದರೆ ಅಲ್ಲಿ ಸಂಭವಿಸುವ ಕಂಪವು ಹ್ರಸ್ವಕಂಪವೆಂದು ಮೇಧಾವಿಯಾದವನು ತಿಳಿಯಬೇಕು. ಇದರಲ್ಲಿ ಸಂದೇಹವಿಲ್ಲ.

ಇಕಾರಾಂತೇ ಪದೇ ಚೈವೋಕಾರದ್ವೇ ಪರೇ ಪದೇ ।
ದೀರ್ಘಕಂಪಂ ವಿಜಾನೀಯಾಚ್ಛಗ್ಧ್ಯೃಷ್ವಿತಿ ನಿದರ್ಶನಂ ॥ ೧೪೩ ॥

ತ್ರಯೋ ದೀರ್ಘಾಸ್ತು ವಿಜ್ಞೇಯಾಃ ಯೇ ಚ ಸಂಧ್ಯಕ್ಷರೇಷು ವೈ ।
ಮನ್ಯಾ ಪಥ್ಯಾ ನ ಇಂದ್ರಾಭ್ಯಾಂ ಶೇಷಾಃ ಹ್ರಸ್ವಾಃ ಪ್ರಕೀರ್ತಿತಾಃ ॥ ೧೪೪ ॥

ಅನೇಕಾನಾಮುದಾತ್ತಾನಾಮನುದಾತ್ತಃ ಪರೋ ಯದಿ ।
ಶಿವಕಂ ತಂ ವಿಜಾನೀಯಾದುದಾತ್ತಃ ಪ್ರತ್ಯಯೋ ಯದಿ ॥ ೧೪೫ ॥

ಯತ್ರ ದ್ವಿಪ್ರಭೃತೀನಿ ಸ್ಯುಃ ಉದಾತ್ತಾನ್ಯಕ್ಷರಾಣಿ ತು ।
ನೀಚಂ ಚೋಚ್ಚಂ ಚ ಪರತಃ ತತ್ರೋದಾತ್ತಂ ವಿದುರ್ಬುಧಾಃ ॥ ೧೪೬ ॥

ನ ರೇಫೇ ವಾ ಹಕಾರೇ ವಾ ದ್ವಿರ್ಭಾವೋ ಜಾಯತೇ ಕ್ವಚಿತ್ ।
ನ ಚ ವರ್ಗದ್ವಿತೀಯೇಷು ನ ಚತುರ್ಥೇ ಕದಾಚನ ॥ ೧೪೭ ॥

---

೧೪೩. ಪೂರ್ವಪದವು ಇಕಾರಾಂತವಾಗಿದ್ದು ಉತ್ತರಪದದಲ್ಲಿ ಉಕಾರ ದ್ವಯವಿದ್ದರೆ ದೀರ್ಘಕಂಪವೆಂದು ತಿಳಿಯಬೇಕು, 'ಶಗ್ಧ್ಯೃಷು' ಎಂಬುದೇ ಇದಕ್ಕೆ ಉದಾಹರಣೆಯು.

೧೪೪. (1) ಭದ್ರಾವಸ್ತ್ರಾಸಮನ್ಯಾಽವಸಾನಃ (2) ಋತಸ್ಯ ಪಥ್ಯಾಽಅನು (3) ಮಾನಇಂದ್ರಾಭ್ಯಾಽದಿಶಃ ಎಂಬೀ ಮುಂತಾದ ವಾಕ್ಯಗಳಲ್ಲಿನ 'ನ್ಯಾ ಥ್ಯಾ ಭ್ಯಾ' ಎಂಬ ಸಂಯುಕ್ತಾಕ್ಷರಗಳ ಮುಂದೆ ಮೂರು ದೀರ್ಘಗಳುಂಟೆಂದು ತಿಳಿಯಬೇಕು. ಉಳಿದವುಗಳಲ್ಲಿ ಹ್ರಸ್ವಕಂಪಗಳನ್ನು ಉಚ್ಚರಿಸಬೇಕು.

೧೪೫. ಒಂದಕ್ಕಿಂತ ಹೆಚ್ಚಾದ ಉದಾತ್ತಗಳ ಮುಂದೆ ಅನುದಾತ್ತವು ಬಂದರೆ ದ್ವಿತೀಯಾದಿ ಉದಾತ್ತಗಳ ಹಿಂದಿನ ಮೊದಲನೆಯ ಉದಾತ್ತವನ್ನು ಶಿವಕವೆಂದು ತಿಳಿಯಬೇಕು. ಶಿವಕ ಎಂಬುದು ಉದಾತ್ತದ ಸಂಜ್ಞೆಯು, ಸ್ವರಿತ ವಿಷಯವಲ್ಲ.

೧೪೬. ಎರಡು ಅಥವಾ ಅದಕ್ಕಿಂತ ಹೆಚ್ಚು ಉದಾತ್ತಾಕ್ಷರಗಳಮುಂದೆ ಅನುದಾತ್ತ ಅಥವಾ ಉದಾತ್ತಗಳು ಬಂದರೂ ಅದನ್ನು ಜ್ಞಾನಿಗಳು ಉದಾತ್ತಸ್ವರವೆಂದೇ ತಿಳಿದಿರುವರು. (ಹಿಂದಿನ ಶ್ಲೋಕದಲ್ಲಿ ಹೇಳಿರುವುದನ್ನೇ ಇಲ್ಲಿ ವಿವರಿಸಿದೆ.)

೧೪೭. 'ರೇಫ' ಎಂದರೆ 'ರ' ಎಂಬ ವರ್ಣ, ಹ, ಖ, ಛ, ಠ, ಥ, ಫ ಎಂಬ ವರ್ಗದ್ವಿತೀಯಾಕ್ಷರಗಳು ಮತ್ತು ಘ, ಝ, ಢ, ಧ, ಭ ಎಂಬ ವರ್ಗದ

**ಚತುರ್ಥಂ ತು ತೃತೀಯೇನ ದ್ವಿತೀಯಂ ಪ್ರಥಮೇನ ತು ।**
**ಆದ್ಯಮಂತಂ ಚ ಮಧ್ಯಂ ಚ ಸ್ವಾಕ್ಷರೇಣೈವ ಪೀಡಯೇತ್ ॥ ೧೪೮ ॥**

**ಅನಂತ್ಯಶ್ಚ ಭವೇತ್ಪೂರ್ವೋಽಂತ್ಯಶ್ಚ ಪರತೋ ಯದಿ ।**
**ತತ್ರ ಮಧ್ಯೇ ಯಮಸ್ತಿಷ್ಠೇತ್ಸವರ್ಣಃ ಪೂರ್ವವರ್ಣಯೋಃ ॥ ೧೪೯ ॥**

**ವರ್ಗಾಂತ್ಯಾನ್ ಶಷಸೈಃ ಸಾರ್ಧಮಂತಸ್ಥೈರ್ವಾಽಪಿ ಸಂಯುತಾನ್ ।**
**ದೃಷ್ಟ್ವಾ ಯಮಾ ನಿವರ್ತಂತೇ ಆದೇಶಿಕಮಿವಾಧ್ವಗಾಃ ॥ ೧೫೦ ॥**

**ತೃತೀಯಶ್ಚ ಚತುರ್ಥಶ್ಚ ಚತುರ್ಥಾದಿಪರಂ ಪದಂ ।**
**ದ್ವೌ ತೃತೀಯೌ ಹಕಾರಶ್ಚ ಹಕಾರಾದಿಪರಂ ಪದಂ ॥ ೧೫೧ ॥**

---

ನಾಲ್ಕನೆಯ ಅಕ್ಷರಗಳು ಇವುಗಳಿಗೆ ಯಾವ ಸಂದರ್ಭದಲ್ಲಿಯೂ ದ್ವಿಭಾವ ವುಂಟಾಗುವುದಿಲ್ಲ. (ಎರಡು ಒಟ್ಟಿಗೆ ಸಂಧಿಸುವುದಿಲ್ಲ.)

೧೪೮. ಅಂತಹ ಸಂದರ್ಭದಲ್ಲಿ ಹೇಗೆ ಪ್ರಯೋಗಿಸಬೇಕೆಂದರೆ:— ನಾಲ್ಕನೆಯ ವರ್ಣವನ್ನು ಆ ವರ್ಗದ ಮೂರನೆಯ ವರ್ಣದಿಂದಲೂ, ಎರಡ ನೆಯ ವರ್ಣವನ್ನು ಮೊದಲನೆಯ ವರ್ಣದಿಂದಲೂ ಸಂಯೋಜನೆ ಮಾಡಿ ಪ್ರಯೋಗಿಸಬೇಕು. ವರ್ಗಗಳ ಮೊದಲು ಕೊನೆ ಮಧ್ಯದ ಅಕ್ಷರಗಳನ್ನು ಮಾತ್ರ ಆಯಾಯ ಅಕ್ಷರಗಳನ್ನೇ ಸಂಯುಕ್ತವಾಗಿ ಪ್ರಯೋಗಿಸಬೇಕು.

೧೪೯. ವರ್ಗದ ಗಕಾರ ಮುಂತಾದ ಮಧ್ಯಮಾಕ್ಷರವು ಪೂರ್ವದಲ್ಲಿಯೂ 'ನ' ಮುಂತಾದ ಕೊನೆಯ ಅಕ್ಷರವು ಪರದಲ್ಲಿಯೂ ಬಂದಾಗ ಮಧ್ಯದಲ್ಲಿ ಯಮವು ಬರುತ್ತದೆ. ಅದನ್ನು ಪೂರ್ವವರ್ಣಕ್ಕೆ ಅಂಗವಾಗಿ ಉಚ್ಚರಿಸ ಬೇಕು.

೧೫೦. ವರ್ಗಾಂತ್ಯವಾದ ನಕಾರಾದಿಗಳು ಶ, ಷ, ಸ, ಹ, ಯ, ರ, ಲ, ವ ಎಂಬ ಅಕ್ಷರಗಳಿಂದ ಸಂಯುಕ್ತವಾದರೆ ಪ್ರಯಾಣಿಕರು ಕಳ್ಳರನ್ನು ನೋಡಿ ಓಡಿಹೋಗುವಂತೆ ಯಮಗಳು ನಿವೃತ್ತವಾಗುತ್ತವೆ.

೧೫೧. ವರ್ಗದ ತೃತೀಯ ಚತುರ್ಥ ವರ್ಣಗಳು ಸಂಹಿತೆಯಲ್ಲಿ ಸಂಯುಕ್ತ ವಾಗಿದ್ದರೆ ಪದಕಾಲದಲ್ಲಿ ಉತ್ತರಪದವು ಚತುರ್ಥವರ್ಣಾದಿಯಾಗುವುದು. ಎರಡು ತೃತೀಯ ವರ್ಣಗಳು, ಹಕಾರ ಇವು ಸಂಹಿತೆಯಲ್ಲಿ ಸೇರಿರುವಾಗ ಪದಮಾಡುವಕಾಲದಲ್ಲಿ ಹಕಾರಾದಿಯಾಗಿಯೇ ಉತ್ತರಪದವಾಗುವುದು.

ಅನುಸ್ವಾರೋಽಪಧ್ಮಮೂಲ್ಯಾನಾಂ ನ ಕ್ವಚಿತ್ಕ್ರಮತೇಽಕ್ಷರಂ ।
ರಹಪೂರ್ವಯುತೇ ಚಾಪ್ಯುತ್ತರಂ ಕ್ರಮತೇಽಕ್ಷರಂ ॥ ೧೫೨ ॥

ಸಂಯೋಗೇ ಯತ್ರ ದೃಶ್ಯೇತ ವ್ಯಂಜನಂ ವಿರತೇ ಪದೇ ।
ಪೂರ್ವಾಂಗಮಾದಿತಃ ಕೃತ್ವಾ ಪರಾಂಗಾದೌ ನಿವೇಶಯೇತ್ ॥ ೧೫೩ ॥

ಸಂಯೋಗೇ ಸ್ವರಿತಂ ಯತ್ರ ಉದ್ಘಾತೇ ಪತನೇ ತಥಾ ।
ಪೂರ್ವಾಂಗಮಾದಿತಃ ಕೃತ್ವಾ ಪರಾಂಗಾದೌ ನಿವೇಶಯೇತ್ ॥ ೧೫೪ ॥

ಸಂಯೋಗೇ ದೃಶ್ಯತೇ ಯತ್ರ ವ್ಯಂಜನಂ ವಿರತೇ ಪದೇ ।
ಪೂರ್ವಾಂಗಂ ತದ್ವಿಜಾನೀಯಾದ್ಯೇನಾರಂಭಃ ಪರಂ ಹಿ ತತ್ ॥ ೧೫೫ ॥

---

೧೫೨. ಅನುಸ್ವಾರ, ಉಪಧ್ಮಾನೀಯ ಮತ್ತು ಜಿಹ್ವಾಮೂಲೀಯ ಇವುಗಳಿಗೆ ಎಲ್ಲಿಯೂ ದ್ವಿರುಕ್ತಿಯಿಲ್ಲ. ರೇಫ ಅಥವಾ ಹಕಾರದಿಂದ ಸಂಯುಕ್ತವಾದ ಉತ್ತರವರ್ಣವು ದ್ವಿರುಕ್ತವಾಗುವುದು. (ಪ, ಫ ವರ್ಣಗಳ ಹಿಂದಿನ ೲ ಅರ್ಧವಿಸರ್ಗವು ಉಪಧ್ಮಾನೀಯವು. ಕ, ಖ ವರ್ಣಗಳ ಹಿಂದಿನ ಅರ್ಧವಿಸರ್ಗವು ಜಿಹ್ವಾಮೂಲೀಯವು ಎಂದು ತಿಳಿಯಬೇಕು.)

೧೫೩. ಸಂಯುಕ್ತವಾಗಿರುವುದನ್ನು ವಿಭಾಗಮಾಡುವಾಗ ಉತ್ತರ ಪದಾಸಂಬದ್ಧವಾಗಿ ಕಂಡುಬರುವ ವ್ಯಂಜನವು ಪೂರ್ವಪದದ ಭಾಗವಾಗುವುದು. ಅದಕ್ಕೆ ಅನುದಾತ್ತ ಮತ್ತು ಉದಾತ್ತ ಸ್ವರಗಳನ್ನು ಸೇರಿಸಿ ಉತ್ತರಪದದ ಆದಿ ಭಾಗದಲ್ಲಿ ಉಚ್ಚರಿಸಬೇಕು.

೧೫೪. ಸಂಧಿಮಾಡುವಾಗ ಸ್ವರಿತಸ್ವರವನ್ನು, ಅನುದಾತ್ತದಿಂದ ಮೇಲಕ್ಕೂ ಉದಾತ್ತದಿಂದ ಕೆಳಕ್ಕೂ ಎಳೆಯುವಾಗ ಅದರ ಪೂರ್ವಾಂಶವನ್ನೂ, ಉದಾತ್ತ ಅನುದಾತ್ತ ಸ್ವರಯುಕ್ತವನ್ನಾಗಿ ಮಾಡಿ ಉತ್ತರ ಪದದ ಆದಿಯಲ್ಲಿ ಸ್ವರವನ್ನು ಸೇರಿಸಬೇಕು.

೧೫೫. ಸಂಯುಕ್ತವಾಗಿರುವುದನ್ನು ವಿಭಾಗಿಸಿ ಪದ ಮಾಡುವಾಗ ಉತ್ತರಪದಾಸಂಬದ್ಧವಾಗಿ ತೋರಿಬರುವ ವ್ಯಂಜನವನ್ನು ಪೂರ್ವಪದದ ಭಾಗವೆಂದು ತಿಳಿಯಬೇಕು. ಸಂಧಿಮಾಡುವಾಗ ಅದೇ ವ್ಯಂಜನದಿಂದ ಉತ್ತರ ಪದವು ಆರಂಭವಾಗುವುದು.

ಸಂಯೋಗಾತ್ತು ಪರಂ ಸ್ವಾರ್ಯಂ ಪರಂ ಸಂಯೋಗನಾಯಕಂ ।
ಸಂಯುಕ್ತಸ್ಯ ತು ವರ್ಣಸ್ಯ ಅಸ್ವರಂ ಪೂರ್ವನುಕ್ಷರಂ ॥ ೧೫೬ ॥

ಅನುಸ್ವಾರಃ ಪದಾಂತಶ್ಚ ಕ್ರಮಜಂ ಪ್ರತ್ಯಯೇ ಸ್ವಕೇ ।
ಸ್ವರಭಕ್ತಿಸ್ತಥಾ ರೇಫಃ ಸರ್ವಂ ಪೂರ್ವಾಂಗಮುಚ್ಯತೇ ॥ ೧೫೭ ॥

ಪಾದಾದೌ ಚ ಪದಾದೌ ಚ ಸಂಯೋಗಾವಗ್ರಹೇಷು ಚ ।
ಯ್ಯ ಶಬ್ದ ಇತಿ ವಿಜ್ಞೇಯೋ ಯೋಽನ್ಯಸ್ಸ ಯ ಇತಿ ಸ್ಮೃತಃ ॥ ೧೫೮ ॥

ಪದಾದಾವಪ್ಯವಿಚ್ಛೇದೇ ಸಂಯೋಗಾಂತೇ ಚ ತಿಷ್ಠತಾಂ ।
ವರ್ಜಯಿತ್ವಾ ರಹೌ ಯಾನಾಮಯಾದೇಶಃ ಪ್ರದೃಶ್ಯತೇ ॥ ೧೫೯ ॥

ಸ್ವಸಂಯುಕ್ತೋ ಗುರುರ್ಜ್ಞೇಯಃ ಸಾನುಸ್ವಾರೋಽಗ್ರಿಮಃ ಸ್ಫುಟಃ ।
ಅಣುಃ ಶೇಷೋಽಧ್ರಿಗೋರ್ವಾಪಿ ಯುಗಲಾದಿರವಿಸ್ಫುಟಃ ॥ ೧೬೦ ॥

---

೧೫೬. ಸಂಯುಕ್ತಾಕ್ಷರದಲ್ಲಿ ಪರವರ್ಣವನ್ನು ಸ್ವರಸಹಿತವಾಗಿ ಹೇಳಬೇಕು. ಪರವರ್ಣವೇ ಪ್ರಧಾನವಾದುದರಿಂದ ಸ್ವರಕ್ಕೆ ಅಲ್ಲಿ ವಿಶ್ರಾಂತಿಯಾಗುವುದು. ಸಂಯುಕ್ತವರ್ಣದಲ್ಲಿನ ಪೂರ್ವವ್ಯಂಜನವನ್ನು ಸ್ವರರಹಿತವಾಗಿ ಪ್ರಯೋಗಿಸಬೇಕು.

೧೫೭ ಪದಾಂತವಾದ ಅನುಸ್ವಾರವು, ಸವರ್ಣವುಳ್ಳ ಪದವು ಪರದಲ್ಲಿದ್ದರೆ ಆ ವರ್ಣವು ದ್ವಿರುಕ್ತವಾಗುವುದು. ಅದು, ಋಕಾರಗತರೇಫರೂಪವಾದ ಸ್ವರಭಕ್ತಿ ಇವೆಲ್ಲವೂ ಪೂರ್ವಪದದ ಅಂಗವಾಗುವುದು.

೧೫೮. ಪಾದಾರಂಭ, ಪದಾರಂಭ, ಸಂಯೋಗ ಮತ್ತು ಅವಗ್ರಹ ಇವುಗಳಲ್ಲಿನ ಯಕಾರವನ್ನು 'ಯ್ಯ' ಎಂದು ದ್ವಿರುಕ್ತವಾಗಿ ತಿಳಿಯಬೇಕು. ಇಂತಹುದಲ್ಲದ ಯಕಾರವನ್ನು 'ಯ' ಎಂಬುದಾಗಿಯೇ ಹೇಳಬೇಕು.

೧೫೯. ಅವಿಚ್ಛಿನ್ನವಾದ ಪದಾದಿ ಮತ್ತು ಸಂಯೋಗಾಂತಗಳಲ್ಲಿರುವ ರ, ಹ ಎಂಬ ವರ್ಣರಹಿತವಾದ ಯಕಾರಗಳಿಗೆ ಅಯಾದೇಶವು ಕಂಡುಬರುತ್ತದೆ.

೧೬೦. ಸಂಯುಕ್ತಾಕ್ಷರ, ಅನುಸ್ವಾರಸಹಿತವಾದದು, ಅಂತಿಮಾಕ್ಷರ ಇವುಗಳನ್ನು ಗುರು ಎಂದೂ ಉಳಿದುದನ್ನು ಅಣು ಎಂದೂ ತಿಳಿಯಬೇಕು.

ಯದುದಾತ್ತಮುದಾತ್ತಂ ತದ್ಯತ್ಸ್ವರಿತಂ ತತ್ಪದೇ ಭವತಿ ನೀಚಂ ।
ಯನ್ನೀಚಂ ನೀಚಮೇವ ತದ್ಯತ್ಪ್ರಚಯಸ್ಥಂ ತದಪಿ ನೀಚಂ ॥ ೧೬೧ ॥

ಅಯಮಗ್ನಿಃ ಸುತೋ ಮಿತ್ರಮಿದಂ ವಯಮಯಾವಹಾಃ ।
ಪ್ರಿಯಂ ದೂತಂ ಘೃತಂ ವಿತ್ತಮಭಿಶಬ್ದಶ್ಚ ನೀಚತಃ ॥ ೧೬೨ ॥

ಅರ್ಕೇಷ್ವೇವ ಸುತೇಷ್ವೇವ ಯಜ್ಞೇಷು ಕಲಶೇಷು ಚ ।
ಶತೇಷು ಸಪವಿತ್ರೇಷು ನೀಚಾದುಚ್ಚಾರ್ಯತೇ ಶ್ರುತಿಃ ॥ ೧೬೩ ॥

ಹರಿವರುಣವರೇಣ್ಯೇಷು ಧಾರಾಪುರುಷೇಷು ಚ ಸ್ವರತಿ ರೇಫಃ ।
ವಿಶ್ವಾನರೋ ನಕಾರೇಣ ಶೇಷಾ ರಸ್ವರಿತಾ ನರಾಃ ॥ ೧೬೪ ॥

---

೧೬೧. ಸಂಹಿತೆಯಾಗಿ ಹೇಳುವಾಗ ಉದಾತ್ತಸ್ವರಯುಕ್ತವಾದುದು ಪದದಲ್ಲಿಯೂ ಉದಾತ್ತವೇ ಆಗುವುದು. ಅನುದಾತ್ತ ಸ್ವರವುಳ್ಳದೂ ಸಹ ಪದದಲ್ಲಿ ಅನುದಾತ್ತವೇ ಆಗುವುದು. ಸ್ವರಿತ ಅಥವಾ ಸ್ವರಿತವಿಶೇಷವಾದ ಪ್ರಚಯವು ಮಾತ್ರ ಪದಕಾಲದಲ್ಲಿ ಅನುದಾತ್ತವಾಗುವುದು.

೧೬೨. ಅಯಂ, ಅಗ್ನಿಃ, ಸುತಃ, ಮಿತ್ರಂ, ಇದಂ, ವಯಂ, ಅಯಾ, ವಹಾಃ, ಪ್ರಿಯಂ, ದೂತಂ, ಘೃತಂ, ವಿತ್ತಂ, ಅಭಿ ಎಂಬೀ ಪದಗಳು ಅನುದಾತ್ತ ಸ್ವರದಿಂದ ಆರಂಭಿಸಲ್ಪಡುತ್ತವೆ.

೧೬೩. 'ಅರ್ಕಮರ್ಚನ್ತು' ಇತ್ಯಾದಿ ಅರ್ಕಗಳು, 'ಸುತೇಷು ನಃ, ಸುತೇ ಸ ಚ' ಮುಂತಾದ ಸುತಮಂತ್ರಗಳು, 'ಯಜ್ಞಾಯಜ್ಞಾ' ಇತ್ಯಾದಿ ಯಜ್ಞನಾಮಕಮಂತ್ರಗಳು, 'ಕಲಶೇಷು' ಎಂಬ ಕಲಶ ಮಂತ್ರವು, 'ಶತಹಿಮಾಃ' ಇತ್ಯಾದಿ ಶತವೆಂಬ ಮಂತ್ರಗಳು ಮತ್ತು 'ಪವಿತ್ರೇ' ಇತ್ಯಾದಿ ಪವಿತ್ರನಾಮಕ ಮಂತ್ರಗಳೂ ಕೂಡ ಅನುದಾತ್ತಸ್ವರದಿಂದ ಆರಂಭಿಸಲ್ಪಡಬೇಕು.

೧೬೪. 'ಹರಿಂ ಹಿನ್ವಂತಿ, ವರುಣೋ ಮಿತ್ರಃ, ವರೇಣ್ಯಂ, ಧಾರಾ ಸುತಸ್ಯ, ಸಹಸ್ರಶೀರ್ಷಾ ಪುರುಷಃ' ಎಂಬ ಮಂತ್ರಗಳಲ್ಲಿನ ರೇಫವು ಸ್ವರಿತಸ್ವರದಿಂದ ಕೂಡಿರುತ್ತದೆ. 'ವಿಶ್ವಾನರಸ್ಯ' ಎಂಬಲ್ಲಿನ ನಕಾರ ಮತ್ತು ರೇಫವೂ ಕೂಡ ಸ್ವರಿತಯುಕ್ತವು. ಇತರ ವಾಕ್ಯಗಳಲ್ಲಿರುವ ನರಶಬ್ದದಲ್ಲಿನ ರೇಫಮಾತ್ರವು ಸ್ವರಿತವು ಎಂದು ತಿಳಿಯಬೇಕು.

ದ್ವೌ ವರುಣೌ ವಸ್ವರಿತೌ ಉದುತ್ತಮಂ ತ್ವಂವರುಣ ।
ಧಾಕಾರೇ ಚೋರುಧಾರಾಯಾಮುರುಧಾರೇವ ದೋಹತೇ ॥ ೧೬೫ ॥

ಮಾತ್ರಿಕಂ ವಾ ದ್ವಿಮಾತ್ರಂ ವಾ ಸ್ವರ್ಯತೇ ಯದಿಹಾಕ್ಷರಂ ।
ತಸ್ಯಾದಿತೋಽರ್ಧಮಾತ್ರಾ ವೈ ಶೇಷಂ ತು ಪರತೋ ಭವೇತ್ ॥ ೧೬೬ ॥

ಅದೀರ್ಘಂ ದೀರ್ಘವತ್ಕುರ್ಯಾದ್ವಿಸ್ವರಂ ಯತ್ಪ್ರಯುಜ್ಯತೇ ।
ಕಂಪೋತ್ಸ್ವರಿತಾಽಭಿಗೀತಪ್ರಸ್ವಕರ್ಷಣಮೇವ ಚ ॥ ೧೬೭ ॥

ನಿಮೇಷಕಾಲಾ ಮಾತ್ರಾ ಸ್ಯಾದ್ವಿದ್ಯುತ್ಕಾಲೇತಿ ಚಾಪರೇ ।
ಋಕ್ಸ್ವರಾ ತುಲ್ಯಯೋಗಾ ವಾ ಮತಿಃ ಸ್ಯಾತ್ಸೋಮಶರ್ಮಣಃ ॥ ೧೬೮ ॥

ಸಮಾಸೇಽವಗ್ರಹಂ ಕುರ್ಯಾತ್ಪದಂ ಚಾತ್ರಾನುಸಂಹಿತಂ ।
ಯತೋಕ್ಷರಾದಿತಿಕರಣಂ ಪದಾಂತಂ ತಸ್ಯ ತಂ ವಿದುಃ ॥ ೧೬೯ ॥

---

೧೬೫. 'ಉದುತ್ತಮಂ ವರುಣ, ತ್ವಂ ವರುಣ' ಎಂಬ ವರುಣದ್ವಯದಲ್ಲಿ ಮಾತ್ರ ವಕಾರವೇ ಸ್ವರಿತವು. ರೇಫವು ಸ್ವರಿತವಲ್ಲ. 'ಉರುಧಾರಾಮರಂಕೃತಂ, ಉರುಧಾರೇವ' ಎಂಬಲ್ಲಿನ ಧಾಕಾರವು ಸ್ವರಿತವು.

೧೬೬. ಹ್ರಸ್ವ, ದೀರ್ಘ ಅಥವಾ ಸ್ವರಿತವಾಗಿ ಉಚ್ಚರಿಸುವ ಅಕ್ಷರದ ಮೊದಲನೆಯ ಅರ್ಧಮಾತ್ರೆಯು ಉದಾತ್ತಸ್ವರದ ಪೂರ್ವಭಾಗವು. ಉಳಿದುದು ಉತ್ತರಭಾಗವು.

೧೬೭. ಕಂಪ, ಉತ್ಸರಿತ, ಅಭಿಗೀತ ಮತ್ತು ಹ್ರಸ್ವಕರ್ಷಣವೆಂಬ ವಿಸ್ವರಪ್ರಯೋಗದಲ್ಲಿ ಹ್ರಸ್ವಗಳನ್ನು ದೀರ್ಘದಂತೆ ಹೇಳಬೇಕು.

೧೬೮. ಕಣ್ಣುರೆಪ್ಪೆಯಾಡಿಸುವ ಕಾಲಕ್ಕೆ ನಿಮೇಷವೆಂದು ಹೆಸರು. ಅದೇ ಮಾತ್ರೆಯೆನಿಸುವುದು. ಕೆಲವರು ಮಿಂಚುಹೊಳೆಯುವಷ್ಟು ಕಾಲವನ್ನು ಮಾತ್ರೆಯೆನ್ನುವರು. ಋಕ್ಕಿನ ಅಕಾರೋಚ್ಚಾರಣೆಯ ಕಾಲಕ್ಕೆ ಸಮಾನ ಕಾಲವು ಮಾತ್ರೆ ಎಂದು ಸೋಮಶರ್ಮಾಚಾರ್ಯರ ಅಭಿಪ್ರಾಯವು.

೧೬೯. ಸಮಾಸಪದವನ್ನು ಪದವಿಭಾಗಮಾಡಿ ಹೇಳಬೇಕು. ಅಲ್ಲಿ ಸಮಾಸ ಪದವನ್ನೂ ಹೇಳಬೇಕು. ಅಧ್ಯಯನಮಾಡುವವರು ಯಾವ ಅಕ್ಷರದ ಮುಂದೆ 'ಇತಿ' ಎಂದು ಹೇಳುವರೋ ಅದನ್ನೇ ಸಮಾಸಪದಾಂತವೆಂದು ತಿಳಿಯಬೇಕು.

ಸರ್ವತ್ರ ಪುತ್ರಮಿತ್ರಸಖಿಶಬ್ದಾ
ಅದ್ರಿ ಶತಕ್ರತೋ ಇತ್ಯವಗ್ರಾಹ್ಯಾಃ ॥
ಆದಿತ್ಯ ವಿಪ್ರಜಾತವೇದಾಶ್ಚ ಸತ್ಪತಿ ।
ಗೋಪತಿ ವೃತ್ರಹಾ ಸಮುದ್ರಾಶ್ಚ ॥ ೧೭೦ ॥

ಸ್ವಯುರ್ವೋ ದೇವಯುವಶ್ಚಾರತಿರ್ನ್ದೇವತಾತಯೇ ।
ಚಿಕಿತಿಶ್ಚುಕ್ರುಧಂ ಚೈವ ನಾವಗೃಣ್ಣಂತಿ ಪಂಡಿತಾಃ ॥ ೧೭೧ ॥

ವಿವೃತ್ತಯಶ್ಚತಸ್ರೋ ವೈ ವಿಜ್ಞೇಯಾ ಇತಿ ಮೇ ಮತಂ ।
ಅಕ್ಷರಾಣಾನ್ನಿಯೋಗೇನ ತಾಸಾಂ ನಾಮಾನಿ ಮೇ ಶೃಣು ॥ ೧೭೨ ॥

ಹ್ರಸ್ವಾದಿವತ್ಸಾನುಸೃತಾ ವತ್ಸಾನುಸಾರಿಣೀ ಚಾಗ್ರೇ ।
ಪಾಕವತ್ಯುಭಯೋರ್ಹ್ರಸ್ವಾ ದೀರ್ಘವೃದ್ಧಾ ಪಿಪೀಲಿಕಾ ॥ ೧೭೩ ॥

---

೧೭೦. 'ಪುತ್ರ, ಮಿತ್ರ, ಸಖಿ, ಅದ್ರಿ' ಶತಕ್ರತೋ, ಆದಿತ್ಯ, ವಿಪ್ರ, ಜಾತವೇದಾಃ, ಸತ್ಪತಿ, ಗೋಪತಿ, ವೃತ್ರಹಾ' ಎಂಬುದಾಗಿ ಸರ್ವತ್ರ ಪದವಿಭಾಗಮಾಡಬೇಕು.

೧೭೧. ಜ್ಞಾನಿಗಳು 'ಸ್ವಯುರ್ವಃ, ದೇವಯುವಃ, ಅರತಿಂ, ದೇವತಾತಯೇ, ಚಿಕಿತಿಃ, ಚುಕ್ರುಧಂ' ಎಂಬೀ ಪದಗಳು ಒಂದೊಂದೇ ಪದವಾಗಿರುವುದರಿಂದ ಇವುಗಳನ್ನು ವಿಭಾಗಮಾಡುವುದಿಲ್ಲ.

೧೭೨. ಎರಡು ಸ್ವರಗಳು ಸಂಧಿಯಾಗದೇ ಬಿಟ್ಟಿರುವುದಕ್ಕೆ ವಿವೃತ್ತಿ ಎಂದು ಹೆಸರು. ಅದು ನಾಲ್ಕು ವಿಧವೆಂದು ತಿಳಿಯಬೇಕು. ಅಕ್ಷರಗಳ ಸಂಯೋಜನೆಯನ್ನನುಸರಿಸಿ ಅವುಗಳಿಗೆ ನಾಮಕರಣಮಾಡಿದೆ. ಆ ಹೆಸರುಗಳನ್ನು ಹೇಳುವೆನು ಕೇಳು.

೧೭೩. ಪುರ್ವಪದದ ಅಂತ್ಯದಲ್ಲಿ ಹ್ರಸ್ವವು ಉತ್ತರಪದದ ಆದಿಯಲ್ಲಿ ದೀರ್ಘವೂ ಇರುವ ಎರಡು ಪದಗಳ ವಿವೃತ್ತಿಯು ಹ್ರಸ್ವಾದಿಯೆನಿಸುವುದು. ಇಲ್ಲಿ ವತ್ಸವು ಗೋವನ್ನನುಸರಿಸುವೋಪಾದಿಯಲ್ಲಿ ಲಘುವು ಗುರುವನ್ನು ಅಶ್ರಯಿಸಿದೆ. ಇದು ಒಂದು ವಿಧವು. 'ಅಗ್ನ+ಆಯಾಹಿ' ಮುಂತಾದುವು ಇದಕ್ಕೆ ಉದಾಹರಣೆಯು. ಪೂರ್ವಪದದಲ್ಲಿ ದೀರ್ಘವು, ಉತ್ತರಪದದಲ್ಲಿ ಹ್ರಸ್ವವೂ

**ಚತಸ್ರೃಣಾಂ ವಿವೃತ್ತೀನಾಮಂತರಂ ಮಾತ್ರಿಕಂ ಭವೇತ್ ।**
**ಅರ್ಧಮಾತ್ರಿಕಮನ್ಯೇಷಾಮನ್ಯೇಷಾಮಣುಮಾತ್ರಿಕಂ ॥ ೧೭೪ ॥**

**ಆಪದ್ಯತೇ ಮಕಾರೋ ರೇಫೋಷ್ಮಸು ಪ್ರತ್ಯಯೇಷ್ವನುಸ್ವಾರಂ ।**
**ಯಲವೇಷು ಪರಸವರ್ಣಂ ಸ್ಪರ್ಶೇಷು ಚೋತ್ತಮಾಪತ್ತಿಂ ॥ ೧೭೫ ॥**

**ನಕಾರಾಂತೇ ಪದೇ ಪೂರ್ವೇ ಸ್ವರೇ ಚ ಪರತಃ ಸ್ಥಿತೇ ।**
**ಅಕಾರಂ ರಕ್ತಮಿತ್ಯಾಹುರ್ನಕಾರೇಣ ತು ರಜ್ಯತೇ ॥ ೧೭೬ ॥**

---

ಇರುವ ಎರಡು ಪದಗಳ ವಿವೃತ್ತಿಯು ಹ್ರಸ್ವಾಗ್ರವೆನಿಸುವುದು. ಇಲ್ಲಿ ಗೋವು ಕರುವನ್ನಾಶ್ರಯಿಸುವಂತೆ ದೀರ್ಘವು ಹ್ರಸ್ವವನ್ನಾಶ್ರಯಿಸಿದೆ. ಇದು ಎರಡನೆಯ ವಿಧವು. 'ಪ್ರೇಷ್ಠಂ ವೋ+ಅತಿಥಿಂ' ಇತ್ಯಾದಿಗಳು ಉದಾಹರಣೆಯು. ಪೂರ್ವೋತ್ತರಪದಗಳೆರಡರಲ್ಲಿಯೂ ಹ್ರಸ್ವಾಕ್ಷರವಿರುವುದು. ಪಾಕವತೀ ಎಂಬ ವಿವೃತ್ತಿಯು. ಉದಾ—'ಅಗ್ನ+ಇತ್ಥೇತರಾ ಗಿರಃ' ಇತ್ಯಾದಿ. ಪೂರ್ವೋತ್ತರ ಪದಗಳೆರಡರಲ್ಲಿಯೂ ದೀರ್ಘಾಕ್ಷರವಿರುವುದು ಪಿಪೀಲಿಕಾ ಎಂಬ ನಾಲ್ಕನೆಯ ವಿವೃತ್ತಿಯು. ಉದಾ—'ನಿಷ್ಕ್ರತ್ವಾನಾ+ಆಯುಧಾನೀವ' ಇತ್ಯಾದಿ. ಈರೀತಿಯಾಗಿ ನಾಲ್ಕು ವಿಧ ವಿವೃತ್ತಿಗಳನ್ನು ತಿಳಿಯಬೇಕು.

೧೭೪. ಈ ನಾಲ್ಕುವಿಧ ವಿವೃತ್ತಿಗಳಲ್ಲಿಯೂ ಎರಡು ಪದಗಳಿಗೆ ಮಧ್ಯದಲ್ಲಿ ಒಂದು ಮಾತ್ರೆಯ ಕಾಲವು ಅಂತರವೆಂದು ಕೆಲವು ಶಾಖಿಗಳೂ, ಇನ್ನು ಕೆಲವು ಶಾಖೆಗಳಲ್ಲಿ ಅರ್ಧಮಾತ್ರೆಯೇ ಅಂತರವೆಂತಲೂ ಮತ್ತೆ ಕೆಲವು ಶಾಖೆಗಳಲ್ಲಿ ಅಣು ಮಾತ್ರೆಯೇ ಅಂತರವೆಂತಲೂ ಹೇಳುವರು.

೧೭೫. ರ, ಶ, ಷ, ಸ, ಹ, ಯ, ಲ, ವ ಎಂಬೀ ವರ್ಣಗಳು ಮವರ್ಣದ ಮುಂದೆ ಬಂದರೆ ಸಂಧಿಯಲ್ಲಿ ಆ ಮವರ್ಣವು ಅನುಸ್ವಾರವಾಗುತ್ತದೆ. ಕ ಎಂಬ ವರ್ಣದಿಂದ ಮ ಎಂಬ ವರ್ಣದವರಿಗಿನ ಇಪ್ಪತ್ತೈದು ಅಕ್ಷರಗಳು ಸ್ಪರ್ಶವರ್ಣಗಳೆನಿಸುವುವು. ಅವು ಮಕಾರದ ಮುಂದೆ ಬಂದಾಗ ಸಂಧಿಯಲ್ಲಿ ಆ ಮಕಾರವು ಪರವರ್ಣವರ್ಗದ ಐದನೆಯ ಅಕ್ಷರವಾಗುತ್ತದೆ.

೧೭೬. ನಕಾರಾಂತಪದದ ಮುಂದೆ ಸ್ವರವು ಇದ್ದರೆ ಸ್ವರವಾದ ಅಕಾರವನ್ನು ರಕ್ತವೆನ್ನುವರು. ಅದು ನಕಾರದೊಡನೆ ಸೇರುವುದು. ಉದಾ—ಮಹಾನ್+ಅಸಿ=ಮಹಾನಸಿ ಇತ್ಯಾದಿ.

ನಕಾರಾಂತೇ ಪದೇ ಪೂರ್ವೇ ವ್ಯಂಜನೈಶ್ಚ ಯವೋಹಿಷು (ಯವಾದಿಷು) ।
ಅರ್ಧಮಾತ್ರಾ ತು ಪೂರ್ವಸ್ಯ ರಜ್ಯತೇ ತ್ವಣುಮಾತ್ರಯಾ　　॥ ೧೭೭ ॥

ನಕಾರಸ್ವರಸಂಯುಕ್ತಶ್ಚತುರ್ಧಾಕ್ತೋ ವಿಧೀಯತೇ ।
ರೇಫೋ ರಂಗಶ್ಚ ಲೋಪಶ್ಚ ಸಾನುಸ್ವಾರೋಪಿ ವಾ ಕ್ವಚಿತ್　　॥ ೧೭೮ ॥

ಹೃದಯಾದುತ್ಥಿತೋ ರಂಗಃ ಕಾಂಸ್ಯೇನ ಸಮನಿಸ್ವನಃ ।
ಮೃದುಶ್ಚೈವ ದ್ವಿಮಾತ್ರಶ್ಚ ದಧನ್ವಾನಿತಿ ನಿದರ್ಶನಂ　　॥ ೧೭೯ ॥

ಯಥಾ ಸೌರಾಷ್ಟ್ರಿಕಾ ನಾರೀ ತಕ್ರಾಂ ಇತ್ಯಭಿಭಾಷತೇ ।
ಏವಂ ರಂಗಃ ಪ್ರಯೋಕ್ತವ್ಯೋ ನಾರದೈತನ್ಮತಂ ಮಮ　　॥ ೧೮೦ ॥

---

೧೭೭. ನಕಾರಾಂತ ಪದದ ಮುಂದೆ ಯ, ವ, ಹ ಮುಂತಾದ ವರ್ಣಗಳು ಬಂದಾಗ ಹಿಂದಿನ ನಕಾರಾಂತಪದದ ಅರ್ಧಮಾತ್ರ ನಕಾರದಿಂದ ಅರ್ಧಮಾತ್ರಾಕಾರಾದಿವರ್ಣವು ಸಂಧಿಯಾಗುವುದು. ಉದಾ—ತಾನ್+ಹ್ಯಶ್ಮಸಿ= ತಾನ್ಹ್ಯಶ್ಮಸಿ ಇತ್ಯಾದಿ.

೧೭೮. ನಕಾರಾಂತಪದದ ಮುಂದೆ ಇನ್ನೊಂದು ಪದವು ಬಂದಾಗ ಆ ನಕಾರಕ್ಕೆ ರೇಫ, ರಂಗ, ಲೋಪ, ಅನುಸ್ವಾರವು ಬಂದು ನಕಾರ ಲೋಪವಾಗುವುದು. ಈರೀತಿಯಾಗಿ ನಾಲ್ಕು ರೂಪಗಳನ್ನು ಹೊಂದುತ್ತದೆ. ಉದಾ—ಭವಾನ್ +ಚಿನೋತಿ=ಭವಾಂಶ್ಚಿನೋತಿ ಇತ್ಯಾದಿ.

೧೭೯. ಹೃದಯದಿಂದ ಹೊರಟು, ಕಂಚಿನಧ್ವನಿಗೆ ಸಮಾನವಾದ, ಮೂರು ಮಾತ್ರೆಯುಳ್ಳ, ಮೃದು ಧ್ವನಿಯುಕ್ತವಾದುದೇ ರಂಗವೆನಿಸುವುದು. 'ದಧನ್ವಾ' ಎಂಬುದೇ ಇದಕ್ಕೆ ಉದಾಹರಣೆಯು.

೧೮೦. ನಾರದನೇ! ಸೌರಾಷ್ಟ್ರದೇಶದಲ್ಲಿ ಹುಟ್ಟಿದ ನಾರಿಯು 'ತಕ್ರಾಂ' ಎಂಬುದಾಗಿ ಹೇಳುವಂತೆ ರಂಗವನ್ನುಚ್ಚರಿಸಬೇಕು. ಇದು ನನ್ನ ಅಭಿಪ್ರಾಯವು.

ಸ್ವರಾ ಗಡದಬಾಶ್ಚೈವ ಜಙನಮಾಸ್ಸಹೋಷ್ಮಭಿಃ ।
ಚತುರ್ಣಾಂ ಪದಜಾತೀನಾಂ ಪದಾಂತಾ ದಶಕೀರ್ತಿತಾಃ ॥ ೧೮೧ ॥

ಸ್ವರ ಉಚ್ಚೈಃ ಸ್ವರೋ ನೀಚಃ ಸ್ವರಃ ಸ್ವರಿತ ಏವ ಚ ।
ವ್ಯಂಜನಾನ್ಯನುವರ್ತಂತೇ ಯತ್ರ ತಿಷ್ಠತಿ ಸ ಸ್ವರಃ ॥ ೧೮೨ ॥

ಸ್ವರಪ್ರಧಾನಂ ತ್ರೈಸ್ವರ್ಯಮಾಚಾರ್ಯಾಃ ಪ್ರತಿಜಾನತೇ ।
ಮಣಿವದ್ವ್ಯಂಜನಂ ವಿದ್ಯಾತ್ಸೂತ್ರವಚ್ಚ ಸ್ವರಂ ವಿದುಃ ॥ ೧೮೩ ॥

ದುರ್ಬಲಸ್ಯ ಯಥಾ ರಾಷ್ಟ್ರಂ ಹರೇತ ಬಲವಾನ್ ನೃಪಃ ।
ದುರ್ಬಲಂ ವ್ಯಂಜನಂ ತದ್ವದ್ಧರೇತ ಬಲವಾನ್ ಸ್ವರಃ ॥ ೧೮೪ ॥

---

೧೮೧. ಗ, ಡ, ದ, ಬ, ಜ, ಙ, ನ, ಮ ಮತ್ತು ಷ, ಸ ಎಂಬ ಎರಡು ಊಷ್ಮವರ್ಣಗಳೂ ಸೇರಿ ಹತ್ತು ವರ್ಣಗಳು ಮತ್ತು ಅ, ಆ ಮುಂತಾದ ಸ್ವರ ವರ್ಣಗಳೂ ಸಹ ಪದದ ಕೊನೆಯಲ್ಲಿದ್ದರೆ ಅವು ಇನ್ನೊಂದು ಪದದೊಡನೆ ಸಂಬಂಧಿಸುವುದಿಲ್ಲ. ಪದವು ನಾಮ ಆಖ್ಯಾತ, ಉಪಸರ್ಗ, ನಿಪಾತವೆಂಬುದಾಗಿ ನಾಲ್ಕು ವಿಧವು.

೧೮೨. 'ಅ' ಮುಂತಾದ ಹದಿನಾಲ್ಕು ಸ್ವರಗಳು ಉದಾತ್ತ, ಅನುದಾತ್ತ, ಸ್ವರಿತ ಎಂಬ ಮೂರು ಸ್ವರಗಳಿಂದ ಕೂಡಿವೆ. 'ಕ' ಮುಂತಾದ ವ್ಯಂಜನವರ್ಣಗಳಿಗೆ ಉದಾತ್ತಾದಿ ಸ್ವರಗಳಿಲ್ಲ. ಉದಾತ್ತಾದಿ ಸ್ವರಗಳಿರುವ ಸ್ವರವರ್ಣಗಳನ್ನು ವ್ಯಂಜನಗಳು ಅನುಸರಿಸುತ್ತವೆ.

೧೮೩. ಮೂರು ಸ್ವರಗಳಿಂದ ಯುಕ್ತವಾಗಿರುವ ಕಾರಣ ಸ್ವರವೇ ಪ್ರಧಾನವು. ಅದನ್ನು ಅನುಸರಿಸುವ ವ್ಯಂಜನವು ಅಪ್ರಧಾನವು ಎಂದು ಆಚಾರ್ಯರು ಹೇಳುತ್ತಾರೆ. ಮಣಿಯಂತೆ ವ್ಯಂಜನವನ್ನೂ, ಸೂತ್ರದಂತೆ ಸ್ವರವನ್ನೂ ತಿಳಿಯಬೇಕು.

೧೮೪. ಅಶಕ್ತನಾದ ರಾಜನ ದೇಶವನ್ನು ಬಲವಂತನಾದ ಇನ್ನೊಬ್ಬ ದೊರೆಯು ಅಪಹರಿಸುವಂತೆ ದುರ್ಬಲವಾದ ವ್ಯಂಜನವನ್ನು ಪ್ರಬಲವಾದ ಸ್ವರವು ಅಪಹರಿಸುತ್ತದೆ.

ಓಭಾವಶ್ಚ ವಿವೃತ್ತಿಶ್ಚ ಶ ಷ ಸಾ ರೇಫ ಏವ ಚ ।
ಜಿಹ್ವಾಮೂಲಮುಪಧ್ಮಾ ಚ ಗತಿರಷ್ಟವಿಧೋಷ್ಮಣಃ ॥ ೧೮೫ ॥

ಸ್ವರಪ್ರತ್ಯಯಾ ವಿವೃತ್ತಿಃ ಸಂಹಿತಾಯಾಂ ತು ಯಾ ಭವೇತ್ ।
ವಿಸರ್ಗಸ್ತತ್ರ ಮಂತವ್ಯಸ್ತಾಲವ್ಯೋ ವಾಽತ್ರ ಜಾಯತೇ ॥ ೧೮೬ ॥

ಸಂಧ್ಯಕ್ಷರೋಪಧೇ ಸಂಧೌ ಪ್ರಾಪ್ತಲುಪ್ತೌ ಯವೌ ಯದಿ ।
ವ್ಯಂಜನಾಖ್ಯಾ ವಿವೃತ್ತಿಸ್ತು ಸ್ವರಾಖ್ಯಾ ಪ್ರಕೃತಿಸಂಹಿತಾ ॥ ೧೮೭ ॥

ಊಷ್ಮಾಂತಂ ವಿರತೇ ಯತ್ರ ಸಂಧಾವೋ ಭವತೇ ಚ ಯತ್ ।
ವಿವೃತ್ತಿರ್ಯಾ ಭವೇತ್ತತ್ರ ಸ್ವರಾಖ್ಯಾಂ ತಾಂ ವಿನಿರ್ದಿಶೇತ್ ॥ ೧೮೮ ॥

---

೧೮೫. ವಿಸರ್ಗವು ಸಂಹಿತೆಯಲ್ಲಿ ಓ, ವಿವೃತ್ತಿ, ಶ, ಷ, ಸ, ರ ᳵ ಕ ಎಂಬ ಜಿಹ್ವಾಮೂಲೀಯ, 'ᳵ' ಎಂಬ ಉಪಧ್ಮಾನೀಯ ಎಂಬುದಾಗಿ ಎಂಟು ವಿಧ ರೂಪವನ್ನು ಹೊಂದುವುದು.

೧೮೬. ಸಂಹಿತೆಯಲ್ಲಿ ಸ್ವರಪ್ರತ್ಯಯಪದಗಳ ವಿವೃತ್ತಿಯು ಬಂದಾಗ ಅಲ್ಲಿ ವಿಸರ್ಗ ಅಥವಾ ತಾಲವ್ಯಾಕ್ಷರವು ಬರುತ್ತದೆ. ಉದಾ—'ಶುಕ್ರ+ಆಹೂತಃ, ಅಗ್ನ+ಆಯಾಹಿ' ಇತ್ಯಾದಿ. ಮೊದಲನೆಯ ವಿವೃತ್ತಿಯಲ್ಲಿ ವಿಸರ್ಗವೂ, ಎರಡನೆಯದರಲ್ಲಿ ತಾಲವ್ಯಾಕ್ಷರವೂ ಇದೆಯೆಂದು ತಿಳಿಯಬೇಕು.

೧೮೭. ಏ, ಓ ಎಂಬ ವರ್ಣಾಂತಪದಗಳ ಮುಂದೆ ಸ್ವರಾದಿಯಾದ ಪದವು ಬಂದರೆ ಸಂಧಿಯಾಗುವಾಗ ಕೆಲವೆಡೆಗಳಲ್ಲಿ ಅವುಗಳಿಗೆ ಬದಲಾಗಿ ಯ, ವ ಎಂಬ ವರ್ಣಗಳು ಬರುತ್ತವೆ. ಇದು ವ್ಯಂಜನ ವಿವೃತ್ತಿಯೆನಿಸುವುದು. ಉದಾ—'ಅಸ್ಮೇ+ಇತಿ=ಅಸ್ಮಾಯಿತಿ, ಭಾನೋ+ಇತಿ=ಭಾನಾವಿತಿ' ಇತ್ಯಾದಿ. ಇಂತಹ ಸಂಧಿಯಲ್ಲಿಯೇ ಕೆಲವೆಡೆಗಳಲ್ಲಿ ಯ, ವ ವರ್ಣಗಳು ಲೋಪವಾಗುತ್ತವೆ. ಅದು ಸ್ವರವಿವೃತ್ತಿಯೆನಿಸುವುದು. ಉದಾ—'ಅಸ್ಮಾ ಇದಂ ಧಸೋ' ಇತ್ಯಾದಿ.

೧೮೮. ವಿಭಾಗದಲ್ಲಿ ವಿಸರ್ಗಾಂತವಾಗಿಯೂ, ಸಂಧಿಯಲ್ಲಿ ಓ ಭಾವವನ್ನು ಹೊಂದಿಯೂ ಇರುವ ವಿವೃತ್ತಿಯನ್ನು ಸ್ವರಾಖ್ಯ ವಿವೃತ್ತಿಯೆಂದು ಹೇಳಬೇಕು.

ಯದ್ಯೋಃಭಾವಪ್ರಸಂಧಾನಮುಕಾರಾದಿ ಪರಂ ಪದಂ ।
ಸ್ವರಾಂತಂ ತಾದೃಶಂ ವಿದ್ಯಾದ್ಯದನ್ಯದ್ವ್ಯಕ್ತಮೂಷ್ಮಣಃ ॥ ೧೮೯ ॥

ಪ್ರಥಮಾ ಉತ್ತಮಾಶ್ಚೈವ ಪದಾಂತೇಷು ಯದಿ ಸ್ಥಿತಾಃ ।
ದ್ವಿತೀಯಂ ಸ್ಥಾನಮಾಪನ್ನಾಃ ಶ ಷಸಪ್ರತ್ಯಯಾ ಯದಿ ॥ ೧೯೦ ॥

ಪ್ರಥಮಾನೂಷ್ಮಸಂಯುಕ್ತಾನ್ ದ್ವಿತೀಯಾನಿವ ದರ್ಶಯೇತ್ ।
ನ ಚೈನಾನ್ಪ್ರತಿಜಾನೀಯಾದ್ಯಥಾ ಮತ್ಸ್ಯಃ ಕ್ಷುರೋಽಪ್ಸರಾಃ ॥ ೧೯೧ ॥

ಛಂದೋಮಾನಂ ಚ ವೃತ್ತಂ ಚ ಪಾದಸ್ಥಾನಂ ತ್ರಿಕಾರಣಂ ।
ಋಚಃ ಸ್ವಚ್ಛಂದವೃತ್ತಾಸ್ತು ಪಾದಾಸ್ತ್ವಕ್ಷರಮಾನಶಃ ॥ ೧೯೨ ॥

---

೧೮೯. ಓಕಾರಾಂತ ಪದವು ಉಕಾರಾಂತ ಪದದೊಡನೆ ಸಂಧಿಯನ್ನು ಹೊಂದಿದರೆ ಅದನ್ನು ಸ್ವರಾಂತವೆಂದು ತಿಳಿಯಬೇಕು. ಇದಕ್ಕಿಂತ ಭಿನ್ನವಾದುದು ವಿಸರ್ಗಾಂತವೆಂಬುದು ಸ್ಪಷ್ಟ.

೧೯೦. ತಕಾರಾದಿಗಳು ಮತ್ತು ಮಕಾರಾದಿಗಳ ಮುಂದೆ ಶ, ಷ, ಸ ಎಂಬ ವರ್ಣಗಳು ಬಂದರೆ ಅವು ದ್ವಿತೀಯ ಸ್ಥಾನ ಎಂದರೆ ಥಕಾರಾದಿಗಳಾಗುವುವು. ಉದಾ—'ತತ್ಸವಿತುಃ, ತಥ್ಸವಿತುಃ' ಇತ್ಯಾದಿ. ಇಲ್ಲಿ ತಕಾರದ ಮುಂದೆ ಸಕಾರವು ಬಂದಿರುವುದರಿಂದ ತಕಾರವು ಥಕಾರವಾಗಿದೆ.

೧೯೧. ಸಕಾರಾದಿಗಳು ಮುಂದೆ ಬಂದಾಗ ಹಿಂದಿನ ತಕಾರಾದಿಗಳನ್ನು ಥಕಾರಾದಿಗಳಂತೆ ಉಚ್ಚರಿಸಬೇಕು. ಆ ತಕಾರಾದಿಗಳು ಥಕಾರಾದಿಗಳೇ ಆಗುವುದಿಲ್ಲ. ಉದಾ—'ಮತ್ಸ್ಯಃ, ಕ್ಷುರೋಽಪ್ಸರಾಃ' ಇತ್ಯಾದಿ.

೧೯೨. ಪಾದಾಂತ, ಛಂದೋಮಾನ, ವೃತ್ತ ಎಂಬುದಾಗಿ ಮೂರು ಕಾರಣಗಳು ಲೌಕಿಕಗಳು. ಛಂದಸ್ಸು ಗುರುಲಘು ಪರಿಜ್ಞಾನದಿಂದ ಗಾಯತ್ರ್ಯಾದಿರೂಪವೆಂದು ಜ್ಞಾತವಾಗುವುವು. ಗಾಯತ್ರ್ಯಾದಿಛಂದಸ್ಸು ಋಕ್ಕುಗಳಿಗೆ ಸ್ವಾಭಾವಿಕವು. ಗುರುಲಘ್ವಕ್ಷರಗಳಿಂದ ಛಂದಸ್ಸನ್ನೂ, ಅಕ್ಷರ ಪರಿಗಣನೆಯಿಂದ ವೃತ್ತವನ್ನೂ ತಿಳಿಯಬೇಕು.

ಋವರ್ಣಂ ಸ್ವರಭಕ್ತಿಂ ಚ ಛಂದೋಮಾನೇ ನ ನಿರ್ದಿಶೇತ್ ।
ಪ್ರತ್ಯಯೇನ ಸಹಾರೇಫಂ ಮಿಮೀತ ಸ್ವರಭಕ್ತಿಷು ॥ ೧೯೩ ॥

ಋವರ್ಣೇ ತು ಪೃಥಕ್ ರೇಫಃ ಪ್ರತ್ಯಯಸ್ತು ಯದಾ ಭವೇತ್ ।
ವಿದ್ಯಾಲ್ಲಘುಮೃಕಾರಂ ತು ಯದಿ ತೂಷ್ಮಾ ನ ಸಂಯುತಃ ॥ ೧೯೪ ॥

ಊಷ್ಮಣೈವ ಹಿ ಸಂಯುಕ್ತೋ ಋಕಾರೋ ಯತ್ರ ಪಿಡ್ಯತೇ ।
ಗುರುವರ್ಣಃ ಸ ವಿಜ್ಞೇಯಸ್ತೃಚಂ ಚಾತ್ರಾನುದರ್ಶನಂ ॥ ೧೯೫ ॥

ಋಷಭಂ ಚ ಗೃಹೀತಂ ಚ ಬೃಹಸ್ಪತಿಂ ಪೃಥಿವ್ಯಾಂ ಚ ।
ನಿಋರ್ತಿ ಪಂಚಮಾ ಹ್ಯತ್ರ ಋಕಾರಾ ನಾತ್ರ ಸಂಶಯಃ ॥ ೧೯೬ ॥

---

೧೯೩. ಛಂದೋಮಾನದಲ್ಲಿ ಅಕ್ಷರಪರಿಗಣನೆ ಮಾಡುವಾಗ ಸ್ವರಭಕ್ತಿ ಯೆನಿಸಿದ ಋವರ್ಣದಲ್ಲಿನ ರೇಫವನ್ನು ಪರಿಗಣಿಸಬಾರದು. 'ಅರ್ಷಸಿ, ಅರ್ಹಸಿ' ಇತ್ಯಾದಿ ಸ್ವರಭಾಗದಲ್ಲಿ ಪ್ರತ್ಯಯದಿಂದ ಪೃಥಕ್ಕಾಗಿಲ್ಲದ ರೇಫವನ್ನು ವರ್ಣದಂತೆ ಪರಿಗಣಿಸಬೇಕು.

೧೯೪. 'ಋ' ಎಂಬ ಒಂದೇ ವರ್ಣದಲ್ಲಿ ರೇಫ ಮಾತ್ರೆಗೆ ವ್ಯಂಜಕವಾದ ಮಾತ್ರೈಕದೇಶವು ನಿರ್ಧರಿಸಲ್ಪಟ್ಟಾಗ ಉಕಾರವು ಊಷ್ಮಸಂಬದ್ಧವಾಗಿಲ್ಲದಿದ್ದರೆ ಅದನ್ನು ಲಘುವರ್ಣವೆಂದು ತಿಳಿಯಬೇಕು.

೧೯೫. ಋಕಾರವು ಶ ಮುಂತಾದ ಊಷ್ಮವರ್ಣಗಳಿಂದ ಸಂಯುಕ್ತವಾದಾಗ ಅದು ಸ್ವರವಾದರೂ ಗುರುವರ್ಣವೆಂದು ತಿಳಿಯಬೇಕು. ಆಗ ಅದು ಲಘುವಾಗುವುದಿಲ್ಲ. ಉದಾ—'ಸ್ತೃಚಂ' ಎಂಬುದು. ಇಲ್ಲಿ ಋವರ್ಣವು ಸ ಎಂಬ ಊಷ್ಮವರ್ಣಸಂಯುಕ್ತವಾಗಿರುವುದರಿಂದ ಅದು ಗುರುವಾಗಿದೆ. 'ಉಭಯಂ ಶೃಣುವಚ್ಚ' ಇತ್ಯಾದಿಗಳೂ ಇದಕ್ಕೆ ಉದಾಹರಣೆಗಳು.

೧೯೬. 'ಋಷಭ, ಗೃಹೀತ, ಬೃಹಸ್ಪತಿ, ಪೃಥಿವ್ಯಾಂ, ನಿಋರ್ತಿ' ಎಂಬೀ ಐದು ಪದಗಳಲ್ಲಿನ ಋಕಾರಗಳು ಸ್ವರಗಳೆಂದು ತಿಳಿಯಬೇಕು. ಈ ವಿಷಯದಲ್ಲಿ ಸಂದೇಹವಿಲ್ಲ.

ಶ ಷ ಸ ಹ ರಾದೌ ರೇಫಃ ಸ್ವರಭಕ್ತಿರ್ಜಾಯತೇ ದ್ವಿಪದಸಂಧೌ ।
ಇ ಉ ವರ್ಣಾಭ್ಯಾಂ ಹೀನಾ ಕ್ವಚಿದೇಕಪದಾ ಕ್ರಮವಿಯುಕ್ತಾ ॥ ೧೯೭ ॥

*ಸ್ವರಭಕ್ತಿರ್ದ್ವಿವಿಧಾ ತ್ವೃಕಾರೋ ರೇಫ ಏವ ಚ ।
ಸ್ವರೋದಾ ವ್ಯಂಜನೋದಾ ಚ ವಿಹಿತಾಽಕ್ಷರಚಿಂತಕೈಃ ॥ ೧೯೮ ॥

ಶ ಷ ಸೇಷು ಸ್ವರೋದಯಾಂ ಹಕಾರೇ ವ್ಯಂಜನೋದಯಾಂ ।
ಶ ಷ ಸೇಷು ವಿವೃತ್ತಾಂ ತು ಹಕಾರೇ ಸಂವೃತಾಂ ವಿದುಃ ॥ ೧೯೯ ॥

---

೧೯೭. 'ಶ, ಷ, ಸ, ಹ, ರ' ಎಂಬೀ ವರ್ಣಗಳಲ್ಲಿ ಎರಡು ವರ್ಣಗಳು ಸಂಧಿಯಾದಾಗ*ಸ್ವರಭಕ್ತಿ'ಯುಂಟಾಗುವುದು. ಅದು ಕೆಲವೆಡೆಗಳಲ್ಲಿ ಪೂರ್ವಾಪರವರ್ಣವಿಭಾಗಕ್ರಮಯುಕ್ತವಾದ ಏಕಪದವಾಗಿ 'ಇ, ಉ' ಎಂಬ ವರ್ಣರಹಿತವಾಗುವುದು. ಉದಾ—'ಅರ್ಷಸಿ' ಎಂಬುದು. ಇದು 'ಅರಿಷಸಿ, ಅರುಷಸಿ' ಎಂದು ಹೇಳಬೇಕಾದ ಸ್ಥಳದಲ್ಲಿ 'ರ' ಎಂಬುದಕ್ಕೆ ಸಂಬದ್ಧವಾಗಿರುವ 'ಇ, ಉ' ವರ್ಣಗಳು ಲೋಪವಾಗಿ ಪ್ರಯುಕ್ತವಾಗಿದೆ.

೧೯೮. ಅಕ್ಷರವಿಮರ್ಶಕರು ಸ್ವರದಿಂದ ಹುಟ್ಟಿದ (ಸ್ವರೋದಾ) ಋಕಾರ, ವ್ಯಂಜನದಿಂದ ಹುಟ್ಟಿದ (ವ್ಯಂಜನೋದಾ) ರೇಫ ಎಂಬುದಾಗಿ ಸ್ವರಭಕ್ತಿಯು ಎರಡುವಿಧವೆಂದು ಹೇಳಿರುವರು.

೧೯೯. ಶ, ಷ, ಸ ಎಂಬ ವರ್ಣಗಳಲ್ಲಿ ಸೇರಿದ ಸ್ವರಭಕ್ತಿಯನ್ನು ಸ್ವರೋದಾ, ವಿವೃತ್ತಾ ಎಂದೂ, ಹಕಾರಸಂಬದ್ಧವಾದ ಸ್ವರಭಕ್ತಿಯನ್ನು ವ್ಯಂಜನೊದಾ, ಸಂವೃತಾ ಎಂದೂ ತಿಳಿದಿರುವರು. ಉದಾ—ಅರ್ಷಸಿ, ಅರ್ಹಂತಿ ಇತ್ಯಾದಿ.

---

* 'ಋ' ಎಂಬ ವರ್ಣದಲ್ಲಿ 'ಅ' ಎಂಬುದು ಆದಿಯಲ್ಲಿಯೂ, 'ಉ' ಎಂಬುದು ಕೊನೆಯಲ್ಲಿಯೂ, ರೇಫದ ಎರಡು ಅಂಶಗಳು ಮಧ್ಯದಲ್ಲಿಯೂ ಇವೆ. ಇವುಗಳ ಪೈಕಿ ಮೊದಲು ಕೊನೆಯ ಅಂಶಗಳು ಸ್ವರಗಳು. ಮಧ್ಯದಲ್ಲಿನ ರೇಫದ ಅಂಶಗಳೆರಡೂ ವ್ಯಂಜನಗಳು. ಅದರಲ್ಲಿ ಪೂರ್ವಭಾಗವು ಮೊದಲನೆಯ ಸ್ವರದೊಂದಿಗೂ, ಉತ್ತರಭಾಗವು ಕೊನೆಯ ಸ್ವರದೊಂದಿಗೂ ಸೇರುವುದು. ಹೀಗೆ ಸ್ವರಾನ್ವಿತವಾದ ರೇಫವು ಸ್ವರಭಕ್ತಿಯೆನಿಸುವುದು.

**ಸ್ವರಭಕ್ತಿಂ ಪ್ರಯುಂಜಾನಸ್ತ್ರೀನ್ ದೋಷಾನ್ ಪರಿವರ್ಜಯೇತ್ ।**
**ಇಕಾರಂ ಚಾಪ್ಯುಕಾರಂ ಗ್ರಸ್ತದೋಷಂ ತಥೈವ ಚ ॥ ೨೦೦ ॥**

**ಸಂಯೋಗಪರಂ ಥಪರಂ ವಿಸರ್ಜನೀಯಂ ದ್ವಿಮಾತ್ರಿಕಂ ಚೈವ ।**
**ಅವಸಾನಿಕಂ ಚ ನ ಲಘು ಸಾನುಸ್ವಾರಂ ಘುಟಿಂತಂ ಚ ॥ ೨೦೧ ॥**

**ಪಥ್ಯಾ ಪಾದಃ ಪ್ರಥಮೋ ದ್ವಾದಶಮಾತ್ರಸ್ತಥಾ ತೃತೀಯೋಽಪಿ ।**
**ಅಷ್ಟಾದಶೋ ದ್ವಿತೀಯಃ ಸಮಾಪನಃ ಪಂಚದಶಮಾತ್ರಃ ॥ ೨೦೨ ॥**

**ಪಥ್ಯಾ ಲಕ್ಷಣಮುಕ್ತಂ ಯಾವತ್ಯನ್ಯಾ ಸಾ ಸ್ಮೃತಾ ವಿಪುಲಾ ॥ ೨೦೩ ॥**

---

೨೦೦. ಸ್ವರಭಕ್ತಿಯನ್ನು ಪ್ರಯೋಗಿಸುವವನು ಇಕಾರ, ಉಕಾರ, ಗ್ರಸ್ತದೋಷ (ಅಲ್ಪತ್ವ) ಎಂಬ ಮೂರು ದೋಷಗಳನ್ನು ಬಿಡಬೇಕು. ಸ್ಥಾನ, ಕರಣಗಳನ್ನು ನಿಷ್ಪೀಡನೆಮಾಡಿ ಉಚ್ಚರಿಸಬೇಕೆಂದು ಭಾವ.

೨೦೧. ಸಂಯುಕ್ತಾಕ್ಷರ ಅಥವಾ ಥ ಎಂಬ ವರ್ಣದ ಹಿಂದಿನ ವರ್ಣ, ವಿಸರ್ಗಸಹಿತ ವರ್ಣ, ಎರಡು ಮಾತ್ರೆಗಳುಳ್ಳದು, ಅಂತ್ಯವರ್ಣ, ಅನುಸ್ವಾರ ಸಹಿತವಾದುದು, ಘುಟಿ ಎಂಬ ವರ್ಣದ ಹಿಂದಿನ ಅಕ್ಷರ ಇವುಗಳು ಲಘುವರ್ಣ ಗಳಾಗುವುದಿಲ್ಲ. ಇವನ್ನು ಗುರುವಾಗಿಯೇ ಉಚ್ಚರಿಸಬೇಕು.

೨೦೨. ಮೊದಲನೆಯ ಪಾದದಲ್ಲಿ ಏಳು ಅಕ್ಷರಗಳು, ಹನ್ನೆರಡು ಮಾತ್ರೆ ಗಳು, ಮೂರನೆಯ ಪಾದದಲ್ಲಿಯೂ ಅದೇರೀತಿಯಾಗಿ ಏಳು ಅಕ್ಷರಗಳು, ಹನ್ನೆರಡು ಮಾತ್ರೆಗಳೂ, ಎರಡನೆಯ ಪಾದದಲ್ಲಿ ಹದಿನೆಂಟು ಮಾತ್ರೆಗಳುಳ್ಳ ಹನ್ನೊಂದಕ್ಷರಗಳೂ, ನಾಲ್ಕನೆಯ ಪಾದದಲ್ಲಿ ಹದಿನೈದು ಮಾತ್ರೆಗಳನ್ನೊಳ ಗೊಂಡಿರುವ ಹತ್ತು ಅಕ್ಷರಗಳೂ ಇದ್ದರೆ ಅದನ್ನು ಪಥ್ಯಾ ಎಂಬ ಗಾಥೆಯೆಂದು ತಿಳಿಯಬೇಕು.

೨೦೩. ಎರಡನೆಯ ಪಾದದಲ್ಲಿ ಹದಿನೈದು ಮಾತ್ರೆಗಳೂ, ಉಳಿದ ಪಾದ ಗಳಲ್ಲಿ ಪಥ್ಯಾಗಾಥೆಗೆ ಹೇಳಿರುವಷ್ಟು ಅಕ್ಷರಾದಿಗಳೂ ಇದ್ದರೆ ಅದನ್ನು ವಿಪುಲಾ ಎಂದು ತಿಳಿಯಬೇಕು.

**ಅಕ್ಷರಾಣಾಂ ಲಘು ಹ್ರಸ್ವಮಸಂಯೋಗಪರಂ ಯದಿ ।**
**ತತ್ಸಂಯೋಗೋತ್ತರಂ ವಿದ್ಯಾತ್ ಗುರುರ್ದೀರ್ಘಾಕ್ಷರಾಣಿ ಚ ॥ ೨೦೪ ॥**

**ವಿವೃತ್ತಿರ್ಯತ್ರ ದೃಶ್ಯೇತ ಸ್ವಾರಶ್ಚೈವಾಗ್ರತಃ ಸ್ಥಿತಃ ।**
**ಗುರುಸ್ಸ್ವಾರಸ್ಸ ವಿಜ್ಞೇಯಃ ಕ್ಷೈಪ್ರಸ್ತತ್ರ ನ ವಿದ್ಯತೇ ॥ ೨೦೫ ॥**

**ಅಷ್ಟಪ್ರಕಾರಂ ವಿಜ್ಞೇಯಂ ಪದಾನಾಂ ಸ್ವರಲಕ್ಷಣಂ ।**
**ಅಂತೋದಾತ್ತಮಾದ್ಯುದಾತ್ತಮುದಾತ್ತಮನುದಾತ್ತಂ ನೀಚಸ್ವರಿತಂ ।**
**ಮಧ್ಯೋದಾತ್ತಸ್ವರಿತಂ ದ್ವಿರುದಾತ್ತಮಿತ್ಯೇತಾ ಅಷ್ಟೌ ಪದಸಂಜ್ಞಾಃ ॥ ೨೦೬ ॥**

**ಅಗ್ನಿಃ ಸೋಮಃ ಪ್ರವೋವೀರ್ಯಂ ಹವಿಷಾ ಸ್ವರ್ವನಸ್ಪತಿಃ ॥ ೨೦೭ ॥**

---

೨೦೪. ಅಕ್ಷರಗಳ ಪೈಕಿ ಹ್ರಸ್ವವರ್ಣವು ಸಂಯುಕ್ತಾಕ್ಷರದ ಹಿಂದೆ ಇಲ್ಲದಿರುವಾಗ ಲಘುವಾಗುವುದು. ಅದೇ ಅಕ್ಷರವು ಸಂಯುಕ್ತಾಕ್ಷರದ ಹಿಂದಿರುವಾಗ ಗುರುವಾಗುವುದು. ದೀರ್ಘಾಕ್ಷರಗಳೂ ಸಹ ಗುರುವಾಗುವುವು.

೨೦೫. ವಿಭಾಗಮಾಡಿದಾಗ ಮುಂದಿರುವ ಸ್ವರವನ್ನು ಗುರುಸ್ವರ ಎಂದು ತಿಳಿಯಬೇಕು ಅದು ಲಘುವಾಗುವುದಿಲ್ಲ.

೨೦೬. ಪದಗಳು ಸ್ವರಭೇದದಿಂದ ಅಂತೋದಾತ್ತ, ಆದ್ಯುದಾತ್ತ, ಉದಾತ್ತ, ಅನುದಾತ್ತ, ನೀಚಸ್ವರಿತ, ಮಧ್ಯೋದಾತ್ತ, ಸ್ವರಿತ, ದ್ವಿರುದಾತ್ತ ಎಂಬುದಾಗಿ ಎಂಟು ವಿಧವಾಗಿವೆ.

೨೦೭. ಈ ಎಂಟು ವಿಧಗಳಿಗೂ ಕ್ರಮವಾಗಿ ಉದಾಹರಣೆಗಳು— ೧. 'ಅಗ್ನಿರ್ವೃತ್ರಾಣಿ' ಎಂಬಲ್ಲಿ ಅಗ್ನಿ ಪದವು ಅಂತೋದಾತ್ತವು. ೨. 'ಸೋಮಃ ಪವತೇ' ಎಂಬಲ್ಲಿ ಸೋಮಪದವು ಆದ್ಯುದಾತ್ತವು. ೩. 'ಪ್ರವೋಯಹ್ವಂ' ಎಂಬಲ್ಲಿ 'ಪ್ರ' ಎಂಬುದು ಉದಾತ್ತವು. ೪. ಇಲ್ಲಿಯೇ 'ವ' ಎಂಬುದು ಅನುದಾತ್ತವು- ೫. 'ಬಲಂನ್ಯುಬ್ಜವೀರ್ಯಂ' ಎಂಬಲ್ಲಿ ವೀರ್ಯಂ ಎಂಬುದು ನೀಚಸ್ವರಿತವು. 'ಹವಿಷಾ ವಾವೃಧಾನಃ' ಎಂಬಲ್ಲಿ ಹವಿಷಾ ಎಂಬುದು ಮಧ್ಯೋದಾತ್ತವು. ೭. 'ಭೂರ್ಭುವಸ್ಸ್ವಃ' ಎಂಬಲ್ಲಿ ಸ್ವಃ ಎಂಬುದು ಸ್ವರಿತವು. ೮. 'ವನಸ್ಪತಿಃ' ಎಂಬಲ್ಲಿ ವ, ಸ್ಪ ಎಂಬ ಎರಡು ವರ್ಣಗಳು ಉದಾತ್ತಗಳು. **ಈ ರೀತಿ ಉದಾಹರಣೆಗಳನ್ನು ವಿವೇಚನೆ ಮಾಡಿಕೊಳ್ಳಬೇಕು.**

ಅಂತಮಧ್ಯಮಯೋರ್ನಾಮ್ನ್ಯುದಮನುದಂ ನಿಪಾತೇ ।
ಆದ್ಯಾತ್ಸ್ವರಿತಮುಪಸರ್ಗೇ ದ್ವಿರ್ನೀಚಮಾಖ್ಯಾತ ಇತಿ ॥ ೨೦೮ ॥

ಸ್ವರಿತಾತ್ಪರಾಣಿ ಯಾನಿ ಸ್ಯುರ್ಧಾರ್ಯಾಣ್ಯಕ್ಷರಾಣಿ ಚ ।
ಸರ್ವಾಣಿ ಪ್ರಚಯಸ್ಥಾನ್ಯುಪೋದಾತ್ತಂ ನಿಹನ್ಯತೇ ॥ ೨೦೯ ॥

ಪ್ರಚಯೋ ಯತ್ರ ದೃಶ್ಯೇತ ತತ್ರಾಹನ್ಯಾತ್ಸ್ವರಂ ಬುಧಃ ।
ಸ್ವರಿತಃ ಕೇವಲೋ ಯತ್ರ ಮೃದು ತತ್ರ ನಿಪಾತಯೇತ್ ॥ ೨೧೦ ॥

ಪಂಚವಿಧಮಾಚಾರ್ಯಕಂ ನಾಮ ಮುಖಂ ನ್ಯಾಸಃ ಕರಣಂ
ಪ್ರತಿಜ್ಞೋಚ್ಚಾರಣೇ ।
ಅತೋಚ್ಯತೇ ಶ್ರೇಯಃ ಖಲು ವೈ ಸಪ್ರತಿಜ್ಞೋಚ್ಚಾರಣಾ ॥ ೨೧೧ ॥

---

೨೦೮. ನಾಮಪದದಲ್ಲಿ ಅಂತ್ಯ, ಮಧ್ಯಗಳಲ್ಲಿ ಉದಾತ್ತವೂ, ನಿಪಾತದಲ್ಲಿ ಅನುದಾತ್ತವೂ, ಉಪಸರ್ಗದಲ್ಲಿ ಆದಿಯಲ್ಲಿ ಸ್ವರಿತವೂ, ಆಖ್ಯಾತದಲ್ಲಿ ಎರಡು ನೀಚಸ್ವರಗಳೂ ಬರುವುವು.

೨೦೯. ಮೇಲೆ ಕೆಳಗೆ ಬರುವ ಅಕ್ಷರಗಳು ಧಾರ್ಯಾಕ್ಷರಗಳೆನಿಸುವುವು. 'ನಿಹೋತಾ ಸತ್ಸಿ' ಎಂಬಲ್ಲಿ ಸ್ವರಿತವಾದ ತಕಾರದ ಮುಂದಿರುವ 'ಸತ್ಸಿ' ಎಂಬ ಧಾರ್ಯಾಕ್ಷರಗಳು ಪ್ರಚಯಸ್ಥಗಳಾಗುವುವು. ಅಲ್ಲಿ ಆದ್ಯಸ್ವರಿತವು ನಿಹತವಾಗುವುದು. ಅದನ್ನು ಗಾಂಧಾರಸ್ವರದಿಂದ ಉಚ್ಚರಿಸಬೇಕೆಂದು ಭಾವ.

೨೧೦. ಈರೀತಿ ಪ್ರಚಯವು ದೃಷ್ಟವಾದಾಗ ಅಲ್ಲಿನ ಆದ್ಯ ಸ್ವರವನ್ನು ಜ್ಞಾನಿಯು ಹನನ ಮಾಡಬೇಕು. ಪ್ರಚಯವಿಲ್ಲದೆ ಕೇವಲ ಸ್ವರಿತವೇ ಇರುವೆಡೆಯಲ್ಲಿ ಅದು ಮೃದುವಾಗುವುದು.

೨೧೧. ಉಕ್ತ ಸೂಕ್ಷ್ಮವಿಷಯಪರಿಜ್ಞಾನವು ಆಚಾರ್ಯತ್ವದಿಂದುಂಟಾಗುವುದು. ಆಚಾರ್ಯತ್ವವು* ಮುಖ, ನ್ಯಾಸ, ಕರಣ, ಪ್ರತಿಜ್ಞಾ, ಉಚ್ಚಾರಣೆ ಎಂಬುದಾಗಿ ಐದು ವಿಧವು. ವೇದ ಮಂತ್ರೋಚ್ಚಾರಣೆಯನ್ನು ಚೆನ್ನಾಗಿ ಸ್ವತಃ ಮಾಡುವುದಕ್ಕಾಗುವುದಿಲ್ಲವಾದಕಾರಣ ಪ್ರತಿಜ್ಞಾಸಹಿತವಾದ ಉಚ್ಚಾರಣೆಯೇ ಶ್ರೇಯಸ್ಕರವೆಂದು ವಿಹಿತವಾಗಿದೆ.

---

*ಹಸ್ತಾಗ್ರದಲ್ಲಿ ದೃಷ್ಟಿಯನ್ನಿಡುವುದು ಮುಖವು. ಹೆಬ್ಬೆರಳು ಮುಂತಾದುವುಗಳಲ್ಲಿ ಸ್ವರಸಂಯೋಜನೆ ಮಾಡುವುದು ನ್ಯಾಸವೆನಿಸುವುದು. ಕರಣವೆಂದರೆ ಶಿಕ್ಷಾಶಾಸ್ತ್ರವು. ಗುರೂಪದೇಶಪರಂಪರೆಯಿಂದ ಬಂದ ಮಂತ್ರಸ್ವರೂಪನಿರ್ಧಾ

ಯಸ್ಯ ಕಸ್ಯಚಿದ್ವರ್ಣಸ್ಯ ಕರಣನ್ನೋಪಲಭ್ಯತೇ ।
ಪ್ರತಿಜ್ಞಾ ತತ್ರ ವೋಢವ್ಯಾ ಕರಣಂ ಹಿ ತದಾತ್ಮಕಂ ॥ ೨೧೨ ॥

ತುಂಬುರುನಾರದವ(ಭವದ್ವ)ಸಿಷ್ಠವಿಶ್ವಾವಸ್ವಾದಯಶ್ಚ ಗಂಧರ್ವಾಃ ।
ಸಾಮಸು ನಿಭೃತಂ ಕರಣಂ ಸ್ವರಸೌಕ್ಷ್ಮ್ಯಾತ್ ನೈವ ಜಾನೀಯುಃ ೨೧೩ ॥

ಕೌಕ್ಷೇಯಾಗ್ನಿಂ ಸದಾ ರಕ್ಷೇದಶ್ನೀಯಾದಶನಂ ಹಿತಮ್ ।
ಜೀರ್ಣಾಹಾರಃ ಪ್ರಬುದ್ಧಸ್ಸನ್ನುಷಸಿ ಬ್ರಹ್ಮ ಚಿಂತಯೇತ್ ॥ ೨೧೪ ॥

---

೨೧೨. ಆವುದಾದರೊಂದು ವರ್ಣಸ್ವರಾದಿವಿಷಯದಲ್ಲಿ ಶಿಕ್ಷಾಶಾಸ್ತ್ರವು ದೊರಕದಿದ್ದರೆ ಆ ವಿಷಯವನ್ನು ಪ್ರತಿಜ್ಞಾನುಸಾರವಾಗಿ ನಿರ್ಣಯಿಸಬೇಕು. ಪ್ರತಿಜ್ಞಾನುಸಾರವಾಗಿ ಲಕ್ಷಣಾದಿಗಳನ್ನು ವಿಧಿಸಿ ವರ್ಣಸ್ವರಾದಿಗಳನ್ನು ನಿರ್ಧರಿಸಿ ಕೊಡುವುದೇ ಕರಣವು (ಶಿಕ್ಷಾಶಾಸ್ತ್ರವು)

೨೧೩. ಸಾಮಸ್ವರವು ಬಹುಸೂಕ್ಷ್ಮವಾದುದು. ಅಂತಹ ಸ್ವರವನ್ನು ನಿರೂಪಿಸುವ ಶಾಸ್ತ್ರವನ್ನು ಸಂಪೂರ್ಣವಾಗಿ ತುಂಬುರು, ನಾರದನಾದ ನೀನು, ವಸಿಷ್ಠ ಮತ್ತು ವಿಶ್ವಾವಸು ಮುಂತಾದ ಗಂಧರ್ವರೂ ಸಹ ತಿಳಿಯಲಾರರು.

೨೧೪. ಯಾವಾಗಲೂ ಪಥ್ಯವಾದ ಆಹಾರವನ್ನು ತಿನ್ನಬೇಕು. ಜಾಠರಾಗ್ನಿಯನ್ನು ಸರಿಯಾಗಿ ಕಾಪಾಡಿಕೊಳ್ಳಬೇಕು. ತಿಂದ ಆಹಾರವು ಜೀರ್ಣಿಸಿದಮೇಲೆ ಉಷಃಕಾಲದಲ್ಲಿ (ಬೆಳಗಿನಜಾವ) ಎದ್ದು ವೇದಾಭ್ಯಾಸವನ್ನು ಮಾಡಬೇಕು.

---

ರಣೆಗೆ ಪ್ರತಿಜ್ಞೆಯೆಂದು ಹೆಸರು. ಲಕ್ಷಣಸಮನ್ವಯಾನುಸಾರವಾಗಿ ಪ್ರಯೋಗಿಸುವುದೇ ಉಚ್ಚಾರಣೆಯು ಎಂಬುದಾಗಿ ಮುಖಾದಿಗಳಸ್ವರೂಪವನ್ನು ತಿಳಿಯಬೇಕು.

ಶರದ್ವಿಷುವತೋಽತೀತ ಉಷಸ್ಯುತ್ಥಾನಮಿಷ್ಯತೇ ।
ಯಾವದ್ವಾಸಂತಕೀ ರಾತ್ರಿಃ ಮಧ್ಯಮಾ ಪರ್ಯುಪಸ್ಥಿತಾ ॥ ೨೧೫ ॥

ಆಮ್ರಪಾಲಾಶಬಿಲ್ವಾನಾಮಪಾಮಾರ್ಗಶಿರೀಷಯೋಃ ।
ವಾಗ್ಯತಃ ಪ್ರಾತರುತ್ಥಾಯ ಭಕ್ಷಯೇದ್ದಂತಧಾವನಂ ॥ ೨೧೬ ॥

ಖದಿರಶ್ಚ ಕದಂಬಶ್ಚ ಕರವೀರಕರಂಜಯೋಃ ।
ಸರ್ವೇ ಕಂಟಕಿನಃ ಪುಣ್ಯಾಃ ಕ್ಷೀರಿಣಶ್ಚ ಯಶಸ್ವಿನಃ ॥ ೨೧೭ ॥

ತೇನಾಸ್ಯಕರಣಂ ಸೌಕ್ಷ್ಮ್ಯಂ ಮಾಧುರ್ಯಂ ಚೋಪಜಾಯತೇ ।
ವರ್ಣಾಂಶ್ಚ ಕುರುತೇ ಸಮ್ಯಕ್ ಪ್ರಾಚೀನೌದವ್ರಜಿರ್ಯಥಾ ॥ ೨೧೮ ॥

---

೨೧೫. ಶರದೃತುವಿನ ಮಧ್ಯದಲ್ಲಿ ಬರುವ ವಿಷುವ (ತುಲಾಮಾಸ) ಕಾಲವು ಕಳೆದ ಮೇಲೆ ವಸಂತಕಾಲದ ಮಧ್ಯದವರೆಗೂ ಉಷಃಕಾಲದಲ್ಲಿ ಮುಂಚಿತವಾಗಿ ಎದ್ದು ಪಾಠಮಾಡುವುದು ಸಂಪ್ರದಾಯಸಿದ್ಧವು.

೨೧೬. ಪ್ರಾತಃಕಾಲದಲ್ಲಿ ಎದ್ದು ಮೌನದಿಂದ ಮಾವು, ಮುತ್ತುಗ, ಬಿಲ್ವ, ಉತ್ತರಣೆ ಅಥವಾ ಶಿರೀಷವೃಕ್ಷಗಳ ಕಡ್ಡಿಯಿಂದ ಹಲ್ಲುಗಳನ್ನುಜ್ಜಿ ಕೊಂಡು ಅನಂತರ ಸಂಧ್ಯೋಪಾಸನೆಯನ್ನು ಮಾಡಬೇಕು.

೨೧೭. ಕಗ್ಗಲಿ, ಈಚಲು, ಕಣಿಗಲ, ಹೊಂಗೆ ಇವುಗಳ ಕಡ್ಡಿಗಳಿಂದಲೂ ದಂತಧಾವನ ಮಾಡಬಹುದು. ಇವುಗಳಲ್ಲಿ ಮುಳ್ಳಿರುವ ಕಡ್ಡಿಗಳು ಪುಣ್ಯಕರ ಗಳು. ಹಾಲುಳ್ಳ ಕಡ್ಡಿಗಳು ಯಶಸ್ಕರಗಳು.

೨೧೮. ಮೇಲೆ ಹೇಳಿದ ಕಡ್ಡಿಗಳಿಂದ ಹಲ್ಲುಜ್ಜಿ, ನಾಲಿಗೆಯನ್ನು ತಿಕ್ಕಿ ಬಾಯಿಯನ್ನು ತೊಳೆದುಕೊಂಡರೆ ಅದರಿಂದ ಶ್ಲೇಷ್ಮವು ನಿವೃತ್ತಿಯಾಗಿ, ವಾಕ್ಕು ಸೂಕ್ಷ್ಮವಾಗಿಯೂ, ಮಧುರವಾಗಿಯೂ ಹೊರಡುತ್ತದೆ. ಅದು ಕಂಠಾದಿಸ್ಥಾನ ಗಳಿಂದ ಅಕ್ಷರಗಳನ್ನು ಸ್ಪಷ್ಟವಾಗಿ ಹೊರಡಿಸುತ್ತದೆ ಎಂಬುದಾಗಿ ಪ್ರಾಚೀನೌದ ವ್ರಜಿ ಎಂಬಾಚಾರ್ಯರು ಅಭಿಪ್ರಾಯಪಡುವರು.

**ತ್ರಿಫಲಾಂ ಲವಣಾಢ್ಯೇನ ಭವೇತ್ ಶಿಷ್ಯಸ್ಯ ಸರ್ವದಾ ।**
**ಅಗ್ನಿಮೇಧಾ ಜನನ್ಯೇಷಾ ಸ್ವರವರ್ಣಕರೀ ತಥಾ ॥ ೨೧೯ ॥**

**ಕೃತ್ವಾ ಚಾವಶ್ಯಕಾನ್ ಧರ್ಮಾನ್ ಜಾಠರಂ ಪರ್ಯುಪಾಸ್ಯ ಚ ।**
**ಪೀತ್ವಾ ಧೂಮಘೃತಂ ಚೈವ ಶುಚಿರ್ಭೂತ್ವಾ ತತೋ ವದೇತ್ ॥ ೨೨೦ ॥**

**ಮಂದ್ರೇಣೋಪಕ್ರಮೇತ್ ಪೂರ್ವಂ ಸರ್ವಶಾಖಾಸ್ವಯಂ ವಿಧಿಃ ।**
**ಸಪ್ತಮಂತ್ರಾನತಿಕ್ರಮ್ಯ ಯಥೇಷ್ಟಾಂ ವಾಚಮುತ್ಸೃಜೇತ್ ।**
**ನ ತಾಂ ಸಮೀರಯದ್ವಾಚಂ ಯಾ ಪ್ರಾಣಮುಪರೋಧಯೇತ್ ॥ ೨೨೧ ॥**

**ಪ್ರಾಣಾನಾಮುಪರೋಧೇನ ವೈಸ್ವರ್ಯಂ ಚೋಪಜಾಯತೇ ।**
**ಸ್ವರವ್ಯಂಜನಮಾಧುರ್ಯಂ ಲುಪ್ಯೇತ ನಾತ್ರ ಸಂಶಯಃ ॥ ೨೨೨ ॥**

---

೨೧೯. ವೇದಾಧ್ಯಯನ ಮಾಡುವ ಶಿಷ್ಯನು ಉಪ್ಪನ್ನು ಸೇರಿಸಿ ತ್ರಿಫಲ (ಅಳಲೇಕಾಯಿ ತಾರೇಕಾಯಿ, ನೆಲ್ಲಿಕಾಯಿ) ವನ್ನು ಊಟದ ವೇಳೆಯಲ್ಲಿ ತಿನ್ನ ಬೇಕು. ಅದರಿಂದ ಅಗ್ನಿಪಾಟವವೂ, ಬುದ್ಧಿಸೂಕ್ಷ್ಮತೆಯೂ, ಸ್ವರವರ್ಣ ಸೌಷ್ಠವವೂ ಉಂಟಾಗುವುದು.

೨೨೦. ಬೆಳಗಿನ ಜಾವದಲ್ಲಿ ಎದ್ದಕೂಡಲೇ ಮಲಮೂತ್ರವಿಸರ್ಜನೆ ಯನ್ನು ಮಾಡಿ ಅವಶ್ಯಕರ್ತವ್ಯವಾದ ದಂತಧಾವನ, ಸ್ನಾನ, ಸಂಧ್ಯೋಪಾಸನಾ ದಿಗಳನ್ನು ಮಾಡಬೇಕು. ಅಶುಚಿಯಾದರೆ ಧೂಮಘೃತಪ್ರಾಶನೆ ಮಾಡಬೇಕು. ಹೀಗೆ ಸ್ನಾನಾದಿಗಳಿಂದ ಪರಿಶುದ್ಧನಾಗಿ ಮಂತ್ರಾಧ್ಯಯನ ಮಾಡಬೇಕು.

೨೨೧. ಅಧ್ಯಯನಾದಿಯಲ್ಲಿ ಸಪ್ತಮಂತ್ರಗಳನ್ನು ಮೆಲ್ಲಗೆ ಹೇಳಿ ಅನಂತರ ಮಂದ್ರಾದಿಸ್ವರದಿಂದ ಮಂತ್ರವನ್ನು ಯಥೇಷ್ಟವಾಗಿ ಹೇಳಬೇಕು. ಇದು ಸಕಲ ಶಾಖೆಗಳಿಗೂ ಅಧ್ಯಯನವಿಧಾನವು. ಪ್ರಾತಃಕಾಲದಲ್ಲಿ ಉಸಿರು ಕಟ್ಟುವಂತೆ ಗಟ್ಟಿಯಾಗಿ ಶಬ್ದೋಚ್ಚಾರಣೆಯನ್ನು ಮಾಡಬಾರದು.

೨೨೨. ಶ್ವಾಸನಿರೋಧಮಾಡಿ ಹೇಳಿದ ವಾಕ್ಯದಲ್ಲಿ ಅಕ್ಷರಲೋಪವೂ, ಅಪಸ್ವರವೂ ಉಂಟಾಗುವುದು ಮತ್ತು ಅಂತಹವಾಕ್ಯದಲ್ಲಿ ಸ್ವಾಭಾವಿಕವಾದ ಸ್ವರವರ್ಣಮಾಧುರ್ಯವು ಹೋಗುವುದು; ಸಂದೇಹವಿಲ್ಲ.

ಕುತೀರ್ಥಾದಾಗತಂ ದಗ್ಧಮುಪವರ್ಣೈಶ್ಚ ಭಕ್ಷಿತಂ ।
ನ ತಸ್ಯ ಪರಿಮೋಕ್ಷೋಽಸ್ತಿ ಪಾಪಾಹೇರಿವ ಕಿಲ್ಬಿಷಾತ್ ॥ ೨೨೩ ॥

ಸುತೀರ್ಥಾದಾಗತಂ ವ್ಯಕ್ತಂ ಸ್ವಾಮ್ನಾತಂ ಸುಪ್ರತಿಷ್ಠಿತಂ ।
ಸುಸ್ವರೇಣ ಸುವಕ್ತ್ರೇಣ ಪ್ರಯುಕ್ತಂ ಬ್ರಹ್ಮ ರಾಜತೇ ॥ ೨೨೪ ॥

ನ ಕರಾಲೋ ನ ಲಂಬೋಷ್ಠೋ ನ ಚ ಸರ್ವಾಽನುನಾಸಿಕಃ ।
ಗದ್ಗದೋ ಬದ್ಧಜಿಹ್ವಶ್ಚ ನ ಶಬ್ದಾನ್ ವಕ್ತುಮರ್ಹತಿ ॥ ೨೨೫ ॥

---

೨೨೩. ದುಷ್ಟಜಲಾಶಯದಿಂದ ತರಲ್ಪಟ್ಟು ದುಷ್ಟಜನರಿಂದ ಸೇವಿತವಾದ ಜಲವು ಹೇಗೆ ಪಾಪವನ್ನು ಪರಿಹರಿಸುವುದಿಲ್ಲವೋ ಹಾಗೆಯೇ ಅನೂಚಾನನಲ್ಲದವನನ್ನು ಗುರುವೆಂದು ಭಾವಿಸಿ ಅವನಲ್ಲಿ ಮಾಡಿದ ಅಧ್ಯಯನವು ಮತ್ತು ಸ್ಥಾನಪ್ರಯತ್ನಾದಿಗಳ ವಿವೇಚನೆಯಿಲ್ಲದೆ ಅಪಸ್ವರಾದಿಗಳಿಂದ ಯುಕ್ತವಾಗಿ ಮಾಡಿದ ಅಧ್ಯಯನವೂ ಸಹ ಭಸ್ಮದಂತೆ ನೀರಸವಾಗುವುದು. ಅಂತಹವನು ಎಷ್ಟೇ ಆದರದಿಂದ ವೇದಘೋಷಮಾಡಿದರೂ ಘೋರಪಾಪವೇ ಸಂಭವಿಸುವುದು; ಘೋರವಾದ ಹಾವು ಕಚ್ಚಿದವನಿಗೆ ವಿಷವು ನಿವೃತ್ತಿಯಾಗದಿರುವಂತೆ ಅವನಿಗೆ ಪಾಪವು ನಿವೃತ್ತಿಯಾಗುವುದೇ ಇಲ್ಲ.

೨೨೪. ಅನೂಚಾನಗುರು, ಸದಾಗಮ ಇವುಗಳಿಂದ ಲಬ್ಧವಾದ, ಸಂಪ್ರದಾಯಪೂರ್ವಕವಾಗಿ ಚೆನ್ನಾಗಿ ಅಧ್ಯಯನಮಾಡಿದ, ಶಿಷ್ಯರಿಗೆ ಪಾಠಹೇಳಿ ಪರಿನಿಷ್ಠಿತವಾದ, ಸುಸ್ವರಯುಕ್ತವಾದ ವಾಣಿಯಿಂದ ಉಚ್ಚರಿಸಲ್ಪಟ್ಟ ವೇದವು ಇಷ್ಟಫಲಪ್ರದವಾಗುವುದು.

೨೨೫. ಮೂಗು, ಕಣ್ಣು, ಕಿವಿ ಮುಂತಾದುವನ್ನು ವಕ್ರಮಾಡಿಕೊಂಡು ಭಯಂಕರನಾಗಿರುವವನು, ಜೋಲುವ ತುಟಿಯುಳ್ಳವನು, ಎಲ್ಲಾ ವರ್ಣಗಳನ್ನೂ ಮೂಗಿನಲ್ಲಿಯೇ ಉಚ್ಚರಿಸುವವನು, ಗಂಟಲಿನಲ್ಲಿ ಮಾತನಾಡುವವನು ಮತ್ತು ನೆತ್ತಿ (ಬಿಕ್ಕು) ಯಿಂದ ಬದ್ಧಜಿಹ್ವನೂ ಆಗಿರುವವನೂ ಶಬ್ದಗಳನ್ನು ಪ್ರಯೋಗಿಸಲು (ವೇದಾಧ್ಯಯನಮಾಡಲು) ಅರ್ಹನಲ್ಲ.

**ಏಕಚಿತ್ತೋ ನಿರುದ್ಭ್ರಾಂತಃ ಶಾಂತಗಾನ ವಿವರ್ಜಿತಃ ।**
**ಸ ತು ವರ್ಣಾನ್ ಪ್ರಯುಂಜೀತ ದಂತೋಷ್ಠೌ ಯಸ್ಯ ಶೋಭನೌ ॥೨೨೬॥**

**ಪಂಚವಿದ್ಯಾ ನ ಗೃಹ್ಣಂತಿ ಚಂಡಾಃ ಸ್ತಬ್ಧಾಶ್ಚ ಯೇ ನರಾಃ ।**
**ಅಲಸಾಶ್ಚ ಸರೋಗಾಶ್ಚ ಯೇಷಾಂ ಚ ವಿಸ್ಮೃತಂ ಮನಃ ॥ ೨೨೭ ॥**

**ಶನೈರ್ವಿದ್ಯಾಂ ಶನೈರರ್ಥಾನ್ ಆರೋಹೇತ್ ಪರ್ವತಂ ಶನೈಃ ।**
**ಶನೈರೇವಾಧ್ವಗಮನಂ ಯೋಜನಾನಾಂ ಪರಿವ್ರಜೇತ್ ॥ ೨೨೮ ॥**

**ಯೋಜನಾನಾಂ ಸಹಸ್ರಂ ತು ಶನೈರ್ಯಾಂತಿ ಪಿಪೀಲಿಕಾಃ ।**
**ಅಗಚ್ಛನ್ ವೈನತೇಯೋಽಪಿ ಪದಮೇಕಂ ನ ಗಚ್ಛತಿ ॥ ೨೨೯ ॥**

---

೨೨೬. ಚಿತ್ತೈಕಾಗ್ರತೆಯುಳ್ಳವನು, ವಿಭ್ರಮರಹಿತನು, ಅತ್ಯಂತ ಸಾವಕಾಶವಾಗಿ ಶಬ್ದಗಳನ್ನುಚ್ಚರಿಸದಿರುವುದರಿಂದ ಶಾಂತಗಾನ ಮಾಡದಿರುವವನು, ಒಳ್ಳೆಯ ಹಲ್ಲುತುಟಿಗಳುಳ್ಳವನೂ ಆಗಿರುವವನು ವರ್ಣಗಳನ್ನು ಪ್ರಯೋಗಿಸಬೇಕು.

೨೨೭- ಗರ್ವ, ಕೋಪಗಳಿಂದ ಗುರುಗಳನ್ನನುಸರಿಸದಿರುವವನು, ಚಂಡ=ಗುರೂಪದೇಶವಿಲ್ಲದೆ ಸ್ವತಃ ಅಧ್ಯಯನದಲ್ಲಿ ಪ್ರವರ್ತಿಸುವವನು, ಸೋಮಾರಿಯು, ರೋಗದಿಂದ ನರಳುತ್ತಿರುವವನು, ಚಂಚಲಚಿತ್ತನು ಎಂಬೀ ಐದು ಜನರು ವಿದ್ಯೆಯನ್ನು ಗ್ರಹಿಸಲಾರರು.

೨೨೮. ಹಣ ಸಂಪಾದನೆ, ಪರ್ವತವನ್ನು ಹತ್ತುವುದು ಮತ್ತು ದಾರಿ ನಡೆಯುವುದು ಇವನ್ನು ಮೆಲ್ಲಗೆ ಮಾಡಿದರೆ ಗಾವುದ ದೂರವಾದರೂ ಹೋಗುವಂತೆ ಸಾವಕಾಶವಾಗಿ ವಿದ್ಯಾಭ್ಯಾಸಮಾಡಿದರೆ ಅದು ಚೆನ್ನಾಗಿ ಫಲಿಸುವುದು. ಎಂದರೆ ಅತಿ ತ್ವರೆಯಾಗಿ ಅಧ್ಯಯನ ಮಾಡಬಾರದು ಎಂದು ಭಾವ.

೨೨೯- ಹೋಗುತ್ತಿರುವ ಇರುವೆಗಳು ಮೆಲ್ಲಗೆ ನಡೆದರೂ ಸಾವಿರಾರು ಯೋಜನಗಳ ದೂರ ಹೋಗುತ್ತವೆ. ಅತಿವೇಗವಾಗಿ ಹಾರುವ ಗರುಡನೂ ಕೂಡ ಸಂಚರಿಸದೇ ಇದ್ದಲ್ಲಿಯೇ ಇದ್ದರೆ ಒಂದು ಹೆಜ್ಜೆಯೂ ಸಹ ಪ್ರಯಾಣವು ಸಾಗುವುದಿಲ್ಲ. (ಅದರಂತೆಯೇ ಅಧ್ಯಯನಮಾಡುವವನೂ ಸಹ ಗಟ್ಟಿಯಾಗಿ ಒಂದೇ ಉಸಿರಿಗೆ

**ನ ಹಿ ಪಾರ್ಷ್ಣಿಹತಾ ವಾಣೀ ಪ್ರಯೋಗಾನ್ ವಕ್ತುಮರ್ಹತಿ ।**
**ಬಧಿರಸ್ಯೇವ ತಲ್ಪಸ್ಥಾ ವಿದಗ್ಧಾ ವಾಮಲೋಚನಾ ॥ ೨೩೦ ॥**

**ಉಪಾಂಶು ತ್ವರಿತಂ ಚೈವ ಯೋऽಧೀತೇ ವಿತ್ರಸನ್ನಿವ ।**
**ಅಪಿ ರೂಪಸಹಸ್ರೇಷು ಸಂದೇಹೇಷ್ವೇವ ಜಾಯತೇ ॥ ೨೩೧ ॥**

**ಪುಸ್ತಕಪ್ರತ್ಯಯಾಧೀತಂ ನಾಧೀತಂ ಗುರುಸನ್ನಿಧೌ ।**
**ರಾಜತೇ ನ ಸಭಾಮಧ್ಯೇ ಜಾರಗರ್ಭೇವ ಕಾಮಿನೀ ॥ ೨೩೨ ॥**

---

ಉಚ್ಚರಿಸಿ ಅನಂತರ ಅಧ್ಯಯನವನ್ನೇ ನಿಲ್ಲಿಸಿದರೆ ವಿರಸವಾಗುವುದೇ ಹೊರತು ಅದು ರಸವತ್ತಾಗುವುದಿಲ್ಲ. ಆದುದರಿಂದ ಇರುವೆಯು ಮೆಲ್ಲಗೆ ಸಂಚರಿಸುವಂತೆ ಅತಿತ್ವರೆಪಡದೆ ವೇದಮಂತ್ರಗಳನ್ನುಚ್ಚರಿಸಿದರೆ ಅಧ್ಯಯನವು ರಸವತ್ತಾಗುವುದೆಂದು ಭಾವ).

೨೩೦. ಕಿವುಡನೆದುರಿಗೆ ವಿಹಾರಸಮಯದಲ್ಲಿ ಉಚಿತವಾದ ಗಾನವನ್ನು ಗಟ್ಟಿಯಾಗಿ ಮಾಡಿದರೆ ಕಾಮಿನಿಗೂ ಕೂಡ ವೈರಸ್ಯವುಂಟಾಗುವುದು. ಅದರಂತೆ ಮಂತ್ರವನ್ನು ಗಟ್ಟಿಯಾಗಿ ಹೇಳಲಾರಂಭಿಸಿ ಅನಂತರ ನಿಲ್ಲಿಸಿದ ವಾಣಿಯು ಸರ್ವರಿಗೂ ಉದ್ವೇಗವನ್ನೇ ಹುಟ್ಟಿಸುತ್ತದೆ. ಆದಕಾರಣ ಗಟ್ಟಿಯಾಗಿ ತ್ವರೆಯಿಂದ ಅಧ್ಯಯನವನ್ನು ಮಾಡಬಾರದು. ಕಿವುಡನೊಡನೆ ಹಾಸಿಗೆಯಲ್ಲಿ ಸೇರಿದ, ಕಾಮಶಾಸ್ತ್ರದಲ್ಲಿ ನಿಪುಣಳಾದ, ಮನೋಹರ ನೇತ್ರಗಳುಳ್ಳ ರಮಣಿಯು ರತಿಪ್ರಯೋಗಗಳನ್ನು ಮಾಡುವಂತೆ ವಿಚ್ಛಿನ್ನವಾಗಿ ವೇದಾಕ್ಷರಗಳನ್ನು ಪ್ರಯೋಗಿಸಬಾರದು.

೨೩೧. ಕುಗ್ಗಿದ ಧ್ವನಿಯಿಂದ, ಅತಿವೇಗವಾಗಿ ಆಯಾಸಪಡುತ್ತಾ ಅಧ್ಯಯನಮಾಡುವವನು ಸಾವಿರಾರುಬಾರಿ ಉಚ್ಚರಿಸಿದರೂ ಸಂದಿಗ್ಧವಾಗಿಯೇ ಇರುತ್ತದೆ.

೨೩೨. ಗುರುಸನ್ನಿಧಿಯಲ್ಲಿ ಅಧ್ಯಯನಮಾಡದೇ ಪುಸ್ತಕದಲ್ಲಿರುವ ಪದಗಳನ್ನು ನೋಡಿಕೊಂಡು ಸ್ವತಃ ಮಾಡಿದ ಅಧ್ಯಯನವು ಜಾರಪುರುಷನಿಂದ ಗರ್ಭವನ್ನು ಧರಿಸಿದ ಕಾಮಿನಿಯಂತೆ ಸಭಾಮಧ್ಯದಲ್ಲಿ ಶೋಭಿಸುವುದಿಲ್ಲ.

ಅಂಜನಸ್ಯ ಕ್ಷಯಂ ದೃಷ್ಟ್ವಾ ವಲ್ಮೀಕಸ್ಯ ಚ ಸಂಚಯಂ ।
ಅವಂಧ್ಯಂ ದಿವಸಂ ಕುರ್ಯಾತ್ ದಾನಾಧ್ಯಯನಕರ್ಮಸು ॥ ೨೩೩ ॥

ಯತ್ಕೀಟೈಃ ಪಾಂಸುಭಿಃ ಶ್ಲಕ್ಷ್ಣೈಃ ವಲ್ಮೀಕಃ ಕ್ರಿಯತೇ ಮಹಾನ್ ।
ನ ತತ್ರ ಬಲಸಾಮರ್ಥ್ಯಂ ಉದ್ಯಮಸ್ತತ್ರ ಕಾರಣಂ ॥ ೨೩೪ ॥

ಸಹಸ್ರಗುಣಿತಾ ವಿದ್ಯಾ ಶತಶಃ ಪರಿಕೀರ್ತಿತಾ ।
ಆಗಮಿಷ್ಯತಿ ಜಿಹ್ವಾಗ್ರೇ ಸ್ಥಲಾತ್ ನಿಮ್ನಮಿವೋದಕಂ ॥ ೨೩೫ ॥

ಹಯಾನಾಮಿವ ಜಾತ್ಯಾನಾಂ ಅರ್ಧರಾತ್ರಾರ್ಧಶಾಯಿನಾಂ ।
ನ ಹಿ ವಿದ್ಯಾರ್ಥಿನಾಂ ನಿದ್ರಾ ಚಿರಂ ನೇತ್ರೇಷು ತಿಷ್ಠತಿ ॥ ೨೩೬ ॥

---

೨೩೩. ಅಗೆದರೆ ಬೆಟ್ಟವಾದರೂ ಕರಗುವುದು. ಅಲ್ಪವಾದ ಗೆದ್ದಲು ಹುಳುವು ದೊಡ್ಡ ಹುತ್ತವನ್ನು ಕಟ್ಟುವುದು. ಇವುಗಳನ್ನೆಲ್ಲಾ ಪರಿಶೀಲಿಸಿ ಪುರುಷನು ಸೋಮಾರಿಯಾಗದೆ ವಿಹಿತವಾದ ದಾನ, ಅಧ್ಯಯನ ಮತ್ತು ಕರ್ಮಗಳನ್ನು ಆಚರಿಸುತ್ತಾ ಕಾಲವನ್ನು ಸಾರ್ಥಕಗೊಳಿಸಬೇಕು. ವ್ಯರ್ಥಮಾಡಬಾರದು.

೨೩೪. ಗೆದ್ದಲುಹುಳುಗಳು ಒದ್ದೆಯಾದ ಮಣ್ಣಿನ ಧೂಳಿಯಿಂದ ದೊಡ್ಡದಾದ ಹುತ್ತವನ್ನು ರಚಿಸುತ್ತವೆ. ಅದಕ್ಕೆ ಅವುಗಳ ಪ್ರಯತ್ನವೇ ಕಾರಣವು. ಬಲ ಸಾಮರ್ಥ್ಯಗಳು ಕಾರಣವಲ್ಲ.

೨೩೫. ಜಲವು ಎತ್ತರದಿಂದ ತಗ್ಗಿನ ಜಾಗಕ್ಕೆ ಸಹಜವಾಗಿ ಹರಿಯುವಂತೆ ವಿದ್ಯೆಯು ಸಾವಿರಾರು ಬಾರಿ ಅಭ್ಯಾಸಮಾಡಲ್ಪಟ್ಟರೆ ತನ್ನ ಯತ್ನವಿಲ್ಲದೆಯೇ ಬಾಯಿಯಿಂದ ಹೊರಡುವುದು. ಆದುದರಿಂದ ಸರ್ವದಾ ಅಭ್ಯಾಸ ಮಾಡುತ್ತಲೇ ಇರಬೇಕು.

೨೩೬. ಜಾತಿಯ ಕುದುರೆಗಳಂತೆ ವಿದ್ಯಾರ್ಥಿಗಳು ಹೇಮಂತಋತುವಿನಲ್ಲಿ ಎರಡುಯಾಮಗಳು, ವಸಂತಾದಿ ಋತುಗಳಲ್ಲಿ ಮೂರು ಯಾಮಗಳೂ ನಿದ್ರೆ ಮಾಡಬೇಕು. ವಿದ್ಯಾರ್ಥಿಗಳು ಅದಕ್ಕಿಂತ ಹೆಚ್ಚುಕಾಲ ಕಣ್ಣುಮುಚ್ಚಿ ನಿದ್ರಿಸಬಾರದು.

ನ ಭೋಜನವಿಲಂಬೀ ಸ್ಯಾತ್ ನ ಚ ನಾರೀನಿಬಂಧನಃ ।
ಸುದೂರಮಪಿ ವಿದ್ಯಾರ್ಥೀ ವ್ರಜೇತ್ ಗರುಡಹಂಸವತ್ ॥ ೨೩೭ ॥

ಅಹೇರಿವ ಗಣಾತ್ ಭೀತಃ ಸೌಹಾರ್ದಾನ್ನರಕಾದಿವ ।
ರಾಕ್ಷಸೀಭ್ಯ ಇವ ಸ್ತ್ರೀಭ್ಯಸ್ಸ ವಿದ್ಯಾಮಧಿಗಚ್ಛತಿ ॥ ೨೩೮ ॥

ನ ಶಠಾಃ ಪ್ರಾಪ್ನುವಂತ್ಯರ್ಥಾನ್ ನ ಕ್ಲೀಬಾ ನ ಚ ಮಾನಿನಃ ।
ನ ಚ ಲೋಕರವಾದ್ಭೀತಾಃ ನ ಚ ಶ್ವಃಶ್ವಃ ಪ್ರತೀಕ್ಷಕಾಃ ॥ ೨೩೯ ॥

ಯಥಾ ಖನನ್ ಖನಿತ್ರೇಣ ಭೂತಲೇ ವಾರಿ ವಿಂದತಿ ।
ಏವಂ ಗುರುಗತಾಂ ವಿದ್ಯಾಂ ಶುಶ್ರೂಷುರಧಿಗಚ್ಛತಿ ॥ ೨೪೦ ॥

---

೨೩೭. ವಿದ್ಯಾರ್ಥಿಯು ಸಾವಕಾಶವಾಗಿ ಭೋಜನಮಾಡಬಾರದು. ಸ್ತ್ರೀಯರೊಡನೆ ಸಲ್ಲಾಪಾದಿಗಳನ್ನು ಮಾಡಬಾರದು. ಬಹುದೂರವಾದರೂ ಗರುಡಹಂಸಪಕ್ಷಿಗಳಂತೆ ವೇಗವಾಗಿ ಹೋಗಬೇಕು.

೨೩೮. ಕೃಷ್ಣಸರ್ಪವನ್ನು ನೋಡಿದರೆ ಭಯಪಡುವಂತೆ ಜನಸಮೂಹದಲ್ಲಿ ಸೇರಲು ಭಯಪಡುವವನು, ನರಕದಂತೆ ಸಂಗವನ್ನು ತ್ಯಜಿಸುವವನು ಮತ್ತು ರಾಕ್ಷಸಿಯರಂತೆ ಸ್ತ್ರೀಯರನ್ನು ನೋಡಿದರೆ ಭಯಪಡುವ ವಿದ್ಯಾರ್ಥಿಗೇ ವಿದ್ಯೆಯು ಬರುವುದು.

೨೩೯. ಸೋಮಾರಿಯು ಹಣ ಮತ್ತು ವಿದ್ಯೆಗಳನ್ನು ಸಂಪಾದಿಸಲಾರನು. ನಪುಂಸಕರು ಪುತ್ರವಂತರಾಗಲಾರರು. ದುರಭಿಮಾನಿಗಳು ವಿದ್ಯೆಯನ್ನು ಸಂಪಾದಿಸಲಾರರು. ಜನಗಳ ಮಾತಿಗೆ ಭಯಪಡುವವನು ವಿದ್ಯೆಯನ್ನು ಗ್ರಹಿಸಲಾರನು. ಇಂದು, ನಾಳೆ, ನಾಡಿದ್ದು ಮುಂತಾಗಿ ದಿನಗಳನ್ನು ಎಣಿಸುವವನು ವಿದ್ಯೆಗೆ ಪಾತ್ರನಾಗಲಾರನು.

೨೪೦. ಗುದ್ದಲಿಯಿಂದ ಭೂಮಿಯನ್ನು ತೋಡಿ ಪ್ರಯಾಸಪಟ್ಟರೆ ಅಲ್ಲಿ ನೀರು ದೊರೆಯುವಂತೆ ಗುರಶುಶ್ರೂಷೆ ಮಾಡುವವನಿಗೆ ಗುರುವಿನಲ್ಲಿರುವ ವಿದ್ಯೆಯು ಬರುವುದು.

**ಗುರುಶುಶ್ರೂಷಯಾ ವಿದ್ಯಾ ಪುಷ್ಕಲೇನ ಧನೇನ ವಾ ।**
**ಅಥವಾ ವಿದ್ಯಯಾ ವಿದ್ಯಾ ಹ್ಯನ್ಯಥಾ ನೋಪಪದ್ಯತೇ ॥ ೨೪೧ ॥**

**ಶುಶ್ರೂಷಾರಹಿತಾ ವಿದ್ಯಾ ಯದ್ಯಪಿ ಮೇಧಾಗುಣೈಃ ಸಮುಪಯಾತಿ ।**
**ವಂಧ್ಯೇವ ಯೌವ್ವನವತೀ ನ ತಸ್ಯ ವಿದ್ಯಾ ಫಲವತೀ ಭವತಿ ॥ ೨೪೨ ॥**

**ದ್ಯೂತಂ ಪುಸ್ತಕವಾಚಂ ಚ ನಾಟಕೇಷು ಚ ಸಕ್ತಿಕಾ ।**
**ಸ್ತ್ರಿಯಸ್ತಂದ್ರೀ ಚ ನಿದ್ರಾ ಚ ವಿದ್ಯಾವಿಘ್ನಕರಾಣಿ ಷಟ್ ॥ ೨೪೩ ॥**

**ಯಥಾ ವ್ಯಾಘ್ರೀ ಹರೇತ್ ಪುತ್ರಾನ್ ದ್ರಂಷ್ಟ್ರಾಭ್ಯಾಂ ನ ಚ ಪೀಡಯೇತ್**
**ಭೀತಾ ಪತನಭೇದಾಭ್ಯಾಂ ತದ್ವತ್ ವರ್ಣಾನ್ ಪ್ರಯೋಜಯೇತ್ ॥ ೨೪೪ ॥**

**ಏವಂ ವರ್ಣಾಃ ಪ್ರಯೋಕ್ತವ್ಯಾ ನಾವ್ಯಕ್ತಾ ನ ಚ ಪೀಡಿತಾಃ ।**
**ಸಮ್ಯಕ್ ವರ್ಣಪ್ರಯೋಗೇಣ ಬ್ರಹ್ಮಲೋಕೇ ಮಹೀಯತೇ ॥ ೨೪೫ ॥**

---

೨೪೧. ಗುರುಸೇವೆ ಅಥವಾ ಅಧಿಕಧನ ಇಲ್ಲವೇ ಪ್ರತಿವಿದ್ಯೆ ಈ ಮೂರು ಸಾಧನಗಳಿಂದಲೇ ವಿದ್ಯಾರ್ಥಿಗೆ ವಿದ್ಯೆಯು ಲಭಿಸುವುದು. ಬೇರೆ ಉಪಾಯದಿಂದ ವಿದ್ಯೆಯು ಲಭಿಸುವುದಿಲ್ಲ.

೨೪೨. ಗುರುಸೇವೆಯನ್ನು ಮಾಡದೆ ಬುದ್ಧಿವಂತಿಕೆಯಿಂದ ವಿದ್ಯೆಯು ಬಂದರೂ ಬರಬಹುದು. ಆದರೆ ಅದು ಬಂಜೆಯ ಯೌವನದಂತೆ ಫಲಕಾರಿಯಾಗುವುದಿಲ್ಲ.

೨೪೩. ಜೂಜು, ಪುಸ್ತಕಪಾಠ, ನಾಟಕನೋಡುವುದರಲ್ಲಿ ಆಸಕ್ತಿ, ಸ್ತ್ರೀಲೌಲ್ಯ, ಆಲಸ್ಯ ಮತ್ತು ನಿದ್ರೆ ಎಂಬೀ ಆರೂ ವಿದ್ಯೆಗೆ ವಿಘ್ನಕಾರಿಗಳು.

೨೪೪. ಹೆಣ್ಣುಹುಲಿಯು ತನ್ನ ಮರಿಗಳನ್ನು ಅವಕ್ಕೆ ಬಾಧೆಯಾಗದಂತೆಯೂ ಕೆಳಗೆ ಬೀಳದಂತೆಯೂ, ಗಾಯವಾಗದಂತೆಯೂ ಬಾಯಿಯಲ್ಲಿ ಕಚ್ಚಿಕೊಂಡು ಹೋಗುವಂತೆ ವೇದಾಭ್ಯಾಸಿಯು ವರ್ಣಗಳನ್ನು ಉಚ್ಚರಿಸಬೇಕು.

೨೪೫. ಈ ರೀತಿಯಾಗಿ ವರ್ಣಗಳನ್ನು ಅಸ್ಫುಟವಾಗದಂತೆ ಸ್ಥಾನಾದಿಗಳ ಸ್ವಭಾವಾನುಗುಣವಾಗಿ ಪ್ರಯೋಗಿಸಬೇಕು. ಚೆನ್ನಾಗಿ ವರ್ಣಗಳನ್ನು ಚ್ಚರಿಸುವವನು ಅದರಿಂದ ಬ್ರಹ್ಮಲೋಕವನ್ನು ಹೊಂದಿ ಪೂಜ್ಯನಾಗುವನು-

**ಇತಿ ದಿಙ್ಮಾತ್ರಮುದ್ದಿಷ್ಟಂ ಶಿಕ್ಷಾಗ್ರಂಥಂ ಮಯಾ ತವ ।**
**ಜ್ಞಾತ್ವಾ ವೇದಾಂಗಮಾದ್ಯಂ ತು ಬ್ರಹ್ಮಭೂಯಾಯ ಕಲ್ಪತೇ ॥ ೨೪೬ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ ದ್ವಿತೀಯಪಾದೇ ಶಿಕ್ಷಾನಿರೂಪಣಂ ನಾಮ ಪಂಚಾಶತ್ತಮೋಽಧ್ಯಾಯಃ**

---

೨೪೬. ನಾರದನೇ! ಈರೀತಿಯಾಗಿ ಶಿಕ್ಷಾಗ್ರಂಥದ ದಾರಿಯನ್ನು ಮಾತ್ರ ನಿನಗೆ ಉಪದೇಶಿಸಿರುವೆನು. ಈ ಮೊದಲನೆಯ ವೇದಾಂಗವನ್ನು ತಿಳಿದರೆ ಮನುಜನು ಮುಕ್ತನಾಗುವನು.

ಇಂತು ಶ್ರೀನಾರದೀಯಪುರಾಣ ಪೂರ್ವಭಾಗದ ಬೃಹದುಪಾಖ್ಯಾನವೆಂಬ ದ್ವಿತೀಯ ಪಾದದಲ್ಲಿ ಶಿಕ್ಷಾನಿರೂಪಣೆಯೆಂಬ ಐವತ್ತನೆಯ ಅಧ್ಯಾಯವು ಮುಗಿದುದು.

## ಅಧ್ಯಾಯ ವಿಷಯಸಂಗ್ರಹ

ವೇದಾಂಗಗಳಲ್ಲಿ ಮೊದಲನೆಯದಾದ ಶಿಕ್ಷೆಯನ್ನು ಈ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸಿದೆ. ಅದರಲ್ಲಿ ಸಾಮಗಾನಕ್ಕೆ ಅಂಗವಾದ ಸ್ವರಗಳು, ಸಂಗೀತಸ್ವರಗಳು, ಅವುಗಳ ವ್ಯತ್ಯಾಸ, ಋಕ್ಕು, ಗಾಥೆಗಳ ಸ್ವರಗಳು, ಶರೀರವನ್ನು ವೀಣೆಯೆಂದು ಭಾವಿಸಿ ಬೆರಳುಗಳಲ್ಲಿ ಸ್ವರಸಂಯೋಜನೆಮಾಡುವ ರೀತಿ, ಅಧ್ಯಯನ ನಿಯಮ, ವಿದ್ಯಾರ್ಥಿಸಾಮಾನ್ಯರಿಗಿರಬೇಕಾದ ಗುಣಗಳು, ವಿದ್ಯಾವಿಘ್ನಕಾರಿಗಳು ಮುಂತಾದ ಬಹುವಿಷಯಗಳನ್ನು ವಿಶದಪಡಿಸಿದೆ.

# ಏಕಪಂಚಾಶತ್ತಮೋಽಧ್ಯಾಯಃ

ಅಥಾತಃ ಸಂಪ್ರವಕ್ಷ್ಯಾಮಿ ಕಲ್ಪಗ್ರಂಥಂ ಮುನೀಶ್ವರ ।
ಯಸ್ಯ ವಿಜ್ಞಾನಮಾತ್ರೇಣ ಸ್ಯಾತ್ಕರ್ಮಕುಶಲೋ ನರಃ ॥ ೧ ॥

ನಕ್ಷತ್ರಕಲ್ಪೋ ವೇದಾನಾಂ ಸಂಹಿತಾನಾಂ ತಥೈವ ಚ ।
ಚತುರ್ಥಃ ಸ್ಯಾದಂಗಿರಸಃ ಶಾಂತಿಕಲ್ಪಶ್ಚ ಪಂಚಮಃ ॥ ೨ ॥

ನಕ್ಷತ್ರಾಧೀಶ್ವರಾಖ್ಯಾತಂ ವಿಸ್ತರೇಣ ಯಥಾತಥಂ ।
ನಕ್ಷತ್ರಕಲ್ಪೇ ನಿರ್ದಿಷ್ಟಂ ಜ್ಞಾತವ್ಯಂ ತದಿಹಾಪಿ ಚ ॥ ೩ ॥

---

## ಐವತ್ತೊಂದನೆಯ ಅಧ್ಯಾಯವು

೧. ಮುನಿವರ್ಯನೇ! ಶಿಕ್ಷೆಯನ್ನು ನಿರೂಪಿಸಿದಮೇಲೆ ತಿಳಿಯ ಬೇಕಾದ ಕಲ್ಪಗ್ರಂಥವನ್ನು ಹೇಳುವೆನು. ಅದನ್ನು ತಿಳಿಯುವ ಮಾತ್ರದಿಂದ ಮನುಷ್ಯನು ಕರ್ಮಗಳಲ್ಲಿ ಕೌಶಲ್ಯವನ್ನು ಹೊಂದುವನು.

೨. ನಕ್ಷತ್ರಕಲ್ಪ, ವೇದಕಲ್ಪ ಮತ್ತು ಸಂಹಿತಾಕಲ್ಪವೆಂಬುದಾಗಿ ಮೂರು ಕಲ್ಪಗಳು, ನಾಲ್ಕನೆಯದು ಆಂಗೀರಸಕಲ್ಪ; ಐದನೆಯದು ಶಾಂತಿಕಲ್ಪ ಎಂದು ಕಲ್ಪವು ಐದುವಿಧವು.

೩. ನಕ್ಷತ್ರಗಳಿಗೊಡೆಯನಾದ ಚಂದ್ರನಿಂದ ವಿಸ್ತಾರವಾಗಿ ಹೇಳಲ್ಪಟ್ಟಿ ರುವುದನ್ನೇ ಸಂದರ್ಭೋಚಿತವಾಗಿ ಈ ನಕ್ಷತ್ರಕಲ್ಪದಲ್ಲಿ ಹೇಳಿದೆ. ಅದು ಅವಶ್ಯ ತಿಳಿಯಬೇಕಾದುದು.

ವೇದಕಲ್ಪೇ ವಿಧಾನಂ ತು ಋಗಾದೀನಾಂ ಮುನೀಶ್ವರ ।
ಧರ್ಮಾರ್ಥಕಾಮಮೋಕ್ಷಾಣಾಂ ಸಿದ್ಧ್ಯೈ ಪ್ರೋಕ್ತಂ ಸವಿಸ್ತರಂ ॥ ೪ ॥

ಮಂತ್ರಾಣಾಂ ಋಷಯಶ್ಚೈವ ಛಂದಾಂಸ್ಯಥ ಚ ದೇವತಾಃ ।
ನಿರ್ದಿಷ್ಟಾಃ ಸಂಹಿತಾಕಲ್ಪೇ ಮುನಿಭಿಸ್ತತ್ತ್ವದರ್ಶಿಭಿಃ ॥ ೫ ॥

ತಥೈವಾಂಗಿರಸೇ ಕಲ್ಪೇ ಷಟ್ಕರ್ಮಾಣಿ ಸವಿಸ್ತರಂ ।
ಅಭಿಚಾರವಿಧಾನೇನ ನಿರ್ದಿಷ್ಟಾನಿ ಸ್ವಯಂಭುವಾ ॥ ೬ ॥

ಶಾಂತಿಕಲ್ಪೇ ತು ದಿವ್ಯಾನಾಂ ಭೋಗಾನಾಂ ಮುನಿಸತ್ತಮ ।
ತಥಾಂತರಿಕ್ಷೋತ್ಪಾತಾನಾಂ ಶಾಂತಯೋ ಹ್ಯುದಿತಾಃ ಪೃಥಕ್ ॥ ೭ ॥

ಸಂಕ್ಷೇಪೇಣೈತದುದ್ದಿಷ್ಟಂ ಲಕ್ಷಣಂ ಕಲ್ಪಲಕ್ಷಣೇ ।
ವಿಶೇಷಃ ಪೃಥಗೇತೇಷಾಂ ಸ್ಥಿತಃ ಶಾಖಾಂತರೇಷು ಚ ॥ ೮ ॥

---

೪. ಮುನಿಶ್ರೇಷ್ಠನೇ! ವೇದಕಲ್ಪದಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನು ಸಾಧಿಸುವಂತಹ ಋಗಾದಿ ವೇದ ವಿಧಾನವು ವಿಸ್ತಾರವಾಗಿ ನಿರೂಪಿತವಾಗಿದೆ.

೫. ಸಂಹಿತಾಕಲ್ಪದಲ್ಲಿ ವೇದಮಂತ್ರಗಳಿಗೆ ಋಷಿ, ಛಂದಸ್ಸು, ದೇವತೆ ಇವುಗಳನ್ನು ತತ್ತ್ವಜ್ಞಾನಿಗಳಾದ ಮುನಿಗಳು ಹೇಳಿರುವರು.

೬. ಹಾಗೆಯೇ ಆಂಗೀರಸಕಲ್ಪದಲ್ಲಿ ಚತುರ್ಮುಖಬ್ರಹ್ಮನು ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹವೆಂಬ ಷಟ್ಕರ್ಮಗಳನ್ನು ಅಭಿಚಾರವಿಧಾನದಿಂದ ವಿಸ್ತಾರವಾಗಿ ನಿರೂಪಿಸಿರುವನು.

೭. ಮುನಿವರ್ಯನೇ! ಶಾಂತಿಕಲ್ಪದಲ್ಲಿ ದಿವ್ಯಭೋಗ ಮತ್ತು ಅಂತರಿಕ್ಷೋತ್ಪಾತ ಇವುಗಳಿಗೆ ಪ್ರತ್ಯೇಕವಾಗಿ ಶಾಂತಿಗಳು ಹೇಳಲ್ಪಟ್ಟವೆ.

೮. ಕಲ್ಪಲಕ್ಷಣದಲ್ಲಿ ಸಂಕ್ಷೇಪವಾಗಿ ಈ ಲಕ್ಷಣಗಳು ಹೇಳಲ್ಪಟ್ಟವೆ. ಶಾಖಾಂತರಗಳಲ್ಲಿ ಅದರ ಲಕ್ಷಣವಿಭಾಗಗಳು ಬೇರೆ ವಿಧವಾಗಿವೆ.

ಗೃಹ್ಯಕಲ್ಪಂ ತು ಸರ್ವೇಷಾಮುಪಯೋಗಿತಯಾsಧುನಾ ।
ವಕ್ಷ್ಯಾಮಿ ತೇ ದ್ವಿಜಶ್ರೇಷ್ಠ ಸಾವಧಾನತಯಾ ಶೃಣು ॥ ೯ ॥

ಓಂಕಾರಶ್ಚಾಥ ಶಬ್ದಶ್ಚ ದ್ವಾವೇತೌ ಬ್ರಹ್ಮಣಃ ಪುರಾ ।
ಕಂಠಂ ಭಿತ್ವಾ ವಿನಿರ್ಯಾತೌ ತಸ್ಮಾನ್ಮಾಂಗಲಿಕಾವಿಮೌ ॥ ೧೦ ॥

ಕೃತ್ವಾ ಪ್ರೋಕ್ತಾನಿ ಕರ್ಮಾಣಿ ತದೂರ್ಧ್ವಾನಿ ಕರೋತಿ ಯಃ ।
ಸೋsಥ ಶಬ್ದಂ ಪ್ರಯುಂಜೀತ ತದಾನಂತ್ಯಾರ್ಥಮಿಷ್ಯತೇ ॥ ೧೧ ॥

ಕುಶಾಃ ಪರಿಸಮೂಹಾಯ ಸಪ್ತ ಶಾಖಾಃ ಪ್ರಕೀರ್ತಿತಾಃ ।
ನ್ಯೂನಾಧಿಕಾ ನಿಷ್ಫಲಾಯ ಕರ್ಮಣೋsಭಿಮತಸ್ಯ ಚ ॥ ೧೨ ॥

ಕ್ರಿಮಿಕೀಟಪತಂಗಾದ್ಯಾ ಭ್ರಮಂತಿ ವಸುಧಾತಲೇ ।
ತೇಷಾಂ ಸಂರಕ್ಷಣಾರ್ಥಾಯ ಪ್ರೋಕ್ತಂ ಪರಿಸಮೂಹನಂ ॥ ೧೩ ॥

---

೯. ದ್ವಿಜೋತ್ತಮನೇ! ಸರ್ವರಿಗೂ ಉಪಯುಕ್ತವಾಗಿರುವುದರಿಂದ ಗೃಹ್ಯಕಲ್ಪವನ್ನು ಈಗ ಹೇಳುವೆನು; ಸಾವಧಾನವಾಗಿ ಕೇಳು.

೧೦. ಪೂರ್ವದಲ್ಲಿ ಓಂಕಾರ ಮತ್ತು 'ಅಥ' ಶಬ್ದ ಇವೆರಡೂ ಬ್ರಹ್ಮನ ಕಂಠವನ್ನು ಭೇದಿಸಿಕೊಂಡು ಮೊದಲು ಹೊರಗೆ ಬಂದುವು. ಆದುದರಿಂದ ಇವೆರಡು ಶಬ್ದಗಳೂ ಮಂಗಳಪ್ರದಗಳು.

೧೧. ಓಂಕಾರವನ್ನುಚ್ಚರಿಸಿ ಉತ್ತಮವಾದ ವಿಹಿತಕರ್ಮಗಳನ್ನು ಮಾಡುವವನು 'ಅಥ' ಶಬ್ದವನ್ನೂ ಪ್ರಯೋಗಿಸಬೇಕು. ಹಾಗೆ ಮಾಡಿದರೆ ಅಂತಹ ಕರ್ಮವು ಅನಂತಫಲಪ್ರದವಾಗುವುದು ಎಂದು ಜ್ಞಾನಿಗಳು ಒಪ್ಪಿರುತ್ತಾರೆ.

೧೨. ಪರಿಸಮೂಹನಕ್ಕಾಗಿ ಏಳು ದರ್ಭೆಗಳು ಶಾಖೆಗಳೆಂದು ಉಕ್ತವಾಗಿವೆ. ಅದಕ್ಕಿಂತ ಕಮ್ಮಿ ಅಥವಾ ಹೆಚ್ಚು ಆದರೆ ಇಷ್ಟವಾದ ಕರ್ಮವು ನಿಷ್ಫಲವಾಗುವುದು.

೧೩. ಭೂಮಂಡಲದಲ್ಲಿ ಕ್ರಿಮಿ, ಕೀಟ ಮತ್ತು ಪಕ್ಷಿ ಮುಂತಾದುವುಗಳು ತಿರುಗುತ್ತಿರುತ್ತವೆ. ಅವುಗಳ ದೆಸೆಯಿಂದ ಕಾಪಾಡುವುದಕ್ಕಾಗಿ ಪರಿಸಮೂಹನವು ವಿಧಿಸಲ್ಪಟ್ಟಿದೆ.

ರೇಖಾಃ ಪ್ರೋಕ್ತಾಶ್ಚ ಯಾಸ್ತಿಸ್ರಃ ಕರ್ತವ್ಯಾಸ್ತಾಸ್ಸಮಾ ದ್ವಿಜ ।
ನ್ಯೂನಾಧಿಕಾ ನ ಕರ್ತವ್ಯಾ ಇತ್ಯೇವ ಪರಿಭಾಷಿತಂ ॥ ೧೪ ॥

ಮೇದಿನೀ ಮೇದಸಾ ವ್ಯಾಪ್ತಾ ಮಧುಕೈಟಭದೈತ್ಯಯೋಃ ।
ಗೋಮಯೇನೋಪಲಿಪ್ಯೇಯಂ ತದರ್ಥಮಿತಿ ನಾರದ ॥ ೧೫ ॥

ವಂಧ್ಯಾ ದುಷ್ಟಾ ಚ ಹೀನಾಂಗೀ ಮೃತವತ್ಸಾ ಚ ಯಾ ಭವೇತ್ ।
ಯಜ್ಞಾರ್ಥಂ ಗೋಮಯಂ ತಸ್ಯಾ ನಾಹರೇದಿತಿ ಭಾವಿತಂ ॥ ೧೬ ॥

ಯೇ ಭ್ರಮಂತಿ ಸದಾಽಽಕಾಶೇ ಪತಂಗಾದ್ಯಾ ಭಯಂಕರಾಃ ।
ತೇಷಾಂ ಪ್ರಹರಣಾರ್ಥಾಯ ಮತಂ ಪ್ರೋದ್ಧರಣಂ ದ್ವಿಜ ॥ ೧೭ ॥

ಸ್ರುವೇಣ ಚ ಕುಶೇನಾಪಿ ಕುರ್ಯಾದುಲ್ಲೇಖನಂ ಭುವಃ ।
ಅಸ್ಥಿಕಂಟಕಶುದ್ಧ್ಯರ್ಥಂ ಬ್ರಹ್ಮಣಾ ಪರಿಭಾಷಿತಂ ॥ ೧೮ ॥

---

೧೪. ದ್ವಿಜನಾದ ನಾರದನೇ! ವಿಹಿತವಾದ ಮೂರು ರೇಖೆ (ಗೆರೆ) ಗಳನ್ನು ಸಮಾನವಾಗಿಯೇ ಮಾಡಬೇಕು. ಕಮ್ಮಿ ಹೆಚ್ಚಾಗಿ ಮಾಡಬಾರದು ಎಂಬುದಾಗಿ ವಿಧಿಸಲ್ಪಟ್ಟಿದೆ.

೧೫. ನಾರದನೇ! ಈ ಭೂಮಿಯು ಮಧು, ಕೈಟಭ ಎಂಬ ದೈತ್ಯರ ಕೊಬ್ಬಿನಿಂದ ವ್ಯಾಪಿಸಲ್ಪಟ್ಟಿದೆ. ಅದನ್ನು ಶುದ್ಧಿಮಾಡಲು ಈ ಭೂಮಿಯನ್ನು ಗೋಮಯ (ಸಗಣಿ) ದಿಂದ ಸಾರಿಸಬೇಕು.

೧೬. ಗೊಡ್ಡಿಯು (ಬಂಜೆ), ದೋಷಿಯು, ಅಂಗಹೀನ ಮತ್ತು ಕರು ಸತ್ತಿರುವುದು ಇಂತಹ ಗೋವಿನ ಗೋಮಯುವನ್ನು ಯಜ್ಞಕ್ಕಾಗಿ ತರಬಾರದು.

೧೭. ಯಾವಾಗಲೂ ಆಕಾಶದಲ್ಲಿ ತಿರುಗುತ್ತಿರುವ ಭಯಂಕರವಾದ ಪಕ್ಷಿ ಮುಂತಾದುವುಗಳ ಪ್ರಹರಣ (ಓಡಿಸುವುದು) ಕ್ಕೋಸ್ಕರ ಪ್ರೋದ್ಧರಣವು ವಿಹಿತವಾಗಿದೆ.

೧೮. ಮೂಳೆ ಮುಳ್ಳು ಮುಂತಾದುವುಗಳನ್ನು ತೆಗೆದು ಶುದ್ಧಿಮಾಡುವುದಕ್ಕಾಗಿ ಸ್ರುವದಿಂದ ಅಥವಾ ದರ್ಭೆಯಿಂದಲಾದರೂ ಭೂಮಿಯನ್ನು ಉಲ್ಲೇಖನೆಮಾಡಬೇಕೆಂದು ಬ್ರಹ್ಮನಿಂದ ಉಕ್ತವಾಗಿದೆ.

**ಆಪೋ ದೇವಗಣಾಃ ಸರ್ವೇ ತಥಾ ಪಿತೃಗಣಾ ದ್ವಿಜ ।**
**ತೇನಾದ್ಭಿರುಕ್ಷಣಂ ಪ್ರೋಕ್ತಂ ಮುನಿಭಿರ್ವಿಧಿಕೋವಿದೈಃ ॥ ೧೯ ॥**

**ಅಗ್ನೇರಾನಯನಂ ಪ್ರೋಕ್ತಂ ಸೌಭಾಗ್ಯಸ್ತ್ರೀಭಿರೇವ ಚ ।**
**ಶುಭದೇ ಮೃಣ್ಮಯೇ ಪಾತ್ರೇ ಪ್ರೋಕ್ಷ್ಯಾದ್ಭಿಸ್ತಂ ನಿಧಾಪಯೇತ್ ॥ ೨೦ ॥**

**ಅಮೃತಸ್ಯ ಕ್ಷಯಂ ದೃಷ್ಟ್ವಾ ಬ್ರಹ್ಮಾದ್ಯೈಃ ಸರ್ವದೇವತೈಃ ।**
**ವೇದ್ಯಾಂ ನಿಧಾಪಿತಸ್ತಸ್ಮಾತ್ಸಮಿದ್ಗರ್ಭೋ ಹುತಾಶನಃ ॥ ೨೧ ॥**

**ದಕ್ಷಿಣಸ್ಯಾಂ ದಾನವಾದ್ಯಾಃ ಸ್ಥಿತಾ ಯಜ್ಞಸ್ಯ ನಾರದ ।**
**ತೇಭ್ಯಃ ಸಂರಕ್ಷಣಾರ್ಥಾಯ ಬ್ರಹ್ಮಾಣಂ ತದ್ದಿಶಿ ನ್ಯಸೇತ್ ॥ ೨೨ ॥**

**ಉತ್ತರೇ ಸರ್ವಪಾತ್ರಾಣಿ ಪ್ರಣೀತಾದ್ಯಾನಿ ಪಶ್ಚಿಮೇ ।**
**ಯಜಮಾನಃ ಪೂರ್ವತಃ ಸ್ಯುರ್ದ್ವಿಜಾಃ ಸರ್ವೇಽಪಿ ನಾರದ ॥ ೨೩ ॥**

---

೧೯. ದ್ವಿಜನಾದ ನಾರದನೇ! ನೀರಿನಲ್ಲಿ ಸಮಸ್ತ ದೇವತೆಗಳು ಮತ್ತು ಪಿತೃವರ್ಗಗಳೂ ಸಹ ಸನ್ನಿಹಿತವಾಗಿವೆಯಾದಕಾರಣ ವಿಧಿಜ್ಞಾನಿಗಳಾದ ಮುನಿಗಳು ನೀರಿನಿಂದ ಪ್ರೋಕ್ಷಣೆಯನ್ನು ವಿಧಿಸಿರುವರು.

೨೦. ಮಂಗಳಕರವಾದ ಮಣ್ಣಿನ ಪಾತ್ರೆಯಲ್ಲಿ ಮುತ್ತೈದೆಯರಿಂದ ಅಗ್ನಿಯನ್ನು ತರಿಸಬೇಕೆಂದು ವಿಹಿತವಾಗಿದೆ. ಅಗ್ನಿಯನ್ನು ಅವರು ತಂದ ಮೇಲೆ ಅದನ್ನು ನೀರಿನಿಂದ ಪ್ರೋಕ್ಷಿಸಿ ಹೋಮಸ್ಥಾನದಲ್ಲಿಡಬೇಕು.

೨೧. ಬ್ರಹ್ಮಾದಿ ಸಕಲ ದೇವತೆಗಳೂ ಅಮೃತವು ಕ್ಷೀಣವಾಗುತ್ತಿದ್ದುದನ್ನು ನೋಡಿ ಅದಕ್ಕಾಗಿ ವೇದಿಕೆಯಲ್ಲಿ ಸಮಿತ್ತನ್ನೊಳಗೊಂಡ ಬೆಂಕಿಯನ್ನು ಸ್ಥಾಪಿಸಿದರು.

೨೨. ನಾರದನೇ! ಯಜ್ಞಕುಂಡದ ದಕ್ಷಿಣಭಾಗದಲ್ಲಿ ದಾನವ ಮುಂತಾದವರು ಇರುತ್ತಾರೆ. ಅವರ ದೆಸೆಯಿಂದ ಕಾಪಾಡುವುದಕ್ಕಾಗಿ ಆ ದಿಕ್ಕಿನಲ್ಲಿ ಬ್ರಹ್ಮನನ್ನು ಸ್ಥಾಪಿಸಬೇಕು.

೨೩. ಪ್ರಣೀತಾ ಮುಂತಾದ ಸಕಲ ಪಾತ್ರೆಗಳೂ ಉತ್ತರದಿಕ್ಕಿನಲ್ಲಿಯೂ, ಪಶ್ಚಿಮದಲ್ಲಿ ಯಜಮಾನನೂ, ಪೂರ್ವದಿಕ್ಕಿನಲ್ಲಿ ಸಕಲ ದ್ವಿಜರೂ ಸಹ ಇರಬೇಕು.

ದ್ಯೂತೇ ಚ ವ್ಯವಹಾರೇ ಚ ಯಜ್ಞಕರ್ಮಣಿ ಚೋದ್ಭವೇತ್ ।
ಕರ್ತೋದಾಸೀನಚಿತ್ತಸ್ತತ್ಕರ್ಮ ನಶ್ಯೇದಿತಿ ಸ್ಥಿತಿಃ ॥ ೨೪ ॥

ಬ್ರಹ್ಮಾಚಾರ್ಯೌ ಸ್ವಶಾಖೌ ಹಿ ಕರ್ತವ್ಯೌ ಯಜ್ಞಕರ್ಮಣಿ ।
ಋತ್ವಿಜಾಂ ನಿಯಮೋ ನಾಸ್ತಿ ಯಥಾ ಲಾಭಂ ಸಮರ್ಚಯೇತ್ ॥ ೨೫ ॥

ದ್ವೇ ಪವಿತ್ರೇ ಹ್ಯಂಗುಲೇ ಸ್ತಃ ಪ್ರೋಕ್ಷಣೀ ಚತುರಂಗುಲಾ ।
ಆಜ್ಯಸ್ಥಾಲೀ ತ್ರ್ಯಂಗುಲಾಽಥ ಚರುಸ್ಥಾಲೀ ಷಡಂಗುಲಾ ॥ ೨೬ ॥

ದ್ವ್ಯಂಗುಲಂ ತೂಪಯಮಮೇಕಂ ಸಂಮಾರ್ಜನಾಂಗುಲಂ ।
ಸ್ರುವಂ ಷಡಂಗುಲಂ ಪ್ರೋಕ್ತಂ ಸ್ರುಚಂ ಸಾರ್ಧತ್ರಯಾಂಗುಲಂ ॥ ೨೭ ॥

ಪ್ರಾದೇಶಮಾತ್ರಾ ಸಮಿಧಃ ಪೂರ್ಣಪಾತ್ರಂ ಷಡಂಗುಲಂ ।
ಪ್ರೋಕ್ಷಣ್ಯಾ ಉತ್ತರೇ ಭಾಗೇ ಪ್ರಣೀತಾಮಷ್ಟಮುಷ್ಟಿಭಿಃ ॥ ೨೮ ॥

---

೨೪. ಜೂಜಾಡುವುದು, ವ್ಯವಹಾರ ಮತ್ತು ಯಜ್ಞಕರ್ಮ ಇವುಗಳಲ್ಲಿ ಕರ್ತೃವು ಉದಾಸೀನಚಿತ್ತನಾದರೆ ಅಂತಹ ಕರ್ಮವು ನಷ್ಟವಾಗುವುದು.

೨೫. ಯಜ್ಞಕರ್ಮದಲ್ಲಿ ಬ್ರಹ್ಮ ಮತ್ತು ಆಚಾರ್ಯರು ಇವರನ್ನು ಸ್ವಶಾಖೆಯವರನ್ನೇ ಆರಿಸಬೇಕು. ಋತ್ವಿಕ್ಕುಗಳಿಗೆ ಆ ನಿಯಮವಿಲ್ಲ. ದೊರಕಿದಂತೆ ಅವರನ್ನು ಸತ್ಕರಿಸಬೇಕು.

೨೬. ಎರಡು ಪವಿತ್ರಗಳೂ ಅಂಗುಲದ್ವಯಪರಿಮಿತವಾಗಿಯೂ, ಪ್ರೋಕ್ಷಣಪಾತ್ರೆಯು ನಾಲ್ಕು ಅಂಗುಲ ಪರಿಮಿತವೂ, ತುಪ್ಪದ ಪಾತ್ರೆಯು ಮೂರಂಗುಲವೂ, ಹೋಮಚರುಮಾಡುವ ಪಾತ್ರೆಯು ಆರು ಅಂಗುಲ ಪರಿಮಿತಿಯುಳ್ಳದಾಗಿಯೂ ಇರಬೇಕು.

೨೭–೨೮. ಎರಡು ಅಂಗುಲಗಳುಳ್ಳ ದರ್ಭೆಯಿಂದ ರಚಿಸಿದ ಉಪಯಮವೆಂಬ ಸಾಧನವು, ಒಂದು ಅಂಗುಲದ ದರ್ಭೆಯ ಸಂಮಾರ್ಜನವು, ಆರು ಅಂಗುಲದ ಸ್ರುವವೂ, ಮೂರುವರೆ ಅಂಗುಲವುಳ್ಳ ಸ್ರುಕ್ಕೂ, ಚೋಟುದ್ದ ಸಮಿತ್ತುಗಳೂ, ಆರಂಗುಲದ ಪೂರ್ಣಪಾತ್ರೆಯೂ, ಉತ್ತರಭಾಗದಲ್ಲಿ ಎಂಟು ಮುಷ್ಟಿಗಳಿರುವ ಪ್ರಣೀತಾ ಎಂಬ ಪಾತ್ರೆಯೂ ಸ್ಥಾಪಿಸಲ್ಪಡಬೇಕು.

ಯಾನಿ ಕಾನಿ ಚ ತೀರ್ಥಾನಿ ಸಮುದ್ರಾಸ್ಸರಿತಸ್ತಥಾ ।
ಪ್ರಣೀತಾಯಾಂ ಸಮಾಸನ್ನಾಸ್ತಸ್ಮಾತ್ತಾಂ ಪೂರಯೇಜ್ಜಲೈಃ ॥ ೨೯ ॥

ವೇದಿಕಾ ವಸ್ತ್ರಹೀನಾ ಚ ನಗ್ನಾ ಸಂಪ್ರೋಚ್ಯತೇ ದ್ವಿಜ ।
ಪರಿಸ್ತೀರ್ಯ ತತೋ ದರ್ಭೈಃ ಪರಿದಧ್ಯಾದಿಮಾಂ ಬುಧಃ ॥ ೩೦ ॥

ಇಂದ್ರವಜ್ರಂ ವಿಷ್ಣುಚಕ್ರಂ ವಾಮದೇವತ್ರಿಶೂಲಕಂ ।
ದರ್ಭರೂಪತಯಾ ತ್ರೀಣಿ ಪವಿತ್ರಚ್ಛೇದನಾನಿ ಚ ॥ ೩೧ ॥

ಪ್ರೋಕ್ಷಣೀ ಚ ಪ್ರಕರ್ತವ್ಯಾ ಪ್ರಣೀತೋದಕಸಂಯುತಾ ।
ತೇನಾತಿಪುಣ್ಯದಂ ಕರ್ಮ ಪವಿತ್ರಮಿತಿ ಕೀರ್ತಿತಂ ॥ ೩೨ ॥

ಆಜ್ಯಸ್ಥಾಲೀ ಪ್ರಕರ್ತವ್ಯಾ ಪಲಮಾತ್ರಪ್ರಮಾಣಿಕಾ ।
ಕುಲಾಲಚಕ್ರಘಟಿತಂ ಆಸುರಂ ಮೃಣ್ಮಯಂ ಸ್ಮೃತಂ ॥ ೩೩ ॥

---

೨೯. ಎಲ್ಲಾ ತೀರ್ಥಗಳು, ಸಮುದ್ರ, ನದಿಗಳೂ ಸಹ ಪ್ರಣೀತಾಪಾತ್ರೆಯಲ್ಲಿ ಸನ್ನಿಹಿತವಾಗಿರುವುದರಿಂದ ಅದರಲ್ಲಿ ನೀರನ್ನು ತುಂಬಿಸಬೇಕು.

೩೦. ದ್ವಿಜನಾದ ನಾರದನೇ! ವಸ್ತ್ರವಿಲ್ಲದ ವೇದಿಕೆಯು ನಗ್ನವೆಂದು ಉಕ್ತವಾಗಿದೆ; ಅದು ನಿಷಿದ್ಧವು. ಆದುದರಿಂದ ಈ ವೇದಿಕೆಯಲ್ಲಿ ದರ್ಭೆಯನ್ನು ಹರಡಿ ದರ್ಭೆಗಳ ಪರಿಸ್ತರಣಗಳನ್ನು ಸುತ್ತಲೂ ಇಡಬೇಕು.

೩೧. ಇಂದ್ರನ ವಜ್ರಾಯುಧ, ವಿಷ್ಣುವಿನ ಚಕ್ರಾಯುಧ, ಈಶ್ವರನ ತ್ರಿಶೂಲ, ಈ ಮೂರೂ ದರ್ಭೆಯ ರೂಪದಿಂದ ಪವಿತ್ರಚ್ಛೇದನೆಗಳಾಗುವುವು.

೩೨. ಪ್ರೋಕ್ಷಣಿ ಮತ್ತು ಪ್ರಣೀತಾ ಎಂಬ ಪಾತ್ರೆಗಳಲ್ಲಿ ನೀರು ತುಂಬಿರಬೇಕು. ಅದರಿಂದ ಕರ್ಮವು ಪುಣ್ಯಪ್ರದವಾಗಿ ಪವಿತ್ರವಾಗುವುದೆಂದು ಉಕ್ತವಾಗಿದೆ.

೩೩. ಪಲಪರಿಮಾಣವುಳ್ಳ ಘೃತಪಾತ್ರೆಯನ್ನು ರಚಿಸಬೇಕು. ಕುಂಬಾರನು ಚಕ್ರದಿಂದ ಮಾಡಿದ ಮಣ್ಣಿನ ಪಾತ್ರೆಯು ಆಸುರವೆಂದು ಸ್ಮೃತ್ಯುಕ್ತವಾಗಿದೆ.

ತದೇವ ಹಸ್ತಘಟಿತಂ ಸ್ಥಾಲ್ಯಾದಿ ದೈವಿಕಂ ಭವೇತ್ ।
ಸ್ರುವಂ ಚ ಸರ್ವಕರ್ಮಾಣಿ ಶುಭಾನ್ಯಪ್ಯಶುಭಾನಿ ಚ ॥ ೩೪ ॥

ತಸ್ಯ ಚೈವ ಪವಿತ್ರಾರ್ಥಂ ವಹ್ನೌ ತಾಪನಮೀರಿತಂ ।
ಅಗ್ರೇ ಧೃತೇನ ವೈಧವ್ಯಂ ಮಧ್ಯೇ ಚೈವ ಪ್ರಜಾಕ್ಷಯಃ ॥ ೩೫ ॥

ಮೂಲೇ ಚ ಮ್ರಿಯತೇ ಹೋತಾ ತಸ್ಮಾದ್ಧಾರ್ಯಂ ವಿಚಾರ್ಯ ತತ್ ।
ಅಗ್ನಿಃ ಸೂರ್ಯಶ್ಚ ಸೋಮಶ್ಚ ವಿರಿಂಚಿರನಿಲೋ ಯಮಃ ॥ ೩೬ ॥

ಸ್ರುವೇ ಷಡೇತೇ ದೇವಾಸ್ತು ಪ್ರತ್ಯಂಗುಲಮುಪಾಶ್ರಿತಾಃ ।
ಅಗ್ನಿರ್ಭೋಗಾರ್ಥನಾಶಾಯ ಸೂರ್ಯೋ ವ್ಯಾಧಿಕರೋ ಭವೇತ್ ॥ ೩೭ ॥

ನಿಷ್ಫಲಸ್ತು ಸ್ಮೃತಃ ಸೋಮೋ ವಿರಿಂಚಿಃ ಸರ್ವಕಾಮದಃ ।
ಅನಿಲೋ ವೃದ್ಧಿದಃ ಪ್ರೋಕ್ತೋ ಯಮೋ ಮೃತ್ಯುಪ್ರದೋ ಮತಃ ॥ ೩೮ ॥

---

೩೪. ಅದೇ ಮಣ್ಣಿನಪಾತ್ರೆಯನ್ನು ಹಸ್ತದಿಂದಲೇ ಮಾಡಿದರೆ ಅದು ದೈವಿಕವೆನಿಸುವುದು. ಶುಭ ಅಥವಾ ಅಶುಭಗಳಾದ ಸಕಲ ಕರ್ಮಗಳಲ್ಲಿಯೂ ಸ್ರುವವು ಆವಶ್ಯಕವು.

೩೫-೩೬. ಅಂತಹ ಸ್ರುವವು ಪರಿಶುದ್ಧವಾಗುವುದಕ್ಕಾಗಿ ಅದನ್ನು ಬೆಂಕಿಯಲ್ಲಿ ಕಾಯಿಸಬೇಕೆಂದು ಹೇಳಿದೆ. ಅದನ್ನು ಕೊನೆಯಲ್ಲಿ ಹಿಡಿದು ಕೊಂಡರೆ ವೈಧವ್ಯವೂ, ಮಧ್ಯದಲ್ಲಿ ಧರಿಸಿದರೆ ಮಕ್ಕಳಿಗೆ ಹಾನಿಯೂ, ಬುಡ ದಲ್ಲಿ ಧರಿಸಿದರೆ ಹೋತೃವಿಗೆ ಮರಣವೂ ಉಂಟಾಗುವುದು. ಆದುದರಿಂದ ವಿಮರ್ಶೆಮಾಡಿ ಅದನ್ನು ವಿಹಿತಸ್ಥಾನದಲ್ಲಿ ಹಿಡಿದುಕೊಳ್ಳಬೇಕು.

೩೬-೩೭. ಅಗ್ನಿ, ಸೂರ್ಯ, ಸೋಮ, ಚತುರ್ಮುಖಬ್ರಹ್ಮ, ವಾಯು ಮತ್ತು ಯಮ ಈ ಆರು ದೇವತೆಗಳು ಸ್ರುವದ ಪ್ರತಿಯೊಂದಂಗುಲದಲ್ಲಿಯೂ ಸನ್ನಿಹಿತರಾಗಿರುವರು. ಅಗ್ನಿಯು ಭೋಗಾರ್ಥಗಳನ್ನು ನಾಶಮಾಡುವನು. ಸೂರ್ಯನು ರೋಗಕಾರಿಯಾಗುವನು.

೩೮. ಸೋಮನನ್ನು ಸ್ಮರಿಸುವುದು ನಿಷ್ಫಲವು. ಚತುರ್ಮುಖನು ಸಕಲೇಷ್ಟಾರ್ಥಪ್ರದನು. ವಾಯುವು ವೃದ್ಧಿಪ್ರದನು. ಯಮನು ಮರಣಕಾರಿ ಯೆಂದು ಉಕ್ತವಾಗಿದೆ.

ಸಂಮಾರ್ಜನೋಪಯಮನಂ ಕರ್ತವ್ಯಂ ಚ ಕುಶದ್ವಯಂ ।
ಪೂರ್ವಂ ತು ಸರ್ವಶಾಖಂ ಸ್ಯಾತ್ಪಂಚಶಾಖಂ ತಥಾಽಪರಂ ॥ ೩೯ ॥

ಶ್ರೀಪರ್ಣೀ ಚ ಶಮೀ ತದ್ವದ್ಬದರಶ್ಚ ವಿಕಂಕಿನಃ ।
ಪಲಾಶಶ್ಚೈವ ವಿಜ್ಞೇಯಾ ಸ್ರುವೇ ಚೈವ ತಥಾ ಸ್ರುಚಿ ॥ ೪೦ ॥

ಹಸ್ತೋನ್ಮಿತಂ ಸ್ರುವಂ ಶಸ್ತಂ ತ್ರಿದಶಾಂಗುಲಿಕಂ ಸ್ರುಚಂ ।
ವಿಪ್ರಾಣಾಂ ಚೈತದಾಖ್ಯಾತಂ ಹ್ಯನ್ಯೇಷಾಮಂಗುಲೋನಕಂ ॥ ೪೧ ॥

ಶೂದ್ರಾಣಾಂ ಪತಿತಾನಾಂ ಚ ಖರಾದೀನಾಂ ಚ ನಾರದ ।
ದೃಷ್ಟಿದೋಷವಿನಾಶಾರ್ಥಂ ಪಾತ್ರಾಣಾಂ ಪ್ರೋಕ್ಷಣಂ ಸ್ಮೃತಂ ॥ ೪೨ ॥

ಅಕೃತೇ ಪೂರ್ಣಪಾತ್ರೇ ತು ಯಜ್ಞಚ್ಛಿದ್ರಂ ಸಮುದ್ಭವೇತ್ ।
ತಸ್ಮಿನ್ಪೂರ್ಣೇಕೃತೇ ವಿಪ್ರ ಯಜ್ಞಸಂಪೂರ್ಣತಾ ಭವೇತ್ ॥ ೪೩ ॥

---

೩೯. ಎರಡು ದರ್ಭೆಗಳನ್ನು ಸಂಮಾರ್ಜನ ಮತ್ತು ಉಪಯಮ ಎಂಬ ಸಾಧನಗಳನ್ನಾಗಿ ಮಾಡಿಕೊಳ್ಳಬೇಕು. ಸಂಮಾರ್ಜನೆಯು ಸರ್ವ ಶಾಖೆಗಳಿಗೂ ಅನ್ವಯಿಸುವುದು. ಉಪಯಮನವು ಪಂಚಶಾಖೆಗಳಿಗೆ ಮಾತ್ರ ಸಂಬಂಧಿಸುತ್ತದೆ.

೪೦. ಶ್ರೀಪರ್ಣ, ಬನ್ನಿಯ ಎಲೆ. ಬೋರೆಯ ಎಲೆ, ವಿಕಂಕಿ ಪತ್ರ, ಮುತ್ತಗದ ಎಲೆ ಇವುಗಳಿಂದ ಸ್ರುವ ಮತ್ತು ಸ್ರುಕ್ ಎಂಬ ಹೋಮಸಾಧನ ಪಾತ್ರೆಗಳನ್ನು ಮಾಡಬೇಕು.

೪೧. ಕೈಯಷ್ಟು ಪರಿಮಾಣವುಳ್ಳ ಸ್ರುವವೂ, ಹದಿಮೂರು ಅಂಗುಲದ ಸ್ರುಕ್ಕೂ ಬ್ರಾಹ್ಮಣರಿಗೆ ಪ್ರಶಸ್ತವೆಂತಲೂ, ಇತರ ದ್ವಿಜರಿಗೆ ಒಂದು ಅಂಗುಲ ಕಮ್ಮಿಯಾಗಿರುವುದು ಪ್ರಶಸ್ತವೆಂತಲೂ ಉಕ್ತವಾಗಿದೆ.

೪೨. ಶೂದ್ರರು, ಪತಿತರು, ಕತ್ತೆ ಮುಂತಾದುವು ಹೋಮಪಾತ್ರೆ ಮುಂತಾದುವುಗಳನ್ನು ನೋಡಬಾರದು. ಅಂತಹವರ ದೃಷ್ಟಿದೋಷವನ್ನು ಪರಿಹರಿಸುವುದಕ್ಕಾಗಿ ಪಾತ್ರೆಗಳಿಗೆ ಪ್ರೋಕ್ಷಣೆಯನ್ನು ಮಾಡಬೇಕು.

೪೩. ಪೂರ್ಣಪಾತ್ರೆಯನ್ನು ಸ್ಥಾಪನೆ ಮಾಡದಿದ್ದರೆ ಯಜ್ಞವು ಛಿನ್ನವಾಗುವುದು. ಅದನ್ನು ಸ್ಥಾಪನೆ ಮಾಡಿದರೆ ಯಜ್ಞವು ಸಂಪೂರ್ಣವಾಗುವುದು.

ಅಷ್ಟಮುಷ್ಟಿರ್ಭವೇತ್ಕಿಂಚಿತ್ಪುಷ್ಕಲಂ ತಚ್ಚತುಷ್ಟಯಂ ।
ಪುಷ್ಕಲಾನಿ ತು ಚತ್ವಾರಿ ಪೂರ್ಣಪಾತ್ರಂ ವಿದುರ್ಬುಧಾಃ ॥ ೪೪ ॥

ಹೋಮಕಾಲೇ ತು ಸಂಪ್ರಾಪ್ತೇ ನ ದದ್ಯಾದಾಸನಂ ಕ್ವಚಿತ್ ।
ದತ್ತೇ ತೃಪ್ತೋ ಭವೇದ್ವಹ್ನಿಃ ಶಾಪಂ ದದ್ಯಾಚ್ಚ ದಾರುಣಂ ॥ ೪೫ ॥

ಆಘಾರಾ ನಾಸಿಕೇ ಪ್ರೋಕ್ತಾ ಆಜ್ಯಭಾಗೌ ಚ ಚಕ್ಷುಷೀ ।
ಪ್ರಾಜಾಪತ್ಯಂ ಮುಖಂ ಪ್ರೋಕ್ತಂ ಕಟಿರ್ವ್ಯಾಹೃತಿಭಿಃ ಸ್ಮೃತಾಃ ॥ ೪೬ ॥

ಶೀರ್ಷಹಸ್ತೌ ಚ ಪಾದೌ ಚ ಪಂಚವಾರುಣಮೀರಿತಂ ।
ತಥಾಸ್ವಿಷ್ಟಕೃತಂ ವಿಪ್ರ ಶ್ರೋತ್ರೇ ಪೂರ್ಣಾಹುತಿಸ್ತಥಾ ॥ ೪೭ ॥

ದ್ವಿಮುಖಂ ಚೈಕಹೃದಯಂ ಚತುಃ ಶ್ರೋತ್ರಂ ದ್ವಿನಾಸಿಕಂ ।
ದ್ವಿಶೀರ್ಷಕಂ ಚ ಷಣ್ಣೇತ್ರಂ ಪಿಂಗಲಂ ಸಪ್ತಜಿಹ್ವಕಂ ॥ ೪೮ ॥

---

೪೪. ಎಂಟುಮುಷ್ಟಿ ಪರಿಮಾಣವುಳ್ಳುದು ಪುಷ್ಕಲವು. ಅಂತಹ ನಾಲ್ಕು ಪುಷ್ಕಲಗಳನ್ನು ರಚಿಸಬೇಕು. ಜ್ಞಾನಿಗಳು ಆ ನಾಲ್ಕು ಪುಷ್ಕಲಗಳನ್ನೂ ಪೂರ್ಣಪಾತ್ರೆಯೆಂದು ತಿಳಿದಿರುವರು.

೪೫. ಹೋಮಮಾಡುವ ಸಮಯದಲ್ಲಿ ಯಾರಿಗೂ ಆಸನವನ್ನು ಕೊಡಬಾರದು. ಆಸನಕೊಟ್ಟರೆ ಅದರಿಂದಲೇ ತೃಪ್ತನಾಗಿ ಅಗ್ನಿಯು ಕಠಿಣ ವಾದ ಶಾಪವನ್ನು ಕೊಡುವನು.

೪೬. ನಾಸಿಕೆಗಳೇ ಆಘಾರದೇವತೆಗಳು, ಕಣ್ಣುಗಳೇ ಆಜ್ಯಭಾಗ, ಮುಖವು ಪ್ರಜಾಪತಿ ದೇವತಾಕವು. ವ್ಯಾಹೃತಿದೇವತೆಗಳೇ ಕಟಿ (ನಡು) ಯು ಎಂದು ಉಕ್ತವಾಗಿದೆ.

೪೭. ಶಿರಸ್ಸು, ಎರಡು ಕೈಗಳು ಮತ್ತು ಕಾಲುಗಳು ಒಟ್ಟು ಐದು ಮತ್ತು ಸ್ವಿಷ್ಟಿಕೃತ ಇವುಗಳು ವರುಣದೇವತಾಕಗಳು. ಶ್ರೋತ್ರ (ಕಿವಿಯೇ) ವೇ ಪೂರ್ಣಾಹುತಿಯು.

೪೮. ಅಗ್ನಿಯ ಶರೀರವು ಎರಡುಮುಖ, ಒಂದು ಹೃದಯ, ನಾಲ್ಕು ಕಿವಿ, ಎರಡು ಮೂಗು, ಎರಡು ತಲೆ, ಪಿಂಗಲವರ್ಣದ ಆರು ಕಣ್ಣುಗಳು, ಏಳು ನಾಲಗೆಗಳು ಇವುಗಳನ್ನೊಳಗೊಂಡಿರುವುದು.

ಸವ್ಯಭಾಗೇ ತ್ರಿಹಸ್ತಂ ಚ ಚತುರ್ಹಸ್ತಂ ಚ ದಕ್ಷಿಣೇ ।
ಸ್ರುಕ್ ಸ್ರುವೌ ಚಾಕ್ಷಮಾಲಾ ಚ ಯಾ ಶಕ್ತಿರ್ದಕ್ಷಿಣೇ ಕರೇ ॥ ೪೯ ॥

ತ್ರಿಮೇಖಲಂ ತ್ರಿಪಾದಂ ಚ ಘೃತಪಾತ್ರಂ ದ್ವಿಚಾಮರಂ ।
ಮೇಷಾರೂಢಂ ಚತುಃಶೃಂಗಂ ಬಾಲಾದಿತ್ಯಸಮಪ್ರಭಂ ॥ ೫೦ ॥

ಉಪವೀತಸಮಾಯುಕ್ತಂ ಜಟಾಕುಂಡಲಮಂಡಿತಂ ।
ಜ್ಞಾತ್ವೈವಮಗ್ನಿದೇಹಂ ತು ಹೋಮಕರ್ಮ ಸಮಾಚರೇತ್ ॥ ೫೧ ॥

ಪಯೋ ದಧಿ ಘೃತಂ ಚೈವ ಸ್ನೇಹಪಕ್ವಂ ತಥೈವ ಚ ।
ಜುಹುಯಾದ್ಯಸ್ತು ಹಸ್ತೇನ ನ ವಿಪ್ರೋ ಬ್ರಹ್ಮಹಾ ಭವೇತ್ ॥ ೫೨ ॥

ಯದನ್ನಂ ಪುರುಷೋಽಶ್ನಾತಿ ತದನ್ನಂ ತಸ್ಯ ದೇವತಾಃ ।
ಸರ್ವಕಾಮಸಮೃದ್ಧ್ಯರ್ಥಂ ತಿಲಾಧಿಕ್ಯಂ ಹವಿರ್ಮತಂ ॥ ೫೩ ॥

---

೪೯. ಮತ್ತು ಅಗ್ನಿಯ ದೇಹದಲ್ಲಿ ಎಡಗಡೆ ಮೂರು ಕೈಗಳೂ ಬಲಗಡೆ ನಾಲ್ಕು ಕೈಗಳೂ, ಆ ಬಲಗೈಗಳಲ್ಲಿ ಸ್ರುಕ್, ಸ್ರುವ, ಜಪಮಾಲಿಕೆ, ಶಕ್ತಿ ಇವುಗಳೂ ಇವೆ.

೫೦-೫೧. ಮೂರು ಮೇಖಲೆಗಳು, (ಉಡುದಾರ) ಮೂರುಪಾದ, ಆಜ್ಯಪಾತ್ರೆ, ಎರಡು ಚಾಮರ, ನಾಲ್ಕು ಕೊಂಬುಗಳು, ಬಾಲಸೂರ್ಯನಿಗೆ ಸಮಾನವಾದ ತೇಜಸ್ಸು ಇವುಗಳುಳ್ಳ, ಮೇಷಾರೂಢನಾಗಿರುವ, ಯಜ್ಞೋಪವೀತವನ್ನು ಧರಿಸಿರುವ, ಜಟೆ ಕರ್ಣಕುಂಡಲ ಇವುಗಳಿಂದಲಂಕೃತವಾದ ಅಗ್ನಿದೇಹಸ್ವರೂಪವನ್ನು ತಿಳಿದು ಹೋಮಕರ್ಮವನ್ನಾಚರಿಸಬೇಕು.

೫೨. ಹಾಲು, ತುಪ್ಪ, ಮೊಸರು ಮತ್ತು ಅದರಲ್ಲಿ ಕರೆದ ಭಕ್ಷ್ಯಗಳು ಇವುಗಳನ್ನು ಕೈಯಿಂದ ಹೋಮಮಾಡುವ ಬ್ರಾಹ್ಮಣನು ಬ್ರಹ್ಮಹತ್ಯೆಗೆ ಭಾಗಿಯಾಗುವನು.

೫೩. ಪುರುಷನು ತಿನ್ನುವ ಅನ್ನವೇ ಅವನ ದೇವತೆಯು. ಹೆಚ್ಚಾಗಿ ಎಳ್ಳನ್ನು ಮಿಶ್ರಮಾಡಿದುದು ಸಕಲ ಇಷ್ಟಾರ್ಥಗಳಿಗೆ ಸಾಧಕವಾದ ಹವಿಸ್ಸೆಂದು ಜ್ಞಾನಿಗಳ ಮತವು.

**ಹೋಮೇ ಮುದ್ರಾತ್ರಯಂ ಪ್ರೋಕ್ತಂ ಮೃಗೀ ಹಂಸೀ ಚ ಸೂಕರೀ ।**
**ಅಭಿಚಾರೇ ಸೂಕರೀ ಸ್ಯಾನ್ಮೃಗೀ ಹಂಸೀ ಶುಭಾತ್ಮಕಂ ॥ ೫೪ ॥**

**ಸರ್ವಾಂಗುಲೀಭಿಃ ಕ್ರೌಡೀ ಸ್ಯಾದ್ಧಂಸೀ ಮುಕ್ತಕನಿಷ್ಠಿಕಾ ।**
**ಮಧ್ಯಮಾನಾಮಿಕಾಂಗುಷ್ಠೈರ್ಮೃಗೀ ಮುದ್ರಾ ಪ್ರಕೀರ್ತಿತಾ ॥ ೫೫ ॥**

**ಪೂರ್ವಪ್ರಮಾಣಯಾಽಽಹುತ್ಯಾ ಪಂಚಾಂಗುಲಿಗೃಹೀತಯಾ ।**
**ದಧಿ ಮಧ್ವಾಜ್ಯಸಂಯುಕ್ತಂ ಋತ್ವಿಗ್ಭಿರ್ಜುಹುಯಾತ್ತಿಲೈಃ ॥ ೫೬ ॥**

**ಕುಶಾಸ್ತ್ವನಾಮಿಕಾಸಕ್ತಾಃ ಕಾರ್ಯಾಃ ಸ್ಯುಃ ಪುಣ್ಯಕರ್ಮಣಿ ॥ ೫೭ ॥**

**ವಿನಾಯಕಃ ಕರ್ಮವಿಘ್ನಸಿದ್ಧ್ಯರ್ಥಂ ವಿನಿಯೋಜಿತಃ ।**
**ಗಣಾನಾಮಾಧಿಪತ್ಯೇ ಚ ರುದ್ರೇಣ ಬ್ರಹ್ಮಣಾ ತಥಾ ॥ ೫೮ ॥**

---

೫೪. ಹೋಮಮಾಡುವ ಕಾಲದಲ್ಲಿ ಮೃಗೀ, ಹಂಸೀ, ಸೂಕರೀ ಎಂಬುದಾಗಿ ಮೂರು ಮುದ್ರೆಗಳು ಉಕ್ತವಾಗಿವೆ. ಅಭಿಚಾರ ಪ್ರಯೋಗದಲ್ಲಿ ಸೂಕರೀ ಮುದ್ರೆಯನ್ನೂ, ಮೃಗೀ ಹಂಸೀ ಮುದ್ರೆಗಳನ್ನು ಶುಭಪ್ರಯೋಗ ದಲ್ಲಿಯೂ ವಿನಿಯೋಗಿಸಬೇಕು.

೫೫. ಎಲ್ಲಾ ಬೆಟ್ಟುಗಳಿಂದ ಕೂಡಿರುವುದು ಸೂಕರೀ ಮುದ್ರೆಯು. ಕಿರಿಬೆರಳನ್ನು ಬಿಟ್ಟು ಉಳಿದ ಬೆಟ್ಟುಗಳಿಂದ ಕೂಡಿರುವುದು ಹಂಸೀಮುದ್ರೆಯು. ಮಧ್ಯಮ, ಅನಾಮಿಕಾ, ಹೆಬ್ಬೆರಳು ಈ ಮೂರರಿಂದ ಕೂಡಿರುವುದು ಮೃಗೀ ಮುದ್ರೆ ಎಂಬುದಾಗಿ ಉಕ್ತವಾಗಿದೆ.

೫೬. ಋತ್ವಿಕ್ಕುಗಳು ಎಳ್ಳನ್ನು ದಧಿ, ಮಧು, ಘೃತ ಇವುಗಳ ಸಹಿತ ವಾಗಿ ಐದು ಬೆರಳುಗಳಿಂದ ಪೂರ್ವಪ್ರಮಾಣದಷ್ಟು ತೆಗೆದುಕೊಂಡು ಆಹುತಿಯ ನ್ನರ್ಪಿಸಿ ಹೋಮಮಾಡಬೇಕು.

೫೭. ಪುಣ್ಯಕರ್ಮಗಳಲ್ಲಿ ದರ್ಭೆಯ ಪವಿತ್ರವನ್ನು ಅನಾಮಿಕಾ ಎಂಬ ಬೆರಳಿನಲ್ಲಿ ಸಂಯೋಜನೆ ಮಾಡಬೇಕು.

೫೮. ರುದ್ರ ಮತ್ತು ಬ್ರಹ್ಮ ಇವರು ವಿನಾಯಕನನ್ನು ಕರ್ಮಗಳ ವಿಘ್ನ ಸಿದ್ಧಿಗಾಗಿ ಗಣಗಳೊಡೆಯನನ್ನಾಗಿ ನಿಯಮಿಸಿರುವರು.

ತೇನೋಪಸೃಷ್ಟೋ ಯಸ್ತಸ್ಯ ಲಕ್ಷಣಾನಿ ನಿಬೋಧ ಮೇ ।
ಸ್ವಪ್ನೇವ ಗಾಹತೇತ್ಯರ್ಥಂ ಜಲಂ ಮುಂಡಾಂಶ್ಚ ಪಶ್ಯತಿ ॥ ೫೯ ॥

ಕಾಷಾಯ ವಾಸಸಶ್ಚೈವ ಕ್ರವ್ಯಾದಾಂಶ್ಚಾಧಿರೋಹತಿ ।
ಅಂತ್ಯಜೈರ್ಗರ್ದಭೈರುಷ್ಟ್ರೈಃ ಸಹೈಕತ್ರಾವತಿಷ್ಠತೇ ॥ ೬೦ ॥

ವ್ರಜನ್ನಪಿ ತಥಾತ್ಮಾನಂ ಮನ್ಯತೇನುಗತಂ ಪರೈಃ ।
ವಿಮನಾ ವಿಫಲಾರಂಭಸ್ಸಂಸೀದತ್ಯನಿಮಿತ್ತತಃ ॥ ೬೧ ॥

ತೇನೋಪಸೃಷ್ಟೋ ಲಭತೇ ನ ರಾಜ್ಯಂ ರಾಜನಂದನಃ ।
ಕುಮಾರೀ ನ ಚ ಭರ್ತಾರಮಪತ್ಯಂ ಗರ್ಭಮಂಗನಾ ।
ಆಚಾರ್ಯತ್ವಂ ಶ್ರೋತ್ರಿಯಶ್ಚ ನ ಶಿಷ್ಯೋಧ್ಯಯನಂ ತಥಾ ॥ ೬೨ ॥

---

೫೯. ಆ ವಿನಾಯಕನಿಂದ ವಿಸರ್ಜಿಸಲ್ಪಟ್ಟವನ ಎಂದರೆ ವಿನಾಯಕನ ಆಗ್ರಹಕ್ಕೆ ಪಾತ್ರನಾದವನ ಲಕ್ಷಣವನ್ನು ಹೇಳುವೆನು ತಿಳಿ. ಅವನು ತಾನೇ ಅಧಿಕವಾಗಿ ನೀರಿನಲ್ಲಿ ಮುಳುಗುವನು, ಹೆಚ್ಚಾಗಿ ಮುಂಡಿತರನ್ನು ನೋಡುವನು.

೬೦. ಅವನು ವಿಲಾಸಕ್ಕೋಸ್ಕರ ಬಟ್ಟೆಯನ್ನು ಧರಿಸುವನು. ಪಿಶಾಚಾದಿಗಳನ್ನು ವಶಮಾಡಿಕೊಂಡು ಇರುವನು. ಚಾಂಡಾಲರು, ಕತ್ತೆಗಳು, ಒಂಟೆಗಳು ಇವುಗಳೊಡನೆ ಒಂದೇ ಸ್ಥಳದಲ್ಲಿ ವಾಸಿಸುವನು.

೬೧. ತಾನು ಹೋಗುತ್ತಿರುವಾಗ ಇತರರು ತನ್ನನ್ನು ಅನುಸರಿಸಿ ಬರುತ್ತಿರುವರೆಂದು ತಿಳಿಯುವನು. ಅವನು ವಿಮನಸ್ಕನು, ನಿಷ್ಫಲಕರ್ಮಮಾಡುವವನೂ ಆಗಿ ನಿಷ್ಕಾರಣವಾಗಿ ದುಃಖಿಸುತ್ತಿರುವನು.

೬೨. ಇದೇ ರೀತಿ ಆ ವಿನಾಯಕನ ಆಗ್ರಹಕ್ಕೆ ಪಾತ್ರನಾದವನು ರಾಜಕುಮಾರನಾದರೂ ದೊರೆಯಾಗುವುದಿಲ್ಲ. ಅಂತಹ ಕುಮಾರಿಯು ಗಂಡನನ್ನು ಮಕ್ಕಳನ್ನೂ ಪಡೆಯಲಾರಳು. ಅಂತಹ ಸ್ತ್ರೀಯು ಗರ್ಭಿಣಿಯಾಗುವುದಿಲ್ಲ. ಶ್ರೋತ್ರಿಯನಾದರೂ ಆಚಾರ್ಯನಾಗುವುದಿಲ್ಲ. ಅಂತಹ ಶಿಷ್ಯನಿಗೆ ಅಧ್ಯಯನವು ನಡೆಯುವುದಿಲ್ಲ.

ವಣಿಗ್ಲಾಭಂ ನ ಚಾಪ್ನೋತಿ ಕೃಷಿಂ ಚಾಪಿ ಕೃಷೀವಲಃ ।
ಸ್ನಪನಂ ತಸ್ಯ ಕರ್ತವ್ಯಂ ಪುಣ್ಯೇಹ್ನಿ ವಿಧಿಪೂರ್ವಕಂ ।
ಗೌರಸರ್ಷಪಕಲ್ಕೇನ ಸ್ವಸ್ತಿ ವಾಚ್ಯಾ ದ್ವಿಜೈಃ ಶುಭಾಃ ॥ ೬೩ ॥

ಅಶ್ವಸ್ಥಾನಾದ್ಗಜಸ್ಥಾನಾದ್ವಲ್ಮೀಕಾತ್ಸಂಗಮಾದ್ಧ್ರದಾತ್ ।
ಮೃತ್ತಿಕಾಂ ರೋಚನಾಂ ಗಂಧಾನ್ಗುಗ್ಗುಲಂ ಚಾಶು ನಿಕ್ಷಿಪೇತ್ ॥ ೬೪ ॥

ಪಾತ್ರಾಹೃತ್ಯೈರೇಕವರ್ಣೈಶ್ಚತುರ್ಭಿಃ ಕಲಶೈರ್ಹ್ರದಾತ್ ।
ಚರ್ಮಣ್ಯಾನುಡುಹೇ ರಕ್ತೇ ಸ್ಥಾಪ್ಯ ಭದ್ರಾಸನಂ ತತಃ ॥ ೬೫ ॥

ಸಹಸ್ರಾಕ್ಷಂ ಶತಧಾರಂ ಋಷಿಭಿಃ ಪಾವನಂ ಕೃತಂ ।
ತೇನ ತ್ವಾಮಭಿಷಿಂಚಾಮಿ ಪಾವಮಾನಾಃ ಪುನಂತು ತೇ ॥ ೬೬ ॥

ಭಗಂ ತೇ ವರುಣೋ ರಾಜಾ ಭಗಂ ಸೂರ್ಯೋ ಬೃಹಸ್ಪತಿಃ ।
ಭಗಮಿಂದ್ರಶ್ಚ ವಾಯುಶ್ಚ ಭಗಂ ಸಪ್ತರ್ಷಯೋ ದದುಃ ॥ ೬೭ ॥

---

೬೩. ವರ್ತಕನು ಲಾಭವನ್ನು ಪಡೆಯುವುದಿಲ್ಲ. ವ್ಯವಸಾಯಗಾರನಿಗೆ ಕೃಷಿಯು ಫಲಿಸುವುದಿಲ್ಲ. ಆದಕಾರಣ ವಿನಾಯಕನ ಅನುಗ್ರಹವನ್ನು ಪಡೆಯುವುದಕ್ಕಾಗಿ ಶುಭದಿನದಲ್ಲಿ ಆ ವಿನಾಯಕನಿಗೆ ಬಿಳಿಯಸಾಸಿವೆಕಲ್ಕದಿಂದ ವಿಧಾನೋಕ್ತಪ್ರಕಾರವಾಗಿ ಅಭಿಷೇಕ ಮಾಡಬೇಕು. ನಂತರ ದ್ವಿಜರಿಂದ ಮಂಗಳಕರವಾದ ಸ್ವಸ್ತಿವಾಚನವನ್ನು ಮಾಡಿಸಬೇಕು.

೬೪. ತಕ್ಷಣದಲ್ಲಿಯೇ ಕುದುರೆಯಲಾಯ, ಗಜಶಾಲೆ, ಹುತ್ತ, ನದಿಯ ಸಂಗಮಸ್ಥಳ, ಸರೋವರ ಇವುಗಳಿಂದ ಮೃತ್ತಿಕೆಯನ್ನು ತಂದು ಅದನ್ನೂ, ಗೋರೋಚನ, ಗಂಧ, ಗುಗ್ಗುಲ ಇವುಗಳನ್ನು ಇಡಬೇಕು.

೬೫. ಅನಂತರ ಸರೋವರದಿಂದ ಸಣ್ಣಪಾತ್ರೆಗಳಲ್ಲಿ ತರಲ್ಪಟ್ಟ ಒಂದೇ ಬಣ್ಣದ ನಾಲ್ಕು ಕಲಶಗಳ ಸಹಿತವಾಗಿ ಭದ್ರಾಸನವನ್ನು ಕೆಂಪು ಬಣ್ಣದ ಎತ್ತಿನ ಚರ್ಮದಲ್ಲಿ ಸ್ಥಾಪಿಸಬೇಕು.

೬೬-೬೭. ಪಾವಮಾನಿ ಋಕ್ಕುಗಳಿಂದ ಇಂದ್ರನನ್ನು ದೇವತೆಗಳು ಪವಿತ್ರನನ್ನಾಗಿ ಮಾಡಿರುವರು. ಆದುದರಿಂದ ಅವುಗಳಿಂದ ಅಭಿಷೇಕವನ್ನು ಮಾಡುವೆನು. ಅವು ಪವಿತ್ರವನ್ನಾಗಿ ಮಾಡಲಿ. ವರುಣರಾಜನು, ಸೂರ್ಯ ಬೃಹಸ್ಪತಿ, ಇಂದ್ರ, ವಾಯು ಮತ್ತು ಸಪ್ತರ್ಷಿಗಳು ನಿನಗೆ ಐಶ್ವರ್ಯವನ್ನು, ಕೊಡಲಿ.

ಯತ್ತೇ ಕೇಶೇಷು ದೌರ್ಭಾಗ್ಯಂ ಸೀಮಂತೇ ಯಚ್ಚ ಮೂರ್ಧನಿ ।
ಲಲಾಟೇ ಕರ್ಣಯೋರಕ್ಷ್ಣೋರಾಪಸ್ತದಂತು ಸರ್ವದಾ ॥ ೬೮ ॥

ಸ್ನಾತಸ್ಯ ಸಾರ್ಷಪಂ ತೈಲಂ ಸ್ರುವೇಣೌದುಂಬರೇಣ ತು ।
ಜುಹುಯಾನ್ಮೂರ್ಧನಿ ಕುಶಾನ್ಸವ್ಯೇನ ಪರಿಗೃಹ್ಯ ಚ ॥ ೬೯ ॥

ಮಿತಶ್ಚ ಸಂಮಿತಶ್ಚೈವ ತಥಾ ಶಾಲಕಟಂಕಟೌ ।
ಕೂಷ್ಮಾಂಡೋ ರಾಜಪುತ್ರಶ್ಚೇತ್ಯಂತೇ ಸ್ವಾಹಾ ಸಮನ್ವಿತೈಃ ॥ ೭೦ ॥

ನಾಮಭಿರ್ಬಲಿಮಂತ್ರೈಶ್ಚ ನಮಸ್ಕಾರಸಮನ್ವಿತೈಃ ।
ದದ್ಯಾಚ್ಚತುಷ್ಪಥೇ ಸೂರ್ಯೇ ಕುಶಾನಾಸ್ತೀರ್ಯ ಸರ್ವತಃ ॥ ೭೧ ॥

ಕೃತಾಕೃತಾಂಸ್ತಂಡುಲಾಂಶ್ಚ ಪಲಲೌದನಮೇವ ಚ ।
ಮತ್ಸ್ಯಾನ್ಪಕ್ವಾಂಸ್ತಥೈವಾಮಾನ್ಮಾಂಸಮೇತಾವದೇವ ತು ॥ ೭೨ ॥

---

೬೮. ಈ ಜಲಾಭಿಮಾನಿದೇವತೆಗಳು ನಿನ್ನ ಕೇಶ, ಬೈತಲೆ, ತಲೆ, ಹಣೆ, ಕಿವಿ ಮತ್ತು ಕಣ್ಣು ಇವುಗಳಲ್ಲಿನ ದೌರ್ಭಾಗ್ಯವನ್ನು ಯಾವಾಗಲೂ ನಾಶಪಡಿಸಲಿ.

೬೯-೭೦. ಅಭಿಷಿಕ್ತನಾದ ಗಣಪತಿಯ ಶಿರಸ್ಸಿನಲ್ಲಿ ಬಲಗೈಯಿಂದ ದರ್ಭೆಯನ್ನು ತೆಗೆದುಕೊಂಡು ಅತ್ತಿಮರದ ಸ್ರುವದಿಂದ ಸುವಾಸನೆಯ ತೈಲವನ್ನು 'ಮಿತಾಯ ಸ್ವಾಹಾ, ಸಂಮಿತಾಯ ಸ್ವಾಹಾ, ಶಾಲಾಯ ಸ್ವಾಹಾ, ಕಟಂಕಟಾಯ್ಯಸ್ವಾಹಾ, ಕೂಷ್ಮಾಂಡಾಯ ಸ್ವಾಹಾ, ರಾಜಪುತ್ರಾಯ ಸ್ವಾಹಾ' ಎಂಬ ಮಂತ್ರಗಳನ್ನು ಹೇಳುತ್ತಾ ಆರಾವರ್ತಿ ಹೋಮಮಾಡಬೇಕು.

೭೧. ನಾಮ ಮತ್ತು ಮಂತ್ರ ಇವುಗಳನ್ನು ಹೇಳುತ್ತಾ ನಮಸ್ಕಾರ ಮಾಡಿ ನಾಲ್ಕು ದಾರಿಗಳು ಸೇರುವ ಚೌಕದಲ್ಲಿ ತುಂಬ ದರ್ಭೆಯನ್ನು ಹರಡಿ ಸೂರ್ಯಸನ್ನಿಧಿಯಲ್ಲಿ ಬಲಿಯನ್ನು ಸಮರ್ಪಿಸಬೇಕು.

೭೨-೭೫. ಮಾಂಸಮಿಶ್ರಿತವಾದ ಅನ್ನ, ಅಕ್ಕಿ, ಬೇಯಿಸಿದ ಮತ್ತು ಬೇಯಿಸದಿರುವ ಮೀನು, ಚಿತ್ರಪುಷ್ಪ, ಸುಗಂಧ, ಮೂರು ವಿಧವಾದ ಮದ್ಯ, ಮೂಲಂಗಿ, ಪೂರಿ, ಒಬ್ಬಟ್ಟು, ಮೊಸರನ್ನ, ಪಾಯಸ, ತಂಬಿಟ್ಟು ಮತ್ತು

**ಪುಷ್ಪಂ ಚಿತ್ರಂ ಸುಗಂಧಂ ಚ ಸುರಾಂ ಚ ತ್ರಿವಿಧಾಮಪಿ ।**
**ಮೂಲಕಂ ಪೂರಿಕಾಪೂಪಾಂಸ್ತಥೈವೋಟಸ್ರಜೋಽಪಿ ಚ ॥ ೭೩ ॥**

**ದಧ್ಯನ್ನಂ ಪಾಯಸಂ ಚೈವ ಗುಡಪಿಷ್ಟಂ ಸಮೋದಕಂ ।**
**ಏತಾನ್ಸರ್ವಾನುಪಾಹೃತ್ಯ ಭೂಮೌ ಕೃತ್ವಾ ತತಃ ಶಿರಃ ॥ ೭೪ ॥**

**ವಿನಾಯಕಸ್ಯ ಜನನೀಮುಮಾಪತಿಮಥಾರ್ಚಯೇತ್ ।**
**ಧೂಪೈರ್ದೀಪೈಶ್ಚ ನೈವೇದ್ಯೈರ್ಗಂಧಮಾಲ್ಯಾನುಲೇಪನೈಃ ।**
**ಬ್ರಾಹ್ಮಣಾನ್ಭೋಜಯೇತ್ಪಶ್ಚಾದ್ವಸ್ತ್ರಯುಗ್ಮಂ ಗುರೋರಪಿ ೭೫ ॥**

**ಏವಂ ವಿನಾಯಕಂ ಪೂಜ್ಯ ಗ್ರಹಾಂಶ್ಚೈವ ಪ್ರಪೂಜಯೇತ್ ।**
**ಶ್ರೀಕಾಮಃ ಶಾಂತಿಕಾಮೋ ವಾ ಇಷ್ಟವೃದ್ಧ್ಯೈ ಸುವೀರ್ಯವಾನ್ ॥ ೭೬ ॥**

**ಸೂರ್ಯಃ ಸೋಮೋ ಮಹೀಪುತ್ರೋ ಬುಧೋ ಜೀವೋ ಭೃಗುಃ ಶನಿಃ ।**
**ರಾಹುಕೇತೂನವಾಪ್ಯೇತೇ ಸ್ಥಾಪನೀಯಾ ಗ್ರಹಾಃ ಕ್ರಮಾತ್ ॥ ೭೭ ॥**

---

ಕಡಬು ಇವುಗಳನ್ನೆಲ್ಲಾ ಉಪಹಾರವಾಗಿ ನಿವೇದಿಸಿ, ಭೂಮಿಯಲ್ಲಿ ತಲೆಯುನ್ನಿಟ್ಟು ನಮಸ್ಕರಿಸಿ, ವಿನಾಯಕನ ತಾಯಿಯಾದ ಪಾರ್ವತೀದೇವಿಯನ್ನೂ ಆಕೆಯ ಪತಿಯಾದ ಈಶ್ವರನನ್ನೂ ಸಹ ಧೂಪ, ದೀಪ, ನೇವೇದ್ಯ, ಗಂಧ, ಪುಷ್ಪಹಾರ ಮತ್ತು ಅನುಲೇಪನೆ ಇವುಗಳಿಂದ ಪೂಜಿಸಬೇಕು. ಅನಂತರ ಬ್ರಾಹ್ಮಣರಿಗೆ ಭೋಜನಮಾಡಿಸಿ ಅವರಿಗೆ ಮತ್ತು ಗುರುಗಳಿಗೆ ಒಂದುಜೊತೆ ವಸ್ತ್ರವನ್ನು ಕೊಡಬೇಕು.

೭೬. ಈರೀತಿ ವಿನಾಯಕನನ್ನು ಪೂಜಿಸಿ, ಗ್ರಹಗಳನ್ನೂ ಸಹ ಪೂಜಿಸಬೇಕು. ಹೀಗೆ ಪೂಜಿಸಿದರೆ ಐಶ್ವರ್ಯ ಅಥವಾ ಶಾಂತಿಯನ್ನು ಬಯಸುವವನು ತನ್ನ ಇಷ್ಟಾರ್ಥವನ್ನು ಸಂಪೂರ್ಣವಾಗಿ ಪಡೆದು ವೀರ್ಯವಂತನಾಗುವನು.

೭೭. ಸೂರ್ಯ, ಚಂದ್ರ, ಕುಜ, ಬುಧ, ಗುರು, ಶುಕ್ರ, ಶನಿ, ರಾಹು ಮತ್ತು ಕೇತು ಎಂಬೀ ನವಗ್ರಹಗಳನ್ನು ಕ್ರಮವಾಗಿ ಸ್ಥಾಪಿಸಬೇಕು.

**ತಾಮ್ರಕಾದ್ರಜತಾದ್ರಕ್ತಚಂದನಾತ್ಸ್ವರ್ಣಕಾದಪಿ ।**
**ಹೇಮ್ನೋ ರಜತಾದಯಸಃ ಸೀಸಾತ್ಕಾರ್ಯಾ ಶುಭಾಪ್ತಯೇ ॥ ೭೮ ॥**

**ಸ್ವವರ್ಣೈರ್ವಾ ಪಟೇ ಲೇಖ್ಯಾ ಗಂಧೈರ್ಮಂಡಲಕೇಷು ಚ ।**
**ಯಥಾವರ್ಣಂ ಪ್ರದೇಯಾನಿ ವಾಸಾಂಸಿ ಕುಸುಮಾನಿ ಚ ॥ ೭೯ ॥**

**ಗಂಧಾಶ್ಚ ಬಲಯಶ್ಚೈವ ಧೂಪೋ ದೇಯಶ್ಚ ಗುಗ್ಗುಲಃ ।**
**ಕರ್ತವ್ಯಾ ಮಂತ್ರವಂತಶ್ಚ ಚರವಃ ಪ್ರತಿದೈವತಂ ॥ ೮೦ ॥**

**ಆಕೃಷ್ಣೇನ ಇಮಂ ದೇವಾ ಅಗ್ನಿರ್ಮೂರ್ಧಾ ದಿವಃ ಕಕುತ್ ।**
**ಉದ್ಬುಧ್ಯಸ್ವಾತಿ ಯದಯಂಸ್ತಥೈವಾನ್ನಾತ್ಪರಿಸ್ರುತಃ ॥ ೮೧ ॥**

**ಶನ್ನೋ ದೇವೀಸ್ತಥಾಕಾಂಡಾತ್ಕೇತುಂ ಕೃಣ್ವನ್ನ ಕೇತವಃ ।**
**ಅರ್ಕಃ ಪಲಾಶಃ ಖದಿರಸ್ತ್ವಪಾಮಾರ್ಗೋಥ ಪಿಪ್ಪಲಃ ॥ ೮೨ ॥**

---

೭೮. ತಾಮ್ರ ಕೆಂಪುಗಂಧ, ಬಂಗಾರ, ಬೆಳ್ಳಿ, ಕಬ್ಬಿಣ, ಸೀಸ ಈ ಲೋಹಗಳಿಂದ ಕ್ರಮವಾಗಿ ನವಗ್ರಹ ಪ್ರತಿಮೆಗಳನ್ನು ಮಾಡಿಸುವುದು ಶ್ರೇಯಸ್ಸಾಧನವು

೭೯. ಆಯಾಯಾ ಗ್ರಹಗಳ ಬಣ್ಣದ ಗಂಧಗಳಿಂದ ವಸ್ತ್ರ ಮತ್ತು ಮಂಡಲಗಳಲ್ಲಿ ಗ್ರಹಗಳ ಆಕೃತಿಯನ್ನು ಬರೆಯಬೇಕು. ಗ್ರಹಗಳ ಬಣ್ಣಕ್ಕೆ ತಕ್ಕಂತೆ ಆಯಾಯಾ ಬಣ್ಣದ ವಸ್ತ್ರ ಮತ್ತು ಪುಷ್ಪಗಳನ್ನು ಸಮರ್ಪಿಸಬೇಕು

೮೦-೮೨. ಗಂಧ, ಬಲಿ, ಗುಗ್ಗುಲಧೂಪ, ಇವುಗಳನ್ನರ್ಪಿಸಬೇಕು. ಪ್ರತಿಯೊಂದು ದೇವತೆಗೂ ಮಂತ್ರಪೂರ್ವಕವಾಗಿ ಚರುಗಳನ್ನು ಮಾಡಬೇಕು. ಸೂರ್ಯಾದಿ ನವಗ್ರಹಗಳಿಗೆ ಚರುವನ್ನು ಮಾಡುವಾಗ ಕ್ರಮವಾಗಿ "ಆಕೃಷ್ಣೇನ, ಇಮಂದೇವಾ, ಅಗ್ನಿರ್ಮೂರ್ಧಾ ದಿವಃ ಕಕುತ್, ಉದ್ಬುಧ್ಯಸ್ವಾತಿಯದಯನ್, ಅನ್ನಾತ್ಪರಿಸ್ರುತಃ, ಶನ್ನೋದೇವೀ, ಕಾಂಡಾತ್, ಕೇತುಂ ಕೃಣ್ವನ್ನಕೇತವಃ" ಎಂಬ ಮಂತ್ರಗಳನ್ನು ವಿನಿಯೋಗಿಸಬೇಕು.

ಉದುಂಬರಃ ಶಮೀ ದೂರ್ವಾ ಕುಶಾಶ್ಚ ಸಮಿಧಃ ಕ್ರಮಾತ್ ।
ಏಕೈಕಸ್ಯಾದಷ್ಟಶತಮಷ್ಟಾವಿಂಶತಿರೇವ ಚ ॥ ೮೩ ॥

ಹೋತವ್ಯಾ ಮಧುಸರ್ಪಿರ್ಭ್ಯಾಂ ದಧ್ನಾ ಕ್ಷೀರೇಣ ವಾ ಪುನಃ ।
ಗುಡೌದನಂ ಪಾಯಸಂ ಚ ಹವಿಷ್ಯಂ ಕ್ಷೀರಷಾಷ್ಟಿಕಂ ॥ ೮೪ ॥

ದಧ್ಯೋದನಂ ಹವಿಶ್ಚೂರ್ಣಂ ಮಾಂಸಂ ಚಿತ್ರಾನ್ನಮೇವ ಚ ।
ದದ್ಯಾದ್ಗ್ರಹಕ್ರಮಾದೇತದ್ದ್ವಿಜೇಭ್ಯೋ ಭೋಜನಂ ಬುಧಃ ॥ ೮೫ ॥

ಶಕ್ತಿತೋಽಪಿ ಯಥಾಲಾಭಂ ಸತ್ಕೃತ್ಯ ವಿಧಿಪೂರ್ವಕಂ ।
ಧೇನುಃ ಶಂಖಸ್ತಥಾನಡ್ವಾನ್ಹೇಮವಾಸೋ ಹಯಃ ಕ್ರಮಾತ್ ॥ ೮೬ ॥

ಕೃಷ್ಣಾ ಗೌರಾಯಸಂ ಛಾಗ ಏತಾ ವೈ ದಕ್ಷಿಣಾಃ ಸ್ಮೃತಾಃ ।
ಯಸ್ಯ ಯಸ್ಯ ತು ಯದ್ದ್ರವ್ಯಂ ಫಲೇನಾರ್ಚ್ಯಃ ಸ ತೇನ ಚ ॥ ೮೭ ॥

---

೮೨-೮೩. ಎಕ್ಕೆ, ಮುತ್ತುಗ, ಖದಿರ, ಉತ್ತರಣೆ, ಹಿಪ್ಪಲಿ, ಅತ್ತಿ, ಬನ್ನಿ ಹುಲ್ಲು ಮತ್ತು ದರ್ಭೆ ಇವುಗಳನ್ನು ಸೂರ್ಯಾದಿನವಗ್ರಹಗಳಿಗೆ ಕ್ರಮವಾಗಿ ಸಮಿತ್ತುಗಳನ್ನಾಗಿ ಕಲ್ಪಿಸಿ ಒಂದೊಂದು ವಿಧ ಸಮಿತ್ತಿನಿಂದಲೂ ಆಯಾಯಾ ಗ್ರಹಗಳಿಗೆ ಎಂಟನೂರ ಇಪ್ಪತ್ತೆಂಟರಂತೆ ಹೋಮಮಾಡಬೇಕು.

೮೪-೮೫. ಜೇನುತುಪ್ಪ ಮತ್ತು ತುಪ್ಪಗಳಿಂದಲೂ ಮೊಸರು ಅಥವಾ ಹಾಲಿನಿಂದಲೂ ಪುನಃ ಹೋಮಮಾಡಬೇಕು. ಜ್ಞಾನಿಯು ಸಕ್ಕರೆಪಂಗಲು, ಪಾಯಸ, ತುಪ್ಪ, ಯವದಹಾಲು, ಮೊಸರನ್ನ, ಘೃತ, ಹಿಟ್ಟು, ಮಾಂಸ ಮತ್ತು ಚಿತ್ರಾನ್ನ ಇವುಗಳನ್ನು ಕ್ರಮವಾಗಿ ಸೂರ್ಯಾದಿ ನವಗ್ರಹಗಳನ್ನುದ್ದೇಶಿಸಿ ಬ್ರಾಹ್ಮಣರಿಗೆ ಕೊಟ್ಟು ಭೋಜನಮಾಡಿಸಬೇಕು.

೮೬-೮೭. ತನ್ನ ಶಕ್ತಿಯನ್ನನುಸರಿಸಿ ಲಾಭಾನುಗುಣವಾಗಿ ವಿಧಾನೋಕ್ತರೀತಿಯಿಂದ ಸತ್ಕರಿಸಬೇಕು. ಹಸು, ಶಂಖ ಮತ್ತು ಕಂಬಳಿ, ಕುದುರೆ ಕೃಷ್ಣಮೃಗ, ಗೋವು, ಕಬ್ಬಿಣ ಮತ್ತು ಆಡು ಇವುಗಳು ಸೂರ್ಯಾದಿಗ್ರಹಗಳಿಗೆ ಕ್ರಮವಾಗಿ ದಕ್ಷಿಣೆಗಳು ವಿಹಿತವಾಗಿವೆ. ಆಯಾಯಾ ಗ್ರಹಗಳಿಗೆ ದಕ್ಷಿಣೆ ಯೆಂದು ವಿಹಿತವಾಗಿರುವ ಪದಾರ್ಥಗಳನ್ನು ಸುವರ್ಣನಾಣ್ಯಸಹಿತವಾಗಿ ಅವರವರಿಗೆ ಸಮರ್ಪಿಸಬೇಕು.

**ಬ್ರಹ್ಮನ್ನೇಷಾಂ ವರೋ ದತ್ತಃ ಪೂಜಿತಾಃ ಪೂಜಯಿಷ್ಯತಃ ।**
**ಗ್ರಹಾಧೀನಾ ನರೇಂದ್ರಾಣಾಂ ಧನಜಾತ್ಯುಚ್ಛ್ರಯಾಸ್ತಥಾ ॥ ೮೮ ॥**

**ಭಾವಾಭಾವೌ ಚ ಜಗತಸ್ತಸ್ಮಾತ್ಪೂಜ್ಯತಮಾ ಗ್ರಹಾಃ ।**
**ಆದಿತ್ಯಸ್ಯ ಸದಾ ಪೂಜಾ ತಿಲಕಂ ಸ್ವಾಮಿನಸ್ತಥಾ ॥ ೮೯ ॥**

**ಮಹಾಗಣಪತೇಶ್ಚೈವ ಕುರ್ವನ್ಸಿದ್ಧಿಮವಾಪ್ನುಯಾತ್ ।**
**ಕರ್ಮಣಾಂ ಸಫಲತ್ವಂ ಚ ಶ್ರಿಯಂ ವಾಪ್ನೋತ್ಯನುತ್ತಮಾಂ ॥ ೯೦ ॥**

**ಅಕೃತ್ವಾ ಮಾತೃಪೂಜಾಂ ತು ಯೋ ಗ್ರಹಾರ್ಚಾಂ ಸಮಾರಭೇತ್ ।**
**ಕುಪ್ಯಂತಿ ಮಾತರಸ್ತಸ್ಯ ಪ್ರತ್ಯೂಹಂ ಕುರ್ವತೇ ತಥಾ ॥ ೯೧ ॥**

**ವಸೋಃ ಪವಿತ್ರಮಂತ್ರೇಣ ವಸೋರ್ಧಾರಾಂ ಪ್ರಕಲ್ಪ್ಯ ಚ ।**
**ಗೌರ್ಯಾದ್ಯಾ ಮಾತರಃ ಪೂಜ್ಯಾ ಮಾಂಗಲ್ಯೇಷು ಶುಭಾರ್ಥಿಭಿಃ ॥ ೯೨ ॥**

---

೮೮-೮೯. ಬ್ರಹ್ಮಜ್ಞಾನಿಯಾದ ನಾರದನೇ! ಈಪ್ರಕಾರ ಪೂಜೆಮಾಡುವವರಿಗೆ ಪೂಜಿತರಾದ ಗ್ರಹಗಳು ವರವನ್ನು ಕೊಡುವರು. ಆದುದರಿಂದ ನೀವು ಗ್ರಹಪೂಜೆಯನ್ನು ಮಾಡಿರಿ. ರಾಜರುಗಳ ಐಶ್ವರ್ಯ ಸಜಾತೀಯರಲ್ಲಿ ಉಚ್ಛ್ರಯಸ್ಥಿತಿ ಮತ್ತು ಜಗತ್ತಿನ ಸತ್ವ, ಅಸತ್ವಗಳೂ ಸಹ ಗ್ರಹಗಳ ಅಧೀನವಾಗಿವೆಯಾದಕಾರಣ ಗ್ರಹಗಳು ಅತಿಶಯಿತವಾಗಿ ಪೂಜಿಸಲ್ಪಡಬೇಕು.

೮೯-೯೦. ಯಾವಾಗಲೂ ಸೂರ್ಯನಪೂಜೆ ಮತ್ತು ಮಹಾಗಣಪತಿ ಸ್ವಾಮಿಗೆ ತಿಲಕ ಇವುಗಳನ್ನು ಮಾಡುವವನು ಸಿದ್ಧಿಹೊಂದುವನು ಮತ್ತು ಕರ್ಮಗಳ ಸಾಫಲ್ಯ, ಸರ್ವೋತ್ಕೃಷ್ಟವಾದ ಐಶ್ವರ್ಯ ಇವುಗಳನ್ನೂ ಪಡೆಯುವನು.

೯೧. ಮಾತೃಪೂಜೆಯನ್ನು ಮಾಡದೇ ಗ್ರಹಪೂಜೆಯನ್ನು ಮಾಡಲಾರಂಭಿಸಿದವನ ವಿಷಯದಲ್ಲಿ ಮಾತೃದೇವತೆಗಳು ಕೋಪಗೊಳ್ಳುವರು ಮತ್ತು ವಿಘ್ನಮಾಡುವರು.

೯೨. ಶುಭಕರ್ಮಗಳಲ್ಲಿ ಶ್ರೇಯಸ್ಸನ್ನು ಬಯಸುವವರು "ವಸೋಃ ಪವಿತ್ರಂ" ಎಂಬ ಮಂತ್ರದಿಂದ ಜಲಧಾರೆಯನ್ನು ಕಲ್ಪಿಸಿ ಗೌರೀ ಮುಂತಾದ ಮಾತೃದೇವತೆಗಳನ್ನು ಪೂಜಿಸಬೇಕು.

ಗೌರೀ ಪದ್ಮಾ ಶಚೀ ಮೇಧಾ ಸಾವಿತ್ರೀ ವಿಜಯಾ ಜಯಾ ।
ದೇವಸೇನಾ ಸ್ವಧಾ ಸ್ವಾಹಾ ಮಾತೃಕಾ ವೈಧೃತಿರ್ಧೃತಿಃ ॥ ೯೩ ॥

ಪುಷ್ಟಿರ್ಹೃಷ್ಟಿಸ್ತಥಾ ತುಷ್ಟಿರಾತ್ಮದೇವತಯಾ ಸಹ ।
ಗಣೇಶೇನಾಧಿಕಾ ಹ್ಯೇತಾ ವೃದ್ಧೌ ಪೂಜ್ಯಾಸ್ತು ಷೋಡಶ ॥ ೯೪ ॥

ಆವಾಹನಂ ತಥಾ ಪಾದ್ಯಮರ್ಘ್ಯಂ ಸ್ನಾನಂ ಚ ಚಂದನಂ ।
ಅಕ್ಷತಾಂಶ್ಚೈವ ಪುಷ್ಪಾಣಿ ಧೂಪಂ ದೀಪಂ ಫಲಾನಿ ಚ ॥ ೯೫ ॥

ನೈವೇದ್ಯಾಚಮನೀಯಂ ಚ ತಾಂಬೂಲಂ ಪೂಗಮೇವ ಚ ।
ನೀರಾಜನಂ ದಕ್ಷಿಣಾಂ ಚ ಕ್ರಮಾದ್ದದ್ಯಾಚ್ಚ ತುಷ್ಟಯೇ ॥ ೯೬ ॥

ಪಿತೃಕಲ್ಪಂ ಪ್ರವಕ್ಷ್ಯಾಮಿ ಧನಸಂತತಿವರ್ಧನಂ ।
ಅಮಾವಾಸ್ಯಾಷ್ಟಕಾ ವೃದ್ಧಿಃ ಕೃಷ್ಣಪಕ್ಷೋಽಯನದ್ವಯಂ ॥ ೯೭ ॥

---

೯೩-೯೪. ವೃದ್ಧಿಕರ್ಮಗಳಲ್ಲಿ ಗೌರೀ, ಪದ್ಮಾ, ಶಚೀ ಮೇಧಾ, ಸಾವಿತ್ರೀ, ವಿಜಯಾ, ಜಯಾ, ದೇವಸೇನಾ, ಸ್ವಧಾ, ಸ್ವಾಹಾ, ಮಾತೃಕಾ, ವೈಧೃತಿ, ಧೃತಿ, ಪುಷ್ಟಿ, ಹೃಷ್ಟಿ ಮತ್ತು ತುಷ್ಟಿ ಎಂಬ ಹದಿನಾರು ಮಾತೃ ದೇವತೆಗಳನ್ನು ಮತ್ತು ಗಣೇಶನನ್ನೂ ಸಹ ಕುಲದೇವತೆಯ ಸಹಿತವಾಗಿ ಪೂಜಿಸಬೇಕು.

೯೫-೯೬. ಈ ಮಾತೃದೇವತೆ ಮುಂತಾದವರ ಪ್ರೀತ್ಯರ್ಥವಾಗಿ, ಆವಾಹನೆ, ಪಾದ್ಯ, ಅರ್ಘ್ಯ, ಸ್ನಾನ, ಗಂಧ, ಅಕ್ಷತೆ, ಹೂವು, ಧೂಪ, ದೀಪ, ಫಲ, ನೈವೇದ್ಯ, ಆಚಮನೀಯ, ಎಲೆ, ಅಡಿಕೆ, ಮಂಗಳಾರತಿ ಮತ್ತು ದಕ್ಷಿಣೆ ಎಂಬ ಷೋಡಶೋಪಚಾರಗಳನ್ನು ಕ್ರಮವಾಗಿ ಸಮರ್ಪಿಸಬೇಕು.

೯೭-೯೯. ಐಶ್ವರ್ಯ ಮತ್ತು ಸಂತಾನಗಳಿಗೆ ಅಭಿವೃದ್ಧಿಕರವಾದ ಪಿತೃ ಕಲ್ಪವನ್ನು ಹೇಳುವೆನು—ಅಮಾವಾಸ್ಯೆ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ ಮಾಸಗಳ ಕೃಷ್ಣಪಕ್ಷದ ಅಷ್ಟಮಿಗಳು (ಅಷ್ಟಕಾ), ವೃದ್ಧಿ, ಕೃಷ್ಣಪಕ್ಷ ದಲ್ಲಿ ಅನುಕೂಲವಾದ ದಿವಸ. ದಕ್ಷಿಣೋತ್ತರಾಯಣ ಪುಣ್ಯಕಾಲಗಳು, ದ್ರವ್ಯ ಮತ್ತು ಯೋಗ್ಯಬ್ರಾಹ್ಮಣರು ದೊರೆತಕಾಲ, ಮೇಷ ತುಲಾ ಸಂಕ್ರಮಣಗಳು

ದ್ರವ್ಯಬ್ರಾಹ್ಮಣಸಂಪತ್ತಿರ್ವಿಷುವತ್ಸೂರ್ಯಸಂಕ್ರಮಃ ।
ವ್ಯತೀಪಾತೋ ಗಜಛಾಯಾ ಗ್ರಹಣಂ ಚಂದ್ರಸೂರ್ಯಯೋಃ ॥ ೯೮ ॥

ಶ್ರಾದ್ಧಂ ಪ್ರತಿ ರುಚಿಶ್ಚೈವ ಶ್ರಾದ್ಧಕಾಲಾಃ ಪ್ರಕೀರ್ತಿತಾಃ ।
ಅಗ್ರ್ಯಾಃ ಸರ್ವೇಷು ದೇವೇಷು ಶ್ರೋತ್ರಿಯೋ ಬ್ರಹ್ಮವಿದ್ಯುವಾ ॥ ೯೯ ॥

ವೇದಾರ್ಥವಿಜ್ಜ್ಯೇಷ್ಠಸಾಮಾ ತ್ರಿಮಧುಸ್ತ್ರಿಸುಪರ್ಣಕಃ ।
ಸ್ವಸ್ರೀಯ ಋತ್ವಿಕ್ ಜಾಮಾತಾ ಯಾಜಶ್ವಶುರಮಾತುಲಾಃ ॥ ೧೦೦ ॥

ತ್ರಿಣಾಚಿಕೇತ ದೌಹಿತ್ರ ಶಿಷ್ಯಸಂಬಂಧಿಬಾಂಧವಾಃ ।
ಕರ್ಮನಿಷ್ಠಾಸ್ತಪೋನಿಷ್ಠಾಃ ಪಂಚಾಗ್ನಿ ಬ್ರಹ್ಮಚಾರಿಣಃ ॥ ೧೦೧ ॥

ಪಿತೃಮಾತೃಪರಾಶ್ಚೈವ ಬ್ರಾಹ್ಮಣಾಃ ಶ್ರಾದ್ಧಸಂಪದಃ ।
ರೋಗೀ ನ್ಯೂನಾತಿರಿಕ್ತಾಂಗಃ ಕಾಣಃ ಪೌನರ್ಭವಸ್ತಥಾ ॥ ೧೦೨ ॥

---

ವ್ಯತೀಪಾತ ಮತ್ತು ಗಜಚ್ಛಾಯೆಯೆಂಬ ಯೋಗ ಸಂಭವಿಸಿದ ಕಾಲಗಳು, ಸೂರ್ಯ ಚಂದ್ರಗ್ರಹಣಕಾಲ ಮತ್ತು ಶ್ರಾದ್ಧ ಮಾಡಬೇಕೆಂದು ಅಪೇಕ್ಷೆಯುಂಟಾದ ದಿವಸ ಇವುಗಳು ಶ್ರಾದ್ಧಮಾಡಲು ವಿಹಿತವಾದ ಕಾಲಗಳು.

೯೯-೧೦೨. ಸಕಲ ವೇದಗಳನ್ನೂ ಅಧ್ಯಯನಮಾಡಿ ಬ್ರಹ್ಮಜ್ಞಾನಿಯಾದ ಯುವಕನು, ವೇದಾರ್ಥಜ್ಞಾನಿಯು, ಜ್ಯೇಷ್ಠಸಾಮವೆಂಬ ಸಾಮವೇದ ಭಾಗ, ತ್ರಿಮಧು ಎಂಬ ಋಗ್ವೇದಭಾಗ, ತ್ರಿಸುಪರ್ಣವೆಂಬ ಯಜುರ್ವೇದಭಾಗ ಇವುಗಳನ್ನು ಅಧ್ಯಯನಮಾಡಿರುವವರು, ಸೋದರಿಯರ ಮಗ, ಋತ್ವಿಕ್ಕು, ಅಳಿಯ, ಯಾಗಮಾಡಿದವನು, ಮಾವ, ಸೋದರಮಾವ, ಮೂರಾವರ್ತಿ ನಾಚಿಕೇತವನ್ನು ಮಾಡಿರುವವನು, ಮಗಳಮಗ, ಶಿಷ್ಯ, ಸಂಬಂಧಿಗಳಾದ ನಂಟರು, ಕರ್ಮನಿಷ್ಠರು, ತಪಸ್ವಿಗಳು, ಪಂಚಾಗ್ನಿವಿದ್ಯಾನಿಷ್ಠರು, ಬ್ರಹ್ಮಚಾರಿಗಳು ಮತ್ತು ಮಾತಾಪಿತೃಸೇವೆಯಲ್ಲಿ ನಿರತರೂ ಆದ ಬ್ರಾಹ್ಮಣರು ಶ್ರಾದ್ಧದಲ್ಲಿ ನಿಮಂತ್ರಣಕ್ಕೆ ಉತ್ತಮಪಾತ್ರರು ಮತ್ತು ಶ್ರಾದ್ಧಸಾಫಲ್ಯಪ್ರದರೂ ಆಗಿರುತ್ತಾರೆ.

**ಅವಕೀರ್ಣೀ ಕುಂಡಗೋಲೌ ಕುನಖೀ ಶ್ಯಾವದಂತಕಃ ।**
**ಭೃತಕಾಧ್ಯಾಪಕಃ ಕ್ಲೀಬಃ ಕನ್ಯಾದೂಷ್ಯಭಿಶಸ್ತಕಃ　　॥ ೧೦೩ ॥**

**ಮಿತ್ರಧ್ರುಕ್ ಪಿಶುನಃ ಸೋಮವಿಕ್ರಯೀ ಪರಿವಿಂದಕಃ ।**
**ಮಾತೃಪಿತೃಗುರುತ್ಯಾಗೀ ಕುಂಡಾಶೀ ವೃಷಲಾತ್ಮಜಃ　　॥ ೧೦೪ ॥**

**ಪರಪೂರ್ವಾಪತಿಸ್ತೇನಕರ್ಮಭ್ರಷ್ಟಾಶ್ಚ ನಿಂದಿತಾಃ ।**
**ನಿಮಂತ್ರಯೀತ ಪೂರ್ವೇದ್ಯುರ್ಬ್ರಾಹ್ಮಣಾನಾತ್ಮವಾನ್ ಶುಚಿಃ　　॥ ೧೦೫ ॥**

---

೧೦೨-೧೦೫. ರೋಗಿ, ಅಂಗಹೀನ, ಹೆಚ್ಚು ಅವಯವವುಳ್ಳವನು, ಒಂದು ಕಣ್ಣಿಲ್ಲದವನು, ಒಂದಾವರ್ತಿ ಮದುವೆಯಾದ ಮೇಲೆ ಪುನಃ ಮದುವೆಮಾಡಿ ಕೊಂಡ ಸ್ತ್ರೀಯಲ್ಲಿ ಹುಟ್ಟಿದ ಪುತ್ರನು, ತನ್ನ ಧರ್ಮವನ್ನು ತ್ಯಜಿಸಿ ಸ್ತ್ರೀಸಂಭೋಗಮಾಡಿದ ಬ್ರಹ್ಮಚಾರಿಯು, ಪತಿಯು ಜೀವಿತನಾಗಿರುವಾಗ ಪರಪುರುಷ ಸಂಸರ್ಗದಿಂದ ಹುಟ್ಟಿದವನು, ಪತಿಯು ಮೃತನಾದಮೇಲೆ ಪರಪುರುಷಸಂಬಂಧದಿಂದ ಹುಟ್ಟಿದವನು, ಉಗುರಿಲ್ಲದವನು, ಕಪ್ಪು ಹಲ್ಲುಳ್ಳವನು, ಶಿಷ್ಯರಿಂದ ಕ್ಲಪ್ತವಾಗಿ ದ್ರವ್ಯವನ್ನು ತೆಗೆದುಕೊಂಡು ಅವರಿಗೆ ಅಧ್ಯಯನವನ್ನು ಮಾಡಿಸುವವನು, ನಪುಂಸಕನು, ಕನ್ಯೆಯನ್ನು ದೂಷಿಸುವವನು, ಸಭೆಯಲ್ಲಿ ದೋಷಿಯೆಂದು ಸಭಿಕರಿಂದ ಹೇಳಿಸಿಕೊಳ್ಳಲ್ಪಟ್ಟವನು, ಮಿತ್ರದ್ರೋಹಿಯು, ಚಾಡಿಕೋರನು, ಸೋಮಲತೆಯನ್ನು ಮಾರುವವನು, ಅಣ್ಣನಿಗಿಂತ ಮುಂಚೆ ಮದುವೆಮಾಡಿಕೊಂಡವನು, ಶಾಸ್ತ್ರೋಕ್ತ ಕಾರಣವಿಲ್ಲದೆ ತಾಯಿ, ತಂದೆ, ಗುರು ಇವರನ್ನು ಬಿಟ್ಟವನು, ಗಂಡನು ಬದುಕಿರುವಾಗ ಪರಪುರುಷನಿಂದ ಹುಟ್ಟಿದವನ ಅನ್ನವನ್ನು ತಿಂದು ಜೀವಿಸುತ್ತಿರುವವನು, ಧರ್ಮಬಾಧಕನ ಮಗನು, ಅನ್ಯರಿಗೆ ದತ್ತಕನ್ಯೆಯನ್ನು ವಿವಾಹಮಾಡಿಕೊಂಡಿರುವವನು, ಕಳ್ಳನು ಮತ್ತು ವಿಹಿತಕರ್ಮಗಳನ್ನು ಬಿಟ್ಟಿರುವವನು ಇವರಲ್ಲಿ ಯಾರನ್ನೂ ಶ್ರಾದ್ಧದಲ್ಲಿ ಭೋಜನಕ್ಕೆ ಕರೆಯಬಾರದು.

೧೦೫. ಶ್ರಾದ್ಧಕರ್ತನು ಶ್ರಾದ್ಧದ ಹಿಂದಿನ ದಿನದಲ್ಲಿ ಇಂದ್ರಿಯನಿಯಮನ ಪೂರ್ವಕವಾಗಿ ಮಡಿಯಿಂದ ಬ್ರಾಹ್ಮಣರನ್ನು ಆಹ್ವಾನಮಾಡಬೇಕು.

ತೈಶ್ಚಾಪಿ ಸಂಯುತೈರ್ಭಾವ್ಯಂ ಮನೋವಾಕ್ಕಾಯಕರ್ಮಭಿಃ ।
ಅಪರಾಹ್ಣೇ ಸಮಭ್ಯರ್ಚ್ಯ ಸ್ವಾಗತೇನಾಗತಾಂಸ್ತು ತಾನ್ ॥ ೧೦೬ ॥

ಪವಿತ್ರಪಾಣಿರಾಚಾಂತಾನಾಸನೇ ಚೋಪವೇಶಯೇತ್ ।
ವಿಪ್ರಾನ್ದೈವೇ ಯಥಾ ಶಕ್ತಿ ಪಿತ್ರ್ಯೇಽಯುಗ್ಮಾಂಸ್ತಥೈವ ಚ ॥ ೧೦೭ ॥

ಪರಾಶ್ರಿತೇ ಶುಚೌ ದೇಶೇ ದಕ್ಷಿಣಾಪ್ರವಣಂ ತಥಾ ।
ದ್ವೌ ದೈನೇ ಪ್ರಾಕ್ ತ್ರಯಃ ಪಿತ್ರ್ಯೇ ಉದಗೇಕೈಕಮೇವ ಚ ॥ ೧೦೮ ॥

ಮಾತಾಮಹಾನಾಮಪ್ಯೇವಂ ತತ್ರ ವಾ ವೈಶ್ವದೈವಿಕಂ ।
ಪಾಣಿಪ್ರಕ್ಷಾಳನಂ ದತ್ವಾ ವಿಷ್ಟರಾರ್ಥಂ ಕುಶಾನಪಿ ॥ ೧೦೯ ॥

ಆವಾಹಯೇದನುಜ್ಞಾತೋ ವಿಶ್ವೇದೇವಾಸ ಇತ್ಯೃಚಾ ।
ಯವೈರನ್ವಾವಕೀರ್ಯಾಥ ಭಾಜನೇ ಸಪವಿತ್ರಕೇ ॥ ೧೧೦ ॥

---

೧೦೬-೧೦೭. ಆಹೂತರಾದ ಬ್ರಾಹ್ಮಣರೂ ಸಹ ಮನಸ್ಸು, ವಾಕ್ಕು, ಶರೀರ ಇವುಗಳ ವ್ಯಾಪಾರಗಳಲ್ಲಿ ನಿಯಮದಿಂದಿರಬೇಕು. ಶ್ರಾದ್ಧಕರ್ತನು ಅಪರಾಣ್ಣಸಮಯದಲ್ಲಿ ಪವಿತ್ರವನ್ನು ಕೈಯಲ್ಲಿ ಧರಿಸಿ, ಬಂದ ಬ್ರಾಹ್ಮಣರನ್ನು ಸ್ವಾಗತದಿಂದ ಸತ್ಕರಿಸಿ ಉಚಿತವಾದ ಆಸನದಲ್ಲಿ ಕೂಡಿಸಬೇಕು.

೧೦೭-೧೦೮. ತನ್ನ ಶಕ್ತ್ಯನುಸಾರ ಬ್ರಾಹ್ಮಣರನ್ನು ದೇವಾರ್ಥವಾಗಿಯೂ, ವಿಷಮಸಂಖ್ಯಾತರಾದ ಬ್ರಾಹ್ಮಣರನ್ನು ಪಿತ್ರರ್ಥವಾಗಿಯೂ ಆಹ್ವಾನಿಸಿ ದೇವರ ಸಾನ್ನಿಧ್ಯದಲ್ಲಿ ಶುಚಿಯಾದ ಪ್ರದೇಶದಲ್ಲಿ ದಕ್ಷಿಣಾಭಿಮುಖವಾಗಿ ಕುಳಿತು ದೇವಾರ್ಥವಾಗಿ ಇಬ್ಬರನ್ನು ಪೂರ್ವದಿಕ್ಕಿಗಭಿಮುಖವಾಗಿಯೂ, ಪಿತ್ರರ್ಥವಾಗಿ ಒಬ್ಬೊಬ್ಬರಿಗೆ ಒಬ್ಬೊಬ್ಬ ಬ್ರಾಹ್ಮಣರಂತೆ ಉತ್ತರದಿಕ್ಕಿಗಭಿಮುಖವಾಗಿ ಮೂವರು ಬ್ರಾಹ್ಮಣರನ್ನೂ ಕೂಡಿಸಬೇಕು.

೧೦೯-೧೧೦. ಮಾತಾಮಹರಿಗೂ ಸಹ ಇದೇ ರೀತಿಯಾಗಿ ಶ್ರಾದ್ಧಮಾಡಬೇಕು. ಶಾದ್ಧದಲ್ಲಿ ವಿಶ್ವೇಧೇವತೆಗಳಿಗೆ ಹಸ್ತಪ್ರಕ್ಷಾಳನಕ್ಕಾಗಿ ಉದಕವನ್ನೂ ಆಸನಕ್ಕಾಗಿ ದರ್ಭೆಯನ್ನೂ ಕೊಟ್ಟು ಅವರ ಅಪ್ಪಣೆಯನ್ನು ಪಡೆದು "ವಿಶ್ವೇದೇವಾಸ" ಇತ್ಯಾದಿ ಮಂತ್ರದಿಂದ ಅವರನ್ನು ಆ ಬ್ರಾಹ್ಮಣರಲ್ಲಿ ಆವಾಹನೆ ಮಾಡಬೇಕು.

ಶನ್ನೋ ದೇವ್ಯಾ ಅಪಃ ಕ್ಷಿಪ್ತ್ವಾ ಯವೋಽಸೀತಿ ಯವಾಂಸ್ತಥಾ ।
ಯಾ ದಿವ್ಯಾ ಇತಿ ಮಂತ್ರೇಣ ಹಸ್ತೇ ಪಾದ್ಯಂ ವಿನಿಕ್ಷಿಪೇತ್ ॥ ೧೧೧ ॥

ದತ್ತೋದಕಂ ಗಂಧಮಾಲ್ಯಂ ಪ್ರದಾಯಾನ್ನಂ ಸದೀಪಕಂ ।
ಅಪಸವ್ಯಂ ತತಃ ಕೃತ್ವಾ ಪಿತ್ರ್ಯಾಣಾಮಪ್ರದಕ್ಷಿಣಂ ॥ ೧೧೨ ॥

ದ್ವಿಗುಣಾಂಸ್ತು ಕುಶಾನ್ದತ್ವಾ ಹ್ಯುಶಂತಸ್ತ್ವೇತ್ಯೃಚಾ ಪಿತ್ರ್ಯಾನ್ ।
ಆವಾಹ್ಯ ತದನುಜ್ಞಾತೋ ಜಪೇದಾಯಂತು ನಸ್ತತಃ ॥ ೧೧೩ ॥

ಯವಾರ್ಥಾಸ್ತು ತಿಲೈಃ ಕಾರ್ಯಾಃ ಕುರ್ಯಾದರ್ಘ್ಯಾದಿ ಪೂರ್ವವತ್ ।
ದತ್ವಾರ್ಘ್ಯಂ ಸ ಯವಾಂಸ್ತೇಷಾಂ ಪಾತ್ರೇ ಕೃತ್ವಾ ವಿಧಾನತಃ ॥ ೧೧೪ ॥

ಪಿತೃಭ್ಯಃ ಸ್ಥಾನಮಸೀತಿ ನ್ಯುಬ್ಜಂ ಪಾತ್ರಂ ಕರೋತ್ಯಧಃ ।
ಅಗ್ನೌ ಕರಿಷ್ಯನ್ನಾದಾಯ ಪೃಚ್ಛತ್ಯನ್ನಂ ಪೃಥಕ್ಕ ತತ್ ॥ ೧೧೫ ॥

---

೧೧೦-೧೧೧. ತರುವಾಯ ಯವಾಕ್ಷತೆಯನ್ನು ಹರಡಿ ಅದರಮೇಲೆ ಪವಿತ್ರಸಹಿತವಾಗಿ ಪಾತ್ರೆಯನ್ನಿಟ್ಟು, ಆದರಲ್ಲಿ 'ಶನ್ನೋದೇವಿ' ಎಂಬ ಮಂತ್ರ ದಿಂದ ನೀರುಹಾಕಿ, 'ಯವೋಸಿ' ಎಂಬ ಮಂತ್ರದಿಂದ ಯವಗಳನ್ನೂ ಹಾಕಿ 'ಯಾದಿವ್ಯಾ' ಎಂಬ ಮಂತ್ರದಿಂದ ಕೈಯಲ್ಲಿ ನೀರನ್ನು ಹಾಕಬೇಕು.

೧೧೨-೧೧೩. ನೀರು, ಗಂಧ, ಮಾಲಿಕೆ ಇವುಗಳನ್ನು ಕೊಟ್ಟು, ದೀಪ ಸಹಿತವಾಗಿ ಅನ್ನವನ್ನು ಕೊಡಬೇಕು. ಅನಂತರ ಯಜ್ಞೋಪವೀತವನ್ನು ಎಡಕ್ಕೆ ಹಾಕಿಕೊಂಡು ಪಿತೃಗಳಿಗೆ ಅಪ್ರದಕ್ಷಿಣವಾಗಿ ಪರಿಷೇಚನೆಮಾಡಿ, ವಿಶ್ವೇ ದೇವತೆಗಳಿಗೆ ಕೊಟ್ಟ ದರ್ಭೆಯ ಎರಡರಷ್ಟು ದರ್ಭೆಯನ್ನು ಪಿತೃಗಳಿಗೆ ಕೊಟ್ಟು "ಉಶಂತಸ್ತ್ವಾ" ಇತ್ಯಾದಿ ಮಂತ್ರದಿಂದ ಪಿತೃಗಳನ್ನು ಆಹಾಹನೆಮಾಡಿ ಅವರಿಂದ ಆಜ್ಞಪ್ತನಾಗಿ 'ಆಯಂತು ನಃ' ಇತ್ಯಾದಿ ಮಂತ್ರವನ್ನು ಜಪಿಸಬೇಕು.

೧೧೪. ಯವಕ್ಕೆ ಬದಲಾಗಿ ಎಳ್ಳನ್ನು ತೆಗೆದುಕೊಂಡು ಪೂರ್ವದಂತೆ ಅರ್ಘ್ಯಾದಿಗಳನ್ನರ್ಪಿಸಬೇಕು. ಅರ್ಘ್ಯ ಕೊಟ್ಟಮೇಲೆ ವಿಧಾನೋಕ್ತಪ್ರಕಾರ ವಾಗಿ ಪಿತೃಗಳಿಗೆ ಎರಡು ಪಾತ್ರೆಗಳನ್ನು ತಲೆಕೆಳಗೆ ಸ್ಥಾಪಿಸಬೇಕು.

೧೧೫-೧೧೬. "ಪಿತೃಭ್ಯಃ ಸ್ಥಾನಮಸಿ" ಎಂಬ ಮಂತ್ರದಿಂದ ಅದನ್ನು ಸರಿಮಾಡಿ ಅದರಲ್ಲಿ ಅನ್ನವನ್ನು ಹಾಕಿ ಪ್ರತ್ಯೇಕವಾಗಿ ಅದನ್ನು ತೆಗೆದುಕೊಂಡು

ಕುರುಷ್ವೇತ್ಯಭ್ಯನುಜ್ಞಾತೋ ದತ್ವಾಗ್ನೌ ಪಿತೃಯಜ್ಞವತ್ ।
ಹುತಶೇಷಂ ಪ್ರದದ್ಯಾತ್ತು ಭಾಜನೇಷು ಸಮಾಹಿತಃ ॥ ೧೧೬ ॥

ಯಥಾಲಾಭೋಪಪನ್ನೇಷು ರೌಪ್ಯೇಷು ಚ ವಿಶೇಷತಃ ।
ದತ್ವಾನ್ನಂ ಪೃಥಿವೀ ಪಾತ್ರಮಿತಿ ಪಾತ್ರಾಭಿಮಂತ್ರಣಂ ॥ ೧೧೭ ॥

ಕೃತ್ವೇದಂ ವಿಷ್ಣುರಿತ್ಯನ್ನೇ ದ್ವಿಜಾಂಗುಷ್ಠಂ ನಿವೇಶಯೇತ್ ।
ಸವ್ಯಾಹೃತಿಕಾಂ ಗಾಯತ್ರೀಂ ಮಧುವಾತಾ ಇತಿ ಋಚಂ ॥ ೧೧೮ ॥

ಜಪ್ತ್ವಾ ಯಥಾಸುಖಂ ವಾಚ್ಯಂ ಭುಂಜೀರಂಸ್ತೇಪಿ ವಾಗ್ಯತಾಃ ।
ಅನ್ನಮಿಷ್ಟಂ ಹವಿಷ್ಯಂ ಚ ದದ್ಯಾದಕ್ರೋಧನೋಽತ್ವರಃ ॥ ೧೧೯ ॥

ಆತೃಪ್ತೇಸ್ತು ಪವಿತ್ರಾಣಿ ಜಪ್ತ್ವಾ ಪೂರ್ವಜಪಂ ತಥಾ ।
ಅನ್ನಮಾದಾಯ ತೃಪ್ತಾಃ ಸ್ಥ ಶೇಷಂ ಚೈವಾನುಮಾನ್ಯ ಚ ॥ ೧೨೦ ॥

---

ಅಗ್ನೌ ಕರಣಕ್ಕೆ ಅಪ್ಪಣೆಯನ್ನು ಪ್ರಾರ್ಥಿಸಿ ಮಾಡು ಎಂಬುದಾಗಿ ಆಜ್ಞಪ್ತನಾಗಿ ಪಿತೃಯಜ್ಞದಂತೆ ಅಗ್ನಿಯಲ್ಲಿ ಹೋಮಮಾಡಿ, ಉಳಿದ ಅನ್ನವನ್ನು ಸಮಾಧಾನ ಚಿತ್ತದಿಂದ ಎಲೆಗಳಲ್ಲಿ ಬಡಿಸಬೇಕು.

೧೧೭-೧೧೮. ತನ್ನ ಶಕ್ತ್ಯನುಸಾರ ಲಭಿಸಿದ ರಜತಮಯಪಾತ್ರೆಗಳಲ್ಲಿ ವಿಶೇಷವಾಗಿ ಅನ್ನಪ್ರದಾನಮಾಡಿ 'ಪೃಥಿವೀ ಪಾತ್ರಂ' ಎಂಬ ಮಂತ್ರದಿಂದ ಪಾತ್ರವನ್ನಭಿಮಂತ್ರಿಸಿ 'ಇದಂ ವಿಷ್ಣುಃ' ಎಂಬ ಮಂತ್ರದಿಂದ ಅನ್ನದಲ್ಲಿ ಬ್ರಾಹ್ಮಣನ ಹೆಬ್ಬೆಟ್ಟನ್ನಿಡಿಸಬೇಕು.

೧೧೮-೧೧೯. ವ್ಯಾಹೃತಿಮಂತ್ರಸಹಿತವಾದ ಗಾಯತ್ರೀಮಂತ್ರ ಮತ್ತು 'ಮಧುವಾತಾ' ಎಂಬ ಮಂತ್ರ ಇವುಗಳನ್ನು ಜಪಿಸಿ ಬ್ರಾಹ್ಮಣರ ಎದುರಿಗೆ ನಿಂತು ಸಾವಧಾನವಾಗಿ ಭೋಜನಮಾಡಬೇಕೆಂದು ಹೇಳಬೇಕು. ಅವರೂ ಸಹ ಸಾವಧಾನವಾಗಿ ಬೋಜನಮಾಡಬೇಕು. ಕೋಪಗೊಳ್ಳದೇ ಸಾವಕಾಶವಾಗಿ ಬ್ರಾಹ್ಮಣರಿಗೆ ತೃಪ್ತಿಯಾಗುವವರೆಗೂ ಅವರಿಗೆ ಇಷ್ಟವಾದ ಅನ್ನ ತುಪ್ಪ ಮುಂತಾದ ಪರಿಶುದ್ಧಪದಾರ್ಥಗಳನ್ನು ಬಡಿಸಬೇಕು.

೧೨೦-೧೨೧. ಭೋಜನಸಮಯದಲ್ಲಿ ಹಿಂದಿನಮಂತ್ರಗಳನ್ನು ಜಪಿಸಿ ಹೋಮಮಾಡಿ ಉಳಿದಿದ್ದ ಅನ್ನವನ್ನು ತೆಗೆದುಕೊಂಡು 'ತೃಪ್ತಾಃಸ್ಥಃ' ಎಂದು

ತದನ್ನಂ ವಿಕಿರೇದ್ಭೂಮೌ ದದ್ಯಾಚ್ಚಾಪಃ ಸಕೃತ್ಸಕೃತ್ ।
ಸರ್ವಮನ್ನಮುಪಾದಾಯ ಸತಿಲಂ ದಕ್ಷಿಣಾಮುಖಃ ॥ ೧೨೧ ॥

ಉಚ್ಛಿಷ್ಟಸನ್ನಿಧೌ ಪಿಂಡಾನ್ದದ್ಯಾದ್ವೈ ಪಿತೃಯಜ್ಞವತ್ ।
ಮಾತಾಮಹಾನಾಮಪ್ಯೇವಂ ದದ್ಯಾದಾಚಮನಂ ತತಃ ॥ ೧೨೨ ॥

ಸ್ವಸ್ತಿ ವಾಚಂ ತತಃ ಕುರ್ಯಾದಕ್ಷಯ್ಯೋದಕಮೇವ ಚ ।
ದತ್ವಾ ಚ ದಕ್ಷಿಣಾಂ ಶಕ್ತ್ಯಾ ಸ್ವಧಾಕಾರಮುದೀರಯೇತ್ ॥ ೧೨೩ ॥

ವಾಚ್ಯತಾ ಮಿತ್ಯನುಜ್ಞಾತಃ ಪ್ರಕೃತೇಭ್ಯಃ ಸ್ವಧೋಚ್ಯತಾಂ ।
ವಿಪ್ರೈರಸ್ತುಸ್ವಧೇತ್ಯುಕ್ತೇ ಭೂಮೌ ಸಿಂಚೇತ್ತತೋ ಜಲಂ ॥ ೧೨೪ ॥

---

ಹೇಳುತ್ತಾ ಬ್ರಾಹ್ಮಣರ ಎಲೆಯಲ್ಲಿ ಸ್ವಲ್ಪ ಅನ್ನವನ್ನು ಹಾಕಿ ಉಳಿದ ಅನ್ನಕ್ಕೆಲ್ಲಾ ನೀರು ಎಳ್ಳು ಇವುಗಳನ್ನು ಸೇರಿಸಿ ದಕ್ಷಿಣದಿಕ್ಕಿಗೆದುರಾಗಿ ಕುಳಿತು ಅದನ್ನು ಭೋಜನ ಪಾತ್ರೆಯ ಸುತ್ತಲೂ ನೆಲದ ಮೇಲೆ ಚೆಲ್ಲಬೇಕು.

೧೨೨. ಬ್ರಾಹ್ಮಣರು ಊಟಮಾಡಿದ ಎಲೆಯ ಸಮೀಪದಲ್ಲಿ ಪಿತೃಯಜ್ಞದಂತೆ ಪಿಂಡಪ್ರದಾನಮಾಡಬೇಕು. ಮಾತಾಮಹರಿಗೂ ಸಹ ಇದೇ ರೀತಿಯಾಗಿ ಶ್ರಾದ್ಧಮಾಡಬೇಕು. ತರುವಾಯ ಬ್ರಾಹ್ಮಣರಿಗೆ ಆಚಮನಕ್ಕಾಗಿ ನೀರನ್ನು ಕೊಡಬೇಕು.

೧೨೩. ಅನಂತರ ಸ್ವಸ್ತಿವಾಚನೆ ಮಾಡಿ ಅಕ್ಷಯ್ಯೋದಕವನ್ನು ಬಿಟ್ಟು ಶಕ್ತ್ಯನುಸಾರವಾಗಿ ದಕ್ಷಿಣೆಯನ್ನು ಕೊಟ್ಟು 'ಸ್ವಧಾ' ಎಂಬುದಾಗಿ ಹೇಳಬೇಕು.

೧೨೪. ಹೇಳು ಎಂಬುದಾಗಿ ಬ್ರಾಹ್ಮಣರಿಂದ ಅಪ್ಪಣೆಯನ್ನು ಪಡೆದು ಶ್ರಾದ್ಧಕರ್ತನು ಪ್ರಸಕ್ತರಾದ ಪಿತೃಗಳನ್ನುದ್ದೇಶಿಸಿ 'ಸ್ವಧಾ' ಎಂದು ಹೇಳಬೇಕೆಂಬುದಾಗಿ ಪ್ರಾರ್ಥಿಸಬೇಕು. ಅನಂತರ ಪಿತೃಸ್ಥಾನೀಯರಾದ ಬ್ರಾಹ್ಮಣರು 'ಅಸ್ತು ಸ್ವಧಾ' ಎಂದು ಹೇಳುವರು. ಆಗ ಕರ್ತನು ಪಿಂಡದ ಸಮೀಪಪ್ರದೇಶದಲ್ಲಿ ನೀರನ್ನು ಹಾಕಬೇಕು.

ವಿಶ್ವೇದೇವಾಶ್ಚ ಪ್ರೀಯಂತಾಂ ವಿಪ್ರೈಶ್ಚೋಕ್ತ ಇದಂ ಜಪೇತ್ ।
ದಾತಾರೋ ನೋಽಭಿವರ್ಧಂತಾಂ ವೇದಾಸ್ಸಂತತಿರೇವ ಚ ॥ ೧೨೫ ॥

ಶ್ರದ್ಧಾ ಚ ನೋ ಮಾವ್ಯಗಮದ್ಬಹುದೇಯಂ ಚ ನೋಽಸ್ತ್ವಿತಿ ।
ಉಕ್ತ್ವಾ ಚೈವ ಪ್ರಿಯಾಂ ವಾಚಂ ಪ್ರಣಿಪತ್ಯ ವಿಸರ್ಜಯೇತ್ ॥ ೧೨೬ ॥

ವಾಜೇ ವಾಜೇ ಇತಿ ಪ್ರೋಚ್ಯ ಪಿತೃಪೂರ್ವಂ ವಿಸರ್ಜಯೇತ್ ।
ಯಸ್ಮಿಂ ಸ್ತೇ ಸಂಸ್ರವಾಃ ಪೂರ್ವಮರ್ಘ್ಯಪಾತ್ರೇ ನಿವೇಶಿತಾಃ ॥ ೧೨೭ ॥

ಪಿತೃಪಾತ್ರಂ ತದುತ್ತಾನಂ ಕೃತ್ವಾ ವಿಪ್ರಾನ್ವಿಸರ್ಜಯೇತ್ ।
ಪ್ರದಕ್ಷಿಣಾಮನುವ್ರಜ್ಯ ಭುಂಜೀತ ಪಿತೃಸೇವಿತಂ ॥ ೧೨೮ ॥

ಬ್ರಹ್ಮಚಾರೀ ಭವೇತ್ತಾಂ ತು ರಜನೀಂ ಬ್ರಾಹ್ಮಣೈಃ ಸಹ ।
ಏವಂ ಪ್ರದಕ್ಷಿಣಾವೃತ್ಕೋ ವೃದ್ಧೌ ನಾಂದೀಮುಖಾನ್ಪಿತ್ರ್ಯಾನ್ ॥ ೧೨೯ ॥

---

೧೨೫-೧೨೬. ಕರ್ತನು 'ವಿಶ್ವೇದೇವಾಃ ಪ್ರೀಯಂತಾಂ' ಎಂಬುದಾಗಿ ವಿಶ್ವೇದೇವತೆಗಳ ಪ್ರೀತಿಯನ್ನು ಸಂಪ್ರಾರ್ಥಿಸಿದ ಮೇಲೆ ವಿಶ್ವೇದೇವಸ್ಥಾನದಲ್ಲಿ ಆವಾಹಿತರಾದ ಬ್ರಾಹ್ಮಣರು 'ಪ್ರೀಯಂತಾಂ ವಿಶ್ವೇದೇವಾಃ' ಎಂಬುದಾಗಿ ಹೇಳುವರು. ಆಗ ಮುಂದಿನ ಮಂತ್ರವನ್ನು ಕರ್ತನು ಜಪಿಸಬೇಕು. 'ನಮಗೆ ದಾತೃಗಳು, ವೇದ, ಸಂತಾನ ಇವುಗಳು ಅಭಿವೃದ್ಧವಾಗಲಿ, ಶ್ರದ್ಧೆಯು ನಮ್ಮನ್ನು ಬಿಡದೆ ನಮ್ಮಲ್ಲಿ ನೆಲಸಲಿ. ದಾನಾರ್ಹವಸ್ತುಗಳು ನಮಗೆ ಸಮೃದ್ಧಿಯಾಗಿ ದೊರಕಲಿ' ಎಂಬುದಾಗಿ ಪ್ರಿಯನುಡಿಯನ್ನು ಹೇಳಿ ನಮಸ್ಕರಿಸಿ ವಿಸರ್ಜನೆ ಮಾಡಬೇಕು.

೧೨೭-೧೨೮. 'ವಾಜೇ ವಾಜೇ' ಎಂಬ ಮಂತ್ರವನ್ನು ಹೇಳಿ ಮೊದಲು ಪಿತೃಗಳನ್ನೂ ಅನಂತರ ವಿಶ್ವೇದೇವತೆಗಳನ್ನೂ ವಿಸರ್ಜಿಸಬೇಕು. ಹಿಂದೆ ಬ್ರಾಹ್ಮಣ ಹಸ್ತದಿಂದ ಬಿಡಲ್ಪಟ್ಟ ಅರ್ಘ್ಯೋದಕವನ್ನು ಸಂಗ್ರಹಿಸಿಟ್ಟಿದ್ದ ಪಿತೃಗಳ ಅರ್ಘ್ಯಪಾತ್ರೆಯನ್ನು ಎತ್ತಿ ಪ್ರದಕ್ಷಿಣೆಮಾಡಿ ಬ್ರಾಹ್ಮಣರನ್ನು ವಿಸರ್ಜನೆ ಮಾಡಬೇಕು- ಅನಂತರ ಪಿತೃಶೇಷವನ್ನು ಭೋಜನಮಾಡಬೇಕು.

೧೨೯. ಆದಿನ ರಾತ್ರಿ ಶ್ರಾದ್ಧಕರ್ತನು, ಬ್ರಾಹ್ಮಣರೂ ಸಹ ಬ್ರಹ್ಮಚರ್ಯದಿಂದಿರಬೇಕು. ವೃದ್ಧಿಯಲ್ಲಿ (ವಿವಾಹಾದಿಗಳಲ್ಲಿ) ಯೂ ಸಹ ಇದೇ ರೀತಿಯಾಗಿ ಪ್ರದಕ್ಷಿಣಾದಿಕ್ರಮದಿಂದ ನಾಂಧೀಮುಖರಾದ ಪಿತೃಗಳನ್ನು ಆವಾಹನಾದಿಗಳಿಂದ ಅರ್ಚಿಸಬೇಕು

ಯುಜೇತ ದಧಿ ಕರ್ಕಂಧೂ ವಿಶ್ರಾನ್ಪಿಂಡಾನ್ಯವೈಃ ಕ್ರಿಯಾಃ ।
ಏಕೋದ್ದಿಷ್ಟಂ ದೇವಹೀನಮೇಕಾರ್ಘ್ಯೈಕಪವಿತ್ರಕಂ ॥ ೧೩೦ ॥

ಆವಾಹನಾಗ್ನೌಕರಣರಹಿತಂ ಹ್ಯಪಸವ್ಯವತ್ ।
ಉಪತಿಷ್ಠತಾಮಕ್ಷಯ್ಯಸ್ಥಾನೇ ವಿಪ್ರವಿಸರ್ಜನೇ ॥ ೧೩೧ ॥

ಅಭಿರಮ್ಯತಾಮಿತಿವದೇದ್ಬ್ರೂಯುಸ್ತೇಽಭಿರತಾಃ ಸ್ಮ ಹ ।
ಗಂಧೋದಕಂ ತಿಲೈರ್ಯುಕ್ತಂ ಕುರ್ಯಾತ್ಪಾತ್ರ ಚತುಷ್ಟಯಂ ॥ ೧೩೨ ॥

ಅರ್ಘ್ಯಾರ್ಥಂ ಪಿತೃಪಾತ್ರೇಷು ಪ್ರೇತಪಾತ್ರಂ ಪ್ರಸೇಚಯೇತ್ ।
ಯೇ ಸಮಾನಾ ಇತಿ ದ್ವಾಭ್ಯಾಂ ಶೇಷಂ ಪೂರ್ವವದಾಚರೇತ್ ॥ ೧೩೩ ॥

ಏತತ್ಸಪಿಂಡೀಕರಣಮೇಕೋದ್ದಿಷ್ಟಂ ಸ್ತ್ರಿಯಾ ಅಪಿ ।
ಅರ್ವಾಕ್ಸಪಿಂಡಕರಣಂ ಯಸ್ಯ ಸಂವತ್ಸರಾದ್ಭವೇತ್ ॥ ೧೩೪ ॥

---

೧೩೦-೧೩೧. ಏಕೋದ್ದಿಷ್ಟವಿಧಾನದಲ್ಲಿ ಮೊಸರು, ಬೋರೇಹಣ್ಣು, ಯವ ಇವುಗಳಿಂದ ಸಹಿತವಾದ ಶಾಲ್ಯನ್ನದಿಂದ ಪಿಂಡಗಳನ್ನು ಮಾಡಬೇಕು. ಏಕೋದ್ದಿಷ್ಟವಿಧಾನದಲ್ಲಿ ವಿಶ್ವೇದೇವತೆಗಳು, ಆವಾಹನೆ, ಅಗ್ನೌಕರಣಗಳಿಲ್ಲ. ಒಬ್ಬನೇ ಬ್ರಾಹ್ಮಣನು, ಒಂದೇ ದರ್ಭೆಯಿಂದ ನಿರ್ಮಿತವಾದ ಪವಿತ್ರ ಎಲ್ಲವನ್ನೂ ಅಪಸವ್ಯವಾಗಿಯೇ ಮಾಡಬೇಕು.

೧೩೧-೧೩೨. ಅಕ್ಷಯ್ಯಸ್ಥಾನದಲ್ಲಿ 'ಉಪತಿಷ್ಠತಾಂ' ಎಂದೂ ವಿಸರ್ಜನೆ ಮಾಡುವಾಗ 'ಅಭಿರಮ್ಯತಾಂ' ಎಂದೂ ಹೇಳಹೇಕು. ಬ್ರಾಹ್ಮಣರೂ ಸಹ 'ಅಭಿರತಾಃ ಸ್ಮಃ' ಎಂದೂ ಹೇಳಬೇಕು. ಎಳ್ಳಿನಿಂದ ಮಿಶ್ರಿತವಾದ ಗಂಧೋದಕವನ್ನು ಅರ್ಘ್ಯಪ್ರದಾನಕ್ಕಾಗಿ ನಾಲ್ಕು ಪಾತ್ರೆಗಳನ್ನೂ ರಚಿಸಬೇಕು.

೧೩೩. 'ಯೇಸಮಾನಾ' ಎಂಬ ಎರಡು ಮಂತ್ರಗಳಿಂದ ಪಿತೃಪಾತ್ರೆಗಳಲ್ಲಿ ಪ್ರೇತಪಾತ್ರೋದಕವನ್ನು ಹಾಕಬೇಕು. ಉಳಿದ ಕ್ರಿಯಾಕಲಾಪವನ್ನು ಪೂರ್ವದಂತೆ ಆಚರಿಸಬೇಕು.

೧೩೪-೧೩೬. ಈ ಏಕೋದ್ದಿಷ್ಟಶ್ರಾದ್ಧವು ಸಪಿಂಡೀಕರಣದವರೆಗೆ ಸ್ತ್ರೀಯರಿಗೂ ಕರ್ತವ್ಯವು. ಮೃತನಾದಮೇಲೆ ಒಂದು ವರ್ಷಕ್ಕಿಂತ ಮುಂಚೆಯೇ

ತಸ್ಯಾಪ್ಯನ್ನಂ ಸೋದಕುಂಭಂ ದದ್ಯಾತ್ಸಂವತ್ಸರಂ ದ್ವಿಜೇ ।
ಮೃತೇಽಹನಿ ತು ಕರ್ತವ್ಯಂ ಪ್ರತಿಮಾಸಂ ತು ವತ್ಸರಂ ॥ ೧೩೫ ॥

ಪ್ರತಿಸಂವತ್ಸರಂ ಚೈವಮಾದ್ಯಮೇಕಾದಶೇಽಹನಿ ।
ಪಿಂಡಾಂಶ್ಚ ಗೋಽಜವಿಪ್ರೇಭ್ಯೋ ದದ್ಯಾದಗ್ನೌ ಜಲೇಪಿ ವಾ ॥ ೧೩೬ ॥

ಪ್ರಕ್ಷಿಪೇತ್ಸತ್ಸು ವಿಪ್ರೇಷು ದ್ವಿಜೋಚ್ಛಿಷ್ಟಂ ನ ಮಾರ್ಜಯೇತ್ ।
ಹವಿಷ್ಯಾನ್ನೇನ ವೈ ಮಾಸಂ ಪಾಯಸೇನ ತು ವತ್ಸರಂ ॥ ೧೩೭ ॥

ಮತ್ಸ್ಯಹಾರಿಣಕೌರಭ್ರಶಾಕುನಛಾಗಪಾರ್ಷತೈಃ ।
ಐಣತಾರವವಾರಾಹಶಾಶೈರ್ಮಾಂಸೈರ್ಯಥಾಕ್ರಮಂ ॥ ೧೩೮ ॥

ಮಾಸಾನ್ ಶ್ರಾದ್ಧೇಷು ತೃಪ್ಯಂತಿ ದತ್ತೈರಿಹ ಪಿತಾಮಹಾಃ ।
ಖಡ್ಗಾಮಿಷಂ ಮಹಾಶಲ್ಕಂ ಮಧುಮುನ್ಯನ್ನಮೇವ ಚ ॥ ೧೩೯ ॥

---

ಸಪಿಂಡೀಕರಣವನ್ನು ಮಾಡಿದರೆ ಅಂತಹವನಿಗೂ ಸಹ ವರ್ಷವಾಗುವವರೆಗೂ ಪ್ರತಿತಿಂಗಳೂ, ಅನಂತರ ಪ್ರತಿ ವರ್ಷವೂ ಮೃತತಿಥಿಯಲ್ಲಿ ಶ್ರಾದ್ಧಮಾಡಿ ಬ್ರಾಹ್ಮಣರಿಗೆ ಉದಕುಂಭಸಹಿತವಾಗಿ ಅನ್ನದಾನ ಮಾಡಬೇಕು. ಹನ್ನೊಂದನೆಯ ದಿವಸ ಮೊದಲನೆಯದಾಗಿ ಇಂತಹ ಶಾದ್ಧವನ್ನು ಮಾಡಬೇಕು.

೧೩೬. ಶ್ರಾದ್ಧವಿಸರ್ಜನೆ ಮಾಡಿದಮೇಲೆ ಪಿಂಡಗಳನ್ನು ಗೋವು ಅಥವಾ ಆಡು ಅಥವಾ ಬ್ರಾಹ್ಮಣರು ಇವರಿಗೆ ಕೊಡಬೇಕು, ಅಥವಾ ಅಗ್ನಿ ಇಲ್ಲವೇ ಜಲ ಇವುಗಳಲ್ಲಿ ಹಾಕಬೇಕು.

೧೩೭. ಬ್ರಾಹ್ಮಣರನ್ನು ವಿಸರ್ಜನೆಮಾಡುವುದಕ್ಕಿಂತ ಮುಂಚೆ ಬ್ರಾಹ್ಮಣರ ಎಂಜಲನ್ನು ಶುದ್ಧಿಮಾಡಬಾರದು. ಶ್ರಾದ್ಧದಲ್ಲಿ ದತ್ತವಾದ ಮೊಸರು ಹಾಲು, ಹಸುವಿನ ತುಪ್ಪ ಮುಂತಾದ ಹವಿಷ್ಯಾನ್ನದಿಂದ ಒಂದು ತಿಂಗಳೂ, ಪಾಯಸದಿಂದ ಒಂದು ವರ್ಷಪರ್ಯಂತವೂ ಪಿತೃಗಳು ತೃಪ್ತರಾಗುವರು.

೧೩೮-೧೪೦. ಶ್ರಾದ್ಧದಲ್ಲಿ ದತ್ತವಾದ ಮೀನಿನ ಮಾಂಸದಿಂದ ಎರಡು ತಿಂಗಳೂ, ಹೆಣ್ಣುಜಿಂಕೆಯ ಮಾಂಸದಿಂದ ಮೂರುತಿಂಗಳೂ, ಆಡಿನಮಾಂಸದಿಂದ ನಾಲ್ಕು ತಿಂಗಳೂ, ಪಕ್ಷಿಮಾಂಸದಿಂದ ಐದುತಿಂಗಳೂ, ಮೇಕೆಯಮಾಂಸ

**ಲೋಹಾಮಿಷಂ ಮಹಾಶಾಕಂ ಮಾಂಸಂ *ವಾರ್ಧ್ರಾಣಸಸ್ಯ ಚ ।**
**ಯೋ ದದಾತಿ ಗಯಾಸ್ಥಾಯ ಸರ್ವಮಾನಂತ್ಯಮಶ್ನುತೇ　　॥ ೧೪೦ ॥**

**ತಥಾ ವರ್ಷಾತ್ರಯೋದಶ್ಯಾಮಘಾಸು ಚ ವಿಶೇಷತಃ ।**
**ಕನ್ಯಾಂ ಕನ್ಯಾವೇದಿನಶ್ಚ ಪಶೂನ್ವೈ ಸತ್ಸುತಾನಪಿ　　॥ ೧೪೧ ॥**

**ದ್ಯೂತಂ ಕೃಷಿಂ ಚ ವಾಣಿಜ್ಯಂ ದ್ವಿಶಫೈಕಶಫಾಂಸ್ತಥಾ ।**
**ಬ್ರಹ್ಮವರ್ಚಸ್ವಿನಃ ಪುತ್ರಾನ್ಸ್ವರ್ಣರೂಪ್ಯೇ ಸಕುಪ್ಯಕಂ　　॥ ೧೪೨ ॥**

---

ದಿಂದ ಆರು ತಿಂಗಳೂ, ಚಿತ್ರಮೃಗಮಾಂಸದಿಂದ ಏಳು ತಿಂಗಳೂ, ಜಿಂಕೆಯ ಮಾಂಸದಿಂದ ಎಂಟು ತಿಂಗಳೂ, ಕೃಷ್ಣಸಾರಮೃಗದ ಮಾಂಸದಿಂದ ಒಂಭತ್ತು ತಿಂಗಳೂ, ಹಂದಿಯ ಮಾಂಸದಿಂದ ಹತ್ತು ತಿಂಗಳೂ, ಮೊಲದ ಮಾಂಸದಿಂದ ಹನ್ನೊಂದು ತಿಂಗಳೂ ಪಿತೃಗಳು ತೃಪ್ತರಾಗುವರು. ಖಡ್ಗಮೃಗಮಾಂಸ, ಹಿಂಭಾಗದಲ್ಲಿ ದೊಡ್ಡದಾದ ಕಪ್ಪೆಚಿಪ್ಪಿನಂತಿರುವ ಮೂಳೆಯಿಂದ ಕೂಡಿದ ಮೀನಿನ ಮಾಂಸ, ಜೇನುತುಪ್ಪ, ಏಳು ವಿಧವಾದ ಅನ್ನ, ಕೆಂಪು ಮೇಕೆಯ ಮಾಂಸ, ಮಹಾಶಾಕ ಮತ್ತು *ವಾರ್ಧ್ರಾಣಸವೆಂಬ ಪಕ್ಷಿಯ ಮಾಂಸ ಇವುಗಳನ್ನು ಶ್ರಾದ್ಧದಲ್ಲಿ ದಾನಮಾಡಿದರೆ ಹಾಗೂ ಗಯಾಕ್ಷೇತ್ರವಾಸಿಗೆ ಯಾವುದನ್ನು ಕೊಟ್ಟರೂ ಅನಂತಫಲಪ್ರದವಾಗುವುವು.

೧೪೧-೧೪೩. ಭಾದ್ರಪದ ಕೃಷ್ಣಪಕ್ಷದ ಪಾಡ್ಯಾದಿಯಾದ ತಿಥಿಗಳಲ್ಲಿ ಚತುರ್ದಶಿಯೊಂದನ್ನು ಬಿಟ್ಟು ಉಳಿದ ದಿನಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಮಖ ನಕ್ಷತ್ರಯುಕ್ತವಾದ ತ್ರಯೋದಶೀದಿನದಲ್ಲಿ ಶ್ರಾದ್ಧಮಾಡುವವನು ಕನ್ಯಾಪೇಕ್ಷಿಯಾಗಿದ್ದರೆ ಕನ್ಯೆ, ಪಶು, ಒಳ್ಳೆಯ ಮಕ್ಕಳು, ಜೂಜಿನಲ್ಲಿ ಜಯ,

---

*ಕೃಷ್ಣಗ್ರೀವೋ ರಕ್ತಶಿರಾಃ ಶ್ವೇತಪಕ್ಷೋ ವಿಹಂಗಮಃ । ಸ ವೈ ವಾರ್ಧ್ರಾಣಸಃ ಪ್ರೋಕ್ತ ಇತ್ಯೇಷಾ ವೈದಿಕೀ ಶ್ರುತಿಃ ॥ ಸ್ಮೃತಿಚಂದ್ರಿಕೆಯ ಶ್ರಾದ್ಧಕಾಂಡ 257ನೆಯ ಪುಟದಲ್ಲಿ ಉದಾಹೃತವಾದ ವಿಷ್ಣುಧರ್ಮೋತ್ತರವಚನದಿಂದ ಕಪ್ಪು ಕುತ್ತಿಗೆ, ಕೆಂಬಣ್ಣದ ಶಿರಸ್ಸು ಮತ್ತು ಬಿಳಿಯರೆಕ್ಕೆ ಇವುಗಳುಳ್ಳ ಪಕ್ಷಿಯು ವಾರ್ಧ್ರಾಣಸ ಪದಾರ್ಥವೆಂದು ತಿಳಿಯಬರುತ್ತದೆ.

**ಜಾತಿಶ್ರೈಷ್ಠ್ಯಂ ಸರ್ವಕಾಮಾನಾಪ್ನೋತಿ ಶ್ರಾದ್ಧದಃ ಸದಾ ।**
**ಪ್ರತಿಪತ್ಪ್ರಭೃತಿಷ್ವೇಕಾಂ ವರ್ಜಯಿತ್ವಾ ಚತುರ್ದಶೀಂ ॥ ೧೪೩ ॥**

**ಶಸ್ತ್ರೇಣ ತು ಹತಾ ಯೇ ವೈ ತೇಭ್ಯಸ್ತತ್ರ ಪ್ರದೀಯತೇ ।**
**ಸ್ವರ್ಗಂ ಹ್ಯಪತ್ಯಮೋಜಶ್ಚ ಶೌರ್ಯಂ ಕ್ಷೇತ್ರಂ ಬಲಂ ತಥಾ ॥ ೧೪೪ ॥**

**ಪುತ್ರಾನ್ಶ್ರೈಷ್ಠ್ಯಂಶ್ಚ ಸೌಭಾಗ್ಯಂ ಸಮೃದ್ಧಿಂ ಮುಖ್ಯತಾಂ ಶುಭಂ ।**
**ಪ್ರವೃತ್ತಂ ಚ ಕ್ರತೂಂಶ್ಚೈವ ವಾಣಿಜ್ಯಪ್ರಭೃತೀನಿ ಚ ॥ ೧೪೫ ॥**

**ಅರೋಗಿತ್ವಂ ಯಶೋ ವೀತಶೋಕತಾಂ ಪರಮಾಂ ಗತಿಂ ।**
**ಧನಂ ವಿದ್ಯಾಂ ಭಿಷಕ್ಸಿದ್ಧಿಂ ಕುಪ್ಯಂಗಾ ಅಪ್ಯಜಾವಿಕಂ ॥ ೧೪೬ ॥**

**ಅಶ್ವಾನಾಯುಶ್ಚ ವಿಧಿವದ್ಯಃ ಶ್ರಾದ್ಧಂ ಸಂಪ್ರಯಚ್ಛತಿ ।**
**ಕೃತ್ತಿಕಾದಿ ಭರಣ್ಯಂತಂ ಸಕಾಮಾನಾಪ್ನುಯಾದಿಮಾನ್ ॥ ೧೪೭ ॥**

**ಆಸ್ತಿಕಃ ಶ್ರದ್ದಧಾನಶ್ಚ ವ್ಯಪೇತಮದಮತ್ಸರಃ ।**
**ವಸುರುದ್ರಾದಿತಿಸುತಾಃ ಪಿತರಃ ಶ್ರಾದ್ಧದೇವತಾಃ ॥ ೧೪೮ ॥**

---

ವ್ಯವಸಾಯದಲ್ಲಿ ಒಳ್ಳೆಯ ಫಸಲು, ವ್ಯಾಪಾರದಲ್ಲಿ ಲಾಭ, ಒಂದು ಗೊರಸು ಮತ್ತು ಎರಡು ಗೊರಸಿರುವ ಪ್ರಾಣಿಗಳು, ಬ್ರಹ್ಮತೇಜಸ್ಸಿರುವ ಮಕ್ಕಳು, ಸುವರ್ಣ, ರಜತ, ತಾಮ್ರಾದಿಗಳು ಮತ್ತು ಉತ್ತಮ ಜಾತಿಗಳಲ್ಲಿ ಜನ್ಮ ಮುಂತಾದ ಸಕಲೇಷ್ಟಾರ್ಥಗಳನ್ನೂ ಪಡೆಯುವನು.

೧೪೪-೧೪೮. ಚತುರ್ದಶಿಯಲ್ಲಿ ಶಸ್ತ್ರದಿಂದ ಹತರಾದವರ ಶ್ರಾದ್ಧವನ್ನು ಮಾಡಬೇಕು. ಆಸ್ತಿಕನು, ಶ್ರದ್ಧಾವಂತನು ಮದಮಾತ್ಸರ್ಯರಹಿತನೂ ಆಗಿ ಕೃತ್ತಿಕಾದಿ ಭರಣ್ಯಂತ ನಕ್ಷತ್ರಗಳಲ್ಲಿ ವಿಧಿವತ್ತಾಗಿ ಶ್ರಾದ್ಧಮಾಡುವವನು, ಸ್ವರ್ಗ, ಮಕ್ಕಳು, ಶಕ್ತಿ, ಪರಾಕ್ರಮ, ಭೂಮಿ, ಬಲ, ಉತ್ತಮಪುತ್ರರು, ಸಮೃದ್ಧಿಯಾದ ಸೌಭಾಗ್ಯ, ಮುಖ್ಯತ್ವ, ಮಂಗಳ, ಪ್ರವೃತ್ತಿಕರ್ಮ, ಕ್ರತುಗಳು, ವ್ಯಾಪಾರ ಮುಂತಾದುವು, ಆರೋಗ್ಯ, ಕೀರ್ತಿ, ದುಃಖನಾಶ, ಉತ್ತಮಗತಿ, ಐಶ್ವರ್ಯ, ವಿದ್ಯೆ, ಔಷಧಸಿದ್ಧಿ, ತಾಮ್ರಾದಿ, ಗೋವು, ಮೇಕೆ, ಉಣ್ಣೆಯಬಟ್ಟೆ, ಕುದುರೆ ಮತ್ತು ಆಯುಷ್ಯ ಇವುಗಳನ್ನು ಪಡೆಯುವನು.

ಪ್ರೀಣಯಂತಿ ಮನುಷ್ಯಾಣಾಂ ಪಿತೄನ್ ಶ್ರಾದ್ಧೇನ ತರ್ಪಿತಾಃ ।
ಆಯುಃ ಪ್ರಜಾಂ ಧನಂ ವಿದ್ಯಾಂ ಸ್ವರ್ಗಂ ಮೋಕ್ಷಂ ಸುಖಾನಿ ಚ ॥ ೧೪೯ ॥

ಪ್ರಯಚ್ಛಂತಿ ತಥಾ ರಾಜ್ಯಂ ನೃಣಾಂ ಪ್ರೀತಾಃ ಪಿತಾಮಹಾಃ ।
ಇತ್ಯೇವಂ ಕಥಿತಂ ಕಿಂಚಿತ್ಕಲ್ಪಾಧ್ಯಾಯೋ ವಿಶೇಷತಃ ॥ ೧೫೦ ॥

ಜ್ಞಾತವ್ಯಂ ವೈದಿಕೇ ತಂತ್ರೇ ಪುರಾಣಾಂತರಕೇಽಪಿ ಚ ।
ಯ ಇಮಂ ಚಿಂತಯೇದ್ವಿದ್ವಾನ್ಕಲ್ಪಾಧ್ಯಾಯಂ ಮುನೀಶ್ವರ ॥ ೧೫೧ ॥

ಸ ಭವೇತ್ಕರ್ಮಕುಶಲ ಇಹಾನ್ಯತ್ರ ಗತಿಂ ಶುಭಾಂ ।
ಯಃ ಶೃಣೋತಿ ನರೋ ಭಕ್ತ್ಯಾ ದೈವೇ ಪಿತ್ರ್ಯೇ ಚ ಕರ್ಮಣಿ ॥ ೧೫೨ ॥

ಕಲ್ಪಾಧ್ಯಾಯಂ ಸ ಲಭತೇ ದೈವಪಿತ್ರ್ಯಕ್ರಿಯಾಫಲಂ ।
ಧನಂ ವಿದ್ಯಾಂ ಯಶಃ ಪುತ್ರಾನ್ ಪರತ್ರ ಚ ಗತಿಂ ಪರಾಂ ॥ ೧೫೩ ॥

---

೧೪೮-೧೪೯. ಪಿತ್ರಂತರ್ಗತರಾದ ವಸು, ರುದ್ರ, ಆದಿತ್ಯ ಎಂಬ ಶ್ರಾದ್ಧ ದೇವತೆಗಳು ಶ್ರಾದ್ಧದಿಂದ ಸಂತುಷ್ಟರಾಗಿ ಶ್ರಾದ್ಧಕರ್ತೃಪುರುಷರ ಪಿತೃಗಳನ್ನು ಸಂತೋಷಪಡಿಸುತ್ತಾರೆ.

೧೪೯-೧೫೦. ಹೀಗೆ ಸಂತುಷ್ಟರಾದ ಪಿತೃಗಳು ಮನುಷ್ಯರಿಗೆ ಆಯುಸ್ಸು, ಸಂತಾನ, ಐಶ್ವರ್ಯ, ವಿದ್ಯೆ, ಸ್ವರ್ಗ, ಮೋಕ್ಷ, ನಾನಾವಿಧ ಸುಖಗಳು ಮತ್ತು ರಾಜ್ಯ ಇವುಗಳನ್ನು ಕೊಡುತ್ತಾರೆ.

೧೫೦-೧೫೧. ಈ ಪ್ರಕಾರವಾಗಿ ಈ ಅಧ್ಯಾಯದಲ್ಲಿ ಕಲ್ಪವು ಸಂಕ್ಷೇಪವಾಗಿ ಹೇಳಲ್ಪಟ್ಟಿದೆ. ಅದನ್ನು ವಿಸ್ತಾರವಾಗಿ ವೈದಿಕತಂತ್ರ ಮತ್ತು ಪುರಾಣಾಂತರಗಳಲ್ಲಿ ತಿಳಿಯಬೇಕು.

೧೫೧-೧೫೨. ಮುನಿವರ್ಯನೇ! ಈ ಕಲ್ಪಾಧ್ಯಾಯಾರ್ಥವನ್ನು ಮನನ ಮಾಡುವ ಜ್ಞಾನಿಯು ಈ ಲೋಕದಲ್ಲಿ ಕರ್ಮಕುಶಲತೆಯನ್ನೂ ಪರಲೋಕದಲ್ಲಿ ಸದ್ಗತಿಯನ್ನೂ ಪಡೆಯುವನು.

೧೫೨-೧೫೩. ದೇವತೆ ಮತ್ತು ಪಿತೃ ಸಂಬಂಧಿಯಾದ ಕರ್ಮಗಳ ಅನುಷ್ಠಾನಕಾಲದಲ್ಲಿ ಈ ಕಲ್ಪಾಧ್ಯಾಯವನ್ನು ಶ್ರವಣಮಾಡುವ ಮನುಷ್ಯನು ಐಹಿಕದಲ್ಲಿ ಆಯಾಯಾ ಕರ್ಮಫಲ, ಐಶ್ವರ್ಯ, ವಿದ್ಯೆ, ಕೀರ್ತಿ ಮತ್ತು ಪುತ್ರ ಇವುಗಳನ್ನು ಪಡೆದು ಪರಲೋಕದಲ್ಲಿ ಉತ್ತಮಗತಿಯನ್ನು ಹೊಂದುವನು

**ಅತಃ ಪರಂ ವ್ಯಾಕರಣಂ ತುಭ್ಯಂ ವೇದಮುಖಾಭಿಧಂ ।**
**ಕಥಯಿಷ್ಯೇ ಸಮಾಸೇನ ಶೃಣುಷ್ವ ಸುಸಮಾಹಿತಃ ॥ ೧೫೪ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ ದ್ವಿತೀಯಪಾದೇ ಏಕಪಂಚಾಶತ್ತಮೋಽಧ್ಯಾಯಃ**

---

೧೫೪. ಇನ್ನು ಮುಂದೆ ವೇದಕ್ಕೆ ಮುಖವೆನಿಸಿದ ವ್ಯಾಕರಣವನ್ನು ನಿನಗೆ ಸಂಕ್ಷೇಪವಾಗಿ ಹೇಳುವೆನು. ಸಮಾಧಾನಚಿತ್ತನಾಗಿ ಕೇಳು.

ಇಂತು ಶ್ರೀನಾರದೀಯಪುರಾಣದೊಳು ಪೂರ್ವಭಾಗದ ಬೃಹದುಪಾಖ್ಯಾನವೆಂಬ ಎರಡನೆಯ ಪಾದದಲ್ಲಿ ಐವತ್ತೊಂದನೆಯ ಅಧ್ಯಾಯುವು ಮುಗಿದುದು.

**ಕಥಾಸಾರಾಂಶ**

ಕಲ್ಪವನ್ನು ನಕ್ಷತ್ರಕಲ್ಪ, ವೇದಕಲ್ಪ, ಸಂಹಿತಾಕಲ್ಪ, ಆಂಗೀರಸಕಲ್ಪ ಮತ್ತು ಶಾಂತಿಕಲ್ಪ ಎಂಬುದಾಗಿ ಐದು ವಿಧವಾಗಿ ವಿಭಾಗಿಸಿ ಅವುಗಳ ಲಕ್ಷಣಗಳನ್ನು ಸಂಕ್ಷೇಪವಾಗಿ ನಿರೂಪಿಸಿ ಸರ್ವರಿಗೂ ಉಪಯೋಗಕರವಾದ ಗೃಹ್ಯಕಲ್ಪವನ್ನು ವಿಶೇಷವಾಗಿ ವಿವರಿಸಿದೆ. ಗೃಹ್ಯಪ್ರಯೋಗವಿಧಾನವನ್ನು ವಿಸ್ತಾರವಾಗಿ ಹೇಳಿ, ವಿನಾಯಕನ ಆಗ್ರಹಕ್ಕೀಡಾಗುವನಿಗೆ ಆಗುವ ಕಷ್ಟವನ್ನು ವಿಶದಪಡಿಸಿ ಆ ಗಣೇಶಸ್ವಾಮಿಯ ಅನುಗ್ರಹ ಸಂಪಾದನೆಗಾಗಿ ವಿಹಿತವಾದ ಪೂಜೆಯ ಕ್ರಮವನ್ನು ಸ್ಪಷ್ಟವಾಗಿ ತಿಳಿಸಿ, ಅನುಗ್ರಹಸಂಪಾದನೆಗಾಗಿ ವಿಹಿತವಾದ ಪೂಜೆ ಕ್ರಮವನ್ನು ಸ್ಪಷ್ಟವಾಗಿ ತಿಳಿಸಿ, ನವಗ್ರಹ ಪೂಜೆಯನ್ನುಪದೇಶಿಸಿ, ಪಿತೃಕಲ್ಪವನ್ನು ಹೇಳತೊಡಗಿ ಶ್ರಾದ್ಧವಿಧಾನವನ್ನು ಸಪರಿಕರವಾಗಿ ನಿರೂಪಿಸಿದೆ.

# ದ್ವಿಪಂಚಾಶತ್ತಮೋಽಧ್ಯಾಯಃ

**ಸನಂದನ ಉವಾಚ**

**ಅಥ ವ್ಯಾಕರಣಂ ವಕ್ಷ್ಯೇ ಸಂಕ್ಷೇಪಾತ್ತವ ನಾರದ ।**
**ಸಿದ್ಧರೂಪಪ್ರಬಂಧೇನ ಮುಖಂ ವೇದಸ್ಯ ಸಾಂಪ್ರತಂ ॥ ೧ ॥**

**ಸುಪ್‌ತಿಙಂತಂ ಪದಂ ವಿಪ್ರ ಸುಪಾಂ ಸಪ್ತವಿಭಕ್ತಯಃ ।**
**ಸ್ವೌಜಸಃ ಪ್ರಥಮಾ ಪ್ರೋಕ್ತಾ ಸಾ ಪ್ರಾತಿಪದಿಕಾತ್ಮಿಕಾ ॥ ೨ ॥**

**ಸಂಬೋಧನೇ ಚ ಲಿಂಗಾದಾವುಕ್ತೇ ಕರ್ಮಣಿ ಕರ್ತರಿ ।**
**ಅರ್ಥವತ್ಪ್ರಾತಿಪದಿಕಂ ಧಾತುಪ್ರತ್ಯಯವರ್ಜಿತಂ ॥ ೩ ॥**

---

## ಐವತ್ತೆರಡನೆಯ ಅಧ್ಯಾಯವು

೧. ಸನಂದನನು ಹೇಳಿದನು--ನಾರದನೇ! ಕಲ್ಪವನ್ನು ಹೇಳಿದೆನು. ಈಗ ವೇದಕ್ಕೆ ಮುಖವೆನಿಸಿದ ವ್ಯಾಕರಣವನ್ನು ನಿನಗೆ ಸಂಕ್ಷೇಪವಾಗಿ ಹೇಳುವೆನು. ವ್ಯಾಕರಣಶಾಸ್ತ್ರದಿಂದ ಸಿದ್ಧಿಸುವ ಶಬ್ದಗಳ ಸಮುದಾಯವೇ ವೇದವು.

೨. ಬ್ರಾಹ್ಮಣನಾದ ನಾರದನೇ! ಸುಬಂತ (ನಾಮಪದ) ಮತ್ತು ತಿಙಂತ (ಕ್ರಿಯಾಪದ) ವಾದುದು ಪದವೆನಿಸುತ್ತದೆ. ಸುಬ್ವಿಭಕ್ತಿಗಳು ಏಳು. 'ಸು, ಔ, ಜಸ್,' ಎಂಬುದು ಪ್ರಥಮಾವಿಭಕ್ತಿಪ್ರತ್ಯಯವೆಂದು ಉಕ್ತವಾಗಿದೆ. ಅದು ಪ್ರಾತಿಪದಿಕಾರ್ಥವನ್ನು ಬೋಧಿಸುತ್ತದೆ.

೩. ಲಿಂಗಾದಿಗಳು, ಕರ್ಮ, ಕರ್ತೃ ಇವು ಉಕ್ತವಾದಾಗ, ಸಂಬೋಧನಾರ್ಥದಲ್ಲಿಯೂ ಪ್ರಥಮಾವಿಭಕ್ತಿಯು ಬರುತ್ತದೆ. ಆಗ ಅದಕ್ಕೆ ಸಂಬೋಧನಪ್ರಥಮೆಯೆಂದು ಹೆಸರು. ಧಾತು ಮತ್ತು ಪ್ರತ್ಯಯವಲ್ಲದ ಅರ್ಥಬೋಧಕವಾದ ಶಬ್ದವು ಪ್ರಾತಿಪದಿಕವೆನಿಸುವುದು.

ಅಮೌಟ್ಶಸೋ ದ್ವಿತೀಯಾ ಸ್ಯಾತ್ತತ್ಕರ್ಮ ಕ್ರಿಯತೇ ಚ ಯತ್ ।
ದ್ವಿತೀಯಾ ಕರ್ಮಣಿ ಪ್ರೋಕ್ತಾಂತರಾಂತರೇಣ ಸಂಯುತೇ ॥ ೪ ॥

ಟಾಭ್ಯಾಂಭಿಸಃ ಸ್ತ್ರಿತೀಯಾಸ್ಯಾತ್ಕರಣೇ ಕರ್ತರೀರಿತಾ ।
ಯೇನ ಕ್ರಿಯತೇ ತತ್ಕರಣಂ ಕರ್ತಾ ಯಃ ಸ್ಯಾತ್ ಕರೋತಿ ಸಃ ॥ ೫ ॥

ಙೇಭ್ಯಾಂಭ್ಯಸಶ್ಚತುರ್ಥೀಸ್ಯಾತ್ಸಂಪ್ರದಾನೇ ಚ ಕಾರಕೇ ।
ಯಸ್ಮೈ ದಿತ್ಸಾ ಧಾರಯೋರ್ದ್ವೈ ರೋಚತೇ ಸಂಪ್ರದಾನಕಂ ॥ ೬ ॥

ಪಂಚಮೀ ಸ್ಯಾತ್ ಙಸಿಭ್ಯಾಂ ಭ್ಯೋ ಹ್ಯಪಾದಾನೇ ಚ ಕಾರಕೇ ।
ಯತೋಽಪೈತಿ ಸಮಾದತ್ತೇ ಅಪದತ್ತೇ ಚ ಯಂ ಯತಃ ॥ ೭ ॥

---

೪. 'ಅಮ್, ಔಟ್, ಶಸ್' ಎಂಬುದು ದ್ವಿತೀಯಾವಿಭಕ್ತಿ ಪ್ರತ್ಯಯವು. ಯಾವುದನ್ನು ಮಾಡುತ್ತೇವೆಯೋ ಅದು ಕರ್ಮವೆನಿಸುವುದು. ದ್ವಿತೀಯಾ ವಿಭಕ್ತಿಯು ಕರ್ಮವನ್ನು ಬೋಧಿಸುತ್ತದೆ. 'ಅಂತರಾ' 'ಅಂತರೇಣ' ಎಂಬ ಶಬ್ದಗಳ ಯೋಗವಿದ್ದಲ್ಲಿ ದ್ವಿತೀಯಾ ವಿಭಕ್ತಿಯು ಬರುತ್ತದೆ.

೫. 'ಟಾ, ಭ್ಯಾಂ, ಭಿಸ್' ಎಂಬದು ತೃತೀಯಾವಿಭಕ್ತಿಯ ಪ್ರತ್ಯಯವು. ಅದು ಕರಣ ಮತ್ತು ಕರ್ತೃ ಎಂಬ ಅರ್ಥವನ್ನು ಬೋಧಿಸುತ್ತದೆ. ಕ್ರಿಯೆ ಯುಂಟಾಗಲು ಸಾಧನವಾದುದು ಕರಣವು. ಕಾರ್ಯಮಾಡುವವನು ಕರ್ತೃವು.

೬. 'ಙೇ, ಭ್ಯಾಂ, ಭ್ಯಸ್' ಎಂಬುವುಗಳು ಚತುರ್ಥೀ ವಿಭಕ್ತಿಪ್ರತ್ಯಯಗಳು. ಇದು ಸಂಪ್ರದಾನವೆಂಬ ಕಾರಕವನ್ನು ಬೋಧಿಸುತ್ತದೆ. ಕೆಲವು ಸಂದರ್ಭಗಳಲ್ಲಿ ಸಾಲ ಕೊಟ್ಟವನೂ, ರುಚ್ಯಾದಿಧಾತುಪ್ರಯೋಗವಿರುವಾಗ ಕರ್ತೃವೂ, ದಾನ ತೆಗೆದುಕೊಳ್ಳುವವನೂ ಸಂಪ್ರದಾನನೆನಿಸುವರು.

೭. 'ಙಸಿ, ಭ್ಯಾಂ, ಭ್ಯಸ್' ಇವುಗಳು ಪಂಚಮೀವಿಭಕ್ತಿಪ್ರತ್ಯಯಗಳು. ಇವು 'ಅಪಾದಾನ'ವೆಂಬ ಕಾರಕವನ್ನು ಬೋಧಿಸುತ್ತವೆ. ಯಾವುದರಿಂದ ವಿಭಕ್ತವಾಗುತ್ತದೆಯೊ ಅಂದರೆ ಬೇರೆಯಾಗುತ್ತದೆಯೋ, ಎಂದರೆ ಗಿಡದಿಂದ ಎಲೆಯು ಬೀಳುವಾಗ ಅದು ಗಿಡದಿಂದ ಬೇರೆಯಾಗುವುದು, ಆಗ ಗಿಡವು ಅಪಾದಾನವೆನಿಸುವುದು ಮತ್ತು ಯಾರಿಂದ ಸ್ವೀಕರಿಸುವನೋ, ಅಥವಾ ನಿವಾರಿಸುವನೋ ಅವನೂ ಸಹ ಅಪಾದಾನನೆನಿಸುವನು.

ಙಸೋಸಾಮಶ್ಚ ಷಷ್ಠೀ ಸ್ಯಾತ್ಸ್ವಾಮಿಸಂಬಂಧಮುಖ್ಯಕೇ ।
ಙ್ಯೋಸ್ಸುಪಃ ಸಪ್ತಮೀ ತು ಸ್ಯಾತ್ಸಾ ಚಾಧಿಕರಣೇ ಭವೇತ್ ॥ ೮ ॥

ಆಧಾರೇ ಚಾಪಿ ವಿಪ್ರೇಂದ್ರ ರಕ್ಷಾರ್ಥಾನಾಂ ಪ್ರಯೋಗತಃ ।
ಈಪ್ಸಿತಂ ಚಾನೀಪ್ಸಿತಂ ಯತ್ತದಪಾದಾನಕಂ ಸ್ಮೃತಂ ॥ ೯ ॥

ಪಂಚಮೀ ಪರ್ಯಪಾಂಙ್ಯೋಗೇ ಇತರರ್ತೇಽನ್ಯದಿಙ್ಮುಖೇ ।
ಏತೈರ್ಯೋಗೇ ದ್ವಿತೀಯಾ ಸ್ಯಾತ್ಕರ್ಮಪ್ರವಚನೀಯಕೈಃ ॥ ೧೦ ॥

ಲಕ್ಷಣೇತ್ಥಂಭೂತೇಭಿರಭಾಗೇ ಚಾನುಪರಿಪ್ರತಿ ।
ಅಂತರೇಷು ಸಹಾರ್ಥೇ ಚ ಹೀನೇಹ್ಯುಪಶ್ಚ ಕಥ್ಯತೇ ॥ ೧೧ ॥

---

೮. 'ಙಸ್, ಓಸ್, ಆಮ್' ಇವು ಷಷ್ಠಿವಿಭಕ್ತಿ ಪ್ರತ್ಯಯಗಳು. ಇವು ಸ್ವಾಮಿಭೃತ್ಯಭಾವ ಮುಂತಾದ ಸಂಬಂಧವನ್ನು ಬೋಧಿಸುತ್ತವೆ. 'ಙೀ, ಓಸ್ ಸುಪ್' ಇವು ಸಪ್ತಮೀವಿಭಕ್ತಿ ಪ್ರತ್ಯಯಗಳು. ಇವು ಅಧಿಕರಣ (ಆಶ್ರಯ) ಎಂಬ ಅರ್ಥವನ್ನು ಬೋಧಿಸುತ್ತವೆ.

೯. ಬ್ರಾಹ್ಮಣವರ್ಯನೇ! ಅಧಿಕರಣವೆಂದರೆ ಆಧಾರವು (ಆಶ್ರಯವು) ರಕ್ಷಾರ್ಥಕಧಾತುವನ್ನು ಪ್ರಯೋಗಿಸಿದಾಗ ಭಯಜನಕಚೋರಾದಿಗಳು, ವಾರಣಾರ್ಥಕಧಾತುಯೋಗವಿದ್ದಲ್ಲಿ ಇಷ್ಟವಸ್ತುವೂ, ಅನೀಪ್ಸಿತವೂ (ಬೇಡವಾದದ್ದು) ಸಹ ಅಪಾದಾನವೆಂದು ಉಕ್ತವಾಗಿದೆ.

೧೦. ಪರಿ, ಅಪ, ಆಙ್, ಇತರ, ಋತೇ, ಅನ್ಯ, ದಿಕ್ ಶಬ್ದ ಮುಂತಾದುವುಗಳ ಯೋಗವಿದ್ದಲ್ಲಿ ಪಂಚಮೀವಿಭಕ್ತಿಯನ್ನು ಪ್ರಯೋಗಿಸಬೇಕು. ಕರ್ಮಪ್ರವಚನೀಯವೆನಿಸಿದ ಶಬ್ದಗಳ ಮತ್ತು 'ಅಂತರಾ, ಅಂತರೇಣ ಎಂಬ ಶಬ್ದಗಳ ಯೋಗವಿದ್ದಾಗ ದ್ವಿತೀಯಾವಿಭಕ್ತಿಯನ್ನು ಪ್ರಯೋಗಿಸಬೇಕು.

೧೧. ಜ್ಞಾಪಕ, ಧರ್ಮವಿಶೇಷವನ್ನು ಹೊಂದಿದ ಅರ್ಥ ಇವುಗಳು ವಿಷಯವಾದಾಗ ಅನು, ಪರಿ, ಪ್ರತಿ ಇವು ಮತ್ತು ಭಾಗವೆಂಬರ್ಥವನ್ನು ಕೊಡದ ಲಕ್ಷಣಾದಿಗಳಲ್ಲಿರುವ ಅಭಿ ಎಂಬುದೂ, ಸಹಿತ ಎಂಬರ್ಥವನ್ನು ಬೋಧಿಸುವ ಅನು ಎಂಬುದೂ, ಹೀನ ಎಂಬರ್ಥವನ್ನು ಬೋಧಿಸುವ ಉಪ ಎಂಬುದೂ ಸಹಾ ಕರ್ಮಪ್ರವಚನೀಯ' ಎಂಬ ಸಂಜ್ಞೆಯನ್ನು ಹೊಂದುವುವು.

ದ್ವಿತೀಯಾ ಚ ಚತುರ್ಥೀ ಸ್ಯಾಚ್ಚೇಷ್ಟಾಯಾಂ ಗತಿಕರ್ಮಣಿ ।
ಅಪ್ರಾಣಿಷು ವಿಭಕ್ತೀ ದ್ವೇ ಮನ್ಯಕರ್ಮಣ್ಯನಾದರೇ ॥ ೧೨ ॥

ನಮಃ ಸ್ವಸ್ತಿಸ್ವಧಾಸ್ವಾಹಾಽಲಂವಷಡ್ಯೋಗ ಈರಿತಾ ।
ಚತುರ್ಥೀ ಚೈವ ತಾದರ್ಥ್ಯೇ ತುಮರ್ಥಾದ್ಭಾವವಾಚಿನಃ ॥ ೧೩ ॥

ತೃತೀಯಾ ಸಹ ಯೋಗೇ ಸ್ಯಾತ್ಕುತ್ಸಿತೇಽಂಗೇ ವಿಶೇಷಣೇ ।
ಕಾಲೇ ಭಾವೇ ಸಪ್ತಮೀಸ್ಯಾದೇತೈರ್ಯೋಗೇ ಚ ಷಷ್ಠ್ಯಪಿ ॥ ೧೪ ॥

ಸ್ವಾಮೀಶ್ವರಾಧಿಪತಿಭಿಃ ಸಾಕ್ಷಿದಾಯಾದಸೂತಕೈಃ ।
ನಿರ್ಧಾರಣೇ ದ್ವೇ ವಿಭಕ್ತೀ ಷಷ್ಠೀ ಹೇತುಪ್ರಯೋಗಕೇ ॥ ೧೫ ॥

---

೧೨. ಮಾರ್ಗಭಿನ್ನವಾದ ಗಮನಕರ್ಮವನ್ನು ಗಮನಬೋಧಕವಾದ ಕ್ರಿಯಾಪದದೊಡನೆ ಪ್ರಯೋಗಿಸುವಾಗ ದ್ವಿತೀಯಾ ಮತ್ತು ಚತುರ್ಥೀವಿಭಕ್ತಿ ಯುತವಾಗಿ ಪ್ರಯೋಗಿಸಬೇಕು. ಪ್ರಾಣಿಭಿನ್ನವಾದ ಮನು (ತಿಳಿ) ಎಂಬ ಅರ್ಥಬೋಧಕವಾಗಿ ದಿವಾದಿಗಣದಲ್ಲಿ ಪಠಿತವಾದ ಧಾತುವಿನಿಂದ ಬೋಧಿತ ವಾದ ಕ್ರಿಯೆಯ ಕರ್ಮವು ತಿರಸ್ಕಾರಕ್ಕೆ ವಿಷಯವಾದಾಗ ದ್ವಿತೀಯಾ ಅಥವಾ ಚತುರ್ಥೀ ವಿಭಕ್ತ್ಯಂತವಾಗುವುದು.

೧೩. 'ನಮಃ ಸ್ವಸ್ತಿ, ಸ್ವಾಹಾ, ಸ್ವಧಾ, ಅಲಂ, ವಷಟ್' ಈ ಶಬ್ದ ಯೋಗವಿದ್ದಲ್ಲಿ ಮತ್ತು ತಾದರ್ಥ್ಯವಿವಕ್ಷಿತವಾದಾಗ ಚತುರ್ಥೀ ವಿಭಕ್ತಿಗಳನ್ನು ಪ್ರಯೋಗಿಸಬೇಕು. ತುಮರ್ಥ ಪತ್ಯಯಾರ್ಥವನ್ನು ಬೋಧಿಸುವ ಘಞ್ ಮುಂತಾದ ಭಾವಾರ್ಥಕ ಪ್ರತ್ಯಯಾಂತ ಶಬ್ದಗಳ ಮೇಲೆ ಚತುರ್ಥೀವಿಭಕ್ತಿಯು ಬರುತ್ತದೆ.

೧೪-೧೫. ಸಹಿತ ಎಂಬರ್ಥವು ವಿವಕ್ಷಿತವಾದಾಗ ಅಪ್ರಧಾನವಾದ ವಿಶೇಷಣದ ಮೇಲೆ ತೃತೀಯಾ ವಿಭಕ್ತಿಯು ಬರುವುದು. ಸಮಾನಕಾಲಿಕವಾದ ಎರಡು ಕ್ರಿಯೆಗಳನ್ನು ಬೋಧಿಸುವಾಗ ಆ ಕ್ರಿಯೆಯ ಕರ್ತೃಪದದ ಮೇಲೆ ಸಪ್ತಮೀವಿಭಕ್ತಿಯು ಬರುವುದು. 'ಸ್ವಾಮೀ, ಈಶ್ವರ, ಅಧಿಪತಿ, ಸಾಕ್ಷಿ, ದಾಯಾದ, ಪ್ರಸೂತ' ಈ ಶಬ್ದಗಳ ಯೋಗವಿದ್ದಲ್ಲಿ ಷಷ್ಠಿಯೂ ಬರುತ್ತದೆ.

ಸ್ಮೃತ್ಯರ್ಥಕರ್ಮಣಿ ತಥಾ ಕರೋತೇಃ ಪ್ರತಿಯತ್ನಕೇ ।
ಹಿಂಸಾರ್ಥಾನಾಂ ಪ್ರಯೋಗೇ ಚ ಕೃತಿ ಕರ್ಮಣಿ ಕರ್ತರಿ ॥ ೧೬ ॥

ನ ಕರ್ತೃಕರ್ಮಣೋಃ ಷಷ್ಠೀ ನಿಷ್ಠಾದಿಪ್ರತಿಪಾದಿಕಾ ।
ಏತಾ ವೈ ದ್ವಿವಿಧಾ ಜ್ಞೇಯಾಃ ಸುಬಾದಿಷು ವಿಭಕ್ತಿಷು ।
ಭೂವಾದಿಷು ತಿಜಂತೇಷು ಲಕಾರಾ ದಶ ವೈ ಸ್ಮೃತಾಃ ॥ ೧೭ ॥

ತಿಪ್ತಸಂತೀತಿ ಪ್ರಥಮೋ ಮಧ್ಯಮಃ ಸಿಪ್ಥಸ್ಥೋತ್ತಮಃ ।
ಮಿಬ್ವಸ್ಮಸಃ ಪರಸ್ಮೈ ತು ಪದಾನಾಂ ಚಾತ್ಮನೇಪದಂ ॥ ೧೮ ॥

---

ಒಂದು ಸಮುದಾಯದಿಂದ ಬೇರ್ಪಡಿಸಿ ಹೇಳುವಾಗ ಸಮುದಾಯವಾಚಕ ಪದದ ಮೇಲೆ ಷಷ್ಠೀ ಮತ್ತು ಸಪ್ತಮೀ ಈ ಎರಡು ವಿಭಕ್ತಿಗಳು ಬರುವುವು. ಹೇತುಶಬ್ದದಿಂದ ಕಾರಣವನ್ನು ಬೋಧಿಸುವಾಗ ಅದನ್ನು ಷಷ್ಠೀ ವಿಭಕ್ತ್ಯಂತವಾಗಿ ಪ್ರಯೋಗಿಸಬೇಕು.

೧೬. ಸ್ಮರಣಕರ್ಮದಲ್ಲಿಯೂ, ಕೃಧಾತ್ವರ್ಥಗುಣಾಧಾನವು ವಿವಕ್ಷಿತವಾದಾಗ ಕೃತಿಕರ್ಮದ ಮೇಲೂ ಷಷ್ಠೀ ವಿಭಕ್ತಿಯು ಬರುವುದು. ಹಿಂಸಾರ್ಥಕಧಾತುಯೋಗವಿದ್ದಾಗ ಅದರ ಕರ್ಮದಲ್ಲಿ ಷಷ್ಠೀ ವಿಭಕ್ತಿಯು ಬರುವುದು. ಕೃದಂತಶಬ್ದ ಸಮವಧಾನವಿರುವೆಡೆಯಲ್ಲಿ ಕರ್ತೃಕರ್ಮವಾಚಕಗಳ ಮೇಲೆ ಷಷ್ಠೀ ವಿಭಕ್ತಿಯು ಬರುತ್ತದೆ.

೧೭. ನಿಷ್ಠಾದಿಪ್ರತ್ಯಯಾಂತ (ಗತ ಇತ್ಯಾದಿ) ಶಬ್ದಯೋಗವಿದ್ದರೆ ಕರ್ತೃ ಅಥವಾ ಕರ್ಮಕ್ಕೆ ಷಷ್ಠೀವಿಭಕ್ತಿ ಬರುವುದಿಲ್ಲ. ಈ ಶಬ್ದಗಳು ಸುಬಾದಿ ವಿಭಕ್ತ್ಯಂತಗಳಾಗಿಯೂ, ಭೂವಾದಿಧಾತುಗಳಮೇಲೆ ತಿಙ್ ಮೊದಲಾದವುಗಳು ಬಂದು ತಿಙಂತಗಳಾಗಿಯೂ ಎರಡು ವಿಭಾಗಗಳಾಗಿವೆ. ಧಾತುಗಳಮೇಲೆ ಬರತಕ್ಕ ಲಕಾರಗಳು ಹತ್ತು ವಿಧಗಳಾಗಿವೆ.

೧೮-೧೯. ಧಾತುಗಳು ಹೊಂದತಕ್ಕ ಪ್ರತ್ಯಯಗಳು ಪರಸ್ಮೈಪದ, ಆತ್ಮನೇಪದವೆಂದು ಎರಡು ವಿಧಗಳಾಗಿವೆ. ಪರಸ್ಮೈಪದ ಪ್ರತ್ಯಯಗಳು ಪ್ರಥಮಪುರುಷದಲ್ಲಿ ತಿಪ್-ತಸ್-ಅಂತಿ ಎಂದೂ ಮಧ್ಯಮಪುರುಷದಲ್ಲಿ ಸಿಪ್—ಥಸ್—

ತ ಆತೇಂತೇ ಪ್ರಥಮೋ ಮಧ್ಯಃ ಸೇ ಆಥೇ ಧ್ವೇ ತಥೋತ್ತಮಃ ।
ಏ ವಹೇ ಮಹ ಆದೇಶಾ ಜ್ಞೇಯಾ ಹ್ಯನ್ಯೇ ಲಿಜಾದಿಷು ॥ ೧೯ ॥

ಸಾಮ್ನಿ ಪ್ರಯುಜ್ಯಮಾನೇ ತು ಪ್ರಥಮಃ ಪುರುಷೋ ಭವೇತ್ ।
ಮಧ್ಯಮೋ ಯುಷ್ಮದಿ ಪ್ರೋಕ್ತ ಉತ್ತಮಃ ಪುರುಷೋಽಸ್ಮದಿ ॥ ೨೦ ॥

ಭೂವಾದ್ಯಾ ಧಾತವಃ ಪ್ರೋಕ್ತಾಃ ಸನಾದ್ಯಂತಾಸ್ತಥಾ ತತಃ ।
ಲಡೀರಿತೋ ವರ್ತಮಾನೇ ಭೂತೇಽನದ್ಯತನೇ ತಥಾ ॥ ೨೧ ॥

---

ಥ ಎಂತಲೂ ಉತ್ತಮಪುರುಷದಲ್ಲಿ ಮಿಪ್–ವಸ್–ಮಸ್ ಎಂದೂ ಕ್ರಮವಾಗಿ ಏಕವಚನ, ದ್ವಿವಚನ, ಬಹುವಚನಗಳಲ್ಲಿ ಬರುತ್ತವೆ. ಹೀಗೆಯೇ ಆತ್ಮನೇ ಪದದಲ್ಲಿಯೂ ತೆ-ಆತೇ-ಅಂತೇ ಎಂಬುದು ಪ್ರಥಮಪುರುಷದಲ್ಲಿಯೂ ಸೇ-ಆಥೇ-ಧ್ವೇ ಎಂದು ಮಧ್ಯಮಪುರುಷದಲ್ಲಿಯೂ ಏ–ವಹೇ–ಮಹೇ ಎಂಬುದು ಉತ್ತಮ ಪುರುಷದಲ್ಲಿಯೂ ಕ್ರಮವಾಗಿ ಬರುತ್ತವೆ. ಇವೆಲ್ಲವೂ ಲಟ್ ಎಂದರೆ ವರ್ತಮಾನಕಾಲದ ಪ್ರತ್ಯಯಗಳು. ಹೀಗೆ ಅಜಾದಿಗಳಲ್ಲಿ ಬೇರೆ ಪ್ರತ್ಯಯಗಳು ಬರುತ್ತವೆ.

೨೦. ಸಾಮಾನ್ಯ ನಾಮಪದವನ್ನು ಪ್ರಯೋಗಿಸಿದರೆ ಪ್ರಥಮಪುರುಷ ವಾಗುವುದು. ಯುಷ್ಮಚ್ಛಬ್ದವನ್ನು ಪ್ರಯೋಗಿಸಿದಾಗ ಮಧ್ಯಮಪುರುಷವೂ, ಅಸ್ಮಚ್ಛಬ್ದವನ್ನು ಕರ್ತೃವಾಗಿ ಪ್ರಯೋಗಿಸಿದಾಗ ಉತ್ತಮಪುರುಷವೂ ಆಗು ವುದೆಂದು ತಿಳಿಯಬೇಕು.

೨೧-೨೨. ಭೂ, ವಾ, ಮುಂತಾದುವು ಮತ್ತು ಸ್ನ ಮುಂತಾದ ಪ್ರತ್ಯಯಾಂತವಾದವುಗಳೂ ಸಹ ಧಾತುಗಳೆನಿಸುವುವು. ವರ್ತಮಾನಾರ್ಥದಲ್ಲಿ ಲಟ್ ಅರ್ಧರಾತ್ರಿಯಹಿಂದೆ ನಡೆದ ವಿಷಯವನ್ನು ಹೇಳುವಾಗ ಮತ್ತು ಮಾ, ಸ್ಮ, ಇವುಗಳ ಪ್ರಯೋಗವಿದ್ದಾಗಲೂ ಲಙ್ ಎಂಬ ಲಕಾರಗಳನ್ನು ಉಪಯೋಗಿಸ ಬೇಕು. ಆಶೀರ್ವಾದವನ್ನು ಹೇಳುವಾಗ ಧಾತುವಿನ ಮುಂದೆ ಲೋಟ್ ಪ್ರತ್ಯಯವು ಬರುತ್ತದೆ.

**ಮಾ ಸ್ಮ ಯೋಗೇ ಚ ಲಜ್ವಾಚ್ಯೋ ಲೋಡಾಶಿಷಿ ಚ ಧಾತುತಃ ।**
**ವಿಧ್ಯಾದೌ ಸ್ಯಾದಾಶಿಷಿ ಚ ಲಿಂಙಾತೋ ದ್ವಿವಿಧೋ ಮುನೇ ॥ ೨೨ ॥**

**ಲಿಡತೀತೇ ಪರೋಕ್ಷೇ ಸ್ಯಾತ್ ಶ್ವಸ್ತನೇ ಲುಡ್ಭವಿಷ್ಯತಿ ।**
**ಸ್ಯಾದನದ್ಯತನೇ ಲೃಟ್ಚ ಭವಿಷ್ಯತಿ ತು ಧಾತುತಃ ॥ ೨೩ ॥**

**ಭೂತೇ ಲುಙ್ ಕ್ರಿಯಾತಿಪತ್ತೌ ಕ್ರಿಯಾಯಾಂ ಲೃಙ್ ಪ್ರಕೀರ್ತಿತಃ ।**
**ಸಿದ್ಧೋದಾಹರಣಂ ವಿದ್ಧಿ ಸಂಹಿತಾದಿಪುರಸ್ಸರಂ ॥ ೨೪ ॥**

**ದಂಡಾಗ್ರಂ ಚ ದಧೀದಂ ಚ ಮಧೂದಕಂ ಪಿತ್ರೃರ್ಷಭಃ ।**
**ಹೋತೃಕಾರಸ್ತಥಾ ಸೇಯಂ ಲಾಂಗಲೀಷಾ ಮನೀಷಯಾ ॥ ೨೫ ॥**

---

೨೨. ನಾರದಮುನಿಯೇ ! ವಿಧಿ ಮತ್ತು ಆಶೀರ್ವಾದ ಇವೆರಡರ್ಥಗಳಲ್ಲಿಯೂ ಲಿಙ್ ಪ್ರತ್ಯಯವು ಬರುವುದರಿಂದ ಅದು ವಿಧಿಲಿಙ್, ಆಶೀರ್ಲಿಙ್ ಎಂಬುದಾಗಿ ಎರಡು ವಿಧವು.

೨೩. ಹಿಂದೆ ನಡೆದ ಪರೋಕ್ಷವೃತ್ತಾಂತವನ್ನು ತಿಳಿಸಲು ಲಿಟ್ ಪ್ರತ್ಯಯಾಂತ ಕ್ರಿಯಾಪದವನ್ನೂ, ನಾಳೆ ನಡೆಯುವುದನ್ನು ಹೇಳಲು ಲುಡಂತಕ್ರಿಯಾಪದವನ್ನೂ ವ್ಯವಹರಿಸಬೇಕು. ಅನದ್ಯತನ ಭವಿಷ್ಯತ್ತ (ಬರುವ ಅರ್ಧರಾತ್ರಿ ಮೇಲೆ) ನ್ನು ಬೋಧಿಸಲು ಧಾತುವಿನ ಮುಂದೆ ಲೃಟ್ ಪ್ರತ್ಯಯವು ಬರುತ್ತದೆ.

೨೪ ಭೂತಾರ್ಥದಲ್ಲಿ ಲುಙ್ ಪ್ರತ್ಯಯವೂ, ಕ್ರಿಯೆಯು ನಿಷ್ಪತ್ತಿಯಾಗದಿರುವಾಗ ಲೃಙ್ ಪ್ರತ್ಯಯವೂ ವಿಹಿತವಾಗಿವೆ. ಅರ್ಥವಿಶೇಷವನ್ನು ಬೋಧಿಸಲು ಶಬ್ದದ್ವಯವನ್ನು ಅವ್ಯವಹಿತವಾಗಿ ಸೇರಿಸುವುದರಿಂದ ಸಿದ್ಧವಾಗುವ ಶಬ್ದರೂಪಗಳನ್ನು ಉದಾಹರಿಸುವೆನು ; ತಿಳಿ.

೨೫-೨೯. 'ದಂಡಾಗ್ರಂ, ದಧೀದಂ, ಮಧೂದಕಂ, ಪಿತ್ರೃರ್ಷಭಃ, ಹೋತೃಕಾರಃ, ಸೇಯಂ, ಲಾಂಗಲೀಷಾ, ಮನೀಷಯಾ, ಗಂಗೋದಕಂ, ತವಲ್ಕಾರಃ, ಋಣಾರ್ಣಃ, ಶೀತಾರ್ತಃ, ಸೇಂದ್ರಃ, ಸೌಕಾರಃ, ವಧ್ವಾಸನಂ, ಪಿತ್ರರ್ಥಃ, ನಾಯಕಃ, ಲವನಃ, ತಆದ್ಯಾಃ, ವಿಷ್ಣವೇ, ಹ್ಯತ್ರ, ತಸ್ಮಾಅರ್ಘಃ, ಗುರಾಅಧಃ, ಹರೇವ, ವಿಷ್ಣೋವ, ಇತ್ಯೇವ' ಇವು ವಿಹಿತರೀತಿಯಿಂದ ಸಂಧಿಯಾಗಿ ಸಿದ್ಧವಾದ ಶಬ್ದರೂಪಗಳು. 'ಅದಸೋಮಾತ್' ಎಂಬ ಪಾಣಿನಿಸೂತ್ರದಿಂದ

ಗಂಗೋದಕಂ ತವಲ್ಕಾರ ಋಣಾರ್ಣಂ ಚ ಮುನೀಶ್ವರ ।
ಶೀತಾರ್ತಶ್ಚ ಮುನಿಶ್ರೇಷ್ಠ ಸೇಂದ್ರಸ್ಸೌಕಾರ ಇತ್ಯಪಿ ॥ ೨೬ ॥

ವಧ್ವಾಸನಂ ಚ ಪಿತ್ರರ್ಥೋ ನಾಯಕೋ ಲವನಸ್ತಥಾ ।
ತ ಆದ್ಯಾ ವಿಷ್ಣವೇ ಹ್ಯತ್ರ ತಸ್ಮಾ ಅಘೋ ಗುರಾ ಅಧಃ ॥ ೨೭ ॥

ಹರೇವ ವಿಷ್ಣೋವೇತ್ಯೇವಾದಸೋನಾದಪ್ಯಮೀ ಅಘಾಃ ।
ಶೌರೀ ಏತೌ ವಿಷ್ಣೂ ಇಮೌ ದುರ್ಗೇ ಅಮೂ ನೋ ಅರ್ಜುನಃ ॥ ೨೮ ॥

ಆ ಏವಂ ಚ ಪ್ರಕೃತ್ಯೈತೇ ತಿಷ್ಠಂತಿ ಮುನಿಸತ್ತಮ ।
ಷಡತ್ರ ಷಣ್ಮಾತರಶ್ಚ ವಾಕ್ಛುರೋ ವಾಗ್ಘರಿಸ್ತಥಾ ॥ ೨೯ ॥

ಹರಿಶ್ಶೇತೇ ವಿಭುಶ್ಚಿಂತ್ಯಸ್ತಚ್ಛೇಷಃ ಯಚ್ಛರಸ್ತಥಾ ।
ಪ್ರಶ್ನಸ್ತ್ವಥ ಹರಿಷ್ಷಷ್ಠಃ ಕೃಷ್ಣಷ್ಟೀಕತ ಇತ್ಯಪಿ ॥ ೩೦ ॥

ಭವಾನ್ಷಷ್ಠಶ್ಚ ಷಟ್ಸಂತಃ ಷಟ್ತೇ ತಲ್ಲೇಪ ಏವ ಚ ।
ಚಕ್ರಿಂಶ್ಛಿಂಧಿ ಭವಾಂಛೌರಿರ್ಭಗವಾನ್ ಶೌರಿರಿತ್ಯಪಿ ॥ ೩೧ ॥

---

ಅದಶ್ಶಬ್ದಸಂಬಂಧಿಯಾದ ಮಕಾರದ ಮುಂದಿನ ಈಕಾರ ಉಕಾರಗಳು ಪ್ರಗೃಹ್ಯ ವೆಂಬ ಸಂಜ್ಞೆಯನ್ನು ಹೊಂದಿ ಸಂಧಿಯಾದಮೇಲೆ ಬದಲಾಯಿಸದೆ ಮೊದಲಿದ್ದಂತೆಯೇ ಇರುತ್ತದೆ. ಅದಕ್ಕೆ ಪ್ರಕೃತಿಭಾವ ಸಂಧಿಯೆಂದು ಹೆಸರು. ಅದಕ್ಕೆ ಉದಾಹರಣೆ—'ಅಮೀ ಅಘಾಃ, ಶೌರೀಏತೌ, ವಿಷ್ಣೂಇಮೌ, ದುರ್ಗೇ ಅಮೂ, ನೋ ಅರ್ಜುನಃ, ಆ ಏವಂ' ಇತ್ಯಾದಿ.

೨೯-೩೦. ಷಡತ್ರ, ಷಣ್ಮಾತರಃ, ವಾಕ್ಛುರಃ, ವಾಗ್ಘರಿಃ, ಹರಿಃಶೇತೇ, ವಿಭುಶ್ಚಿಂತ್ಯಃ, ತಚ್ಛೇಷಃ, ಯಚ್ಛರಃ, ಪ್ರಶ್ನಃ (ಪೃಚ್ಛ ಎಂಬ ಧಾತುವಿನ ಚ್ಛಕಾರಕ್ಕೆ ಶಕಾರಾದೇಶ ಬಂದು ನಜ್ ಪ್ರತ್ಯಯ ಸೇರಿ ಪ್ರಶ್ನ ಎಂಬ ರೂಪವು ಸಿದ್ಧವಾಗಿದೆ) ಹರಿಷ್ಷಷ್ಠಃ, ಕೃಷ್ಣಷ್ಟೀಕತೇ.

೩೧. ಭವಾನ್ಷಷ್ಠಃ, ಷಟ್ಸಂತಃ, ಷಟ್ತೇ, ತಲ್ಲೇಪಃ, ಚಕ್ರಿಂಶ್ಛಿಂಧಿ, ಭವಾಂಛೌರಿಃ, ಭವಾನ್‌ಶೌರಿಃ.

ಸಮ್ಯಜ್ಞನಂತೋ ಗಚ್ಛಾಯಾ ಕೃಷ್ಣಂ ವಂದೇ ಮುನೀಶ್ವರ ।
ತೇಜಾಂಸಿ ಮಂಸ್ಯತೇ ಗಂಗಾ ಹರಿಶ್ಛೇತ್ತಾಮರಶ್ಶಿವಃ ॥ ೩೨ ॥

ರಾಮಃ ಕಾಮಃ ಕೃಪಃ ಪೂಜ್ಯೋ ಹರಿಃ ಪೂಜ್ಯೋಽರ್ಚ್ಯ ಏವ ಹಿ ।
ರಾಮೋ ದೃಷ್ಟೋ ಬಲಾ ಅತ್ರ ಸುಪ್ತಾ ಇಷ್ಟಾ ಇಮಾ ಯತಃ ॥ ೩೩ ॥

ವಿಷ್ಣುರ್ನಮ್ಯೋ ರವಿರಯಂ ಗೀಃ ಫಲಂ ಪ್ರಾತರಚ್ಯುತಃ ।
ಭಕ್ತೈರ್ವಂದ್ಯೋಽಪ್ಯಂತರಾತ್ಮಾ ಭೋ ಭೋ ಏಷ ಹರಿಸ್ತಥಾ ।
ಏಷ ಶಾರ್ಙ್ಗೀ ಸ್ಯೈಷ ರಾಮಃ ಸಂಹಿತ್ಯೈವಂ ಪ್ರಕೀರ್ತಿತಾ ॥ ೩೪ ॥

ರಾಮೇಣಾಭಿಹಿತಂ ಕರೋಮಿ ಸತತಂ ರಾಮಂ ಭಜೇ ಸಾದರಂ ।
ರಾಮೇಣಾಪಹೃತಂ ಸಮಸ್ತದುರಿತಂ ರಾಮಾಯ ತುಭ್ಯಂ ನಮಃ ॥ ೩೫ ॥

---

೩೨. ಸಮ್ಯಜ್ಞನಂತಃ, ಗಚ್ಛಾಯಾ, ಕೃಷ್ಣಂ ವಂದೇ, ತೇಜಾಂಸಿ, ಮಂಸ್ಯತೇ, ಗಂಗಾ, ಹರಿಶ್ಛೇತ್ತಾ, ಅಮರಶ್ಶಿವಃ.

೩೩. ರಾಮಗ್ಕಾಮಃ, ಕೃಪಃಪೂಜ್ಯಃ, ಹರಿಃ ಪೂಜ್ಯೋಽರ್ಚ್ಯಃ, (ಕಕಾರ ಖಕಾರಗಳ ಹಿಂದಿನ ವಿಸರ್ಗವು ಅರ್ಧಚಂದ್ರಾಕೃತಿಯಾಗಿ ಬರೆಯಲ್ಪಟ್ಟು ಜೀಹ್ವಾಮೂಲೀಯ ಸಂಜ್ಞೆಯನ್ನು ಹೊಂದುವುದು. ಪಫಗಳ ಹಿಂದಿನ ವಿಸರ್ಗವೂ ಸಹ ಉಪಧ್ಮಾನೀಯವೆನಿಸಿ ಅರ್ಧಚಂದ್ರಾಕಾರವನ್ನು ತಾಳುತ್ತದೆ) ರಾಮೋ ದೃಷ್ಟಃ, ಬಲಾ ಅತ್ರ, ಸುಪ್ತಾ ಇಷ್ಟಾ, ಇಮಾಯತಃ.

೩೪. ವಿಷ್ಣುರ್ನಮ್ಯಃ, ರವಿರಯಂ, ಗೀಃಫಲಂ, ಪ್ರಾತರಚ್ಯುತಃ, ಭಕ್ತೈರ್ವಂದ್ಯೋಽಪ್ಯಂತರಾತ್ಮಾ, ಭೋ ಭೋ ಏಷಃ, ಹರಿಸ್ತಥಾ, ಏಷ ಶಾರ್ಙ್ಗೀ, ಸ್ಯೈಷರಾಮಃ, ಈರೀತಿಯಾಗಿ ಅನೇಕಪದಗಳನ್ನು ಸೇರಿಸಿ ಸಂಧಿ ಮಾಡಿದಮೇಲೆ ಸಿದ್ಧಿಸುವ ರೂಪಗಳು ಹೇಳಲ್ಪಟ್ಟಿವೆ.

೩೫. 'ರಾಮೇಣ' ಇತ್ಯಾದಿ ಎರಡುಪದ್ಯಗಳು ಸಿದ್ಧರೂಪಶಬಗಳನ್ನು ಸೇರಿಸಿ ಹೇಳುವ ಸಂಹಿತೆಗೆ ಉದಾಹರಣೆಯಾಗಿ ಉಕ್ತವಾಗಿವೆ. ಅದರ ಅರ್ಥ:- ರಾಮನಿಂದ ಹೇಳಲ್ಪಟ್ಟಿರುವುದನ್ನು ಮಾಡುವೆನು. ಯಾವಾಗಲೂ ರಾಮನನ್ನು ಭಕ್ತಿಯಿಂದ ಭಜಿಸುವೆನು. ನನ್ನ ಸಕಲ ಪಾಪವೂ ರಾಮನಿಂದ ಅಪಹರಿಸಲ್ಪಡಲಿ. ರಾಮನೇ ! ನಿನಗೆ ನಮಸ್ಕಾರ.

ರಾಮಾನ್ಮುಕ್ತಿರಭೀಪ್ಸಿತಾ ಮಮ ಸದಾ ರಾಮಸ್ಯ ದಾಸೋಽಸ್ಮ್ಯಹಂ ।
ರಾಮೇ ರಂಜತು ಮೇ ಮನಃ ಸುವಿಶದಂ ಹೇ ರಾಮ ತುಭ್ಯಂ ನಮಃ ॥೩೬॥

ಸರ್ವ ಇತ್ಯಾದಿಕಾ ಗೋಪಾಃ ಸಖಾ ಚೈವ ಪತಿರ್ಹರಿಃ ॥ ೩೭ ॥

ಸುಶ್ರೀರ್ಭಾನುಸ್ಸ್ವಯಂಭೂಶ್ಚ ಕರ್ತಾರೋ ಗೌಸ್ತು ನೌರಿತಿ ।
ಅನಡ್ವಾನ್ ಗೋಧುಗ್ಲಿಟ್ ಚ ದ್ವೇ ತ್ರಯಶ್ಚತ್ವಾರ ಏವ ಚ ॥ ೩೮ ॥

ರಾಜಾ ಪಂಥಾಸ್ತಥಾ ದಂಡೀ ಬ್ರಹ್ಮಹಾ ಪಂಚಚಾಷ್ಟ ಚ ।
ಅಷ್ಟೌ ಅಯಂ ಮುನೇ ಸಮ್ರಾಟ್ ಸ ಬಿಭೃದ್ವಪುರುನ್ಮನಃ ॥ ೩೯ ॥

ಪ್ರತ್ಯಙ್ಪುಮಾನ್ ಮಹಾನ್ ಧೀಮಾನ್ ವಿದ್ವಾನ್ ಷಟ್ ಪಿಪಠೀಶ್ಚ ದೋಃ ।
ಉಶನಾಸಾವಿಮೇ ಪುಂಸಿ ಸ್ಯುರಕ್ತಲವಿರಾಮಕಾ ॥ ೪೦ ॥

ರಾಧಾ ಸರ್ವಾ ಗತಿರ್ಗೋಪೀ ಸ್ತ್ರೀ ಶ್ರೀರ್ಧೇನುರ್ವಧೂಃ ಸ್ವಸಾ ।
ಗೌರ್ನೌರುಪಾನದ್ದ್ಯೌರ್ಗೌಃ ಕ್ಷುತ್ ಕಕುಪ್ಸಂವಿತ್ತು ವಾ ಕ್ವಚಿತ್ ॥ ೪೧ ॥

---

೩೭. ನಾನು ರಾಮನ ದಾಸನಾಗಿರುವೆನು. ಅವನಿಂದಲೇ ಮುಕ್ತಿಯು ಲಭಿಸಬೇಕೆಂದು ಬಯಸುವೆನು, ನನ್ನ ಮನಸ್ಸು ಅವನಲ್ಲಿಯೇ ಉದಾರವಾದ ಅನುರಾಗವನ್ನು ಹೊಂದಲಿ. ರಾಮನೇ! ನಿನಗೆ ನಮಸ್ಕಾರ.

೩೭-೩೮. ಮುಂದಿನ ಶ್ಲೋಕಗಳಿಂದ ನಾನಾವಿಧಶಬ್ದಗಳು ಉದಾಹರಿಸಲ್ಪಟ್ಟಿವೆ. ಸರ್ವ ಮುಂತಾದ ಶಬ್ದಗಳು, ಗೋಪಾ, ಸಖಾ, ಪತಿಃ, ಹರಿಃ, ಸುಶ್ರೀಃ, ಭಾನುಃ, ಸ್ವಯಂಭೂಃ, ಕರ್ತಾರಃ, ಗೌಃ, ನೌಃ, ಅನಡ್ವಾನ್, ಗೋಧುಕ್, ಲಿಟ್, ದ್ವೇ ತ್ರಯಃ, ಚತ್ವಾರಃ.

೩೯. ರಾಜಾ, ಪಂಥಾಃ, ದಂಡೀ, ಬ್ರಹ್ಮಹಾ, ಪಂಚ, ಅಷ್ಟ, ಅಷ್ಟೌ ಅಯಂ, ಸಮ್ರಾಟ್, ಸಃ, ಬಿಭೃತ್, ವಪುಃ, ಮನಃ.

೪೦. ಪ್ರತ್ಯಙ್, ಪುಮಾನ್, ಮಹಾನ್, ಧೀಮಾನ್, ವಿದ್ವಾನ್, ಷಟ್, ಪಿಪಠೀಃ, ದೋಃ, ಉಶನಾ, ಅಸೌ ಇವುಗಳು ಪುಲ್ಲಿಂಗ ಶಬ್ದಗಳು.

೪೧. ರಾಧಾ, ಸರ್ವಾ, ಗತಿಃ, ಗೋಪೀ, ಸ್ತ್ರೀ, ಶ್ರೀಃ, ಧೇನುಃ, ವಧೂಃ, ಸ್ವಸಾ, ಗೌಃ, ನೌಃ, ಉಪಾನತ್, ದ್ಯೌಃ, ಗೌಃ, ಕ್ಷುತ್, ಕಕುಪ್, ಸಂವಿತ್ ಅಥವಾ ಸಂವಿದ್.

ರುಗ್ವಿಡುದ್ವಾಃ ಸ್ತ್ರಿಯಸ್ತಪಃ ಕುಲಂ ಸೋಮಪಮಕ್ಷಿ ಚ ।
ಗ್ರಾಮಣ್ಯಂಬು ಖಲಪ್ಯೇವಂ ಕರ್ತೃ ಚಾತಿರಿ ವಾsತಿನು　　॥ ೪೨ ॥

ಸ್ವನುಡುಚ್ಚ ವಿಮಲದ್ಯು ವಾಶ್ಚತ್ವಾರೀದಮೇವ ಚ ।
ಏತದ್ಬ್ರಹ್ಮಾಹಶ್ಚ ದಂಡಿ ಅಸೃಕ್ಕಿಂಚಿತ್ತ್ಯದಾದಿ ಚ　　॥ ೪೩ ॥

ಏತದ್ಬೇಭಿದ್ಗವಾಜ್, ಗವಾಕ್, ಗೋಅಕ್, ಗೋಅಜ್, ಗೋಕ್,
ಗೋಜ್ ।
ತಿರ್ಯಗ್ಯಕೃಚ್ಛಕೃಚ್ಚೈವ ದದದ್ಭವತ್ಪಚತ್ತುದತ್　　॥ ೪೪ ॥

ದೀವ್ಯದ್ಧನುಶ್ಚ ಪಿಪಠೀಃ ಪಯೋದಃ ಸುಮಾಂಸಿ ಚ ।
ಗುಣದ್ರವ್ಯಕ್ರಿಯಾಯೋಗಾಂ ಸ್ತ್ರಿಲಿಂಗಾಂಶ್ಚ ಕತಿ ಬ್ರುವೇ　　॥ ೪೫ ॥

ಶುಕ್ಲಃ ಕೀಲಾಲಪಾಶ್ಚೈವ ಶುಚಿಶ್ಚ ಗ್ರಾಮಣೀಃ ಸುಧೀಃ ।
ಪಟುಃ ಸ್ವಯಂಭೂಃ ಕರ್ತಾ ಚ ಮಾತಾ ಚೈವ ಪಿತಾ ಚ ನಾ　　॥ ೪೬ ॥

---

೪೨. ರುಕ್, ವಿಟ್, ಉದ್ವಾಃ ಇವು ಸ್ತ್ರೀಲಿಂಗಗಳಲ್ಲಿ ಇರುತ್ತವೆ. ತಪಃ, ಕುಲಂ, ಸೋಮಪಂ, ಅಕ್ಷಿ, ಗ್ರಾಮಣಿ, ಅಂಬು, ಖಲಪ್, ಕರ್ತೃ, ಅತಿರಿ, ಅತಿನು,

೪೩-೪೪. ಸ್ವನುಡುತ್, ವಿಮಲದ್ಯು, ವಾಃ, ಚತ್ವಾರಿ, ಇದಂ, ಏತತ್ ಬ್ರಹ್ಮ, ಅಹಃ, ದಂಡಿ, ಅಸೃಕ್, ತ್ಯದ್, ಏತತ್, ಬೇಭಿತ್, ಗವಾಕ್, ಗವಾಜ್, ಗೋಅಕ್, ಗೋಅಜ್, ಗೋಕ್, ಗೋಜ್, ತಿರ್ಯಕ್, ಯಕೃತ್, ಶಕೃತ್, ದದತ್, ಭವತ್, ಪಚತ್, ತುದತ್,

೪೫. ದೀವ್ಯತ್, ಧನುಃ, ಪಿಪಠೀ, ಪಯಃ, ಅದಃ, ಸುಮಾಂಸಿ ಇತ್ಯಾದಿ ಶಬ್ದಗಳು ನಪುಂಸಕಲಿಂಗಗಳಾಗಿವೆ. ಗುಣದ್ರವ್ಯಕ್ರಿಯೆಗಳ ಯೋಗವುಳ್ಳದಾಗಿ ಮೂರು ಲಿಂಗಗಳಲ್ಲಿಯೂ ರೂಪವನ್ನು ತಾಳುವ ಕೆಲವು ಶಬ್ದಗಳನ್ನು ಹೇಳುವೆನು.

೪೬. ಶುಕ್ಲಃ, ಕೀಲಾಲಪಾಃ, ಶುಚಿಃ, ಗ್ರಾಮಣೀಃ, ಸುಧೀಃ, ಪಟುಃ, ಸ್ವಯಂಭೂಃ, ಕರ್ತಾ, ಮಾತಾ, ಪಿತಾ, ನಾ.

ಸತ್ಯಾ ನಾಗ್ಯಸ್ತಥಾ ಪುಂಸೋ ಮತಿಭ್ರಮುರದೀದ್ರ್ಯಯಾತ್ ।
ಧನಾಕೃಸೋಮೌ ಚಾಗರ್ಹಸ್ತಾವಿದ್ಗ್ರಥಾ ಸ್ವರ್ಣನ್ಬಹೂ ॥ ೪೭ ॥

ರಿಮುಷಬ್ವಿಷಾ ದ್ವಂದ್ವಜಾತಾನಹೋ ತಥಾ ।
ಸರ್ವಂ ವಿಶ್ವೋಭಯೋ ಚೋಭೌ ಅನ್ಯೋಂತರೇತರಾಣಿ ಚ ॥ ೪೮ ॥

ಉತ್ತರಶ್ಚೋತ್ತಮೋ ನೇಮುಸ್ತ್ವಸಮೋಥ ಸಮಾ ಇಷಃ ।
ಪೂರ್ವೋತ್ತರೋತ್ತರಾಶ್ಚೈವ ದಕ್ಷಿಣಶ್ಚೋತ್ತರಾಧರೌ ॥ ೪೯ ॥

ಅಪರಶ್ಚತುರೋಷ್ಯೇತದ್ಯಾವತ್ತತ್ಕಿಮಸೌ ದ್ವಯಂ ।
ಯುಷ್ಮದಸ್ಮಚ್ಚ ಪ್ರಥಮುಶ್ಚರಮೋಲ್ಪಸ್ತಥಾರ್ಧಕಃ ॥ ೫೦ ॥

ನೋರಃ ಕತಿಪಯೋ ದ್ವೇ ಚ ತ್ರಯೋ ಶುದ್ಧಾದಯಸ್ತಥಾ ।
ಸ್ವೇಕಾ ಭು ವಿರೋಧ ಪರಿ ವಿಪರ್ಯಶ್ಚಾವ್ಯಯಾಸ್ತಥಾ ॥ ೫೧ ॥

---

೪೭-೪೮. ಸತ್ಯಾ, ನಾಗ್ಯಃ ಇವುಗಳು ವಿಕಲ್ಪದಿಂದ ಭಿನ್ನಲಿಂಗಗಳಾಗುವುವು. ಧನಾ, ಕೃಸೋಮ, ಅಗರ್ಹಃ, ಇದ್ಗ್ರಥಃ, ಸ್ವರ್ಣನ್, ಬಹು, ರಿಮುಷಪ್, ವಿಷಾ ಎಂಬ ಶಬ್ದಗಳು,

೪೮-೪೯. ಸರ್ವ, ವಿಶ್ವ, ಉಭಯ, ಉಭೌ, ಅನ್ಯ, ಅಂತರಾ, ಇತರ, ಉತ್ತರ, ಉತ್ತಮ, ನೇಮ, ಅಸಮ, ಸಮ, ಇಷಃ, ಪೂರ್ವ, ಉತ್ತರೋತ್ತರ, ದಕ್ಷಿಣ, ಉತ್ತರಾಧರ,

೫೦. ಅಪರ, ಚತುರ, ಯಾವತ್, ತತ್, ಕಿಂ, ಅಸೌ, ದ್ವಯ, ಯುಷ್ಮತ್, ಅಸ್ಮತ್, ಪ್ರಥಮ, ಚರಮ, ಅಲ್ಪ, ಅರ್ಧ,

೫೧. ನೋರಃ, ಕತಿಪಯ, ದ್ವೇ, ತ್ರಯಃ, ಶುದ್ಧ, ಸ್ವ, ಏಕ, ಭು, ವಿರೋಧ, ಪರಿ, ವಿಪರ್ಯಯ, ಅವ್ಯಯ ಈ ಶಬ್ದಗಳು ಸಂದರ್ಭಾನುಗುಣವಾಗಿ ತ್ರಿಲಿಂಗಗಳಾಗುವುವು.

ತದ್ಧಿತಾಶ್ಚಾಪ್ಯಪತ್ಯಾರ್ಥೇ ಪಾಂಡವಾಃ ಶ್ರೈಧರಸ್ತಥಾ ।
ಗಾರ್ಗ್ಯೋ ನಾಡಾಯನಾತ್ರೇಯೌ ಗಾಂಗೇಯಃ ಪೈತೃಷ್ವಸ್ರೀಯಃ ॥ ೫೨ ॥

ದೇವತಾರ್ಥೇ ಚೇದಮರ್ಥೇ ಹ್ಯೈಂದ್ರಂ ಬ್ರಾಹ್ಮೋ ಹವಿರ್ಬಲೀ ।
ಕ್ರಿಯಾಯುಜೋಃ ಕರ್ಮಕರ್ತ್ರೋರ್ಧೌರೇಯಃ ಕೌಕುಭಂ ತಥಾ ॥೫೩॥

ಭವಾದ್ಯರ್ಥೇ ತು ಕಾನೀನಃ ಕ್ಷತ್ರಿಯೋ ವೈದಿಕಃ ಸ್ವಕಃ ।
ಸ್ವಾರ್ಥೇ ಚೋರಸ್ತು ತುಲ್ಯಾರ್ಥೇ ಚಂದ್ರವನ್ಮುಖಮೀಕ್ಷತೇ ॥ ೫೪ ॥

ಬ್ರಾಹ್ಮಣತ್ವಂ ಬ್ರಾಹ್ಮಣತಾ ಭಾವೇ ಬ್ರಾಹ್ಮಣ್ಯಮೇವ ಚ ।
ಗೋಮಾನ್ ಧನೀ ಚ ಧನವಾನಸ್ತ್ಯರ್ಥೇ ಪ್ರಮಿತೌ ಕಿಯಾನ್ ॥ ೫೫ ॥

---

೫೨. ಮಗ ಎಂಬರ್ಥದಲ್ಲಿ ತದ್ಧಿತಪ್ರತ್ಯಯಗಳು ಬರುವುವು. ಉದಾ– ಪಾಂಡವಾಃ=ಪಾಂಡುರಾಜನ ಮಕ್ಕಳು. ಇದೇ ರೀತಿಯಾಗಿ ಶ್ರೈಧರ, ಗಾರ್ಗ್ಯಃ, ನಾಡಾಯನಃ, ಆತ್ರೇಯಃ, ಗಾಂಗೇಯಃ ಮತ್ತು ಪೈತೃಷ್ವಸ್ರೀಯಃ ಎಂಬ ಪದಗಳು ಇವೆ.

೫೩. ದೇವತೆ ಎಂಬ ಅರ್ಥದಲ್ಲಿಯೂ, ಸಂಬಂಧಿ ಎಂಬ ಅರ್ಥದಲ್ಲಿಯೂ ತದ್ಧಿತಪ್ರತ್ಯಯಗಳು ಬರುತ್ತವೆ. ಉದಾ—ಐಂದ್ರಂ, ಬ್ರಾಹ್ಮಃ ಅಂದರೆ ಇಂದ್ರದೇವತಾಕ ಬ್ರಹ್ಮದೇವತಾಕ ಹವಿಸ್ಸು ಎಂದರ್ಥ. ಬಲವುಳ್ಳವನು ಎಂಬರ್ಥದಲ್ಲಿ ಬಲೀ ಎಂಬುದು ಕ್ರಿಯಾಯೋಗವುಳ್ಳ ಕರ್ಮಕರ್ತೃಗಳಲ್ಲಿ 'ಧೌರೇಯಃ ಕಾಕುಭಂ' ಎಂಬ ತದ್ಧಿತಾಂತ ಶಬ್ದಗಳು ನಿಷ್ಪನ್ನವಾಗಿವೆ.

೫೪. 'ಭವ'=ಹುಟ್ಟಿದವನು ಮುಂತಾದ ಅರ್ಥದಲ್ಲಿ ಕಾನೀನಃ, ಕ್ಷತ್ರಿಯಃ, ವೈದಿಕಃ, ಸ್ವಕಃ ಎಂಬ ಪದಗಳೂ ಸ್ವಾರ್ಥದಲ್ಲಿ 'ಚೋರಃ' ಎಂಬುದೂ ತುಲ್ಯ= ಸಮಾನ ಎಂಬರ್ಥದಲ್ಲಿ ಚಂದ್ರವತ್ ಎಂಬುದೂ ನಿಷ್ಪನ್ನವಾಗಿವೆ.

೫೫. ಭಾವಾರ್ಥದಲ್ಲಿ ಬ್ರಾಹ್ಮಣತ್ವಂ, ಬ್ರಾಹ್ಮಣತಾ, ಬ್ರಾಹ್ಮಣ್ಯಂ ಇವೂ, ಉಳ್ಳವನು ಎಂಬರ್ಥದಲ್ಲಿ ಗೋಮಾನ್, ಧನೀ, ಧನವಾನ್ ಇವೂ, ಅಳತೆಯಲ್ಲಿ ಕಿಯಾನ್ ಎಂಬುದೂ ನಿಷ್ಪನ್ನವಾಗಿವೆ.

**ಜಾತಾರ್ಥೇ ತುಂದಿಲಃ ಶ್ರದ್ಧಾಲುರೌನ್ನತ್ಯೇ ತು ದಂತುರಃ ।**
**ಸ್ರಗ್ವೀ ತಪಸ್ವೀ ಮೇಧಾವೀ ಮಾಯಾವ್ಯಸ್ತ್ಯರ್ಥ ಏವ ಚ ॥ ೫೬ ॥**

**ವಾಚಾಲಶ್ಚೈವ ವಾಚಾಟೋ ಬಹುಕುತ್ಸಿತಭಾಷಿಣಿ ।**
**ಈಷದಪರಿಸಮಾಪ್ತೌ ಕಲ್ಪಬ್ದೇಶೀಯ ಏವ ಚ ॥ ೫೭ ॥**

**ಕವಿಕಲ್ಪಃ ಕವಿದೇಶ್ಯಃ ಪ್ರಕಾರವಚನೇ ತಥಾ ।**
**ಪಟುಜಾತೀಯಃ ಕುತ್ಸಾಯಾಂ ವೈದ್ಯಪಾಶಃ ಪ್ರಶಂಸನೇ ॥ ೫೮ ॥**

**ವೈದ್ಯರೂಪೋ ಭೂತಪೂರ್ವೇ ಮತೋ ದೃಷ್ಟಚರೋ ಮುನೇ ।**
**ಪ್ರಾಚುರ್ಯಾದಿಷ್ವನ್ನಮಯೋ ಮೃಣ್ಮಯಃ ಸ್ತ್ರೀಮಯಸ್ತಥಾ ॥ ೫೯ ॥**

**ಜಾತಾರ್ಥೇ ಲಜ್ಜಿತೋಽತ್ಯರ್ಥೇ ಶ್ರೇಯಾನ್ ಶ್ರೇಷ್ಠಶ್ಚ ನಾರದ ।**
**ಶುಕ್ಲತರಃ ಕೃಷ್ಣತಮಃ ಕಿಮ ಆಖ್ಯಾನತೋಽವ್ಯಯಾನ್ ॥ ೬೦ ॥**

---

೫೬. ಜಾತ ಎಂಬರ್ಥದಲ್ಲಿ ತುಂದಿಲಃ, ಶ್ರದ್ಧಾಲುಃ, ಔನ್ನತ್ಯಾದ್ಯರ್ಥದಲ್ಲಿ ದಂತುರಃ, ಇದೆ ಎಂಬರ್ಥದಲ್ಲಿ ಸ್ರಗ್ವೀ, ತಪಸ್ವೀ, ಮೇಧಾವೀ, ಮಾಯಾವೀ ಎಂಬುವು ನಿಷ್ಪನ್ನವಾಗಿವೆ.

೫೭. ನಿಂದಿತ ಬಹುಭಾಷಣಶೀಲ ಎಂಬರ್ಥದಲ್ಲಿ ವಾಚಾಲ, ವಾಚಾಟ ಪದಗಳೂ ಸಂಪೂರ್ಣವಾಗಿಲ್ಲದೆ ಸ್ವಲ್ಪಕಮ್ಮಿ ಎಂಬರ್ಥದಲ್ಲಿ ಕಲ್ಪ, ದೇಶೀಯ ಎಂಬ ಪ್ರತ್ಯಯಗಳು ಬರುತ್ತವೆ.

೫೮. ಉದಾ—ಕವಿಕಲ್ಪಃ, ಕವಿದೇಶ್ಯಃ, ಪ್ರಕಾರವಚನದಲ್ಲಿಯೂ ಹಾಗೆಯೇ ತದ್ಧಿತಪ್ರತ್ಯಯಗಳು ಬರುತ್ತವೆ. ನಿಂದೆಯಲ್ಲಿ ಪಟುಜಾತೀಯಃ, ಪ್ರಶಂಸೆಯಲ್ಲಿ ವೈದ್ಯಪಾಶಃ, ವೈದ್ಯರೂಪಃ ಎಂಬ ಶಬ್ದಗಳು ನಿಷ್ಪನ್ನವಾಗಿವೆ.

೫೯. ಬಹಳಹಿಂದೆ ಎಂಬರ್ಥದಲ್ಲಿ ದೃಷ್ಟಚರಃ, ಪ್ರಾಚುರ್ಯ ಮುಂತಾದ ಅರ್ಥದಲ್ಲಿ 'ಅನ್ನಮಯ, ಮೃಣ್ಮಯ, ಸ್ತ್ರೀಮಯ' ಎಂಬುದು ಸಿದ್ಧವಾಗಿದೆ.

೬೦. ಜಾತ ಎಂಬ ಅರ್ಥದಲ್ಲಿ ಲಜ್ಜಿತಃ, ಅತಿ ಎಂಬರ್ಥದಲ್ಲಿ ಶ್ರೇಯಾನ್, ಶ್ರೇಷ್ಠಃ, ಶುಕ್ಲತರಃ, ಕೃಷ್ಣತಮಃ ಎಂಬ ತದ್ಧಿತಾಂತ ಪದಗಳು ಸಿದ್ಧವಾಗಿವೆ. 'ಕಿಂ' ಮುಂತಾದ ಶಬ್ದದ ಮೇಲೆ ಈ ಪ್ರತ್ಯಯ ಬಂದು ಅವ್ಯಯಗಳಾಗುವುವು.

ಕಿತರಾಂ ಚ್ಚೈನಾತಿತರಾಮುಭಿಹ್ಯುಚ್ಚೈಸ್ತರಾಮಪಿ ।
ಪರಿಮಾಣೇ ಜಾನುದಘ್ನಂ ಜಾನುದ್ವಯಸಮಿತ್ಯಪಿ ॥ ೬೧ ॥

ಜಾನುಮಾತ್ರಂ ಚ ನಿರ್ಧಾರೇ ಬಹೂನಾಂ ಚ ದ್ವಯೋಃ ಕ್ರಮಾತ್ ।
ಕತಮಃ ಕತರಃ ಸಂಖ್ಯೇಯವಿಶೇಷಾವಧಾರಣೇ ॥ ೬೨ ॥

ದ್ವಿತೀಯಶ್ಚ ತೃತೀಯಶ್ಚ ಚತುರ್ಥಃ ಷಷ್ಠಪಂಚಮೌ ।
ಏಕಾದಶಃ ಕತಿಪಯಃ ಕತಿಥಃ ಕತಿ ನಾರದ ॥ ೬೩ ॥

ವಿಂಶಶ್ಚ ವಿಂಶತಿತಮಸ್ತಥಾ ಶತತಮಾದಯಃ ।
ದ್ವೇಧಾ ದ್ವೈಧಾ ದ್ವಿಧಾ ಸಂಖ್ಯಾ ಪ್ರಕಾರೇಽಥ ಮುನೀಶ್ವರ ॥ ೬೪ ॥

ಕ್ರಿಯಾವೃತ್ತೌ ಪಂಚಕೃತ್ವೋ ದ್ವಿಸ್ತ್ರಿರ್ಬಹುಶ ಇತ್ಯಪಿ ।
ದ್ವಿತಯಂ ತ್ರಿತಯಂ ಚಾಪಿ ಸಂಖ್ಯಾಯಾಂ ಹಿ ದ್ವಯಂ ತ್ರಯಂ ॥ ೬೫ ॥

---

೬೧-೬೨. ಉದಾ—ಕಿತರಾಂ, ಅತಿತರಾಂ, ಉಚ್ಚೈಸ್ತರಾಂ ಎಂಬುವುಗಳು, ಪರಿಮಾಣಾರ್ಥದಲ್ಲಿ ಜಾನುದಘ್ನಂ, ಜಾನುದ್ವಯಸಂ, ಜಾನುಮಾತ್ರಂ ಎಂಬ ತದ್ಧಿತ ಪ್ರತ್ಯಯಾಂತ ಪದಗಳು, ಬಹುಪದಾರ್ಥಗಳಲ್ಲಿ ಒಂದನ್ನು ನಿರ್ಧರಿಸಿ ಹೇಳಲು 'ಕತಮ' ಎರಡರಲ್ಲಿ ಒಂದನ್ನು ನಿರ್ಧರಿಸಿ ಹೇಳಲು ಕತರಃ ಎಂಬ ಪದಗಳೂ ಸಿದ್ಧವಾಗಿವೆ.

೬೩-೬೪. ಸಂಖ್ಯೆಯ ವಿಶೇಷವನ್ನು ನಿಷ್ಕರ್ಷಿಸಿ ಹೇಳಲು ದ್ವಿತೀಯ, ತೃತೀಯ, ಚತುರ್ಥ, ಪಂಚಮ, ಷಷ್ಠ, ಏಕಾದಶ, ಕತಿಪಯ, ಕತಿಥಃ, ಕತಿ, ವಿಂಶ, ವಿಂಶತಿತಮ, ಶತತಮ ಮುಂತಾದುವೂ, ಎರಡುವಿಧ ಮುಂತಾಗಿ ಸಂಖ್ಯೆಯ ಪ್ರಕಾರವನ್ನು ಹೇಳಲು ದ್ವೈಧಾ, ದ್ವೇಧಾ, ದ್ವಿಧಾ ಎಂಬ ಪದಗಳೂ ಉಕ್ತವಾಗಿವೆ.

೬೫. ಕ್ರಿಯೆಯ ಆವೃತ್ತಿಯನ್ನು ಬೋಧಿಸಲು ಪಂಚಕೃತ್ವಃ ದ್ವಿಃ, ತ್ರಿಃ, ಬಹುಶಃ, ದ್ವಿತಯ, ತ್ರಿತಿಯ ಎಂಬ ಪದಗಳು, ಸಂಖ್ಯೆಯನ್ನು ಬೋಧಿಸಲು ದ್ವಯ, ತ್ರಯ ಎಂಬ ಪದಗಳೂ ಉಕ್ತವಾಗಿವೆ.

ಕುಟೀರಶ್ಚ ಸಮೀರಶ್ಚ ಶಂಡಾರೋಲ್ಪಾರ್ಥಕೇ ಮತಃ ।
ಸ್ತ್ರೈಣಃ ಪೌಷ್ಣಸ್ತುಂಡಿಭಶ್ಚ ವೃಂದಾರಕ ಕೃಷೀವಲೌ ॥ ೬೬ ॥

ಮಲಿನೋ ವಿಕಟೋ ಗೋಮೀ ಭೌರಿಕೀವಿಧಮುತ್ಕಟಂ ।
ಅವಟೀಟೋವನಾಟೀ ನಿಬಿಡಂ ಚೇಕ್ಷುಶಾಕಿನಂ ॥ ೬೭ ॥

ನಿಬಿರೀ ಸಮೀಕ್ಷುಕಾರೀ ವಿತ್ತೋ ವಿದ್ಯಾಚಣಸ್ತಥಾ ।
ವಿದ್ಯಾಚುಂಚುರ್ಬಹುತಿಥಂ ಪರ್ವತಃ ಶೃಂಗಿಣಸ್ತಥಾ ॥ ೬೮ ॥

ಸ್ವಾಮೀ ವಿಷಮರೂಪ್ಯಂ ಚೋಪತ್ಯಕಾಧಿತ್ಯಕಾ ತಥಾ ।
ಚಿಲ್ಲಶ್ಚ ಚಿಪಿಟಂ ಚಿಕ್ವಂ ವಾತೂಲಃ ಕುತಪಸ್ತಥಾ ॥ ೬೯ ॥

ವಲ್ಲಶ್ಚ ಹಿಮೇಲುಶ್ಚ ಕಹೋಡಶ್ಚೋಪಡಸ್ತತಃ ।
ಊರ್ಣಾಯುಶ್ಚ ಮರೂತಶ್ಚೈಕಾಕೀ ಚರ್ಮಣ್ವತೀ ತಥಾ ॥ ೭೦ ॥

ಜ್ಯೋತ್ಸ್ನಾ ತಮಿಸ್ರಾಷ್ಠೀವಚ್ಚ ಕಕ್ಷೀವಚ್ಚರ್ಮಣ್ವತೀ ।
ಆಸಂದೀವಚ್ಚ ಚಕ್ರೀವತ್ತೂಷ್ಣೀಕಾಂ ಜಲ್ಪತಕ್ಯಪಿ ॥ ೭೧ ॥

೬೬-೭೩. ಅಲ್ಪ ಎಂಬರ್ಥವನ್ನು ಹೇಳುವಾಗ ಕುಟೀರ, ಸಮೀರ, ಶಂಡಾರ ಇವುಗಳು ಸಮ್ಮತಪದಗಳು. ತದ್ಧಿತ ಪ್ರತ್ಯಯಗಳ ಗತಿಯು ವಿಚಿತ್ರವಾದುದು. ಬಹುವಿಧವಾದ ಅರ್ಥಗಳಲ್ಲಿ ತದ್ಧಿತಾಂತಶಬ್ದಗಳು ವಿಹಿತವಾಗಿವೆಯೆಂಬುದನ್ನು ಅನೇಕ ಉದಾಹರಣೆಗಳಿಂದ ಮುಂದಿನ ಐದುಶ್ಲೋಕಗಳಲ್ಲಿ ಹೇಳಿರುತ್ತಾರೆ. ಅವು ಯಾವುವೆಂದರೆ—ಸ್ತ್ರೈಣಃ, ಪೌಷ್ಣಃ, ತುಂಡಿಭಃ, ವೃಂದಾರಕಃ, ಕೃಷೀವಲಃ, ಮಲಿನಃ, ವಿಕಟಃ, ಗೋಮೀ, ಭೌರಿಕೀವಿಧಂ, ಉತ್ಕಟಂ, ಅವಟೀಟಃ, ಅವನಾಟೀ, ನಿಬಿಡ, ಇಕ್ಷುಶಾಕಿನಃ, ನಿಬರೀ, ಸಮೀಕ್ಷಕಾರೀ, ವಿತ್ತಾರ್ಥದಲ್ಲಿ ವಿದ್ಯಾಚಣ, ವಿದ್ಯಾಚುಂಚು, ಬಹುತಿಥಂ, ಪರ್ವತಃ, ಶೃಂಗಿಣಃ, ಸ್ವಾಮೀ, ವಿಷಮಃ, ರೂಪ್ಯಂ, ಉಪತ್ಯಕಾ, ಅಧಿತ್ಯಕಾ, ಚಿಲ್ಲಃ, ಚಿಪಿಟಂ, ಚಿಕ್ವಂ, ವಾತೂಲಃ

**ಕಂಭಶ್ಚ ಕಂಯುಃ ಕಂವಶ್ಚ ನಾರದ ಕೇತಿಃ ಕಂತುಃ ।**
**ಕಂತಕಂಪೌಶಂ ವಸ್ತಥೈವ ಚ ಶಂತಃ ಶಂತಿಃ ಶಂಭಶಂತೌ ॥ ೬೨ ॥**

**ಶಂಯೋ ಹಂಯುಃ ಶುಭಂ ಯುವತ್**
**ಭವತಿ ಬಭೂವ ಭವಿತಾ ಭವಿಷ್ಯತಿ ಭವತ್ವಭವತ್ಭವೇಚ್ಚಾಪಿ ॥ ೬೩ ॥**

**ಭೂಯಾದಭೂದಭವಿಷ್ಯಲ್ಲಾದಾವೇತಾನಿ ರೂಪಾಣಿ ।**
**ಅತ್ತಿ ಜಘಾಸಾತ್ತಾತ್ಸ್ಯತ್ಯತ್ತ್ವದದದ್ಯಾದ್ದ್ವಿರಘಾಸದಾತ್ಸ್ಯತ್ ॥ ೬೪ ॥**

**ಜುಹೋತಿ ಜುಹಾವ ಜುಹವಾಂಚಕಾರ ಹೋತಾ ಹೋಷ್ಯತಿ ಜುಹೋತು**
**ಅಜುಹೋಜ್ಜುಹುಯಾದ್ಧೂಯಾದಹೌಷೀದಹೋಷ್ಯದ್ದೀವ್ಯತಿ ।**
**ದಿದೇವ ದೇವಿತಾ ದೇವಿಷ್ಯತಿ ಚ ಅದೀವ್ಯದ್ದೀವ್ಯೇದ್ದೀವ್ಯಾದ್ವೈ ॥ ೬೫ ॥**

---

ಕುತಪಃ, ವಲ್ಲಃ, ಹಿಮೇಲುಃ, ಕಹೋಡಃ, ಉಪಡಃ, ಊರ್ಣಾಯುಃ, ಮರೂತಃ, ಏಕಾಕೀ, ಚರ್ಮಣ್ವತೀ, ಜ್ಯೋತ್ಸ್ನಾ, ತಮಿಸ್ರಾ, ಅಷ್ಠೀವತ್, ಕಕ್ಷೀವತ್, ಆಸಂದೀವತ್, ಚಕ್ರೀವತ್, ತೂಷ್ಣೀಕಾ, ಜಲ್ಪತಕೀ, ಕಂಭಃ, ಕಂಯುಃ, ಕಂವಃ, ಕೇತಿಃ, ಕಂತುಃ, ಕಂತಃ, ಕಂಪಃ, ಶಂವಃ, ಶಂತಃ ಶಂತಿಃ, ಶಂಭಃ, ಶಂತಃ, ಶಂಯೋ, ಹಂಯುಃ, ಶುಭಂ, ಯುವತ್ ಇತ್ಯಾದಿ ತದ್ಧಿತಾಂತಶಬ್ದಗಳು ನಾನಾರ್ಥಗಳಲ್ಲಿ ವಿಹಿತವಾಗಿವೆಯೆಂದು ತಿಳಿಯಬೇಕು.

೬೩-೬೪. ಈಗ ಕೆಲವು ಧಾತುಗಳಿಗೆ ದಶಲಕಾರಗಳಲ್ಲಿ ಆಗುವ ರೂಪಗಳನ್ನು ಉದಾಹರಿಸಿದೆ. ಮೊದಲು ಭೂ ಧಾತುವಿನ ದಶಲಕಾರ ರೂಪಗಳನ್ನು ಹೇಳಿದೆ. ಹೇಗೆಂದರೆ—ಭವತಿ, ಬಭೂವ, ಭವಿತಾ, ಭವಿಷ್ಯತಿ, ಭವತು, ಅಭವತ್, ಭವೇತ್, ಭೂಯಾತ್, ಅಭೂತ್, ಅಭವಿಷ್ಯತ್ ಎಂದಾಗುತ್ತವೆ. ಹೀಗೆಯೇ ಲಡಾದಿಯಾಗಿ ದಶಲಕಾರಗಳಲ್ಲಿ ಅದ ಧಾತುವಿಗೆ (ಎರಡನೇಗಣ) ಅತ್ತಿ, ಜಘಾಸ, ಅತ್ತಾ, ಅತ್ಸ್ಯತಿ, ಅತ್ತು, ಆದತ್, ಅದ್ಯಾತ್, ಅಘಸತ್, ಆತ್ಸ್ಯತ್ ಎಂಬುದಾಗಿ ಆಗುತ್ತವೆ.

೬೫-೬೬. ಹು ಎಂಬ ಧಾತುವಿಗೆ ಜುಹೋತಿ, ಜುಹಾವ ಅಥವಾ ಜುಹವಾಂಚಕಾರ, ಹೋತಾ, ಹೋಷ್ಯತಿ, ಜುಹೋತು, ಅಜುಹೋತ್, ಜುಹುಯಾತ್, ಹೂಯಾತ್, ಅಹೌಷೀತ್, ಅಹೋಷ್ಯತ್ ಎಂಬುದಾಗಿ ದಶಲಕಾರ

**ಅದೇವೀದದೇವಿಷ್ಯತ್ಸುನೋತಿ ಸುಷಾವ ಸೋತಾ ಸೋಷ್ಯತಿ ವೈ ।
ಸುನೋತ್ವಸುನೋತ್ಸುನುಯಾತ್ಸ್ಯಾಯಾದಸಾವೀದಸೋಷ್ಯತ್ತುದತಿ ಚ ।
ತುತೋದ ತೋತ್ತಾ ತೋತ್ಸ್ಯತಿ ತುದತ್ತ್ವತುದತ್ತುದೇತ್ತುದ್ಯಾದ್ಧಿ ॥೭೬॥**

**ಅತೌತ್ಸೀದತೋತ್ಸ್ಯದಿತಿ ಚ ರುಣದ್ಧಿ ರುರೋಧ ರೋದ್ಧಾ ರೋತ್ಸ್ಯತಿ ವೈ ॥
ರುಣದ್ಧು ಅರುಣದ್ರುಧ್ಯಾದರೌತ್ಸೀದರೋತ್ಸ್ಯಚ್ಚ ।
ತನೋತಿ ತತಾನ ತನಿತಾ ತನಿಷ್ಯತಿ ತನೋತ್ವತನೋತ್ತನುಯಾದ್ಧಿ ॥ ೭೭ ॥**

**ಅತನೀಚ್ಚಾತಾನೀದತನಿಷ್ಯತ್ಕ್ರೀಣಾತಿ
ಚಿಕ್ರಾಯ ಕ್ರೇತಾ ಕ್ರೇಷ್ಯತಿ ಕ್ರೀಣಾತ್ವಿತಿ ಚ ।
ಅಕ್ರೀಣಾತ್ಕ್ರೀಣೀಯಾತ್ಕ್ರೀಯಾದಕ್ರೈಷೀದಕ್ರೇಷ್ಯಚ್ಚೋರಯತಿ ।
ಚೋರಯಾಮಾಸ ಚೋರಯಿತಾ ಚೋರಯಿಷ್ಯತಿ ಚೋರಯತು ॥ ೭೮ ॥**

---

ರೂಪಗಳು. ದಿವ್ ಎಂಬ ಧಾತುವಿಗೆ ದೀವ್ಯತಿ, ದಿದೇವ, ದೇವಿತಾ, ದೇವಿಷ್ಯತಿ, ದೀವ್ಯತು, ಅದೀವ್ಯತ್, ದೀವ್ಯೇತ್, ದೀವ್ಯಾತ್, ಅದೇವೀತ್, ಅದೆವಿಷ್ಯತ್ ಎಂಬುದಾಗಿ ದಶಲಕಾರರೂಪಗಳು.

೭೬-೭೭. ಷುಞ್ ಎಂಬ ಧಾತುವಿಗೆ ಸುನೋತಿ, ಸುಷಾವ, ಸೋತಾ, ಸೋಷ್ಯತಿ, ಸುನೋತು, ಅಸುನೋತ್, ಸುನುಯಾತ್, ಅಸಾವೀತ್, ಅಸೋಷ್ಯತ್ ಎಂಬುದಾಗಿ ದಶಲಕಾರದಲ್ಲಿ ಆಗುವ ರೂಪಗಳು. ತುದ ಧಾತುವಿಗೆ ತುದತಿ, ತುತೋದ, ತೋತ್ತಾ, ತೋತ್ಸ್ಯತಿ, ತುದತು, ಅತುದತ್, ತುದೇತ್, ತುದ್ಯಾತ್, ಅತೌತ್ಸೀತ್, ಅತ್ಯೋತ್ಸ್ಯತ್ ಎಂಬುದಾಗಿ ದಶಲಕಾರದ ರೂಪಗಳು.

೭೭. ರುಧ ಧಾತುವಿಗೆ ರುಣದ್ಧಿ, ರುರೋಃಧ, ರೋದ್ಧಾ, ರೋತ್ಸ್ಯತಿ, ರುಣದ್ಧು, ಅರುಣತ್, ರುಧ್ಯಾತ್, ಅರೌತ್ಸೀತ್, ಅರೋತ್ಸ್ಯತ್ ಎಂಬುದಾಗಿ ದಶಲಕಾರದರೂಪಗಳು. ತನು ಧಾತುವಿಗೆ ತನೋತಿ, ತತಾನ, ತನಿತಾ, ತನಿಷ್ಯತಿ, ತನೋತು, ಅತನೋತ್, ತನುಯಾತ್, ಅತನೀತ್+ಅತಾನೀತ್, ಅತನಿಷ್ಯತ್ ಎಂಬುದಾಗಿ ದಶರೂಪಗಳು.

೭೮೭೯-. ಕ್ರೀಞ್ ಧಾತುವಿಗೆ ಕ್ರೀಣಾತಿ, ಚಿಕ್ರಾಯ, ಕ್ರೇತಾ, ಕ್ರೇಷ್ಯತಿ, ಕ್ರೀಣಾತು, ಅಕ್ರೀಣಾತ್, ಕ್ರೀಣೀಯಾತ್, ಕ್ರೀಯಾತ್, ಅಕ್ರೈಷೀತ್,

ಅಚೋರಯಚ್ಚೋರಯೇಚ್ಚೋರ್ಯಾತ್
ಅಚೂಚುರದಚೋರಿಷ್ಯದಿತ್ಯೇವಂ ದಶ ವೈ ಗಣಾಃ ।
ಪ್ರಯೋಜಕೇ ಭಾವಯತಿ ಸನೀಚ್ಛಾಯಾಂ ಬುಭೂಷತಿ
ಕ್ರಿಯಾಸಮಭಿವ್ಯಾಹಾರೇ ತು ಪಂಡಿತೋ ಬೋಭೂಯತೇ ಮುನೇ ॥
ತಥಾ ಯಙ್ಲುಕಿ ಬೋಭವೀತಿ ಚ ಪಠ್ಯತೇ ।
ಪುತ್ರೀಯತೀತ್ಯಾತ್ಮನೀಚ್ಛಾಯಾಂ ತಥಾಚಾರೇಽಪಿ ನಾರದ ।
ಅನುದಾತ್ತಙಿತೋ ಧಾತೋಃ ಕ್ರಿಯಾ ವಿನಿಮಯೇ ತಥಾ　　　॥ ೮೦ ॥
ನಿವಿಶಾದೇಸ್ತಥಾ ವಿಪ್ರ ವಿಜಾನೀಹ್ಯಾತ್ಮನೇ ಪದಂ ।
ಪರಸ್ಮೈಪದಮಾಖ್ಯಾತಂ ಶೇಷಾತ್ಕರ್ತರಿ ಶಾಬ್ದಿಕೈಃ　　　॥ ೮೧ ॥

---

ಅಕ್ರೇಷ್ಯತ್ ಎಂಬ ಹತ್ತು ರೂಪಗಳು. ಚುರ ಧಾತುವಿಗೆ ಚೋರಯತಿ, ಚೋರಯಾಮಾಸ, ಚೋರಯಿತಾ, ಚೋರಯಿಷ್ಯತಿ, ಚೋರಯತು. ಅಚೋರಯತ್, ಚೋರಯೇತ್, ಚೋರ್ಯಾತ್, ಅಚೂಚುರತ್, ಅಚೋರಿಷ್ಯತ್ ಎಂಬ ಹತ್ತು ರೂಪಗಳು. ಈರೀತಿ ಹತ್ತು ಗಣಗಳು ಉದಾಹೃತವಾಗಿವೆ.

೭೯. ಪ್ರಯೋಜಕ (ಮಾಡಿಸುವವ)ನ ವ್ಯಾಪಾರವು ವಿವಕ್ಷಿತವಾದಾಗ ಣಿಜಂತ ಧಾತುಗಳನ್ನು ಪ್ರಯೋಗಿಸಬೇಕು. ಉದಾಹರಣೆ—ಭಾವಯತಿ. ಇಚ್ಛೆಯು ತೋರುವಾಗ ಸನ್ ಪ್ರತ್ಯಯ ಬರುತ್ತದೆ. ಉದಾ—ಬುಭೂಷತಿ. ಕ್ರಿಯಾಸಮಭಿವ್ಯಾಹಾರ ವಿವಕ್ಷಿತವಾದಾಗ (ಪುನಃಪುನಃ ಆಗುವಿಕೆ ಅಥವಾ ಅಧಿಕವಾಗಿ) ಬೋಭೂಯತೇ ಮುಂತಾದ ರೂಪಗಳಾಗುವುವು.

೮೦–೮೧. ಹಾಗೆಯೇ ಯಙ್ಲುಕ್ಕಿನಲ್ಲಿ ಬೋಭವೀತಿ ಎಂದು ಉಕ್ತವಾಗಿದೆ. ತನ್ನ ಇಚ್ಛೆ ಮತ್ತು ಆಚರಿಸುವುದು ಎಂಬರ್ಥದಲ್ಲಿ 'ಪುತ್ರೀಯತಿ' ಮುಂತಾದ ಕ್ರಿಯಾಪದಗಳು ವಿಹಿತವಾಗಿವೆ. ಇತ್ ಎಂಬ ಸಂಜ್ಞೆಯನ್ನು ಹೊಂದಿದ ಙಕಾರವುಳ್ಳದ್ದೂ ಅನುದಾತ್ತವೂ ಆದ ಧಾತುವಿಗೂ ಕ್ರಿಯಾವಿನಿಮಯವು ವಿವಕ್ಷಿತವಾದಾಗಲೂ, ನಿ ಎಂಬ ಉಪಸರ್ಗದಿಂದ ಕೂಡಿದ ವಿಶ ಧಾತುವಿಗೂ ಆತ್ಮನೇಪದಸಂಜ್ಞೆಯುಳ್ಳ ಪ್ರತ್ಯಯಗಳು ಬರುವುವೆಂದು ತಿಳಿ. ಉಳಿದ ಆ ಧಾತುಗಳು ಕರ್ತ್ರರ್ಥದಲ್ಲಿ ಪರಸ್ಮೈಪದಗಳೆಂದು ಶಾಬ್ದಿಕರಿಂದ ಉಕ್ತವಾಗಿದೆ.

ಇತ್ಸ್ವರಿತೇತಶ್ಚ ಉಭೇ ಯಕ್ಚ ಸ್ಯಾದ್ಭಾವಕರ್ಮಣೋಃ ।
ಸೌಕರ್ಯಾತಿಶಯಂ ಚೈವ ಯದಾ ದ್ಯೋತಯಿತುಂ ಮುನೇ ॥ ೮೨ ॥

ವಿವಕ್ಷ್ಯತೇ ನ ವ್ಯಾಪಾರೋ ಲಕ್ಷೇ ಕರ್ತುಸ್ತದಾ ಪರೇ ।
ಲಭಂತೇ ಕರ್ತೃತಾಂ ಪಶ್ಯ ಪಚ್ಯತೇ ಹ್ಯೋದನಃ ಸ್ವಯಂ ॥ ೮೩ ॥

ಸಾಧುವಾಸಿಶ್ಛಿನತ್ತ್ಯೇವಂ ಸ್ಥಾಲೀ ಪಚತಿ ವೈ ಮುನೇ ।
ಧಾತೋಃ ಸಕರ್ಮಕಾದ್ಭಾವೇ ಕರ್ಮಣ್ಯಪಿ ಲಪ್ರತ್ಯಯಾಃ ॥ ೮೪ ॥

ತಸ್ಮೈ ವಾ ಕರ್ಮಕಾದ್ವಿಪ್ರ ಭಾವೇ ಕರ್ತರಿ ಕೀರ್ತಿತಃ ।
ಫಲವ್ಯಾಪಾರಯೋರೇಕನಿಷ್ಠತಾಯಾಮಕರ್ಮಕಃ ॥ ೮೫ ॥

---

೮೨–೮೩. ಇಕಾರ ಇತ್ಸಂಜ್ಞೆಯುಳ್ಳ ಮತ್ತು ಸ್ವರಿತೇತ್ತಾದ ಧಾತುವು ಉಭಯಪದವನ್ನು ಹೊಂದುವುದು. ಯಕ್ ಎಂಬುದು ಭಾವಕರ್ಮಾರ್ಥದಲ್ಲಿ ಬರುವುದು. ಸೌಕರ್ಯಾತಿಶಯವನ್ನು ಪ್ರಕಾಶಪಡಿಸುವುದಕ್ಕಾಗಿ ಕರ್ತೃವ್ಯಾಪಾರವನ್ನು ವಿವಕ್ಷೆ ಮಾಡದಿರುವಾಗ ಕರ್ಮಾದಿಗಳೇ ಕರ್ತೃತ್ವವನ್ನು ಹೊಂದುವುವು. ಉದಾ—'ಓದನಃ ಪಚ್ಯತೇ ಸ್ವಯಂ' ಇಲ್ಲಿ ಕರ್ಮವಾದ ಓದನವು ಕರ್ತೃವಾಗಿ ನಿರ್ದೇಶಿಸಲ್ಪಟ್ಟಿದೆ.

೮೪. ಇದೇ ಪ್ರಕಾರ 'ಅಸಿಶ್ಛಿನತ್ತಿ, ಸ್ಥಾಲೀ ಪಚತಿ' ಎಂಬಲ್ಲಿ ಕರಣ ಮತ್ತು ಅಧಿಕರಣಗಳನ್ನು ಕರ್ತೃವಿವಕ್ಷೆಮಾಡಿ ನಿರ್ದೇಶಿಸಿರುತ್ತಾರೆ. ಛೇದನ ಕ್ರಿಯೆಯಲ್ಲಿ ಸಾಧನವಾದುದು ಕತ್ತಿಯು. ಈಗ ಅದೇ ಕರ್ತೃವು ಹೀಗೆಯೇ ಪಾಕವನ್ನು ಸ್ಥಾಲಿಯಲ್ಲಿ ಮಾಡುವುದರಿಂದ ಅದು ಅಧಿಕರಣವು. ಸಕರ್ಮಕ ಧಾತುವಿನ ಮೇಲೆ ಕರ್ತೃ, ಕರ್ಮ ಎಂಬರ್ಥದಲ್ಲಿ ಲಕಾರಪ್ರತ್ಯಯಗಳು ಬರುವುವು.

೮೫. ಅಕರ್ಮಕ ಧಾತುಗಳ ಮೇಲೆ ಕರ್ತೃ ಕರ್ಮ ಎಂಬರ್ಥದಲ್ಲಿ ಲಕಾರ ಪ್ರತ್ಯಯಗಳು ಬರುತ್ತವೆ. ಫಲ ಮತ್ತು ವ್ಯಾಪಾರಗಳು ಒಂದೆಡೆಯಲ್ಲಿದ್ದರೆ (ಸಮಾನಾದಿಕರಣವಾಗಿದ್ದರೆ) ಧಾತುವು ಅಕರ್ಮಕವಾಗುವುದು.

ಧಾತುಸ್ತ್ವಯೋರ್ಧರ್ಮಿಭೇದೇ ಸಕರ್ಮಕ ಉದಾಹೃತಃ ।
ಗೌಣೇ ಕರ್ಮಣಿ ದುಹ್ಯಾದೇಃ ಪ್ರಧಾನೇ ನೀಹೃಕೃಷ್ವಹಾಂ ॥ ೮೬ ॥

ಬುಧ್ಧಿಭಕ್ಷಾರ್ಥಯೋಃ ಶಬ್ದಕರ್ಮಕಾಣಾಂ ನಿಜೇಚ್ಛಯಾ ।
ಪ್ರಯೋಜ್ಯಕರ್ಮಣ್ಯನ್ಯೇಷಾಂ ಣ್ಯಂತಾನಾಂ ಲಾದಯೋ ಮತಾಃ ॥ ೮೭ ॥

ಫಲವ್ಯಾಪರಯೋರ್ಧಾತುರಾಶ್ರಯೇ ತು ತಿಙಃ ಸ್ಮೃತಾಃ ।
ಫಲೇ ಪ್ರಧಾನಂ ವ್ಯಾಪಾರಸ್ತಿಙರ್ಥಸ್ತು ವಿಶೇಷಣಂ ॥ ೮೮ ॥

ಏಧಿತವ್ಯಮೇಧನೀಯಮಿತಿ ಕೃತ್ಯೇ ನಿದರ್ಶನಂ ।
ಭಾವೇ ಕರ್ಮಣಿ ಕೃತ್ಯಾಃ ಸ್ಯುಃ ಕೃತಃ ಕರ್ತರಿ ಕೀರ್ತಿತಾಃ ॥ ೮೯ ॥

ಕರ್ತಾ ಕಾರಕ ಇತ್ಯಾದ್ಯಾ ಭೂತೇ ಭೂತಾದಿಕೀರ್ತಿತಂ ।
ಗಮ್ಯಾದಿಗಮ್ಯೇ ನಿರ್ದಿಷ್ಟಂ ಶೇಷಮದ್ಯತನೇ ಮತಂ ॥ ೯೦ ॥

---

೮೬-೮೭. ಫಲವ್ಯಾಪಾರಗಳು ಭಿನ್ನಸ್ಥಗಳಲ್ಲಿದ್ದರೆ ಧಾತುವು ಸಕರ್ಮಕವಾಗುವುದು. ದುಹ ಮುಂತಾದ ಧಾತುಗಳಿಗೆ ಅಪ್ರಧಾನಕರ್ಮಗಳಲ್ಲಿಯೂ ನೀ, ಹೃ ಮುಂತಾದ ಧಾತುಗಳಿಗೆ ಪ್ರಧಾನಕರ್ಮದಲ್ಲಿಯೂ ಬುಧ್ಯರ್ಥಕ, ಭಕ್ಷಣಾರ್ಥಕ ಮತ್ತು ಶಬ್ದಕರ್ಮಕ ಧಾತುಗಳಿಗೆ ಪ್ರಯೋಕ್ತೃವಿನ ಇಚ್ಛಾನುಗುಣವಾಗಿಯೂ ಇವುಗಳಲ್ಲದ ಣ್ಯಂತ ಧಾತುಗಳಿಗೆ ಪ್ರಯೋಜ್ಯಕರ್ಮದಲ್ಲಿಯೂ ಲಕಾರಾದಿಗಳು ಬರುತ್ತವೆ-

೮೮. ಧಾತುವು ಫಲ ವ್ಯಾಪಾರಗಳನ್ನು ಬೋಧಿಸುತ್ತದೆ. ತಿಙ್ ಪ್ರತ್ಯಯಗಳು ಆಶ್ರಯಾರ್ಥಕಗಳು. ವ್ಯಾಪಾರವೇ ಪ್ರಧಾನ ಎಂದರೆ ಮುಖ್ಯ ವಿಶೇಷ್ಯವಾಗಿಯೂ ಫಲವು ಉಪಸರ್ಜನವಾಗಿಯೂ ತಿಙರ್ಥವು ವಿಶೇಷಣವಾಗಿಯೂ ವಾಕ್ಯಾರ್ಥದಲ್ಲಿ ಭಾಸವಾಗುತ್ತದೆ.

೮೯. ಏಧಿತವ್ಯಂ, ಏಧನೀಯಂ ಎಂಬಿವು ಕೃತ್ಯಪ್ರತ್ಯಯಕ್ಕೆ ಉದಾಹರಣೆ. ಭಾವಕರ್ಮಾರ್ಥಗಳಲ್ಲಿ ಕೃತ್ಯಪ್ರತ್ಯಯಗಳೂ ಕರ್ತೃ ಎಂಬರ್ಥದಲ್ಲಿ ಕೃತ್ ಪ್ರತ್ಯಯಗಳೂ ವಿಹಿತವಾಗಿವೆ.

೯೦. ಕರ್ತಾ, ಕಾರಕ' ಮುಂತಾದುವು ಉದಾಹರಣೆಗಳು. ಭೂತಾದಿಗಳು ಭೂತಕಾಲದಲ್ಲಿ ನಿರ್ದಿಷ್ಟವಾಗಿವೆ. ಗಮ್ಯಾದಿಗಳು ಭವಿಷ್ಯತ್ಕಾಲದಲ್ಲಿ ಉದಾಹೃತಗಳಾಗಿವೆ. ಉಳಿದುವು ವರ್ತಮಾನಾರ್ಥದಲ್ಲಿ ವಿಹಿತವಾಗಿವೆ.

ಅಧಿಸ್ತ್ರೀತ್ಯವ್ಯಯೀಭಾವೇ ಯಥಾಶಕ್ತಿ ಚ ಕೀರ್ತಿತಂ ।
ರಾಮಾಶ್ರಿತಸ್ತತ್ಪುರುಷೇ ಧಾನ್ಯಾರ್ಥೋ ಯೂಪದಾರು ಚ ॥ ೯೧ ॥

ವ್ಯಾಘ್ರಭೀ ರಾಜಪುರುಷೋಽಕ್ಷಶೌಂಡೋ ದ್ವಿಗುರುಚ್ಯತೇ ।
ಪಂಚಗವಂ ದಶಗ್ರಾಮೀ ತ್ರಿಫಲೇತಿ ತು ರೂಢಿತಃ ॥ ೯೨ ॥

ನೀಲೋತ್ಪಲಂ ಮಹಾಷಷ್ಠೀ ತುಲ್ಯಾರ್ಥೇ ಕರ್ಮಧಾರಯಃ ।
ಅಬ್ರಾಹ್ಮಣೋ ನಞ್ ಪ್ರೋಕ್ತಃ ಕುಂಭಕಾರಾದಿಕಃ ಕೃತಾ ॥ ೯೩ ॥

ಅನ್ಯಾರ್ಥೇ ತು ಬಹುವ್ರೀಹೌ ಗ್ರಾಮಃ ಪ್ರಾಪ್ತೋದಕೋ ದ್ವಿಜ ।
ಪಂಚಗೂ ರೂಪವದ್ಭಾರ್ಯೋ ಮಧ್ಯಾಹ್ನಃ ಸಸುತಾದಿಕಃ ॥ ೯೪ ॥

ಸಮುಚ್ಚಯೇ ಗುರುಂ ಚೇಶಂ ಭಜಸ್ವಾನ್ವಾಚಯೇತ್ವಟ ।
ಭಿಕ್ಷಾಮಾನಯ ಗಾಂ ಚಾಪಿ ವಾಕ್ಯಮೇವಾನಯೋರ್ಭವೇತ್ ॥ ೯೫ ॥

---

೯೧-೯೨. ಅಧಿಸ್ತ್ರಿ, ಯಥಾಶಕ್ತಿ ಎಂಬಿವು ಅವ್ಯಯೀಭಾವಸಮಾಸವು. ರಾಮಾಶ್ರಿತಃ, ಧಾನ್ಯಾರ್ಥಃ, ಯೂಪದಾರು, ವ್ಯಾಘ್ರಭೀಃ, ರಾಜಪುರುಷಃ, ಅಕ್ಷಶೌಂಡಃ ಎಂಬಿವು ಕ್ರಮವಾಗಿ ದ್ವಿತೀಯಾ, ತೃತೀಯಾ, ಚತುರ್ಥೀ, ಪಂಚಮೀ, ಷಷ್ಠೀ, ಸಪ್ತಮೀ ತತ್ಪುರುಷ ಸಮಾಸಗಳಿಗೆ ಉದಾಹರಣೆಗಳು. ಪಂಚಗವಂ. ದಶಗ್ರಾಮೀ, ತ್ರಿಫಲ ಎಂಬಿವು ದ್ವಿಗುಸಮಾಸವೆಂದು ಉಕ್ತವಾಗಿವೆ.

೯೩. 'ನೀಲೋತ್ಪಲಂ, ಮಹಾಷಷ್ಠೀ' ಎಂಬಿವು ಕರ್ಮಧಾರಯ ಸಮಾಸ. ತುಲ್ಯಾರ್ಥದಲ್ಲಿ 'ಅಬ್ರಾಹ್ಮಣ' ಎಂಬುದು ನಞ್‌ಸಮಾಸದಲ್ಲಿ ವಿಹಿತವಾಗಿದೆ. ಕುಂಭಕಾರ ಮುಂತಾದುವುಗಳು ಕೃದ್ವೃತ್ತಿಯೆನಿಸುವುವು.

೯೪. ಪ್ರಾಪ್ತೋದಕಃ, ಪಂಚಗುಃ, ರೂಪವದ್ಭಾರ್ಯಃ, ಮಧ್ಯಾಹ್ನಃ, ಸಸುತಃ ಮುಂತಾದುವು ಅನ್ಯಪದಾರ್ಥಪ್ರಧಾನವಾದ ಬಹುವ್ರೀಹಿ ಸಮಾಸವು.

೯೫. ಸಮುಚ್ಚಯ ವಿವಕ್ಷಿತವಾದಾಗ 'ಗುರುಂ ಚೇಶಂ ಚ ಭಜಸ್ವ' ಎಂದೂ ಅನ್ವಾಚಯ ವಿವಕ್ಷಿತವಾದಾಗ 'ಭಿಕ್ಷಾಮಟ ಗಾಂ ಚಾನಯ' ಎಂಬುದಾಗಿ ವಾಕ್ಯಗಳನ್ನೇ ಪ್ರಯೋಗಿಸಬೇಕು. ಸಮಾಸವಾಗುವುದಿಲ್ಲ.

ಇತರೇತರಯೋಗೇ ತು ರಾಮಕೃಷ್ಣೌ ಸಮಾಹೃತೌ ।
ರಾಮಕೃಷ್ಣಂ ದ್ವಿಜ ದ್ವೇ ದ್ವೇ ಬ್ರಹ್ಮ ಚೈಕಮುಪಾಸ್ಯತೇ ॥ ೯೬ ॥

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ ದ್ವಿತೀಯಪಾದೇ ವ್ಯಾಕರಣನಿರೂಪಣಂ ನಾಮ ದ್ವಿಪಂಚಾಶತ್ತಮೋಽಧ್ಯಾಯಃ**

---

೯೬. ಇತರೇತರಯೋಗವು ವಿವಕ್ಷಿತವಾದಾಗ 'ರಾಮಕೃಷ್ಣೌ' ಎಂಬುದಾಗಿ ದ್ವಂದ್ವಸಮಾಸವೂ, ಸಮಾಹಾರವು ವಿವಕ್ಷಿತವಾದಾಗ 'ರಾಮಕೃಷ್ಣಂ' ಎಂಬುದಾಗಿ ದ್ವಂದ್ವಸಮಾಸವೂ ವಿಹಿತವಾಗಿದೆ. ದ್ವಿಜನೇ! 'ರಾಮಕೃಷ್ಣೌ' ಎಂಬುದು ಎರಡುಶಬ್ದಗಳು. ಅದರ ಅರ್ಥವೂ ಎರಡಾಗಿದೆ. ಆದಾಗ್ಯೂ ಬ್ರಹ್ಮನು ಒಬ್ಬನೇ. ಅವನಿಗೇ ಅನೇಕರೂಪಗಳುಂಟೆಂದು ತಿಳಿದು ಆ ಒಬ್ಬ ಬ್ರಹ್ಮನನ್ನೇ ಉಪಾಸನೆ ಮಾಡಬೇಕು.

ಇಂತು ಶ್ರೀ ನಾರದೀಯಪುರಾಣದೊಳು ಪೂರ್ವಭಾಗದ ಬೃಹದುಪಾಖ್ಯಾನವೆಂಬ ದ್ವಿತೀಯಪಾದದಲ್ಲಿ ವ್ಯಾಕರಣನಿರೂಪಣವೆಂಬ ಐವತ್ತೆರಡನೆಯ ಅಧ್ಯಾಯವು ಮುಗಿದುದು.

## ಕಥಾಸಾರಾಂಶ

ಈ ಅಧ್ಯಾಯದಲ್ಲಿ ವಾಕ್ಯರಣವು ಸಂಗ್ರಹಿಸಲ್ಪಟ್ಟಿದೆ. ಆದಿಯಲ್ಲಿ ಪದ ಸ್ವರೂಪ, ಸಪ್ತವಿಭಕ್ತಿಗಳು, ಅವುಗಳ ಪ್ರತ್ಯಯಗಳು ಅವುಗಳ ಅರ್ಥ, ಪ್ರಯೋಗವಿಶೇಷ, ಲಕಾರಗಳು, ಅವುಗಳ ಅರ್ಥಗಳು ಇವುಗಳನ್ನು ನಿರೂಪಿಸಿ ಎರಡೆರಡು ಶಬ್ದಗಳು ಸಂಧಿಯಾಗಿ ಹೊಂದುವ ರೂಪಗಳನ್ನು ಉದಾಹರಿಸಿ ತದ್ಧಿತಪ್ರತ್ಯಯ, ಅದರ ಅರ್ಥಗಳನ್ನೂ ಹೇಳಿ ಧಾತುವಿನ ದಶಲಕಾರರೂಪಗಳನ್ನು ಮಾದರಿಗಾಗಿ ಕೆಲವು ಧಾತುಗಳಿಗೆ ತೋರಿಸಿ ಸಮಭಿವ್ಯಾಹಾರವಿಶೇಷದಿಂದ ಒಂದೇ ಧಾತು ಆತ್ಮನೇಪದ, ಪರಸ್ಮೈಪದವಾಗುತ್ತದೆಂಬುದಕ್ಕೆ ಉದಾಹರಣೆಯನ್ನು ಹೇಳಿ ದ್ವಿಕರ್ಮಕಪ್ರಯೋಗ, ಸಮಾಸ ಮುಂತಾದುವನ್ನು ನಿರೂಪಿಸಿದೆ.

---

## ತ್ರಿಪಂಚಾಶತ್ತಮೋಽಧ್ಯಾಯಃ

**ಸನಂದನ ಉವಾಚ**

**ನಿರುಕ್ತಂ ತೇ ಪ್ರವಕ್ಷ್ಯಾಮಿ ವೇದಶ್ರೋತ್ರಾಂಗಮುತ್ತಮಂ ।**
**ತತ್ಪಂಚವಿಧಮಾಖ್ಯಾತಂ ವೈದಿಕಂ ಧಾತುರೂಪಕಂ ॥ ೧ ॥**

**ಕ್ವಚಿದ್ವರ್ಣಾಗಮಸ್ತತ್ರ ಕ್ವಚಿದ್ವರ್ಣವಿಪರ್ಯಯಃ ।**
**ವಿಕಾರಃ ಕ್ವಾಪಿ ವರ್ಣಾನಾಂ ವರ್ಣನಾಶಃ ಕ್ವಚಿನ್ಮತಃ ॥ ೨ ॥**

**ತಥಾ ವಿಕಾರನಾಶಾಭ್ಯಾಂ ವರ್ಣಾನಾಂ ಯತ್ರ ನಾರದ ।**
**ಧಾತೋರ್ಯೋಗಾತಿಶಯಿಾ ಚ ಸಂಯೋಗಃ ಪರಿಕೀರ್ತಿತಃ ॥ ೩ ॥**

---

## ಐವತ್ತಮೂರನೆಯ ಅಧ್ಯಾಯವು

೧. ಸನಂದನನು ಹೇಳಿದನು—ನಾರದನೇ! ಇನ್ನು ಮುಂದೆ ನಿನಗೆ ವೇದಶ್ರೋತ್ರವೆನಿಸಿದ, ಶ್ರೇಷ್ಠವಾದ ನಿರುಕ್ತವೆಂಬ ವೇದಾಂಗವನ್ನು ಹೇಳುವೆನು; ಅದು ಐದು ವಿಧವಾಗಿದೆ. ಅದರಲ್ಲಿ ವೇದದಲ್ಲಿರುವ ಧಾತುರೂಪಗಳೂ ಅಡಗಿವೆ.

೨. ಅಲ್ಲಿ ಕೆಲವು ಕಡೆಗಳಲ್ಲಿ ವರ್ಣಗಳು ಹೆಚ್ಚಾಗಿ ಬರುವುವು. (ಇದೇ ಆಗಮವು) ಕೆಲವು ಶಬ್ದಗಳಲ್ಲಿ ವರ್ಣವ್ಯತ್ಯಾಸವಾಗುವುದು. ಇನ್ನು ಕೆಲವು ಶಬ್ದಗಳಲ್ಲಿ ಒಂದು ವರ್ಣಕ್ಕೆ ಇನ್ನೊಂದು ವರ್ಣಬಂದು ವಿಕಾರವಾಗುವುದು. ಮತ್ತೆ ಕೆಲವು ಶಬ್ದಗಳಲ್ಲಿ ಇದ್ದ ಕೆಲವು ವರ್ಣಗಳೂ ಲೋಪವಾಗುವುವು.

೩. ಈರೀತಿ ಶಬ್ದಗಳಲ್ಲಿ ವರ್ಣಗಳ ವಿಕಾರ ನಾಶವಾಗುವಿಕೆಯಿಂದ ರೂಪವೂ ವ್ಯತ್ಯಾಸವಾಗುವುದು. ಹಾಗೆಯೇ ಧಾತುಗಳ ರೂಪಗಳೂ ವಿಶೇಷವನ್ನು ಹೊಂದುವುವು. ಇವುಗಳಿಗೆ ಸಂಯೋಗವೆಂದು ಬೇರೆ ಹೆಸರೂ ಇದೆ.

**ಸಿದ್ಧೇದ್ವರ್ಣಾಗಮಾದ್ಧಂಸಃ ಸಿಂಹೋ ವರ್ಣವಿಪರ್ಯಯಾತ್ ।**
**ಗೂಢೋತ್ಮಾ ವರ್ಣವಿಕೃತೇರ್ವರ್ಣನಾಶಾತ್ಪೃಷೋದರಃ ॥ ೪ ॥**

**ಭ್ರಮರಾದಿಷು ಶಬ್ದೇಷು ಜ್ಞೇಯೋ ಯೋಗೋ ಹಿ ಪಂಚಮಃ ।**
**ಬಹುಲಂ ಛಂದಸೀತ್ಯುಕ್ತಮತ್ರ ವಾಚ್ಯಂ ಪುನರ್ವಸೂ ॥ ೫ ॥**

**ನಭಸ್ವದ್ವೃಷಣಶ್ಚೈವಾಪರಸ್ಮೈಪದಿ ಚಾಪಿ ಹಿ ।**
**ಪರಂ ವ್ಯವಹಿತಾಶ್ಚಾಪಿ ಗತಿಸಂಜ್ಞಾಸ್ತಥಾ ಹಿ ಆ ॥ ೬ ॥**

---

೪. ಹಸ ಎಂಬ ಧಾತುವಿನಿಂದ ಉಂಟಾದ ಹಂಸವೆಂಬ ಶಬ್ದವು ಆಗಮಕ್ಕೆ ಉದಾಹರಣೆಯಾಗುವುದು. ಇಲ್ಲಿ ಒಂದು ಅನುಸ್ವಾರವು ಹೆಚ್ಚಾಗಿ ಬಂದಿರುವುದು. ಹಿಸಿ ಎಂಬ ಧಾತುವಿನಿಂದ ಸಿಂಹ ಶಬ್ದವು ಆಗಿದೆ. ಇಲ್ಲಿ ಪರಸ್ಪರ ವರ್ಣಗಳು ವ್ಯತ್ಯಸ್ತವಾಗಿರುವುವು. ಗೂಢೋತ್ಮಾ ಎಂಬ ಶಬ್ದವು ವರ್ಣ ವಿಕಾರಕ್ಕೆ ಉದಾಹರಣೆ. ಇಲ್ಲಿ ಅಕಾರಕ್ಕೆ ಓಕಾರಬಂದಿದೆ. ಒಂದುವರ್ಣವು ಲೋಪ ವಾದುದರಿಂದ ಪೃಷೋದರ ಎಂಬ ಶಬ್ದವಾಯಿತು. ಇಲ್ಲಿ ಮಧ್ಯದಲ್ಲಿ ಒಂದು ದಕಾರ ಬರಬೇಕಾಗಿದ್ದಿತು.

೫-೬. ಭ್ರಮರ ಮುಂತಾದ ಶಬ್ದಗಳಲ್ಲಿ ಇನ್ನೊಂದು ವರ್ಣದ ಸಂಯೋಗ ಬಂದಿದೆ. ವೇದದಲ್ಲಿ ಯಾವಾಗಲೂ ರೂಪಗಳು ವ್ಯತ್ಯಾಸವಾಗುವುದರಿಂದ 'ಬಹುಲಂ' ಎಂದಿಟ್ಟುಕೊಳ್ಳಬೇಕು. ಬಹುಲವೆಂದರೆ ವಿಧಿಶಾಸ್ತ್ರವಿಲ್ಲದಿದ್ದರೂ ಪ್ರಯೋಗವನ್ನನುಸರಿಸಿ ರೂಪವನ್ನು ಊಹಿಸಬೇಕೆಂದರ್ಥ. ಬಹುಲಗ್ರಹಣಕ್ಕೆ ಪುನರ್ವಸೂ, ನಭಸ್ವತ್, ವೃಷಣ, ಪರಸ್ಮೈಪದ ಇವೇ ಮುಂತಾದುವು ಉದಾ ಹರಣೆಗಳು. ಶಾಸ್ತ್ರವನ್ನನುಸರಿಸಿ ರೂಪನಿಷ್ಪತ್ತಿ ಮಾಡಿದರೆ ಇವುಗಳ ರೂಪವು ವ್ಯತ್ಯಾಸವಾಗುವುದು. ಪ್ರ ಮುಂತಾದ ಅವ್ಯಯಗಳಿಗೆ ಕ್ರಿಯಾಪದ ಸಂಬಂಧ ವಿದ್ದರೆ ಗತಿ ಎಂಬ ಸಂಜ್ಞೆ ಬರುತ್ತದೆ. ಲೋಕದಲ್ಲಿ ಇವುಗಳನ್ನು ಯಾವಾ ಗಲೂ ಕ್ರಿಯಾಪದದ ಹಿಂದೆಯೇ ಪ್ರಯೋಗಿಸಬೇಕೆಂದು ನಿಯಮವಿದೆ. ವೇದ ದಲ್ಲಿ ಅದರ ಪರದಲ್ಲಿಯೂ, ಮಧ್ಯದಲ್ಲಿ ವ್ಯವಧಾನವಿದ್ದಾಗಲೂ ಬರುವುದು.

ವಿಭಕ್ತೀನಾಂ ವಿಪರ್ಯಾಸೋ ಯಥಾ ದಧ್ನಾ ಜುಹೋತಿ ಹಿ ।
ಅಭ್ಯುತ್ಸಾದಯಾಮ ಕೇತುರ್ಧ್ವನಯತ್ಯಾದಿಕಾಸ್ತಥಾ
ನಿಷ್ಟರ್ಕ್ಯಾದ್ಯಾಸ್ತಥೋಕ್ತಾಶ್ಚ ಗೃಭಾಯೇತ್ಯಾದಿಕಾಸ್ತಥಾ ॥ ೭ ॥

ಸುಪ್ತಿಙುಪಗ್ರಹಲಿಂಗನರಾಣಾಂ ಕಾಲಹಲ್ ಚ ಸ್ವರಕರ್ತೃಯಙಾಂ ಚ ।
ವ್ಯತ್ಯಯಮಿಚ್ಛತಿ ಶಾಸ್ತ್ರಕೃದೇಷಾಂ ಸೋಽಪಿ ಚ ಸಿಧ್ಯತಿ ಬಾಹುಲಕೇನ ॥೮॥

ರಾತ್ರೀ ವಿಭ್ವೀ ಚ ಕದ್ರ್ವಶ್ಚಾವಿಷ್ಟ್ವೀ ವಾಜಸನೇಯಿನಃ ॥ ೯ ॥

ಕರ್ಣೇಭಿಶ್ಚ ಯಶೋಭಾಗ್ಯ ಇತ್ಯಾದ್ಯಾಶ್ಚತುರಕ್ಷರಂ ।
ದೇವಾಸೋಽಥೋ ಸರ್ವದೇವತಾತಿತ್ವಾವತ ಇತ್ಯಪಿ ॥ ೧೦ ॥

---

೭. ಕೆಲವು ಕಡೆ ವೇದದಲ್ಲಿ ವಿಭಕ್ತಿ ವ್ಯತ್ಯಾಸವೂ ಬರುವುದು. ಇದಕ್ಕೆ ದಧ್ನಾ ಜುಹೋತಿ, ಅಭ್ಯುತ್ಸಾದಯಾಮ, ಕೇತುಃ ಧ್ವನಯತಿ ಇತ್ಯಾದಿಗಳು ಉದಾಹರಣೆಗಳು. ವಿಭಕ್ತಿ ಎಂಬುದು ಸುಪ್ (ನಾಮಪದದ ಮುಂದೆ ಬರುವ ಪ್ರತ್ಯಯವು) ತಿಙ್ (ಧಾತುವಿನ ಮೇಲೆ ಬರುವ ಪ್ರತ್ಯಯವು) ಇವೆರಡಕ್ಕೆ ಸಂಜ್ಞೆಯು. ಇದು ವ್ಯತ್ಯಾಸವಾಗುವುದು. ಈ ವ್ಯತ್ಯಾಸಕ್ಕೆ 'ನಿಷ್ಟರ್ಕ್ಯ' ಮುಂತಾದುವುಗಳೂ, 'ಗೃಭಾಯ' ಮುಂತಾದುವುಗಳೂ ಉದಾಹರಣೆಗಳಾಗುತ್ತವೆ.

೮. ಹೀಗೆಯೇ ಸುಪ್‌ತಿಙ್‌ಗಳೂ, ಉಪಸರ್ಗ, ಸ್ತ್ರೀಲಿಂಗಾದಿ, ಪ್ರಥಮಪುರುಷಾದಿ, ವರ್ತಮಾನಾದಿ ಕಾಲವಾಚಕಶಬ್ದ, ಕರ್ತೃಕರ್ಮಪ್ರಯೋಗಗಳೂ, ವ್ಯಂಜನ ಮತ್ತು ಸ್ವರಗಳೂ, ಯಙ್‌ಪ್ರತ್ಯಯ ಇವು ವೇದದಲ್ಲಿ ವ್ಯತ್ಯಾಸವನ್ನು ಹೊಂದುವುವು. ಇವೆಲ್ಲವೂ ಅನುಶಾಸನವಿಲ್ಲದಿದ್ದರೂ ಬಹುಲಗ್ರಹಣದಿಂದ ಉಂಟಾಗುತ್ತವೆ ಎಂದು ತಿಳಿಯಬೇಕು.

೯. ಹೀಗೆ ವ್ಯತ್ಯಾಸವಾದ ಕೆಲವು ವೈದಿಕಶಬ್ದಗಳನ್ನು ಉದಾಹರಣೆಗಾಗಿ ಹೇಳಿದೆ. ಯಾವುವೆಂದರೆ—ರಾತ್ರೀ, ವಿಭ್ವೀ (ರಾತ್ರಿ ಶಬ್ದವು ಇಕಾರಾಂತವಾಗಿ ಲೋಕದಲ್ಲಿ ಪ್ರಸಿದ್ಧವಾಗಿದೆ. ವಿಭುವೆಂಬುದು ಉಕಾರಾಂತಶಬ್ದ. ಇವೆರಡನ್ನೂ ವೇದದಲ್ಲಿ ಈಕಾರಾಂತವಾಗಿ ಹೇಳಿದೆ. ಇದೊಂದು ವ್ಯತ್ಯಾಸವು) ಕದ್ರ್ವಃ, ಆವಿಷ್ಟ್ವಃ, ವಾಜಸನೇಯಿನಃ.

೧೦-೧೧. ಕರ್ಣೇಭಿಃ, ಯಶೋಭಾಗ್ಯಃ, ದೇವಾಸಃ, ಸರ್ವದೇವತಾಃ

ಉಭಯಾವಿನಮಾದ್ಯಾಶ್ಚ ಪ್ರಲಯಾದ್ಯಾಶ್ಚ ಸ್ತೃಚಂ ತಥಾ ।
ಅಪಸ್ಪೃಧೇಥಾಂ ನೋ ಅವ್ಯಾದಾಯೋ ಅಸ್ಮಾನ್ಮ್ರಖಾಸ್ತಥಾ ॥ ೧೧ ॥

ಸಗರ್ಭ್ಯೋಽಸ್ಥಾಪದೀ ಖುತ್ವ್ಯೋಽರಜಿಷ್ಟಂ ಚ ತ್ರಿಪಂಚಕಂ ।
ಹಿರಣ್ಯಯೇನ ನರಂ ಚ ಪರಮೋ ವ್ಯೋಮನಿತ್ಯಪಿ ॥ ೧೨ ॥

ಉರ್ವಿಯಾ ಸ್ವಪ್ರಯಾವಾರವಧ್ವಾದದುಹ ನೈವಧೀ ।
ಯಜಧ್ವೈನಮೇಮುಸಿ ಚ ಸ್ನಾತ್ವೀ ಗತ್ವಾ ಪಚಾಸ್ಥಭೀಃ ॥ ೧೩ ॥

ಗೋನಾಂ ಚಾಪರಿಹ್ವೃತಾಶ್ಚ ತುತುರಿಗ್ರ್ಸಿತಾದಿಕಾ ।
ಪಶ್ಯೇದಧದ್ಬಭೂಥಾಪಿ ಪ್ರಮಿಣಾಂತಿತ್ಯವೀವೃಧತ್ ॥ ೧೪ ॥

ಮಿತ್ರಯುಶ್ಚ ದುರಸ್ವಾ ವಾ ಹಾತ್ವಾ ಸುಧಿತಮಿತ್ವಪಿ ।
ದಧರ್ತ್ಯಾದ್ಯಾಃ ಸ್ವವದ್ಭಿಶ್ಚ ಸಸೂವೇತಿ ಚ ಧಿಷ್ವ ಚ ॥ ೧೫ ॥

ಪ್ರಪ್ರಾಯುಂ ಚ ಹರಿವತೇಕ್ಷ್ಣಿಶ್ವತಃ ಸುಪಥಿಂತರಃ ।
ರಥೀತರೀ ನಸತಾದ್ಯಾ ಅಮ್ನುರ್ಭುವರಥೋ ಇತಿ ॥ ೧೬ ॥

---

ಅತಿತ್ವಾವತಃ, ಉಭಯಾ, ಇನವಾದಿಗಳು, ಪ್ರಲಯಾದಿಗಳು, ಸ್ತೃಚಂ, ಅಪ ಸ್ಪೃಧೇಥಾಂ, ಅವ್ಯಾದಾಯುಃ, ಅಸ್ಮಾನ್ಮ್ರಖಾಃ.

೧೨-೧೩. ಸಗರ್ಭ್ಯಃ, ಅಸ್ಥಾಪದೀ, ಖುತ್ವ್ಯೇಃ, ಅಜಿಷ್ಟಂ, ತ್ರಿಪಂ ಚಕಂ, ಹಿರಣ್ಯಯೇನ, ನರಂ, ಪರಮೇವ್ಯೋರ್ಮ, ಉರ್ವಿಯಾ, ಸ್ವಪ್ರಯಾ ವಾರವಧ್ವಾತ್, ಅದುಹ, ವೈವಧೀ, ಯಜಧ್ವ, ಏನಂ, ಏಮುಸಿ, ಸ್ನಾತ್ವೀ, ಗತ್ವಾ, ಪಚಾಸ್ಥಭೀಃ.

೧೪. ಗೋನಾಂ, ಅಪರಿಹ್ವೃತಾಃ, ತುತುರಿಃ, ಗೃಸಿತ ಮುಂತಾದುವು, ಪಶ್ಯೇತ್, ಅಧತ್, ಬಭೂಥ, ಪ್ರಮಿಣಾಂತಿ, ಅವೀವೃಧತ್.

೧೫-೧೬. ಮಿತ್ರಯುಃ, ದುರಸ್ವಾ, ಹಾತ್ವಾ, ಸುಧಿತಂ, ದಧರ್ತಿ ಮುಂತಾದುವು, ಸ್ವವದ್ಭಿಃ, ಸಸೂವ, ಧಿಷ್ವ, ಪ್ರಪ್ರಾಯುಂ, ಹರಿವತೇಕ್ಷ್ಣಿಶ್ವತಃ, ಸುಪಥಿಂತರಃ, ರಥೀತರೀ, ನಸತಾ ಮುಂತಾದುವುಗಳು, ಅಮ್ನಃ, ಭುವರಥೋ.

**ಬ್ರೂಹ್ಯಾದ್ಯಾದೇಃ ಪರಸ್ಯಾಪ್ಯೌ ಶ್ರಾವಯೇತ್ಯಾದಿಕೇ ಪ್ಲುತಃ ।**
**ದಾಶ್ವಾಂಶ್ಚ ಸ್ವತವಾನ್ಯಾಪೌತ್ರಿಭಿಷ್ಟ್ವಂ ಚ ನೃಭಿಷ್ಟುತಃ ॥ ೧೭ ॥**

**ಅಭೀಷುಣ ಋತಾವಾಹಂ ನ್ಯಷೀದನ್ನೃಮಣಾ ಅಪಿ ।**
**ಚತುರ್ವಿಧಾದ್ಬಾಹುಲಕಾತ್ಪ್ರವೃತ್ತೇರಪ್ರವೃತ್ತಿತಃ ॥ ೧೮ ॥**

**ವಿಭಾಷಯಾನ್ಯಥಾಭಾವಾತ್ಸರ್ವಂ ಸಿದ್ಧ್ಯೇಚ್ಚ ವೈದಿಕಂ ।**
**ಭೂವಾದ್ಯಾ ಧಾತವೋ ಜ್ಞೇಯಾ ಪರಸ್ಮೈಪದಿನಃ ಸ್ಮೃತಾಃ ॥ ೧೯ ॥**

**ಏಧಾದ್ಯಾ ಆತ್ಮನೇಭಾಷಾ ಉದಾತ್ತಾಃ ಷಟ್‌ತ್ರಿಂಶಸಂಖ್ಯಕಾಃ ।**
**ಅತಾದಯೋಽಷ್ಟತ್ರಿಂಶಚ್ಚ ಪರಸ್ಮೈಪದಿನೋ ಮುನೇ ॥ ೨೦ ॥**

---

೧೭-೧೮. ಬ್ರೂಹಿ ಮುಂತಾದುವುಗಳು, ಔಶ್ರಾವಯೇತ್ ಇತ್ಯಾದಿಗಳಲ್ಲಿ ಪ್ಲುತಶ್ರವಣ, ದಾಶ್ವಾರ್ನ್, ಸ್ವತವಾರ್ನ್, ಆಪೌ, ತ್ರಿಭಿಷ್ಟ್ವಂ, ನೃಭಿಷ್ಟುತಃ, ಅಭೀಷುಣಃ, ಋತಾವಾಹಂ, ನ್ಯಷೀದರ್ನ್, ನೃಮಣಾ ಇತ್ಯಾದಿಗಳು ವ್ಯತ್ಯಾಸವನ್ನು ಹೊಂದಿವೆ.

೧೮-೧೯. ಇವೆಲ್ಲವೂ ಬಹುಲಗ್ರಹಣದಿಂದ ಆಗಿವೆ. ಬಹುಲಂ ಎಂದು ಹೇಳಿದಲ್ಲಿ ನಾಲ್ಕು ವಿಧವಾಗಿ ರೂಪಸಿದ್ಧಿಯಾಗುವುದು. ಕೆಲವುಕಡೆ ಪ್ರವೃತ್ತಿ ಮಾತ್ರ ಅಂದರೆ ನಿತ್ಯವಾಗಿ ಬರುವುದು. ಇನ್ನು ಕೆಲವುಕಡೆ ಅಪ್ರವೃತ್ತಿ ಅಂದರೆ ಶಾಸ್ತ್ರದಿಂದ ಹೇಳಿದರೂ ಬಾರದಿರುವುದು. ಕೆಲವುಕಡೆ ವಿಭಾಷಾ ಎಂದರೆ ವಿಕಲ್ಪ ಬಂದರೂ ಬರಬಹುದು. ಕೆಲವು ಕಡೆ ಅನ್ಯಥಾ ಅಂದರೆ ವಿಲಕ್ಷಣವಾದ ಒಂದು ರೀತಿ ಸರ್ವನಿಯಮವನ್ನೂ ಅತಿಕ್ರಮಿಸಿಬರುವುದು. ಈ ರೀತಿಯಾಗಿ ವೈದಿಕ ಶಬ್ದಗಳು ಸಿದ್ಧಿಸುವುವು.

೧೯-೨೦. ಭೂ ಮುಂತಾದ ಧಾತುಗಳು ಪರಸ್ಮೈಪದಿಗಳೆಂದು ಪ್ರಸಿದ್ಧ ವಾಗಿವೆ. ಏಧ ಮುಂತಾದ ಧಾತುಗಳು ಆತ್ಮನೇಪದಗಳೆಂದು ಹೇಳಲ್ಪಡುತ್ತವೆ. ಇವು ಮೂವತ್ತಾರು ಉದಾತ್ತವೆಂಬ ಸಂಜ್ಞೆಯನ್ನು ಹೊಂದಿರುತ್ತವೆ. ಅತ ಎಂಬುದೇ ಮೊದಲಾಗಿರುವ ಮೂವತ್ತೆಂಟು ಧಾತುಗಳು ಪರಸ್ಮೈಪದಿಗಳು.

ಶ್ಲೋಕ್ಯಪೂರ್ವಾ ದ್ವಿಚತ್ವಾರಿಂಶದುಕ್ತಾ ಹ್ಯಾತ್ಮನೇ ಪದೇ ।
ಉದಾತ್ತೇತಸ್ತು ಪಂಚಾಶತ್ಪಕ್ಕಾದ್ಯಾಃ ಪರಿಕೀರ್ತಿತಾಃ ॥ ೨೧ ॥

ವರ್ಚಾದ್ಯಾ ಅನುದಾತ್ತೇತ ಏಕವಿಂಶತಿರೀರಿತಾಃ ।
ಗುಪಾದಯೋ ದ್ವಿಚತ್ವಾರಿಂಶದುದಾತ್ತೇತಃ ಸಮೀರಿತಾಃ ॥ ೨೨ ॥

ಧಿಣ್ಯಾದಯೋಽನುದಾತ್ತೇತೋ ದಶ ಪ್ರೋಕ್ತಾ ಹಿ ಶಾಬ್ದಿಕೈಃ ।
ಅಣಾದಯೋಽಪ್ಯುದಾತ್ತೇತಃ ಸಪ್ತವಿಂಶತಿಧಾತವಃ ॥ ೨೩ ॥

ಅಮಾದಯಃ ಸಮುದ್ದಿಷ್ಟಾಶ್ಚತುಸ್ತ್ರಿಂಶದ್ಧಿ ಶಾಬ್ದಿಕೈಃ ।
ದ್ವಿಸಪ್ತತಿಮಿತಾ ಮವ್ಯಮುಖಾಶ್ಚೋದಾತ್ತಬಂಧನಾಃ ॥ ೨೪ ॥

ಸ್ವರಿತೇದ್ಧಾವುಧಾತುಸ್ತು ಏಕ ಏವ ಪ್ರಕೀರ್ತಿತಃ ।
ಕ್ಷುಧಾದಯೋಽನುದಾತ್ತೇತೋ ದ್ವಿಪಂಚಾಶದುದಾಹೃತಾಃ ॥ ೨೫ ॥

---

೨೧. ಶ್ಲೋಕ್ಯ ಮೊದಲಾಗಿರುವ ನಲವತ್ತೆರಡು ಆತ್ಮನೇಪದಿಗಳೆಂದು ಹೇಳಲ್ಪಟ್ಟಿವೆ. ಪಕ್ಕ ಮುಂತಾದ ಐವತ್ತು ಧಾತುಗಳು ಉದಾತ್ತೇತ್‌ಗಳೆಂದು ಹೇಳಲ್ಪಟ್ಟಿವೆ.

೨೨. ವರ್ಚ ಮುಂತಾದ ಇಪ್ಪತ್ತೊಂದು ಧಾತುಗಳು ಅನುದಾತ್ತೇತ್ತುಗಳು (ಅನುದಾತ್ತ ಇತ್ಸಂಜ್ಞೆವುಳ್ಳವುಗಳು) ಗುಪ ಮುಂತಾದ ನಲವತ್ತೆರಡು ಧಾತುಗಳು ಉದಾತ್ತೇತ್ತುಗಳೆಂದು ಹೇಳಲ್ಪಟ್ಟಿವೆ.

೨೩. ಶಬ್ದಶಾಸ್ತ್ರಕೋವಿದರಿಂದ ಧಿಣ್ಯಾದಿ ಹತ್ತು ಧಾತುಗಳು ಅನುದಾತ್ತೇತ್ತುಗಳೆಂದು ಹೇಳಲ್ಪಟ್ಟಿವೆ. ಅಣ ಮುಂತಾದ ಇಪ್ಪತ್ತೇಳು ಧಾತುಗಳು ಉದಾತ್ತೇತ್ತುಗಳು.

೨೪. ಅಮಾದಿ ಮೂವತ್ತನಾಲ್ಕು ಧಾತುಗಳು ಅನುದಾತ್ತ ಇತ್ಸಂಜ್ಞೆಯುಳ್ಳವುಗಳು. ಮವ್ಯ ಮೊದಲಾದ ಎಪ್ಪತ್ತಎರಡು ಧಾತುಗಳು ಉದಾತ್ತ ಇತ್ಸಂಜ್ಞೆಯುಳ್ಳವುಗಳು.

೨೫. ಧಾವು ಎಂಬ ಒಂದೇ ಧಾತುವು ಸ್ವರಿತವೇ ಇತ್ಸಂಜ್ಞೆಯಾಗಿ ಉಳ್ಳದು. ಕ್ಷುಧ ಮುಂತಾದ ಐವತ್ತೆರಡು ಧಾತುಗಳು ಅನುದಾತ್ತೇತ್ತುಗಳು.

ಘುಷಿರಾದ್ಯಾ ಉದಾತ್ತೇತೋऽಷ್ಟಾಶೀತಿರ್ಧಾತವೋ ಮತಾಃ ।
ದ್ಯುತಾದ್ಯಾ ಅನುದಾತ್ತೇತೋ ದ್ವಾವಿಂಶತಿರತೋ ಮತಾಃ ॥ ೨೬ ॥

ಷಿತಸ್ತ್ರಯೋದಶಾ ಘಟಾದಿಷ್ವೇನುದಾತ್ತೇತ ಈರಿತಃ ।
ತತೋ ಜ್ವಲದುದಾತ್ತೇತೋ ದ್ವಿಪಂಚಾಶನ್ಮಿತಾಸ್ತಥಾ ॥ ೨೭ ॥

ಸ್ವರಿತೇಧ್ರಾಜ್ಯಸಂಪ್ರೋಕ್ತಸ್ತನಹ ಭ್ರಾಜ್ಯತಸ್ತ್ರಯಃ ।
ಅನುದಾತ್ತೇತ ಆಖ್ಯಾತಾಭಾ ಹ್ಯುದಾತ್ತಾ ಇತಃ ಸ್ಯಮಾತ್ ॥ ೨೮ ॥

ಸಹೋನುದಾತ್ತೇದೇಕಸ್ತುರನ್ಯೈಕೋऽಪ್ಯಾತ್ಮನೇ ಪದೀ ।
ಸದಸ್ತ್ರಯ ಉದಾತ್ತೇತಃ ಕುಚಾದ್ಯೇದಾ ಉದಾತ್ತ ಇತ್ ॥ ೨೯ ॥

ಸ್ವರಿತೇತಃ ಪಂಚತ್ರಿಂಶದ್ಧಿಕ್ಕಾದ್ಯಾಶ್ಚ ತತಃ ಪರಂ ।
ಸ್ವರಿತೇಚ್ಛ್ರಿಇಞ್ ಭೃಞಾದ್ಯಾಶ್ಚತ್ವಾರ ಸ್ವರಿತೇತ್ತತಃ ॥ ೩೦ ॥

---

೨೬. ಘುಷಿ ಮುಂತಾದ ಎಂಭತ್ತೆಂಟು ಧಾತುಗಳು ಉದಾತ್ತೇತ್ತುಗಳು. ದ್ಯುತಾದಿ ಇಪ್ಪತ್ತೆರಡು ಧಾತುಗಳು ಅನುದಾತ್ತೇತ್ತುಗಳು.

೨೭. ಘಟಾದಿಗಣದಲ್ಲಿ ಷಿತ್ತಾದ ಹದಿಮೂರು ಧಾತುಗಳು ಅನುದಾತ್ತವೇ ಇತ್ಸಂಜ್ಞೆಯಾಗಿ ಉಳ್ಳವುಗಳು. ಅವುಗಳಲ್ಲಿ ಜ್ವಲ ಮುಂತಾದ ಐವತ್ತೆರಡು ಧಾತುಗಳು ಉದಾತ್ತೇತ್ತುಗಳು.

೨೮. ರಾಜೃಧಾತುವು ಸ್ವರಿತೇತ್ತೆಂದು ಹೇಳಲ್ಪಟ್ಟಿದೆ. ತನ, ಭ್ರಾಜೃ ಮೊದಲಾದ ಮೂರು ಧಾತುಗಳು ಅನುದಾತ್ತೇತ್ತುಗಳು. ಭಾ ಧಾತುವು ಉದಾತ್ತವು.

೨೯-೩೦. ಸಹ ಧಾತುವು ಅನುದಾತ್ತೇತ್ ಎಂದೂ ರಮು ಎಂಬುದು ಒಂದೇ ಆತ್ಮನೇಪದಿಯೆಂದೂ ತಿಳಿಯಬೇಕು. ಸದ ಮೊದಲಾದ ಮೂರು ಉದಾತ್ತೇತ್ತುಗಳು. ಕುಚಾದಿಗಳು ಉದಾತ್ತಗಳು. ಹಿಕ್ಕ ಮೊದಲಾದ ಮೂವತ್ತೈದು ಧಾತುಗಳು ಸ್ವರಿತೇತ್ತುಗಳು. ಶಿಞ್ ಭೃಞ್ ಮುಂತಾದ ನಾಲ್ಕು ಧಾತುಗಳೂ ಸ್ವರಿತೇತ್ತುಗಳು.

ಧೇಟಃ ಪರಸ್ಮೈಪದಿನಃ ಷಟ್‌ಚತ್ವಾರಿಂಶದುದೀರಿತಾಃ ।
ಅಷ್ಟಾದಶ ಸ್ಮಿಙಾದ್ಯಾಸ್ತು ಆತ್ಮನೇಪದಿನೋ ಮತಾಃ ॥ ೩೧ ॥

ತತಸ್ತ್ರಯೋಽನುದಾತ್ತೇತಃ ಪೂಙಾದ್ಯಾಃ ಪರಿಕೀರ್ತಿತಾಃ ।
ಹೃಪರಸ್ಮೈಪದೀ ಚಾತ್ಮನೇಭಾಷಾ ಸ್ತುಗುಪಾಸ್ತ್ರಯಃ ॥ ೩೨ ॥

ರಭದ್ಯಬ್ಧಯನುದಾತ್ತೇತೋ ಞಿಕ್ಷ್ವಿದೋದಾತ್ತ ಇನ್ಮತಃ ।
ಪರಸ್ಮೈಪದಿನಃ ಪಂಚ ದಶ ಸ್ಕಂಭ್ವಾದಯಸ್ತಥಾ ॥ ೩೩ ॥

ಕಿತಧಾತುರುದಾತ್ತೇಚ್ಚ ದಾನಶಾನೋಭಯಾತ್ಮಕೌ ।
ಸ್ವರಿತೇತಃ ಪಚಾದ್ಯಂಕಾ ಪರಸ್ಮೈಪದಿನೋ ಮತಾಃ ॥ ೩೪ ॥

ಸ್ವರಿತೇತಸ್ತ್ರಯಶ್ಚೇತೌ ವದವಚೀ ಪರಿಭಾಷಿಣೌ ।
ಭ್ವಾದ್ಯಾ ಏತೇ ಷಡಧಿಕಂ ಸಹಸ್ರಂ ಧಾತವೋ ಮತಾಃ ॥ ೩೫ ॥

---

೩೧. ಧೇಟ್ ಮುಂತಾದ ನಲವತ್ತಾರು ಧಾತುಗಳು ಪರಸ್ಮೈಪದಿಗಳು. ಸ್ಮಿಙಾದಿ ಹದಿನೆಂಟು ಧಾತುಗಳು ಆತ್ಮನೇಪದಿಗಳೆಂದು ಹೇಳಲ್ಪಟ್ಟಿವೆ.

೩೨. ಆಮೇಲೆ ಪೂಙ್ ಮುಂತಾದ ಮೂರು ಧಾತುಗಳು ಅನುದಾತ್ತೇತ್ತುಗಳೆಂದು ಸಿದ್ಧವಾಗಿವೆ. ಹೃ ಧಾತುವು ಪರಸ್ಮೈಪದಿಯು. ಸ್ತು ಮುಂತಾದ ಮೂರು ಆತ್ಮನೇಪದಿಗಳು.

೩೩. ರಭ ಮುಂತಾದ ನಾಲ್ಕು ಧಾತುಗಳು ಅನುದಾತ್ತೇತ್ತುಗಳು. ಞಿಕ್ಷ್ವಿದಾ ಎಂಬುದು ಉದಾತ್ತೇತ್ತಾಗಿದೆ. ಸ್ಕಂಭು ಮುಂತಾದ ಹದಿನೈದು ಪರಸ್ಮೈ ಪದಿಗಳು.

೩೪. ಕಿತಧಾತುವು ಉದಾತ್ತೇತ್ತುವು. ದಾನ, ಶಾನಧಾತುಗಳು ಉಭಯ ಪದಿಗಳು ಅಂದರೆ ಸ್ವರಿತೇತ್ತುಗಳು ಪಚ ಮುಂತಾದ (ಒಂಭತ್ತು) ವು ಸ್ವರಿ ತೇತ್ತುಗಳು. ಅಂಕ ಮುಂತಾದುವು ಪರಸ್ಮೈಪದಿಗಳು.

೩೫. ಆಮೇಲೆ ಮೂರು ಸ್ವರಿತೇತ್ತುಗಳು. ವದ, ವಚ ಧಾತುಗಳು ಪರಸ್ಮೈಪದಿಗಳು. ಭೂ ಮುಂತಾದ ಧಾತುಗಳು ಸಾವಿರದ ಆರು ಇವೆಯೆಂದು ತಿಳಿಯಬೇಕು. ಇವು ಭ್ವಾದಿಗಣದವುಗಳು.

ಪರಸ್ಮೈಪದಿನಃ ಪ್ರೋಕ್ತಾ ವದಶ್ಚಾಪಿ ಹನೇತಿ ಚ ।
ಸ್ವರಿತೇತೋ ದ್ವಿಷಾದ್ಯಾಸ್ತು ಚತ್ವಾರೋ ಧಾತವೋ ಮತಾಃ ॥ ೩೬ ॥

ಚಕ್ಷಿಙೇಕಃ ಸಮಾಖ್ಯಾತೋ ಧಾತುರತ್ರಾತ್ಮನೇಪದೀ ।
ಇರಾದಯೋಽನುದಾತ್ತೇತೋ ಧಾತವಸ್ತು ತ್ರಯೋದಶ ॥ ೩೭ ॥

ಆತ್ಮನೇಪದಿನೌ ಪ್ರೋಕ್ತೌ ಷೂಙ್‌ಶೀಙ್ ದ್ವೌ ಶಾಬ್ದಿಕೈರ್ಮುನೇ ।
ಪರಸ್ಮೈಪದಿನಃ ಪ್ರೋಕ್ತಾ ಷುಮುಖಾಃ ಸಪ್ತಧಾತವಃ ॥ ೩೮ ॥

ಸ್ವರಿತೇದುಣ್ರ್ಣುಞಾಖ್ಯಾತೋ ಧಾತುರೇಕೋ ಮುನೀಶ್ವರ ।
ಘುಮುಖಾಸ್ತ್ರಯ ಉದ್ದಿಷ್ಟಾಃ ಪರಸ್ಮೈಪದಿನಸ್ತಥಾ ॥ ೩೯ ॥

ಷುಞೇಕಸ್ತು ಸಮಾಖ್ಯಾತಃ ಸ್ವೃತೋ ನಾರದ ಶಾಬ್ದಿಕೈಃ ॥ ೪೦ ॥

ಅಷ್ಟಾದಶ ರಾಪ್ರಭೃತಯಃ ಪರಸ್ಮೈಪದಿನಃ ಸ್ಮೃತಾಃ ।
ಇಙ್ಜ್ಞಾತ್ಮನೇಪದೀ ಪ್ರೋಕ್ತೋ ಧಾತುರ್ನಾರದಕೇವಲಃ ॥ ೪೧ ॥

---

೩೬. ವದ ಮತ್ತು ಹನ ಧಾತುಗಳು ಪರಸ್ಮೈಪದಿಗಳು. ದ್ವಿಷ ಮುಂತಾದ ನಾಲ್ಕು ಧಾತುಗಳು ಸ್ವರಿತೇತ್ತುಗಳು ಅಂದರೆ ಉಭಯಪದಿಗಳು.

೩೭. ಇಲ್ಲಿ ಚಕ್ಷಿಙ್ ಎಂಬ ಒಂದು ಧಾತು ಮಾತ್ರ ಆತ್ಮನೇಪದಿಯಾಗಿದೆ. ಇರಾದಿ ಹದಿಮೂರು ಧಾತುಗಳು ಅನುದಾತ್ತ ಇತ್ಸಂಜ್ಞೆಯುಳ್ಳವುಗಳು.

೩೮. ಋಷಿಯೇ! ಶಬ್ದಶಾಸ್ತ್ರಕೋವಿದರಿಂದ ಪೂಙ್, ಶೀಙ್‌ಯೆಂಬ ಎರಡು ಧಾತುಗಳು ಆತ್ಮನೇಪದಿಗಳೆಂದು ಹೇಳಲ್ಪಟ್ಟಿವೆ. ಷು ಮುಂತಾದ ಏಳು ಧಾತುಗಳು ಪರಸ್ಮೈಪದಿಗಳೆಂದು ಉಕ್ತವಾಗಿವೆ.

೩೯. ಉರ್ಣುಞ್‌ಯೆಂಬ ಧಾತುವು ಸ್ವರಿತೇತ್ತಾಗಿದೆ. ಮುನಿಶ್ರೇಷ್ಠನೇ! ಘು ಮೊದಲಾದ ಮೂರು ಧಾತುಗಳು ಹಾಗೆಯೇ ಪರಸ್ಮೈಪದಿಗಳಾಗಿವೆ.

೪೦-೪೧. ಷ್ಟುಞ್‌ಎಂಬ ಒಂದು ಧಾತುವು ಸ್ವರಿತೇತ್ತಾಗಿದೆ. ನಾರದನೇ! ರಾ ಮೊದಲಾದ ಹದಿನೆಂಟು ಧಾತುಗಳು ಪರಸ್ಮೈಪದಿಗಳೆಂದು ಹೇಳಲ್ಪಟ್ಟಿವೆ. ಇಙ್‌ಯೆಂಬ ಒಂದು ಧಾತು ಮಾತ್ರ ಆತ್ಮನೇಪದಿಯು.

ವಿದಾದಯಸ್ತು ಚತ್ವಾರಃ ಪರಸ್ಮೈಪದಿನೋ ಮತಾಃ ।
ಇಷ್ಟಪ್ ಶಯೇಃ ಸಮುದ್ದಿಷ್ಟಃ ಪರಸ್ಮೈಪದಿಕಸ್ತಥಾ ॥ ೪೨ ॥

ಪರಸ್ಮೈಪದಿನಶ್ಚೈವ ತೇ ಮಯೋಕ್ತಾಃ ಸ್ಯಮಾದಯಃ ।
ದೀಧೀಙ್‌ವೇವೀಙ್ ಸ್ಮೃತೌ ಧಾತೂ ಆತ್ಮನೇಪದಿನೌ ಮುನೇ ॥ ೪೩ ॥

ಪ್ರಥಾದಯಸ್ತ್ರಯಶ್ಚಾಪಿ ಉದಾತ್ತೇತಃ ಪ್ರಕೀರ್ತಿತಾಃ ।
ಚರ್ಕರೀತಂ ಚ ಹುಙ್ ಪ್ರೋಕ್ತೋನುದಾತ್ತೇನ್ಮುನಿಸತ್ತಮ ॥ ೪೪ ॥

ತ್ರಿಸಪ್ತತಿಸಮಾಖ್ಯಾತಾ ಧಾತವೋಽದಾದಿಕೇ ಗಣೇ ।
ದಾದಯೋ ಧಾತವೋ ವೇದಾಃ ಪರಸ್ಮೈಪದಿನೋ ಮತಾಃ ॥ ೪೫ ॥

ಸ್ವರಿತೇದ್ವೈ ಭೃಙಾಖ್ಯಾತಾ ಉದಾತ್ತೇದ್ಧಾಕ್ ಪ್ರಕೀರ್ತಿತಃ ।
ಮಾಙ್ ಹಾಙ್ ದ್ವಾವನುದಾತ್ತೇತೌ ಸ್ವರಿತೇ ದ್ದಾನಧಾತುಷು ॥ ೪೬ ॥

---

೪೨. ವಿದ ಮೊದಲಾದ ನಾಲ್ಕು ಧಾತುಗಳು ಪರಸ್ಮೈಪದಿಗಳು. ಹಾಗೆಯೇ ಇಷ್ಟಪ್=ಶಯೇ ಈ ಧಾತುವು ಮಲಗುಯೆಂಬರ್ಥದಲ್ಲಿದ್ದು ಪರಸ್ಮೈಪದಿಯಾಗಿದೆ.

೪೩. ಸ್ಯಮ ಮುಂತಾದುವು ಪರಸ್ಮೈಪದಿಗಳೆಂದು ನಾನು ಹೇಳಿರುವೆನು. ದೀಧೀಙ್, ವೇವೀಙ್‌ಯೆಂಬ ಎರಡು ಧಾತುಗಳು ಆತ್ಮನೇಪದಿಗಳು.

೪೪. ಪ್ರಥ ಮೊದಲಾದ ಮೂರು ಧಾತುಗಳು ಉದಾತ್ತೇತ್ತುಗಳೆಂದು ಹೇಳಲ್ಪಟ್ಟವೆ. ಚರ್ಕರೀತಂ, ಹ್ನುಙ್ ಎಂಬುದು ಆತ್ಮನೇಪದಿಗಳು.

೪೫. ಈರೀತಿಯಾಗಿ ಅದಾದಿಗಣದಲ್ಲಿ ಮುನ್ನೂರು ಧಾತುಗಳಿವೆ. ದಾ ಮುಂತಾದ ಧಾತುಗಳು ಪರಸ್ಮೈಪದಿಗಳು. (ಇಲ್ಲಿಂದ ಜುಹೋತ್ಯಾದಿಗಣವು ಆರಂಭಿಸಲ್ಪಟ್ಟಿದೆ).

೪೬. ಭೃಙ್ ಎಂಬ ಧಾತುವು ಸ್ವರಿತೇತ್ತಾಗಿದೆ. ಹಾತ್‌ಯೆಂಬ ಧಾತುವು ಉದಾತ್ತೇತ್ತಾಗಿದೆ. ಮಾಙ್, ಹಙ್ ಎಂಬ ಎರಡು ಧಾತುಗಳು ಅನುದಾತ್ತವೇ ಇತ್ತಾಗಿವುಳ್ಳವುಗಳು. ದಾನಧಾತುವು ಸ್ವರಿತೇತ್ತು ಎಂದು ತಿಳಿಯಬೇಕು.

ವಾಣಿತಿರಾದ್ಯಾಸ್ತ್ರಯಶ್ಚಾಪಿ ಸ್ವರಿತೇತ ಉದಾಹೃತಾಃ ।
ಘೃಮುಖಾ ದ್ವಾದಶ ತಥಾ ಪರಸ್ಮೈಪದಿನೋ ಮತಾಃ ॥ ೪೭ ॥

ದ್ವಾವಿಂಶತಿರಿಹೋದ್ದಿಷ್ಟಾ ಧಾತವೋ ಹ್ವಾದಿಕೇ ಗಣೇ ।
ಪರಸ್ಮೈಪದಿನಃ ಪ್ರೋಕ್ತಾ ದಿವಾದ್ಯಾಃ ಪಂಚವಿಂಶತಿಃ ॥ ೪೮ ॥

ಆತ್ಮನೇಪದಿನೌ ಧಾತೂ ಷೂಙ್ ದೂಙ್ ದ್ವಾವಪಿ ನಾರದ ।
ಓದಿತಃ ಪೂಙ್‌ಮುಖಾಃ ಸಪ್ತ ಆತ್ಮನೇಪದಿನೋ ಮತಾಃ ॥ ೪೯ ॥

ಆತ್ಮನೇಪದಿನೋ ವಿಪ್ರ ದೀಙ್‌ಮುಖಾಸ್ತ್ವಿಹ ಕೀರ್ತಿತಾಃ ।
ಸ್ಯತಿಪ್ರಭೃತಯೋ ವೇದಾಃ ಪರಸ್ಮೈಪದಿನೋ ಮತಾಃ ॥ ೫೦ ॥

ಜನ್ಯಾದಯಃ ಪಂಚದಶ ಆತ್ಮನೇಪದಿನೋ ಮುನೇ ।
ವೃಷಾದ್ಯಾಃ ಸ್ವರಿತೇತಸ್ತು ಧಾತವಃ ಪಂಚಕೀರ್ತಿತಾಃ ॥ ೫೧ ॥

---

೪೭. ವಾಣಿ ಮುಂತಾದ ಮೂರು ಧಾತುಗಳು ಸ್ವರಿತೇತ್ತುಗಳೆಂದು ಹೇಳಲ್ಪಟ್ಟಿವೆ. ಘೃ ಮುಂತಾದ ಹನ್ನೆರಡು ಧಾತುಗಳೂ ಪರಸ್ಮೈಪದಿಗಳು.

೪೮. ಇದೇರೀತಿಯಾಗಿ ಜುಹೋತ್ಯಾದಿಗಣದಲ್ಲಿ ಇಪ್ಪತ್ತೆರಡು ಧಾತುಗಳು ಹೇಳಲ್ಪಟ್ಟಿವೆ. ಮುಂದೆ ಹೇಳುವುದು ದಿವಾದಿಧಾತುಗಳು. ದಿವಾದಿ ಇಪ್ಪತ್ತೈದು ಧಾತುಗಳು ಪರಸ್ಮೈಪದಿಗಳೆಂದು ಹೇಳಲ್ಪಟ್ಟಿವೆ.

೪೯. ಷೂಙ್, ದೂಙ್‌ಯೆಂಬ ಎರಡು ಧಾತುಗಳು ಆತ್ಮನೇಪದಿಗಳಾಗಿವೆ. ನಾರದನೇ! ಓಕಾರವೇ ಮೊದಲು ಇತ್ತಾಗಿ ಉಳ್ಳ ಪೂಙ್ ಮೊದಲಾದ ಏಳು ಧಾತುಗಳು ಆತ್ಮನೇಪದಿಗಳೆಂದು ಹೇಳಲ್ಪಟ್ಟಿವೆ.

೫೦. ದ್ವಿಜನೇ! ದೀಙ್ ಮೊದಲಾದುವುಗಳು ಆತ್ಮನೇಪದಿಗಳೆಂದು ಹೇಳಲ್ಪಟ್ಟಿವೆ. ಷೋ (ಸ್ಯತಿ) ಮೊದಲಾದ ಧಾತುಗಳು ಪರಸ್ಮೈಪದಿಗಳೆಂದು ತಿಳಿಯಬೇಕು.

೫೧. ಜನೀ ಮುಂತಾದ ಹದಿನೈದು ಧಾತುಗಳು ಆತ್ಮನೇಪದಿಗಳು. ಋಷಿಯೇ! ವೃಷ ಮುಂತಾದ ಐದು ಧಾತುಗಳು ಸ್ವರಿತೇತ್ತುಗಳೆಂದು ಪ್ರಸಿದ್ಧವಾಗಿವೆ.

ಏಕಾದಶ ಪದಾದ್ಯಾಸ್ತು ಹ್ಯಾತ್ಮನೇಪದಿನೋ ಮತಾಃ ।
ರಾಧೋಽಕರ್ಮಕ ಏವಾತ್ರ ವೃದ್ಧೌ ಸ್ವಾದಿಚುರಾದಿಕೇ ॥ ೫೨ ॥

ಉದಾತ್ತೇತಸ್ತುದಾದ್ಯಾಸ್ತು ತ್ರಯೋದಶ ಸಮೀರಿತಾಃ ।
ಪರಸ್ಮೈಪದಿನೋಽಷ್ಟಾತ್ರ ರಧಾದ್ಯಾಃ ಪರಿಕೀರ್ತಿತಾಃ ॥ ೫೩ ॥

ಸಮಾದ್ಯಾಶ್ಚಾಪ್ಯುದಾತ್ತೇತಃ ಷಟ್‌ಚತ್ವಾರಿಂಶದುದೀರಿತಾಃ ।
ಚತ್ವಾರಿಂಶಚ್ಛತಂ ಚಾಪಿ ದಿವಾದೌ ಧಾತವೋ ಮತಾಃ ॥ ೫೪ ॥

ಸ್ವಾದಯಃ ಸ್ವರಿತೇತೋಂಕಾಃ ಧಾತವಃ ಪರಿಕೀರ್ತಿತಾಃ ।
ಸಪ್ತಾಖ್ಯಾತೋ ದುನೋತಿಸ್ತು ಪರಸ್ಮೈಪದಿನೋ ಮುನೇ ॥ ೫೫ ॥

ಅಷ್ಟಿಧಾವನುದಾತ್ತೇತೌ ಧಾತೂ ದ್ವೌ ಪರಿಕೀರ್ತಿತೌ ।
ಪರಸ್ಮೈಪದಿನಸ್ತ್ವತ್ರ ತಿಕಾದ್ಯಾಸ್ತು ಚತುರ್ದಶ ॥ ೫೬ ॥

---

೫೨. ಪದ ಮುಂತಾದ ಹನ್ನೊಂದು ಧಾತುಗಳು ಆತ್ಮನೇಪದಿಗಳೆಂದು ಪ್ರಸಿದ್ಧವಾಗಿವೆ. ಅಕರ್ಮಕವಾದ ರಾಧ ಧಾತುವು ಮಾತ್ರ ವೃದ್ಧ್ಯರ್ಥದಲ್ಲಿ ಸ್ವಾದಿ ಚುರಾದಿಗಳಲ್ಲಿಯೂ ಪರಸ್ಮೈಪದಿಯು. ಇವು ದಿವಾದಿಗಳು.

೫೩. ತುದ ಮುಂತಾದುವುಗಳು ಹದಿಮೂರು ಧಾತುಗಳು ಉದಾತ್ತೇತ್ತುಗಳು. ರಧ ಮುಂತಾದ ಎಂಟು ಧಾತುಗಳು ಪರಸ್ಮೈಪದಿಗಳೆಂದು ಹೇಳಲ್ಪಟ್ಟಿವೆ.

೫೪. ಸಮ ಮುಂತಾದ ನಲವತ್ತೆಂಟು ಧಾತುಗಳು ಉದಾತ್ತೇತ್ತುಗಳೆಂದು ಹೇಳಲ್ಪಟ್ಟಿವೆ- ದಿವಾದಿಯಲ್ಲಿ ನೂರನಲವತ್ತು ಧಾತುಗಳಿವೆಯೆಂದು ಪ್ರಸಿದ್ಧವಾಗಿದೆ.

೫೫. (ಷೂಙ್) ಸ್ವಾದಿ ಮೊದಲಾದ ಒಂಭತ್ತು ಧಾತುಗಳು ಸ್ವರಿತೇತ್ತುಗಳು. (ದು) ದುನೋತಿ ಮುಂತಾದ ಏಳು ಧಾತುಗಳು ಪರಸ್ಮೈಪದಿಗಳು.

೫೬. ನಾರದನೇ! ಘು ಮೊದಲಾದ ಎರಡು ಧಾತುಗಳು ಅನುದಾತ್ತೇತ್ತುಗಳು. ತಿಕ ಮುಂತಾದ ಹದಿನಾಲ್ಕು ಧಾತುಗಳು ಪರಸ್ಮೈಪದಿಗಳೆಂದು ಹೇಳಲ್ಪಟ್ಟಿವೆ.

ದ್ವಾತ್ರಿಂಶದ್ಧಾತವಃ ಪ್ರೋಕ್ತಾ ವಿಪ್ರೇಂದ್ರ ಸ್ವಾದಿಕೇ ಗಣೇ ।
ಸ್ವರಿತೇತಃ ಷಡಾಖ್ಯಾತಾಸ್ತುದಾದ್ಯಾ ಮುನಿಸತ್ತಮ ॥ ೫೭ ॥

ಋಷಿರ್ಮುದಾತ್ತೇಜ್ಜುಷೀಪೂರ್ವಾ ಆತ್ಮನೇಪದಿನೋರ್ಣವಾಃ ।
ವ್ರಶ್ಚಾದಯ ಉದಾತ್ತೇತಃ ಪ್ರೋಕ್ತಾಃ ಪಂಚಾಧಿಕಂ ಶತಂ ॥ ೫೮ ॥

ಗೂರ್ಯರ್ಮುದಾತ್ತೇದಿಹೋದ್ದಿಷ್ಟೋ ಧಾತುರೇಕೋ ಮುನೀಶ್ವರ ।
ಣೂಮುಖಾಶ್ಚೈವ ಚತ್ವಾರಃ ಪರಸ್ಮೈಪದಿನೋ ಮತಾಃ ॥ ೫೯ ॥

ಕುಙಾಖ್ಯಾತೋನುದಾತ್ತೇಚ್ಚ ಕುಟಾದ್ಯಾಃ ಪೂರ್ತಿಮಾಗತಾಃ ।
ಪೃಙ್ ವ್ಯೃಙ್ ಚಾತ್ಮನೇಭಾಷೌ ಷಟ್ ಪರಸ್ಮೈಪದೇ ರಿಪೇಃ ॥ ೬೦ ॥

ಆತ್ಮನೇಪದಿನೌ ಧಾತೂ ದೃಙ್‌ಧೃಙ್ ದ್ವೌ ಚಾಪ್ಯುದಾಹೃತೌ ।
ಪೃಚ್ಛಾದಿಷೋಡಶಾಖ್ಯಾತಾಃ ಪರಸ್ಮೈಪದಿನೋ ಮುನೇ ॥ ೬೧ ॥

---

೫೭. ದ್ವಿಜೋತ್ತಮನೇ! ಇದೇ ರೀತಿಯಾಗಿ ಸ್ವಾದಿಗಣದಲ್ಲಿ ಮೂವತ್ತೆರಡು ಧಾತುಗಳು ಹೇಳಲ್ಪಟ್ಟಿವೆ. ತುದ ಮುಂತಾದ ಆರು ಧಾತುಗಳು ಸ್ವರಿತೇತ್ತುಗಳೆಂದು ಹೇಳಲ್ಪಟ್ಟಿವೆ.

೫೮. ಮುನಿಶ್ರೇಷ್ಠನೇ! ಋಷೀಯೆಂಬ ಧಾತುವು ಉದಾತ್ತೇತ್ತಾದುದು. ಜುಷೀ ಮುಂತಾದ ನಾಲ್ಕು ಧಾತುಗಳು ಆತ್ಮನೇಪದಿಗಳು. ವ್ರಶ್ಚ ಮುಂತಾದ ನೂರೈದು ಧಾತುಗಳು ಉದಾತ್ತೇತ್ತುಗಳೆಂದು ಹೇಳಲ್ಪಟ್ಟಿವೆ.

೫೯. ಮುನಿವರನೇ! ಗೂರೀಯೆಂಬ ಒಂದು ಧಾತುವು ಮಾತ್ರ ಉದಾತ್ತೇತ್ತೆಂದು ಇಲ್ಲಿ ಹೇಳಲ್ಪಟ್ಟಿದೆ. ಣೂ ಮುಂತಾದ ನಾಲ್ಕು ಧಾತುಗಳು ಪರಸ್ಮೈಪದಿಗಳು.

೬೦. ಕುಙಯೆಂಬ ಒಂದು ಧಾತುವು ಅನುದಾತ್ತೇತ್ತಾದುದು. ಕುಟ ಮುಂತಾದುವುಗಳೂ ಇಲ್ಲಿ ಸೇರಿವೆ. ಪೃಙ್, ವ್ಯೃಙ್ ಎಂಬೆರಡು ಧಾತುಗಳು ಆತ್ಮನೇಪದಿಗಳು. ರಿಪ ಮೊದಲಾದ ಆರು ಧಾತುಗಳು ಪರಸ್ಮೈಪದಿಗಳು.

೬೧. ದೃಙ್ ಧೃಙ್ ಎಂಬೆರಡು ಧಾತುಗಳು ಆತ್ಮನೇಪದಿಗಳೆಂದು ಹೇಳಲ್ಪಟ್ಟಿವೆ. ಪೃಚ್ಛ ಮೊದಲಾದ ಹದಿನಾರು ಧಾತುಗಳು ಪರಸ್ಮೈಪದಿಗಳು.

ಸ್ವರಿತೇತಃ ಷಟ್ ತತಶ್ಚ ಪ್ರೋಕ್ತಾ ಮಿಲಮುಖಾ ಮುನೇ ।
ಕೃತೀಪ್ರಭೃತಯಶ್ಚಾಪಿ ಪರಸ್ಮೈಪದಿನಸ್ತ್ರಯಃ ॥ ೬೨ ॥

ಸಪ್ತ ಪಂಚಾಶದಧಿಕಾಸ್ತುದಾದೌ ಧಾತವಃ ಶತಂ ।
ಸ್ವರಿತೇತೋ ರುಧೋನಂದಾ ಪರಸ್ಮೈಭಾಷಿತಃ ಕೃತೀ ॥ ೬೩ ॥

ಞಿಇಂಧೀತೋನುದಾತ್ತೇತಸ್ತ್ರಯೋ ಧಾತವ ಈರಿತಾಃ ।
ಉದಾತ್ತೇತಃ ಶಿಷಪಿಷರುಧಾದ್ಯಾಃ ಪಂಚವಿಂಶತಿಃ ॥ ೬೪ ॥

ಸ್ವರಿತೇತಸ್ತನೋಃ ಸಪ್ತ ಧಾತವಃ ಪರಿಕೀರ್ತಿತಾಃ ।
ಮನುವನ್ವಾತ್ಮನೇಭಾಷೌ ಸ್ವರಿತೇತ್ಕೃಞುದಾಹೃತಃ ॥ ೬೫ ॥

ತತೋ ದ್ವೌ ಕೀರ್ತಿತೌ ವಿಪ್ರ ಧಾತವೋ ದಶ ಶಾಬ್ದಿಕೈಃ ।
ಕ್ರ್ಯೈದ್ಯಾಃ ಸಪ್ತೋಭಯೇಭಾಷಾಃ ಸೌತ್ರಾಃ ಸ್ತಂಭ್ವಾದಿಕಾಸ್ತಥಾಃ ॥ ೬೬ ॥

---

೬೨. ಮಿಲ ಮುಂತಾದ ಆರು ಧಾತುಗಳು ಸ್ವರಿತೇತ್ತುಗಳು. ಕೃತೀ ಮುಂತಾದ ಮೂರು ಧಾತುಗಳು ಪರಸ್ಮೈಪದಿಗಳು.

೬೩. ಈರೀತಿಯಾಗಿ ತುದಾದಿಯಲ್ಲಿ ನೂರ ಐವತ್ತೇಳು ಧಾತುಗಳು ಇವೆ. ರುಧ ಮೊದಲಾದವುಗಳು ಸ್ವರಿತೇತ್ತುಗಳು. ಕೃತೀಯೆಂಬುದು ಪರಸ್ಮೈಪದಿಯು.

೬೪. ಞಿ ಇಂಧೀ ಎಂಬ ಧಾತುವಿನ ಮುಂದೆ ಉಕ್ತವಾಗಿರುವ ಮೂರು ಧಾತುಗಳು ಅನುದಾತ್ತೇತ್ತುಗಳು. ಶಿಷ, ಪಿಷ, ರುಧ ಮುಂತಾದ ಇಪ್ಪತ್ತೈದು ಧಾತುಗಳು ಉದಾತ್ತೇತ್ತುಗಳೆಂದು ಉಕ್ತವಾಗಿವೆ.

೬೫. ತನುವೇ ಮೊದಲಾದೇಳು ಧಾತುಗಳು ಸ್ವರಿತೇತ್ತುಗಳೆಂದು ಹೇಳಲ್ಪಟ್ಟಿವೆ. ಮನು, ವನುಯೆಂಬೆರಡು ಧಾತುಗಳು ಆತ್ಮನೇಪದಿಗಳು. ಕೃಞ್ ಧಾತುವು ಸ್ವರಿತೇತ್ತಾಗಿ ಉಭಯಪದವಾಗುವುದು.

೬೬–೬೭. ಆಮೇಲೆರಡು ಧಾತುಗಳು ಈ ಗಣದಲ್ಲಿ ಉಕ್ತವಾಗಿವೆ. ಹೀಗೆ ಈ ಗಣದಲ್ಲಿ ಹತ್ತು ಧಾತುಗಳು ಶಬ್ದಶಾಸ್ತ್ರಪಂಡಿತರಿಂದ ಉಕ್ತವಾಗಿವೆ. ಕ್ರೀಞ್ ಮೊದಲಾದ ಏಳು ಧಾತುಗಳು ಉಭಯಪದಿಗಳಾಗಿರುತ್ತವೆ. ಸ್ತಂಭು

ಪರಸ್ಮೈಪದಿನಃ ಪ್ರೋಕ್ತಾಶ್ಚತ್ವಾರೋಽಪಿ ಮುನೀಶ್ವರ ।
ದ್ವಾವಿಂಶತಿರುದಾತ್ತೇತಃ ಕ್ರುಧಾದ್ಯಾ ಧಾತವೋ ಮತಾಃ ॥ ೬೭ ॥

ವೃಙಾತ್ಮನೇಪದೀ ಧಾತುಃ ಶ್ರಂಥಾದ್ಯಾಶ್ಚೈಕವಿಂಶತಿಃ ।
ಪರಸ್ಮೈಪದಿನಶ್ಚಾಥ ಸ್ವರಿತೇದ್ಗ್ರಹ ಏವ ಚ ॥ ೬೮ ॥

ಕ್ರ್ಯಾದಿಕೇಷು ದ್ವಿಪಂಚಾಶದ್ಧಾತವಃ ಕೀರ್ತಿತಾ ಬುಧೈಃ ।
ಚುರಾದ್ಯಾ ಧಾತವೋ ಞ್ಯಂತಾಃ ಷಟ್‌ತ್ರಿಂಶದಧಿಕಂ ಶತಂ ॥ ೬೯ ॥

ಚಿತ್ಯಾದ್ಯಷ್ಟಾದಶಾಖ್ಯಾತಾ ಆತ್ಮನೇಪದಿನೋ ಮುನೇ ।
ಚರ್ಚಾದ್ಯಾ ಆಧೃಷೀಯಾಸ್ತು ಞ್ಯಂತಾ ವಾ ಪರಿಕೀರ್ತಿತಾಃ ॥ ೭೦ ॥

ಅದಂತಾ ಧಾತವಶ್ಚೈನ ಚತ್ವಾರಿಂಶತ್ತಥಾಷ್ಟ ಚ ।
ಪದಾದ್ಯಾಸ್ತು ದಶ ಪ್ರೋಕ್ತಾ ಧಾತವೋ ಹ್ಯಾತ್ಮನೇಪದೇ ॥ ೭೧ ॥

---

ಮೊದಲಾದ ನಾಲ್ಕು ಧಾತುಗಳು ಸೌತ್ರಧಾತುಗಳು (ಗಣಪಾಠದಲ್ಲಿ ಹೇಳಿದೆ ಸೂತ್ರದಲ್ಲಿ ಮಾತ್ರ ನಿರ್ದಿಷ್ಟವಾದುವುಗಳು) ಪರಸ್ಮೈಪದಿಗಳು. ಕ್ರುಧ ಮುಂತಾದ ಇಪ್ಪತ್ತೆರಡು ಧಾತುಗಳು ಉದಾತ್ತೇತ್ತಾಗಿರುವುವು.

೬೮. ವೃಙ್ ಧಾತುವು ಆತ್ಮನೇಪದಿಯು. ಶ್ರಂಥ ಮುಂತಾದುವು ಇಪ್ಪತ್ತೊಂದು ಧಾತುಗಳು ಪರಸ್ಮೈಪದಿಗಳು. ಗ್ರಹ ಧಾತುವು ಸ್ವರಿತೇತ್ತಾಗಿರುವುದು.

೬೯. ಈರೀತಿಯಾಗಿ ಕ್ರ್ಯಾದಿಗಣದಲ್ಲಿ ಐವತ್ತೆರಡು ಧಾತುಗಳು ಪಂಡಿತರಿಂದ ಪರಿಗಣಿಸಲ್ಪಟ್ಟಿವೆ. ಞ ಕಾರವೇ ಕೊನೆಯಲ್ಲಿರುವ ನೂರ ಮೂವತ್ತಾರು ಧಾತುಗಳು ಚುರಾದಿಗಣದಲ್ಲಿ ಹೇಳಲ್ಪಟ್ಟಿವೆ.

೭೦. ಚಿತಿ ಮುಂತಾದ ಹದಿನೆಂಟು ಧಾತುಗಳು ಆತ್ಮನೇಪದಿಗಳಾಗಿರುವುವು. ಚರ್ಚಾ ಎಂಬುದೇ ಆದಿಯಾಗಿ ಧೃಷೀ ಧಾತುವಿನವರೆಗೆ ಇರುವವುಗಳನ್ನು ಞ್ಯಂತಗಳೆಂದು ತಿಳಿಯಬೇಕು. ಇವು ಉಭಯಪದಿಗಳೆಂದು ಭಾವ.

೭೧. ಹೀಗೆಯೇ ನಲವತ್ತೆಂಟು ಧಾತುಗಳು ಇಲ್ಲಿ ಅಕಾರವೇ ಅಂತ್ಯದಲ್ಲಿ ಇರುವವುಗಳಾಗಿರುತ್ತವೆ. ಪದ ಮುಂತಾದ ಹತ್ತು ಧಾತುಗಳು ಆತ್ಮನೇಪದಿಗಳಾಗಿರುತ್ತವೆ.

ಸೂತ್ರಾದ್ಯಾ ಅಷ್ಟ ಚಾಪ್ಯತ್ರ ಣ್ಯಂತಾಃ ಪ್ರೋಕ್ತಾ ಮನೀಷಿಭಿಃ ।
ಧಾತ್ವರ್ಥೇ ಪ್ರಾತಿಪದಿಕಾದ್ಬಹುಲಂ ಚೇಷ್ಟವನ್ಮತಂ ॥ ೭೨ ॥

ತತ್ಕರೋತಿ ತದಾಚಷ್ಟೇ ಹೇತುಮತ್ಯಪಿ ಣಿರ್ಮತಃ ।
ಧಾತ್ವರ್ಥೇ ಕರ್ತೃಕರಣಾಚ್ಚಿತ್ರಾದ್ಯಾಶ್ಚಾಪಿ ಧಾತವಃ ॥ ೭೩ ॥

ಅಷ್ಟ ಸಂಗ್ರಾಮ ಆಖ್ಯಾತೋಽನುದಾತ್ತೇಚ್ಛಾಬ್ದಿಕೈರ್ಬುಧೈಃ ।
ಸ್ತೋಮಾದ್ಯಾಃ ಷೋಡಶ ತಥಾ ಅದಂತಸ್ಯ ನಿದರ್ಶನಂ ॥ ೭೪ ॥

ತಥಾ ಬಾಹುಲಕಾದನ್ಯೇ ಸೌತ್ರಲೌಕಿಕವೈದಿಕಾಃ ।
ಸರ್ವೇ ಸರ್ವಗಣೀಯಾಶ್ಚ ತಥಾನೇಕಾರ್ಥವಾಚಿನಃ ॥ ೭೫ ॥

---

೭೨. ಸೂತ್ರ ಮುಂತಾದ ಎಂಟು ಧಾತುಗಳೂ ಣ್ಯಂತಗಳಾಗಿವೆಯೆಂದು ಪ್ರಾಜ್ಞರು ಹೇಳಿರುತ್ತಾರೆ. ಪ್ರಾತಿಪದಿಕ (ನಾಮಪದ) ದ ಮೇಲೂ ಧಾತ್ವರ್ಥವಿವಕ್ಷೆ ಮಾಡಿದಾಗ ಕ್ರಿಯಾಪದದ ಪ್ರತ್ಯಯಗಳು ಬರುತ್ತವೆ. ಆಗ ಇಷ್ಟವದ್ಭಾವ ಬರುವುದು. ಅಂದರೆ ಅಂತ್ಯಲೋಪಾದಿಗಳು ಬರುವುವು. (ಇವುಗಳಿಗೆ ನಾಮಧಾತುಗಳೆಂದು ಹೆಸರು.)

೭೩. ಅದನ್ನು ಮಾಡುತ್ತಾನೆ, ಅದನ್ನು ಆಚರಿಸುತ್ತಾನೆ ಎಂಬ ಅರ್ಥದಲ್ಲಿಯೂ, ಮಾಡಿಸುವವನು ಅಥವಾ ಪ್ರೇರೇಪಿಸುವವನು ಎಂಬ ಅರ್ಥದಲ್ಲಿಯೂ ಣಿಚ್ ಎಂಬ ಪ್ರತ್ಯಯವು ಬರುವುದು. ಈರೀತಿಯಾಗಿ ಕರ್ತ್ರರ್ಥದಲ್ಲಿಯೂ ಕರಣಾರ್ಥದಲ್ಲಿಯೂ ಕ್ರಿಯೆಯನ್ನು ವಿವಕ್ಷೆ ಮಾಡಿದಾಗ ಪ್ರತ್ಯಯಗಳು ಬರುವುವು. ಇವೇ ಚಿತ್ರಾದಿಧಾತುಗಳೆಂದು ಪ್ರಸಿದ್ಧವಾಗಿವೆ.

೭೪. ಸಂಗ್ರಾಮ ಮುಂತಾದ ಎಂಟುಧಾತುಗಳು ಯುದ್ಧ ಮೊದಲಾದ ಅರ್ಥಗಳಲ್ಲಿ ಅನುದಾತ್ತೇತ್ತಾಗಿ ಶಾಬ್ದಿಕರಿಂದ ಪ್ರೋಕ್ತವಾಗಿವೆ. ಸ್ತೋಮ ಮುಂತಾದ ಅಕಾರಾಂತವಾದ ಹದಿನಾರು ಧಾತುಗಳನ್ನು ಈ ನಾಮಧಾತುಗಳ ಉದಾಹರಣೆಗಾಗಿ ಹೇಳಿದೆ.

೭೫. ಇದೇ ರೀತಿಯಾಗಿ ಹಿಂದೆ ಹೇಳಿದಂತೆ ಬಹುಲಗ್ರಹಣದಿಂದಲೂ ಸೂತ್ರನಿರ್ದೇಶದಿಂದಲೂ ಲೋಕದಲ್ಲಿಯೂ ವೇದದಲ್ಲಿಯೂ ಪ್ರಯೋಗಿಸಿರುವ

**ಸನಾದ್ಯಂತಾ ಧಾತವಶ್ಚ ತಥಾ ವೈ ನಾಮಧಾತವಃ ।**
**ಏವಮಾನಂತ್ಯಮುದ್ಭಾವ್ಯ ಧಾತೂನಾಮಿಹ ನಾರದ ।**
**ಸಂಕ್ಷೇಪೋಽಯಂ ಸಮುದ್ದಿಷ್ಟೋ ವಿಸ್ತರಸ್ತತ್ರ ತತ್ರ ಚ ॥ ೭೬ ॥**

**ಊದೃದಂತೈರ್ಯೌತಿ ರುಕ್ಷ್ಣುಶೀಙ್ಸ್ನುನುಕ್ಷುಶ್ವಿಡೀಙ್ಶ್ರಿಭಿಃ ।**
**ವೃಙ್ವೃಞ್ಭ್ಯಾಂ ಚ ವಿನೈಕಾಚೋಽಜಂತೇಷು ನಿಹತಾಃ ಸ್ಮೃತಾಃ ॥ ೭೭ ॥**

**ಶಕ್ಲ್ ಪಚ್‌ಮುಚ್‌ರಿಚ್ ವಚ್ ವಿಚ್ ಸಿಚ್ ಪ್ರಚ್ಛಿ ತ್ಯಜ್ ನಿಜಿರ್ ಭಜಃ ।**
**ಭಂಜ್ ಭುಜ್ ಭ್ರಸ್ಜ್ ಮಸ್ಜಿ ಯಜ್ ಯುಜ್**
**ರಂಜಿ ವಿಜಿರ್ ಸ್ವಂಜಿ ಸಂಜ್ ಸೃಜಃ ॥ ೭೮ ॥**

---

ಧಾತುಗಳನ್ನು ಊಹಿಸಬೇಕು. ಎಲ್ಲಾ ಧಾತುಗಳನ್ನೂ ಎಲ್ಲಾ ಗಣದಲ್ಲಿಯೂ ಸೇರಿಸಬಹುದು. ಹಾಗೆಯೇ ಒಂದೇ ಧಾತುವಿಗೆ ಅನೇಕಾರ್ಥಗಳಿರುತ್ತವೆ.

೭೬. ಸನ್ ಮೊದಲಾದ ಪ್ರತ್ಯಯಗಳೇ ಅಂತವಾಗಿರುವುವುಗಳೂ ಧಾತುಗಳೆಂದು ಉಕ್ತವಾಗಿವೆ. ಹಾಗೆಯೇ ನಾಮಪದದ ಮೇಲೆ ಪ್ರತ್ಯಯ ಬಂದರೆ ನಾಮಧಾತುಗಳಾಗುವುವು. ಇದೇ ರೀತಿಯಾಗಿ ಧಾತುಗಳು ಲೆಕ್ಕವಿಲ್ಲದಷ್ಟು ಆಗುವುವು. ನಾರದನೇ ! ಅವುಗಳನ್ನು ನೀನು ಊಹಿಸಿಕೊಳ್ಳಬೇಕು. ಇಲ್ಲಿ ಹೇಳಿದುದು ತೀರಾ ಸಂಕ್ಷೇಪವೆಂದು ತಿಳಿಯಬೇಕು. ಅಲ್ಲಲ್ಲಿ ಇವು ವಿಸ್ತರಿಸಲ್ಪಟ್ಟಿವೆ.

೭೭. ಸ್ವರವೇ ಅಂತ್ಯವಾಗಿರುವ ಧಾತುಗಳಲ್ಲಿ ಊಕಾರ ಋಕಾರ ಅಂತ್ಯವಾಗಿರುವ ಯೂ, ರು, ಕ್ಷು, ಶೀಙ್, ಸ್ನು, ನು, ಕ್ಷು, ಶ್ವಿ, ಡೀಙ್, ವೃಙ್ ವೃಞ್ ಇವುಗಳನ್ನು ಬಿಟ್ಟು ಉಳಿದ ಒಂದು ಸ್ವರವಿರುವ ಧಾತುಗಳು ಅನುದಾತ್ತಗಳೆಂದು ಹೇಳಲ್ಪಟ್ಟಿವೆ.

೭೮. ವ್ಯಂಜನಾಂತಗಳಲ್ಲಿ ಅನುದಾತ್ತ ಧಾತುಗಳು ಗಣನೆಮಾಡಲ್ಪಡುತ್ತವೆ—ಶಕ್ಲ್, ಪಚ್, ಮುಚಲ್ಯ, ರಿಚ್, ವಚ್, ಸಿಬ್, ರಿಚ್, ಪ್ರಚ್ಛ,

**ಅದ್ ಕ್ಷುದ್ ಖಿದ್ ಛಿದ್ ತುದಿ ನುದಃ**
**ಪದ್ಯ ಭಿದ್ ವಿದ್ಯತಿರ್ವಿನದ್ ।**
**ಶದ್ ಸದೀ ಸ್ವಿದ್ಯತಿ ಸ್ಕಂದಿರ್ ಹದೀ ಕ್ರುಧ್‌ಕ್ಷುಧಿ ಬುಧ್ಯತೀ ॥ ೭೯ ॥**

**ಬಂಧಿಯುರ್ಧಿರುಧೀರಾಧಿವ್ಯಧ್‌ರುಧಃ ಸಾಧಿಸಿಧ್ಯತೀ ।**
**ಮನ್ಯ ಹನ್ನಾಪ್ ಕ್ಷಿಪ್ ಛುಪಿ ತಪ್ ತಿಪಸ್ತೃಪ್ಯತಿ ದೃಪ್ಯತೀ ॥ ೮೦ ॥**

**ಲಿಬ್ ಲುಬ್ ವಪ್ ಶಪ್ ಸ್ವಪ್ ಸೃಪಿ**
**ಯುಭ ರಭ ಲಭ ಗಂ ನಂ ಯಮೋ ರಮಿಃ ।**
**ಕ್ರುಶಿರ್ದಂಶಿ ದಿಶೀ ದೃಶ್ ಮೃಶ್ ರಿಶ್ ರುಶ್ ವಿಶ್ ವಿಶ್ ಸ್ಪೃಶಃ ಕೃಷಿಃ ॥**

**ತ್ವಿಷ್ ತುಷ್ ದ್ವಿಷ್ ದುಷ್ ಪುಷ್ಯ ಪಿಷ್**
**ವಿಷ್ ಶಿಷ್ ಶುಷ್ ಶ್ಲಿಷ್ಯತಯೋ ಘಸಿಃ ।**
**ವಸತಿರ್ದಹ ದಿಹಿ ದುಹೋ ನಹ್ ಮಿಹ್ ರುಹ್ ಲಿಹ್ ವಹಿಸ್ತಥಾ ॥ ೮೨ ॥**

---

ತ್ಯಜ, ನಿಜರ್, ಭಜ್; ಭಂಜ್, ಭುಸ್ಜ್, ಮಸ್ಜ್, ಯಜ್, ಯುಜ್, ರುಜ್ ರಂಜ್, ವಿಜಿರ್ ಸ್ವಂಜ್, ಸಂಜ್, ಸೃಜ್.

೭೯. ಅದ್, ಕ್ಷುದ್, ಖಿದ್, ಛಿದ್, ತುದ್, ನುದ್, ಪದ್, ಭಿದ್ ತುದ್, ನುದ್, ಪದ್, ಭಿದ್ ವಿದ್, ವಿನದ್, ಶದ್, ಸದ್, ಸ್ವಿದ್, ಸ್ಕಂದ್ (ಇರಿತ್) ಹದ್, ಕ್ರುಧ್, ಕ್ಷುಧ್ ಬುಧ್.

೮೦. ಬಂಧ್, ಯುದ್, ರುಧ್, ರಾಧ್, ವ್ಯಧ್, ಶುಧ್, ಸಾಧ್, ಸಿಧ್ ಮನು, ಹನ್, ಆಪ್, ಕ್ಷಿಪ್, ಛುಪ್, ತಪ್, ತಿಪ್, ತೃಪ್, ದೃಪ್.

೮೧. ಲಿಪ್, ಲುಪ್, ದಪ್, ಶಪ್, ಸ್ವಪ್, ಸೃಪ್, ಯುಭ್, ರಭ, ಲಭ ಗಮ್, ನಮ್, ಯಂ, ರಂ, ಕ್ರುಷ್, ದಂಶ್, ದಿಶ್, ದೃಶ್, ಮೃಶ್, ರಿಶ್, ರುಶ್, ಲಿಶ್, ವಿಶ್, ಸ್ಪೃಶ್, ಕೃಷ್.

೮೨. ತ್ವಿಷ್, ತುಷ್, ದ್ವಿಷ್, ದುಷ್, ಪುಷ್, ಪಿಷ್, ವಿಷ್, ಶಿಷ್

**ಅನುದಾತ್ತಾ ಹಲಂತೇಷು ಧಾತವೋ ದ್ವ್ಯಧಿಕಂ ಶತಂ ।**
**ಚಾದ್ಯಾ ನಿಪಾತಾ ಗವಯಃ ಪ್ರಾದ್ಯಾ ದಿಗ್ದೇಶಕಾಲಜಾಃ ॥ ೮೩ ॥**

**ಶಬ್ದಾಃ ಪ್ರೋಕ್ತಾ ಹ್ಯನೇಕಾರ್ಥಾಃ ಸರ್ವಲಿಂಗಾ ಅಪಿ ದ್ವಿಜ ।**
**ಗಣಪಾಠಃ ಸೂತ್ರಪಾಠೋ ಧಾತುಪಾಠಸ್ತಥೈವ ಚ ॥ ೮೪**

**ಪಾಠೋನುನಾಸಿಕಾನಾಂ ಚ ಪಾರಾಯಣಮಿಹೋಚ್ಯತೇ ।**
**ಶಬ್ದಾಃ ಸಿದ್ಧಾ ವೈದಿಕಾಸ್ತು ಲೌಕಿಕಾಶ್ಚಾಪಿ ನಾರದ ॥ ೮೫ ॥**

**ಶಬ್ದ ಪಾರಾಯಣಂ ತಸ್ಮಾತ್ಕಾರಣಂ ಶಬ್ದಸಂಗ್ರಹೇ ।**
**ಲಘುಮಾರ್ಗೇಣ ಶಬ್ದಾನಾಂ ಸಾಧೂನಾಂ ಸಂನಿರೂಪಣಂ ॥ ೮೬ ॥**

---

ಶುಷ್, ಶ್ಲಿಷ, ಘಸ್, ವಸ್, ದಸ್, ದಿಹ್, ದುಹ್, ನಹ್, ಮಿಹ್, ರುಹ್ ಲಿಹ್, ವಹ್.

೮೩. ಹಲಂತವಾದ ಧಾತುಗಳಲ್ಲಿ ಅನುದಾತ್ತವಾದ ಧಾತುಗಳು ಹಿಂದೆ ಪರಿಗಣಿಸಿದಂತೆ ನೂರ ಎರಡು ಧಾತುಗಳಿವೆ. ಹೀಗೆಯೇ ಚಾದಿ ಅಂದರೆ ಚ ಮುಂತಾದವುಗಳೇ ನಿಪಾತವೆನಿಸಿಕೊಳ್ಳುತ್ತವೆ. ಇವುಗಳಲ್ಲಿ ದಿಕ್ಕು, ದೇಶ, ಕಾಲ ಮುಂತಾದ ಅರ್ಥವಿಶೇಷದಲ್ಲಿ ಪ್ರಾದಿಗಳೂ ಸೇರಿರುತ್ತವೆ.

೮೪-೮೫. ಬ್ರಾಹ್ಮಣೋತ್ತಮನೇ! ಇದೇ ರೀತಿಯಾಗಿ ಅನೇಕ ಲಿಂಗಗಳಲ್ಲಿ ಅನೇಕ ಅರ್ಥವಿರುವ ಶಬ್ದಗಳು ಹೇಳಲ್ಪಟ್ಟಿವೆ. ಇವುಗಳನ್ನು ಆಯಾಯಾ ಸಮೂಹದಿಂದ ವಿಭಾಗಿಸಿರುವರು. ಇವುಗಳನ್ನು ಗಣಪಾಠ, ಸೂತ್ರಪಾಠ ಧಾತುಪಾಠ, ಅನುನಾಸಿಕಪಾಠವೆಂದು ನಾನಾ ರೀತಿ ಪರಿಗಣಿಸಿರುವರು. ನಾರದನೇ! ಇದೇ ರೀತಿಯಾಗಿ ವೇದದಲ್ಲಿಯೂ, ಲೋಕದಲ್ಲಿಯೂ ನಿಷ್ಪನ್ನವಾದ ಶಬ್ದಗಳಿಗೆ ವೈದಿಕ ಲೌಕಿಕ ಶಬ್ದಗಳೆಂದು ಹೆಸರು.

೮೬. ಈ ಶಬ್ದಗಳ ಪಾರಾಯಣವು ಶಬ್ದಸಂಗ್ರಹದಲ್ಲಿ ಕಾರಣವಾಗಿರುತ್ತದೆ. ಸಾಧುಶಬ್ದಗಳು ಅನಂತವಾದರೂ ಅವನ್ನು ಲಘುಮಾರ್ಗದಿಂದ ನಿರೂಪಿಸಿರುವರು.

**ಪ್ರಕೃತಿಪ್ರತ್ಯಯಾದೇಶ ಲೋಪಾಗಮಮುಖ್ಯೈಃ ಕೃತಂ ।**
**ಇತ್ಥಮೇತತ್ಸಮಾಖ್ಯಾತಂ ನಿರುಕ್ತಂ ಕಿಂಚಿದೇವ ತೇ ॥ ೮೭ ॥**

**ಕಾರ್ತ್ಸ್ನ್ಯೇನ ವಕ್ತುಮಾನಂತ್ಯಾತ್ಕೋಽಪಿ ಶಕ್ತೋ ನ ನಾರದ ॥ ೮೮ ॥**

**ಇತಿ ಶ್ರೀನಾರದೀಯಪುರಾಣೇ ಪೂರ್ವಭಾಗೇ ಬೃಹದುಪಾಖ್ಯಾನೇ ದ್ವಿತೀಯಪಾದೇ ನಿರುಕ್ತಲಕ್ಷಣನಿರೂಪಣಂ ನಾಮ ತ್ರಿಪಂಚಾಶತ್ತಮೋಽಧ್ಯಾಯಃ**

---

೮೭-೮೮. ಈ ಲಘುಮಾರ್ಗವು ಪ್ರಕೃತಿ, ಪ್ರತ್ಯಯ, ಆದೇಶ, ಲೋಪ, ಆಗಮ ಮುಂತಾದುವುಗಳನ್ನು ತಿಳಿಯುವುದರಿಂದಲೇ ಸಾಧ್ಯವು. ಈ ರೀತಿಯಾಗಿ ನಿರುಕ್ತವನ್ನು ಬಹು ಸಂಕ್ಷೇಪವಾಗಿ ನಿನಗೆ ಹೇಳಿರುವೆನು. ನಾರದನೇ! ಅನಂತವಾದ ಈ ಶಬ್ದಗಳನ್ನು ಸಂಪೂರ್ಣವಾಗಿ ಹೇಳಲು ಯಾರು ತಾನೇ ಸಮರ್ಥರಾದಾರು ?

ಇಂತು ಶ್ರೀನಾರದೀಯಪುರಾಣ ಪೂರ್ವಭಾಗದ ಬೃಹದುಪಾಖ್ಯಾನವೆಂಬ ದ್ವಿತೀಯ ಪಾದದಲ್ಲಿ ನಿರುಕ್ತಲಕ್ಷಣನಿರೂಪಣವೆಂಬ ಐವತ್ತಮೂರನೆಯ ಅಧ್ಯಾಯವು ಮುಗಿದುದು.

## ಅಧ್ಯಾಯ ವಿಷಯಸಂಗ್ರಹ

ಈ ಅಧ್ಯಾಯದಲ್ಲಿ ನಿರುಕ್ತವನ್ನು ಸಂಕ್ಷೇಪವಾಗಿ ಹೇಳಿದೆ. ನಿರುಕ್ತವೆಂದರೆ ವೈದಿಕಶಬ್ದನಿರ್ವಚನ ಮಾಡುವ ವ್ಯಾಕರಣಶಾಸ್ತ್ರ. ಆದುದರಿಂದ ಮೊದಲು ಲೋಕದಲ್ಲಿರುವ ಶಬ್ದಗಳಿಗಿಂತಲೂ ವೇದದಲ್ಲಿ ಶಬ್ದಗಳು ವಿಲಕ್ಷಣವಾಗಿರುವುವು ಎಂಬುದನ್ನು ಉದಾಹರಣೆಯಿಂದ ತೋರಿಸಿ ಇದಕ್ಕೆ ಕಾರಣವನ್ನೂ ಹೇಳಿರುವರು. ಮುಖ್ಯವಾಗಿ ಬಹುಲಗ್ರಹಣದಿಂದ ವ್ಯತ್ಯಾಸವಾಗುವುದು. ಬಹುಲವೆಂದರೆ ನಾಲ್ಕು ರೀತಿಯಾಗಿ ಅರ್ಥ ಮಾಡಿರುವರು. ಕೆಲವು ಕಡೆ ವಿಕಲ್ಪ ಹೇಳಿದರೂ ಅಭಾವಕೋಟಿಯು (ಮಾಡದಿರುವಿಕೆ) ಇಲ್ಲವೇ ಇಲ್ಲ. ಕೆಲವು ಕಡೆ ನಿತ್ಯವಾಗಿ ವಿಧಿಸಿದರೂ ವಿಕಲ್ಪವಾಗಿ ಹೇಳುವಿಕೆ. ಬೇರೆ ಕೆಲವು ಕಡೆ ವಿಧಿಶಾಸ್ತ್ರವಿಲ್ಲದಿದ್ದರೂ ವಿಲಕ್ಷಣವಾದ ಕಾರ್ಯದೊಡನೆ ಉಚ್ಚರಿಸುವಿಕೆ. ಹೀಗೆ ನಾಲ್ಕು ರೀತಿಯಿಂದ ವೈದಿಕಶಬ್ದಗಳು ಲೋಕವಿಲಕ್ಷಣವಾಗಿರುತ್ತವೆ. ಆಮೇಲೆ ಕ್ರಮವಾಗಿ ಧಾತುಗಳ ವಿವೇಚನೆಯನ್ನೂ ಅವುಗಳ ಸ್ವರನಿರ್ಣಯವನ್ನೂ ಮಾಡಿ ಪರಸ್ಮೈಪದ, ಆತ್ಮನೇಪದವನ್ನು ನಿರ್ಣಯ ಮಾಡಿದೆ. ಈ ಧಾತುಗಳನ್ನು ಹತ್ತು ಗಣಗಳನ್ನಾಗಿ ವಿಭಾಗಿಸಿದೆ. ಇಲ್ಲಿ ಸ್ವರಿತವಾದುವುಗಳನ್ನು ಉಭಯಪದವನ್ನಾಗಿಯೂ, ಅನುದಾತ್ತೇತ್ತನ್ನು ಆತ್ಮನೇಪದವನ್ನಾಗಿಯೂ, ಉದಾತ್ತೇತ್ತನ್ನು ಇಡಾಗಮ ಬರುವವುಗಳನ್ನಾಗಿಯೂ, ಅನುದಾತ್ತವಾದ ಧಾತುಗಳನ್ನು ಅನಿಟ್ಟಾದ ಧಾತುಗಳನ್ನಾಗಿಯೂ ತಿಳಿಯಬೇಕು. ಈ ರೀತಿ ಹತ್ತುಗಣದ ಧಾತುಗಳನ್ನೂ ವಿವೇಚಿಸಿ, ಕೆಲವು ಪ್ರತ್ಯಯಾಂತದಿಂದ ಆಗುವ ಧಾತುಗಳನ್ನೂ ಉದಾಹರಿಸಿ ಸ್ವರವ್ಯಂಜನಾಂತ ಏಕಾಚ್ (ಒಂದು ಸ್ವರವಿರುವ) ಧಾತುಗಳನ್ನೂ ಕ್ರಮವಾಗಿ ಹೇಳಿ ಉದಾತ್ತಾನುದಾತ್ತಗಳನ್ನು ವ್ಯವಸ್ಥೆಮಾಡಿ ಹೇಳಿದೆ. ಆಮೇಲೆ ಶಬ್ದಶಾಸ್ತ್ರದ ಅಪಾರತೆಯನ್ನು ಹೇಳಿ ಅಧ್ಯಾಯವು ಕೊನೆಗೊಂಡಿದೆ.

---

Printed by Y. R. Ranga Rao, Proprietor,
Sri Chamundeswari Electric Press, Mysore.